ಶ್ರೀ ಸ್ವಾಮಿ ವಿವೇಕಾನಂದರ

# ರಾಜಯೋಗ

ಅನುವಾದಕರು

ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು



ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೇನರಸೀಪುರ - 573 211

www.adhyatmaprakasha.org

# ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು



ಶ್ರೀ ಶ್ರೀಗಳವರು ಕನ್ನಡದ ಶಂಕರರು, ಅಭಿನವ ಶಂಕರರು ಎಂದು, ಅನೇಕ ವಿದ್ವಾಂಸರು ಪರಿಗಣಿಸಿರುವರು. ಜೀವನವಿಡೀ ಅವರಿಗೆ ವೇದಾಂತವೇ ಉಸಿರಾಗಿತ್ತು. ಚಿಕ್ಕಮಗಳೂರು ಹೈಸ್ಕೂಲಿನ ಹೆಡ್‌ಮಾಸ್ಟರ್ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್‌ರ ಮನೆಯಲ್ಲಿ ಕೆಲವು ವೇದಾಂತದ ಮಾತುಗಳನ್ನು ಕೇಳಿದ್ದ ಇವರಿಗೆ ಬೆಂಗಳೂರಿನಲ್ಲಿ ಶ್ರೀ ಕೆ.ಎ. ಕೃಷ್ಣಸ್ವಾಮಿ ಅಯ್ಯರ್‌ರು ಮೊದಲ ವೇದಾಂತದ ಗುರುಗಳು. ಅನಂತರ ಶೃಂಗೇರಿ ಶ್ರೀ ಜಗದ್ಗುರು ಶ್ರೀಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳಿಂದ ಕಾಲಟಿಯಲ್ಲಿ ಶ್ರೀ ಶಾಂಕರ ಭಾಷ್ಯ ಶಾಂತಿ ಪಾಠ, ಶ್ರೀ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳ ಮಾರ್ಗದರ್ಶನ ಲಭ್ಯವಾಯಿತು.

ಪ್ರಾಥಮಿಕ ವಿದ್ಯಾಭ್ಯಾಸ ಕಾಲದಿಂದಲೂ ಪರಸ್ಥಳ ವಾಸ, ಪರದಾಟ, ವಾರಾನ್ನ, ಕ್ಲೇಶಗಳು ಬಡತನ, ಚಿಕ್ಕ ವಯಸ್ಸಿನಲ್ಲೇ ಪ್ರಾಪ್ತವಾದ ಸಂಸಾರದ ಹೊರೆಯಿಂದ ಪೂರ್ವಾಶ್ರಮದ ವೈ. ಸುಬ್ಬರಾಯರಿಗೆ ಸೆಂಟ್ರಲ್ ಕಾಲೇಜಿನಲ್ಲಿ ಮೊದಲ ವರ್ಷದನಂತರ ವ್ಯಾಸಂಗಕ್ಕೆ ಅವಕಾಶವಿರಲಿಲ್ಲ. ಆದರೆ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರಿಂದ ಇಂಗ್ಲೀಷಿನ ಭದ್ರ ತಳಪಾಯ, ಶ್ರೀ ಕೃಷ್ಣಸ್ವಾಮಿ ಅಯ್ಯರಿಂದ ವೇದಾಂತದ ಬೆಳಕು, ಶ್ರೀ ಮಹಾಭಾಗವತರು, ಶ್ರೀ ಹೊಸಕೆರೆ ಚಿದಂಬರಯ್ಯನವರ ಸಹವಾಸಗಳು ದೇವದತ್ತ ವರಗಳಾದವು. ಶಾಲಾ ಉಪಧ್ಯಾಯರಾಗಿ ವಿದ್ಯಾರ್ಥಿಗಳಿಗಾಗಿ, ಪದತ್ರಯ, ವಾಕ್ಯ ರಚನೆ, ದಾವಣಗೆರೆಯ ಸಾಹುಕಾರ್ ಮಾಗಾನಹಳ್ಳಿ ದೊಡ್ಡ ಬಸಪ್ಪನವರ ಪ್ರೇರಣೆಯಿಂದ 1913ರಲ್ಲಿ ಭಾಷಾಂತರಿಸಿದ ವಿವೇಕಾನಂದರ 'ರಾಜಯೋಗ, ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ಮೊದಲ ಕೆಲವು ಗ್ರಂಥಗಳು. 1920ರಲ್ಲಿ ಶ್ರೀ ಶಂಕರ ಸಿದ್ಧಾಂತ ಪ್ರಚಾರಕ್ಕೆಂದೇ 'ಅಧ್ಯಾತ್ಮ ಪ್ರಕಾಶ' ಕಾರ್ಯಾಲಯ, ಮತ್ತು ಮುದ್ರಣಾಲಯವನ್ನು ತೆರೆದರು. 1923 ರಲ್ಲಿ ಅಧ್ಯಾತ್ಮ ಪ್ರಕಾಶ ಪತ್ರಿಕೆಯು ಪ್ರಾರಂಭವಾಯಿತು.

ಮನಸ್ಸಿನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವ ಶಕ್ತಿಯೂ ಇದ್ದಲ್ಲಿ ಮನುಷ್ಯನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀ ಶ್ರೀಗಳು ನಿದರ್ಶನ. ಶಾಲಾ ಕಾಲೇಜುಗಳಲ್ಲಿ ಅವರು ಕಲಿತ ಇಂಗ್ಲೀಷ್ ಪರಿಮಿತವಾದದ್ದು. ಅನಂತರದಲ್ಲಿ ಕನ್ನಡ, ಇಂಗ್ಲೀಷ್, ಸಂಸ್ಕೃತಗಳಲ್ಲಿ ಗಳಿಸಿದ ಪ್ರೌಢ ಪಾಂಡಿತ್ಯವು ವಿಸ್ಮಯಕಾರಿಯಾದದ್ದು, ತಮ್ಮ ಗ್ರಂಥಗಳಲ್ಲಿ ಅವರು ಬಳಸಿರುವ ಇಂಗ್ಲೀಷ್, ಎಂ.ಎ. ಪದವೀಧರನಿಗೂ ದಕ್ಕತಕ್ಕದ್ದಲ್ಲ. ಸಂಸ್ಕೃತ ಗ್ರಂಥಗಳಲ್ಲಿ ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞಾ ಮಾಂಡೂಕ್ಯ ರಹಸ್ಯವಿವೃತ್ತಿಗಳು ಮೇರು ಕೃತಿಗಳು, ಅವರ ಪ್ರತಿಭೆಗೆ ಉತ್ತುಂಗ ವೈದುಷ್ಯ ಸಾಕ್ಷಿಗಳು, ಒಂದೊಂದೂ ಜ್ಞಾನಪೀಠ ಪ್ರಶಸ್ತಿಗೆ ಅರ್ಹವಾದವು.

ಏನೂ ಇಲ್ಲದೆ ಬರಿಯ ವೈರಾಗ್ಯ ಬಲದಿಂದಲೇ ಸಂನ್ಯಾಸಿಯಾಗಿ ಮಠವನ್ನು ಕಟ್ಟಿ ಶಿಷ್ಯ ಸಂಪತ್ತನ್ನು ಗಳಿಸುವುದು ಧೀರಕೃತ್ಯ. ಕೂಲಂಕುಷ ಅಭ್ಯಾಸದಿಂದ, ಅದ್ವೈತ ಸಿದ್ಧಾಂತಕ್ಕೂ ಬೌದ್ಧಮತಕ್ಕೂ ಇರುವ ಭೇದಗಳೆಲ್ಲವನ್ನೂ ತೋರಿಸಿ, ಅದ್ವೈತಿಗಳು ಪ್ರಚ್ಛನ್ನ ಬೌದ್ಧರೆಂಬ ದುರ್ವಾದವನ್ನು ಪ್ರಪ್ರಥಮವಾಗಿ ಖಂಡಿಸಿದವರು ಶ್ರೀ ಶ್ರೀಗಳೇ. ಅಸಂಖ್ಯ ಲೇಖನ, ಉಪನ್ಯಾಸ, 180 ಗ್ರಂಥಗಳಿಂದ ಶ್ರೀ ಶಂಕರಾಚಾರ್ಯರ ಸಿದ್ಧಾಂತವನ್ನು ಪ್ರಚುರಗೊಳಿಸಲು ತಮ್ಮ ದೇಹವನ್ನು ಶ್ರೀ ಗಂಧದ ಕೊರಡಿನಂತೆ ತೇಯ್ದ ಮಹಾನುಭಾವರು ಶ್ರೀ ಶ್ರೀಗಳು. ನಿಪುಣನಾದ ಒಬ್ಬ ಶಿಲ್ಪಿಯು ಕಾಡಿನ ಶಿಲೆಯನ್ನು ಕೊರೆದು ತಿದ್ದಿ ತೀಡಿ ಭಕ್ತಜನ ಪೂಜ್ಯವಾದ ದೇವತಾಮೂರ್ತಿಯನ್ನು ನಿರ್ಮಿಸುವಂತೆ, ಯಲ್ಲಂಬಳಸೆ ಹಳ್ಳಿಯಲ್ಲಿದ್ದ ಬಡಹುಡುಗನು ತನ್ನ ಬುದ್ಧಿ ಬಲ, ಸದ್ಗುಣದಿಂದ ತನ್ನನ್ನೇ ತಿದ್ದಿತೀಡಿ ಸಂಸ್ಕರಿಸಿ, ಪರಿಷ್ಕರಿಸಿ, ಮಹಾಜನ ಪೂಜ್ಯ ಗುರು ಮೂರ್ತಿಯಾಗಿ ವಿರಾಜಿಸಿದನು. –ಶ್ರೀ ಎನ್. ರಂಗನಾಥ ಶರ್ಮರ ಲೇಖನದಿಂದ–

ಅಧ್ಯಾತ್ಮ ಗ್ರಂಥಾವಳಿ

ಶ್ರೀ ವಿವೇಕಾನಂದ ಸ್ವಾಮಿಗಳ

# ರಾಜಯೋಗ

ಭಾಷಾಂತರ ಕರ್ತ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು
(ಪೂರ್ವಾಶ್ರಮದ ವೈ. ಸುಬ್ಬರಾವ್)

ಕ್ರಮಾಂಕ : 234

ಪ್ರಕಾಶಕರು

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ–573211
ದೂರವಾಣಿ – 08175–273820

2012

ಮೊದಲನೆಯ ಮುದ್ರಣ : 1916
ಎರಡನೆಯ ಮುದ್ರಣ : 2007 ಪ್ರತಿಗಳು : 1000
ಮೂರನೆಯ ಮುದ್ರಣ : 2008 ಪ್ರತಿಗಳು : 1000
ನಾಲ್ಕನೆಯ ಮುದ್ರಣ : 2012 ಪ್ರತಿಗಳು : 1000

ಪುಟಗಳು – 12+179
ಬೆಲೆ : ರೂ. 60.00

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯಕ್ಕೆ ಸೇರಿದವು
All Rights Reserved

ಅಕ್ಷರ ಜೋಡಣೆ : ಅರ್ಕ ಕ್ರಿಯೇಷನ್ಸ್
ನಂ. 171/ಬಿ–1, 12ನೇ ಅಡ್ಡರಸ್ತೆ,
ತ್ಯಾಗರಾಜನಗರ, ಬೆಂಗಳೂರು–560 028
ದೂರವಾಣಿ : 2676 6286

ಮುದ್ರಕರು : ಶ್ರೀರಾಮ ಪ್ರಿಂಟರ್ಸ್
ನಂ.25, ಶ್ರೀನಿಧಿ ಲೇಔಟ್ ಬೆಂಗಳೂರು–560 062
ದೂರವಾಣಿ : 26321267

# ಮುನ್ನುಡಿ

ಸ್ವಾಮಿ ವಿವೇಕಾನಂದರನ್ನು ವೈಜ್ಞಾನಿಕ ಜಗತ್ತು ಗೌರವಿಸಿ ಆದರಿಸುವುದಕ್ಕೆ ಮುಖ್ಯ ಕಾರಣ ಅವರ ಕಟುತರ ವೈಚಾರಿಕತೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸನಾತನ ಧರ್ಮದ ಪ್ರಚಾರ ಮಾಡುವಾಗಲೂ ಅಲ್ಲಿನ ಬುದ್ಧಿಜೀವಿಗಳನ್ನು ಬಗ್ಗುಬಡಿಯಲು ಅವರು ಬಳಸಿದ ಮುಖ್ಯ ಅಸ್ತ್ರವೇ ವೈಚಾರಿಕತೆ. ಯೋಗಶಾಸ್ತ್ರದ ತತ್ತ್ವಗಳೆಲ್ಲ ಅತ್ಯಂತ ವೈಜ್ಞಾನಿಕವಾದವು ಎಂಬುದನ್ನು ಸಾರಿದವರಲ್ಲಿ ಸ್ವಾಮಿ ವಿವೇಕಾನಂದರೇ ಪ್ರಪ್ರಥಮರು. ಪತಂಜಲಿ ಮಹರ್ಷಿಗಳ ಯೋಗಶಾಸ್ತ್ರವನ್ನು ವಿನೂತನ ಶೈಲಿಯಲ್ಲಿ ಮಂಡಿಸಿದ್ದಲ್ಲದೆ, ಯೋಗಸೂತ್ರಗಳಿಗೆ ಸುಲಲಿತ ವಿವರಣೆಯನ್ನೂ ಅವರು ರಚಿಸಿದರು. ಎರಡಕ್ಕೆ ಎರಡು ಸೇರಿಸಿದರೆ ನಾಲ್ಕಾಗುವುದು ಎಷ್ಟು ಸತ್ಯವೋ, ಯೋಗಶಾಸ್ತ್ರದ ನಿಯಮಗಳನ್ನು ಅಭ್ಯಸಿಸಿದರೆ ಯೋಗಸಿದ್ಧಿಯ ಶಿಖರಕ್ಕೇರುವುದು ಅಷ್ಟೇ ಸತ್ಯ. ಏಕೆಂದರೆ ಅದು ಅಷ್ಟು ನಿಖರ ಹಾಗೂ ವೈಜ್ಞಾನಿಕ. ಇಂತಹ ರಾಜಯೋಗದ ಮೇಲೆ ಸ್ವಾಮಿ ವಿವೇಕಾನಂದರು ಚೆಲ್ಲಿದ ಬೆಳಕನ್ನು ಕನ್ನಡಿಗರಿಗೆ ಮೊಟ್ಟಮೊದಲು ತಲುಪಿಸಿದ ಹೆಗ್ಗಳಿಕೆ, ಹೊಳೆನಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಗೆ ಸಲ್ಲುತ್ತದೆ. ಅನೇಕ ದಶಕಗಳನಂತರ ಈ ಪುಸ್ತಕವು ಪುನರ್ಮುದ್ರಣಗೊಳ್ಳುತ್ತಿರುವುಧು ಆಹ್ಲಾದಕರ ಸಂಗತಿಯೇ ಸರಿ.

ಈ ಕೃತಿಯಲ್ಲಿ ಅನುವಾದಕರ ನೈಪುಣ್ಯ ಹಾಗೂ ಶಾಸ್ತ್ರಜ್ಞಾನದ ಆಳ ಎದ್ದುಕಾಣುತ್ತದೆ. ಮೊದಲನೆಯ ಪಾದದ 28ನೇ ಸೂತ್ರ, ಎರಡನೆಯ ಪಾದದ ಮೊದಲನೇ ಸೂತ್ರ ಮುಂತಾದ ಕಡೆಗಳಲ್ಲಿ ಮೂಲ ಶ್ಲೋಕಗಳನ್ನು ಉದ್ಧರಿಸಿರುವುದು ಶಾಸ್ತ್ರಾಸಕ್ತರಿಗೆ ಅತ್ಯಂತ ಸಹಾಯಕ. ಕೆಲವೆಡೆಗಳಲ್ಲಿ ಸ್ವಾಮಿ ವಿವೇಕಾನಂದರು ಸಾಂಪ್ರದಾಯಿಕ ವ್ಯಾಖ್ಯಾನಕಾರರ ವಿವರಣೆಗಿಂತ ಭಿನ್ನವಾದ ರೀತಿಯಲ್ಲಿ ವಿವರಿಸಿದ್ದಾರೆ. ಅಂಥ ಸ್ಥಳಗಳಲ್ಲಿ ಸ್ವಾಮೀಜಿಯ ಅಭಿಪ್ರಾಯದ ಔಚಿತ್ಯವನ್ನು ಎತ್ತಿತೋರಿರುವುದು ಆಪ್ಯಾಯಮಾನವಾಗಿದೆ: ಉದಾಹರಣೆಗೆ : I.16 ಸೂತ್ರದ ಅಡಿಟಿಪ್ಪಣಿ ಪಾಠಭೇದವಿದ್ದಲ್ಲಿ ಪಾಠಾಂತರವನ್ನು ಉಲ್ಲೇಖಿಸಿರುವುದು ಲಾಭದಾಯಕವೇ, ಉದಾ : III.22 ಸೂತ್ರ. I.35ನೇ ಸೂತ್ರ ಮುಂತಾದ ಕಡೆಗಳಲ್ಲಿ ಸ್ವಾಮಿಜಿ ಸೂತ್ರಕ್ಕೆ ಅರ್ಥಕೊಡುವಾಗ ವ್ಯಾಖ್ಯಾನಗಳ ಸಾರವನ್ನು ಅಳವಡಿಸಿದ್ದಾರೆ – ಪ್ರಾರಂಭಿಕರ ಅಧ್ಯಯನದ ಸೌಕರ್ಯಕ್ಕಾಗಿ. ಇಂಥ ಕಡೆಗಳಲ್ಲಿ, ಕೂಲಂಕಷವಾಗಿ ಅಧ್ಯಯನಮಾಡಲು ಬಯಸುವವರಿಗೆ ಮೂಲ ಸೂತ್ರದ ಅಕ್ಷರಶಃ ಅರ್ಥವೂ ಕೆಲವೊಮ್ಮೆ ಬೇಕೆನಿಸಬಹುದು. ಇದನ್ನು ಅನುವಾದಕರು ಅಡಿಟಿಪ್ಪಣಿಯಲ್ಲಿ ಸಮರ್ಥವಾಗಿ ಪೂರೈಸಿದ್ದಾರೆ. ಇವೆಲ್ಲದರೊಂದಿಗೆ, ಹಂತಹಂತದಲ್ಲಿ ಓದುಗರಿಗೆ ಸುಲಭಗಮ್ಯವಾಗಿಸಬೇಕು ಎಂಬ ಭಾಷಾಂತರಕರ್ತರ ಕಾಳಜಿಯನ್ನು ಕಾಣಬಹುದು. ಒಟ್ಟಿನಲ್ಲಿ ಇದು ಪರಿಶ್ರಮಸಾಧ್ಯವಾದ ಕುಶಲ ಅನುವಾದ ಎಂಬುದರಲ್ಲಿ ಎರಡು ಮಾತಿಲ್ಲ.

ಅನರ್ಘ್ಯ ಕೃತಿಯ ಈ ತರ್ಜುಮೆಯು ಕನ್ನಡನಾಡಿನ ಯೋಗಶಾಸ್ತ್ರಜಿಜ್ಞಾಸುಗಳಿಗೆ ಅಮೂಲ್ಯ ಕೈಪಿಡಿಯಾಗಿ ಮೂಡಿಬಂದಿದೆ. ಈ ಕೃತಿ ಸಂಪುಟವು ಸಕಲ ಸಾಧಕರ ಕರಸಂಪುಟವನ್ನು ಸೇರಲಿ ಎಂದು ಹಾರೈಸುತ್ತೇನೆ.

**ಸ್ವಾಮಿ ರಾಘವೇಶಾನಂದ**

ಅಧ್ಯಕ್ಷರು, ರಾಮಕೃಷ್ಣ ಮಿಷನ್ ಆಶ್ರಮ,
ಬೆಳಗಾಂ, 18–12–2007.

# ಗ್ರಂಥಕರ್ತರ ಪೀಠಿಕೆ

ಚರಿತ್ರೆಯು ಮೊದಲಾದಂದಿನಿಂದಲೂ ಮನುಷ್ಯರಲ್ಲಿ ಅನೇಕ ಅದ್ಭುತ ಸಂಗತಿಗಳು ನಡೆದವೆಂದು ಬರೆದಿಟ್ಟಿದ್ದಾರೆ. ಈಗಿನ ಭೌತಿಕಶಾಸ್ತ್ರದ ಪೂರ್ಣ ಪ್ರಕಾಶಕ್ಕೆ ಸೇರಿರುವ ಜನಾಂಗಗಳಲ್ಲಿಯೂ ಕೂಡ ಇಂಥ ಸಂಗತಿಗಳು ನಿಜವಾಗಿ ನಡೆದವೆಂದು ಹೇಳುವ ಸಾಕ್ಷಿಗಳಿಲ್ಲದೆ ಇಲ್ಲ. ಆದರೆ ಇಂಥ ದೃಷ್ಟಾಂತಗಳ ಬಹುಭಾಗವು ಮೂಢರಿಂದಲೋ ಅತಿವಿಶ್ವಾಸಿಗಳಿಂದಲೋ ಮೋಸಗಾರರಿಂದಲೋ ಬರುವದರಿಂದ ನಂಬಿಕೆಗೆ ಅರ್ಹವಾಗಿರುವದಿಲ್ಲ. ಬಹು ಸಂದರ್ಭಗಳಲ್ಲಿ ಅದ್ಭುತಕೃತ್ಯಗಳೆಂಬವು ಅನುಕರಣ ಮಾತ್ರಗಳಾಗಿರುವವು. ಆದರೆ ಇವು ಏನನ್ನು ಅನುಕರಿಸುವವು? ಯಾವುದನ್ನೇ ಆಗಲಿ ಚೆನ್ನಾಗಿ ವಿಚಾರಮಾಡದೆ ಸುಮ್ಮನೆ ಆಚೆಗೆ ತಳ್ಳುವದು ಸರಳವಾಗಿಯೂ ಶಾಸ್ತ್ರಸಂಸ್ಕೃತವಾಗಿಯೂ ಇರುವ ಬುದ್ಧಿಯುಳ್ಳವರಿಗೆ ಸರಿಯಲ್ಲ. ಕೆಲವು ಜನ ಭೌತಿಕಶಾಸ್ತ್ರಜ್ಞರು ಎಲ್ಲಿಯೋ ಸ್ವಲ್ಪ ವಿಚಾರಮಾಡಿ ಅಷ್ಟರಿಂದ ಮನಸ್ಸಿನಲ್ಲಿ ನಡೆಯುವ ಬೇರೆ ಬೇರೆ ಅಸಾಧಾರಣಕಾರ್ಯಗಳನ್ನು ಹೀಗೆಂದು ತಿಳಿಸಿ ಹೇಳುವದಕ್ಕೆ ತಮ್ಮ ಕೈಲಾಗದೆ ಇದ್ದದ್ದರಿಂದ ಅವುಗಳು ಇರುವದನ್ನೇ ಮನಸ್ಸಿಗೆ ತಂದುಕೊಳ್ಳದೆ ಇರುವದಕ್ಕೆ ಪ್ರಯತ್ನಿಸುವರು. ಹೀಗಿರುವದರಿಂದ ತಾವು ಮಾಡುವ ಪ್ರಾರ್ಥನೆಗಳು ಮೇಘಮಂಡಲದ ಆಚೆ ಇರುವ ಯಾವದೋ ಒಂದುವಸ್ತು ಅಥವಾ ವಸ್ತುಗಳಿಂದ ನೆರವೇರುವದೆಂದು ಯೋಚಿಸುವವರಿಗಿಂತಲೂ–ತಾವು ಮಾಡುವ ಪ್ರಾರ್ಥನೆಗಳಿಂದ ಜಗತ್ತಿನ ನಿಯಮವನ್ನೆ ಹೆಚ್ಚು ಕಡಿಮೆ ಮಾಡಬಹುದೆಂದು ತಿಳಿಯುವವರಿಗಿಂತಲೂ– ಈ ಶಾಸ್ತ್ರಜ್ಞರು ಹೆಚ್ಚು ಅಪರಾಧಿಗಳಾಗುವರು. ಆ ಜನರಿಗೆ ಮೌಢ್ಯವೋ ಅಥವಾ ಕೊನೆಯ ಪಕ್ಷಕ್ಕೆ ಅವರಿಗೆ ಆಗುವ ಶಿಕ್ಷಣಪದ್ಧತಿಯ ಕೊರತೆಯೋ ಯಾವದಾದರೊಂದು ನೆವವಾದರೂ ಇರುವದು. ಆ ಶಿಕ್ಷಣಪದ್ಧತಿಯಿಂದ ಇಂಥ ಪ್ರಾಣಿಗಳನ್ನು ಆಶ್ರಯಿಸುವದು ಅವರ ಕ್ಷುದ್ರಸ್ವಭಾವದ ಲಕ್ಷಣವಾಗಿಬಿಟ್ಟಿರುವದು. ಆದರೆ ಶಾಸ್ತ್ರಜ್ಞರಿಗೆ ಇಂಥ ನೆವವೇನೂ ಇರುವದಿಲ್ಲ.

ಸಾವಿರಾರುವರ್ಷಗಳಿಂದಲೂ ಇಂಥ ಸಂಗತಿಗಳನ್ನು ಚೆನ್ನಾಗಿ ವಿಚಾರಿಸಿ ಪರೀಕ್ಷೆ ಮಾಡಿ ಸಾಮಾನ್ಯನಿಯಮಗಳನ್ನು ಕಂಡುಹಿಡಿಯುತ್ತ ಬಂದಿರುತ್ತಾರೆ ಮತ್ತು ಮನುಷ್ಯನಲ್ಲಿರುವ ಧಾರ್ಮಿಕಶಕ್ತಿಗಳನ್ನೆಲ್ಲ ವಿಮರ್ಶೆಮಾಡುತ್ತ ಬಂದಿದ್ದಾರೆ. ಇವೆಲ್ಲವುಗಳಿಂದ ಕಂಡುಬಂದ ಮುಖ್ಯಸಾರವೇ ರಾಜಯೋಗವು. ಕಾರಣವನ್ನು ಕೊಟ್ಟು ವಿವರಿಸುವುದಕ್ಕೆ ಕಷ್ಟವಾಗುವ ಸಂಗತಿಗಳ ವಿಚಾರದಲ್ಲಿ ರಾಜಯೋಗವು ಈಗಿನ ಕಾಲದ ಕೆಲವು ಭೌತಿಕಶಾಸ್ತ್ರಜ್ಞರ ರೀತಿಯಿಂದ ಅವೇ ಇಲ್ಲವೆಂದು ಹೇಳುವದಿಲ್ಲ. ಒಳ್ಳೆಯ ಮಾತಿನಿಂದಲೇ ಸ್ಪಷ್ಟವಾಗಿ ತಿಳಿಯುವಂತೆ ಮೂಢವಿಶ್ವಾಸಿಗಳಿಗೆ ಈ ಯೋಗವು ಹೇಳುವದೇನೆಂದರೆ:–ಅದ್ಭುತಕಾರ್ಯಗಳೂ ಪ್ರಾರ್ಥನೆಯು ನೆರವೇರುವದೂ ಮೋಡಗಳ ಆಚೆ ಇರುವ ಯಾವದೋ ಒಂದು ವಸ್ತುವಿನಿಂದ ಆಗುವದೆಂದು ಸುಮ್ಮನೆ ಹೇಳಿದ ಮಾತ್ರಕ್ಕೇ ಅವುಗಳನ್ನೇನೂ ತಿಳಿಸಿ ಹೇಳಿದಂತಾಗಲಿಲ್ಲ. ಮನುಷ್ಯವರ್ಗಕ್ಕೇ ಆಧಾರವಾಗಿರುವ ಜ್ಞಾನ ಮತ್ತು ಶಕ್ತಿಗಳ ಸಾಗರಕ್ಕೆ ಪ್ರತಿಯೊಬ್ಬನೂ ಒಂದೊಂದು ಮೇಲುಗಾಲುವೆಯಂತೆ ಇರುವನೇ ಹೊರತು ಮತ್ತೇನೂ ಇಲ್ಲವೆಂದು ಈ ಯೋಗವು ಹೇಳುವದು. ಮನುಷ್ಯನಲ್ಲಿಯೇ ಆಶೆಗಳೂ ಬಯಕೆಗಳೂ ಇರುವವು; ಮನುಷ್ಯನಲ್ಲಿಯೇ ಇವುಗಳನ್ನು ಪೂರ್ಣಮಾಡುವ ಶಕ್ತಿಯೂ ಇರುವದು. ಎಲ್ಲೆಲ್ಲಿ ಎಂದೆಂದು ಆಶೆಯಾಗಲಿ, ಬಯಕೆಯಾಗಲಿ, ಪ್ರಾರ್ಥನೆಯಾಗಲಿ ನೆರವೇರಿದ್ದರೂ ಹಾಗೆ ನೆರವೇರಿದುದು ಈ ಅನಂತವಾದ ಉಗ್ರಾಣದಿಂದಲೇ ಹೊರತು ಯಾವದೋ ಒಂದು ಅದ್ಭುತಪ್ರಾಣಿಯಿಂದಲ್ಲವೆಂದು ಈ ಯೋಗವು ತಿಳಿಸುವದು. ಅದ್ಭುತಪ್ರಾಣಿಗಳಲ್ಲಿ ನಂಬಿಕೆ ಇಡುವದರಿಂದ ಮನುಷ್ಯರಲ್ಲಿ ಸ್ವಲ್ಪಮಟ್ಟಿಗೆ ಕೆಲಸಮಾಡುವ ಶಕ್ತಿಯು ಹೆಚ್ಚುವದೇನೋ ನಿಜ; ಆದರೆ ಇದರಿಂದ ಧಾರ್ಮಿಕತೆಯು ಹಾಳಾಗುವದೂ ನಿಜ. ಇದರಿಂದ

ಪರಾವಲಂಬನೆ ಬರುವದು; ಹೆದರಿಕೆ ಬರುವದು; ಮೂಢವಿಶ್ವಾಸವು ಬರುವದು; ಮನುಷ್ಯನು ಸ್ವಭಾವವಾಗಿಯೇ ದುರ್ಬಲನೆಂಬ ಭಯಂಕರವಾದ ಭಾವನೆಯು ಉಂಟಾಗಿಬಿಡುವದು. ಅದ್ಭುತವೆಂಬುದೇ ಇಲ್ಲ. ಜಗತ್ತಿನಲ್ಲಿ ಕೆಲವು ಸಂಗತಿಗಳು ಸ್ಥೂಲವಾಗಿಯೂ ಕೆಲವು ಸೂಕ್ಷ್ಮವಾಗಿಯೂ ಇರುವದೆಂದು ಯೋಗಿಯು ಹೇಳುವನು. ಸೂಕ್ಷ್ಮಸಂಗತಿಗಳೇ ಕಾರಣಗಳು. ಸ್ಥೂಲವಾದ ಸಂಗತಿಗಳೇ ಕಾರ್ಯಗಳು. ಸ್ಥೂಲವಸ್ತುಗಳು ಸುಲಭವಾಗಿ ಇಂದ್ರಿಯಕ್ಕೆ ಕಾಣಿಸುವವು. ಸೂಕ್ಷ್ಮವಸ್ತುಗಳು ಹಾಗಲ್ಲ ರಾಜಯೋಗದ ಅಭ್ಯಾಸದಿಂದ ಸೂಕ್ಷ್ಮಜ್ಞಾನವುಂಟಾಗುವದು.

ಹಿಂದೂಶಾಸ್ತ್ರಗಳಲ್ಲಿರುವ ಆಸ್ತಿಕಸಿದ್ಧಾಂತಗಳಿಗೆಲ್ಲ ಜೀವನಿಗೆ ಪೂರ್ಣತೆಯನ್ನು ಸಂಪಾದಿಸಿ ಮುಕ್ತಿಯನ್ನು ಪಡೆಯುವ ಕ್ರಮವನ್ನು ತಿಳಿಸುವದೊಂದೇ ಉದ್ದೇಶವು. ಈ ಮುಕ್ತಿಗೆ ಯೋಗವೇ ಸಾಧನವು. ಯೋಗವೆಂಬ ಮಾತಿನ ಅಭಿಪ್ರಾಯವು ಎಷ್ಟೋ ವಿಷಯವನ್ನೊಳಗೊಂಡಿರುವದು. ಆದರೆ ಸಾಂಖ್ಯಶಾಸ್ತ್ರದಲ್ಲಿಯೂ ವೇದಾಂತದರ್ಶನದಲ್ಲಿಯೂ ಯಾವುದಾದರೊಂದು ರೂಪದಲ್ಲಿ ಯೋಗವನ್ನು ಹೇಳೇ ಇರುತ್ತಾರೆ.

ಈ ಗ್ರಂಥದ ವಿಷಯವು ರಾಜಯೋಗವೆಂದು ಪ್ರಸಿದ್ಧವಾದ ಯೋಗಭಾಗವು. ಈ ರಾಜಯೋಗಕ್ಕೆ ಪತಂಜಲಿಗಳ ಸೂತ್ರವೇ ಪರಮಪ್ರಮಾಣವು ಮತ್ತು ಮುಖ್ಯವಾದ ಗ್ರಂಥವು. ಇತರ ಶಾಸ್ತ್ರಕಾರರು ಎಲ್ಲಿಯೋ ಕೆಲವು ಶಾಸ್ತ್ರೀಯ ವಿಚಾರಗಳಲ್ಲಿ ಪಾತಂಜಲಮತಕ್ಕಿಂತ ಬೇರೆಯಾದ ಅಭಿಪ್ರಾಯವುಳ್ಳವರಾಗಿದ್ದಾರೆ; ಆದರೆ ಸಾಮಾನ್ಯವಾಗಿ ಸಾಧನಕ್ರಮದಲ್ಲಿ ಸಂಪೂರ್ಣವಾಗಿ ಇವರ ಕ್ರಮವನ್ನೆ ಒಪ್ಪಿಕೊಂಡಿರುವರು. ಈ ಪುಸ್ತಕದ ಮೊದಲನೆಯ ಭಾಗದಲ್ಲಿ ಗ್ರಂಥಕರ್ತನು ನ್ಯೂಯಾರ್ಕ್‌ಪಟ್ಟಣದಲ್ಲಿ ಕೊಟ್ಟ ಉಪನ್ಯಾಸಗಳನ್ನು-ಸೇರಿಸಿದೆ. ಎರಡನೆಯ ಭಾಗದಲ್ಲಿ ಪಾತಂಜಲಸೂತ್ರಗಳ ಅಭಿಪ್ರಾಯವನ್ನು ವಿವರಣಸಹಿತವಾಗಿ ಬರೆದಿರುತ್ತದೆ. ಸಾಧ್ಯವಾದಮಟ್ಟಿಗೂ ಪಾರಿಭಾಷಿಕಶಬ್ದಗಳನ್ನು ಬಿಟ್ಟು ಮಾತನಾಡುವಂತೆ ಸುಲಭವಾಗಿ ಲಲಿತವಾದ ರೀತಿಯಲ್ಲಿ ಬರೆಯುವುದಕ್ಕೆ ಪ್ರಯತ್ನಮಾಡಿರುತ್ತದೆ. ಮೊದಲನೇ ಭಾಗದಲ್ಲಿ ಸಾಧನೆ ಮಾಡಬೇಕೆಂಬುವರಿಗೆ ಕೆಲವು ವಿಶೇಷಸೂಚನೆಗಳನ್ನು ಕೊಟ್ಟಿದೆ. ಆದರೆ ಸಾಧಕರಿಗೆಲ್ಲ ಮುಖ್ಯವಾಗಿ ಮರೆಯದೆ ಇಲ್ಲಿ ನಾವು ತಿಳಿಸಬೇಕಾಗಿರುವದೇನೆಂದರೆ :- **ಯೋಗವನ್ನು ಗುರುವಿನ ಮೂಲಕವಾಗಿಯೇ ಕಲಿತುಕೊಳ್ಳುವದೇ ಅಪಾಯವಿಲ್ಲದ ಮಾರ್ಗ.** ಈಗ ಹೇಳಿರುವ ಕೆಲವು ಮಾತುಗಳಿಂದ ಈ ವಿಷಯದಲ್ಲಿ ಹೆಚ್ಚಿಗೆ ತಿಳಿಯಬೇಕೆಂಬ ಕುತೂಹಲ ಉಂಟಾಗುವದಾದರೆ ಅಂಥ ಗುರುವೇನೂ ದೂರವಿರುವದಿಲ್ಲ.

ಪಾತಂಜಲಸಿದ್ಧಾಂತವು ಸಾಂಖ್ಯಸಿದ್ಧಾಂತದಮೇಲೆ ಆಗಿರುವದು. ಇವೆರಡಕ್ಕೂ ಇರುವ ವ್ಯತ್ಯಾಸಗಳು ಬಹು ಕಡಿಮೆ. ಬಹುಮುಖ್ಯವಾದ ಎರಡು ಮತಭೇದಗಳು ಯಾವುವೆಂದರೆ:- ಪತಂಜಲಿಯ ಮತದಲ್ಲಿ ಈಶ್ವರನೆಂಬ ಆದಿಗುರುವುಂಟು. ಆದರೆ ಸಾಂಖ್ಯರು ಆಯಾಕಲ್ಪಕ್ಕೆ ಮಾತ್ರ ಅಧಿಪತಿಯಾಗಿ ಸರ್ವಸಿದ್ಧಿಗಳನ್ನೂ ಪಡೆದಿರುವ ಜೀವವಿಶೇಷವನ್ನು ಮಾತ್ರ ಒಪ್ಪುವರು. ಯೋಗಿಗಳು ಮನಸ್ಸನ್ನು ಆತ್ಮದಂತೆಯೇ ಸರ್ವವ್ಯಾಪಕವೆನ್ನುವರು; ಸಾಂಖ್ಯರು ಒಪ್ಪುವದಿಲ್ಲ.

ಗ್ರಂಥಕರ್ತ

(ಸ್ವಾಮಿ ವಿವೇಕಾನಂದರು)

# ಭಾಷಾಂತರಕರ್ತನ ಪೀಠಿಕೆ

ಜಗತ್ಪ್ರಸಿದ್ಧರಾದ ಶ್ರೀವಿವೇಕಾನಂದಸ್ವಾಮಿಗಳವರ ಗ್ರಂಥಗಳನ್ನು ಕನ್ನಡಿಗರ ಉಪಯೋಗಕ್ಕಾಗಿ ಬರೆಯಬೇಕೆಂದು ಮೊದಲು ಭಕ್ತಿಯೋಗವನ್ನೂ ಆಮೇಲೆ ಕರ್ಮಯೋಗವನ್ನೂ ಭಾಷಾಂತರಮಾಡಿದೆನು. ಈಗ ರಾಜಯೋಗವೆಂಬ ಗ್ರಂಥವನ್ನು ತಿಳಿದಮಟ್ಟಿಗೆ ಬರೆದಿರುತ್ತೇನೆ.

ಶ್ರೀಸ್ವಾಮಿಗಳ ಉಳಿದ ಗ್ರಂಥಗಳಿಗೂ ಈ ಗ್ರಂಥಕ್ಕೂ ಬಹಳ ತಾರತಮ್ಯವಿರುವದು. ಮಿಕ್ಕ ಗ್ರಂಥಗಳು ಸ್ವಾಮಿಗಳವರ ಉಪನ್ಯಾಸಮಾತ್ರವಾಗಿರುವವು. ಇದು ಅವರು ಸ್ವಹಸ್ತದಿಂದ ಬರೆದ ಗ್ರಂಥವು. ಇದರಲ್ಲಿ ಪತಂಜಲಿಗಳ ಸಾಕ್ಷಾದ್ವಾಕ್ಯವನ್ನೇ ಕೊಟ್ಟು ಅದರ ಅಭಿಪ್ರಾಯವನ್ನು ವಿವರಿಸಿರುತ್ತದೆ. ಹೀಗಿರುವದರಿಂದ ಈ ಗ್ರಂಥವನ್ನು ಓದುವ ವಾಚಕರಿಗೆ ಸ್ವಾಮಿಗಳವರ ವಿವರಣಾಕೌಶಲ್ಯವೂ ಯೋಗಾನುಭವವೂ ಗೊತ್ತಾಗುವದರ ಜತೆಗೆ ಅನಾದಿಯಾದ ಆರುದರ್ಶನಗಳಲ್ಲಿ ಒಂದಾದ ಪಾತಂಜಲದರ್ಶನದ ತತ್ತ್ವವೂ ಗೊತ್ತಾಗುವ ಅಮೌಲ್ಯವಾದ ಲಾಭವಾಗುವದು.

ಈ ರಾಜಯೋಗವನ್ನು ಶ್ರೀವಿವೇಕಾನಂದಸ್ವಾಮಿಗಳು ನ್ಯೂಯಾರ್ಕ್ ಪಟ್ಟಣದಲ್ಲಿ ಜನರಿಗೆ ಬೋಧನಕ್ಕಾಗಿ ಉಪನ್ಯಾಸಮಾಡಿದರು. ಅಲ್ಲಿ ಜನರಿಗೆ ಸಂಸ್ಕೃತದ ಪರಿಚಯುವು ಕಡಿಮೆಯಾದುದರಿಂದಲೂ ನಮ್ಮ ದೇಶದ ತತ್ತ್ವಾರ್ಥವನ್ನು ಬೋಧಿಸುವ ಕ್ರಮವೂ ಅವರಿಗೆ ಹೊಸದಾದುದರಿಂದಲೂ ಸ್ವಾಮಿಗಳವರು ಪಾರಿಭಾಷಿಕಶಬ್ದಗಳನ್ನೆಲ್ಲ ಸುಲಭವಾಗಿ ತಿಳಿಯುವಂತೆ ಇಂಗ್ಲೀಷಿನಲ್ಲಿ ವಿವರಿಸಿರುತ್ತಾರೆ. ಇದನ್ನನುಸರಿಸಿ ನಾನೂ ಕನ್ನಡದಲ್ಲಿ ಅದರಂತೆಯೆ ಅನೇಕಸ್ಥಳಗಳಲ್ಲಿ ಪಾರಿಭಾಷಿಕಶಬ್ದಗಳನ್ನು ಬೇರೆಮಾತುಗಳಿಂದಲೇ ವಿವರಿಸಿರುತ್ತೇನೆ. ಇದರಿಂದ ಬಹುದಿನಗಳಿಂದ ನಮ್ಮಲ್ಲಿ ಪ್ರಚಾರವಾಗಿರುವ ಅಧ್ಯಾತ್ಮಶಾಸ್ತ್ರಗಳ ಮಾತುಗಳ ನಿಜವಾದ ಅರ್ಥವು ತಕ್ಕಮಟ್ಟಿಗಾದರೂ ಹೊರಬಿದ್ದೀತೆಂದು ನಂಬುತ್ತೇನೆ. ಇದಲ್ಲದೆ ಸ್ವಾಮಿಗಳವರು ವಿದೇಶೀಯರಲ್ಲಿ ಈಗ ಮಾನ್ಯವಾಗಿರುವ ನವೀನಭೌತಿಕಶಾಸ್ತ್ರಗಳ ಸಂಗತಿಗಳನೇಕವನ್ನು ದೃಷ್ಟಾಂತಕ್ಕಾಗಿ ಕೊಟ್ಟಿರುವರು. ಇವುಗಳಭಿಪ್ರಾಯವನ್ನು ತಿಳಿಯುವದು ರಾಜಯೋಗದ ಪೂರ್ಣಾಭಿಪ್ರಾಯವನ್ನು ತಿಳಿಯುವವರಿಗೆ ಅಗತ್ಯವಾದುದರಿಂದ ಅವುಗಳನ್ನು ಟಿಪ್ಪಣಿಗಳಿಂದ ವಿವರಿಸಿರುತ್ತೇನೆ. ಇದರಿಂದ ಭೌತಿಕಶಾಸ್ತ್ರಗಳಲ್ಲಿ ಈಚಿನವರು ಕಂಡುಹಿಡಿದಿರುವ ಅನೇಕ ಹೊಸವಿಷಯಗಳು ಗೊತ್ತಾಗುವದಲ್ಲದೆ ಸ್ವಾಮಿಗಳವರಿಗೆ ಅಧ್ಯಾತ್ಮವಿದ್ಯೆಯಲ್ಲಿ ಹೇಗೋಹಾಗೆ ಲೌಕಿಕವಿದ್ಯೆಗಳಲ್ಲಿಯೂ ಅಸಾಧಾರಣವಾದ ಪಾಂಡಿತ್ಯವಿತ್ತೆಂಬುದು ವಾಚಕರಿಗೆ ಮನಗಾಣುವದು. ಪಾಶ್ಚಿಮಾತ್ಯರ ಮತ್ತು ನಮ್ಮ ದೇಶದ ಅಧ್ಯಾತ್ಮಶಾಸ್ತ್ರಗಳ ಪರಿಚಯವಿಲ್ಲದ ಜನರ ಅನುಕೂಲಕ್ಕೆಂದು ಅವಶ್ಯಬಿದ್ದ ಕಡೆಯಲ್ಲಿ ಕಷ್ಟವಾದ ಮಾತುಗಳನ್ನೆಲ್ಲ ಟಿಪ್ಪಣಿಯಲ್ಲಿ ವಿವರಿಸಿರುತ್ತೇನೆ.

ಯೋಗಸೂತ್ರಗಳನ್ನು ಬರೆಯುವಾಗ ಆನಂದಾಶ್ರಮದಲ್ಲಿ ಮುದ್ರಿತವಾಗಿರುವ ಪುಸ್ತಕಪಾಠವನ್ನೆ ಅನುಸರಿಸಿರುತ್ತೇನೆ. ಸ್ವಾಮಿಗಳವರು ಕೆಲವು ಕಡೆಗಳಲ್ಲಿ ಸೂತ್ರದ ಅಕ್ಷರಾರ್ಥದ ಕಡೆಗೇ ಹೆಚ್ಚು ಲಕ್ಷ್ಯ ಕೊಡದೆ ಅಭಿಪ್ರಾಯವನ್ನು ಮಾತ್ರ ತೆಗೆದುಕೊಂಡು ಸುಲಭರೀತಿಯಿಂದ ವಿವರಿಸಿರುತ್ತಾರಲ್ಲದೆ ಅಲ್ಲಲ್ಲಿ ವ್ಯಾಖ್ಯಾನಕಾರರ ಮತವನ್ನು ಅಷ್ಟು ಮುಖ್ಯವಾಗೆಣಿಸದೆ ತಮ್ಮದಾಗಿ ಬೇರೆ ಅಭಿಪ್ರಾಯವನ್ನು

ಬರೆದಿರುತ್ತಾರೆ. ಇಂಥ ಕಡೆಗಳಲ್ಲಿ ಸೂತ್ರಭಾಷ್ಯದಂತೆ ಅಕ್ಷರಾರ್ಥವನ್ನು ಟಿಪ್ಪಣಿಯಲ್ಲಿ ಸೂಚಿಸಿರುತ್ತೇನೆ. ಸ್ವಾಮಿಗಳವರು ಬೇರೆ ಅರ್ಥವನ್ನು ಬರೆದಿರುವ ಕೆಲವೆಡೆಗಳಲ್ಲಿ ಈಗಿನ ವಾಚಕರ ನಾಗರಿಕತೆಯ ಮತ್ತು ತಿಳಿವಳಿಕೆಯ ದೃಷ್ಟಿಯಿಂದ ಆಯಾ ಹೆಚ್ಚು ಕಡಿಮೆಗಳಾಗಿರುವವೆಂಬುದು ಮರ್ಮಜ್ಞರಿಗೆ ತಿಳಿಯದೆ ಹೋಗಲಾರದು.

ಈ ಭಾಷಾಂತರದಲ್ಲಿ ಅನೇಕ ಭೌತಿಕಶಾಸ್ತ್ರಗಳ ಮತ್ತು ಅಧ್ಯಾತ್ಮಶಾಸ್ತ್ರಗಳ ವಿಷಯಗಳನ್ನು ತಿಳಿಸಬೇಕಾದುದರಿಂದ ಆಯಾ ಅಭಿಪ್ರಾಯಗಳಿಗೆ ಕನ್ನಡದಲ್ಲಿ ತಕ್ಕ ಮಾತುಗಳು ಸಿಕ್ಕದೆ ಅಥವಾ ನನಗೆ ಕನ್ನಡದ ಪರಿಚಯವು ಸಾಲದೆ ಎಷ್ಟೋ ವಿಷಯಗಳು ಸರಿಯಾಗಿ ವಿವರಣೆಯಾಗದೆ ಇರಬಹುದು. ಇದೂ ಅಲ್ಲದೆ ನನಗೆ ಆಯಾಶಾಸ್ತ್ರಗಳ ಸಂಪೂರ್ಣವಾದ ನಿಶ್ಚಯ ಜ್ಞಾನವಿಲ್ಲದೆಯೂ ಸ್ವಾಮಿಗಳವರ ಅಭಿಪ್ರಾಯವು ನನಗೆ ಪೂರ ತಿಳಿಯದೆಯೂ ಎಷ್ಟೋ ವಿಷಯಗಳು ಮೂಲದಲ್ಲಿದ್ದರೂ ಭಾಷಾಂತರಕ್ಕೆ ಬರುವದರಲ್ಲಿ ಸೋರಿಹೋಗಿರಬಹುದು. ಆದುದರಿಂದ ಭಾಷಾಂತರದಲ್ಲಿರುವ ಗುಣಗಳು ಮೂಲಕ್ಕೆ ಸೇರಿದುವೆನ್ನಬೇಕೇ ಹೊರತು ಇದರ ದೋಷಗಳಿಂದ ಮೂಲಗ್ರಂಥದ ಯೋಗ್ಯತೆಯನ್ನು ಕಟ್ಟುವದು ಸರಿಯಾಗುವದಿಲ್ಲವೆಂಬುದನ್ನು ರಸಜ್ಞರಲ್ಲಿ ಮತ್ತೆ ಅರಿಕೆಮಾಡುವ ಅವಶ್ಯಕತೆಯೇ ಇಲ್ಲ.

ಈ ಗ್ರಂಥವನ್ನು ಬರೆಯುವದಕ್ಕೆ ಮೂಲಕಾರಣವಾಗಿ ಇದು ಪ್ರಕಾಶವಾಗುವವರೆಗೆ ಎಲ್ಲಾ ವಿಧದಿಂದಲೂ ಪ್ರೋತ್ಸಾಹಕರಾಗಿ ನನ್ನಿಂದ ಈ ಗ್ರಂಥವನ್ನು ಬರೆಸಿ ಕನ್ನಡಿಗರಿಗೆ ಉಪಕಾರಮಾಡಿದ ಶ್ರೀಯುತ ಮಾಗಾನಹಳ್ಳಿ ದೊಡ್ಡಬಸಪ್ಪ, ಸಾಹುಕಾರ್, ದಾವಣಗೆರೆ ಇವರಿಗೂ ಮತ್ತು ಇನ್ನು ಕೆಲವು ದೊಡ್ಡಮನುಷ್ಯರುಗಳಿಗೂ ನಾನು ಚಿರಕಾರ ಕೃತಜ್ಞನಾಗಿರುತ್ತೇನೆ. ಈ ಗ್ರಂಥವನ್ನು ಅಚ್ಚುಹಾಕುವುದಕ್ಕೆ ಸಿದ್ಧಪಡಿಸಿ, ಬೇಕಾದ ಸಲಹೆಗಳನ್ನು ಕೊಟ್ಟು ಮುದ್ರಣ ಸಂಬಂಧವಾದ ಎಲ್ಲಾ ಕಷ್ಟವನ್ನೂ ಸಂತೋಷದಿಂದ ವಹಿಸಿದ ನನ್ನ ಸ್ನೇಹಿತರೂ ಕರ್ಣಾಟಕಕವಿರತ್ನರೆಂದು ಚಿರಪ್ರಸಿದ್ಧರೂ ಆದ ಮ|| ರಾ|| ಎಚ್.ಚಿದಂಬರಯ್ಯ, ರಿಟೈರ್ಡ್ ಎ.ವಿ.ಸ್ಕೂಲ್ ಹೆಡ್ಮಾಸ್ಟರ್ ಇವರ ಉಪಕಾರವೂ ಅಚ್ಚಾಗುತ್ತಿರುವಾಗ ತಪ್ಪುಗಳನ್ನು ತಿದ್ದುವ ಭಾರವನ್ನು ಆದರದಿಂದ ವಹಿಸಿದ ಮ|| ರಾ|| ಎಚ್.ನಾರಾಯಣರಾವ್, ಬಿ.ಎ.ಇವರ ಸಹಾಯವೂ ಸ್ಮರಣೀಯವಾಗಿರುವವು. ಈ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಮಾಡುವುದಕ್ಕೆ ಕೆಲವು ಸುಲಭವಾದ ಷರತ್ತುಗಳ ಮೇಲೆ ಅನುಜ್ಞೆಯನ್ನಿತ್ತ ಬೆಂಗಳೂರು ರಾಮಕೃಷ್ಣಾಶ್ರಮದ ಶ್ರೀ ನಿರ್ಮಲಾನಂದಸ್ವಾಮಿಗಳಿಗೆ ಕೃತಜ್ಞನಾಗಿರುತ್ತೇನೆ.

ಹರಿಹರ<br>
ಮಾರ್ಗಶೀರ್ಷ ವದಿ 10<br>
ರಾಕ್ಷಸಸಂವತ್ಸರ

ವೈ.ಎಸ್.ಆರ್.

# ಪ್ರಕಾಶಕರ ವಿಜ್ಞಾಪನೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿದ್ದಾಗ (ಶ್ರೀ ವೈ. ಸುಬ್ಬರಾಯರು, ಶಾಲಾ ಉಪಾಧ್ಯಾಯರು), ಬರೆದ ಮೊದಲ ಕೆಲ ಪುಸ್ತಕಗಳಲ್ಲಿ ಅನುವಾದಿತ 'ರಾಜಯೋಗ' ವೂ ಒಂದು. ಇದು ಮಾಯಾವತಿಯ ಅದ್ವೈತಾಶ್ರಮ ಸಂಪಾದಿಸಿದ ಇಂಗ್ಲಿಷಿನ 'ರಾಜಯೋಗ' ದ ಕನ್ನಡ ಅನುವಾದ.

ಈ ಕಾರ್ಯಕ್ಕೊಂದು ಸ್ವಾರಸ್ಯಕರ ಹಿನ್ನೆಲೆಯಿದೆ. ಶ್ರೀ ಶ್ರೀಗಳ ಆತ್ಮ ಚರಿತ್ರೆಯಲ್ಲಿ ಅಲ್ಲೊಂದು ಇಲ್ಲೊಂದು ಪ್ರಸ್ತಾಪವಾದ ಕೆಲವು ಮಾತುಗಳನ್ನು ಸಂಗ್ರಹಿಸಿ ಮೂಡಿಸಿದಾಗ ಈ ಹಿನ್ನೆಲೆ ರೂಪಿತವಾಗಿ ಬಂದಿದೆ. "ಸಾಹುಕಾರ ಮಾಗಾನಹಳ್ಳಿ ದೊಡ್ಡಬಸಪ್ಪನೆಂಬುವರ ಮೆಚ್ಚುಗೆಗೆ ಪಾತ್ರನಾದದ್ದು ನಾನು (1912–14) ದಾವಣಗೆರೆಯಲ್ಲಿದ್ದಾಗ ಅವರಿಗೆ ನಾನು ವ್ಯಾಪಾರ ಸಂಬಂಧದ ಕೆಲವು ಕಾಗದ ಪತ್ರಗಳಿಗೆ ಸರಿಯಾದ ಅರ್ಥವನ್ನು ಹೇಳಿದ್ದನ್ನು ಮೆಚ್ಚಿ ನನಗೆ ಅದಕ್ಕಾಗಿ ಸ್ವಲ್ಪ ಹಣವನ್ನು ಕೊಡುವದಕ್ಕೆ ಬಂದರು. ಅದನ್ನು ನಾನು ತೆಗೆದುಕೊಳ್ಳಲಿಲ್ಲವಾದ್ದರಿಂದ, ತಮ್ಮಿಂದ (ಯಾವದಾದರೂ) ಸೇವೆ ಸಲ್ಲತಕ್ಕದ್ದೆಂದು ಅವರು ಭಾವಿಸಿದರೆಂದು ತೋರುತ್ತದೆ. ಒಂದು ಏಕಾದಶಿಯಂದು ಗೊನೆ ರಸಬಾಳೆಹಣ್ಣು, ಸ್ವಲ್ಪ ಹೆಚ್ಚಾಗಿ ದ್ರಾಕ್ಷಿ, ಬಾದಾಮಿ ಇವುಗಳನ್ನು ಕಳುಹಿಸಿಕೊಟ್ಟರು. ಏಕಾದಶಿಯ ದಿನ ಶುದ್ಧೋಪವಾಸವನ್ನೇ ಮಾಡುತ್ತಿದ್ದ ನಾನು .......... ತುಪ್ಪ ಬಾಳೆಹಣ್ಣು ಮಾಡಿಸಿ, ನಮ್ಮ ಮನೆಗೂ, ಪ್ರೈವೇಟ್ ಟ್ಯೂಷನ್‌ಗೆ ಬರುತ್ತಿದ್ದ ಹುಡುಗರಿಗೂ, ಮಿಕ್ಕ ಕೆಲವರು ಹುಡುಗರಿಗೂ, (ಸ್ನೇಹಿತ ಉಪಾಧ್ಯಾಯರ ಮನೆಗೂ) ಹಂಚಿಬಿಟ್ಟೆನು. ಅವರಿಗೆ ನನ್ನ ವಿಷಯಕ್ಕೆ ಇನ್ನೂ ಗೌರವವು ಹೆಚ್ಚಿತು. ಅವರು ನನಗೆ ಸ್ವಾಮಿ ವಿವೇಕಾನಂದರ ವಿಷಯಕ್ಕೆ ಹೆಚ್ಚಿನ ಭಕ್ತಿಯಿದೆ ಎಂಬುದನ್ನು ತಿಳಿದು, ಸ್ವಾಮಿಯವರ ಕೃತಿಸಂಗ್ರಹ (Complete works) ವನ್ನೆಲ್ಲ ನನ್ನಲ್ಲಿಯೇ ಓದುವದಕ್ಕೆಂದು ಬಹುಕಾಲ ಬಿಟ್ಟಿದ್ದರು....." (ಪು 253) ಇದರ ಉಪಯೋಗದಿಂದ ಶ್ರೀ ಶ್ರೀಗಳವರು (ವೈ. ಸುಬ್ಬರಾವ್) ಭಕ್ತಿಯೋಗವನ್ನು ಭಾಷಾಂತರಿಸಿ, 1913 ರಲ್ಲಿ ಮುದ್ರಣ ಮಾಡಿಸಿದರು. ಮುಂದೆ (1914) ರಲ್ಲಿ "ಸಾಹುಕಾರ್ ಮಾಗಾನಹಳ್ಳಿ ದೊಡ್ಡ ಬಸಪ್ಪನವರಿಂದ ನನಗೆ ಒಂದು ಕಾಗದವು ಬಂತು. ನಿಮ್ಮನ್ನು ಕಳೂರು ಕಟ್ಟೆಗೆ ವರ್ಗಾಯಿಸಿದ್ದು ನಮಗೆಲ್ಲ ಬಹಳ ವ್ಯಥೆಯನ್ನುಂಟುಮಾಡಿದೆ.... ನಿಮ್ಮ ಆಕ್ಷೇಪಣೆ ಏನೂ ಇಲ್ಲದಿದ್ದರೆ ನಿಮಗೆ ಈಗ ಸಲ್ಲುತ್ತಿರುವಷ್ಟು ತಲುಬಿಗೆ ಕಡಿಮೆಯಿಲ್ಲದ ಉದ್ಯೋಗವನ್ನು ನಿಮಗೆ ಏರ್ಪಡಿಸಿಕೊಳ್ಳಲು ನಾನು ಸಿದ್ಧವಾಗಿರುತ್ತೇನೆ. ದಯವಿಟ್ಟು ತಾವು ಇಲ್ಲಿಗೆ ಬಂದು ಕೆಲವು ತಿಂಗಳುಗಳ ಕಾಲ ಇರಬೇಕೆಂದು ಬೇಡಿಕೊಳ್ಳುತ್ತೇನೆ" (ಪು. 277–278)...... "ನನಗೆ ಕಳೂರು ಕಟ್ಟೆಯದೇನೂ ಬೇಸರವಿರಲಿಲ್ಲ ..... ಆದರೂ ಆ ಪ್ರಾಂತದಲ್ಲಿಯ ಮಳೆಗಾಲದ ವರ್ಣನೆಯನ್ನು" ಕೆಲವಾರು ಕಷ್ಟಗಳನ್ನು ಕೇಳಿ, ಈ ಲೇಖಕರು 10 ತಿಂಗಳ ರಜೆಯ ಮೇಲೆ ದಾವಣಗೆರೆಗೆ ಬಂದರು.

ಅಲ್ಲಿ ದೊಡ್ಡಬಸಪ್ಪನವರು ಕೊಟ್ಟ ಕೆಲಸ ಇಷ್ಟೆ : "ನೀವು ನಾನು ಬಾಡಿಗೆಗೆ ಹಿಡಿದಿರುವ ಮನೆಯಲ್ಲಿದ್ದುಕೊಂಡು ವಿವೇಕಾನಂದರ ರಾಜಯೋಗವನ್ನು ಕನ್ನಡಿಸಬೇಕು, .... ನಾನು ಸಾಯಂಕಾಲ ಯಾವಾಗಲಾದರೂ ತಮ್ಮಲ್ಲಿಗೆ ಬಂದರೆ ಪರಮಾರ್ಥ ವಿಷಯಕ್ಕೆ ನಾನು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ" ... ಅದಕ್ಕಾಗಿ ಅವರು ತಿಂಗಳಿಗೆ 25 ರೂ. ಬರುವ ವ್ಯವಸ್ಥೆಯನ್ನೂ

ಮಾಡಿ, ಪ್ರೈವೇಟ್ ಟ್ಯೂಷನ್ ಇಟ್ಟುಕೊಳ್ಳಲೂ, ಸ್ವಂತ ಕಾಲಕ್ಷೇಪಕ್ಕೂ ಅವಕಾಶವನ್ನು ಮಾಡಿಕೊಟ್ಟಿದ್ದರು. ಹಾಗೆ ರಾಜಯೋಗವನ್ನು ಕನ್ನಡಿಸುವದಕ್ಕೆ ಆರಂಭಿಸಿದರು. ಸುಮಾರು ಎರಡು ತಿಂಗಳು ಮಾತ್ರ ಅಲ್ಲಿದ್ದು, ಪ್ಲೇಗ್ ಉಪಟಳದಿಂದ ದಾವಣಗೆರೆ ಬಿಡಬೇಕಾಯಿತು. ಅನಂತರ 1914ರಲ್ಲಿ ಹೊಳಲ್ಕೆರೆಗೆ ವರ್ಗವಾಗಿದ್ದು, ಅಲ್ಲಿಯೇ ರಾಜಯೋಗವನ್ನು ಕನ್ನಡಿಸಿ, ಸಿದ್ಧಪಡಿಸಿದರು. (ಪು-279)

ಪುಸ್ತಕ ಪ್ರಿಂಟಾಗಿ ಬಂದದ್ದು 1916 ರಲ್ಲಿ. ಬೆಂಗಳೂರಿನ ರಾಮಕೃಷ್ಣಾಶ್ರಮಕ್ಕೆ 200 ಪ್ರತಿಗಳು, ಸ್ವಲ್ಪ ಭಾಗವನ್ನು ಪುಸ್ತಕ ವ್ಯಾಪಾರಿಗಳಲ್ಲಿಟ್ಟು, ಉಳಿದವನ್ನು ಮಾಗಾನಹಳ್ಳಿ ದೊಡ್ಡಬಸಪ್ಪನವರಿಗೆ ಕೊಡಬೇಕೆಂದಾಗ ಅವರು "ಇದನ್ನು ಮಾರಿ ಬಂದ ಹಣದಲ್ಲಿ ಮುಕ್ಕಾಲು ಭಾಗವನ್ನು ನೀವು ಮುಂದೆ ಬರೆಯುವ ಗ್ರಂಥಕ್ಕೆ ಮೂಲಧನವಾಗಿಟ್ಟುಕೊಳ್ಳಿ" ಎಂದರು. 'ನನ್ನ ಕೈಯಲ್ಲಿ ಹಣ ನಿಲ್ಲುವದಿಲ್ಲ, ಅದು ನಿಮ್ಮಲ್ಲಿಯೇ ಇರಲಿ' ಎಂದರೂ ಕೇಳದೆ, "ಇಷ್ಟರಮೇಲೆ ನೀವು ಬ್ರಾಹ್ಮಣರು. ನಿಮಗೆ ಹಣದ ತಗಾದೆ ಬಂದಾಗ ಅವಶ್ಯವಾಗಿ ಉಪಯೋಗಿಸಿಕೊಂಡು ಬಿಡಿರಿ" ಎಂದರು. ಆ ಉದಾರ ಮಹಾಶಯರ ಈ ಸಹಾಯವು ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಜೀವಧನವಾಯಿತು". (287)

ಇದಿಷ್ಟೂ ಈ ಪುಸ್ತಕದ ಅನುವಾದ, ಮುದ್ರಣವಾದ ಮೇಲೆ ಬಂದ ಹಣದ ಸದ್ವಿನಿಯೋಗ, ಎಲ್ಲಕ್ಕೂ ಹೆಚ್ಚಾಗಿ ಶ್ರೀ ಶ್ರೀಗಳವರ ವ್ಯಕ್ತಿತ್ವಕ್ಕೆ ಹಾಗೇ ಸಾಹುಕಾರರ ಔದಾರ್ಯಕ್ಕೆ ಇಣುಕು ನೋಟವನ್ನು ನೀಡುತ್ತವೆ. 1920 ರಲ್ಲಿ ಕಾರ್ಯಾಲಯ ಸ್ಥಾಪನೆಯಾದ ಮೇಲೆ ಈ ಪುಸ್ತಕ ಕಾರ್ಯಾಲಯದ ಗ್ರಂಥಾವಳಿಯಲ್ಲಿ ಸೇರಿತು. ಈ ಸರಣಿಯಲ್ಲಿ ಉಳಿದ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಪುಸ್ತಕಗಳೂ ಇವೆ. ('ಕರ್ಮಯೋಗ'ದ ಪ್ರತಿ ಸಿಗದ ಕಾರಣ ಅದರ ಮರು ಮುದ್ರಣ ವಿಳಂಬವಾಗಿದೆ)

ಇದೀಗ ರಾಜಯೋಗದ ಎರಡನೆಯ ಮುದ್ರಣ ನಿಮ್ಮ ಮುಂದಿದೆ. ಇದಕ್ಕೆ ಸೊಗಸಾದ ಮುನ್ನುಡಿಯನ್ನು ಕೊಟ್ಟು, ಹೊಸ ಹೊಳಪನ್ನು ತಂದಿರುವ ಶ್ರೀಶ್ರೀ ರಾಘವೇಶಾನಂದಜಿ ಯವರಿಗೆ ಕಾರ್ಯಾಲಯ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಈ ಮುದ್ರಣಕ್ಕೆ ಆಧಾರವಾಗಿರುವ, ಕಾರ್ಯಾಲಯದಲ್ಲಿಲ್ಲದ ಮೊದಲ ಮುದ್ರಣದ ಪ್ರತಿಯನ್ನು ಶ್ರಮಪಟ್ಟು ತರಿಸಿದ ಶ್ರೀ ಹೆಚ್. ವೆಂಕಟನರಸಪ್ಪನವರಿಗೂ, ಅದನ್ನು ಒದಗಿಸಿದ ಮಹನೀಯರಿಗೂ, ಸುಂದರ ಅಕ್ಷರ ಜೋಡಣೆ ಮಾಡಿರುವ ಶ್ರೀ ಸುರೇಶ್ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿರುವ ಸ್ಟಾಂಡರ್ಡ್ ಪ್ರೆಸ್‌ನ ಶ್ರೀ ನಾಗರಾಜರಿಗೂ ಕಾರ್ಯಾಲಯದ ಧನ್ಯವಾದಗಳು.

2008 ರಲ್ಲಿ ಮೂರನೆಯ ಬಾರಿಗೆ ಮುದ್ರಿತವಾಗಿದ್ದ ಪುಸ್ತಕಗಳಲ್ಲೆವೂ ಮಾರಾಟವಾಗಿದ್ದರಿಂದ, ಪರಿಷ್ಕರಿಸಿ **ನಾಲ್ಕನೆಯ** ಬಾರಿಗೆ ಮುದ್ರಿಸಿ ಹೊರತರಲಾಗಿದೆ. ಎಂದಿನಂತೆ ಭಕ್ತಾದಿಗಳು ಪುಸ್ತಕವನ್ನು ಬರಮಾಡಿಕೊಂಡು ಓದಿ ಜ್ಞಾನಾರ್ಜನೆಯನ್ನು ಹೊಂದಿ ಗ್ರಂಥ ಪ್ರಕಟಣೆಗೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಶ್ರೀ ಖರಸಂವತ್ಸರ, ಚೈತ್ರ ಬಹುಳ ಚತುರ್ದಶಿ, ಪ್ರಕಾಶಕರು

22-01-2012, ಬೆಂಗಳೂರು

## ವಿಷಯಾನುಕ್ರಮಣಿಕೆ


| | ಪುಟ |
|---|---|
| ಮುನ್ನುಡಿ | iii |
| ಗ್ರಂಥಕರ್ತರ ಪೀಠಿಕೆ | iv |
| ಭಾಷಾಂತರ ಕರ್ತನ ಪೀಠಿಕೆ | vi |
| ಪ್ರಕಾಶಕರ ವಿಜ್ಞಾಪನೆ | viii |


### ಭಾಗ–1–ಉಪನ್ಯಾಸಗಳು


| | |
|---|---|
| ಅಧ್ಯಾಯ 1–ಪೀಠಿಕಾ ಪ್ರಕರಣ | 1 |
| 2–ಯೋಗಾಂಗಗಳು | 13 |
| 3–ಪ್ರಾಣ | 23 |
| 4–ಆಧ್ಯಾತ್ಮಿಕ ಪ್ರಾಣ | 37 |
| 5–ಅಧ್ಯಾತ್ಮ ಪ್ರಾಣವನ್ನು ಸ್ವಾಧೀನ ಮಾಡಿಕೊಳ್ಳುವ ಬಗೆ– | 43 |
| 6–ಪ್ರತ್ಯಾಹಾರವೂ ಧಾರಣೆಯೂ | 48 |
| 7–ಧ್ಯಾನವೂ ಸಮಾಧಿಯೂ | 56 |
| 8–ರಾಜಯೋಗ ಸಾರ | 66 |


### ಭಾಗ–2–ಪತಂಜಲಿಗಳ ಯೋಗ ಸೂತ್ರಗಳು


| | |
|---|---|
| ಖಂಡ–ಅಖಂಡ, ಪೀಠಿಕೆ | 72 |
| ಸಮಾಧಿ ಪಾದ | 76 |
| ಸಾಧನ ಪಾದ | 113 |
| ವಿಭೂತಿ ಪಾದ | 144 |
| ಕೈವಲ್ಯ ಪಾದ | 160 |
| ಪರಿಶಿಷ್ಟ | 175 |

# ಭಾರತದ ಅಮೂಲ್ಯ ಶ್ರೀ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಭಾರತ ಮಾತೆಯ ಸುಂದರ ಸೊಬಗಿನ ಕಂಠಿಹಾರದ ಅನರ್ಘ್ಯ ರತ್ನಗಳಲ್ಲೊಬ್ಬರು. ತನ್ನ ಶಕ್ತಿ ವಿಶೇಷವನ್ನು ತನ್ನೊಳಗೇ ಅಡಗಿಸಿಟ್ಟ ಋಷಿಯಂತಾಗದೆ, ದಾಸ್ಯ, ಆಲಸ್ಯ, ಅಜ್ಞಾನದ ಅಂಧಕಾರದ ಸುಳಿಯಲ್ಲಿ ತೊಳಲಾಡುತ್ತಿದ್ದ ಜನತೆಯನ್ನು ತಮ್ಮ ಜ್ಞಾನಾಂಜನದ ಶಲಾಕೆಯಿಂದ ತಿವಿದು ಎಬ್ಬಿಸಲು ದೇಶದ ಉದ್ದಗಲಕ್ಕೂ ಸಂಚರಿಸಿ, ಏಳಿ, ಎದ್ದೇಳಿ, ಮುಂದೆ ಮುಂದೆ ನಡೆಯಿರಿ ಎನ್ನುವಂತೆ ಅವರಲ್ಲೊಂದು ಹೊಸ ಉತ್ಸಾಹವನ್ನು ತುಂಬಿದ ಮಹಾಚೇತನರು. ದೇಶಪ್ರೇಮ, ಹಿಂದೂ ಧರ್ಮ ಪ್ರಿಯರು, ವೇದಾಂತ ಆರಾಧಕರು, ಹತ್ತು ಹಲವು ಮುಖಗಳ ವೈವಿಧ್ಯತೆಯ ಮೇಧಾವಿ; ಮೂಲಭೂತವಾಗಿ ತನ್ನದೇ ಆದ ಯೋಚನಾಲಹರಿಯ ಅನೇಕ ತೆರೆಗಳಿಂದ, ಅತ್ಯುತ್ತಮ ವೇದಾಂತ ಸಂದೇಶಗಳ ಅಪಭ್ರಂಶ ರೀತಿಯ ಆಚರಣೆಗಳನ್ನು ತೋಯಿಸಿ ತೊಳೆದು ಅದರ ಹೊಳಪನ್ನು ಸೌಂದರ್ಯವನ್ನು ಹೊರಸೆಳೆವ ಪ್ರಯತ್ನ ಮಾಡಿ ಜಯಶೀಲರಾದ ಧೀರರು; ವಿಷಯಗಳನ್ನು ತಿಳಿಯುವ ಕುತೂಹಲ, ಯಾವುದನ್ನೂ ಪ್ರಾಮಾಣಿಕವಾಗಿ ವಿಮರ್ಶಿಸಿ, ಸಕಾರಣವಾದ ವ್ಯಾಖ್ಯೆ ಇದ್ದದ್ದನ್ನು ಮಾತ್ರ ಸ್ವೀಕರಿಸುವ ತೆರೆದ ಮನಸ್ಸು, ಸಾಮಾಜಿಕ ಅನ್ಯಾಯಗಳಿಗೆ ತುತ್ತಾದ ಬಡ-ಅಜ್ಞಾನಿಗಳನ್ನು ಅಕ್ಷರಸ್ತರನ್ನಾಗಿಸಿ, ಗ್ರಾಮ ನೈರ್ಮಲ್ಯ, ವೈಜ್ಞಾನಿಕ ಕ್ರಮಬದ್ಧ ವ್ಯವಸಾಯ ಪದ್ಧತಿಗಳಿಂದ ಮುಂದೆ ತರುವ ಹಂಬಲ, ಉತ್ಸಾಹವಿದ್ದ ಆಧುನಿಕರು. ಅಮೆರಿಕದ ಧರ್ಮಸಮ್ಮೇಳನದಲ್ಲಿ ಅವರ ರೋಮಾಂಚನ ವಿದ್ಯುತ್ ಭಾಷಣದಿಂದ ಅವರನ್ನು ಮೇಲ್ತರದ ಉಪನ್ಯಾಸಕರೆನಿಸಿ, ವಿದೇಶಗಳಲ್ಲಿಯೂ ಖ್ಯಾತಿವೆತ್ತವರು.

ಯಾವುದನ್ನಾದರೂ ಒಂದೇ ಸಲ ಓದಿ ಕೇಳಿದೊಡನೆ ಚೆನ್ನಾಗಿ ಅರಿಯುವ ಧೀಃ ಶಕ್ತಿ, ನಿಜ ಧರ್ಮಾಚರಣೆಯ ವ್ಯಾಖ್ಯೆ, ಅನ್ಯ ಧರ್ಮಗಳ ನಿಕಟ ಪರಿಚಯ, ಉತ್ತಮಾಂಶಗಳಿಗೆ ಗೌರವ, ಮಾತು – ಲೇಖನಗಳಲ್ಲಿನ ಹೆಮ್ಮೆಗಾರಿಕೆ ಯಾವುದೇ ವಿಷಯದಲ್ಲಾಗಲೀ, ಅವರಂತಹ ಅಸಾಧಾರಣರನ್ನು ಕಾಣುವುದು ವಿರಳ. ಮೂಕ ವಿಸ್ಮಿತ ಗೌರವಾದರಗಳಿಂದ ಅವರ ಜೀವಿತ ಕಾಲ ಅನಂತರದಲ್ಲೂ ಪಂಡಿತ ಪಾಮರರಾದಿಯಾಗಿ ನಮಸ್ಕರಿಸಿ ಕತ್ತೆತ್ತಿ ನೋಡುವ ಆರಾಧಿಸುವ ಭವ್ಯಮೂರ್ತಿ.

ಕೇವಲ 39 ವರ್ಷಗಳ [1863–1902] ಜೀವಿತದಲ್ಲಿ ಸಾಧಿಸಿದ ಪವಾಡ ಸದೃಶ ಕಾರ್ಯಗಳು ತೋರಿದ ಗುಣಗಳು ಎಲ್ಲವನ್ನೂ ಗಮನಿಸಿದರೆ ಶ್ರೀ ರಾಮಕೃಷ್ಣರು ತಮ್ಮ ಧ್ಯಾನದ ಪರಮಸ್ಥಿತಿಯಲ್ಲಿ ಕಂಡ ಉನ್ನತ ಸ್ಥಿತಿಯಲ್ಲಿದ್ದ ಋಷಿಯೊಬ್ಬರೇ ಧರೆಗಿಳಿದು ಬಂದ ಈ ಮಹಾನುಭಾವರು, ಸಾಮಾನ್ಯಮಾನವರಲ್ಲ ಎಂದು ಅರಿವಾಗುತ್ತದೆ. ನಿಂತಲ್ಲಿ ನಿಲ್ಲದ ಪರಿವ್ರಾಜಕರಾಗಿದ್ದುದು ತಮ್ಮ ಜೀವಿತದಲ್ಲಿ ಅತ್ಯಲ್ಪ ಕಾಲದ ಸಾಧನೆಗಾಗಿ. ಅವರು ಸ್ಥಾಪಿಸಿದ ಸಂನ್ಯಾಸಿ ಸೋದರ ಸಂಘದಿಂದ ದೇಶಾದ್ಯಂತ ಶ್ರೀ ರಾಮಕೃಷ್ಣ ಮಠಗಳ ಸ್ಥಾಪನೆ, ಅವುಗಳಿಂದಾಗುತ್ತಿರುವ ಧರ್ಮ ತಿರುಳಿನ ಪ್ರಚಾರ ಶ್ರೇಷ್ಠ ಸೇವಾ ಕಾರ್ಯಗಳೆಲ್ಲವೂ, ರಾಮಕೃಷ್ಣ ಪ್ರಿಯ ದತ್ತ ನರೇಂದ್ರನೆಡೆಗೆ ಪೂರ್ವ ಪಶ್ಚಿಮಗಳಿಂದ ಅಧ್ಯಾತ್ಮ ಪ್ರಿಯ ಬಂಧುಗಳನ್ನು ಆಕರ್ಷಿಸಿ ಈ ಅಪೂರ್ವ, ಅಮೋಘ ಗುರು – ಶಿಷ್ಯರನ್ನು ಸ್ತುತಿಸಿ, ಕೀರ್ತನೆ ಮಾಡಿಸುತ್ತಿದೆ.

## ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದರಿಗೆ ಕೃತಜ್ಞತಾ ನಮನಗಳು

# ರಾಜಯೋಗ

ಅಥವಾ

## ಮನೋಜಯನಿರೂಪಣವೆಂಬ

ಈ ಗ್ರಂಥವು ಲೋಕವಿಖ್ಯಾತರಾದ

ಶ್ರೀರಾಮಕೃಷ್ಣ ಪರಮಹಂಸರವರ

ಪ್ರಿಯಶಿಷ್ಯರೂ ಸುಪ್ರಸಿದ್ಧರೂ ಆದ

### ಶ್ರೀ ವಿವೇಕಾನಂದ ಸ್ವಾಮಿಗಳು

1895–96ನೇ ಹೇಮಂತ ಋತುವಿನಲ್ಲಿ

ನ್ಯೂಯಾರ್ಕಿನಲ್ಲಿ ಮಾಡಿದ ಉಪನ್ಯಾಸವು

ಯಂ ವಿನಿದ್ರಾ ಜಿತಶ್ವಾಸಾಃ ಸನ್ತುಷ್ಟಾಃ ಸಂಯತೇಂದ್ರಿಯಾಃ
ಜ್ಯೋತಿಃ ಪಶ್ಯನ್ತಿ ಯುಞ್ಜಾನಾಸ್ತಸ್ಮೈ ಯೋಗಾತ್ಮನೇ ನಮಃ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು

(ಪೂರ್ವಾಶ್ರಮದ ವೈ. ಸುಬ್ಬರಾವ್)

# ರಾಜಯೋಗ

## 1ನೇ ಭಾಗ – ಉಪನ್ಯಾಸಗಳು

******

## 1ನೇ ಅಧ್ಯಾಯ – ಪೀಠಿಕಾಪ್ರಕರಣ

ನಮ್ಮ ಜೀವನಕ್ಕೆಲ್ಲ ಅನುಭವವೇ ಆಧಾರವು. ವಿಶೇಷ[1]ದಿಂದ ಸಾಮಾನ್ಯವನ್ನಾಗಲಿ, ಸಾಮಾನ್ಯದಿಂದ[2] ವಿಶೇಷವನ್ನಾಗಲಿ ತರ್ಕಿಸುವ ಅನುಮಾನ[3] ಜ್ಞಾನಕ್ಕೆ ಅನುಭವವೇ ತಳಹದಿಯು. ಕ್ರಮಶಾಸ್ತ್ರ[4]ಗಳಲ್ಲಿ ವಿಷಯವು ಪ್ರತಿಯೊಬ್ಬನ ಅನುಭವಕ್ಕೂ ಹೊಂದುವದರಿಂದಲೇ ನಿಶ್ಚಯ ಜ್ಞಾನವು ಸುಲಭವಾಗಿ ಆಗುವದು. ಶಾಸ್ತ್ರಕಾರನು ಯಾವದನ್ನೂ ಸುಮ್ಮನೆ ನಂಬಬೇಕೆಂದು ಅನ್ನುವುದಿಲ್ಲ; ತನ್ನ ಅನುಭವದಿಂದ ಸಿದ್ಧವಾಗಿರುವ ಕೆಲವು ವಿಷಯಗಳನ್ನಿಟ್ಟುಕೊಂಡು ಅವುಗಳನ್ನು ಕುರಿತು ವಿಚಾರ ಮಾಡಿ ಎಲ್ಲಾ ಮನುಷ್ಯರಲ್ಲಿಯೂ ಇರುವ ಅನುಭವಕ್ಕೆ ಹೊಂದಿಸಿ ತಿಳಿಸುತ್ತಾನೆ. ಹೀಗೆ ಪ್ರತಿಯೊಂದು ಕ್ರಮಶಾಸ್ತ್ರದಲ್ಲಿಯೂ ಎಲ್ಲಾ ಜನರಿಗೂ ತಿಳಿಯುವ ಆಧಾರವೊಂದಿರುವುದರಿಂದ ಆ ಆಧಾರದಿಂದ ಮಾಡಿದ ಸಿದ್ಧಾಂತವು

---

1. 2. ಒಂದಕ್ಕೆ ಅನ್ವಯಿಸುವುದನ್ನು ವಿಶೇಷವೆನ್ನುತ್ತಾರೆ. ಒಂದೇ ತರದ ಅನೇಕಕ್ಕೆ ಅನ್ವಯಿಸುವುದನ್ನು ಸಾಮಾನ್ಯವೆನ್ನುವರು. ಉದಾಹರಣೆ: "ಪ್ರಾಣಿಗಳು ಸಾಯುತ್ತವೆ" ಎಂಬುದು ಸಾಮಾನ್ಯ, "ಮನುಷ್ಯನೊಬ್ಬ ಪ್ರಾಣಿ" ಇದು ವಿಶೇಷ.

3. ಅನುಮಾನವೆಂದರೆ ಶಾಸ್ತ್ರೀಯ ರೀತಿಯಿಂದ ಊಹಿಸಿ ತಿಳಿಯುವುದು. ಹೇಗೆಂದರೆ: ಪ್ರಾಣಿಗಳೆಲ್ಲ ಸಾಯುತ್ತವೆ; ಮನುಷ್ಯನು ಪ್ರಾಣಿಯಾಗಿದ್ದಾನೆ; ಆದುದರಿಂದ ಮನುಷ್ಯನು ಸಾಯುತ್ತಾನೆ. ಹೀಗೆ ಊಹಿಸುವುದನ್ನು ತಾರ್ಕಿಕರು ಅನುಮಾನವೆನ್ನುತ್ತಾರೆ. (2ನೇ ಭಾಗ 7ನೇ ಸೂತ್ರವನ್ನು ನೋಡಿ).

4. ಗಣಿತ ಮೊದಲಾದ ಶಾಸ್ತ್ರಗಳ ಸಿದ್ಧಾಂತವು ಹೆಚ್ಚು ಕಡಮೆಯಾಗುವುದಲ್ಲ. ಇವುಗಳ ಫಲವು ಒಂದೇ ರೀತಿಯಾಗಿರುವುದು. ಆದುದರಿಂದ ಇವನ್ನು ಕ್ರಮ ಶಾಸ್ತ್ರಗಳೆಂದು ಹೇಳುವರು. ವೈದ್ಯ ಮೊದಲಾದ ಶಾಸ್ತ್ರಗಳು ಈ ಗುಂಪಿಗೆ ಸೇರುವುದಿಲ್ಲ.

ಸರಿಯೊ, ತಪ್ಪೋ ಎಂಬುದು ಥಟ್ಟನೆ ಗೊತ್ತಾಗುವುದು. ಈಗ ಒಂದು ಪ್ರಶ್ನೆ ಹುಟ್ಟುವುದು. "ಮತಕ್ಕೂ ಇಂಥದ್ದೊಂದು ಆಧಾರವಿದೆಯೋ ಇಲ್ಲವೋ?" ಎಂದರೆ ಇದೆಯೆಂದೂ ಇಲ್ಲವೆಂದೂ ಕೂಡ ಉತ್ತರವನ್ನು ಹೇಳಬೇಕಾಗಿರುವುದು. ಪ್ರಪಂಚದಲ್ಲೆಲ್ಲ ಸಾಮಾನ್ಯವಾಗಿ ಬೋಧಿಸುವ ಮತಕ್ಕೆ ಶ್ರದ್ಧಾ, ವಿಶ್ವಾಸಗಳೇ ಆಧಾರವೆಂದು ಹೇಳುತ್ತಾರೆ. ಬಹು ಸಂದರ್ಭಗಳಲ್ಲಿ ಮತವೆಂದರೆ ಬರೀ ಭಿನ್ನ ಭಿನ್ನ ಸಿದ್ಧಾಂತಗಳಾಗಿಬಿಟ್ಟಿದೆ. ಈ ಕಾರಣದಿಂದಲೇ ಎಲ್ಲಾ ಮತದವರೂ ಒಬ್ಬರೊಡನೆ ಒಬ್ಬರು ಜಗಳವಾಡುತ್ತಿರುವರು. ಮೇಘಮಂಡಲದ ಮೇಲ್ಗಡೆಯಲ್ಲಿ ಒಬ್ಬನು ದೊಡ್ಡವನು ಇದ್ದುಕೊಂಡು ಪ್ರಪಂಚವನ್ನೆಲ್ಲ ಆಳುತ್ತಿದ್ದಾನೆಂದೂ ಕೇವಲ ತಮ್ಮ ವಾಕ್ಯದ ಪ್ರಾಮಾಣ್ಯದ ಮೇಲೆ ಈ ಸಿದ್ಧಾಂತವನ್ನು ನಂಬಬೇಕೆಂದೂ ಒಬ್ಬರು ಹೇಳುತ್ತಾರೆ. ಇದರಂತೆಯೆ ನನಗೂ ನನ್ನ ಅಭಿಪ್ರಾಯಗಳು ಇದ್ದೇ ಇವೆ. ಅವುಗಳನ್ನು ಇತರರು ನಂಬಬೇಕೆಂದು ನನ್ನ ಇಚ್ಛೆ. ಆದರೆ ಅವುಗಳಿಗೆ ಕಾರಣವೇನೆಂದು ಕೇಳಿದರೆ ನಾನು ಹೇಳಲಾರೆ. ಇದರಿಂದಲೇ ಧರ್ಮಕ್ಕೂ ತತ್ತ್ವಶಾಸ್ತ್ರಕ್ಕೂ ಈ ಕಾಲದಲ್ಲಿ ಕೆಟ್ಟ ಹೆಸರು ಬಂದಿರುವದು. ವಿದ್ಯಾವಂತರೆಲ್ಲ "ಈ ಮತಗಳಲ್ಲೆಲ್ಲಾ ಬರೀ ಸಿದ್ಧಾಂತವೆ. ಅವುಗಳ ಯುಕ್ತಾಯುಕ್ತತೆಯನ್ನು ವಿಚಾರಿಸುವದಕ್ಕೆ ಆಧಾರವೇ ಇಲ್ಲ. ಪ್ರತಿಯೊಬ್ಬನೂ ಅವನವನಿಗೆ ಬೇಕಾದಂತೆ ಹೇಳುತ್ತಾನೆ" ಎಂದು ಹೇಳುವಂತೆ ಕಾಣುತ್ತದೆ. ಆದರೂ ಎಲ್ಲಾ ಸಿದ್ಧಾಂತಗಳಿಗೂ, ಬೇರೆ ಬೇರೆ ದೇಶಗಳಲ್ಲಿರುವ ಬೇರೆ ಬೇರೆ ಮತಪ್ರಭೇದದವರ ಭಿನ್ನಾಭಿಪ್ರಾಯಗಳಿಗೂ, ಮೂಲವಾಗಿ ಎಲ್ಲರ ನಂಬಿಕೆಗೂ ಆಧಾರವಾದುದು ಮತದಲ್ಲಿಯೂ ಇದ್ದೇ ಇರುವದು. ಈ ಆಧಾರವನ್ನು ಹುಡುಕಿದರೆ ಈ ಅಭಿಪ್ರಾಯಗಳಿಗೂ ಎಲ್ಲರ ಅನುಭವದ ಆಧಾರದ ಮೇಲೆಯೇ ಹುಟ್ಟಿರುವವೆಂದು ಗೊತ್ತಾಗುವದು.

ಮೊದಲು ಪ್ರಪಂಚದ ಮತಗಳನ್ನೆಲ್ಲ ವಿಂಗಡಿಸಿ ನೋಡಿದರೆ ಇವುಗಳಲ್ಲಿ ಗ್ರಂಥವಿರುವ ಮತಗಳೆಂದೂ ಗ್ರಂಥವಿಲ್ಲದ ಮತಗಳೆಂದೂ ಎರಡು ವರ್ಗಗಳಾಗಿರುವವೆಂದು ಗೊತ್ತಾಗುವದು. ಗ್ರಂಥವಿರುವ ಮತಗಳೇ ಪ್ರಬಲವಾಗಿರುವವು. ಇವುಗಳ ಅನುಯಾಯಿಗಳೆ ಬಹಳ. ಗ್ರಂಥವಿಲ್ಲದ ಮತಗಳು ಬಹುಮಟ್ಟಿಗೆ ನಾಶವಾಗಿಹೋಗಿವೆ. ಈಗ ಇರುವ ಒಂದೆರಡು ಹೊಸಮತಗಳಿಗೆ ಅನುಯಾಯಿಗಳು ಬಹು ಕಡಿಮೆ. ಹೀಗಿದ್ದರೂ ಎಲ್ಲಾ ಮತದವರೂ ಒಂದು ವಿಷಯದಲ್ಲಿ ಏಕಕಂಠರಾಗಿರುವರು. ತಾವು ಹೇಳುವ ತತ್ತ್ವಗಳು ಕೆಲ ಕೆಲವು ಜನರ ಅನುಭವದಿಂದ ಗೊತ್ತಾಗಿರುವವೆಂಬುದೇ ಈ ವಿಷಯವು. ಕ್ರಿಸ್ತ ಮತದವನು "ನನ್ನ ಮತವನ್ನು ನಂಬಿರಿ. ಕ್ರಿಸ್ತನು ದೇವರ ಅವತಾರವೆಂದು ನಂಬಿರಿ. ಜೀವನುಂಟೆಂದು ನಂಬಿರಿ. ಜೀವನಿಗೆ ಉತ್ತಮ ಗತಿಯುಂಟೆಂದು ನಂಬಿರಿ" ಎಂದು ಹೇಳುತ್ತಾನೆ. ಇದಕ್ಕೆ ಕಾರಣವನ್ನು ಹೇಳೆಂದು ಕೇಳಿದರೆ ಇದು ನನ್ನ ನಂಬಿಕೆಯೆಂದು ಹೇಳುತ್ತಾನೆ. ಆದರೆ ಕ್ರಿಸ್ತ ಧರ್ಮದ ಮೂಲಕ್ಕೆ ಹೋದರೆ ಇದಕ್ಕೆ ಅನುಭವವೇ ಆಧಾರವೆಂದು ಗೊತ್ತಾಗುವದು. ಕ್ರಿಸ್ತನು ತಾನು ದೇವರನ್ನು ನೋಡಿರುವೆನೆಂದು ಹೇಳುತ್ತಿದ್ದನು. ಅವನ ಶಿಷ್ಯರು ತಾವು ದೇವರನ್ನು ಕಂಡಿರುವೆವೆಂದು ಹೇಳುತ್ತಿದ್ದರು. ಹೀಗೆಯೆ ಬುದ್ಧ ಮತದಲ್ಲಿ ಬುದ್ಧನ ಅನುಭವವೇ ಆಧಾರವು. ಆತನು ಕೆಲವು ತತ್ತ್ವಗಳನ್ನು ಅನುಭವಿಸಿ ಅವುಗಳನ್ನು ಸಾಕ್ಷಾತ್ಕರಿಸಿಕೊಂಡು, ಮನಗಂಡು ಅವುಗಳನ್ನೇ ಜನರಿಗೆ ಉಪದೇಶಮಾಡಿದನು. ಹಿಂದುಗಳ ವಿಚಾರವೂ ಹೀಗೆಯೆ. ಅವರ ಮತಗ್ರಂಥಗಳಲ್ಲಿ ಋಷಿಗಳು ತಾವು ಕೆಲವು ತತ್ತ್ವಗಳನ್ನು ಅನುಭವಿಸಿರುವೆವೆಂದು ಹೇಳುತ್ತಾರೆ. ಇವುಗಳನ್ನೇ

ಅವರು ಬೋಧಿಸುತ್ತಾರೆ. ಈ ರೀತಿಯಲ್ಲಿ ಪ್ರಪಂಚದ ಮತಗಳೆಲ್ಲ ಸಕಲಜ್ಞಾನಕ್ಕೂ ತಳಹದಿಯಾಗಿರುವ ಸಾಕ್ಷಾದನುಭವವೆಂಬ ಭದ್ರವಾದ ಆಧಾರದ ಮೇಲೆಯೆ ನಿರ್ಮಾಣವಾಗಿವೆಯೆಂಬುದು ಸ್ಪಷ್ಟವಾಗುತ್ತದೆ. ಗುರುಗಳಾದವರೆಲ್ಲ ದೇವರನ್ನೂ ತಮ್ಮ ಆತ್ಮವನ್ನೂ ತಮ್ಮ ಮುಂದಿನ ಗತಿಯನ್ನೂ ಎಂದಿಗೂ ತಮ್ಮ ಸ್ವರೂಪವೇನೆಂಬುದನ್ನೂ ತಿಳಿದಿದ್ದರು. ತಾವು ಕಂಡದ್ದನ್ನೆ ಇತರರಿಗೆ ಬೋಧಿಸಿದರು. ಆದರೆ ಒಂದು ವಿಶೇಷವುಂಟು. ಅದೇನೆಂದರೆ ಈ ಮತದವರನೇಕರು–ಮುಖ್ಯವಾಗಿ ಆಧುನಿಕರು ಇಂಥ ಅನುಭವಗಳು ಈಗಿನ ಕಾಲಕ್ಕೆ ಅಸಾಧ್ಯವೆದೂ ಆಯಾ ಮತಗಳನ್ನು ಸ್ಥಾಪಿಸಿ ಅವುಗಳಿಗೆ ತಮ್ಮ ಹೆಸರನ್ನು ಕೊಟ್ಟ ಕೆಲವುಜನರಿಗೆ· ಮಾತ್ರ ಅವು ಸಾಧ್ಯವಾದವೆಂದೂ ಈಗ ಈ ಅನುಭವಗಳು ಸಾಧ್ಯವಿಲ್ಲವಾದುದ–ರಿಂದ ಮತಕ್ಕೆ ನಂಬಿಕೆಯೇ ಕಾರಣವೆಂದೂ ಒಂದು ಬಗೆಯ ವಿಲಕ್ಷಣಾಭಿಪ್ರಾಯವುಳ್ಳವರಾಗಿರುವರು. ಇದನ್ನು ನಾನು ಸ್ವಲ್ಪವೂ ಒಪ್ಪುವುದಿಲ್ಲ. ಯಾವದಾದರೂ ಒಂದು ವಿಜ್ಞಾನದಲ್ಲಿ ಈ ಲೋಕದಲ್ಲಿ ಒಂದು ಅನುಭವವಾಗಿದ್ದರೆ ಅದಕ್ಕಿಂತ ಮೊದಲು ಕೋಟ್ಯನು ಕೋಟಿ ಸಲ ಅದೇ ಅನುಭವವು ಸಾಧ್ಯವಾಗಿರಬೇಕೆಂದೂ ಮತ್ತು ಮುಂದೆ ಎಂದೆಂದಿಗೂ ಹೀಗೆ ಸಾಧ್ಯವಾಗುತ್ತಲೆ ಇರುವದೆಂದೂ ಖಂಡಿತವಾಗಿ ನಿಶ್ಚಿತವಾಗುವುದು. ಒಂದೇ ಸಮವಾಗಿ ನಡೆಯುವದೇ ಸೃಷ್ಟಿಯ ಕಟ್ಟಳೆ. ಒಂದು ಸಲ ನಡೆದದ್ದು ಯಾವಾಗ ಬೇಕೆಂದರೂ ನಡೆದೀತು.

ಆದ ಕಾರಣ ಯೋಗಶಾಸ್ತ್ರಕಾರರು ಮತವೆಂಬುದು ಪೂರ್ವಿಕರ ಅನುಭವದ ಆಧಾರದ ಮೇಲೆ ಆಗಿರುವದೆಂಬುದಿಷ್ಟೇ ಸಾಲದೆಂದೂ ಆ ಅನುಭವಗಳನ್ನು ಪಡೆದ ಹೊರತು ಯಾವನನ್ನೂ ಧಾರ್ಮಿಕನೆಂದು ಹೇಳಲಾಗುವುದಿಲ್ಲವೆಂದು ಹೇಳುವರು. ಈ ಅನುಭವವನ್ನು ಪಡೆಯುವ ಕ್ರಮವನ್ನು ತಿಳಿಸುವ ಶಾಸ್ತ್ರವೇ ಯೋಗವು. ಅನುಭವವಾದ ಹೊರತು ಮತದ ವಿಚಾರವಾಗಿ ಸುಮ್ಮನೆ ಮಾತಾಡುವದರಿಂದ ಅಷ್ಟು ಉಪಯೋಗವಿಲ್ಲ. ದೇವರ ಹೆಸರಿನಲ್ಲಿ ಇಷ್ಟು ಗದ್ದಲವಾಗಿರುವುದೇತಕ್ಕೆ? ಇಷ್ಟು ಜಗಳವೂ, ಕಚ್ಚಾಟವೂ ಆಗಿರುವುದೇತಕ್ಕೆ? ಬೇರೆ ಕಾರಣಗಳಿಗಿಂತಲೂ ದೇವರ ಹೆಸರಿನಲ್ಲಿಯೆ ಹೆಚ್ಚು ರಕ್ತವು ಕೋಡಿಯಿಟ್ಟಿರುವುದು. ಏಕೆಂದರೆ ಜನರು ಮೂಲಕಾರಣದವರೆಗೆ ಹೋಗಲಿಲ್ಲ; ತಮ್ಮ ಪೂರ್ವಜರ ಆಚಾರಗಳಿಗೆ ಸುಮ್ಮನೆ ಹೂಗುಟ್ಟುತ್ತ ಇತರರನ್ನೂ ಹಾಗೆಯೇ ಮಾಡಬೇಕೆಂದು ಬಯಸಿದರು. ಯಾವನಿಗೇ ಆಗಲಿ, ತನಗೆ ಒಂದು ಆತ್ಮವಿದೆಯೆಂದು ತೋರದೆ ಇದ್ದ ಮೇಲೆ ಇದೆಯೆಂದು ಏಕೆ ಹೇಳಬೇಕು? ತಾನು ದೇವರನ್ನು ನೋಡದಿದ್ದ ಮೇಲೆ ದೇವರು ಇದ್ದಾನೆಂದು ಏತಕ್ಕೆ ಹೇಳಬೇಕು? ದೇವರಿರುವದು ನಿಜವಾದರೆ ನಮಗೆ ಅವನು ಕಾಣಿಸಬೇಕು. ಆತ್ಮವಿರುವದಾದರೆ ಅದು ನಮಗೆ ಗೋಚರವಾಗಬೇಕು. ಹಾಗಿಲ್ಲದಿದ್ದರೆ ನಂಬದಿರುವುದೇ ಮೇಲು. ಮನಸ್ಸಿನಲ್ಲಿ ಒಂದು, ಬಾಯಲ್ಲಿ ಒಂದು, ಹೀಗಿರುವುದಕ್ಕಿಂತ ಬಹಿರಂಗವಾಗಿ ನಾಸ್ತಿಕನಾಗಿರುವುದೇ ಉತ್ತಮ. ಈಗಿನ ಕಾಲದಲ್ಲಿ ಚೆನ್ನಾಗಿ ಕಲಿತವರ ಅಭಿಪ್ರಾಯವನ್ನು ಕೇಳಿದರೆ ಧರ್ಮ, ತತ್ತ್ವಶಾಸ್ತ್ರ, ಭಗವಂತನನ್ನು ಹುಡುಕೋಣ, ಇವೆಲ್ಲ ವ್ಯರ್ಥ ಪ್ರಯಾಸವೆನ್ನುವರು. ಅಲ್ಪಸ್ವಲ್ಪ ಓದಿದವರಾದರೊ "ಇವುಗಳಿಗಾವ ಆಧಾರವೂ ಇಲ್ಲ. ಆದರೂ ಇವು ಲೋಕೋಪಕಾರಕವಾದ ಒಳ್ಳೆಯ ಉದ್ದೇಶಗಳನ್ನು ಕೊಡುತ್ತಿವೆಯಾದುದರಿಂದ ಇವುಗಳು ಇರಬೇಕಾದುದು ಅಗತ್ಯ. ಜನರು ದೇವರಿದ್ದಾನೆಂದು ನಂಬಿದ್ದರೆ ಅವರು ಒಳ್ಳೆಯವರಾಗಿಯೂ ನೀತಿವಂತರಾಗಿಯೂ

ಆಗುವುದರಿಂದ ಒಳ್ಳೆಯ ಜನರಾಗುವರು" ಎಂದು ಯೋಚಿಸುತ್ತಿರುವಂತೆ ತೋರುವುದು. ಇಂಥ ಅಭಿಪ್ರಾಯಗಳನ್ನು ಇಟ್ಟುಕೊಂಡಿರುವುದೇನೂ ಇವರ ತಪ್ಪಲ್ಲ. ಏಕೆಂದರೆ ಇವರಿಗೆ ಸಿಕ್ಕುವ ಬೋಧನೆಯೆಂದರೆ ಕೇವಲ ಸಾರವಿಲ್ಲದ ವಾಗಾಡಂಬರವಾಗಿರುವುದು. ಇವರು ಬರೀ ಮಾತಿನಿಂದಲೆ ತೃಪ್ತಿಪಡಬೇಕಾಗಿರುವುದು. ಆದರೆ ಇದು ಸಾಧ್ಯವೆ? ಹೀಗೂ ಸಾಧ್ಯವಾಗುವುದಾದರೆ ನನಗೆ ಮನುಷ್ಯ ಜನ್ಮದಲ್ಲಿಯೆ ಏನೇನೂ ಗೌರವ ಬುದ್ಧಿ ತೋರುವುದಿಲ್ಲ. ಮನುಷ್ಯನಿಗೆ ತತ್ತ್ವವು ಬೇಕಾಗಿರುವುದು. ಅವನು ಅದನ್ನು ಗ್ರಹಿಸಿ ಚೆನ್ನಾಗಿ ತಿಳಿದುಕೊಂಡು ತನ್ನ ಅಂತಃಕರಣದಲ್ಲಿ ಅನುಭವಕ್ಕೆ ತಂದುಕೊಂಡ ಮೇಲೆಯೆ ಸಂಶಯಗಳೆಲ್ಲ ನೀಗಿ, ಅಂಧಕಾರವೆಲ್ಲ ಕಳೆದು, ಮನಸ್ಸಿನ ಡೊಂಕುಗಳೆಲ್ಲ ನೆಟ್ಟಗಾಗುವುವೆಂದು ವೇದಗಳು ಸಾರುತ್ತಿವೆ. "ಅಮೃತಪುತ್ರರೆ, ಅತ್ಯಂತವಾಗಿ ಉನ್ನತವಾದ ಲೋಕದಲ್ಲಿರುವ ನಿವಾಸಿಗಳೆ, ಕೇಳಿರಿ. ಇಗೊ ಮೋಕ್ಷಪಥವು ಗೊತ್ತಾಗಿರುವುದು. ಈ ಅಂಧಕಾರವನ್ನು ಸಂಪೂರ್ಣವಾಗಿ ಪರಿಹರಿಸಿಕೊಳ್ಳುವುದಕ್ಕೆ ಒಂದು ಮಾರ್ಗವಿದೆ. ಕತ್ತಲೆಗೆಲ್ಲ ಆಚೆಯ ಕಡೆ ಇರುವಾತನಾರೋ ಆ ಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳುವುದೆ ಈ ಮಾರ್ಗವಲ್ಲದೆ ಬೇರೊಂದಿಲ್ಲ" ಹೀಗೆಂದು ಶ್ರುತಿಯಿರುವುದು.

ರಾಜಯೋಗವೆಂಬ ವಿದ್ಯೆಯಲ್ಲಿ ಈ ತತ್ತ್ವವನ್ನು ಪಡೆಯುವುದಕ್ಕೆ ಯತ್ನ ಸಾಧ್ಯವಾಗಿಯೂ ಶಾಸ್ತ್ರೀಯ ರೀತಿಯಿಂದ ಪರಿಶೀಲನೆಮಾಡಿದುದಾಗಿಯೂ ಇರುವ ಕ್ರಮವೊಂದನ್ನು ಜನರಿಗೆ ತೋರಿಸುವುದೇ ಉದ್ದೇಶವು. ಒಂದೊಂದು ಶಾಸ್ತ್ರದಲ್ಲಿಯೂ ಪರಿಶೀಲನೆಯ ಕ್ರಮವು ಒಂದೊಂದು ಬಗೆಯಾಗಿರುವುದು. ಹೇಗೆಂದರೆ ಜ್ಯೋತಿಷ್ಯವನ್ನು ಕಲಿಯಬೇಕೆಂಬುವನು ಸುಮ್ಮನೆ ಕೂತುಕೊಂಡು "ಜ್ಯೋತಿಷ! ಜ್ಯೋತಿಷ!" ಎಂದು ಕೂಗಿಕೊಂಡರೆ ಎಂದಿಗೂ ಬರುವುದಿಲ್ಲ. ಜ್ಯೋತಿಷ್ಕನಾಗಬೇಕಾದರೆ ಒಂದು ನಕ್ಷತ್ರಶಾಲೆಗೆ ಹೋಗಬೇಕು. ದೂರದರ್ಶಕಯಂತ್ರವನ್ನು ತೆಗೆದುಕೊಂಡು ನಕ್ಷತ್ರಗಳನ್ನೂ ಗ್ರಹಗಳನ್ನೂ ಪರೀಕ್ಷಿಸಬೇಕು. ಹೀಗೆ ಮಾಡಿದರೆ ಮಾತ್ರ ಜ್ಯೋತಿಷ್ಕನಾಗುತ್ತಾನೆ. ವಸ್ತುಶಾಸ್ತ್ರದಲ್ಲಿಯೂ ಹೀಗೆಯೆ. ಒಂದೊಂದರಲ್ಲಿ ಒಂದೊಂದು ಕ್ರಮವನ್ನು ಅನುಸರಿಸಬೇಕಾಗುವುದು. ಹೇಗೆಂದರೆ ಮೊದಲು ಒಂದು ವಸ್ತುಸಂಗ್ರಹಾಲಯಕ್ಕೆ ಹೋಗಬೇಕು. ಅಲ್ಲಿ ಬೇರೆ ಬೇರೆ ವಸ್ತುಗಳನ್ನು ಸೇರಿಸಿ, ಸಂಯೋಜನೆ ಮಾಡಿ ಮಾಡಿ ಪರೀಕ್ಷಿಸುತ್ತಿರಬೇಕು. ಹೀಗೆ ಮಾಡಿದರೆ ವಸ್ತುಶಾಸ್ತ್ರದಲ್ಲಿ ತಿಳುವಳಿಕೆಯುಂಟಾಗುವುದು. ಈ ರೀತಿಯಲ್ಲಿ ಪ್ರತಿಯೊಂದು ಶಾಸ್ತ್ರದಲ್ಲಿಯೂ ಅದರದರ ಕ್ರಮವಿರುವುದು. ನಾನು ಸಾವಿರಾರು ಧರ್ಮಪ್ರವಚನಗಳನ್ನು ಮಾಡಿದರೂ ಸಾಧನಗಳನ್ನು ಅಭ್ಯಾಸಮಾಡಿದ ಹೊರತು ಯಾರೂ ಅಧ್ಯಾತ್ಮಪರರಾಗಲಾರರು. ಈ ಮತ ತತ್ತ್ವಗಳೆಂಬುವು ಪರಿಶುದ್ಧರಾಗಿಯೂ, ಅಸ್ವಾರ್ಥಪರರಾಗಿಯೂ, ಲೋಕೋಪಕಾರಮಾಡಬೇಕೆಂಬುದೊಂದಲ್ಲದೆ ಮತ್ತಾವ ಉದ್ದೇಶವೂ ಇಲ್ಲದವರಾಗಿಯೂ, ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಇದ್ದ ಮಹಾತ್ಮರು ಹೇಳಿದವುಗಳು. ಇವರೆಲ್ಲರೂ "ಇಂದ್ರಿಯಗಳಿಂದ ತಿಳಿಯುವ ತತ್ತ್ವಗಳಿಗಿಂತ ಹೆಚ್ಚಿನ ತರದ ತತ್ತ್ವಗಳನ್ನು ನಾವು ಕಂಡುಹಿಡಿದಿದ್ದೇವೆ. ನೀವು ಇವುಗಳನ್ನು ಪರೀಕ್ಷಿಸಿ ನೋಡಿರಿ" ಎಂದು ಹೇಳುತ್ತಾರೆ. ಇವರು "ಇಂಥ ಕ್ರಮಗಳನ್ನನುಸರಿಸಿ ಮನಸ್ಸಿಟ್ಟು ಅಭ್ಯಾಸಮಾಡಿರಿ. ಆಮೇಲೆಯೂ ಈ ಅತೀಂದ್ರಿಯ ತತ್ತ್ವವು ಕಾಣದೆ ಹೋದರೆ ನಾವು ಹೇಳುವುದು ಸುಳ್ಳೆನ್ನಬಹುದು" ಎಂದು ಹೇಳುತ್ತಿರುವರು. ಆದರೆ ನಾವು ಹಾಗೆ ಪರೀಕ್ಷೆ ಮಾಡಿ

ನೋಡುವುದಕ್ಕೆ ಮುಂಚೆಯೆ ಅವರು ಹೇಳುವುದು ಸುಳ್ಳೆಂದು ತಿಳಿಯುವುದು ಯುಕ್ತವಲ್ಲವಾದುದರಿಂದ ಅವರು ಗೊತ್ತುಮಾಡುವ ಕ್ರಮಗಳನ್ನನುಸರಿಸಿ ಶ್ರದ್ಧೆಯಿಂದ ಅಭ್ಯಾಸಮಾಡಬೇಕು. ಆಗ ತಿಳುವಳಿಕೆಯುಂಟಾಗುವುದು.

ಜ್ಞಾನವನ್ನು ಸಂಪಾದಿಸುವಾಗ ಸಾಮಾನ್ಯನಿಯಮಗಳನ್ನು ಕಂಡು ಹಿಡಿಯುವುದು ಸಾಧನವಾಗಿರುವುದು. ಈ ನಿಯಮಗಳನ್ನು ಕಂಡು ಹಿಡಿಯುವುದಕ್ಕೆ ಕಣ್ಣಿಟ್ಟು ನೋಡುವುದೇ ಕಾರಣವಾಗಿರುವುದು. ಮೊದಲು ವಿಷಯಗಳನ್ನು ಗಮನಿಸಿ ನೋಡಿದ ಮೇಲೆ ಸಾಮಾನ್ಯ ನಿಯಮಗಳು ಗೊತ್ತಾಗುತ್ತವೆ. ಆಮೇಲೆ ಹೀಗೆ ಹೀಗೆಂದು ತೀರ್ಮಾನಮಾಡುವುದೊ ಅಥವಾ ತತ್ತ್ವಗಳನ್ನು ಕಂಡುಹಿಡಿಯುವುದೋ ಆಗುತ್ತದೆ. ಮನಸ್ಸಿನ ವಿಚಾರದಲ್ಲಿಯೂ, ಮನುಷ್ಯನ ಅಂತರಂಗದ ಸ್ವಭಾವದ ವಿಚಾರದಲ್ಲಿಯೂ, ಆಲೋಚನೆಯ ವಿಚಾರದಲ್ಲಿಯೂ, ತಿಳಿಯುವುದು ಒಳಗಡೆ ನಡೆಯುವ ಸಂಗತಿಗಳನ್ನು ಚೆನ್ನಾಗಿ ನೋಡುವ ಶಕ್ತಿಯಿದ್ದ ಹೊರತು ಎಂದಿಗೂ ಆಗಲಾರದು. ಹೊರಗಡೆಯ ಪ್ರಪಂಚದ ವಿದ್ಯಮಾನಗಳನ್ನು ನೋಡಿ ತಿಳಿಯುವುದು ಎಷ್ಟೋ ಸುಲಭವೆನ್ನಬೇಕು. ಏಕೆಂದರೆ ಇದಕ್ಕಾಗಿ ಎಷ್ಟೋ ಶಿಲ್ಪ ಸಾಧನಗಳನ್ನು[1] ಕಂಡುಹಿಡಿದಿದ್ದಾರೆ. ಒಳಗಣ ಪ್ರಪಂಚವನ್ನು ನೋಡುವುದಕ್ಕೆ ಯಾವ ಸಾಧನದ ಸಹಾಯವೂ ಇಲ್ಲ. ಆದರೆ ನಿಜವಾದ ಶಾಸ್ತ್ರವೇರ್ಪಡುವುದಕ್ಕೆ ಚೆನ್ನಾಗಿ ನೋಡುವುದಂತು ಅತ್ಯಾವಶ್ಯಕವಾಗಿರುವುದು. ಚೆನ್ನಾಗಿ ವಿಮರ್ಶೆ ಮಾಡದೆ ಇದ್ದರೆ ಎಂಥ ಶಾಸ್ತ್ರವಾದರೂ ಸಿದ್ಧವಾಗದೆ ಕೇವಲ ವಾದ ಮಾತ್ರದಲ್ಲಿ ಪರ್ಯವಸಾನವಾಗುವುದು. ಆದುದರಿಂದಲೇ ಗಮನವಿಟ್ಟು ನೋಡುವುದಕ್ಕೆ ಬೇಕಾದ ಸಾಧನವನ್ನು ಯಾರು ಕಂಡುಹಿಡಿದರೊ ಅವರನ್ನು ಬಿಟ್ಟರೆ ಮಿಕ್ಕ ಎಲ್ಲಾ ಮನಃಶಾಸ್ತ್ರಕಾರರೂ ಅನಾದಿ ಕಾಲದಿಂದಲೂ ಜಗಳವಾಡುತ್ತಲೆ ಇರುವರು.

ಒಳಗಿನ ಸ್ಥಿತಿಗತಿಗಳನ್ನು ಚೆನ್ನಾಗಿ ನೋಡುವುದಕ್ಕೆ ಸಾಧನವನ್ನು ತೋರಿಸುವುದೇ ರಾಜಯೋಗದ ಮೊದಲನೆಯ ಉದ್ದೇಶವು. ಮನಸ್ಸೇ ಈ ಸಾಧನವು. ಸಾವಧಾನವಾಗಿ ನೋಡುವ ಶಕ್ತಿಯನ್ನು ಚೆನ್ನಾಗಿ ಬೆಳಸಿ ಒಳಗಣ ಪ್ರಪಂಚದ ಕಡೆಗೆ ತಿರುಗಿಸಿದರೆ ಮನಸ್ಸು ತನ್ನನ್ನು ವಿಂಗಡಿಸಿ ಅಲ್ಲಿನ ಸಂಗತಿಗಳನ್ನು ತೋರ್ಪಡಿಸುವುದು. ಮನಸ್ಸಿನ ಶಕ್ತಿಗಳು ದಿಕ್ಕುದಿಕ್ಕಿಗೆ ಚದುರಿದ ಪ್ರಭೆಯ ಕಿರಣಗಳಂತಿರುವವು. ಅವುಗಳನ್ನೆಲ್ಲ ಒಕ್ಕಡೆಗೆ[2] ಸೇರಿಸಿದರೆ ಅವು ತತ್ತ್ವವನ್ನು ಪ್ರಕಾಶಗೊಳಿಸುತ್ತವೆ. ಇದೊಂದೇ ಜ್ಞಾನಕ್ಕೆ ಸಾಧನವು. ಬಾಹ್ಯಪ್ರಪಂಚದಲ್ಲಿಯೂ ಅಂತಃಪ್ರಪಂಚದಲ್ಲಿ ಜ್ಞಾನವನ್ನು ಪಡೆಯುವುದಕ್ಕೆ ಪ್ರತಿಯೊಬ್ಬರೂ ಇದನ್ನು ಉಪಯೋಗಿಸುತ್ತಿರುವರು. ಆದರೆ ಮನಃಶಾಸ್ತ್ರಜ್ಞನಾಗಬೇಕೆಂಬುವನು – ಇತರ ಶಾಸ್ತ್ರಕಾರರು ಬಾಹ್ಯಪ್ರಪಂಚವನ್ನು ಕಣ್ಣೊಳಗೆ ಕಣ್ಣಿಟ್ಟು ನೋಡುವಂತೆಯೆ–ಅತ್ಯಂತ ಸೂಕ್ಷ್ಮವೃತ್ತಿಯಿಂದ ಕೂಡಿದ

---

1. ಉದಾಹರಣೆ: ಸೂಕ್ಷ್ಮದರ್ಶಕಯಂತ್ರವೆಂಬ ಭೂತಗನ್ನಡಿಯಿಂದ ತೀರ ಸಣ್ಣ ವಸ್ತುಗಳನ್ನೂ ನೋಡಬಹುದು. ದೂರದರ್ಶಕಯಂತ್ರವೆಂಬ ದುರ್ಬೀನಿನ ಕನ್ನಡಿಯಿಂದ ಎಷ್ಟೋ ದೂರದಲ್ಲಿರುವ ಸೂರ್ಯಚಂದ್ರಗ್ರಹಾದಿಗಳನ್ನು ಸಮೀಪದಲ್ಲಿ ಕಾಣುವುದಕ್ಕಾಗುವುದು. ಹೀಗೆ ಭೌತಿಕಶಾಸ್ತ್ರಜ್ಞರು ಪ್ರಪಂಚವನ್ನು ಪರಿಶೀಲಿಸಿ ನೋಡುವುದಕ್ಕೆ ಎಷ್ಟೋ ಸಾಧನೆಗಳನ್ನು ಕಲ್ಪಿಸಿರುವರು.

2. ಸೂರ್ಯನ ಕಿರಣಗಳನ್ನು ತನ್ನ ಕೇಂದ್ರದ ಕಡೆಗೆ ಎಳೆದುಕೊಂಡು ಸೇರಿಸಿ ಆಚೆಗೆ ಬಿಡುವ ಕನ್ನಡಿಯೊಂದಿದೆ. ಇದರ ವಿಚಾರವು ಇಲ್ಲಿ ಸೂಚಿತವಾಗಿದೆ.

ಮನಸ್ಸಿನಿಂದ ಗಮನವಿಟ್ಟು ಒಳಗಣ ಪ್ರಪಂಚವನ್ನು ನೋಡುವುದವಶ್ಯಕವು. ನಾವು ಹುಡುಗರಾಗಿದ್ದಂದಿನಿಂದಲೂ ಬಾಹ್ಯ ವಿಚಾರಕ್ಕೆ ಮನಸ್ಸು ಕೊಡುವುದನ್ನು ಕಲಿತಿದ್ದೇವೆಯೇ ಹೊರತು ಒಳಗಣ ವಿಚಾರವನ್ನು ನೋಡಿಲ್ಲ. ಇದರಿಂದ ನಮ್ಮಲ್ಲನೇಕರಿಗೆ ಒಳಗಣ ರಚನೆಯನ್ನು ನೋಡಿ ತಿಳಿಯುವ ಶಕ್ತಿಯೇ ಹೋಗಿಬಿಟ್ಟಿರುವುದು. ಮನಸ್ಸನ್ನು ಒಳಕ್ಕೆ ತಿರುಗಿಸಿ ಹೊರಗೆ ಹರಿಯದಂತೆ ಮಾಡಿ ಅದರ ವೃತ್ತಿಗಳನ್ನೆಲ್ಲ ಏಕಾಗ್ರತೆಗೆ ತಂದು ಮನಸ್ಸಿನ ಮೇಲೆಯೇ ಬಿಟ್ಟು ಆ ಮನಸ್ಸು ತನ್ನನ್ನು ತಾನು ಬಿಡಿಸಿ ತಿಳಿದುಕೊಳ್ಳುವಂತೆ ಮಾಡುವುದೆಂದರೆ ಬಲು ಕಷ್ಟವಾದ ಕೆಲಸವೇ ಸರಿ. ಆದರೆ ಶಾಸ್ತ್ರೀಯ ರೀತಿಯಂತೆ ಈ ವಿಷಯವನ್ನು ತಿಳಿಯಬೇಕೆಂದರೆ ಇದೊಂದೇ ಮಾರ್ಗ.

ಇಂಥ ತಿಳುವಳಿಕೆಯಿಂದ ಪ್ರಯೋಜನವೇನು? ಎಂದರೆ ಮೊದಲು ತಿಳುವಳಿಕೆಯೆಂಬುದೇ ಅತ್ಯುತ್ತಮ ಪ್ರಯೋಜನವು. ಎರಡನೆಯದು ಇದರಲ್ಲಿ ಉಪಯೋಗವೂ ಇದೆ. ಇದು ನಮ್ಮ ದುಃಖವನ್ನೆಲ್ಲ ಕಳೆಯುವುದು. ಮನಸ್ಸು ತನ್ನನ್ನು ತಾನೇ ಪರಿಶೀಲಿಸುವಾಗ ಎಂದೆಂದಿಗೂ ನಾಶವಾಗದೆ ಸ್ವರೂಪದಿಂದಲೇ ನಿತ್ಯ ಶುದ್ಧವಾಗಿಯೂ ಸರ್ವದೋಷವರ್ಜಿತ-ವಾಗಿಯೂ ಇರುವ ತತ್ತ್ವವು ಎದುರಿಗೆ ಬಂದು ನಿಂತಂತೆ ಗೋಚರಿಸಿತೆಂದರೆ ಆಮೇಲೆ ದುಃಖವೆಂದಿಗೂ ಆಗಲಾರದು; ವ್ಯಸನವೆಂದಿಗೂ ಒದಗದು. ದುಃಖವೆಂಬುದು ಯಾವುದೋ ಒಂದು ಭೀತಿಯಿಂದಲೂ ಪೂರ್ತಿಯಾಗದೆ ಇರುವ ಆಸೆಯಿಂದಲೂ ಉಂಟಾಗಿರುವುದು. ತಾನು ಪರಿಪೂರ್ಣನಾಗಿರುವೆನೆಂಬ ಜ್ಞಾನವಾಗುತ್ತಲೆ ಕ್ಷುದ್ರವಾದ ಆಸೆಗಳೂ ಹುಟ್ಟುವುದಿಲ್ಲ; ಭಯವೂ ಇರುವುದಿಲ್ಲ. ಈ ಎರಡು ಕಾರಣಗಳೂ ಇಲ್ಲದಿರುವುದರಿಂದ ದುಃಖವು ಇರುವುದಿಲ್ಲ. ಈ ಶರೀರದಲ್ಲಿ ಜೀವಂತನಾಗಿರುವಾಗಲೆ ಪೂರ್ಣಾನಂದವು ತೋರುತ್ತಿರುವುದು.

ಈ ಜ್ಞಾನವನ್ನು ಪಡೆಯುವುದಕ್ಕೆ ಮನಸ್ಸನ್ನು ಏಕಾಗ್ರಮಾಡುವುದೆಂಬ ಒಂದೇ ಒಂದು ಕ್ರಮವಿರುವುದು. ವಸ್ತುಶಾಸ್ತ್ರಜ್ಞನಾಗಬೇಕೆಂಬುವನು ವಸ್ತು ಸಂಗ್ರಹಾಲಯದಲ್ಲಿ ಕೂತು ತನ್ನ ಮನೋವೃತ್ತಿಗಳನ್ನೆಲ್ಲ ಒಕ್ಕಡೆಗೆ ಕೂಡಿಸಿ ತಾನು ಬಿಚ್ಚಿ ತಿಳಿಯಬೇಕೆಂದಿರುವ ವಸ್ತುಗಳ ಮೇಲೆ ಬಿಡುತ್ತಾನೆ. ಆಗ ಅವುಗಳ ರಹಸ್ಯಗಳು ಅವನಿಗೆ ಗೊತ್ತಾಗುತ್ತವೆ. ಜ್ಯೋತಿಷ್ಕನು ತನ್ನ ಮನಃಶಕ್ತಿಗಳನ್ನೆಲ್ಲ ಒಂದುಗೂಡಿಸಿ ದೂರದರ್ಶಕಯಂತ್ರದ ಮೂಲಕ ಆಕಾಶದ ಕಡೆಗೆ ಬಿಡುತ್ತಾನೆ. ಆಗ ನಕ್ಷತ್ರಗಳೂ, ಸೂರ್ಯಚಂದ್ರಗ್ರಹಗಳೂ ತಮ್ಮ ತಮ್ಮ ರಹಸ್ಯಗಳನ್ನು ಅವನಿಗೆ ತಿಳಿಸಿಕೊಡುತ್ತವೆ. ನಾನು ನನ್ನ ಮನಸ್ಸನ್ನು ಎಷ್ಟರಮಟ್ಟಿಗೆ ಏಕಾಗ್ರ ಮಾಡಿ ನಿಮ್ಮೊಡನೆ ಮಾತಾಡುತ್ತಿರುವ ವಿಷಯದ ಮೇಲೆ ಇಡುತ್ತೇನೋ ಅಷ್ಟರ ಮಟ್ಟಿಗೆ ಆ ವಿಷಯವನ್ನು ಚೆನ್ನಾಗಿ ತಿಳಿಸುವುದಕ್ಕಾಗುವುದು. ನೀವು ಕೇಳುತ್ತಿದ್ದೀರಷ್ಟೆ. ನೀವು ಎಷ್ಟರಮಟ್ಟಿಗೆ ಏಕಾಗ್ರಮನಸ್ಕರಾಗಿರುವಿರೊ ಅಷ್ಟರಮಟ್ಟಿಗೆ ನಾನು ಹೇಳುವುದು ನಿಮಗೆ ಚೆನ್ನಾಗಿ ತಿಳಿಯುವುದು.

ಲೋಕದಲ್ಲಿ ಮನೋವೃತ್ತಿಗಳನ್ನು ಏಕಾಗ್ರಮಾಡುವುದನ್ನು ಬಿಟ್ಟರೆ ಮತ್ತಾವ ರೀತಿಯಲ್ಲಿ ಜನರು ಜ್ಞಾನವನ್ನು ಸಂಪಾದನೆ ಮಾಡಿದರು? ಇಡೀ ಜಗತ್ತೇ ತನ್ನ ರಹಸ್ಯವನ್ನು ತೆರೆದು ತೋರಿಸಲಿಕ್ಕೆ ಸಿದ್ಧವಾಗಿರುವುದು. ಆದರೆ ಬಾಗಿಲು ತಟ್ಟುವ ಕ್ರಮವನ್ನು – ಹೇಗೆ ಎಲ್ಲಿ ಪೆಟ್ಟು ಬೀಳಬೇಕೆಂಬುದನ್ನು – ನಾವು ತಿಳಿದಿರಬೇಕು. ಈ ಪೆಟ್ಟು ಬಲವಾಗಿಯೂ ಜೋರಾಗಿಯೂ

ಇರಬೇಕಾದರೆ ಏಕಾಗ್ರ ಧ್ಯಾನದಿಂದಲೇ ಆಗಬೇಕು. ಮನುಷ್ಯನ ಮನಸ್ಸಿನ ಶಕ್ತಿ ಇಷ್ಟೆಂಬ ಪರಿಮಿತಿಯೇನೂ ಇರುವುದಿಲ್ಲ. ಅದು ಎಷ್ಟು ಏಕಾಗ್ರವಾದರೆ ಅಷ್ಟು ಶಕ್ತಿಯು ಒಕ್ಕಡೆಗೆ ಸೇರುವುದು. ಇದೇ ಮನಸ್ಸಿನ ರಹಸ್ಯ.

ಮನಸ್ಸನ್ನು ಹೊರಗಣ ಪದಾರ್ಥಗಳ ಮೇಲೆ ನೆಡುವುದು ಸುಲಭ. ಏಕೆಂದರೆ ಹೊರಗೆ ಹರಿಯುವುದೇ ಇದರ ಸ್ವಭಾವ. ಆದರೆ ಮತದಲ್ಲಿ. ಮನಃಶಾಸ್ತ್ರದಲ್ಲಿ ಅಥವಾ ವಿಚಾರಶಾಸ್ತ್ರದಲ್ಲಿ ಮಾತ್ರ ಸುಲಭವಾಗುವುದಿಲ್ಲ. ಏಕೆಂದರೆ ಇಲ್ಲಿ ವಿಷಯ, ವಿಷಯಿ ಗಳೆರಡೂ ಒಂದೇ ಆಗಿರುವುದು. ವಿಷಯುವು ಒಳಗಿರುವುದು. ಮನಸ್ಸೇ ವಿಷಯು. ಆ ಮನಸ್ಸನ್ನು ಪರಿಶೀಲಿಸುವುದಕ್ಕೇ ಮನಸ್ಸೇ ಆಗಬೇಕು. ಮನಸ್ಸಿಗೆ ತನ್ನನ್ನು ತಾನು ತಿಳಿಯುವುದೆಂಬ ಶಕ್ತಿಯಿರುವುದು ಪ್ರಸಿದ್ಧವಾಗಿರುವುದು. ನಾನು ನಿಮ್ಮೊಡನೆ ಮಾತನಾಡುತ್ತಿದ್ದೇನಷ್ಟೆ. ಹೀಗೆ ಮಾತನಾಡುವಾಗಲೆ ನಾನು ನನ್ನಿಂದಲೆ ಬೇರೆಯಾದಂತೆ ಈಚೆಗೆ ನಿಂತು ನಾನು ಮಾತನಾಡುವುದನ್ನು ಕೇಳುತ್ತಲೂ ತಿಳಿದುಕೊಳ್ಳುತ್ತಲೂ ಇರುವೆನು. ವೃತ್ತಿಗಳನ್ನು ಏಕಾಗ್ರಮಾಡಿ ಮನಸ್ಸಿನ ಮೇಲೆಯೇ ತಿರುಗಿಸಬೇಕು. ಕಗ್ಗತ್ತಲೆಯಿರುವ ಸ್ಥಳಗಳು ಸೂರ್ಯ ಕಿರಣಗಳು ವ್ಯಾಪಿಸುತ್ತಲೆ ತಮ್ಮ ಗುಟ್ಟನ್ನು ಹೊರಗೆಡಹುವಂತೆ ಏಕಾಗ್ರವಾದ ಮನಸ್ಸು ತನ್ನೊಳಗಿನ ರಹಸ್ಯವನ್ನೆಲ್ಲ ಕಂಡುಕೊಳ್ಳುವುದು. ಹೀಗೆ ಮಾಡಿದ ಮೇಲೆ ಮತನ ಆಧಾರವು ಸಿಕ್ಕಿ ನಿಜವಾದ ಧರ್ಮವೇನೆಂಬುದು ಗೊತ್ತಾಗುವುದು. ನಮಗೆ ಆತ್ಮವಿದೆಯೊ? ಇಲ್ಲವೊ? ಜೀವಿತವೆಂಬುದು ಮೂರುಗಳಿಗೆಂಯ ಬಾಳೊ? ಅಥವಾ ಶಾಶ್ವತವಾದುದೊ? ಜಗತ್ತಿನಲ್ಲಿ ಭಗವಂತನೊಬ್ಬನಿರುವನೊ? ಇಲ್ಲವೊ? ಈ ವಿಚಾರಗಳು ನಮಗೇ ಗೋಚರವಾಗುವುವು. ಇವುಗಳ ರಹಸ್ಯವೆಲ್ಲ ಆಗ ನಮಗೆ ಗೊತ್ತಾಗುವುವು. ಇದನ್ನು ತಿಳಿಸಿಕೊಡುವುದೇ ರಾಜಯೋಗದ ಉದ್ದೇಶವು. ಮನಸ್ಸನ್ನು ಏಕಾಗ್ರಮಾಡುವುದು ಹೇಗೆ? ಅವುಗಳಲ್ಲಿರುವ ಸಾಮಾನ್ಯ ನಿಯಮಗಳನ್ನು ಕಂಡುಹಿಡಿದು ಕೊನೆಯ ಸಿದ್ಧಾಂತವನ್ನು ಮಾಡಿಕೊಳ್ಳುವುದು ಹೇಗೆ? ಇದನ್ನೆಲ್ಲ ಹೇಳಿಕೊಡುವುದೇ ಈ ಯೋಗದ ಪರಮೋದ್ದೇಶ. ಹೀಗಿರುವುದರಿಂದ ನಾವು ಆಸ್ತಿಕರೋ, ನಾಸ್ತಿಕರೊ, ಕ್ರಿಸ್ತಿಯರೊ, ಯಹೂದಿಯರೊ, ಅಥವಾ ಬೌದ್ಧರೊ, ಯಾವ ಮತಕ್ಕೆ ಸೇರಿದವರೆಂಬುದು ಈ ಶಾಸ್ತ್ರಕ್ಕೆ ಬೇಕಿಲ್ಲ. ನಾವು ಮನುಷ್ಯರು. ಇಷ್ಟು ಸಾಕು. ಮನುಷ್ಯ ಮಾತ್ರಕ್ಕೇ ಧರ್ಮವನ್ನು ಅಪೇಕ್ಷಿಸುವುದಕ್ಕೆ ಅಧಿಕಾರವೂ ಶಕ್ತಿಯೂ ಇರುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಧರ್ಮಕ್ಕೆ ಕಾರಣವನ್ನು ಕೇಳುವುದಕ್ಕೂ ಆ ಪ್ರಶ್ನೆಗೆ ತಾನೇ ಶ್ರಮಪಟ್ಟು ಉತ್ತರವನ್ನು ಕಂಡುಹಿಡಿಯುವುದಕ್ಕೂ ಅಧಿಕಾರವುಂಟು.

ಇದರಿಂದ ರಾಜಯೋಗದಲ್ಲಿ ಯಾವ ಶ್ರದ್ಧೆಯಾಗಲಿ ನಂಬಿಕೆಯಾಗಲಿ ಅವಶ್ಯವಿಲ್ಲವೆಂದು ಗೊತ್ತಾಯಿತಷ್ಟೆ. "ಯಾವುದನ್ನೆ ಆಗಲಿ ಅನುಭವಕ್ಕೆ ಬಂದ ಹೊರತು ನಂಬ ಕೆಲಸವಿಲ್ಲ," ಎಂದು ಈ ಯೋಗವು ಬೋಧಿಸುತ್ತಿದೆ. ನಿಜವನ್ನು ನಿಲ್ಲಿಸುವುದಕ್ಕೆ ಯಾವ ಪಿಳ್ಳೆಯ ಕಾಲು ಬೇಕಾಗಿರುವುದಿಲ್ಲ. ಜಾಗ್ರದವಸ್ಥೆಯಲ್ಲಿರುವ ಸಂಗತಿಗಳನ್ನು ನಿಜವೆಂದು ತೋರಿಸುವುದಕ್ಕೆ ಕನಸುಗಳಾಗಲಿ ಕಲ್ಪನೆಗಳಾಗಲಿ ಬೇಕಾಗುವುವೆ? ಎಂದಿಗೂ ಬೇಕಾಗುವುದಿಲ್ಲ. ಈ

1. ವಿಷಯವೆಂದರೆ ಯಾವುದು ತಿಳಿಯತಕ್ಕದ್ದೊ ಅದು. ವಿಷಯವನ್ನು ಗ್ರಹಿಸುವದಾವುದೊ ಅದೇ ವಿಷಯಿ. ಮನಸ್ಸನ್ನು ಮನಸ್ಸೇ ತಿಳಿಯಬೇಕಾಗಿರುವುದರಿಂದ ವಿಷಯವಿಷಯಿಗಳೆರಡೂ ಮನಸ್ಸೇ ಆಗಿರುವುದು.

ರಾಜಯೋಗ ಸಿದ್ಧಿಯಾಗುವುದಕ್ಕೆ ಬಹುಕಾಲ ಒಂದೇ ಸಮವಾಗಿ ಅಭ್ಯಾಸ ಮಾಡುವುದು ಅವಶ್ಯವು. ಈ ಅಭ್ಯಾಸವು ಸ್ವಲ್ಪ ಮಟ್ಟಿಗೆ ಶರೀರಕ್ಕೆ ಸಂಬಂಧ ಪಟ್ಟಿರುವುದು. ಆದರೆ ಇದರಲ್ಲಿ ಮನಸ್ಸಿನ ಅಭ್ಯಾಸವೇ ಮುಖ್ಯವು. ಮುಂದೆ ಮುಂದೆ ನೋಡುವಾಗ ಮನಸ್ಸಿಗೂ ಶರೀರಕ್ಕೂ ಎಷ್ಟು ನಿಕಟ ಸಂಬಂಧವಿರುವುದೆಂಬುದು ಗೊತ್ತಾಗುವುದು. ಮನಸ್ಸೆಂಬುದು ಶರೀರದ ಸೂಕ್ಷ್ಮ ಭಾಗ ಮಾತ್ರವೆಂದೂ ಮನಸ್ಸಿನ ವ್ಯಾಪಾರವು ಶರೀರದ ಮೇಲೆ ನಡೆಯುವುದೆಂದೂ ನಾವು ನಂಬುವುದಾದರೆ ಶರೀರದ ವ್ಯಾಪಾರವು ಕೂಡ ಮನಸ್ಸಿನ ಮೇಲೆ ನಡೆಯುವುದೆಂಬುದು ಯುಕ್ತಿಯುಕ್ತವಾಗಿಯೇ ಇರುವುದು. ಶರೀರವು ಅನಾರೋಗ್ಯದಲ್ಲಿದ್ದರೆ ಮನಸ್ಸು ರೋಗದಿಂದ ಕೂಡಿರುವುದು. ಶರೀರವು ಆರೋಗ್ಯದಲ್ಲಿದ್ದರೆ ಮನಸ್ಸು ಆರೋಗ್ಯವುಳ್ಳದ್ದಾಗಿಯೂ ಬಲವಾಗಿಯೂ ಇರುವುದು. ಸಿಟ್ಟು ಬಂದಿರುವಾಗ ಮನಸ್ಸು ಚಂಚಲವಾಗಿರುವುದು. ಹೀಗೆಯೇ ಮನಸ್ಸು ಚಂಚಲವಾಗಿರುವಾಗ ಶರೀರಕ್ಕೂ ವ್ಯಥೆಯಾಗುವುದು. ಎಷ್ಟೋ ಜನರಲ್ಲಿ ಮನಸ್ಸು ಬಹುಮಟ್ಟಿಗೆ ಶರೀರದ ಸ್ವಾಧೀನದಲ್ಲಿರುವುದು. ಅವರ ಮನಃಶಕ್ತಿಯು ಸ್ವಲ್ಪವೂ ಬೆಳೆದಿರುವುದಿಲ್ಲ. ಅನೇಕ ಜನರು ಕೇವಲ ಪಶುಗಳಂತೆಯೆ ಇರುವರು. ಇಷ್ಟೇ ಅಲ್ಲ. ಅನೇಕ ಸಂದರ್ಭಗಳಲ್ಲಿ ಅವರ ಮನಸ್ಸನ್ನು ತಡೆಯುವ ಶಕ್ತಿಯು ಕೀಳುಪ್ರಾಣಿಗಳಿಗಿರುವ ಶಕ್ತಿಗಿಂತ ಹೆಚ್ಚಾಗಿರುವುದಿಲ್ಲವೆಂದೇ ಹೇಳಬೇಕು. ನಮ್ಮ ಮನಸ್ಸಿನ ಮೇಲೆ ನಮ್ಮದೇನೂ ನಡೆಯುವಂತೆಯೇ ಇರುವುದಿಲ್ಲ. ಆದುದರಿಂದ ಈ ಶಕ್ತಿಯನ್ನು ಸಂಪಾದಿಸುವುದಕ್ಕೆ–ಎಂದರೆ ಶರೀರವನ್ನೂ ಮನಸ್ಸನ್ನೂ ನಮ್ಮ ಸ್ವಾಧೀನಕ್ಕೆ ತಂದುಕೊಳ್ಳುವುದಕ್ಕೆ – ಕೆಲವು ಶಾರೀರಸ್ವಾಧೀನಗಳು ಬೇಕು. ಶರೀರವು ತಕ್ಕ ಮಟ್ಟಿಗೆ ಸ್ವಾಧೀನಕ್ಕೆ ಬಂದ ಮೇಲೆ ಮನಸ್ಸಿನ ಮೇಲೆ ಕೈ ಮಾಡುವುದಕ್ಕೆ ಯತ್ನಿಸಬಹುದು. ಮನಸ್ಸನ್ನು ಸಾಧನಕ್ಕೆ ಹಚ್ಚುವುದರಿಂದ ಅದನ್ನು ನಮ್ಮ ಸ್ವಾಧೀನಕ್ಕೆ ತಂದುಕೊಂಡು ನಮಗೆ ಬೇಕಾದ ಕೆಲಸ ಮಾಡುವಂತೆ ಮಾಡಿಕೊಂಡು ನಮ್ಮ ಇಷ್ಟ ಬಂದಂತೆ ಅದರ ಶಕ್ತಿಗಳನ್ನೆಲ್ಲ ಏಕಾಗ್ರಮಾಡಿಸಬಹುದು.

ರಾಜಯೋಗದಲ್ಲಿ ಹೇಳಿರುವುದೇನೆಂದರೆ : ಬಾಹ್ಯ ಪ್ರಪಂಚವೆಂಬುದು ಒಳಗಣ ಸೂಕ್ಷ್ಮ ಪ್ರಪಂಚದ ಸ್ಥೂಲರೂಪವು. ಸೂಕ್ಷ್ಮವೆಂಬುದು ಯಾವಾಗಲೂ ಕಾರಣವಾಗಿರುವುದು. ಸ್ಥೂಲವಾದುದು ಕಾರ್ಯವಾಗಿರುವುದು. ಆದುದರಿಂದ ಬಾಹ್ಯಪ್ರಪಂಚವು ಕಾರ್ಯವಾಗಿಯೂ ಆಧ್ಯಾತ್ಮಿಕ ಪ್ರಪಂಚವು ಕಾರಣವಾಗಿಯೂ ಇರುವುವು. ಹೀಗೆಯೆ ಹೊರಗೆ ಇರುವ ಶಕ್ತಿ ವಿಶೇಷಗಳು ಸ್ಥೂಲವಾಗಿಯೂ ಶರೀರದೊಳಗಣ ಶಕ್ತಿ ವಿಶೇಷಗಳು ಇವುಗಳ ಸೂಕ್ಷ್ಮ ರೂಪವಾಗಿಯೂ ಇರುವುವು. ಯಾವಾತನು ಒಳಗಣ ಶಕ್ತಿ ವಿಶೇಷಗಳನ್ನು ಕಂಡುಕೊಂಡು ಅವುಗಳ ವ್ಯಾಪಾರವನ್ನು ನಡೆಸುವುದನ್ನು ಅರಿತಿರುವನೋ ಅವನಿಗೆ ಸೃಷ್ಟಿಗೆ ಸೃಷ್ಟಿಯೇ ಸ್ವಾಧೀನಕ್ಕೆ ಬರುವುದು. ಇಡೀ ಜಗತ್ತನ್ನೇ ಸ್ವಾಧೀನಮಾಡಿಕೊಂಡು ಸೃಷ್ಟಿಗೆ ಸೃಷ್ಟಿಯನ್ನೇ ಆಳಬೇಕೆಂಬ ಮಹಾ ಸಂಕಲ್ಪವೇ ಯೋಗಿಯ ಉದ್ದೇಶವು. ಸೃಷ್ಟಿನಿಯಮ[1]ಗಳೆಂಬುವು ಎಲ್ಲಿ ವ್ಯಾಪಾರಮಾಡಲಾರವೋ, ಎಲ್ಲಿಗೆ ಹೋದರೆ ಅವುಗಳನ್ನು ದಾಟಿದಂತಾಗುವುದೊ, ಅಂಥ ಸ್ಥಾನವನ್ನು ಸೇರುವುದೇ ಅವನ ಬಯಕೆ. ಒಳಗಣ ಮತ್ತು ಹೊರಗಣ ಎಲ್ಲಾ ಪ್ರಪಂಚವನ್ನು ಜಯಿಸುವುದೇ ಅವನ ಸಂಕಲ್ಪವು. ಜನಾಂಗದವರು ಅಭ್ಯುದಯವನ್ನು ಹೊಂದುವುದೂ ನಾಗರೀಕರಾಗುವುದೂ ಸೃಷ್ಟಿಯನ್ನು ಸ್ವಾಧೀನಮಾಡಿಕೊಳ್ಳುವುದೆ ಆಗಿರುವುದು.

ಜಗತ್ತನ್ನು ಸ್ವಾಧೀನಮಾಡಿಕೊಳ್ಳುವುದಕ್ಕೆ ಬೇರೆ ಬೇರೆ ಜನಾಂಗದವರು ಬೇರೆ ಬೇರೆ ರೀತಿಗಳನ್ನು ಅನುಸರಿಸುತ್ತಾರೆ. ಒಂದೇ ಸಮಾಜಕ್ಕೆ ಸೇರಿದವರಲ್ಲಿಯೇ ಕೆಲವರು ಬಾಹ್ಯ ಪ್ರಪಂಚವನ್ನೂ ಮತ್ತೆ ಕೆಲವರು ಅಂತಃ ಪ್ರಪಂಚವನ್ನೂ ಗೆಲ್ಲುವುದಕ್ಕೆ ಯತ್ನಿಸುವಂತೆ ಬೇರೆ ಬೇರೆ ಜನಾಂಗಗಳಲ್ಲಿ ಒಂದು ಜನಾಂಗದವರು ಹೊರಗಣ ಪ್ರಪಂಚವನ್ನು ಗೆಲ್ಲುವುದಕ್ಕೂ ಮತ್ತೊಂದು ಜನಾಂಗದವರು ಒಳಗಣ ಪ್ರಪಂಚವನ್ನು ಗೆಲ್ಲುವುದಕ್ಕೂ ಇಚ್ಛೆಸುವರು. ಒಳಗಣ ಪ್ರಪಂಚವನ್ನು ಗೆದ್ದರೆ ಎಲ್ಲವನ್ನೂ ಗೆದ್ದಂತಾಯಿತೆಂದು ಕೆಲವರೆನ್ನುವರು. ಇನ್ನು ಕೆಲವರು ಬಾಹ್ಯಪ್ರಪಂಚವನ್ನು ಗೆದ್ದರೆ ಎಲ್ಲವನ್ನೂ ಗೆದ್ದಂತಾಯಿತೆನ್ನುವರು. ಸಂಪೂರ್ಣವಾಗಿ ನೋಡಿದರೆ ಎರಡು ಪಕ್ಷವೂ ಸರಿ. ಏಕೆಂದರೆ ಪ್ರಪಂಚದಲ್ಲಿ ಒಳಗೆ ಹೊರಗೆ ಎಂಬ ವಿಭಾಗವೇ ಇಲ್ಲ. ಒಳಗೆ ಹೊರಗೆ ಎಂಬ ಇವು ಬರೀ ಕಲ್ಪನೆಯಿಂದಾದ ಪರಿಚ್ಛೇದಗಳೇ ಹೊರತು ಎಂದೂ ನಿಜವಾದವುಗಳಲ್ಲ. ಬಾಹ್ಯ ವಾದಿಗಳಿಗೂ ಅಂತರ್ವಾದಿಗಳಿಗೂ ತಮ್ಮ ಜ್ಞಾನವನ್ನು ಪೂರ್ಣಸ್ಥಿತಿಗೊಯ್ದಾಗ ಎರಡು ಪಕ್ಷವೂ ಒಂದೇ ಎಂದು ತಿಳಿಯಲೇಬೇಕು. ಪ್ರಕೃತಿಶಾಸ್ತ್ರಜ್ಞನಿಗೆ ತನ್ನ ವಿಜ್ಞಾನವನ್ನು ಕೊನೆ ಮುಟ್ಟಿಸಿದ ಮೇಲೆ ಆ ಶಾಸ್ತ್ರವೇ ಮನಶ್ಶಾಸ್ತ್ರವಾಗುವುದೆಂದು ಗೊತ್ತಾಗುವಂತೆ ಮನಸ್ಸು ಮತ್ತು ಬಾಹ್ಯ ಪದಾರ್ಥವೆಂಬೆರಡೂ ನೋಡುವುದಕ್ಕೆ ಬೇರೆ ಬೇರೆಯಾಗಿದ್ದರೂ ನಿಜವಾಗಿರುವ ವಸ್ತುವೊಂದೇಯೆಂಬುದನ್ನು ಮನಃಶಾಸ್ತ್ರಜ್ಞನೂ ಕಂಡುಕೊಳ್ಳುವನು. ಯಾವ ಒಂದರಿಂದ ಅನೇಕವು ಉಂಟಾಗುತ್ತಿರುವುದೊ ಯಾವ ಒಂದು ಅನೇಕ ರೂಪದಲ್ಲಿರುವುದೊ ಆ ಒಂದನ್ನು ಕಂಡು ಹಿಡಿಯುವುದೇ ಎಲ್ಲಾ ಶಾಸ್ತ್ರಗಳ ಉದ್ದೇಶವು. ರಾಜಯೋಗವು ಒಳಗಣ ಪ್ರಪಂಚವನ್ನು ಮೊದಲು ತೆಗೆದುಕೊಂಡು ಒಳಗಣ ಸೃಷ್ಟಿಯನ್ನು ವಿಚಾರ ಮಾಡಿ ಆ ಮೂಲಕ ಒಳಗಣ ಮತ್ತು ಹೊರಗಣ ಪ್ರಪಂಚಗಳೆರಡನ್ನೂ ಸ್ವಾಧೀನಕ್ಕೆ ತರಬೇಕೆಂದು ಪ್ರಯತ್ನಿಸುವುದು. ಈ ಪ್ರಯತ್ನವು ಬಹು ಪುರಾತನವಾದುದು. ಇಂಡಿಯಾ ದೇಶವೇ ಇದರ ತವರು ಮನೆ. ಆದರೆ ಇತರ ದೇಶೀಯರೂ ಇದನ್ನು ಮಾಡಿ ನೋಡಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಇದನ್ನು ಅಧ್ಯಾತ್ಮ ರಹಸ್ಯವೆನ್ನುತ್ತಿದ್ದರು; ಮತ್ತು ಇದನ್ನು ಆಚರಿಸುತ್ತಿದ್ದವರನ್ನು ಮಾಟಗಾರರೆಂದೂ, ಮಂತ್ರಗಾರರೆಂದೂ ತಿಳಿದು ಜೀವ ಬೆರಕೆಯಾಗಿ ಸುಟ್ಟು ಹಾಕುತ್ತಿದ್ದರು; ಇಲ್ಲದಿದ್ದರೆ ಕೊಂದು ಹಾಕುತ್ತಿದ್ದರು. ಇಂಡಿಯಾ ದೇಶದಲ್ಲಿ ಅನೇಕ ಕಾರಣಗಳಿಂದ ಈ ವಿದ್ಯೆಯು ಕೆಲವು ಜನರ ಕೈಗೆ ಸಿಕ್ಕಿ ನೂರರಲ್ಲಿ ತೊಂಭತ್ತು ಪಾಲು ಹಾಳಾಗಿ ಹೋಯಿತು. ಉಳಿದುದನ್ನು ಇವರು ಮಹಾ ರಹಸ್ಯವೆಂದು ಬಚ್ಚಿಡುವುದಕ್ಕೆ ಯತ್ನಿಸುತ್ತಿದ್ದರು. ಈಗ ಪಶ್ಚಿಮ ದೇಶಗಳಲ್ಲಿ ಎಷ್ಟೋ ಜನ ಉಪದೇಶಕರೆಂಬುವರು ಹುಟ್ಟಿರುವರು. ಇವರು ಇಂಡಿಯಾದವರಿಗಿಂತಲೂ ಇನ್ನೂ ಕೀಳುತರದವರಾಗಿರುವರು. ಏಕೆಂದರೆ ಇಂಡಿಯಾದವರಿಗೆ ಅಲ್ಪಸ್ವಲ್ಪವಾದರೂ ಗೊತ್ತಿತ್ತು. ಆಧುನಿಕರಾದ ಈ ಶಾಸ್ತ್ರಕಾರರಿಗೆ ಏನೇನೂ ಗೊತ್ತಿಲ್ಲ.

---

1. ಇಂಥಿಂಥ ಕಾರಣಗಳು ಇರುವಾಗ ಇಂಥಿಂಥ ಕಾರ್ಯಗಳು ನಿಯತವಾಗಿ ಸೃಷ್ಟಿಯಲ್ಲಿ ಆಗುತ್ತಿವೆಯೆಂಬುದನ್ನು ತಿಳಿಸುವ ಕಾರ್ಯಕಾರಣಗಳ ನಿತ್ಯಸಂಬಂಧವಾಕ್ಯವನ್ನು ಸೃಷ್ಟಿ ನಿಯಮವೆಂದು ಈಗಿನ ಭೌತಿಕಶಾಸ್ತ್ರಜ್ಞರು ಹೇಳುತ್ತಾರೆ ಹೇಗೆಂದರೆ: "ಕಾದ ಕಬ್ಬಿಣವನ್ನು ಮುಟ್ಟಿದರೆ ಸುಡುತ್ತದೆ", "ಆಶ್ರಯವಿಲ್ಲದ ವಸ್ತುಗಳು ನೆಲಕ್ಕೆ ಬೀಳುತ್ತವೆ". ಇವು ಸೃಷ್ಟಿ ನಿಯಮಗಳು. ಈ ನಿಯಮಗಳನ್ನು ಕ್ರಮವಾಗಿಯೂ ನಿಶ್ಚಿತವಾಗಿಯೂ ತಿಳಿಸುವ ಜ್ಞಾನವನ್ನೆ ಈಗಿನವರು ಶಾಸ್ತ್ರವೆನ್ನುತ್ತಾರೆ.

2. ಪದಾರ್ಥಗಳ ಬಾಹ್ಯಸ್ಥಿತಿಯು ಬೇರೆ ಬೇರೆಯಾಗುವುದನ್ನೂ ಈ ವಿಕಾರಗಳನ್ನುಂಟು ಮಾಡುವ ಶಕ್ತಿ ವಿಶೇಷಗಳನ್ನೂ ತಿಳಿಸುವ ಶಾಸ್ತ್ರವನ್ನು ಈಗಿನವರು ಫಿಸಿಕ್ಸ್ ಅಥವಾ ಪ್ರಕೃತಿಶಾಸ್ತ್ರವೆನ್ನುತ್ತಾರೆ.

ಈ ಯೋಗ ಸಿದ್ಧಾಂತಗಳಲ್ಲಿ ಯಾವುದು ಗುಟ್ಟೆಂದೂ ಅಗಾಧವೆಂದೂ ಹೇಳುತ್ತಾರೊ ಅದನ್ನು ಮೊದಲು ಬಿಟ್ಟುಬಿಡಬೇಕು. ಈ ಲೋಕದಲ್ಲಿ ಬಲವೆಂಬುದೇ ಉತ್ತಮ ಮಾರ್ಗದರ್ಶಿಯು. ಮತದಲ್ಲಿಯೇ ಆಗಲಿ ಮತ್ತಾವುದರಲ್ಲಿಯೇ ಆಗಲಿ ಯಾವುದು ನಮ್ಮನ್ನು ನಿರ್ಬಲರನ್ನಾಗಿ ಮಾಡುವುದೊ ಅದರ ಗೋಜಿಗೇ ಹೋಗಬಾರದು. ಗುಟ್ಟಿನ ವ್ಯಾಪಾರವು ಮೆದುಳನ್ನು ಶಕ್ತಿಗುಂದಿಸುವುದು. ಈ ಗುಟ್ಟೆಂಬುದೇ ಅತ್ಯುತ್ತಮ ಶಾಸ್ತ್ರಗಳಲ್ಲಿ ಒಂದಾದ ಈ ಯೋಗವನ್ನು ಸ್ವಲ್ಪ ಹೆಚ್ಚು ಕಡಿಮೆ ಹಾಳುಮಾಡಿಬಿಟ್ಟಿರುವುದು. ಈ ಶಾಸ್ತ್ರವನ್ನು ಕಂಡು ಹಿಡಿದು ನಾಲ್ಕು ಸಾವಿರ ವರ್ಷಗಳ ಮೇಲಾಯಿತು. ಅಂದಿನಿಂದಲೂ ಇಂಡಿಯಾ ದೇಶದಲ್ಲಿ ಈ ಯೋಗವನ್ನು ವಿವರಿಸಿ ಸೂತ್ರಗಳನ್ನು ಮಾಡಿ ಬೋಧಿಸಿರುತ್ತಾರೆ. ಇಲ್ಲಿ ಒಂದು ವಿಶೇಷವೇನೆಂದರೆ, ವ್ಯಾಖ್ಯಾನಕಾರರು ಈಚೀಚಿನವರಾದ ಹಾಗೆಲ್ಲ ದೊಡ್ಡ ದೊಡ್ಡ ತಪ್ಪುಗಳನ್ನು ಮಾಡಿದ್ದಾರೆ. ಆದರೆ ವ್ಯಾಖ್ಯಾನಕಾರರು ಎಷ್ಟು ಪುರಾತನರೊ ಅಷ್ಟಷ್ಟು ಯುಕ್ತಿಯುಕ್ತವಾಗಿ ಬರೆದಿರುತ್ತಾರೆ. ಆಧುನಿಕರನೇಕರು ಏನೇನೋ ಗುಟ್ಟುಗಳನ್ನು ಹೇಳಿದ್ದಾರೆ. ಹೀಗೆ ಯೋಗವು ಎಲ್ಲಿಯೋ ಕೆಲವರ ಕೈಯಲ್ಲಿ ಸಿಕ್ಕಿಬಿಟ್ಟಿತು. ಇವರು ಇದನ್ನು ಹಗಲು ಹೊತ್ತಿನ ಬೆಳಕಿಗೆ ತರದೆ ಯುಕ್ತಿಗೆ ಹೊಂದಿಸದೆ ಅದನ್ನೊಂದು ಮಹಾರಹಸ್ಯವನ್ನಾಗಿ ಮಾಡಿಬಿಟ್ಟರು. ಯೋಗ ಸಿದ್ಧಿಗಳು ತಮ್ಮಲ್ಲಿಯೇ ಇರಬೇಕೆಂಬುದೇ ಹೀಗೆ ಮಾಡಿದುದಕ್ಕೆ ಕಾರಣವು.

ಈಗ ನಾನು ಹೇಳುವುದರಲ್ಲಿ ಏನೇನೂ ಗೂಢವಾದುದಿಲ್ಲ. ನನಗೆಷ್ಟು ಗೊತ್ತಿದೆಯೊ ಅಷ್ಟು ಮಟ್ಟಿಗೆ ಹೇಳುತ್ತೇನೆ. ನನಗೆ ಎಷ್ಟರಮಟ್ಟಿಗೆ ಯುಕ್ತಿಗಳು ತೋಚುತ್ತವೆಯೊ ಅಷ್ಟರಮಟ್ಟಿಗೆ ಹೇಳುತ್ತೇನೆ. ಆದರೆ ನನಗೆ ಯಾವುದು ಗೊತ್ತಾಗುವುದಿಲ್ಲವೊ ಅದರ ವಿಷಯಕ್ಕೆ ಗ್ರಂಥಗಳಲ್ಲಿ ಏನು ಹೇಳಿದೆಯೊ ಅದನ್ನು ಮಾತ್ರ ತಿಳಿಸುತ್ತೇನೆ. ಸುಮ್ಮನೆ ಕಣ್ಣು ಮುಚ್ಚಿಕೊಂಡು ನಂಬುವುದು ತಪ್ಪು. ನೀವು ನಿಮ್ಮ ನಿಮ್ಮ ಯುಕ್ತಿಯನ್ನೂ ವಿಚಾರಶಕ್ತಿಯನ್ನೂ ಉಪಯೋಗಿಸಬೇಕು; ಅಭ್ಯಾಸ ಮಾಡಿ ಈ ಸಂಗತಿಗಳು ಹೌದೊ ಅಲ್ಲವೊ ಎಂಬುದನ್ನು ನೋಡಬೇಕು. ಇನ್ನಾವುದಾದರೂ ಶಾಸ್ತ್ರವನ್ನು ಹೇಗೆ ಓದುತ್ತೀರೋ ಹಾಗೆಯೆ ಇದನ್ನೂ ಅಭ್ಯಾಸಮಾಡಬೇಕು. ಇದರಲ್ಲಿ ಯಾವ ರಹಸ್ಯವೂ ಇಲ್ಲ; ಯಾವ ಅಪಾಯವೂ ಇಲ್ಲ. ಇದರಲ್ಲಿ ನಿಜವಾದಂಶವೆಷ್ಟೊ ಅಷ್ಟನ್ನು ಹಾಡಿಹಗಲು ರಾಜಬೀದಿಯಲ್ಲಿ ಹೇಳಬೇಕು. ಇಂಥ ವಿಷಯಗಳನ್ನು ಸುಮ್ಮನೆ ಗುಟ್ಟುಮಾಡಿಡು ವುದರಿಂದ ಬಹಳ ಅಪಾಯವುಂಟು.

ಈಗ ಮೊದಲು ಸಾಂಖ್ಯ ಸಿದ್ಧಾಂತ ವಿಚಾರವಾಗಿ ಸ್ವಲ್ಪ ಹೇಳುತ್ತೇನೆ. ಈ ಸಿದ್ಧಾಂತವೇ ರಾಜಯೋಗಕ್ಕೆಲ್ಲ ಆಧಾರವಾಗಿದೆ. ಸಾಂಖ್ಯ ಸಿದ್ಧಾಂತದಂತೆ ವಿಷಯ ಜ್ಞಾನವು ಹುಟ್ಟುವ ಬಗೆಯೆಂತೆಂದರೆ:– ಬಾಹ್ಯ ವಿಷಯಗಳು ಇಂದ್ರಿಯಗೋಳಗಳ ಮೇಲೆ ವ್ಯಾಪಾರ ಮಾಡುತ್ತಲೆ ಈ ಸಂಸ್ಕಾರಗಳು ಇಂದ್ರಿಯಗಳಿಗೆ ಹೋಗಿ ಗೋಚರವಾಗುತ್ತವೆ; ಇಂದ್ರಿಯಗಳಿಂದ ಮನಸ್ಸಿಗೂ ಮನಸ್ಸಿನಿಂದ ಬುದ್ಧಿಗೂ ಹೋಗಿ ಅಲ್ಲಿಂದ ಪುರುಷನನ್ನು ಮುಟ್ಟುತ್ತವೆ. ಆಗ ಜ್ಞಾನವುಂಟಾಗುವುದು. ಆಗ ಪುರುಷನು ಏನು ಮಾಡಬೇಕೆಂಬುದನ್ನು ಕರ್ಮೇಂದ್ರಿಯಗಳಿಗೆ ಆಜ್ಞಾಪಿಸುತ್ತಾನೆ. ಪುರುಷನೊಬ್ಬನು ಹೊರತು ಮಿಕ್ಕವೆಲ್ಲ ಭೌತಿಕ ವಸ್ತುಗಳಾಗಿವೆ. ಆದರೆ ಮನಸ್ಸು ಬಾಹ್ಯಕರಣಗಳಿಗಿಂತ ಸೂಕ್ಷ್ಮಪದಾರ್ಥವಾಗಿರುವುದು. ಅಂತಃಕರಣದಲ್ಲಿ ಸೇರಿರುವ

ಪದಾರ್ಥವೇ ತನ್ಮಾತ್ರೆಗಳೆಂಬ ಭೂತಸೂಕ್ಷ್ಮವು. ಈ ತನ್ಮಾತ್ರೆಗಳು ಸ್ಥೂಲವಾಗಿ ಹೊರಗಣ ಸ್ಥೂಲ ವಸ್ತುಗಳಾಗಿರುವುವು. ಇದು ಸಾಂಖ್ಯಶಾಸ್ತ್ರ ನಿರ್ಣಯವು. ಹೀಗೆ ಬುದ್ಧಿಗೂ ಸ್ಥೂಲ ಭೂತಗಳಿಗೂ ರೂಪದಲ್ಲಿ ಮಾತ್ರ ಭೇದವಿರುವುದು. ಪುರುಷನೊಬ್ಬನೆ ಅತಿಭೌತಿಕನು. ಆತ್ಮನಿಗೆ ಮನಸ್ಸೆಂಬುದೇ ಒಂದು ಸಾಧನವು. ಇದರಿಂದ ಆತ್ಮನು ಬಾಹ್ಯವಸ್ತುಗಳನ್ನು ಗ್ರಹಿಸುತ್ತಿರುವನು. ಮನಸ್ಸು ಸದಾ ವಿಕಾರವನ್ನು ಪಡೆಯುತ್ತಲೂ ಅತ್ತಿತ್ತ ಅಲೆಯುತ್ತಲೂ ಇರುವುದು. ಇದನ್ನು ಚೆನ್ನಾಗಿ ತಿದ್ದಿ ಸುಶಿಕ್ಷಿತವಾಗಿ ಮಾಡಿದರೆ ಅನೇಕ ಇಂದ್ರಿಯಗಳೊಡನಾಗಲಿ ಒಂದೇ ಇಂದ್ರಿಯದೊಡನಾಗಲಿ ಕೂಡಿರುವಂತೆ ಮಾಡಬಹುದು. ಅಥವಾ ಯಾವ ಇಂದ್ರಿಯಗಳಿಗೂ ಸಂಬಂಧವಿಲ್ಲದಂತೆಯೂ ಮಾಡಬಹುದು. ಹೇಗೆಂದರೆ, ಗಡಿಯಾರದ ಕಡೆಗೇ ಕಿವಿಗೊಟ್ಟು ಕೇಳುತ್ತಿರುವಾಗ ಕಣ್ಣುಗಳು ತೆರೆದಿದ್ದರೂ ಸಾಮಾನ್ಯವಾಗಿ ಏನೂ ಕಾಣಿಸುವುದಿಲ್ಲ. ಇಲ್ಲಿ ಮನಸ್ಸು ಶ್ರವಣೇಂದ್ರಿಯದೊಡನೆ ಸಂಯೋಗವಾಗಿತ್ತೆ ಹೊರತು ಚಕ್ಷುರಿಂದ್ರಿಯದೊಡನೆ ಸೇರಿರಲಿಲ್ಲ. ಆದರೆ ಮನಸ್ಸು ಪರಿಪೂರ್ಣ ಸ್ಥಿತಿಗೆ ಬಂದಿದ್ದರೆ ಒಂದೇ ಕಾಲದಲ್ಲಿಯೂ ಎಲ್ಲಾ ಇಂದ್ರಿಯಗಳೊಡನೆಯೂ ಸೇರಿರುವುದಕ್ಕಾಗುತ್ತದೆ. ತನ್ನ ಆಳವನ್ನು ತಾನೇ ಕಂಡುಹಿಡಿಯುವ ಸ್ವವಿಷಯತೆಯೆಂಬ ಶಕ್ತಿಯೂ ಇದಕ್ಕಿರುವುದು. ಈ ಸ್ವವಿಷಯತ್ವವನ್ನು ಪಡೆಯಬೇಕೆಂಬುದೇ ಯೋಗಿಯ ಇಚ್ಛೆ. ಇವನು ಮನೋವೃತ್ತಿಗಳನ್ನೆಲ್ಲ ಏಕಾಗ್ರಮಾಡಿ ಒಳಗಡೆಗೆ ತಿರುಗಿಸಿ ಅಲ್ಲಿ ಏನು ನಡೆಯುತ್ತಿದೆಯೆಂಬುದನ್ನು ತಿಳಿಯಬೇಕೆಂದು ಬಯಸುವನು. ಇದು ಕೇವಲ ನಂಬಿಕೆಯ ಮಾತಲ್ಲ; ಕೆಲವು ಸಿದ್ಧಾಂತಕಾರರು ಮಾಡಿಟ್ಟಿರುವ ನಿರ್ಣಯ. ಆಧುನಿಕರಾದ ಶಾರೀರಕಶಾಸ್ತ್ರಜ್ಞರು ಕಣ್ಣುಗಳೆ ದರ್ಶನೇಂದ್ರಿಯವಲ್ಲವೆಂದೂ ಇಂದ್ರಿಯವು ಮೆದುಳಿನಲ್ಲಿ ಒಂದಾನೊಂದು ಸ್ಥಾನವಿಶೇಷದಲ್ಲಿರುವುದೆಂದೂ ಹೇಳುವರು; ಇದರಂತೆ ಉಳಿದ ಇಂದ್ರಿಯಗಳೂ ಒಳಗಡೆ ಒಂದೊಂದು ಸ್ಥಾನವಿಶೇಷಗಳಲ್ಲಿವೆಯೆಂದು ಹೇಳುತ್ತಾರೆ; ಈ ಸ್ಥಾನಗಳೆಂಬುವು ಮೆದುಳಿನಲ್ಲಿರುವ ವಸ್ತುವಿನಿಂದಲೆ ಆಗಿವೆಯೆಂದೂ ಅನ್ನುತ್ತಾರೆ. ಸಾಂಖ್ಯರೂ ಇದೇ ಅಭಿಪ್ರಾಯವನ್ನು ಹೇಳಿದ್ದಾರೆ. ಮೊದಲನೆಯದಾದ ಶಾರೀರಕ ಶಾಸ್ತ್ರಜ್ಞರ ಅಭಿಪ್ರಾಯವು ಭೌತಿಕ ದೃಷ್ಟಿಯಿಂದ ಬಂದದ್ದು. ಎರಡನೆಯದಾದ ಸಾಂಖ್ಯರ ಸಿದ್ಧಾಂತವು ಅನುಭವದಿಂದ ಬಂದದ್ದು. ಆದರೂ ಎರಡೂ ಒಂದೆ. ಈಗ ನಾವು ವಿಚಾರ ಮಾಡುವುದು ಇದನ್ನು ಮೀರಿರುವುದು.

ಯೋಗಿಯು ಸೂಕ್ಷ್ಮ ಬುದ್ಧಿಯನ್ನು ಪಡೆದು ಮನಸ್ಸಿನ ಎಲ್ಲಾ ಸ್ಥಿತಿಗಳನ್ನೂ ತಿಳಿದುಕೊಳ್ಳಬೇಕೆಂದು ಯತ್ನಿಸುತ್ತಾನೆ. ಈ ಎಲ್ಲಾ ಸ್ಥಿತಿಗಳೂ ಮನಸ್ಸಿಗೆ ಗೋಚರವಾಗಬೇಕು. ಇಂದ್ರಿಯಕ್ಕೆ ವಿಷಯಾನುಭವವು ಆಗುವುದನ್ನೂ, ಅಲ್ಲಿಂದ ಅದು ಮನಸ್ಸಿಗೆ ಸೇರುವ ಬಗೆಯನ್ನೂ, ಆಮೇಲೆ ಅದು ಬುದ್ಧಿಯನ್ನು ಪಡೆಯುವ ರೀತಿಯನ್ನೂ, ಕೊನೆಗೆ ಈ ಬುದ್ಧಿಯು ಅದನ್ನು ಪುರುಷನಿಗೆ ಮುಟ್ಟಿಸುವ ಕ್ರಮವನ್ನೂ, ಎಲ್ಲವನ್ನೂ ಸಾಕ್ಷಾತ್ತಾಗಿ ತಿಳಿಯುವುದಕ್ಕಾಗುವುದು. ಪ್ರತಿಯೊಂದು ಶಾಸ್ತ್ರವನ್ನು ತಿಳಿಯುವುದಕ್ಕೂ ಕೆಲವು ಸಾಧನಗಳೂ ಕ್ರಮಗಳೂ ಇರುವುವಷ್ಟೆ. ರಾಜಯೋಗದಲ್ಲಿಯೂ ಇದರಂತೆಯೆ ಇವೆ.

ಇಲ್ಲಿ ಕೆಲವು ಆಹಾರ ನಿಯಮಗಳು ಬೇಕಾಗುತ್ತವೆ. ಯಾವ ಆಹಾರದಿಂದ ಚಿತ್ತಶುದ್ಧಿ ಯಾಗುವುದೊ ಅಂಥ ಆಹಾರವನ್ನೇ ಉಪಯೋಗಿಸಬೇಕು. ಯಾವುದಾದರೂ ಮೃಗಗಳ

ಪ್ರದರ್ಶನ ಶಾಲೆಗೆ ಹೋಗಿ ನೋಡಿದರೆ ಇದು ಚೆನ್ನಾಗಿ ಗೊತ್ತಾಗುವುದು. ಆನೆಗಳು ಮಹಾ ಮಹಾ ಪ್ರಾಣಿಗಳಾಗಿದ್ದರೂ ಶಾಂತಸ್ವಭಾವದಿಂದ ಸುಮ್ಮನಿರುವುವು. ಹುಲಿ ಮತ್ತು ಸಿಂಹಗಳ ಪಂಜರಗಳ ಸಮೀಪಕ್ಕೆ ಹೋಗುತ್ತಲೆ ಅವು ನಿಂತಲ್ಲಿ ನಿಲ್ಲದೆ ಇರುವುವು. ಆಹಾರದಿಂದ ಎಷ್ಟು ವ್ಯತ್ಯಾಸವಾಗಿದೆ! ಈ ಶರೀರದಲ್ಲಿ ನಡೆಯುವ ವ್ಯಾಪಾರಗಳೆಲ್ಲ ಆಹಾರದಿಂದಾಗಿರುತ್ತವೆಯೆಂಬುದು ನಮಗೆ ಪ್ರತಿದಿನವೂ ಅನುಭವಕ್ಕೆ ಬರುತ್ತಿದೆ. ಉಪವಾಸಮಾಡುವುದಕ್ಕೆ ಮೊದಲು ಮಾಡಿದರೆ ಮೊದಲು ಶರೀರವು ಸೊರಗುವುದು; ಶರೀರ ಶಕ್ತಿಗಳು ಕುಂದುವುವು; ಆಮೇಲೆ ಕೆಲವು ದಿನಗಳಲ್ಲಿ ಮನಃಶಕ್ತಿಗಳೂ ಕುಂದುವುವು; ಮೊದಲು ಜ್ಞಾಪಕ ಶಕ್ತಿಯು ತಪ್ಪುವುದು; ಆಮೇಲೆ ಸ್ವಲ್ಪ ಕಾಲಕ್ಕೆ ಆಲೋಚನೆ ಮಾಡುವುದಕ್ಕೇ ಆಗುವುದಿಲ್ಲ; ಪೂರ್ಣ ವಿಚಾರವಂತೂ ಸಾಧ್ಯವಾಗುವುದೇ ಇಲ್ಲ. ಆದುದರಿಂದ ಪ್ರಾರಂಭದಲ್ಲಿ ನಾವು ತಿನ್ನುವ ಆಹಾರದ ಕಡೆಗೂ ಲಕ್ಷ್ಯವನ್ನು ಕೊಡಬೇಕಾಗುವುದು. ಸ್ವಲ್ಪ ಅಭ್ಯಾಸ ಬಲವುಂಟಾದ ಮೇಲೆ ಸಾಧನೆಯು ತಕ್ಕ ಮಟ್ಟಿಗೆ ನಡೆದಿರುವಾಗ ಈ ವಿಷಯದಲ್ಲಿ ಅಷ್ಟು ಗಮನಿಸಬೇಕಾದುದಿರುವುದಿಲ್ಲ. ಗಿಡವು ಇನ್ನೂ ಪುಟ್ಟದಾಗಿ ಬೆಳೆಯುತ್ತಿರುವಾಗ ಅದಕ್ಕೆ ಅಪಾಯವಾಗದಂತೆ ಸುತ್ತಲೂ ಬೇಲಿಯನ್ನು ಹಾಕಬೇಕಾಗುವುದು. ಆದರೆ ಅದು ಮರವಾಗುತ್ತಲೆ ಬೇಲಿಗಳನ್ನೆಲ್ಲ ತೆಗೆದುಹಾಕುತ್ತಾರೆ. ಆಗ ಅದಕ್ಕೆ ಯಾವ ಅಪಾಯವನ್ನಾದರೂ ತಡೆದುಕೊಳ್ಳುವ ಶಕ್ತಿಯಿರುವುದು.

ಯೋಗಿಯಾದವನು ಆಹಾರವಿಹಾರಗಳಲ್ಲಿ ತೀರ ಮಿತಿ ಮೀರದೆಯೂ ಅತಿಘೋರ ತಪಸ್ವಿಯಾಗದೆಯೂ ಮಧ್ಯವರ್ತಿಯಾಗಿರಬೇಕು. ಉಪವಾಸ ವನವಾಸಗಳನ್ನು ಮಾಡಿ ದೇಹದಂಡನೆಯನ್ನು ಮಾಡಲಾಗದು. ಹಾಗೆ ಮಾಡಿದರೆ ಯೋಗಿಯಾಗಲಾರನೆಂದು ಗೀತೆಯಲ್ಲಿ ಹೇಳಿರುವನು. ಉಪವಾಸವನ್ನು ಮಾಡುತ್ತಿರುವವನೂ, ಯಾವಾಗಲೂ ಎಚ್ಚತ್ತಿರುವವನೂ, ಅತಿಯಾಗಿ ನಿದ್ರೆ ಮಾಡುತ್ತಿರುವವನೂ, ಯಾವಾಗಲೂ ಕೆಲಸ ಮಾಡುತ್ತಿರುವವನೂ, ಏನೂ ಕೆಲಸವನ್ನು ಮಾಡದೆ ಇರುವವನೂ ಇವರು ಎಂದಿಗೂ ಯೋಗಿಗಳಾಗುವುದಿಲ್ಲ.

# 2ನೇ ಅಧ್ಯಾಯ – ಯೋಗಾಂಗಗಳು

ರಾಜಯೋಗದಲ್ಲಿ ಎಂಟು ಅಂಗಗಳುಂಟು. ಮೊದಲನೆಯ ಅಂಗವೇ ಯಮ. ಅಹಿಂಸೆ, ಸತ್ಯ, ಕದಿಯದೆ ಇರುವುದು, ಬ್ರಹ್ಮಚರ್ಯ, ದಾನವನ್ನು ಸ್ವೀಕರಿಸದೆ ಇರುವುದು ಇವು ಯಮವೆನ್ನಿಸುತ್ತವೆ. ನಿಯಮವು ಎರಡನೆ ಅಂಗವು. ಶುಚಿಯಾಗಿರುವುದು, ಇದ್ದಷ್ಟಕ್ಕೆ ತೃಪ್ತಿಯಿಂದಿರುವುದು, ತಪಸ್ಸು, ಅಧ್ಯಯನ ಮಾಡುವುದು. ಈಶ್ವರನಿಗೆ ಆತ್ಮಾರ್ಪಣ ಮಾಡುವುದು ಇವು ನಿಯಮಗಳು. ಮಿಕ್ಕ ಅಂಗಗಳಾವುವೆಂದರೆ, ಆಸನ ಎಂದರೆ ಕೂತುಕೊಳ್ಳುವ ಬಗೆ, ಪ್ರಾಣಾಯಾಮ ಎಂದರೆ ಪ್ರಾಣವನ್ನು ಬಿಗಿಯಲ್ಲಿಡುವುದು, ಪ್ರತ್ಯಾಹಾರ ಎಂದರೆ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗಗೊಡದಿರುವುದು, ಧಾರಣೆ ಎಂದರೆ ಮನಸ್ಸನ್ನು ಒಂದು ಕಡೆಯಲ್ಲಿ ನಿಲ್ಲಿಸುವುದು. ಧ್ಯಾನ ಎಂದರೆ ಒಂದೇ ವಿಧದಲ್ಲಿ ಚಿಂತಿಸುವುದು. ಸಮಾಧಿ ಎಂದರೆ ಮನಸ್ಸಿನ ಪಕ್ವ ಸ್ಥಿತಿಯು.

ಇವುಗಳಲ್ಲಿ ಯಮ ನಿಯಮಗಳೆಂಬುವು ನಡೆನುಡಿಗಳ ತಿದ್ದುಪಾಡು ಮಾಡಿಕೊಡುತ್ತವೆ. ಇವುಗಳ ಆಧಾರವಿಲ್ಲದಿದ್ದರೆ ಯೋಗವೇ ಸಿದ್ಧಿಯಾಗುವುದಿಲ್ಲ. ಇವೆರಡು ಚೆನ್ನಾಗಿ ನಿಂತ ಮೇಲೆ ಯೋಗಿಯ ಸಾಧನದ ಫಲವು ಗೊತ್ತಾಗುವುದು. ಇವುಗಳಿಲ್ಲದೆ ಅದು ಎಂದಿಗೂ ಫಲಿಸುವುದಿಲ್ಲ. ಯೋಗಿಯಾದವನು ಯಾರನ್ನೂ ಮನೋವಾಕ್ಕಾಯಗಳಿಂದ ಹಿಂಸೆ ಮಾಡಬಾರದು. ದಯೆಯೆಂಬುದು ಕೇವಲ ಮನುಷ್ಯರ ಮೇಲೆ ಮಾತ್ರವೇ ಅಲ್ಲ; ಇಡೀ ಪ್ರಪಂಚದ ಮೇಲೆಯೇ ದಯೆ ಇರಬೇಕು. ಆಸನವೆಂಬುದು ಮುಂದಣ ಅಂಗವು. ಮೇಲಣ ಭೂಮಿಕೆಗಳನ್ನು ಮುಟ್ಟುವವರೆಗೂ ಪ್ರತಿದಿನವೂ ಅನೇಕ ಶಾರೀರಿಕ ಮತ್ತು ಮಾನಸಿಕ ಸಾಧನಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ಬಹುಕಾಲ ಒಂದೇ ಸಮವಾಗಿರುವುದಕ್ಕೆ ಆಗುವ ಯಾವುದಾದರೂ ಒಂದು ಆಸನವನ್ನು ಗೊತ್ತು ಮಾಡಿಕೊಳ್ಳಬೇಕಾದುದು ಅವಶ್ಯವಾಗಿದೆ. ಯಾವ ಆಸನವು ನಮಗೆ ಅತ್ಯಂತ ಸುಲಭವಾಗಿರುವುದೊ ಅದನ್ನು ಆರಿಸಿಕೊಳ್ಳಬೇಕು. ಆಲೋಚನೆ ಮಾಡುವಾಗ ಒಬ್ಬನಿಗೆ ಒಂದು ಆಸನವು ಅನುಕೂಲವಾಗಿರುವುದು; ಆದರೆ ಮತ್ತೊಬ್ಬನಿಗೆ ಅದೇ ಆಸನವು ತುಂಬ ಅನನುಕೂಲವಾಗಬಹುದು. ಈ ಯೋಗ ಸಾಧನೆಗಳನ್ನು ಮಾಡುವಾಗ ಶರೀರದಲ್ಲಿ ಬಹಳ ಕೆಲಸ ನಡೆಯುತ್ತಿರುವುದೆಂಬುದು ಈ ಗ್ರಂಥದಲ್ಲಿ ಮುಂದೆ ಗೊತ್ತಾಗುವುದು. ಹೇಗೆಂದರೆ, ಜ್ಞಾನ ಶಕ್ತಿಗಳನ್ನು ತಮ್ಮ ಸ್ಥಾನದಿಂದ ತಪ್ಪಿಸಿ ಬೇರೆ ಮಾರ್ಗದಲ್ಲಿ ಬಿಡಬೇಕಾಗುತ್ತದೆ. ಹೊಸ ಹೊಸ ವ್ಯಾಪಾರ ವಿಶೇಷಗಳು ಹುಟ್ಟಿ ಶರೀರ ಸ್ಥಿತಿಯೇ ಬೇರಾದಂತಾಗುವುದು. ಆದರೆ ಮುಖ್ಯಕಾರ್ಯವು ಬೆನ್ನು ಹುರಿಯಲ್ಲಿ ನಡೆಯುವುದು.

ಆದುದರಿಂದ ಆಸನದಲ್ಲಿ ಮುಖ್ಯವಾದುದೇನೆಂದರೆ:-ಎದೆ, ಕುತ್ತಿಗೆ, ತಲೆ ಇವು ಮೂರೂ ಸಮವಾಗಿ ಒಂದೇ ಸಾಲಿನಲ್ಲಿರುವಂತೆ ನೆಟ್ಟಗೆ ಕೂತುಕೊಂಡು ಬೆನ್ನುಹುರಿಗೆ ಅಡ್ಡಿ ಇಲ್ಲದಂತೆ ಮಾಡಬೇಕು. ಶರೀರದ ತೂಕವೆಲ್ಲ ಪಕ್ಕೆಲುಬುಗಳ ಮೇಲೆ ಬೀಳುವಂತೆ ಮಾಡಿಕೊಂಡರೆ ಬೆನ್ನುಹುರಿಯು ನೆಟ್ಟಗಾಗಿ ಸುಲಭವಾದ ಆಸನವಾಗುವುದು. ಎದೆಯು ಒಳಕ್ಕೆ ಸರಿದುಕೊಂಡಿರುವಾಗ ಉತ್ತಮವಿಚಾರಗಳು ಮನಸ್ಸಿಗೆ ಬರುವುದಿಲ್ಲವೆಂಬುದನ್ನು ಸುಲಭವಾಗಿ ಗೊತ್ತುಪಡಿಸಿಕೊಳ್ಳಬಹುದು. ಈ ಯೋಗಾಂಗವು ಸ್ವಲ್ಪ ಮಟ್ಟಿಗೆ ಹಠಯೋಗದಂತೆ ಇರುವುದು. ಹಠಯೋಗದಲ್ಲಿ ಸ್ಥೂಲಶರೀರವೆ ಮುಖ್ಯವಾದ ವಿಷಯವು. ಶರೀರವನ್ನು ಚೆನ್ನಾಗಿ ಬಲಪಡಿಸುವುದೇ ಈ ಯೋಗದ ಉದ್ದೇಶವು. ಇಲ್ಲಿ ಈ ಯೋಗದ ವಿಚಾರವನ್ನು ನಾವು ಹೇಳುವುದಿಲ್ಲ. ಏಕೆಂದರೆ ಇದರ ಸಾಧನಗಳು ಬಹಳ ಕಷ್ಟ; ಒಂದು ದಿನದಲ್ಲಿ ಎಂದಿಗೂ ಬರುವವಲ್ಲ. ಇದೂ ಅಲ್ಲದೆ ಅವುಗಳನ್ನು ಕಲಿತರೂ ಧರ್ಮಕ್ಕೆ ಅಷ್ಟು ಉಪಯೋಗಕರ ವಾಗಿಯೂ ಇರುವುದಿಲ್ಲ. ಶರೀರವನ್ನು ಬೇರೆ ಬೇರೆ ಆಸನಗಳನ್ನೆ ಹಾಕಿ ಕೂಡಿಸುವ ಕ್ರಮವನ್ನೂ ಇನ್ನೂ ಮಿಕ್ಕ ಈ ಬಗೆಯ ಸಾಧನಗಳನ್ನೂ ಡೆಲ್ಸಾರ್ಟೈ ಮೊದಲಾದವರು ಬರೆದಿರುತ್ತಾರೆ. ಇವುಗಳ ಉದ್ದೇಶವು ಶರೀರ ವಿಷಯವಾದುದೇ ಹೊರತು ಮನಸ್ಸಿಗೆ ಸಂಬಂಧ ಪಟ್ಟದ್ದಲ್ಲ. ಮನುಷ್ಯನು ಸಂಪೂರ್ಣವಾಗಿ ತನ್ನ ಸ್ವಾಧೀನಕ್ಕೆ ತೆಗೆದು ಕೊಳ್ಳುವುದಕ್ಕಾಗದ ಮಾಂಸ ಖಂಡವೇ ಶರೀರದಲ್ಲಿಲ್ಲ. ಹೃದಯವು ನಮ್ಮ ಇಷ್ಟ ಬಂದಂತೆ ಬೇಕಾದಾಗ ಬಡಿದುಕೊಳ್ಳುವಂತೆಯೂ ಬೇಡವಾದಾಗ ನಿಲ್ಲುವಂತೆಯೂ ಮಾಡಿಕೊಳ್ಳಬಹುದು. ಹೀಗೆಯೆ ಮಿಕ್ಕ ಎಲ್ಲಾ ಅಂಗಗಳನ್ನೂ ವಶಮಾಡಿಕೊಳ್ಳಬಹುದು. ಈ ಯೋಗದಿಂದ ಮನುಷ್ಯರು ಬಹು ಕಾಲ ಜೀವಿಸಬಹುದು. ಹಠಯೋಗಿಗೆ ಆರೋಗ್ಯವೆಂಬುದು ಬಹುಮುಖ್ಯವಾದುದು. ಇದೇ ಅವನ ಪರಮಪುರುಷಾರ್ಥ. ಎಂದೆಂದಿಗೂ ಬೇನೆ ಬೀಳಬಾರದೆಂಬುದು ಅವನ ಸಂಕಲ್ಪ. ಅದರಂತೆ ಅವನಿಗೆ ಎಂದಿಗೂ ರೋಗ ಬರುವುದಿಲ್ಲ. ಅವನು ಬಹುಕಾಲ ಬದುಕಿರುವನು. ನೂರುವರ್ಷವೆಂದರೆ ಅವನಿಗೆ ಬಹುಸ್ವಲ್ಪವಾಯಿತು. ನೂರೈವತ್ತು ವಯಸ್ಸಾದಾಗಲೂ ಅವನಿಗೆ ಒಂದು ಕೂದಲೂ ನರೆತಿರುವುದಿಲ್ಲ. ಅವನು ನವಯವ್ವನದಿಂದ ಮೆರೆಯುತ್ತಿರುವನು. ಆದರೇನು? ಆಲದಮರವು ಐದುಸಾವಿರ ವರ್ಷಗಳು ಬದುಕಿರುವುದು. ಆದರೆ ಅದು ಆಲದ ಮರವೇ ಹೊರತು ಇನ್ನೇನಾದರೂ ಬೇರೆ ಆದೀತೆ? ಹೀಗೆಯೆ ಒಬ್ಬ ಮನುಷ್ಯನು ಬಹುಕಾಲ ಬದುಕಿದ್ದರೆ ಅವನೊಬ್ಬ ಅರೋಗನಾದ ಪ್ರಾಣಿಯಂತಾಯಿತೇ ಹೊರತು ಮತ್ತೇನೂ ಅಲ್ಲ. ಈ ಹಠಯೋಗದಲ್ಲಿರುವ ಒಂದೆರಡು ಅಭ್ಯಾಸಗಳು ಮಾತ್ರ ಬಹಳ ಉಪಯೋಗಕರವಾಗಿವೆ. ಹೇಗೆಂದರೆ ತಲೆನೋವು ಬಂದವರು ಬೆಳಿಗ್ಯೆ ಏಳುತ್ತಲೆ ಮೂಗಿನಿಂದ ನೀರು ಕುಡಿದರೆ ಗುಣವಾಗುವುದು. ಆ ದಿನವೆಲ್ಲ ಮೆದುಳು ಶಾಂತವಾಗಿ ತಂಪಾಗಿರುವುದಲ್ಲದೆ ಸೀತವೂ ಆಗುವುದಿಲ್ಲ. ಹೀಗೆ ಕುಡಿಯುವುದು ಬಹು ಸುಲಭ. ಮೂಗನ್ನು ನೀರಿನಲ್ಲಿಟ್ಟುಕೊಂಡು ಹೊಳ್ಳೆಗಳಿಂದ ನೀರನ್ನು ಎಳೆದುಕೊಳ್ಳುತ್ತ ಗಂಟಲಿನಲ್ಲಿ ಒಳಕ್ಕೆ ಸೆಳೆಯಬೇಕು. ಆಗ ನೀರು ಮೇಲಕ್ಕೇರುವುದು.

ಸ್ಥಿರವಾಗಿಯೂ ಒಂದೇ ಸಮವಾಗಿಯೂ ಇರುವ ಆಸನವನ್ನಳವಡಿಸಿಕೊಳ್ಳುವುದನ್ನು ಕಲಿತ ಮೇಲೆ ನಾಡೀಶುದ್ಧಿಯೆಂಬ ಕ್ರಮವನ್ನು ಆಚರಿಸಬೇಕೆಂದು ಕೆಲವರ ಮತ. ಇದು

ರಾಜಯೋಗಕ್ಕೆ ಸಂಬಂಧಪಟ್ಟದ್ದಲ್ಲವೆಂದು ಕೆಲವರು ಇದನ್ನು ಬಿಟ್ಟುಬಿಟ್ಟಿರುತ್ತಾರೆ. ಆದರೆ ದೊಡ್ಡ ಪ್ರಮಾಣವೆಂದೆಣಿಸಬೇಕಾದ ಭಾಷ್ಯಕಾರ ಶಂಕರಾಚಾರ್ಯರವರು ಇದನ್ನು ಮಾಡಬೇಕೆಂದು ಹೇಳಿರುವುದರಿಂದ ಇದನ್ನು ಇಲ್ಲಿ ಹೇಳತಕ್ಕದ್ದು ಯುಕ್ತವೆಂದು ತೋರುತ್ತದೆ. ಆ ಶಂಕರಾಚಾರ್ಯರೇ ಶ್ವೇತಾಶ್ವತರೋಪನಿಷತ್ತಿಗೆ ಭಾಷ್ಯವನ್ನು ಬರೆದಿರುವುದರಲ್ಲಿ ಕೊಟ್ಟಿರುವ ಅವರ ಅಭಿಪ್ರಾಯಗಳನ್ನೆ ಇಲ್ಲಿ ತಿಳಿಸುತ್ತೇನೆ. "ಪ್ರಾಣಾಯಾಮದಿಂದ ಯಾವನ ಮನಸ್ಸಿನ ಕಲ್ಮಷವು ಹೋಗಿರುವುದೊ ಆತನ ಚಿತ್ತವು ಬ್ರಹ್ಮನಲ್ಲಿ ನಿಲ್ಲುವುದು." ಆದುದರಿಂದ ಪ್ರಾಣಾಯಾಮವನ್ನು ಹೇಳಿರುತ್ತಾರೆ. ಮೊದಲು ನಾಡೀಶುದ್ಧಿಯನ್ನು ಮಾಡಿಕೊಳ್ಳಬೇಕು. ಆಮೇಲೆ ಪ್ರಾಣಾಯಾಮವನ್ನು ಮಾಡುವುದಕ್ಕೆ ಅಧಿಕಾರವುಂಟಾಗುವುದು. ಬಲಗಡೆಯ ಹೊಳ್ಳೆಯನ್ನು ಹೆಬ್ಬೆಟ್ಟಿನಿಂದ ಒತ್ತಿ ಹಿಡಿದು ಎಡಗಡೆಯ ಹೊಳ್ಳೆಯಿಂದ ಕೈಲಾದಷ್ಟು ವಾಯುವನ್ನು ತುಂಬಿಕೊಳ್ಳಬೇಕು. ಆಮೇಲೆ ವಿರಾಮವನ್ನು ಕೊಡದೆ ಬಲಗಡೆಯ ಹೊಳ್ಳೆಯಿಂದ ವಾಯುವನ್ನು ಬಿಡಬೇಕು. ಆಗ ಎಡಗಡೆಯ ಹೊಳ್ಳೆಯನ್ನು ಮುಚ್ಚಿಕೊಂಡಿರಬೇಕು. ಮತ್ತೆ ಬಲದ ಹೊಳ್ಳೆಯಿಂದ ಕೈಲಾದಷ್ಟು ತುಂಬಿಕೊಂಡು ಎಡಗಡೆಯಿಂದ ಬಿಡಬೇಕು. ಹೀಗೆ ಬೆಳಗಿನ ಜಾವ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಸರಿ ಹೊತ್ತು ಈ ನಾಲ್ಕು ಸವನಗಳಲ್ಲಿ ಮೂರು ಅಥವಾ ಐದು ಸಾರಿ ಮಾಡುತ್ತಿದ್ದರೆ ಒಂದು ಪಕ್ಷಕ್ಕೊ, ತಿಂಗಳಿಗೊ, ನಾಡೀಶುದ್ಧಿಯಾಗುವುದು. ಆಮೇಲೆ ಪ್ರಾಣಾಯಾಮವನ್ನಾರಂಭಿಸಬೇಕು.

ಅಭ್ಯಾಸ ಮಾಡುವುದು ಅತ್ಯಗತ್ಯವಾಗಿದೆ. ನೀವು ಕೂತುಕೊಂಡು ಪ್ರತಿ ದಿನವೂ ಎಷ್ಟೋ ಗಂಟೆಗಳವರೆಗೆ ನಾನು ಹೇಳುವುದನ್ನು ಕೇಳುತ್ತಿದ್ದರೂ ಯೋಗದಲ್ಲಿ ಒಂದು ಹೆಜ್ಜೆಯನ್ನೂ ಮುಂದಕ್ಕಿಡುವುದಕ್ಕಾಗುವುದಿಲ್ಲ. ಇದಕ್ಕೆಲ್ಲ ಅಭ್ಯಾಸವೇ ಕಾರಣ. ನಮನಮಗೆ ಅನುಭವವಾದ ಹೊರತು ಈ ವಿಚಾರಗಳು ತಿಳಿಯುವುದೇ ಇಲ್ಲ. ಇವುಗಳನ್ನು ನಾವೇ ಕಂಡು ಅನುಭವಿಸಬೇಕು. ಸುಮ್ಮನೆ ವ್ಯಾಖ್ಯಾನಗಳನ್ನೂ ಮತಸಮಯಗಳನ್ನೂ[1] ಕೇಳುತ್ತಿದ್ದರೆ ಸಾಲದು. ಈ ಅಭ್ಯಾಸಗಳಿಗೆ ಅನೇಕ ವಿಘ್ನಗಳುಂಟು. ಆರೋಗ್ಯವಿಲ್ಲದ ಶರೀರವೆಂಬುದು ಮೊದಲನೆಯ ವಿಘ್ನವು. ಶರೀರವು ಸರಿಯಾದ ಸ್ಥಿತಿಯಲ್ಲಿಲ್ಲದಿದ್ದರೆ ಅಭ್ಯಾಸಕ್ಕೆ ವಿಘ್ನವಾಗುವುದು. ಆದುದರಿಂದ ದೇಹವನ್ನು ಆರೋಗ್ಯದಲ್ಲಿಟ್ಟಿರಬೇಕು. ಆಹಾರ, ಪಾನಗಳಲ್ಲಿಯೂ ಆಚಾರ ವಿಚಾರಗಳಲ್ಲಿಯೂ ಎಚ್ಚರದಿಂದ ನಡೆಯಬೇಕು. ದೇಹವು ಬಲವಾಗಿರಬೇಕಾದರೆ ಯಾವಾಗಲೂ ನಿಶ್ಚಲವಾದ ಮನೋದಾರ್ಢ್ಯವನ್ನುಪಯೋಗಿಸಬೇಕು. ಈ ಪದ್ಧತಿಗೆ ಕ್ರಿಸ್ತಿಯನ್‌ಶಾಸ್ತ್ರವೆಂದು[2] ಹೇಳುವುದು ವಾಡಿಕೆಯಾಗಿದೆ. ಶರೀರದ ವಿಚಾರದಲ್ಲಿ ಇಷ್ಟು ನೋಡಿಕೊಂಡರೆ ಸಾಕು, ಮತ್ತೇನೂ ಬೇಕಿಲ್ಲ. ಆರೋಗ್ಯವೆಂಬುದು ಪುರುಷಾರ್ಥಕ್ಕೊಂದು ಸಾಧನ ಮಾತ್ರವೆಂಬುದನ್ನು

---

1. ಶಾಸ್ತ್ರೀಯ ಕಲ್ಪನೆಗಳಿಗೆ ಮತಸಮಯವೆನ್ನುತ್ತಾರೆ.

2. "ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ" ಎಂಬುದೊಂದು ನಮ್ಮಲ್ಲಿ ದೊಡ್ಡವರ ವಾಕ್ಯ. ಇದರಂತೆ ಕೆಲವು ಪಾಶ್ಚಿಮಾತ್ಯರೂ ಭಾವನೆಯಿಂದ ಮಹಾ ಕಾರ್ಯಗಳಾಗುವವೆಂದು ಹೇಳುತ್ತಾರೆ. ಮನುಷ್ಯನು ಅರೋಗನಾಗಿರಬೇಕಾದರೆ ತಾನು ಅರೋಗನಾಗಿರುವೆನೆಂಬ ಭಾವನೆಯು ಅವನಲ್ಲಿ ದೃಢವಾಗಿರಬೇಕು. ಇಂಥ ದೃಢ ಭಾವನೆಯ ಪದ್ಧತಿಯನ್ನು ವಿದೇಶಿಯರು ಕ್ರಿಸ್ತಿಯ ಶಾಸ್ತ್ರವೆಂದು ಕರೆಯುವರು.

ಮರೆಯದೆ ಇರಬೇಕು. ಆರೋಗ್ಯವೇ ಪುರುಷಾರ್ಥವಾಗಿದ್ದರೆ ನಾವು ಪಶುಗಳಿಗೆ ಸಮಾನರಾಗಿರುತ್ತಿದ್ದೆವು, ಪಶುಗಳಿಗೆ ಆರೋಗ್ಯ ತಪ್ಪುವುದೇ ಅಪೂರ್ವ.

ಇನ್ನು ಎರಡನೆಯ ವಿಘ್ನವೆಂದರೆ ಸಂಶಯ. ನಮಗೆ ಯಾವುದು ಕಾಣುವುದಿಲ್ಲವೊ ಅದರ ವಿಷಯಕ್ಕೆ ನಮಗೆ ಯಾವಾಗಲೂ ಸಂಶಯವಿದ್ದೇ ಇರುವುದು. ಜನರು ಎಷ್ಟೇ ಪ್ರಯತ್ನ ಮಾಡಿದರೂ ಬರೀ ಮಾತಿನಾಧಾರದ ಮೇಲೆ ನಂಬುವುದು ಅವರಿಂದ ಆಗುವುದಿಲ್ಲ. ಆದುದರಿಂದ ಈ ವಿಚಾರಗಳಲ್ಲಿ ತಥ್ಯಾಂಶವೇನಾದರೂ ಇದೆಯೊ ಇಲ್ಲವೊ ಎಂದು ಸಂಶಯವುಂಟಾಗುವುದು. ನಮ್ಮಲ್ಲಿ ಪರಮಾಸ್ತಿಕರೆಂಬುವರಿಗೂ ಒಂದೊಂದು ವೇಳೆ ಸಂದೇಹ ಬಂದೇ ಬರುವುದು. ಕೆಲವು ದಿನ ಅಭ್ಯಾಸಮಾಡುವುದರೊಳಗೆ ಏನಾದರೊಂದು ವಿಷಯವು ತೋರಿ ಅದರಿಂದಲೆ ನಮಗೆ ಧೈರ್ಯವು ನಂಬಿಕೆಯೂ ಉಂಟಾಗುವುದು. ಯೋಗ ಸಿದ್ಧಾಂತದ ವ್ಯಾಖ್ಯಾನಕಾರರೊಬ್ಬರು ಹೇಳಿರುವಂತೆ "ಏನೋ ಅಲ್ಪವಾದುದಾಗಿರಲಿ, ನಂಬಿಕೆಗರ್ಹವಾದ ಒಂದು ಪ್ರಮಾಣ ಸಿಕ್ಕಿದರೂ ಸಾಕು; ಇಡೀ ಯೋಗಶಾಸ್ತ್ರದಲ್ಲಿಯೇ ಶ್ರದ್ಧೆಯುಂಟಾಗುವುದು." ಹೇಗೆಂದರೆ, ಮೊದಲು ಕೆಲವು ತಿಂಗಳು ಸಾಧನ ಮಾಡಿದ ಮೇಲೆ ಮತ್ತೊಬ್ಬರ ಆಲೋಚನೆಗಳು ತಿಳಿಯಹತ್ತುವುವು. ಈ ಯೋಚನೆಗಳು ರೂಪುಗೊಂಡಂತೆ ನಮ್ಮ ಬಳಿಗೆ ಬರುತ್ತವೆ. ಮನಸ್ಸನ್ನು ಒಂದೇ ಕಡೆಗಿಟ್ಟು ಏನನ್ನಾದರೂ ಕೇಳಬೇಕೆಂದು ಇಚ್ಛಿಸಿದರೆ ಎಷ್ಟೋ ದೂರದಲ್ಲಿ ನಡೆಯುತ್ತಿರುವ ಸಂಗತಿಯು ಕೇಳಿಬರುವುದು. ಇಂಥ ಝಳುಕುಗಳು ಮೊದಲು ಇಷ್ಟಿಷ್ಟು ಬಂದರೂ ಶ್ರದ್ಧೆಯೂ, ಧೈರ್ಯವೂ, ಭರವಸೆಯೂ ಹುಟ್ಟುವುದಕ್ಕೆ ಸಾಕು. ಉದಾಹರಣೆ:- ಮೂಗಿನ ಕೊನೆಯಲ್ಲಿಯೇ ಮನಸ್ಸನ್ನು ನಿಲ್ಲಿಸುತ್ತ ಬಂದರೆ ಕೆಲವು ದಿನಗಳಲ್ಲಿಯೆ ಘಮಘಮಿಸುವ ಸುವಾಸನೆಯು ತೋರಿಬರುವುದು. ಇದರಿಂದ ವಿಷಯ ಸಂಯೋಗವಿಲ್ಲದೆಯೇ ಮನಸ್ಸಿಗೆ ಗೋಚರಿಸುವ ಅನುಭವಗಳು ಕೆಲವು ಉಂಟೆಂಬುದು ಚೆನ್ನಾಗಿ ಗೊತ್ತಾಗುವುದು. ಆದರೆ ಇವುಗಳೆಲ್ಲ ಸಾಧನ ಮಾತ್ರವೆಂಬುದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ನಿಜವಾದ ಉದ್ದೇಶವು – ಅಂದರೆ ನಮಗೆ ಬೇಕಾದದ್ದು ಅಥವಾ ನಾವು ಕೊನೆಯಲ್ಲಿ ಪಡೆಯಬೇಕಾಗಿರುವುದು–ಮುಕ್ತಿ. ಪ್ರಕೃತಿಯನ್ನೆಲ್ಲ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳುವುದೇ ನಮ್ಮ ಪರಮೋದ್ದೇಶವಾಗಿರಬೇಕೇ ಹೊರತು ನಮ್ಮ ಆಸೆ ಅದಕ್ಕಿಂತ ಕೆಳಕ್ಕೆ ಇಳಿಯಬಾರದು. ನಾವು ಪ್ರಕೃತಿಗೆ ಯಜಮಾನರಾಗಿರಬೇಕೇ ಹೊರತು ದಾಸರಾಗಬಾರದು. ಶರೀರವೇ ಆಗಲಿ, ಮನಸ್ಸೇ ಆಗಲಿ, ನಮ್ಮನ್ನು ವಶಗೊಳಿಸಿಕೊಳ್ಳಬಾರದು. ಶರೀರವು ನಮ್ಮದೇ ಹೊರತು ನಾವು ಶರೀರದವರಲ್ಲವೆಂಬುದನ್ನು ಎಂದಿಗೂ ಮರೆಯದೆ ಇರಬೇಕು.

ಒಬ್ಬ ದೇವಪುರುಷನೂ[1] ಒಬ್ಬ ರಾಕ್ಷಸನೂ ಒಬ್ಬಾನೊಬ್ಬ ಜ್ಞಾನಿಯ ಬಳಿಗೆ ಅಧ್ಯಾತ್ಮ ಜ್ಞಾನವನ್ನು ಕಲಿಯುವುದಕ್ಕಾಗಿ ಹೋದರು. ಬಹುಕಾಲ ಅವನಲ್ಲಿದ್ದು ಅಭ್ಯಾಸ ಮಾಡಿದ ಮೇಲೆ ಆ ಜ್ಞಾನಿಯು ಅವರನ್ನು ಕರೆದು "ನೀವು ಯಾವ ವಸ್ತುವನ್ನು ಹುಡುಕುತ್ತಿರುವಿರೊ ಅದೇ ನೀವು" ಎಂದು ಹೇಳಿದನು. ಅವರಿಬ್ಬರೂ ದೇಹವೇ ಆತ್ಮವೆಂದು ತಿಳಿದುಕೊಂಡರು. ಅವರು

1. ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವ ಇಂದ್ರವಿರೋಚನರ ಕಥೆಯ ಸಾರವೇ ಇದು.

ಸಂತೋಷದಿಂದ ತಮ್ಮ ಜನರ ಬಳಿಗೆ ಹೋಗಿ "ತಿಳಿಯತಕ್ಕದ್ದನ್ನೆಲ್ಲ ತಿಳಿದುಕೊಂಡು ಬಂದಿದ್ದೇವೆ. ಮನಬಂದಂತೆ ಆಹಾರಪಾನಗಳನ್ನು ಮಾಡುತ್ತ ಸುಖವಾಗಿರಿ. ನಾವೇ ಆತ್ಮವು. ನಮ್ಮನ್ನು ಬಿಟ್ಟರೆ ಮತ್ತಾವ ತತ್ತ್ವವೂ ಇಲ್ಲ, ಎಂದು ಹೇಳಿದರು. ರಾಕ್ಷಸನು ಸ್ವಭಾವದಲ್ಲಿ ಏನೂ ಅರಿಯದ ಮಡ್ಡಿಯಾಗಿದ್ದನು. ಆದುದರಿಂದ ಅವನು ಮುಂದೆ ವಿಚಾರವನ್ನೇ ಮಾಡದೆ ತಾನೇ ದೇವರೆಂದೂ ಆತ್ಮನೆಂದರೆ ಶರೀರವೆಂದೂ ಸಂಪೂರ್ಣವಾಗಿ ನಂಬಿಕೊಂಡು ಬಿಟ್ಟನು. ದೇವ ಪುರುಷನು ಇವನಿಗಿಂತ ಹೆಚ್ಚು ಪರಿಶುದ್ಧ ಸ್ವಭಾವವುಳ್ಳವನಾಗಿದ್ದನು. ಅವನು ಮೊದಲು "ಈ ಶರೀರವೆಂಬ ನಾನೆ ಬ್ರಹ್ಮವು. ಆದುದರಿಂದ ಶರೀರವನ್ನು ಬಲವಾಗಿ ರೋಗವಿಲ್ಲದಂತೆ ಇಟ್ಟುಕೊಳ್ಳಬೇಕು; ಚೆನ್ನಾಗಿ ಬಟ್ಟೆ ಬರೆಗಳನ್ನು ಹಾಕಿಕೊಂಡು ವಿಧ ವಿಧವಾಗಿ ಸುಖಪಡಿಸಬೇಕು" ಎಂದು ಯೋಚಿಸಿಕೊಂಡನು. ಆದರೆ ಕೆಲವು ದಿನಗಳಲ್ಲಿಯೆ ತಮ್ಮ ಗುರುವಾದ ಆ ಮಹಾತ್ಮನ ಅಭಿಪ್ರಾಯವು ಹೀಗಿರಲಾರದೆಂದು ಅವನಿಗೆ ತೋರಿತು. ಆದುದರಿಂದ ಅವನು ಮತ್ತೆ ಅವನ ಬಳಿಗೆ ಬಂದು "ಸ್ವಾಮಿ, ಈ ಶರೀರವೇ ಆತ್ಮವೆಂದು ಅಪ್ಪಣೆ ಕೊಡಿಸೋಣವಾಯಿತೆ ಹೇಗೆ? ಹಾಗಾದರೆ ಎಲ್ಲಾ ಶರೀರಗಳೂ ಸಾಯುತ್ತವೆಯಲ್ಲ! ಆತ್ಮವು ಸಾಯಲಾರದಷ್ಟೆ?" ಎಂದು ಕೇಳಿದನು. ಆಗ ಗುರುವು "ವಿಚಾರ ಮಾಡಿ ಕಂಡುಹಿಡಿಯಬೇಕು; ನೀನೇ ಆ ತತ್ತ್ವವಾಗಿರುವೆ" ಎಂದನು. ಆಗ ದೇವಪುರುಷನು ಶರೀರದಲ್ಲಿರುವ ಆ ಪ್ರಾಣಗಳೇ ಆ ಜ್ಞಾನಿಯು ಹೇಳಿದ ಆತ್ಮವೆಂದು ಭಾವಿಸಿದನು. ಆದರೆ ಸ್ವಲ್ಪ ದಿನಗಳಲ್ಲಿ ಪ್ರಾಣಗಳು ಆಹಾರದಿಂದ ವೃದ್ಧಿಯಾಗುವುದನ್ನೂ ಹಸಿವಿನಿಂದ ಕ್ಷಯವಾಗುವುದನ್ನೂ ಕಂಡು ಮತ್ತೆ ಗುರುವಿನ ಬಳಿಗೆ ಹೋಗಿ "ಸ್ವಾಮಿ, ಪ್ರಾಣವೇ ಆತ್ಮನೆಂದು ತಮ್ಮ ಅಭಿಪ್ರಾಯವೆ?" ಎಂದು ಕೇಳಿದನು. ಆತನು "ನೀನೇ ನೋಡಿ ಗೊತ್ತು ಮಾಡು; ನೀನೇ ಅದಾಗಿರುವೆ" ಎಂದನು. ದೇವಪುರುಷನು ಮನಸ್ಸು ಆತ್ಮವಾಗಿರಬಹುದೆಂದೂಹಿಸಿಕೊಂಡು ಮತ್ತೆ ಮನೆಗೆ ಬಂದನು. ಆದರೆ ಆಲೋಚನೆಗಳು ಈಗ ಒಂದು ವಿಧವಾಗಿಯೂ ಆಗ ಒಂದು ವಿಧವಾಗಿಯೂ ಹೀಗೆ ನಾನಾವಿಧವಾಗಿರುವುದರಿಂದ ಇಷ್ಟು ವಿಕಾರಿಯಾದ ಮನಸ್ಸು ಆತ್ಮವಾಗಲಾರದೆಂದು ಬಹು ಬೇಗ ಅವನಿಗೆ ಗೊತ್ತಾಯಿತು. ಆಗ ಆ ಜ್ಞಾನಿಯ ಬಳಿಗೆ ಹೋಗಿ "ಸ್ವಾಮಿ, ಮನಸ್ಸು ಆತ್ಮನೆಂದು ತೋರುವುದಿಲ್ಲ. ತಮ್ಮ ಅಭಿಪ್ರಾಯವು ಮನಸ್ಸೆಂದಿತ್ತೆ?" ಎಂದನು. ಆಗ ಗುರು "ನನ್ನ ಅಭಿಪ್ರಾಯವು ಅದಲ್ಲ, ನೀನೇ ಅದಾಗಿರುವೆ. ಚೆನ್ನಾಗಿ ನೋಡಿ ಗೊತ್ತು ಮಾಡಿಕೊ" ಎಂದನು. ಆಗ ಆ ನಿರ್ಜರನು ಮನೆಗೆ ಹೋಗಿ ಕೊನೆಗೆ ತಾನು ಮನಸ್ಸಿಗೂ ಅತೀತವಾಗಿಯೂ, ಏಕವಾಗಿಯೂ, ಜನನ ಮರಣರಹಿತವಾಗಿಯೂ, ಶಸ್ತ್ರದಿಂದ ಛೇದಿಸುವುದಕ್ಕಾಗಲಿ, ಬೆಂಕಿಯಿಂದ ಸುಡುವುದಕ್ಕಾಗಲಿ, ಗಾಳಿಯಿಂದ ಒಣಗಿಸುವುದಕ್ಕಾಗಲಿ, ನೀರಿನಿಂದ ಕರಗಿಸುವುದಕ್ಕಾಗಲಿ ಆಗದವನಾಗಿಯೂ, ಮೊದಲು ಕೊನೆಗಳಿಲ್ಲದವನಾಗಿಯೂ, ಅಲ್ಲಾಡಿಸುವುದಕ್ಕಾಗದವನಾಗಿಯೂ, ಮುಟ್ಟುವುದಕ್ಕಾಗದವನಾಗಿಯೂ, ಸರ್ವವ್ಯಾಪಕನಾಗಿಯೂ, ಸರ್ವಶಕ್ತನಾಗಿಯೂ ಇರುವ ಆತ್ಮ ವಸ್ತುವೇ ತಾನೆಂದು ಕಂಡುಕೊಂಡನು. ಆ ವಸ್ತು ಶರೀರವೂ ಅಲ್ಲ; ಮನಸ್ಸೂ ಅಲ್ಲ; ಎಲ್ಲಕ್ಕೂ ಅತೀತವಾಗಿರುವುದೆಂದು ಗೊತ್ತಾಯಿತು. ಆಗ ಅವನಿಗೆ ತೃಪ್ತಿಯಾಯಿತು. ಆದರೆ ಆ ರಾಕ್ಷಸನಿಗೆ ಮಾತ್ರ ಶರೀರದ ಮೇಲೆ ಅತಿ ಪ್ರೀತಿಯಿದ್ದುದರಿಂದ ನಿಜವಾವುದೆಂಬುದು ಗೊತ್ತಾಗಲಿಲ್ಲ.

ಈ ಪ್ರಪಂಚದಲ್ಲಿ ಇಂಥ ಅಸುರ ಸ್ವಭಾವದವರು ಬಹು ಮಂದಿ ಇರುವರು; ಕೆಲವರು ದೇವತೆಗಳು ಇರುವರು. ಇಂದ್ರಿಯಭೋಗವನ್ನು ಹೆಚ್ಚಿಸುವ ಶಾಸ್ತ್ರವನ್ನು ಕಲಿಸುತ್ತೇವೆಂದರೆ ಕಲಿಯುವುದಕ್ಕೆ ಎಷ್ಟೋ ಜನರು ಸಿದ್ಧರಾಗಿರುವರು. ಪರಮಪುರುಷಾರ್ಥವನ್ನು ತಿಳಿಸುತ್ತೇನೆಂದು ಯಾರಾದರೂ ಬಂದರೆ ಮಾತ್ರ ಅವನನ್ನು ಕೇಳುವವರೆ ಇರುವುದಿಲ್ಲ. ಪರಮತತ್ತ್ವವನ್ನು ತಿಳಿಯುವುದಕ್ಕೆ ಶಕ್ತಿಯಿರುವವರೆ ಕಡಿಮೆ. ಅದನ್ನು ಪಡೆಯುವವರೆಗೆ ಪ್ರಯತ್ನಮಾಡುವಷ್ಟು ತಾಳ್ಮೆಯುಳ್ಳವರು ಇನ್ನೂ ಕಡಿಮೆ. ಆದರೆ ಶರೀರವು ಒಂದು ಸಾವಿರವರ್ಷ ಬದುಕಿರುವಂತೆ ಮಾಡಿಕೊಂಡರೆ ಕೊನೆಗಾಗುವ ಪರಿಣಾಮವೆಲ್ಲ ಒಂದೇ ಎಂದು ತಿಳಿದುಕೊಂಡಿರುವವರೂ ಕೆಲಕೆಲವರು ಇದ್ದಾರೆ. ಶರೀರವನ್ನು ಬಿಗಿ ಹಿಡಿದಿರುವ ಶಕ್ತಿ ವಿಶೇಷಗಳು ಅರುಗಾಗುತ್ತಲೆ ಶರೀರವು ನಾಶವಾಗಲೇಬೇಕು. ಒಂದು ಕ್ಷಣ ಹೊತ್ತಾದರೂ ವಿಕಾರಹೊಂದದಂತೆ ಶರೀರವನ್ನು ಇಟ್ಟು ಕೊಳ್ಳಬಲ್ಲಾತನು ಯಾರೂ ಇದುವರೆಗೆ ಹುಟ್ಟಲಿಲ್ಲ. ಶರೀರವೆಂದರೇ ಕೆಲವು ವಿಕಾರಗಳ ಸಮೂಹವೆಂದರ್ಥ. ನದಿಯಲ್ಲಿ ನೀರು ಪ್ರತಿಕ್ಷಣವೂ ಬೇರೆ ಬೇರೆ ಆಗುತ್ತಿದ್ದರೂ ಹೊಸ ಹೊಸ ನೀರು ಅದೇ ರೂಪದಲ್ಲಿ ಬರುತ್ತಿರುವಂತೆ ಶರೀರದಲ್ಲಿಯೂ ನಡೆಯುತ್ತಿರುವುದು.

ಆದರೂ ಶರೀರವನ್ನು ದೃಢವಾಗಿಯೂ ಅರೋಗವಾಗಿಯೂ ಇಟ್ಟುಕೊಂಡಿರಬೇಕು. ಈ ಪ್ರಪಂಚದಲ್ಲಿ ಮನುಷ್ಯ ಶರೀರವೇ ಉತ್ತಮವಾದುದು; ಮತ್ತು ಮನುಷ್ಯನೇ ಉತ್ತಮ ಪ್ರಾಣಿಯು. ಮನುಷ್ಯನು ಎಲ್ಲಾ ಪ್ರಾಣಿಗಳಿಗಿಂತಲೂ ಉತ್ತಮವಾಗಿರುವುದಲ್ಲದೆ ದೇವತೆ ಗಳಿಗಿಂತಲೂ ಹೆಚ್ಚಾದವನಾಗಿದ್ದಾನೆ. ಮನುಷ್ಯನಿಗಿಂತ ಅಧಿಕರಾದವರೇ ಇಲ್ಲ. ದೇವತೆಗಳು ಕೂಡ ಮತ್ತೆ ಮತ್ತೆ ಹುಟ್ಟಿ ಮನುಷ್ಯ ಶರೀರದಲ್ಲಿ ಮುಕ್ತಿಯನ್ನು ಪಡೆಯಬೇಕಾಗುವುದು. ಮನುಷ್ಯನೊಬ್ಬನು ಸಂಸಿದ್ಧಿಯನ್ನು ಪಡೆಯುತ್ತಾನೆಯೆ ಹೊರತು ದೇವತೆಗಳು ಕೂಡ ಪಡೆಯಲಾರರು. "ದೇವರು ದೇವತೆಗಳನ್ನೂ ಇತರ ಎಲ್ಲಾ ಪದಾರ್ಥಗಳನ್ನೂ ಸೃಷ್ಟಿ ಮಾಡಿದ ಮೇಲೆ ಮನುಷ್ಯನನ್ನು ಸೃಷ್ಟಿಸಿದನು. ಆಮೇಲೆ ದೇವತೆಗಳನ್ನೆಲ್ಲ ಕರೆದು ಇವನಿಗೆ ನಮಸ್ಕಾರ ಮಾಡಿರೆಂದನು. ಅದರಂತೆ ಇಬ್ಲಿಸ್ ಎಂಬ ದೇವತೆಯೊಬ್ಬ ಹೊರತು ಮಿಕ್ಕವರೆಲ್ಲರೂ ನಮಸ್ಕರಿಸಿದರು. ದೇವರು ಇಬ್ಲಿಸನನ್ನು ಶಪಿಸಲು ಅವನು ಸೈತಾನನಾದನು"[1] ಎಂದು ಯಹೂದಿಯರೂ, ಮಹಮ್ಮದೀಯರೂ ಹೇಳುತ್ತಾರೆ. ಈ ರೂಪಕಾಖ್ಯಾನದಲ್ಲಿರುವ[2] ತತ್ತ್ವವೇನೆಂದರೆ ಮನುಷ್ಯಜನ್ಮವೇ ಎಲ್ಲಕ್ಕೂ ಶ್ರೇಷ್ಠವಾದದ್ದು. ತಿರ್ಯಗ್ಜಂತುವಿನ ಸೃಷ್ಟಿಯು ಮನುಷ್ಯನಿಗಿಂತ ಕಡಿಮೆಯಾಗಿ ಬುದ್ಧಿ ಶೂನ್ಯವಾಗಿರುವುದು ಬಹಳಮಟ್ಟಿಗೆ ತಮಸ್ಸಿನಿಂದಲೇ ಆಗಿರುವುದು. ಆದುದರಿಂದ ಪಶು ಪಕ್ಷಿಗಳಿಗೆ ಉತ್ತಮ ವಿಚಾರ ಬರುವುದಕ್ಕವಕಾಶವಿಲ್ಲ. ದೇವತೆಗಳಿಗೂ ಕೂಡ ಮನುಷ್ಯ ಜನ್ಮವಿಲ್ಲದೆ ಸಾಕ್ಷಾತ್ತಾಗಿ ಮುಕ್ತಿಯಾಗಲಾರದು. ಇದರಂತೆ ಮನುಷ್ಯ ವರ್ಗದಲ್ಲಿಯೂ ಕೂಡ ಬಹಳ ಸಂಪತ್ತಿದ್ದರೂ ಬಹಳ ದಾರಿದ್ರ್ಯವಿದ್ದರೂ ಆತ್ಮ ವಿಕಾಸಕ್ಕೆ

1. "ದೇವರು ಒಳ್ಳೆಯದಕ್ಕೆಲ್ಲ ಕಾರಣನು. ಸೈತಾನನು ಕೆಟ್ಟದ್ದಕ್ಕೆಲ್ಲ ಕಾರಣನು" ಎಂದು ಇವರು ಹೇಳುತ್ತಾರೆ. ಸೈತಾನ್ ಎಂಬ ಶಬ್ದವು ನಮ್ಮ ದರ್ಶನಗಳಲ್ಲಿರುವ "ಅವಿದ್ಯೆ" ಎಂಬುದರಂತೆ ಅನರ್ಥ ಬೀಜವೆಂದು ಎಣಿಸಲ್ಪಟ್ಟಿರುತ್ತೆ.

2. ರೂಪಕಾಖ್ಯಾನವೆಂದರೆ ಯಾವುದಾದರೂ ಒಂದು ತತ್ತ್ವವನ್ನು ಅದಕ್ಕೊಂದು ಕಥೆಯ ರೂಪವನ್ನು ಕೊಟ್ಟು ತಿಳಿಸುವುದು.

ದೊಡ್ಡ ತಡೆಯಾಗುವುದು. ಜಗತ್ತಿನಲ್ಲಿ ಪ್ರಸಿದ್ಧರಾಗುವವರು ನಡುತರದ ಜನರಲ್ಲಿಯೆ ಹುಟ್ಟುವರು. ಏಕೆಂದರೆ ಎಲ್ಲಾ ಸಾಮಗ್ರಿಗಳೂ ಏರುಪೇರುಗಳಿಲ್ಲದಂತೆ ಒಂದೇ ಸಮವಾಗಿ ಸೇರಿರುತ್ತವೆ.

ಇನ್ನು ಪ್ರಕೃತ ವಿಷಯವನ್ನನುಸರಿಸೋಣ. ಪ್ರಾಣಾಯಾಮ ಎಂದರೆ ಶ್ವಾಸವನ್ನು ಸ್ವಾಧೀನಕ್ಕೆ ತಂದುಕೊಳ್ಳುವುದು ಮುಂದಿನ ಸಾಧನವಾಗಿರುವುದು. ಇದರಿಂದ ಮನಃಶಕ್ತಿಗಳನ್ನು ಏಕೀಕರಿಸುವುದಕ್ಕೇನು ಪ್ರಯೋಜನವಾಗುತ್ತದೆ? ಎಂದರೆ ಉಸಿರೆಂಬುದು ಶರೀರವೆಂಬ ಯಂತ್ರಕ್ಕೆ ಪ್ರಧಾನ ಚಕ್ರವಾಗಿದೆ. ದೊಡ್ಡದಾಗಿರುವ ಎಂಜಿನ್ನೆಂಬ ಶಕ್ತಿಯಂತ್ರದಲ್ಲಿ ಮೊದಲು ಪ್ರಧಾನ ಚಕ್ರವು ತಿರುಗುವುದು. ಈ ಚಲನೆಯು ಸಣ್ಣ ಸಣ್ಣ ಸಾಮಾನುಗಳಿಗೆ ತಾಕುತ್ತ ಕೊನೆಗೆ ಅತ್ಯಂತ ಸೂಕ್ಷ್ಮವಾಗಿರುವ ತೀರ ಕಡೆಯ ಯಂತ್ರ ಭಾಗಗಳೂ ಕೂಡ ಚಲಿಸುವಂತಾಗುವುದು. ಈ ಶರೀರದಲ್ಲಿರುವ ಪ್ರತಿಯೊಂದು ಭಾಗಕ್ಕೆ ಚಲನಶಕ್ತಿಯನ್ನು ಕೊಟ್ಟು ಆ ಚಲನೆಯನ್ನು ಕ್ರಮಪಡಿಸುವುದರಲ್ಲಿ ಶ್ವಾಸವೆಂಬುದೇ ಪ್ರಧಾನಚಕ್ರವಾಗಿದೆ. ಒಬ್ಬಾನೊಬ್ಬ ಮಹಾರಾಜನ ಬಳಿಯಲ್ಲಿ ಒಬ್ಬ ಮಂತ್ರಿಯಿದ್ದನು. ಅವನಿಂದ ಏನೋ ಅಪರಾಧವಾಯಿತು. ದೊರೆಯು ಅವನನ್ನು ಶಿಕ್ಷೆ ಮಾಡುವುದಕ್ಕಾಗಿ ಬಹು ಎತ್ತರವಾದ ಬುರುಜಿನ ಮೇಲ್ಗಡೆಯಲ್ಲಿಡುವಂತೆ ಅಪ್ಪಣೆ ಮಾಡಿದನು. ಆಮೇಲೆ ಮಂತ್ರಿಯು ಅಲ್ಲಿಯೇ ಸಾಯಬೇಕಾಗಿ ಬಂತು. ಅವನಿಗೆ ಪತಿಪರಾಯಣಳಾದ ಒಬ್ಬ ಹೆಂಡತಿ ಇದ್ದಳು. ಈಕೆಯು ರಾತ್ರಿಯ ಹೊತ್ತಿನಲ್ಲಿ ಆ ಬುರುಜಿನ ಹತ್ತಿರಕ್ಕೆ ಬಂದು ಮೇಲಿರುವ ಗಂಡನನ್ನು ಕುರಿತು ತನ್ನಿಂದಾಗಬೇಕಾದ ಸಹಾಯವೇನೆಂದು ಕೇಳಿದಳು. ಗಂಡನು "ನಾಳೆಯ ದಿನ ರಾತ್ರಿ ಇಲ್ಲಿಗೆ ಬರುವಾಗ ಒಂದು ದೊಡ್ಡ ಹಗ್ಗ, ಸ್ವಲ್ಪ ದಪ್ಪವಾಗಿ ಹೊಸೆದ ಹುರಿ, ತಬಲಕದಾರ, ರೇಷ್ಮೇ ನೂಲು, ಒಂದು ಜೀರುಂಬೇಹುಳು, ಒಂದಿಷ್ಟು ಜೇನುತುಪ್ಪ ಇಷ್ಟನ್ನು ತೆಗೆದುಕೊಂಡು ಬಾ" ಎಂದು ಹೇಳಿದನು. ಆ ಸ್ತ್ರೀಯು ಇದನ್ನು ಕೇಳಿ ಬೆರಗಾಗಿ ತನ್ನ ಗಂಡನು ಹೇಳಿದಂತೆ ಪದಾರ್ಥಗಳನ್ನು ತಂದಳು. ಆಗ ಗಂಡನು ರೇಷ್ಮೆಯ ನೂಲನ್ನು ಗಟ್ಟಿಯಾಗಿ ಹುಳುವಿಗೆ ಕಟ್ಟಿ ಒಂದು ತೊಟ್ಟು ಜೇನು ತುಪ್ಪವನ್ನು ಹುಳುವಿನ ಮುಸುಡಿಗೆ ಸವರಿ ತಲೆಯನ್ನು ಮೇಲೆ ಮಾಡಿ ಹುಳುವನ್ನು ಬುರುಜಿನ ಗೋಡೆಯ ಮೇಲೆ ಬಿಡೆಂದು ಹೇಳಿದನು. ಆಕೆಯು ಅವನು ಹೇಳಿದಂತೆ ಮಾಡಲು ಜೀರುಂಬೆಯು ಅಲ್ಲಿಂದ ಹೊರಟು ಮುಂಗಡೆಯಲ್ಲಿ ಜೇನು ತುಪ್ಪದ ವಾಸನೆ ಬರುತ್ತಿದ್ದರಿಮದ ಆ ತುಪ್ಪದ ಆಸೆಗಾಗಿ ಮೇಲಮೇಲಕ್ಕೆ ಮೆಲ್ಲಮೆಲ್ಲಗೆ ಹರಿದಾಡಿಕೊಂಡು ಹೋಯಿತು. ಕೊನೆಗೆ ಅದು ಬುರುಜಿನ ತುದಿಯನ್ನು ಮುಟ್ಟುತ್ತಲೆ ಮಂತ್ರಿಯು ಹುಳುವನ್ನು ಹಿಡಿದುಕೊಂಡು ರೇಷ್ಮೆಯ ನೂಲನ್ನು ಕೈಗೆ ತೆಗೆದುಕೊಂಡನು. ಆಗ ಅವನು ತನ್ನ ಹೆಂಡತಿಗೆ ನೂಲಿನ ಇನ್ನೊಂದು ಕಡೆಗೆ ಹುರಿಯನ್ನು ಕಟ್ಟುವಂತೆ ಹೇಳಿದನು. ಆ ಹುರಿಯನ್ನು ಎಳೆದುಕೊಂಡು ಇದೇ ರೀತಿಯಲ್ಲಿ ತಬಲಕದಾರವನ್ನೂ ಕೊನೆಗೆ ಹಗ್ಗವನ್ನೂ ಕಟ್ಟಿಸಿ ತನ್ನ ಕಡೆಗೆ ಎಳೆದುಕೊಂಡನು. ಆಮೇಲೆ ಇನ್ನಾವ ಕಷ್ಟವೂ ಉಳಿಯಲಿಲ್ಲ. ಮಂತ್ರಿಯು ಹಗ್ಗದ ಸಹಾಯದಿಂದ ಕೆಳಕ್ಕೆ ಇಳಿದು ತಪ್ಪಿಸಿಕೊಂಡನು. ಈ ನಮ್ಮ ಶರೀರದಲ್ಲಿ ಶ್ವಾಸ ಸಂಚಾರವೇ ರೇಷ್ಮೆಯ ನೂಲು. ಇದನ್ನು ಹಿಡಿದು ಸ್ವಾಧೀನಕ್ಕೆ ತಂದುಕೊಂಡ ಮೇಲೆ ನಾಡೀಸಂಚಾರವೆಂಬ ತಬಲಕದಾರವು ಕೈಗೆ ಸಿಕ್ಕುವುದು. ಇದರಿಂದ ಆಲೋಚನೆಗಳೆಂಬ ಹೊಸೆದ ಹುರಿಗಳು ಸಿಕ್ಕುವುವು. ಕೊನೆಗೆ ಪ್ರಾಣವೆಂಬ ಹಗ್ಗವು ಸಿಕ್ಕುವುವು. ಇದು ಸ್ವಾಧೀನವಾದೊಡನೆಯೆ ಮುಕ್ತಿ ಕೈಸೇರುವುದು.

ನಮಗೆ ನಮ್ಮ ಶರೀರದ ವಿಷಯದಲ್ಲಿ ಏನೂ ಗೊತ್ತಿಲ್ಲ. ತಿಳಿದುಕೊಳ್ಳುವುದಕ್ಕೇ ಆಗುವಂತಿಲ್ಲ. ನಮ್ಮ ಕೈಲಾಗುವುದೇನೆಂದರೆ:– ಒಂದು ಹೆಣವನ್ನು ಹಿಡಿದುಕೊಂಡು ಕೊಯ್ಯಬಹುದು. ಶರೀರದೊಳಗೆ ಏನಿದೆ ಎಂಬುದನ್ನು ನೋಡುವುದಕ್ಕಾಗಿ ಬದುಕಿದ ಪ್ರಾಣಿಯೊಂದನ್ನು ಹಿಡಿದು ತುಂಡುತುಂಡುಮಾಡುವವರೂ ಕೆಲವರಿದ್ದಾರೆ. ಇದು ಹೇಗಾದರೂ ಇರಲಿ. ಇದರಿಂದ ನಮ್ಮ ಶರೀರಗಳ ವಿಚಾರವೇನೂ ಗೊತ್ತಾದಂತಾಗುವುದಿಲ್ಲ. ನಮಗೆ ಇವುಗಳ ವಿಷಯದಲ್ಲಿ ಗೊತ್ತಿರುವುದು ಬಹು ಸ್ವಲ್ಪ. ನಮಗೇಕೆ ಈ ವಿಚಾರವು ಗೊತ್ತಿಲ್ಲವೆಂದರೆ ಒಳಗೆ ನಡೆಯುತ್ತಿರುವ ಬಹು ಸೂಕ್ಷ್ಮ ವ್ಯಾಪಾರಗಳನ್ನು ವಿವೇಚನೆ ಮಾಡುವಷ್ಟು ಗಮನವಿಟ್ಟು ನೋಡುವ ಶಕ್ತಿಯು ನಮಗೆ ಇರುವುದಿಲ್ಲ. ಈ ಸೂಕ್ಷ್ಮಾನುಭವವು ಉಂಟಾಗಬೇಕಾದರೆ ಮೊದಲು ಸ್ಥೂಲದಿಂದ ಪ್ರಾರಂಭಿಸಬೇಕು. ಈ ಶರೀರ ಯಂತ್ರವನ್ನೆ ಚಾಲನೆಯಲ್ಲಿಟ್ಟಿರುವದಾವುದೋ ಅದನ್ನೆ ಹಿಡಿಯಬೇಕು. ಇದೇ ಪ್ರಾಣವು. ಶ್ವಾಸವೇ ಇದರ ವ್ಯಕ್ತ ರೂಪವು. ಹೀಗೆ ಶ್ವಾಸವನ್ನನುಸರಿಸಿದರೆ ಮೆಲ್ಲಗೆ ಶರೀರದೊಳಹೊಕ್ಕು ಇದರೊಳಗೆ ನಡೆಯುವ ನಾಡೀ ಸಂಚಾರಗಳೆಂಬ ಸೂಕ್ಷ್ಮವ್ಯಾಪಾರಗಳನ್ನು ಕಂಡು ಹಿಡಿಯುವುದಕ್ಕೆ ಬರುತ್ತದೆ. ಈ ವ್ಯಾಪಾರಗಳು ನಮಗೆ ಗೊತ್ತಾಗಿ ಅನುಭವಕ್ಕೆ ಬರುತ್ತಲೆ ಅವುಗಳೂ ಶರೀರವೂ ನಮ್ಮ ಸ್ವಾಧೀನಕ್ಕೆ ಬರುವುದಕ್ಕೆ ಆರಂಭಿಸುತ್ತವೆ. ಈ ನಾಡೀ ಸಂಚಾರದಿಂದಲೇ ಮನಸ್ಸು ವ್ಯಾಪಾರ ಮಾಡುತ್ತಿರುವುದರಿಂದ ಕೊನೆಗೆ ಶರೀರವೂ ಮನಸ್ಸೂ ಸಂಪೂರ್ಣವಾಗಿ ನಮ್ಮ ಕೈಗೆ ಸಿಕ್ಕಿ ಎರಡೂ ನಮ್ಮ ದಾಸರಾಗುತ್ತವೆ. ಜ್ಞಾನವೇ ಶಕ್ತಿಯಾಗುವುದು. ನಮಗೆ ಈ ಶಕ್ತಿಬರಬೇಕಾಗಿರುವುದರಿಂದ ಮೊದಲಿನಿಂದ ಎಂದರೆ ಪ್ರಾಣಾಯಾಮದಿಂದ ಆರಂಭಿಸಬೇಕು. ಪ್ರಾಣಾಯಾಮವೆಂದರೆ ಪ್ರಾಣವನ್ನು ಬಿಗಿಹಿಡಿವುದು. ಈ ಪ್ರಾಣಾಯಾಮವೆಂಬುದು ದೊಡ್ಡ ವಿಷಯವಾದುದರಿಂದ ಇದನ್ನು ಸರಿಯಾಗಿ ವಿವರಿಸುವುದಕ್ಕೆ ಬಹಳ ಹೇಳಬೇಕಾಗುತ್ತದೆ. ಅದನ್ನೆ ಇದರಲ್ಲಿ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ವಿಚಾರಮಾಡೋಣ.

ಪ್ರತಿಯೊಂದು ಸಾಧನವನ್ನು ಮಾಡಬೇಕಾದ ಕಾರಣವೂ ಶರೀರದಲ್ಲಿ ಯಾವ ಯಾವ ಶಕ್ತಿ ವಿಶೇಷಗಳು ಹುಟ್ಟುತ್ತವೆಂಬುದೂ ಕ್ರಮ ಕ್ರಮವಾಗಿ ಗೊತ್ತಾಗುತ್ತವೆ. ಆದರೆ ಇವೆಲ್ಲವೂ ಗೊತ್ತಾಗುವುದಕ್ಕೆ ಒಂದೇ ಸಮವಾಗಿ ಅಭ್ಯಾಸಮಾಡಬೇಕು, ಈ ಅಭ್ಯಾಸದಿಂದಲೇ ನಮಗೆ ಇವು ನಿಜವೆನಿಸಬೇಕು. ನೀವೇ ಅಭ್ಯಾಸವಾಡಿ ತಿಳಿದುಕೊಂಡ ಹೊರತು ನಾನು ಎಷ್ಟು ಯುಕ್ತಿಯುಕ್ತವಾಗಿ ಹೇಳಿದರೂ ನಿಮಗೆ ಪ್ರಮಾಣವೆನಿಸಲಾರದು. ನಿಮ್ಮಲ್ಲಿ ಈ ಶಕ್ತಿ ವಿಶೇಷಗಳು ಎಲ್ಲಾ ಕಡೆಯಲ್ಲಿ ಹರಿದಾಡುವುದಕ್ಕೆ ಪ್ರಾರಂಭವಾದೊಡನೆ ಸಂಶಯಗಳೆಲ್ಲ ತೊಲಗಿಹೋಗುತ್ತವೆ. ಆದರೆ ಇದಕ್ಕೆ ಪ್ರತಿದಿನವೂ ಕಷ್ಟಪಟ್ಟು ಚೆನ್ನಾಗಿ ಅಭ್ಯಾಸ ಮಾಡುವುದು ಅವಶ್ಯ. ಕಟ್ಟಕಡೆಗೆ ದಿನಕ್ಕೆರಡುಸಲವಾದರೂ ಅಭ್ಯಾಸಮಾಡಬೇಕು. ಬೆಳಗಿನ ಜಾವ, ಮೂರು ಸಂಜೆಯ ಹೊತ್ತು ಇವು ಬಹು ಅನುಕೂಲವಾದ ಕಾಲಗಳು. ರಾತ್ರಿ ಕಳೆದು ಹಗಲು ಬರುತ್ತಿರುವಾಗಲೂ, ಹಗಲು ಕಳೆದು ರಾತ್ರಿಯಾಗುತ್ತಿರುವಾಗಲೂ ಒಂದು ಬಗೆಯ ಶಾಂತಸ್ಥಿತಿಯು ಬರುತ್ತದೆ. ಮುಂಜಾನೆಯ ಹೊತ್ತು ಮುಸ್ಸಂಜೆಯ ಹೊತ್ತು ಇವೆರಡೂ ಶಾಂತಿಯ ಕಾಲಗಳು. ಆದುದರಿಂದ ಆ ಕಾಲದಲ್ಲಿ ಶರೀರಕ್ಕೆ ಶಾಂತಸ್ಥಿತಿಗೆ ಬರುವುದಕ್ಕೆ ಅನುಕೂಲ್ಯವಿರುವುದು. ಆದ ಕಾರಣ ಈ ಸ್ವಭಾವಸಿದ್ಧ ವಿಷಯವನ್ನು ನಮ್ಮ ಅನುಕೂಲತೆಗೆ ಸರಿಪಡಿಸಿಕೊಂಡು ಅಭ್ಯಾಸ

ಮಾಡಬೇಕು; ಅಭ್ಯಾಸ ಮಾಡಿದ ಹೊರತು ಏನೂ ತಿನ್ನುವುದಿಲ್ಲವೆಂದು ನಿಯಮವನ್ನು ಮಾಡಿಕೊಳ್ಳಬೇಕು. ಇದರಿಂದ ಹಸಿವಿನ ಜೋರಿನಿಂದಲೇ ಸೋಮಾರಿತನವು ಹೋಗಿಬಿಡುತ್ತದೆ. ಇಂಡಿಯಾದಲ್ಲಿ ಪ್ರಾಣಾಯಾಮವನ್ನು ಮಾಡಿದ ಹೊರತು ಅಥವಾ ಪೂಜಾದಿಗಳನ್ನು ಆಚರಿಸಿದ ಹೊರತು ತಿಂಡಿಯನ್ನು ತಿನ್ನದಂತೆ ಮಕ್ಕಳಿಗೆ ಅಭ್ಯಾಸಮಾಡಿಸಿರುತ್ತಾರೆ. ಕೆಲವು ದಿನಗಳು ಹೀಗೆ ಮಾಡಿದ ಮೇಲೆ ಅವರಿಗೆ ಅದೇ ರೂಢಿಯಾಗಿಬಿಡುತ್ತದೆ. ಇದರಿಂದ ಹುಡುಗರಿಗೆ ಸ್ನಾನ ಮಾಡಿ ಅನುಷ್ಠಾನ ಮಾಡಿದ ಹೊರತು ಹಸಿವೇ ತೋರುವುದಿಲ್ಲ.

ನಿಮ್ಮಲ್ಲಿ ಅನುಕೂಲವಿದ್ದವರು ಈ ಅನುಷ್ಠಾನಕ್ಕೆ ಒಂದು ಬೇರೆ ಕೋಣೆಯನ್ನು ಮಾಡಿಕೊಳ್ಳುವುದು ಒಳ್ಳೇದು. ಆ ಕೋಣೆಯಲ್ಲಿ ಮಲಗಬಾರದು. ಅದನ್ನು ಪವಿತ್ರ ಸ್ಥಳವೆಂದು ಭಾವಿಸಿರಬೇಕು. ಅಲ್ಲಿಗೆ ಸ್ನಾನ ಮಾಡಿಕೊಂಡು ಶಾರೀರಶುದ್ಧಿ, ಮನಃಶುದ್ಧಿಗಳನ್ನು ಸಂಪೂರ್ಣವಾಗಿಟ್ಟುಕೊಂಡೇ ಹೋಗಬೇಕು. ಅಲ್ಲಿ ಯಾವಾಗಲೂ ಹೂಗಳನ್ನಿಟ್ಟಿರಬೇಕು. ಯೋಗಿಗೆ ಎಡಬಲದಲ್ಲಿರಬಹುದಾದ ವಸ್ತುಗಳೇ ಇವು. ಸುಂದರವಾದ ಮತ್ತು ಸಾತ್ತ್ವಿಕವಾದ ಚಿತ್ರಪಠಗಳನ್ನು ಇಟ್ಟಿರಬೇಕು. ಇಲ್ಲಿ ಬೆಳಗೂ ಬೈಗೂ ಧೂಪವನ್ನುರಿಸುತ್ತಿರಬೇಕು. ಈ ಕೋಣೆಯಲ್ಲಿರುವಾಗ ಜಗಳವಾಡಬಾರದು; ಸಿಟ್ಟುಮಾಡಬಾರದು; ಯಾವ ಕೆಟ್ಟ ಯೋಚನೆಯನ್ನೂ ಮಾಡಬಾರದು. ಹೀಗೆ ಮಾಡುತ್ತಿದ್ದರೆ ಸ್ವಲ್ಪ ದಿನಗಳಲ್ಲಿ ಆ ಕೋಣೆಯಲ್ಲಿ ಪವಿತ್ರತೆಯುಂಟಾಗುವುದು. ಆಗ ನಿಮಗೆ ದುಃಖವಾಗಲಿ, ಕಷ್ಟವಾಗಲಿ ಒದಗಿರುವಾಗಲೂ ಮನಸ್ಸಿಗೆ ಸಂದೇಹವುಂಟಾದಾಗ ಅಥವಾ ಚಂಚಲವಾಗಿರುವಾಗಲೂ ಸುಮ್ಮನೆ ಆ ಕೋಣೆಯುನ್ನು ಪ್ರವೇಶಿಸಿದ ಮಾತ್ರದಿಂದಲೆ ಮನಸ್ಸಿಗೆ ಸಮಾಧಾನವಾಗುವುದು. ದೇವಸ್ಥಾನಗಳೂ, ಕ್ರಿಸ್ತರಗುಡಿಗಳೂ ಇದಕ್ಕಾಗಿಯೇ ನಿರ್ಮಾಣವಾದವು. ಆದರೆ ಅನೇಕ ಗುಡಿಗಳಲ್ಲಿ ಈ ವಿಷಯವನ್ನು ಮರೆತುಬಿಟ್ಟಿದ್ದಾರೆ. ಪವಿತ್ರವಾದ ಸಂಗತಿಗಳೆ ಸುತ್ತಲೂ ಇರುತ್ತಿದ್ದರೆ ಆ ಸ್ಥಳವೇ ಮನಃಪ್ರಸಾದವನ್ನುಂಟು ಮಾಡುವುದೆಂಬುದೇ ಇದರ ರಹಸ್ಯವು. ಬೇರೆ ಕೋಣೆಯೊಂದನ್ನು ಇಟ್ಟುಕೊಳ್ಳುವುದಕ್ಕೆ ಅನುಕೂಲವಿಲ್ಲದವರು ಎಲ್ಲಿಯಾದರೂ ಅನುಷ್ಠಾನಮಾಡಬಹುದು. ನೆಟ್ಟಗೆ ಕೂತುಕೊಂಡು ಮೊದಲು ಸೃಷ್ಟಿಯೊಳಗೆಲ್ಲ ಸಾತ್ತ್ವಿಕವಾದ ಆಲೋಚನೆಯುಂಟಾಗುವಂತೆ ಭಾವಿಸಬೇಕು. ಮನಸ್ಸಿನಲ್ಲಿಯೆ "ಸರ್ವರೂ ಸುಖವಾಗಿರಲಿ, ಎಲ್ಲರೂ ಸ್ವಸ್ಥರಾಗಲಿ. ಎಲ್ಲರೂ ಆನಂದದಿಂದಿರಲಿ" ಎಂದು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎಂಬ ನಾಲ್ಕು ದಿಕ್ಕಿಗೂ ಒಳ್ಳೆಯ ಯೋಚನೆಯನ್ನು ಭಾವನೆಯಿಂದ ಹಬ್ಬಿಸಬೇಕು. ಇದನ್ನು ಎಷ್ಟರಮಟ್ಟಿಗೆ ಹೆಚ್ಚಾಗಿ ಮಾಡಿದರೆ ಅಷ್ಟರಮಟ್ಟಿಗೆ ಮನಸ್ಸಿಗೆ ಸಂತೋಷವಾಗುವುದು. ನಾವು ಆರೋಗ್ಯವಾಗಿರುವುದಕ್ಕೆ ಇತರರನ್ನು ಆರೋಗ್ಯವಾಗಿಟ್ಟಿರುವುದೇ ಸುಲಭಮಾರ್ಗವೆಂದೂ ನಾವು ಸುಖವಾಗಿರಬೇಕಾದರೆ ಇತರರು ಸುಖವಾಗಿರುವಂತೆ ಮಾಡುವುದೇ ಅತ್ಯಂತ ಸುಲಭವಾದ ದಾರಿಯೆಂದೂ ಕೊನೆಯಲ್ಲಿ ಮನಸ್ಸಿಗೆ ನಂಬಿಕೆಯಾಗುವುದು. ಹೀಗೆ ಸಾತ್ತ್ವಿಕ ಭಾವನೆಯನ್ನು ಮಾಡಿದ ಮೇಲೆ ದೇವರಿದ್ದಾನೆಂದು ನಂಬುವವರು ಪ್ರಾರ್ಥನೆ ಮಾಡಬೇಕು. ಭಗವಂತನನ್ನು ಪ್ರಾರ್ಥಿಸುವಾಗ ದ್ರವ್ಯವನ್ನಾಗಲಿ, ಆರೋಗ್ಯವನ್ನಾಗಲಿ, ಸ್ವರ್ಗವನ್ನಾಗಲಿ ಬೇಡಬಾರದು. ಜ್ಞಾನವನ್ನೂ ಸರಿಯಾದ ನಡತೆಯನ್ನೂ ದಯಪಾಲಿಸುವಂತೆ ಪ್ರಾರ್ಥಿಸಬೇಕು.

ಇನ್ನು ಏನನ್ನು ಕೇಳಿಕೊಂಡರೂ ಅದು ಕೇವಲ ಸ್ವಾರ್ಥವಾದದ್ದಾಗಿರುವುದು. ಇನ್ನು ಶರೀರದ ವಿಷಯದಲ್ಲಿ ಗಮನಕೊಡಬೇಕು. ಅದನ್ನು ಬಲವಾಗಿಯೂ, ಆರೋಗ್ಯವಾಗಿಯೂ ಇಟ್ಟಿರಬೇಕು. ನಮಗೆ ಇರುವ ಸಾಧನಗಳಲ್ಲೆಲ್ಲ ಇದೇ ಮುಖ್ಯವಾದುದು. ಈ ಶರೀರವು ವಜ್ರದಂತೆ ಬಲವಾಗಿರುವುದೆಂದೂ ಇದರ ಸಹಾಯದಿಂದ ಸಂಸಾರಸಾಗರವನ್ನು ದಾಟುತ್ತೇವೆಂದೂ ಭಾವಿಸಬೇಕು. ಬಲಹೀನರಾದವರಿಗೆ ಎಂದಿಗೂ ಮುಕ್ತಿ ದೊರೆಯಲಾರದು. ಎಂದಿಗೂ ಬಲಹೀನರಾಗಿರಬಾರದು. ಶರೀರವು ಬಲವಾಗಿರುವುದೆಂದು ದೃಢ ಭಾವನೆಯಿರಬೇಕು. ಮನಸ್ಸೂ ಬಲವಾಗಿರುವುದೆಂದು ಭಾವಿಸುತ್ತಿರಬೇಕು. ತನ್ನಲ್ಲಿ ತನಗೆ ಅಪಾರವಾದ ನಂಬಿಕೆಯೂ ಭರವಸೆಯೂ ಇರಬೇಕು[1].

೫೦೮

1. ಯಾವ ಭಾವನೆಯು ಹೆಚ್ಚಾಗಿರುವುದೊ ಅದು ನಮ್ಮ ಶರೀರಾದಿಗಳ ಮೇಲೆ ಪರಿಣಾಮವನ್ನು ಹೊಂದುವದು. ಆದುದರಿಂದ ನಾವು ಯಾವಾಗಲೂ ದೌರ್ಬಲ್ಯದ ಯೋಚನೆಯನ್ನು ಮಾಡದೆ ನಾವು ಆರೋಗ್ಯವಾಗಿ ದೃಢಕಾಯರಾಗಿದ್ದೇವೆಂಬ ಭಾವನೆಯನ್ನು ಬೆಳೆಸುತ್ತ ನಮ್ಮ ಕಾರ್ಯವು ಖಂಡಿತವಾಗಿ ಕೈಗೂಡುವುದೆಂದೇ ಧೈರ್ಯದಿಂದ ನಂಬಿರಬೇಕು. ಈ ಧೈರ್ಯವೇ ಒಂದು ಸಾಧನವೆಂದು ಭಾವವು.

# 3ನೇ ಅಧ್ಯಾಯ – ಪ್ರಾಣ

ಪ್ರಾಣಾಯಾಮವೆಂಬುದು ಅನೇಕರು ಯೋಚಿಸಿರುವಂತೆ ಶ್ವಾಸದ ಸಂಬಂಧವಾದುದಲ್ಲ. ನಿಜವಾಗಿ ನೋಡಿದರೆ ಅದಕ್ಕೂ ಶ್ವಾಸಕ್ಕೂ ಇರುವ ಸಂಬಂಧವು ಏನೇನೂ ಇಲ್ಲವೆನ್ನುವಷ್ಟಿದೆ. ನಿಜವಾದ ಪ್ರಾಣಾಯಾಮವನ್ನು ಸಾಧಿಸಬೇಕಾದರೆ ನಾವು ಮಾಡಬೇಕಾದ ಅನೇಕಸಾಧನಗಳಲ್ಲಿ ಶ್ವಾಸಧಾರಣೆಯು ಒಂದಾಗಿರುತ್ತದೆ. ಇಷ್ಟೆ. ಪ್ರಾಣಾಯಾಮವೆಂದರೆ ಪ್ರಾಣವನ್ನು ಸ್ವಾಧೀನಕ್ಕೆ ತರುವುದು. ಇಂಡಿಯಾದ ತತ್ತ್ವಶಾಸ್ತ್ರಜ್ಞರು ಹೇಳುವುದೇನೆಂದರೆ:–ಪ್ರಪಂಚವು ಎರಡು ಪದಾರ್ಥಗಳಿಂದಾಗಿರುವುದು. ಅವರು ಇವುಗಳಲ್ಲಿ ಒಂದಕ್ಕೆ ಆಕಾಶವೆಂದು ಹೆಸರಿಟ್ಟಿರುವರು. ಇದು ಸರ್ವವ್ಯಾಪಿಯಾಗಿಯೂ ಸರ್ವದಲ್ಲಿಯೂ ಇರತಕ್ಕದ್ದೂ ಆಗಿರುವ ವಸ್ತು. ಯಾವ ಯಾವದು ಆಕಾರವುಳ್ಳ ವಸ್ತುವೊ ಯಾವಯಾವುದು ಬೇರೆ ಬೇರೆ ವಸ್ತುಗಳ ಸಂಯೋಜನೆಯಿಂದ ಆಗಿರುವುದೊ ಅದೆಲ್ಲ ಈ ಆಕಾಶದ ಪರಿಣಾಮವು. ಆಕಾಶವೇ ವಾಯುವಾಗಿಯೂ, ರಸವಸ್ತುಗಳಾಗಿಯೂ, ಘನವಸ್ತುಗಳಾಗಿಯೂ ಆಗಿರುವುದು. ಸೂರ್ಯ, ಭೂಮಿ, ಚಂದ್ರ, ನಕ್ಷತ್ರಗಳು, ಬಾಲಚುಕ್ಕಿಗಳು ಇವೆಲ್ಲವೂ ಆಕಾಶವೆ. ಮನುಷ್ಯ ಶರೀರವೂ, ಪ್ರಾಣಿಗಳ ಶರೀರವೂ, ಗಿಡಗಳೂ, ಕಣ್ಣಿಗೆ ಕಾಣುವ ಸಮಸ್ತ ಆಕಾರವೂ ಇಂದ್ರಿಯಗೋಚರವಾದ ಎಲ್ಲಾ ವಸ್ತುಗಳೂ, ಹೆಚ್ಚೇಕೆ, ಲೋಕದಲ್ಲಿ ಯಾವ ಯಾವ ವಸ್ತುವಿರುವುದೊ ಅದೆಲ್ಲವೂ ಈ ಆಕಾಶದಿಂದಲೇ ಆಗಿರುವುದು. ಅದನ್ನು ಇಂದ್ರಿಯದಿಂದ ತಿಳಿಯುವುದಕ್ಕಾಗುವುದಿಲ್ಲ. ಏಕೆಂದರೆ ಅದು ಬಹುಸೂಕ್ಷ್ಮವಾಗಿರುವುದರಿಂದ ಪ್ರತ್ಯಕ್ಷ ಜ್ಞಾನಕ್ಕೆ ಮೀರಿರುವುದು. ಅದು ಸ್ಥೂಲವಾಗಿ ರೂಪುಗೊಂಡ ಮೇಲೆ ಮಾತ್ರವೇ ಗೋಚರವಾಗುವುದು. ಸೃಷ್ಟಿಗೆ ಆದಿಯಲ್ಲಿ ಈ ಆಕಾಶವೊಂದೇ ಇರುವುದು. ಕಲ್ಪಾಂತದಲ್ಲಿ ಸಮಸ್ತ ಕಠಿನವಸ್ತುಗಳೂ, ರಸವಸ್ತುಗಳೂ, ವಾಯುವಸ್ತುಗಳೂ ಎಲ್ಲವೂ ಆಕಾಶದಲ್ಲಿಯೇ ಲಯವಾಗುವುವು. ಮುಂದಿನ ಸೃಷ್ಟಿಯು ಮತ್ತೆ ಹೀಗೆಯೆ ಆಕಾಶದಿಂದಲೆ ಹುಟ್ಟುವುದು.

ಈ ಆಕಾಶವು ಈ ಪ್ರಪಂಚಾಕಾರವಾಗಿ ಪರಿಣಮಿಸುವಂತೆ ಮಾಡುವ ಶಕ್ತಿ ಯಾವುದು? ಇದೇ ಪ್ರಾಣ ಶಕ್ತಿ. ಆಕಾಶವೆಂಬುದು ಈ ಜಗತ್ತಿಗೆಲ್ಲ ಅನಂತವಾದ, ಸರ್ವವ್ಯಾಪಕವಾದ, ಉಪಾದಾನಕಾರಣವಾಗಿರುವಂತೆಯೆ ಈ ಪ್ರಾಣವೆಂಬುದು ಈ ಜಗತ್ತಿನಲ್ಲಿ ಪ್ರಕಟವಾಗಿರುವ ಅನಂತವಾದ ಸರ್ವವ್ಯಾಪಿಯಾದ ಶಕ್ತಿಯು. ಕಲ್ಪಾದಿಯಲ್ಲಿ ಆಕಾಶ ರೂಪದಿಂದಿದ್ದು, ಕಲ್ಪಕ್ಷಯವಾಗುವಾಗಲೂ ಎಲ್ಲವೂ ಆಕಾಶರೂಪವನ್ನೇ ಪಡೆಯುವ ಹಾಗೆ ಜಗತ್ತಿನಲ್ಲಿರುವ ಎಲ್ಲಾ

ಶಕ್ತಿ ವಿಶೇಷಗಳೂ ಪ್ರಾಣದಲ್ಲಿ ಐಕ್ಯವಾಗುವುವು. ಮುಂದಿನ ಕಲ್ಪದಲ್ಲಿ ಶಕ್ತಿ[1] ಸಾಮಾನ್ಯವೆಂದೂ ಶಕ್ತಿ[2] ವಿಶೇಷವೆಂದೂ ಯಾವಯಾವದನ್ನು ಕರೆಯಬಹುದೊ ಅದೆಲ್ಲ ಈ ಪ್ರಾಣದಿಂದಲೆ ಹುಟ್ಟುವುದು. ಈ ಪ್ರಾಣವೇ ಸಂಚಲನೆಯಾಗಿ ತೋರುವುದು. ಆಕರ್ಷಣ ಶಕ್ತಿ[3], ಸೂಚಿಕಾಂತಶಕ್ತಿ[4] ಇವುಗಳ ರೂಪದಲ್ಲಿ ತೋರುವುದೂ ಪ್ರಾಣವೆ. ಶರೀರದಲ್ಲಿರುವ ವ್ಯಾಪಾರಗಳಾಗಿಯೂ, ನರಗಳಲ್ಲಿರುವ ವೃತ್ತಿ ಪ್ರವಾಹಗಳಾಗಿಯೂ, ಆಲೋಚನಾಶಕ್ತಿಯಾಗಿಯೂ ತೋರುತ್ತಿರುವುದು ಪ್ರಾಣವೆ. ಮನೋವೃತ್ತಿ ಮೊದಲುಗೊಂಡು ಅತ್ಯಂತ ಸ್ಥೂಲವಾದ ಭೌತಿಕ ಶಕ್ತಿಯವರೆಗೆ ಇರುವುದೆಲ್ಲವೂ ಪ್ರಾಣದ ರೂಪಾಂತರವೆ. ಪ್ರಪಂಚದಲ್ಲಿ ಮಾನಸಿಕ ಅಥವಾ ಸ್ಥೂಲ ಭೌತಿಕ ಶಕ್ತಿ ವಿಶೇಷಗಳೆಲ್ಲ ತಮ್ಮ ಪೂರ್ವಸ್ಥಿತಿಯಲ್ಲಿ ಲಯವಾದರೆ ಅದೇ ಪ್ರಾಣವೆನಿಸುವುದು. "ಸತ್ತಾಗಲಿ ಅಸತ್ತಾಗಲಿ ಇಲ್ಲದೆ ಕತ್ತಲೆಯನ್ನು ಕತ್ತಲೆ ಮುಚ್ಚಿಕೊಂಡಿದ್ದಾಗ ಇದ್ದದ್ದೇನು? ಆಕಾಶವು ಚಲನವಿಲ್ಲದೆ ಇತ್ತು". ಪ್ರಾಣದ ಸಂಚಾರ ಕ್ರಿಯೆಯು ನಿಂತುಹೋಗಿತ್ತು. ಆದರೂ ಅದು ಇದ್ದೇ ಇತ್ತು. ಕಲ್ಪಾಂತದಲ್ಲಿ ಈ ಜಗತ್ತಿನಲ್ಲಿ ತೋರುತ್ತಿರುವ ಶಕ್ತಿ ವಿಶೇಷಗಳು ಶಾಂತವಾಗಿ ಅವ್ಯಕ್ತ ರೂಪವನ್ನು ಪಡೆಯುತ್ತವೆ. ಮುಂದಿನ ಕಲ್ಪದ ಆದಿಯಲ್ಲಿ ಇವು ಮತ್ತೆ ಹುಟ್ಟಿ ಆಕಾಶಕ್ಕೆ ತಗಲುತ್ತವೆ. ಆಮೇಲೆ ಆಕಾಶದಿಂದ ಈ ಬೇರೆ ಬೇರೆ ಆಕೃತಿಗಳು ಹುಟ್ಟುತ್ತವೆ. ಆಕಾಶವು ಪರಿಣಾಮವನ್ನು ಪಡೆಯುತ್ತಿರುವ ಹಾಗೆಲ್ಲ ಪ್ರಾಣವು ಈಗ ಕಾಣುತ್ತಿರುವ ಬೇರೆ ಬೇರೆ ಶಕ್ತಿ ವಿಶೇಷಗಳಾಗಿ ಪರಿಣಮಿಸುವುದು. ಈ ಪ್ರಾಣದ ಸ್ವರೂಪವನ್ನು ತಿಳಿದು ಇದನ್ನು ಸ್ವಾಧೀನಕ್ಕೆ ತಂದುಕೊಳ್ಳುವುದೇ ನಿಜವಾದ ಪ್ರಾಣಾಯಾಮವು.

ಇದರಿಂದ ನಮಗೆ ಸಿಕ್ಕಬಹುದಾದ ಶಕ್ತಿಗೆ ಪಾರವೇ ಇಲ್ಲವೆನ್ನಬಹುದು. ದೃಷ್ಟಾಂತಕ್ಕಾಗಿ ಒಬ್ಬ ಮನುಷ್ಯನು ಪ್ರಾಣ ಸ್ವರೂಪವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದಾನೆಂದೂ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡು ಬಂದಿರುತ್ತಾನೆಂದೂ ಇಟ್ಟುಕೊಳ್ಳೋಣ. ಅವನಿಂದ ಈ ಭೂಮಿಯಲ್ಲಿ ಆಗದೆ ಇರುವುದಾವುದಿದ್ದೀತು? ಅವನು ಸೂರ್ಯ, ಚಂದ್ರ, ನಕ್ಷತ್ರಗಳಿಗೂ ಕೂಡ ಸ್ಥಾನ ಚ್ಯುತಿಮಾಡಬಲ್ಲನು. ಪ್ರಾಣಸ್ವಾಧೀನವಿರುವುದರಿಂದ ಅಣುಗಳನ್ನು ಮೊದಲು ಮಾಡಿಕೊಂಡು ದೊಡ್ಡ ದೊಡ್ಡ ಸೂರ್ಯರುಗಳವರೆಗೆ ಜಗತ್ತಿನಲ್ಲಿರುವ ಎಲ್ಲಾ ಪದಾರ್ಥಗಳೂ ಇವನ ವಶವರ್ತಿಯಾಗಿರುವುವು. ಇದು ಪ್ರಾಣಾಯಾಮದ ಪರಮೋದ್ದೇಶವು. ಯೋಗಿಯು ಸಿದ್ಧಿಯನ್ನು ಪಡೆದರೆ ಅವನಿಗೆ ವಶವಾಗದೆ ಇರುವುದೇ ಈ ಲೋಕದಲ್ಲಿರುವುದಿಲ್ಲ. ದೇವತೆಗಳನ್ನಾಗಲಿ ಸತ್ತವರ ಆತ್ಮಗಳನ್ನಾಗಲಿ ಬರಬೇಕೆಂದು ಆತನು ಅಪ್ಪಣೆ ಮಾಡಿದರೆ ಅವರು ಕೂಡಲೆ ಬಂದು ಬಿಡುತ್ತಾರೆ. ಪ್ರಪಂಚದಲ್ಲಿರುವ ಶಕ್ತಿ ವಿಶೇಷಗಳೆಲ್ಲ ಅವನಿಗೆ

---

1. ಪ್ರಪಂಚದಲ್ಲಿ ತೋರುವ ಭೌತಿಕ ಶಕ್ತಿಯ ಮೂಲರೂಪವನ್ನು ಶಕ್ತಿ ಸಾಮಾನ್ಯವೆನ್ನಬಹುದು.

2. ಬೇರೆ ಬೇರೆ ರೂಪದಲ್ಲಿ ತೋರುತ್ತಿರುವ ಕ್ರಿಯಾಶಕ್ತಿಯನ್ನು ಶಕ್ತಿವಿಶೇಷವೆನ್ನುತ್ತಾರೆ.

3. ಭೂಮಿ, ಗ್ರಹಗಳು ಮೊದಲಾದವುಗಳು ಪರಸ್ಪರವಾಗಿ ಒಂದನ್ನೊಂದು ಎಳೆಯುತ್ತಿರುವವೆಂದು ಭೌತಿಕಶಾಸ್ತ್ರಗಳು ಹೇಳುತ್ತವೆ. ಈ ಶಕ್ತಿಯನ್ನು ಆಕರ್ಷಣ ಶಕ್ತಿಯೆಂದು ಕರೆಯುತ್ತಾರೆ.

4. ಸೂಜಿಯನ್ನು ಸೂಜಿಕಾಂತಶಿಲೆಯು ಎಳೆಯುವ ಶಕ್ತಿ.

ದಾಸಾನುದಾಸರಾಗಿ ಹೇಳಿದಂತೆ ಕೇಳಿಕೊಂಡಿರುವುವು. ಮೂಢರು ಈ ಯೋಗಸಿದ್ಧಿಗಳನ್ನು ನೋಡಿದ ಕೂಡಲೆ ಇವನ್ನೆ ಅದ್ಭುತ ಕ್ರಿಯೆಗಳೆಂದು ಕರೆಯುತ್ತಾರೆ. ಹಿಂದುಗಳ ಬುದ್ಧಿಯಲ್ಲಿರುವ ಒಂದು ಸ್ವಾರಸ್ಯವೇನೆಂದರೆ, ಇವರು ಕೊನೆಯವರೆಗೂ ಸರ್ವಸಾಧಾರಣ ನಿಯಮಗಳನ್ನೆ ಸಾಧ್ಯವಾದ ಮಟ್ಟಿಗೆ ಹುಡುಕುತ್ತ ಹೋಗುತ್ತಾರೆ; ಒಳಗಿರುವ ವಿಶೇಷಗಳನ್ನು ಹಿಂದಿನಿಂದ ನೋಡೋಣವೆಂದು ಬಿಟ್ಟು ಬಿಡುತ್ತಾರೆ. ವೇದಗಳಲ್ಲಿ ಈ ಪ್ರಶ್ನೆ ಇರುವುದು:– "ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಳ್ಳಬಹುದು?" ಯಾವಯಾವ ಗ್ರಂಥಗಳೂ ಯಾವಯಾವ ಸಿದ್ಧಾಂತಗಳೂ ಆಗಿವೆಯೋ ಅವೆಲ್ಲವೂ ಯಾವುದೊಂದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿಯಬಹುದೊ ಅದನ್ನು ತೋರಿಸುವುದಕ್ಕಾಗಿಯೆ ಹುಟ್ಟಿವೆ. ಈ ಜಗತ್ತನ್ನು ಸ್ವಲ್ಪ ಸ್ವಲ್ಪವಾಗಿ ತಿಳಿದುಕೊಳ್ಳಬೇಕೆಂದು ಯಾವನಾದರೂ ಇಷ್ಟಪಟ್ಟರೆ ಅವನು ಪ್ರತಿಯೊಂದು ಮರಳಿನ ರೇಣುವನ್ನು ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕೆ ಅನಂತಕಾಲ ಬೇಕು. ಇವುಗಳನ್ನೆಲ್ಲ ತಿಳಿದುಕೊಳ್ಳುವುದಕ್ಕಾಗಲಾರದು. ಹೀಗಿದ್ದ ಮೇಲೆ ಜ್ಞಾನವೆಂತಾಗಬೇಕು? ಹೀಗೆ ಒಂದೊಂದಾಗಿ ತಿಳಿಯುತ್ತ ಸರ್ವಜ್ಞನಾಗುವುದು ಹೇಗೆ ಸಾಧ್ಯವಾದೀತು? ಇದಕ್ಕೆ ಯೋಗಿಗಳು ಹೇಳುವುದೇನೆಂದರೆ:–ಈ ತೋರುತ್ತಿರುವ ವಿಶೇಷಗಳಿಗೆ ಆಧಾರವಾಗಿ ಸಾಮಾನ್ಯವೊಂದಿರುವುದು. ಸರ್ವವಿಧವಾದ ವಿಶೇಷಗಳಿಗೂ ಆಧಾರವಾಗಿ ಸಾಮಾನ್ಯವಾದ ಅತೀಂದ್ರಿಯತತ್ತ್ವವೊಂದು ಇದ್ದೇ ಇರುವುದು. ಅದು ಸಿಕ್ಕಿದರೆ ಎಲ್ಲವೂ ಸಿಕ್ಕಿದಂತಾಯಿತು. ವೇದಗಳಲ್ಲಿ ಈ ಜಗತ್ತಿಗೆ ಅಕ್ಷರವಾದ[1] ಸತ್ತಾ ಸ್ವರೂಪವೆ[2] ಸಾಮಾನ್ಯವೆಂದು ಹೇಳಿದೆ. ಯಾವನು ಈ ಸತ್ತೆಯನ್ನು ಅರಿಯುವನೊ ಅವನು ಜಗತ್ತನ್ನೆ ಅರಿತವನಾಗುವನು. ಇದರಂತೆ ಎಲ್ಲಾ ಶಕ್ತಿವಿಶೇಷಗಳಿಗೂ ಪ್ರಾಣವೇ ಸಾಮಾನ್ಯರೂಪ. ಯಾವನು ಈ ಪ್ರಾಣವನ್ನು ಅರಿತುಕೊಳ್ಳುವನೊ ಅವನು ಜಗತ್ತಿನಲ್ಲಿ ಎಲ್ಲಾ ಮಾನಸಿಕವಾದ ಅಥವಾ ಇತರ ಭೌತಿಕವಾದ ಶಕ್ತಿ ವಿಶೇಷಗಳನ್ನೆಲ್ಲ ಅರಿತವನಾಗುವನು. ಯಾವನಿಗೆ ಪ್ರಾಣವು ಕೈವಶವಾಗುವುದೊ ಅವನಿಗೆ ತನ್ನ ಮನಸ್ಸೂ ಉಳಿದ ಎಲ್ಲಾ ಮನಸ್ಸುಗಳೂ ವಶವಾಗುವುವು. ಯಾವನಿಗೆ ಪ್ರಾಣವು ವಶವಾಗಿರುವುದೊ ಅವನಿಗೆ ತನ್ನ ಶರೀರವೂ ಉಳಿದ ಎಲ್ಲಾ ಶರೀರಗಳೂ ವಶವಾಗಿರುವುವು. ಏಕೆಂದರೆ ಪ್ರಾಣವು ಶಕ್ತಿ ವಿಶೇಷಕ್ಕೆಲ್ಲ ಸಾಮಾನ್ಯ ರೂಪವಾಗಿರುತ್ತದೆ.

ಈ ಪ್ರಾಣವನ್ನು ವಶಮಾಡಿಕೊಳ್ಳುವುದೇ ಪ್ರಾಣಾಯಾಮದ ಉದ್ದೇಶವು. ಇದಕ್ಕಾಗಿ ಮಾಡುವ ಎಲ್ಲಾ ಸಾಧನಗಳಿಗೂ ಇದೊಂದೇ ಪ್ರಯೋಜನವು. ಪ್ರತಿಯೊಬ್ಬನೂ ತನ್ನ ಸ್ಥಿತಿಯನ್ನು ಮೊದಲು ನೋಡಿಕೊಂಡು ಪ್ರಾರಂಭಿಸಬೇಕು. ತನಗೆ ಅತ್ಯಂತ ಸಮೀಪದಲ್ಲಿರುವ ವಸ್ತುಗಳನ್ನು ವಶದಲ್ಲಿಡುವುದನ್ನು ಮೊದಲು ಕಲಿಯಬೇಕು. ಈ ಶರೀರವು ನಮಗೆ ಬಹು ಸಮೀಪವಾಗಿರುವುದು. ಬಾಹ್ಯ ಪ್ರಪಂಚದಲ್ಲಿರುವ ಎಲ್ಲಾ ಪದಾರ್ಥಗಳಿಗಿಂತಲೂ ಇದೇ ಹತ್ತಿರ. ಈ ಮನಸ್ಸೆಂಬುದು ಎಲ್ಲಕ್ಕಿಂತಲೂ ಸಮೀಪವಾಗಿರುವುದು. ಈ ಮನಸ್ಸಿನ ಮತ್ತು ಶರೀರದ ವ್ಯಾಪಾರವನ್ನು ನಡೆಸುತ್ತಿರುವ ಪ್ರಾಣವು ಜಗತ್ತಿನಲ್ಲಿರುವ ಉಳಿದ ಪ್ರಾಣಕ್ಕಿಂತಲೂ

1. ವಿಕಾರವಿಲ್ಲದ ಸ್ವತಂತ್ರರೂಪಕ್ಕೆ ಅಕ್ಷರವೆಂದು ಹೆಸರು.

2. "ಇರವು" ಎಂಬುದನ್ನು ಸಂಸ್ಕೃತದಲ್ಲಿ ಶಾಸ್ತ್ರಕಾರರು "ಸತ್ತೆ" ಎನ್ನುತ್ತಾರೆ. ಪರಮಾರ್ಥವಾಗಿ ಯಾವಾಗಲೂ ಇರುವುದೇ ಇಲ್ಲಿ "ಸತ್" ಎನ್ನಲ್ಪಡುವುದು.

ಸಮೀಪದಲ್ಲಿರುವುದು. ಪ್ರಾಣವೆಂಬ ಅಪಾರ ಸಮುದ್ರದಲ್ಲಿ ನಮ್ಮ ಮಾನಸಿಕ ಮತ್ತು ಶಾರೀರಕ ಶಕ್ತಿ ರೂಪವಾದ ಪ್ರಾಣ ತರಂಗವೇ ಮಿಕ್ಕ ಎಲ್ಲಾ ತೆರೆಗಳಿಗಿಂತಲೂ ನಮಗೆ ಹತ್ತಿರವಾಗಿರುವುದು. ಈ ಸಣ್ಣ ತೆರೆಯನ್ನು ವಶಮಾಡಿಕೊಂಡರೆ ಮಾತ್ರವೆ ಪ್ರಾಣವನ್ನೆಲ್ಲ ವಶಮಾಡಿಕೊಳ್ಳುವ ಆಸೆಯನ್ನಿಟ್ಟುಕೊಳ್ಳಬಹುದು. ಯಾವ ಯೋಗಿಗೆ ಇದು ಕೈಗೂಡುವುದೊ ಅವನು ಸ್ವಯಂ ಸಿದ್ಧನಾಗುವನು. ಅವನು ಯಾರಿಗೂ ಅಧೀನನಾಗಿರುವುದಿಲ್ಲ. ಅವನು ಸರ್ವಜ್ಞಕಲ್ಪನೂ ಸರ್ವಶಕ್ತ ಪ್ರಾಯನೂ ಆಗುವನು. ಪ್ರತಿಯೊಂದು ದೇಶದಲ್ಲಿಯೂ ಪ್ರಾಣವನ್ನು ವಶಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದವರು ಇದ್ದೇ ಇರುವರು. ಈ ದೇಶದಲ್ಲಿ[1] ಮನೋವೈದ್ಯರು[2], ಶ್ರದ್ಧಾವೈದ್ಯರು[3], ಪ್ರೇತವಾದಿಗಳು[4], ಕ್ರಿಸ್ತಿಯನ್ ಶಾಸ್ತ್ರಜ್ಞರು, ಮೋಹನಶಾಸ್ತ್ರಜ್ಞರು[5] ಹೀಗೆಲ್ಲ ಅನೇಕರಿರುವರಷ್ಟೆ. ಇವರ ವಿಷಯವಾಗಿ ಚೆನ್ನಾಗಿ ವಿಚಾರಮಾಡಿದರೆ ಇವರೆಲ್ಲರೂ ತಿಳಿದೋ ತಿಳಿಯದೆಯೋ ಪ್ರಾಣವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಯತ್ನಿಸುತ್ತಿರುವವರೆಂದು ಗೊತ್ತಾಗುವುದು. ಅವರ ಶಾಸ್ತ್ರಸಿದ್ಧಾಂತಗಳಲ್ಲಿ ಅಸಾರವಾದುದನ್ನೆಲ್ಲ ಬಿಟ್ಟರೆ ಉಳಿಯುವುದೆ ಇದು. ಇವರೆಲ್ಲರೂ ಒಂದೇ ಶಕ್ತಿಯನ್ನೇ ಉಪಯೋಗಿಸುತ್ತಿರುವರು. ಆದರೆ ತಾವು ಹಾಗೆ ಉಪಯೋಗಿಸುತ್ತೇವೆಂಬುದು ಅವರಿಗೆ ಗೊತ್ತಿಲ್ಲ. ಅವರಿಗೆ ಹೇಗೋ ಒಂದಾನೊಂದು ಶಕ್ತಿ ವಿಶೇಷವು ತಟಕ್ಕನೆ ಸಿಕ್ಕಿರಬಹುದು. ಅದರ ಸ್ವಭಾವವನ್ನರಿಯದೆಯೆ ಸುಮ್ಮನೆ ಅದನ್ನು ಉಪಯೋಗಿಸುತ್ತಿರುವರು. ಆದರೆ ಈ ಶಕ್ತಿವಿಶೇಷವೂ ಯೋಗಿಯಾದವನು ಉಪಯೋಗಿಸುವ ಶಕ್ತಿಯೂ ಒಂದೆ; ಮತ್ತು ಇದು ಪ್ರಾಣದಿಂದಲೆ ಬಂದಿರುವುದು.

ಪ್ರಾಣವೆಂಬುದು ಪ್ರತಿಯೊಂದು ಜಂತುವಿನಲ್ಲಿಯೂ ಇರುವ ಜೀವ ಶಕ್ತಿ. ಆಲೋಚನೆಯೆಂಬುದು ಪ್ರಾಣದ ಅತ್ಯಂತಸೂಕ್ಷ್ಮವಾದ ಹೆಚ್ಚಿನ ಕಾರ್ಯವು. ನಮಗೆ ಗೊತ್ತಿರುವ ಆಲೋಚನೆಯಲ್ಲಿ ಎಲ್ಲಾ ಆಲೋಚನೆಯೂ ಸೇರುವುದಿಲ್ಲ. ಸಹಜ ಬುದ್ಧಿಯೊಂದು ಬೇರೆ ಇದೆ. ಇದರಲ್ಲಿ ನಮಗೆ ಗೊತ್ತಿಲ್ಲದೆ ಆಲೋಚನೆ ನಡೆಯುತ್ತಿರುವುದು. ಇದು ಅತ್ಯಂತ ಕೀಳುತರದ ಆಲೋಚನಾಸ್ಥಾನವು. ಒಂದು ಸೊಳ್ಳೆಯು ನಮ್ಮನ್ನು ಕಚ್ಚಿದರೆ ನಮ್ಮ ಕೈ ತನ್ನಷ್ಟಕ್ಕೆ ತಾನೆ ಸ್ವಭಾವವಾಗಿಯೆ ಅದನ್ನು ಹೊಡೆಯುವುದು. ಶರೀರದಲ್ಲಿ ಆಗುವ ಸ್ವತಸ್ಸಿದ್ಧಕಾರ್ಯಗಳೆಲ್ಲ[6],ಈ ಮನನಾವಸ್ಥೆಗೆ ಸೇರಿವೆ. ಇದಾದ ಮೇಲೆ ಜ್ಞಪ್ತಿ ಸಹಿತವಾಗಿ ವಿಚಾರ ಮಾಡುವುದು ಇನ್ನೊಂದವಸ್ಥೆ. ತರ್ಕ ಮಾಡುವುದು, ಯುಕ್ತಾಯುಕ್ತವನ್ನು ತಿಳಿಯುವುದು,

---

1. ಅಮೇರಿಕದಲ್ಲಿ.

2. ಮನಸ್ಸನ್ನು ಸರಿಮಾಡಿ ರೋಗವನ್ನು ಗುಣಮಾಡುವವರು.

3. ರೋಗವು ಬಂದೇ ಇಲ್ಲವೆಂದು ರೋಗಿಗೆ ಶ್ರದ್ಧೆಯನ್ನು ಹುಟ್ಟಿಸಿ ಗುಣಮಾಡುವವರು.

4. ಪ್ರೇತಗಳೊಡನೆ ಮಾತುಕಥೆಗಳನ್ನು ಆಚರಿಸಬಹುದೆಂದು ಇವುಗಳ ಸಹಾಯದಿಂದ ಇನ್ನೂ ಕೆಲವು ಕೃತಿಗಳನ್ನು ಮಾಡಬಹುದೆಂದೂ ಅನ್ನುವರು.

5. ಒಂದು ಬಗೆಯ ಶ್ರದ್ಧಾವೈದ್ಯರು.

6. ಶರೀರದಲ್ಲಿ ನಮ್ಮ ಇಚ್ಛೆಗೆ ಒಳಪಡದ ಅನೇಕ ಮಾಂಸಖಂಡಗಳು ಕೆಲಸ ಮಾಡುತ್ತಿರುವುವು. ಹೇಗೆಂದರೆ ಹೃದಯವು ಬಡಿಯುತ್ತಿರುವುದು, ಅನ್ನಕೋಶವು ಅನ್ನವನ್ನು ಜೀರ್ಣಮಾಡುತ್ತಿರುವುದು, ಇತ್ಯಾದಿ. ಇವುಗಳನ್ನೆಲ್ಲ ಅನೈಚ್ಛಿಕ ಕಾರ್ಯಗಳು ಅಥವಾ ಸ್ವತಸ್ಸಿದ್ಧಕಾರ್ಯಗಳೆಂದು ಕರೆಯುತ್ತಾರೆ.

ಆಲೋಚಿಸುವುದು, ಗುಣದೋಷಗಳನ್ನು ತಿಳಿದುಕೊಳ್ಳುವುದು ಇವೆಲ್ಲವೂ ಈ ಅವಸ್ಥೆಗೆ ಸೇರಿವೆ. ಆದರೆ ಇಲ್ಲಿಗೆ ಮುಗಿಯಲಿಲ್ಲ. ಇನ್ನೂ ಒಂದು ಅವಸ್ಥೆಯುಂಟು. ತರ್ಕವೆಂಬುದಕ್ಕೆ ಎಲ್ಲೆಯುಂಟು. ಬುದ್ಧಿಯಿಂದ ತರ್ಕಿಸುವುದು ಇಷ್ಟರವರೆಗೆ ಎಂಬ ನಿಯಮವಿದೆ. ಅಲ್ಲಿಂದಾಚೆಗೆ ತರ್ಕವು ಹಾಯುವುದಿಲ್ಲ. ನಿಜವಾಗಿ ನೋಡಿದರೆ ತರ್ಕದ ವ್ಯಾಪಾರವು ನಡೆಯುವ ಕ್ಷೇತ್ರವು ಬಹಳ ಬಹಳ ಸಣ್ಣದೆಂದು ಹೇಳಬೇಕು. ಆದರೆ ಈ ಕ್ಷೇತ್ರದೊಳಕ್ಕೆ ಅನೇಕ ಸಂಗತಿಗಳು ಬಂದು ನುಗ್ಗುತ್ತಲಿವೆ. ಬಾಲಚುಕ್ಕಿಗಳು ಸರ್ರನೆ ಬರುವಂತೆ ಕೆಲಕೆಲವು ಸಂಗತಿಗಳು ಎಲ್ಲಿಂದಲೋ ಇದರೊಳಕ್ಕೆ ಬಂದು ಸೇರುತ್ತಿರುವುವು. ಇವು ತರ್ಕ ಕ್ಷೇತ್ರದ ಹೊರಗಣಿಂದ ಬರುತ್ತವೆಂಬುದೇನೋ ಖಂಡಿತ. ಆದರೆ ನಮ್ಮ ವಿಚಾರ ಶಕ್ತಿಯು ಅಲ್ಲಿಗೆ ಹೋಗಲಾರದು. ಈ ಸಣ್ಣ ಕ್ಷೇತ್ರದೊಳಕ್ಕೆ ಪ್ರವೇಶ ಮಾಡುತ್ತಿರುವ ಸಂಗತಿಗಳ ಕಾರಣಗಳು ಕ್ಷೇತ್ರದ ಹೊರಗಡೆ ಇರುವುವು. ಮನಸ್ಸಿಗೆ ಇದಕ್ಕಿಂತಲೂ ಹೆಚ್ಚಿನದಾದ ಅವಸ್ಥೆಯೊಂದುಂಟು. ಇದೇ ಉನ್ಮನೀಯೆನಿಸುವುದು. ಇದನ್ನು ಸಮಾಧಿಯೆಂದು ಕರೆವರು. ಸಂಪೂರ್ಣವಾಗಿ ಏಕಾಗ್ರವಾಗಿರುವ ಈ ಉನ್ಮನಿಯೆಂಬ ಸ್ಥಿತಿಯನ್ನು ಪಡೆಯುತ್ತಲೆ ಅದು ತರ್ಕದ ಗಡಿಯನ್ನು ದಾಟಿ ಸಹಜ ಬುದ್ಧಿಗಾಗಲಿ ತರ್ಕಕ್ಕಾಗಲಿ ಎಂದೆಂದಿಗೂ ನಿಲುಕದ ಸಂಗತಿಗಳನ್ನು ಸಾಕ್ಷಾತ್ತಾಗಿ ಅರಿಯುವುದು. ಶರೀರದಲ್ಲಿರುವ ಪ್ರಾಣದ ವ್ಯಕ್ತರೂಪಾಂತರಗಳಾದ ಸೂಕ್ಷ್ಮ ಶಕ್ತಿ ವಿಶೇಷಗಳನ್ನು ಸರಿಯಾದ ರೀತಿಯಿಂದ ಉಪಯೋಗಿಸಿದರೆ ಇವು ಮನಸ್ಸನ್ನು ಮುಂದೆ ಮುಂದೆ ನೂಕುತ್ತ ಅದಕ್ಕೆ ಮೇಲಮೇಲಣ ಸ್ಥಿತಿಯನ್ನು ಕೊಟ್ಟು ಕೊನೆಗೆ ಸಮಾಧಿ ಸ್ಥಿತಿಯಲ್ಲಿ ವ್ಯಾಪಾರ ಮಾಡುವಂತೆ ಮಾಡುವುವು.

ಈ ಬ್ರಹ್ಮಾಂಡದಲ್ಲಿ ಯಾವ ಯಾವ ಸ್ಥಿತಿಯನ್ನು ನೋಡಿದರೂ ಒಂದೇ ಒಂದು ಏಕರೂಪವಾದ ವಸ್ತುವಿರುವುದು. ಭೌತಿಕ ದೃಷ್ಟಿಯಿಂದ ನೋಡಿದರೆ ಪ್ರಪಂಚವೆಲ್ಲ ಒಂದೇ ವಸ್ತುವಾಗಿರುವುದು. ಸೂರ್ಯನಿಗೂ ನಮಗೂ ಯಾವ ಭೇದವೂ ಇಲ್ಲ. ಈ ಮಾತು ಸುಳ್ಳೆಂದು ತಿಳಿಯುವುದು ಭ್ರಾಂತಿಯೆಂದು ಭೌತಿಕ ಶಾಸ್ತ್ರಜ್ಞರು ಹೇಳುವರು. ನಿಜವಾಗಿ ನೋಡಿದರೆ ಈ ಮೇಜಿಗೂ ನನಗೂ ಯಾವ ಅಂತರವೂ ಇಲ್ಲ. ಮೇಜು ಎಂಬುದು ಭೌತಿಕ ರಾಶಿಯಲ್ಲಿ ಒಂದು ಕಡೆ. ನಾನು ಮತ್ತೊಂದು ಕಡೆ. ಅನಂತವಾದ ಭೌತಿಕ ಸಾಗರದಲ್ಲಿ ಎಲ್ಲಾ ರೂಪಗಳೂ ಒಂದೊಂದು ಸುಳಿಯಂತೆ ಇರುವುವು. ಇವುಗಳಲ್ಲಿ ಒಂದಾದರೂ ಒಂದೇ ಸ್ಥಿತಿಯಲ್ಲಿ ಇರುವುದಿಲ್ಲ. ಹರಿಯುವ ಹಳ್ಳದಲ್ಲಿ ಲಕ್ಷೋಪಲಕ್ಷ ಸುಳಿಗಳಿರುತ್ತವೆ. ಇವುಗಳಲ್ಲಿರುವ ನೀರು ಪ್ರತಿ ಕ್ಷಣದಲ್ಲಿಯೂ ಬೇರೆ ಬೇರಾಗುತ್ತಿರುವುದು. ಒಂದು ಭಾಗ ನೀರು ಕೆಲವು ಪಳೆಗಳವರೆಗೆ ದುಂಡಗೆ ಸುತ್ತುತ್ತಿದ್ದು ಹೊರಗೆ ಹೋಗಿ ಬಿಡುವುದು. ಆಮೇಲೆ ಅದರ ಸ್ಥಳಕ್ಕೆ ಬೇರೆ ನೀರು ಬರುವುದು. ಇದರಂತೆ ಇಡೀ ಪ್ರಪಂಚವೆಂಬುದು ಕ್ಷಣ ಕ್ಷಣಕ್ಕೂ ವಿಕಾರ ಹೊಂದುತ್ತಲಿರುವ ಭೌತಿಕ ವಸ್ತುವಿನ ರಾಶಿಯಾಗಿದೆ. ಇದರಲ್ಲಿರುವ ಆಕೃತಿಗಳು ಸುಳಿಗಳಂತಿರುವುವು. ಮನುಷ್ಯ ಶರೀರವೆಂಬ ಒಂದು ಸುಳಿಯೊಳಕ್ಕೆ ಸ್ವಲ್ಪ ಭೌತಿಕ ಪದಾರ್ಥವು ಸೇರಿ ಅಲ್ಲಿ ಕೆಲವುಕಾಲ ಇದ್ದು ಮಾರ್ಪಾಟನ್ನು ಹೊಂದಿ ಅಲ್ಲಿಂದ ಹೊರಟು ಪ್ರಾಣಿ ಶರೀರವೆಂಬ ಮತ್ತೊಂದು ಶರೀರವನ್ನು ಸೇರುವುದು. ಮತ್ತೆ ಕೆಲವು ವರ್ಷಗಳ ಮೇಲೆ ಖನಿಜದ ತುಂಡೆಂಬ ಮತ್ತೊಂದು ಸುಳಿಯೊಳಕ್ಕೆ ಹೋಗಿ ಸೇರಿಕೊಳ್ಳುವುದು. ಹೀಗೆ ಸದಾ ಬೇರೆ ಬೇರೆ ಆಗುತ್ತಲೆ ಇರುವುದು. ಒಂದು ಪದಾರ್ಥವಾಗಲಿ ಇದ್ದಂತೆ ಇರುವುದಿಲ್ಲ. ನನ್ನ ಶರೀರ, ನಿನ್ನ ಶರೀರ

ಎಂಬುದು ಬರೀ ಮಾತೇ ಹೊರತು ನಿಜವಾಗಿ ಇಲ್ಲವೇ ಇಲ್ಲ. ಭೌತಿಕ ವಸ್ತುವೆಂಬ ಮಹಾ ರಾಶಿಯಲ್ಲಿ ಒಂದು ಭಾಗವನ್ನು ಸೂರ್ಯನೆಂದೂ, ಇನ್ನೊಂದು ಭಾಗವನ್ನು ಚಂದ್ರನೆಂದೂ, ಮತ್ತೊಂದನ್ನು ಮನುಷ್ಯನೆಂದೂ, ಮಗದೊಂದನ್ನು ಭೂಮಿಯೆಂದೂ, ಬೇರೊಂದನ್ನು ಗಿಡವೆಂದೂ, ಪೆರತೊಂದನ್ನು ಖನಿಜವೆಂದೂ ಕರೆಯುವರು. ಇವುಗಳಲ್ಲಿ ಒಂದೂ ಸ್ಥಿರವಾಗಿರುವುದಿಲ್ಲ. ಪ್ರತಿಯೊಂದೂ ಬೇರೆ ಬೇರಾಗುತ್ತಲೆ ಇರುವುದು. ಭೌತಿಕ ವಸ್ತು ಯಾವಾಗಲೂ ಕೂಡಿಕೊಳ್ಳುತ್ತಲೂ ಬಿಟ್ಟು ಕೊಳ್ಳುತ್ತಲೂ ಇರುವುದು. ಮನಸ್ಸೂ ಹೀಗೆಯೆ. ಆಕಾಶವೇ ಭೌತಿಕ ವಸ್ತುವಾಗಿರುವುದು. ಪ್ರಾಣದ ಕಾರ್ಯವು ಬಹು ಸೂಕ್ಷ್ಮವಾಗಿರುವಾಗ ಇದೇ ಆಕಾಶವೇ ಸೂಕ್ಷ್ಮವಾಗಿ ಮನಸ್ಸೆನಿಸುವುದು. ಆಗಲಿ. ಎಲ್ಲವೂ ಒಂದೇ ಒಂದು ರಾಶಿಯಾಗಿರುವುದು. ಈ ಸೂಕ್ಷ್ಮ ಸ್ಥಿತಿಯನ್ನು ಸೇರಿದರೆ ಸರಿ; ಪ್ರಪಂಚವೆಲ್ಲ ಸೂಕ್ಷ್ಮ ರೂಪದಲ್ಲಿರುವಂತೆ ಅನುಭವಕ್ಕೆ ಗೋಚರವಾಗುವುದು. ಇಂದ್ರಿಯ ಸುಖದ ಸ್ಥಿತಿಯಲ್ಲಿರುವಾಗಲೂ ಕೂಡ ಒಂದೊಂದು ವೇಳೆ ಕೆಲಕೆಲವು ಔಷಧ ಪ್ರಯೋಗದಿಂದ ಆ ಸ್ಥಿತಿಯನ್ನು ಪಡೆಯುವುದುಂಟು. ಸರ್ ಹಂಪ್ರೇಡೇರಿ ಎಂಬುವರು ಮಾಡಿದ ಪ್ರಸಿದ್ಧವಾದ ಭೌತಿಕ ಪರೀಕ್ಷೆಯಲ್ಲಿ "ನಗೆಯ ಗಾಳಿ"[1] ಎಂಬ ವಾಯುವಿನ ಶಕ್ತಿಯಿಂದ ಅವರಿಗೆ ಉಪನ್ಯಾಸ ಮಾಡುತ್ತಿದ್ದ ಹಾಗೆಯೆ ಎಚ್ಚರ ತಪ್ಪಿ ಅಲುಗಾಡದೆ ನಿಂತಿದ್ದರೆಂಬುದನ್ನೂ ಅವರಿಗೆ ಎಚ್ಚರವಾದ ಬಳಿಕ ಜಗತ್ತೇ ಪ್ರತ್ಯಯಾತ್ಮಕವಾಗಿ[2] ಕಾಣುತ್ತಿತ್ತೆಂದು ಹೇಳಿದುದನ್ನೂ ನಿಮ್ಮಲ್ಲಿ ಅನೇಕರು ಕೇಳಿರಬಹುದು. ಆ ಕಾಲದಲ್ಲಿ ಸ್ಥೂಲ ವ್ಯಾಪಾರಗಳೇ ನಿಂತಂತಾಗಿ ಕೇವಲ ಸೂಕ್ಷ್ಮ ವ್ಯಾಪಾರಗಳು ಮಾತ್ರ ಅವರಿಗೆ ತೋರುತ್ತಿದ್ದವು. ಇವನ್ನೇ ಅವರು ಮನೋ ವೃತ್ತಿಗಳೆಂದರು. ಸೂಕ್ಷ್ಮ ವ್ಯಾಪಾರವೊಂದೇ ಅವರಿಗೆ ಕಾಣುತ್ತಿತ್ತು. ಎಲ್ಲವೂ ಅವರಿಗೆ ವೃತ್ತಿ ರೂಪವಾಗಿತ್ತು. ಜಗತ್ತಿಗೆ ಜಗತ್ತೇ ಮನಸ್ಸಾಗರವಾಗಿ ತಾನೂ ಉಳಿದವರೂ ಸಣ್ಣ ಸಣ್ಣ ವೃತ್ತಿಗಳೆಂಬ ಸುಳಿಗಳಾಗಿ ಕಾಣುತ್ತಿದ್ದರು.

ಹೀಗೆ ಮನೋಮಯ ಪ್ರಪಂಚದಲ್ಲಿಯೂ ಕೂಡ ಒಂದೇ ವಸ್ತುವಿರುವುದೆಂದು ಗೊತ್ತಾಯಿತು. ಇನ್ನು ಆತ್ಮವನ್ನು ತೆಗೆದುಕೊಂಡರೆ ಆತ್ಮವು ಒಂದಾಗಿಯೇ ಇರಬೇಕೆಂದು ಸಿದ್ಧವಾಗುತ್ತದೆ. ಭೌತಿಕ ವಸ್ತುವು ಸ್ಥೂಲ ರೂಪವಾಗಿಯೂ ಸೂಕ್ಷ್ಮರೂಪವಾಗಿಯೂ ವ್ಯಾಪಾರ ಮಾಡುತ್ತಿರುವುದು. ಇದರಾಚೆಗೆ ಚಲನಾತೀತವಾಗಿ ಒಂದೇ ಒಂದು ವಸ್ತುವಿರುವುದು. ವ್ಯಕ್ತ ರೂಪವಾದ ಚಲನೆಯೂ ಕೂಡ ಏಕಾಕಾರವಾಗಿರುವುದು. ಈ ಸಂಗತಿಗಳನ್ನು ಯಾರೂ ಇಲ್ಲವೆನ್ನುವುದಕ್ಕಾಗುವುದಿಲ್ಲ. ಪ್ರಕೃತಿಶಾಸ್ತ್ರದಲ್ಲಿ ಜಗತ್ತಿನ ಶಕ್ತಿಯ ಸಮಷ್ಟಿಯು[3] ಯಾವಾಗಲೂ ಹೆಚ್ಚು ಕಡಿಮೆಯಾಗದ ಒಂದೇ ಸಮವಾಗಿರುವುದೆಂದು ಸಿದ್ಧಾಂತ ಮಾಡಿರುತ್ತಾರೆ. ಈ ಸಮಷ್ಟಿ ಶಕ್ತಿಯು ಎರಡು ರೂಪದಲ್ಲಿರುವುದೆಂದು ನಿಶ್ಚಯ ಮಾಡಿದ್ದಾರೆ. ಮೊದಲು ಜೋರು ಕಡಿಮೆಯಾಗಿ ಶಾಂತಸ್ಥಿತಿಯಲ್ಲಿರುವ ಅವ್ಯಕ್ತರೂಪವನ್ನು ಪಡೆಯುತ್ತದೆ. ಆಮೇಲೆ ಬೇರೆ ಬೇರೆ

---

1. ಇದನ್ನು ಶಾಸ್ತ್ರಜ್ಞರು "ನೈಟ್ರಿಕ್ ಆಕ್ಸೈಡ್" ಎಂದು ಕರೆಯುತ್ತಾರೆ. ಇದನ್ನು ಮೂಸಿದರೆ ಒಂದು ವಿಧವಾದ ಮದ ಹತ್ತಿ ಹುಚ್ಚು ಹುಚ್ಚು ನಗುವುಂಟಾಗುವುದು. ಇದನ್ನು ಹೆಚ್ಚಾಗಿ ಉಸಿರಿನಲ್ಲಿ ತೆಗೆದುಕೊಂಡರೆ ಇದರಿಂದ ಜ್ಞಾನ ತಪ್ಪುವುದು. ಆಗ ನೋವು ತೋರುವುದಿಲ್ಲ. ಆದುದರಿಂದಲೇ ಇದನ್ನು ಹಲ್ಲು ಕೀಳುವುದು ಮೊದಲಾದ ಶಸ್ತ್ರವೈದ್ಯಕಾರ್ಯಗಳಲ್ಲಿ ಉಪಯೋಗಿಸುತ್ತಾರೆ.

2. ಪ್ರತ್ಯಯವೆಂದರೆ ಮನಸ್ಸಿಗೆ ತೋರುವ ಆಲೋಚನೆಗಳು.

3. ಎಲ್ಲವನ್ನೂ ಸೇರಿಸಿದ ಒಟ್ಟಿಗೆ ಶಾಸ್ತ್ರಕಾರರು ಸಮಷ್ಟಿ ಎನ್ನುವರು.

ಶಕ್ತಿ ವಿಶೇಷಗಳಾಗಿ ತೋರುವ ವ್ಯಕ್ತ ರೂಪವನ್ನು ಹೊಂದುತ್ತದೆ. ಹೀಗೆ ವ್ಯಕ್ತ ರೂಪದಿಂದ ಶಾಂತರೂಪವನ್ನು ಹೊಂದಿ ಮತ್ತೆ ವ್ಯಕ್ತ ರೂಪವನ್ನು ಪಡೆಯುತ್ತ ಎಂದೆಂದಿಗೂ ವಿಕಾಸವಾಗುತ್ತಲೂ ಸಂಕೋಚವಾಗುತ್ತಲೂ ಇರುತ್ತಿರುವುದು. ಈ ಪ್ರಾಣವನ್ನು ವಶಮಾಡಿಕೊಳ್ಳುವುದನ್ನು ಮೇಲೆ ಹೇಳಿರುವಂತೆ ಪ್ರಾಣಾಯಾಮವೆನ್ನುತ್ತಾರೆ.

ಈ ಪ್ರಾಣದ ವ್ಯಾಪಾರವು ಮನುಷ್ಯ ಶರೀರದಲ್ಲಿ ಶ್ವಾಸಕೋಶದ ಚಲನಾರೂಪವಾಗಿ ಬಹುಸ್ಪಷ್ಟವಾಗಿ ತೋರುತ್ತಿರುವುದು. ಈ ಕಾರ್ಯವು ನಿಂತರೆ ಶರೀರದಲ್ಲಿರುವ ಎಲ್ಲಾ ಕಾರ್ಯಗಳೂ ಕೂಡಲೆ ನಿಲ್ಲುತ್ತವೆಯೆಂದು ಹೇಳಬಹುದು. ಆದರೆ ಈ ಕಾರ್ಯವು ನಿಂತರೂ ಶರೀರವು ಬದುಕಿಯೆ ಇರುವಂತೆ ಸಾಧನೆ ಮಾಡಿಕೊಂಡಿರುವವರೂ ಉಂಟು. ಎಷ್ಟೋ ದಿನಗಳವರೆಗೆ ಹೂತುಕೊಂಡಿದ್ದರೂ ಉಸಿರಾಡದೆಯೆ ಬದುಕಿರುವವರು ಕೆಲವರಿರುವರು. ಸೂಕ್ಷ್ಮವನ್ನು ಮುಟ್ಟುವುದಕ್ಕೆ ಸ್ಥೂಲದ ಸಹಾಯವನ್ನುಪಯೋಗಿಸಿ ಕೊಳ್ಳಬೇಕು. ಹೀಗೆಯೆ ಮಾಡುತ್ತ ಮಾಡುತ್ತ ಅತ್ಯಂತ ಸೂಕ್ಷ್ಮವಾದುದನ್ನು ಪಡೆದು ನಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳಬೇಕು. ನಿಜವಾಗಿ ಪ್ರಾಣಾಯಾಮವೆಂದರೆ ಈ ಶ್ವಾಸಕೋಶದ ಚಲನೆಯನ್ನು ವಶಮಾಡಿಕೊಳ್ಳುವುದು. ಈ ಚಲನೆಗೂ ಶ್ವಾಸಕ್ಕೂ ಸಂಬಂಧವಿರುವುದು. ಶ್ವಾಸದಿಂದ ಈ ಚಲನೆಯುಂಟಾಗುವುದಿಲ್ಲ. ಇದೇ ಶ್ವಾಸವನ್ನುಂಟುಮಾಡುತ್ತಿರುವುದು. ಈ ಚಲನೆಯು ಗಾಳಿಯನ್ನು ಒಳಕ್ಕೆ ಸೇದಿಕೊಳ್ಳುವುದು. ಪ್ರಾಣವು ಶ್ವಾಸಕೋಶವನ್ನು ಆಡಿಸುತ್ತದೆ. ಶ್ವಾಸಕೋಶವು ಆಡುವುದರಿಂದ ಗಾಳಿಯು ಒಳಕ್ಕೆ ಬರುತ್ತದೆ. ಆದುದರಿಂದ ಪ್ರಾಣಾಯಾಮವೆಂದರೆ ಉಸಿರಾಡುವುದಲ್ಲ. ಶ್ವಾಸಕೋಶಗಳನ್ನು ಆಡಿಸುವ ಮಾಂಸಖಂಡದ ಶಕ್ತಿಯನ್ನು ಸ್ವಾಧೀನಕ್ಕೆ ತರುವುದೇ ಪ್ರಾಣಾಯಾಮವು. ನರಗಳಿಂದ ಮಾಂಸಖಂಡಗಳನ್ನು ಸೇರಿ ಅಲ್ಲಿಂದ ಶ್ವಾಸ ಕೋಶಗಳನ್ನು ಮುಟ್ಟಿ ಅವುಗಳನ್ನು ಒಂದಾನೊಂದು ಗೊತ್ತಾದ ರೀತಿಯಲ್ಲಿ ಅಲುಗಾಡಿಸುವ ಶಕ್ತಿ ಯಾವುದುಂಟೋ ಅದೆ ಪ್ರಾಣವು. ಇದೇ ನಾವು ಪ್ರಾಣಾಯಾಮವೆಂಬ ಸಾಧನೆಯಿಂದ ವಶಮಾಡಿಕೊಳ್ಳಬೇಕಾದುದು. ಈ ಪ್ರಾಣವು ವಶವಾದ ಕೂಡಲೆ ಶರೀರದಲ್ಲಿರುವ ಇತರ ಪ್ರಾಣ ಕಾರ್ಯಗಳೂ ಒಂದೊಂದಾಗಿ ನಮ್ಮ ಸ್ವಾಧೀನಕ್ಕೆ ಬರುತ್ತವೆ. ಸ್ವಲ್ಪ ಹೆಚ್ಚು ಕಡಿಮೆಯಾಗಿ ಶರೀರದಲ್ಲಿರುವ ಎಲ್ಲಾ ಮಾಂಸಖಂಡಗಳನ್ನೂ ತಮ್ಮ ಇಚ್ಛೆಗೆ ಒಳಪಡಿಸಿಕೊಂಡಿರುವವರನ್ನು ನಾನು ಕಣ್ಣಾರೆ ನೋಡಿದ್ದೇನೆ. ಇದರಲ್ಲಿ ಏನಾಶ್ಚರ್ಯ? ಕೆಲವು ಮಾಂಸಖಂಡಗಳು ನಮ್ಮ ಸ್ವಾಧೀನದಲ್ಲಿದ್ದೇ ಇರುವುವು. ಶರೀರದಲ್ಲಿರುವ ಪ್ರತಿಯೊಂದು ಖಂಡವೂ ನರವೂ ಏತಕ್ಕೆ ನಮ್ಮ ವಶಕ್ಕೆ ಬರಬಾರದು? ಇದರಲ್ಲಿ ಅಸಾಧ್ಯವೇನು? ಈಗ ಇವು ನಮ್ಮ ಸ್ವಾಧೀನ ತಪ್ಪಿರುವುದರಿಂದ ಇವುಗಳು ಸ್ವಯಂವ್ಯಾಪಾರವುಳ್ಳವಾಗಿವೆ. ನಮಗೆ ಕಿವಿಯನ್ನು ಅಲ್ಲಾಡಿಸುವುದಕ್ಕೆ ಬರುವುದಿಲ್ಲ; ಆದರೆ ಪ್ರಾಣಿಗಳಿಗೆ ಬರುತ್ತದೆ. ನಾವು ಈ ಶಕ್ತಿಯನ್ನುಪಯೋಗಿಸುವುದಿಲ್ಲ ವಾದುದರಿಂದ ನಮಗೆ ಅದು ಬರುವುದಿಲ್ಲ.ಇದನ್ನು ಈಗಿನ ಶಾಸ್ತ್ರಜ್ಞರು "ಸ್ವಭಾವಪುನರುತ್ಥಾನ"[1] ವೆಂದು

1. ಯಾವುದಾದರೂ ಸಸ್ಯದಲ್ಲಿ ಅಥವಾ ಪ್ರಾಣಿಯಲ್ಲಿ ಯಾವುದಾದರೂ ಒಂದು ಸ್ವಭಾವವು ತೋರುತ್ತಿದ್ದು ಅದರಿಂದ ಹುಟ್ಟಿದ ಕೆಲವು ಸಸ್ಯ ಅಥವಾ ಪ್ರಾಣಿಗಳಲ್ಲಿ ತೋರದೆ ಕಾಲಾನಂತರದಲ್ಲಿ ಮತ್ತೆ ಕಾಣಿಸಿಕೊಳ್ಳುವುದಕ್ಕೆ "ಸ್ವಭಾವ ಪುನರುತ್ಥಾನ"ವೆಂದು ಕರೆಯುತ್ತಾರೆ. ಹೇಗೆಂದರೆ ಒಬ್ಬನಿಗೆ ಆರು ಬೆರಳುಗಳಿರುತ್ತವೆ. ಇವನ ಮಕ್ಕಳು, ಮೊಮ್ಮಕ್ಕಳಿಗೆ ಐದೈದು ಬೆರಳುಗಳೆ ಇದ್ದು ಮರಿ ಮಕ್ಕಳಿಗೆಲ್ಲ ಆರಾರು ಬೆರಳುಗಳು ಕಾಣಿಸಿಕೊಂಡರೆ ಸ್ವಭಾವಪುನರುತ್ಥಾನವಾಯಿತು.

ಕರೆಯುತ್ತಾರೆ. ಯಾವ ಚಲನೆಯು ಅವ್ಯಕ್ತರೂಪವನ್ನು ಹೊಂದಿರುವುದೋ ಅದನ್ನು ಮತ್ತೆ ವ್ಯಕ್ತ ರೂಪಕ್ಕೆ ತರುವುದಕ್ಕಾಗುತ್ತದೆ. ಚೆನ್ನಾಗಿ ಕಷ್ಟಪಟ್ಟು ಅಭ್ಯಾಸ ಮಾಡಿದರೆ ಶರೀರದಲ್ಲಿ ಸ್ವಲ್ಪವೂ ಕಾಣಿಸದೆ ಇರುವ ಚಲನೆಗಳನ್ನು ಕೂಡ ಸಂಪೂರ್ಣ ನಮ್ಮ ಸ್ವಾಧೀನಕ್ಕೆ ತರಬಹುದು.ಈ ರೀತಿಯಲ್ಲಿ ನೋಡಿದರೆ ಶರೀರದಲ್ಲಿರುವ ಪ್ರತಿಯೊಂದಂಗವೂ ನಮಗೆ ಸಂಪೂರ್ಣವಾಗಿ ವಶವಾಗುವುದು ಅಸಾಧ್ಯವಲ್ಲ; ವಶವಾಗುವ ಸಂಭವವೇ ಬಹಳವಾಗಿದೆಯೆಂದು ಕಂಡುಬರುತ್ತದೆ. ಈ ಕೆಲಸವನ್ನು ಯೋಗಿಯು ಪ್ರಾಣಾಯಾಮದಿಂದ ಮಾಡಿಕೊಳ್ಳುತ್ತಾನೆ.

ಪ್ರಾಣಾಯಾಮದಲ್ಲಿ ಉಸಿರನ್ನು ಎಳೆಯುವಾಗ ಶರೀರವನ್ನೆಲ್ಲ ಪ್ರಾಣದಿಂದ ತುಂಬಬೇಕೆಂದು ಬರೆದಿರುವುದನ್ನು ನಿಮ್ಮಲ್ಲಿ[1] ಕೆಲವರು ಓದಿರಬಹುದು. ಇಂಗ್ಲೀಷು ಭಾಷಾಂತರಗಳಲ್ಲಿ ಪ್ರಾಣವೆಂದರೆ ಉಸಿರೆಂದು ಬರೆದಿದೆ. ಉಸಿರನ್ನು ಶರೀರದಲ್ಲೆಲ್ಲ ತುಂಬುವುದು ಹೇಗೆಂದು ನೀವು ಕೇಳಬಹುದು. ಇಲ್ಲಿ ಭಾಷಾಂತರಕಾರನದೆ ತಪ್ಪು. ಶರೀರದಲ್ಲಿ ಪ್ರತಿಯೊಂದು ಭಾಗದಲ್ಲಿಯೂ ಪ್ರಾಣವನ್ನು ತುಂಬುವುದಕ್ಕಾಗುತ್ತದೆ. ಯಾವಾಗ ಇದು ನಿಮಗೆ ಬರುತ್ತದೆಯೊ ಆಗ ಶರೀರವೆಲ್ಲ ನಿಮ್ಮ ಸ್ವಾಧೀನವಾಗುವುದು; ಶರೀರದಲ್ಲಿರುವ ಎಲ್ಲಾ ವಿಧವಾದ ರೋಗಗಳನ್ನೂ , ತೊಂದರೆಗಳನ್ನೂ ಪರಿಹಾರಮಾಡಿಕೊಳ್ಳಬಹುದು. ಇಷ್ಟೇ ಅಲ್ಲ. ಇನ್ನೊಬ್ಬರ ಶರೀರವು ಕೂಡ ನಿಮ್ಮ ಸ್ವಾಧೀನವಾಗುವುದು. ಈ ಪ್ರಪಂಚದಲ್ಲಿ ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಯಾವುದಾದರೂ ಒಬ್ಬರಿಂದೊಬ್ಬರಿಗೆ ಹರಡಿಕೊಳ್ಳುತ್ತಿರುವುದು. ನಿಮ್ಮ ಶರೀರವು ಎಷ್ಟು ಮಟ್ಟಿಗೆ ಬಿಗಿಕಟ್ಟಿನಲ್ಲಿರುವುದೊ ಇತರರ ಶರೀರಗಳನ್ನೂ ಅಷ್ಟೇ ಬಿಗಿಯಾಗಿ ಮಾಡುವುದು. ನೀವು ಬಲಿಷ್ಠರಾಗಿ ಆರೋಗ್ಯವಂತರಾಗಿದ್ದರೆ ನಿಮ್ಮ ಸಮೀಪದಲ್ಲಿರುವವರು ಬಲಿಷ್ಠರಾಗಿ ಆರೋಗ್ಯವಂತರೇ ಆಗುವ ಸಂಭವವಿರುವುದು. ಆದರೆ ನೀವು ರೋಗಿಗಳಾಗಿ ಅಶಕ್ತರಾಗಿದ್ದರೆ ನಿಮ್ಮ ಹತ್ತಿರಿರುವವರೂ ಹಾಗೆಯೇ ಆದಾರು. ಒಬ್ಬನು ಇನ್ನೊಬ್ಬನ ರೋಗವನ್ನು ವಾಸಿಮಾಡುವಾಗ ತನ್ನ ಆರೋಗ್ಯವನ್ನು ಅವನಿಗೆ ಕೊಡುವುದು ಮೊದಲನೆಯ ರೀತಿ. ಇದು ಕೇವಲ ಪುರಾತನ ಪದ್ಧತಿ. ನಮ್ಮ ಆರೋಗ್ಯವನ್ನು ತಿಳಿದೊ ತಿಳಿಯದೆಯೊ ಮತ್ತೊಬ್ಬರಿಗೆ ಕೊಡುವುದಕ್ಕೆ ಬರುತ್ತದೆ. ತಿಳಿದು ಹೀಗೆ ಆರೋಗ್ಯವನ್ನು ಕೊಡುವಾಗ ಶೀಘ್ರವಾಗಿಯೂ ಉತ್ತಮ ರೀತಿಯಲ್ಲಿಯೂ ಕೆಲಸವಾಗುವುದು. ಇನ್ನೊಂದು ಬಗೆ ಯಾವುದೆಂದರೆ, ತಾನು ಆರೋಗ್ಯವಂತನಾಗದೆ ಇದ್ದರೂ ಇತರರಿಗೆ ಆರೋಗ್ಯವನ್ನು ಕೊಡುವುದು. ಇಂಥ ಸಂದರ್ಭಗಳಲ್ಲಿ ಆರೋಗ್ಯವನ್ನು ಕೊಡುವವನಿಗೆ ಪ್ರಾಣವು ಹೆಚ್ಚು ಸ್ವಾಧೀನದಲ್ಲಿರುವುದು. ಇವನು ಪ್ರಾಣವನ್ನು ಒಂದಾನೊಂದು ಸ್ಥಿತಿಗೆ ತಂದುಕೊಂಡು ಅದನ್ನು ಇನ್ನೊಬ್ಬನಿಗೆ ಕೊಡುತ್ತಾನೆ. ರೋಗಿಯು ದೂರದಲ್ಲಿರುವಾಗ ಕೂಡ ಈ ರೀತಿಯಲ್ಲಿ ಆರೋಗ್ಯವನ್ನು ಕೊಟ್ಟಿರುತ್ತಾನೆ. ನಿಜವಾಗಿ ನೋಡಿದರೆ ವ್ಯವಧಾನರೂಪವಾದ [2] ದೂರವೆಂಬುದೇ ಇಲ್ಲವೆಂದು ಹೇಳಬೇಕು. ವ್ಯವಧಾನವಿರುವ ದೂರವೆಲ್ಲಿರುವುದು? ನಿಮಗೂ ಸೂರ್ಯನಿಗೂ ಮಧ್ಯೆ ಏನಾದರೂ

1. ಇದು ಪಾಶ್ಚಿಮಾತ್ಯರನ್ನು ಕುರಿತು ಹೇಳಿದ ಮಾತು.

2. ವ್ಯವಧಾನವೆಂದರೆ ನಡುವೆ ಏನಾದರೂ ಇರುವುದು. ನಮ್ಮ ಮನೆಗೂ ಮತ್ತೊಬ್ಬನ ಮನೆಗೂ ನಡುವೆ ಗೋಡೆ ಇದ್ದರೆ ವ್ಯವಧಾನವಾಯಿತು. ಈ ವ್ಯವಧಾನವು ಹೆಚ್ಚಾದರೆ ಇದನ್ನೆ ದೂರವೆನ್ನುತ್ತಾರೆ.

ವ್ಯವಧಾನವಿದೆಯೆ? ಎಲ್ಲವೂ ಏಕಾಕಾರವಾದ ಭೌತಿಕ ರಾಶಿಯಾಗಿದೆ. ಇದರಲ್ಲಿ ಸೂರ್ಯನು ಒಂದು ಭಾಗ; ನೀವು ಮತ್ತೊಂದು ಭಾಗ. ನದಿಯಲ್ಲಿ ಒಂದು ಭಾಗಕ್ಕೂ ಇನ್ನೊಂದು ಭಾಗಕ್ಕೂ ನಡುವೆ ವ್ಯವಧಾನವಿರುವುದೆ? ಇಲ್ಲದಿದ್ದರೆ ಶಕ್ತಿಯು ಒಂದು ಕಡೆಯಿಂದ ಮತ್ತೊಂದು ಕಡೆ ಏಕೆ ಹೋಗಲಾರದು? ಇದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ದೂರದಿಂದಲೆ ವಾಸಿ ಮಾಡಿರುವುದು ಸ್ವಲ್ಪವೂ ಸುಳ್ಳಲ್ಲ. ಪ್ರಾಣವನ್ನು ಎಷ್ಟು ದೂರ ಬೇಕಾದರೂ ಕಳುಹಿಸಬಹುದು. ಆದರೆ ಒಂದು ನಿಜವಾದ ಸಂಗತಿ ನಡೆದಿದ್ದರೆ ನೂರಾರು ಮೋಸಗಳಿರುತ್ತವೆ. ಈ ರೀತಿಯಲ್ಲಿ ವಾಸಿ ಮಾಡುವುದೇನೂ ಜನರು ತಿಳಿದುಕೊಂಡಿರುವಷ್ಟು ಸುಲಭವಲ್ಲ. ಈ ರೀತಿ ಗುಣ ಮಾಡಿರುವ ಅನೇಕ ಸಂದರ್ಭಗಳನ್ನು ವಿಚಾರಿಸಿದರೆ ವೈದ್ಯನು ಮನುಷ್ಯ ಶರೀರವೇ ಸ್ವಭಾವವಾಗಿ ಆರೋಗ್ಯವಾಗಿರುವುದೆಂಬುದನ್ನು ತಮ್ಮನುಕೂಲಕ್ಕೆ ಉಪಯೋಗಿಸಿ ಕೊಂಡಿರುತ್ತಾರೆಂದು ಗೊತ್ತಾಗುವುದು. ಒಬ್ಬ ಪ್ರತಿಕೂಲ[1] ವೈದ್ಯನು ಒಂದು ವಾಂತಿ ಭೇದಿ ರೋಗಕ್ಕೆ ಔಷಧ ಕೊಡುತ್ತಾನೆ. ಅನುಕೂಲ[2] ವೈದ್ಯನೊಬ್ಬನು ಬಂದು ತನ್ನ ಔಷಧಗಳನ್ನು ಪ್ರಯೋಗಿಸುತ್ತಾನೆ. ಇವನು ಪ್ರತಿರೂಪ ವೈದ್ಯನಿಗಿಂತ ಹೆಚ್ಚು ರೋಗಿಗಳನ್ನು ಗುಣಮಾಡಬಹುದು. ಏಕೆಂದರೆ ಅನುರೂಪವೈದ್ಯನು ರೋಗಿಗಳನ್ನು ಇದ್ದಂತೆಯೆ ಬಿಟ್ಟು ಸ್ವಭಾವದಿಂದ ಅವರು ಏನಾಗುತ್ತಾರೊ ಅದಕ್ಕೆ ಅವಕಾಶ ಕೊಡುತ್ತಾನೆ. ಶ್ರದ್ಧಾವೈದ್ಯನು ಇನ್ನೂ ಹೆಚ್ಚು ಗುಣಮಾಡಬಲ್ಲನು. ಏಕೆಂದರೆ ಅವನು ತನ್ನ ಮನಃಶಕ್ತಿಯನ್ನುಪಯೋಗಿಸಿ ರೋಗಿಯಲ್ಲಿ ನಿದ್ರೆ ಹೋದಂತಿರುವ ಪ್ರಾಣವನ್ನು ಶ್ರದ್ಧೆಯ ಮೂಲಕ ಎಬ್ಬಿಸುತ್ತಾನೆ.

ಶ್ರದ್ಧಾವೈದ್ಯರು ಅನೇಕ ವೇಳೆಗಳಲ್ಲಿ ಒಂದು ತಪ್ಪು ಮಾಡುತ್ತಾರೆ. ಇವರು ಶ್ರದ್ಧೆಯೇ ಸಾಕ್ಷಾತ್ತಾಗಿ ರೋಗಿಯನ್ನು ವಾಸಿ ಮಾಡುತ್ತದೆಯೆಂದು ಭಾವಿಸುತ್ತಾರೆ. ಆದರೆ ಶ್ರದ್ಧೆಯೇ ಎಲ್ಲದಕ್ಕೂ ಉಪಯೋಗಿಸುವುದಿಲ್ಲ. ಕೆಲವು ರೋಗಗಳಲ್ಲಿ ರೋಗಿಗೆ ತನಗೆ ಇಂಥ ರೋಗವು ಬಂದಿದೆಯೆಂಬುದೇ ತಿಳಿಯುವುದಿಲ್ಲ. ಇದೇ ಆ ರೋಗದ ಚಿಹ್ನೆಯಾಗಿರುತ್ತದೆ. ರೋಗಿಗೆ ಅಪರಿಮಿತವಾದ ಶ್ರದ್ಧೆಯಿರುವುದೇ ಆ ರೋಗಕ್ಕೆ ಚಿಹ್ನೆಯಾಗಿರುವುದರಿಂದ ಸಾಮಾನ್ಯವಾಗಿ ಇದು ರೋಗಿಯು ಬೇಗ ಸಾಯುವನೆಂಬುದನ್ನು ಸೂಚಿಸುವುದು. ಇಂಥ ಸಂದರ್ಭಗಳಲ್ಲಿ ಶ್ರದ್ಧೆಯಿಂದ ವಾಸಿಯಾಗುವುದೆಂಬ ತತ್ತ್ವವು ಉಪಯೋಗ ಬೀಳುವುದಿಲ್ಲ. ಶ್ರದ್ಧೆಯಿಂದ ಮಾತ್ರವೇ ಗುಣವಾಗುತ್ತಿದ್ದರೆ ಈ ರೋಗಿಗಳಿಗೂ ಗುಣವಾಗಬೇಕಾಗುತ್ತಿತ್ತು. ನಿಜವಾಗಿ ಗುಣವಾಗುವುದು ಪ್ರಾಣದಿಂದ. ಪರಿಶುದ್ಧ ಸ್ವಭಾವವುಳ್ಳಾತನು ಪ್ರಾಣವನ್ನು ವಶಮಾಡಿಕೊಂಡಿದ್ದರೆ ಅದನ್ನು ಒಂದಾನೊಂದು ವ್ಯಾಪಾರ ಸ್ಥಿತಿಗೆ ತಂದುಕೊಂಡು ಅದೇ ಸ್ಥಿತಿಯನ್ನೆ ಮತ್ತೊಬ್ಬನಿಗೆ

---

1. ರೋಗದಿಂದ ಬಂದಿರುವ ಸ್ಥಿತಿಗೆ ವಿರುದ್ಧವಾದ ಸ್ಥಿತಿಯನ್ನುಂಟುಮಾಡುವಂತೆ ಔಷಧಪ್ರಯೋಗವನ್ನು ಮಾಡುವ ವೈದ್ಯಕ್ಕೆ ಪ್ರತಿಕೂಲವೈದ್ಯವೆಂದು ಹೆಸರು.

ಉದಾಹರಣೆ: ಉಷ್ಣವಾದವರಿಗೆ ತಂಪಾಗುವುದಕ್ಕೆ ಔಷಧಕೊಡುವುದು ಈ ಕ್ರಮಕ್ಕೆ ಸೇರಿರುವುದು.

2.ಆರೋಗ್ಯವಾದವರಿಗೆ ಕೊಟ್ಟರೆ ಪ್ರಕೃತರೋಗದಂತೆ ಚಿಹ್ನೆಗಳನ್ನು ಕೊಡಬಲ್ಲ ಔಷಧವನ್ನು ಪ್ರಯೋಗಿಸುವ ವೈದ್ಯಕ್ಕೆ ಅನುಕೂಲವೈದ್ಯವೆಂದು ಹೆಸರು.

ಉದಾಹರಣೆ: ಉಷ್ಣಕ್ಕೆ ಉಷ್ಣವನ್ನೆ ಕೊಟ್ಟು ಗುಣಮಾಡಬೇಕೆಂಬುದು ಈ ಕ್ರಮವು.

ಕೊಟ್ಟು ಅವನಲ್ಲಿಯೂ ಅದೇ ವ್ಯಾಪಾರ ವಿಶೇಷಗಳನ್ನು ಉಂಟುಮಾಡಲಿಕ್ಕಾಗುತ್ತದೆ. ವ್ಯವಹಾರದಲ್ಲಿಯೂ ಹೀಗೆ ನಡೆಯುತ್ತಲೆ ಇರುವುದು. ನಾನು ಮಾತನಾಡುತ್ತಿದ್ದೇನಷ್ಟೆ. ನಾನು ಏನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ? ನಾನು ನನ್ನ ಮನಸ್ಸನ್ನು ಒಂದಾನೊಂದು ಸ್ಥಿತಿಯಲ್ಲಿ ಚಲನೆ ಮಾಡುವಂತೆ ಪ್ರಯತ್ನ ಮಾಡುತ್ತಿದ್ದೇನೆನ್ನಬಹುದು. ಮನಸ್ಸನ್ನು ನಾನು ಆ ಸ್ಥಿತಿಗೆ ಎಷ್ಟು ಹತ್ತಿರಕ್ಕೆ ತರುತ್ತೇನೆಯೊ ಅಷ್ಟಷ್ಟು ನಾನು ಹೇಳುವುದು ನಿಮ್ಮ ಮೇಲೆ ಕಾರ್ಯಕಾರಿಯಾಗುವುದು. ಎಂದು ನಾನು ಹೆಚ್ಚು ಉತ್ಸಾಹದಿಂದ ಕೂಡಿರುವೆನೊ ಆ ದಿನ ನಿಮಗೆ ಉಪನ್ಯಾಸದಲ್ಲಿ ಹೆಚ್ಚು ರುಚಿ ತೋರುವುದೂ ಎಂದು ನನಗೆ ಉತ್ಸಾಹ ಕಡಿಮೆಯೊ ಆ ದಿನ ನಿಮಗೂ ಸವಿ ಹತ್ತದೆ ಇರುವುದೂ ನಿಮಗೆಲ್ಲ ತಿಳಿದೇ ಇದೆ.

ಈ ಜಗತ್ತಿನಲ್ಲಿ ಯಾರು ಮಹಾಸಂಕಲ್ಪರಾಗಿರುತ್ತಾರೊ, ಯಾರು ಜಗತ್ತನ್ನೆ ಅಲ್ಲಾಡಿಸುವುದಕ್ಕೆ ಶಕ್ತರೊ ಅವರು ತಮ್ಮ ಪ್ರಾಣವನ್ನು ಬಹು ಜೋರಿನಿಂದ ಚಲಿಸುವಂತೆ ಮಾಡುವುದನ್ನು ಕಲಿತಿರುತ್ತಾರೆ. ಈ ಪ್ರಾಣ ಕ್ರಿಯೆಯು ಅಪರಿಮಿತವಾಗಿಯೂ ಬಲವಾಗಿಯೂ ಇರುವುದರಿಂದ ಒಂದು ಕ್ಷಣದಲ್ಲಿ ಇತರರನ್ನು ತನ್ನ ವಶಕ್ಕೆ ತಂದುಕೊಳ್ಳುತ್ತದೆ. ಇದರಿಂದ ಸಾವಿರಾರು ಜನರು ಇವರ ಬಳಿಗೆ ಬರುವರು. ಜಗತ್ತಿನಲ್ಲಿ ಅರೆವಾಸಿ ಜನರೆ ಅವರ ಮತವನ್ನಂಗೀಕರಿಸುವರು. ಪ್ರಪಂಚದಲ್ಲಿ ಹುಟ್ಟಿದ ಮಹಾತ್ಮರಿಗೆ ಪ್ರಾಣವು ಎಷ್ಟು ಸ್ವಾಧೀನವಾಗಿತ್ತೆಂಬುದನ್ನು ಯೋಚಿಸಿಕೊಂಡರೆ ಪರಮಾಶ್ಚರ್ಯವಾಗುತ್ತದೆ. ಇದರಿಂದಲೆ ಅವರಿಗೆ ಅಂಥ ಮಹಾ ಸಂಕಲ್ಪ ಶಕ್ತಿಯು ಬಂತು. ಅವರು ತಮ್ಮ ಪ್ರಾಣವನ್ನು ಅತ್ಯಂತ ಸೂಕ್ಷ್ಮವಾದ ಚಲನಾ ಸ್ಥಿತಿಗೆ ತಂದುಕೊಂಡಿದ್ದರು. ಆದುದರಿಂದ ಇವರಿಗೆ ಲೋಕವನ್ನೆ ಆಳುವ ಶಕ್ತಿ ಬಂತು. ಎಲ್ಲಾ ವಿಧವಾದ ಶಕ್ತಿಯೂ ಈ ಪ್ರಾಣ ಸ್ವಾಧೀನತೆಯಿಂದಲೆ ಬರುತ್ತದೆ. ಇದು ಅನೇಕರಿಗೆ ಗೊತ್ತಿರದೆ ಇರಬಹುದು. ಆದರೆ ಇದೊಂದೆ ಇಲ್ಲಿ ನಿಜವಾದ ರಹಸ್ಯ. ಕೆಲವು ವೇಳೆ ನಿಮ್ಮ ಶರೀರಗಳಲ್ಲಿ ಪ್ರಾಣವು ಬಹುಮಟ್ಟಿಗೆ ಒಂದು ಕಡೆಗೇ ಸೇರಹತ್ತುವುದು. ಆಗ ಸಮತೋಲವು ತಪ್ಪುತ್ತದೆ. ಹೀಗೆ ಪ್ರಾಣದ ಸಮತೋಲವು ತಪ್ಪಿತೆಂದರೆ ರೋಗವೆಂಬುದು ಪ್ರಾಪ್ತವಾಗುತ್ತದೆ. ಹೆಚ್ಚಾಗಿರುವ ಪ್ರಾಣವನ್ನು ತೆಗೆದುಹಾಕುವುದು ಅಥವಾ ಸಾಲದಿರುವ ಪ್ರಾಣವನ್ನು ಕೂಡಿಸಿಕೊಡುವುದು ಇದೇ ರೋಗಕ್ಕೆ ಪರಿಹಾರವೆನಿಸುವುದು. ಶರೀರದ ಇಂಥ ಭಾಗದಲ್ಲಿ ಈಗ ಇರಬೇಕಾದಷ್ಟು ಪ್ರಾಣಕ್ಕಿಂತ ಹೆಚ್ಚು ಅಥವಾ ಕಡಿಮೆ ಇದೆಯೆಂಬುದನ್ನು ತಿಳಿದುಕೊಳ್ಳುವುದು ಪ್ರಾಣಾಯಾಮವೆ. ಮನೋಧರ್ಮವು ತೀರ ಸೂಕ್ಷ್ಮವಾಗುವುದರಿಂದ ಕೈಬೆರಳಿನಲ್ಲಿ ಅಥವಾ ಕಾಲುಬೆರಳಿನಲ್ಲಿ ಪ್ರಾಣವು ಇರಬೇಕಾದಷ್ಟಕ್ಕಿಂತ ಕಡಿಮೆ ಇರುವುದು ಕೂಡ ಮನಸ್ಸಿಗೆ ತಿಳಿಯುವುದಲ್ಲದೆ ಆ ಪ್ರಾಣವನ್ನು ಅಲ್ಲಿಗೆ ಕೂಡಿಸಿಕೊಳ್ಳುವ ಶಕ್ತಿ ಕೂಡ ಬರುತ್ತದೆ. ಇವೆಲ್ಲ ಪ್ರಾಣಾಯಾಮದ ಕಾರ್ಯಗಳೆ. ಇವುಗಳು ಮೆಲ್ಲಮೆಲ್ಲಗೆ ಕಾಲಕ್ರಮದಿಂದ ಬರಬೇಕು. ನಿಜವಾಗಿ ನೋಡಿದರೆ ಈ ಪ್ರಾಣವನ್ನು ಬೇರೆ ಬೇರೆ ಸ್ಥಿತಿಗಳಲ್ಲಿ ತನ್ನ ಸ್ವಾಧೀನದಲ್ಲಿಟ್ಟುಕೊಂಡು ತಕ್ಕ ಕಾರ್ಯಗಳಲ್ಲಿ ಪ್ರವರ್ತಿಸುವುದೆ ರಾಜಯೋಗಕ್ಕೆ ಮುಖ್ಯವಿಷಯವಾಗಿರುತ್ತದೆ. ಒಬ್ಬ ಮನುಷ್ಯನು ತನ್ನ ಶಕ್ತಿಗಳನ್ನೆಲ್ಲ ಒಕ್ಕಡೆಗೆ ಕೂಡಿಸಿದರೆ ತನ್ನ ಶರೀರದಲ್ಲಿರುವ ಪ್ರಾಣವನ್ನು ಜಯಿಸಿದಂತಾಯಿತು. ಧ್ಯಾನ ಮಾಡುತ್ತಿರುವಾಗಲೂ ಪ್ರಾಣವನ್ನೆ ಏಕಾಗ್ರಮಾಡಬೇಕು.

ಒಂದು ಸಾಗರದಲ್ಲಿ ಪರ್ವತಗಳಂಥ ದೊಡ್ಡ ಅಲೆಗಳೂ ಆಮೇಲೆ ಇನ್ನೂ ಸಣ್ಣ ಅಲೆಗಳೂ ಇದಕ್ಕಿಂತ ಪುಟ್ಟ ಅಲೆಗಳೂ ಹೀಗೆ ಸಣ್ಣ ಗುಳ್ಳೆಗಳ ತನಕ ಇರುತ್ತವೆ. ಆದರೆ ಇವುಗಳಿಗೆಲ್ಲ ಆಧಾರವಾಗಿ ಅನಂತವಾದ ಸಾಗರವೇ ಇರುತ್ತದೆ. ಒಂದು ಕಡೆಯಲ್ಲಿ ಗುಳ್ಳೆಯೂ ಇನ್ನೊಂದು ಕಡೆಯಲ್ಲಿ ಮಹಾ ತರಂಗವೂ ಸಮುದ್ರಕ್ಕೆ ಸೇರಿರುತ್ತವೆ. ಹೀಗೆ ಒಬ್ಬನು ಮಹಾಪರಾಕ್ರಮಿಯಾಗಿ ಇರಬಹುದು; ಇನ್ನೊಬ್ಬನು ಸಣ್ಣ ಗುಳ್ಳೆಯಂತಿರಬಹುದು. ಆದರೆ ಇಬ್ಬರೂ ಅಪಾರವಾದ ಶಕ್ತಿ ಸಾಗರಕ್ಕೆ ಸೇರಿದವರೆ. ಈ ಸಮುದ್ರದಲ್ಲಿ ಹುಟ್ಟಿದ ಹುಳುವಿಗೆ ಕೂಡ ಅಧಿಕಾರವಿರುತ್ತದೆ. ಎಲ್ಲೆಲ್ಲಿ ಜೀವವಿರುವುದೊ ಅಲ್ಲಲ್ಲಿ ಅದಕ್ಕೆ ಆಧಾರವಾಗಿ ಅನಂತ ಶಕ್ತಿಯ ಆಗರವೆ ಇರುವುದು. ಭೂತಗನ್ನಡಿಗೆ ಮಾತ್ರ ಕಾಣುವ ನೀರಗುಳ್ಳೆಯಂತಿರುವ ಯಾವುದಾದರೊಂದು ಆಕೃತಿ ವಿಶೇಷವು ಮೊದಲು ಯಾವುದೋ ಒಂದು ಸೊಪ್ಪು ಸೆದೆಯಾಗಿದ್ದು ಈ ಮಹಾ ಶಕ್ತಿಯ ಉಗ್ರಾಣದಿಂದ ತನಗೆ ಬೇಕಾದ ಸಾಮಗ್ರಿಯನ್ನು ಒದಗಿಸಿಕೊಳ್ಳುತ್ತ ಮೆಲ್ಲಮೆಲ್ಲಗೆ ರೂಪಾಂತರವನ್ನು ಹೊಂದಿ ಕಾಲಕ್ರಮದಲ್ಲಿ ಒಂದು ಗಿಡವೆನಿಸುವುದು; ಆಮೇಲೆ ಒಂದು ಪ್ರಾಣಿಯಾಗುವುದು; ಅದರ ಮೇಲೆ ಮನುಷ್ಯನಾಗಿ ಕೊನೆಗೆ ದೇವರೇ ಆಗುವನು. ಇಷ್ಟಾಗುವುದಕ್ಕೆ ಲಕ್ಷಗಟ್ಟಲೆ ಯುಗಗಳಾಗಬೇಕಾದುದು ನಿಜ. ಆದರೆ ಕಾಲವೆಂಬುದೆಷ್ಟರ ಮಾತು? ಸ್ವಲ್ಪ ವೇಗವನ್ನು ಜೋರು ಮಾಡಿದರೆ ಸರಿ; ಸ್ವಲ್ಪ ಪ್ರಯತ್ನವನ್ನು ಹೆಚ್ಚು ಮಾಡಿದರಾಯಿತು; ಎಷ್ಟು ಕಾಲವನ್ನಾದರೂ ಹತ್ತಿರಕ್ಕೆ ತರಬಹುದು. ಯೋಗಿಯ ಅಭಿಪ್ರಾಯವೇನೆಂದರೆ ಕೆಲಸವನ್ನು ಹೆಚ್ಚು ಜೋರಿನಿಂದ ಮಾಡಿದರೆ ದೀರ್ಘಕಾಲದಲ್ಲಿ ಆಗತಕ್ಕದ್ದನ್ನು ಸ್ವಲ್ಪ ಕಾಲದಲ್ಲಿಯೆ ಸಾಧಿಸಬಹುದು. ಒಬ್ಬನು ಈ ಪ್ರಪಂಚದಲ್ಲಿರುವ ಅನಂತ ಶಕ್ತಿ ರಾಶಿಯನ್ನು ಸಾವಕಾಶವಾಗಿ ಉಪಯೋಗಿಸುತ್ತ ಇದ್ದರೆ ಅವನು ದೇವತೆಯಾಗುವುದಕ್ಕೆ ಒಂದು ಲಕ್ಷ ವರ್ಷ ಬೇಕಾದೀತು; ಇನ್ನೂ ಹೆಚ್ಚಿನ ಸ್ಥಿತಿಯನ್ನು ಪಡೆಯುವುದಕ್ಕೆ ಐದುಲಕ್ಷ ವರ್ಷ ಬೇಕಾದೀತು; ಪೂರ್ಣ ಸಿದ್ಧನಾಗುವುದಕ್ಕಂತು ಐವತ್ತು ಲಕ್ಷ ವರ್ಷವೇ ಬೇಕಾದೀತು. ಆದರೆ ಬೇಗಬೇಗನೆ ಪ್ರಯತ್ನವಾದರೆ ಈ ಕಾಲವೇ ಕಡಿಮೆಯಾಗುವುದು. ಇದೇ ಪೂರ್ಣ ಸಿದ್ಧಿಯನ್ನು ತಕ್ಕಷ್ಟು ಪ್ರಯತ್ನ ಮಾಡಿದರೆ ಆರು ತಿಂಗಳಿನಲ್ಲಿಯೊ, ಆರು ವರ್ಷಗಳಲ್ಲಿಯೊ ಪಡೆಯುವುದಕ್ಕೇತಕ್ಕಾಗಬಾರದು? ಇಷ್ಟು ಕಾಲವೇ ಬೇಕೆಂಬ ನಿಯಮವೇನೂ ಇಲ್ಲ. ಇದು ಯುಕ್ತಿಯಿಂದ ಸಿದ್ಧವಾಗುವ ಮಾತು. ಒಂದು ಎಂಜಿನ್ ಯಂತ್ರವು ಸ್ವಲ್ಪ ಕಲ್ಲಿದ್ದಲನ್ನು ಹಾಕಿದರೆ ಗಂಟೆಗೆ ಎರಡು ಮೈಲಿ ಹೋಗುವುದಾದರೆ ಅದೇ ಯಂತ್ರಕ್ಕೆ ಹೆಚ್ಚು ಕಲ್ಲಿದ್ದಲು ಹಾಕಿದರೆ ಅದೇ ದೂರವನ್ನೇ ಇನ್ನೂ ಬೇಗನೆ ಹೋಗುತ್ತದೆ. ಹೀಗೆಯೆ ಜೀವನು ಕೂಡ ತನ್ನ ಪ್ರಯತ್ನವನ್ನು ಹೆಚ್ಚು ಮಾಡಿದರೆ ಇದೇ ಜನ್ಮದಲ್ಲಿಯೇ ಏಕೆ ಮುಕ್ತನಾಗಬಾರದು? ಎಲ್ಲಾ ಜಂತುಗಳಿಗೂ ಕೊನೆಗೆ ಮುಕ್ತಿಯಾಗಿಯೇ ತೀರುವುದೆಂಬುದೇನೋ ಸರಿಯೆ. ಆದರೆ ಆ ಕೋಟಿಗಟ್ಟಲೆ ಯುಗಗಳನ್ನು ಕಳೆಯುವುದು ಯಾರಿಗೆ ಬೇಕು? ಅದೇ ಗತಿಯನ್ನು ಕೂಡಲೆ ಇದೇ ಶರೀರದಲ್ಲಿಯೇ, ಈ ಮನುಷ್ಯ ಜನ್ಮದಲ್ಲಿಯೇ, ಏತಕ್ಕೆ ಪಡೆಯಕೂಡದು? ಆ ಅನಂತ ಜ್ಞಾನವನ್ನೂ ಅನಂತ ಶಕ್ತಿಯನ್ನೂ ಈಗಲೇ ಏತಕ್ಕೆ ಸಂಪಾದಿಸಬಾರದು?

ಮೆಲ್ಲಗೆ ಮಜಲಿನಿಂದ ಮಜಲನ್ನು ಮುಟ್ಟುತ್ತ ಮನುಷ್ಯರೆಲ್ಲ ಮುಕ್ತರಾಗುವವರೆಗೆ ಕಾದುಕೊಂಡಿರುವುದನ್ನು ಬಿಟ್ಟು ಜ್ಞಾನಾರ್ಜನೆಯನ್ನು ಹೆಚ್ಚು ಹೆಚ್ಚು ಬೆಳಸಿಕೊಂಡು ಬೇಗನೆ

ಪೂರ್ಣ ಸ್ಥಿತಿಯನ್ನು ಪಡೆಯುವ ಕ್ರಮವನ್ನು ಹೇಳಿಕೊಡುವುದೇ ಯೋಗಿಗಳ ಮತ್ತು ಎಲ್ಲಾ ಯೋಗಶಾಸ್ತ್ರದ ಪರಮೋದ್ದೇಶವು. ಈ ಜಗತ್ತಿನಲ್ಲಿ ಆಗಿ ಹೋದ ದೊಡ್ಡ ದೊಡ್ಡ ಪ್ರವಾದಿಗಳೂ, ಮಹಾತ್ಮರೂ, ತತ್ತ್ವದರ್ಶಿಗಳೂ ಏನು ಮಾಡಿದರು? ಒಂದು ಗೇಣುದ್ದ ಜನ್ಮದಲ್ಲಿ ಜನಗಳ ಬಾಳ್ವೆಯನ್ನೆಲ್ಲ ಬಾಳಿ ಸಾಮಾನ್ಯ ಜನರಿಗೆ ಸಿದ್ಧಿಯಾಗುವುದಕ್ಕೆ ಎಷ್ಟು ಕಾಲ ಬೇಕೋ ಅಷ್ಟು ಕಾಲವನ್ನು ಆ ಜನ್ಮದಲ್ಲಿಯೇ ಮುಗಿಸಿಬಿಟ್ಟರು. ಇಂಥವರು ಒಂದೇ ಜನ್ಮದಲ್ಲಿಯೇ ಸಿದ್ಧರಾಗುವರು. ಅವರಿಗೆ ಇನ್ನೊಂದರ ಯೋಚನೆಯೆ ಇರುವುದಿಲ್ಲ. ಅವರು ಮತ್ತೊಂದು ಪ್ರಯೋಜನವನ್ನು ಒಂದು ಕ್ಷಣವೂ ಬಗೆಯುವುದಿಲ್ಲ. ಆದುದರಿಂದಲೆ ಅವರಿಗೆ ದಾರಿಯು ಹತ್ತಿರವಾಗುವುದು. ಹೀಗೆ ವಿಷಯಗಳನ್ನು ಬೇಗ ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಬೆಳಸಿಕೊಂಡು ಕಾಲವನ್ನು ಹ್ರಸ್ವಮಾಡಿಕೊಳ್ಳುವುದೇ ಸಮಾಧಿಯು. ಸಮಾಧಿಯನ್ನು ಪಡೆಯುವ ಕ್ರಮವನ್ನು ಹೇಳಿಕೊಡುವ ಶಾಸ್ತ್ರಕ್ಕೆ ರಾಜಯೋಗವೆಂದು ಹೆಸರು.

ಪ್ರಾಣಾಯಾಮಕ್ಕೂ ಪ್ರೇತಾತ್ಮವಾದಕ್ಕೂ ಏನಾದರೂ ಸಂಬಂಧವಿದೆಯೆ ? ಪ್ರೇತಾತ್ಮವಾದವೂ ಒಂದು ಬಗೆಯ ಪ್ರಾಣಾಯಾಮವೆ. ಪ್ರೇತಾತ್ಮಗಳು ಇರುತ್ತವೆ. ಆದರೆ ಅವು ನಮಗೆ ಕಾಣಿಸುವುದಿಲ್ಲವೆಂಬುದು ನಿಜವಾದರೆ ಅಂಥ ಪ್ರೇತಾತ್ಮಗಳು ನೂರಾರು ನಮ್ಮ ಸುತ್ತಲೂ ಇದ್ದರೂ ಅವುಗಳನ್ನು ನೋಡುವುದಾಗಲಿ, ಮುಟ್ಟುವುದಾಗಲಿ, ಮತ್ತಾವ ಬಗೆಯಲ್ಲಿ ತಿಳಿಯುವದಾಗಲಿ ನಮ್ಮಿಂದಾಗದೆ ಇರಬಹುದು. ನಾವು ಅವುಗಳ ಶರೀರದೊಳಗೆ ಈಚೆಯಿಂದ ಹೋಗಿ ಆಚೆ ಬರುತ್ತಿದ್ದರೂ ಅವಕ್ಕೆ ನಮ್ಮ ವಿಚಾರವು ಗೊತ್ತಿಲ್ಲದೆ ಇರಬಹುದು. ವೃತ್ತದೊಳಗಿನ ವೃತ್ತದಂತೆ ಒಂದು ಲೋಕದೊಳಗೆ ಇನ್ನೊಂದು ಲೋಕವಿರುವುದು. ನಮಗೆ ಐದು ಇಂದ್ರಿಯಗಳಿವೆ. ನಮ್ಮಲ್ಲಿರುವ ಪ್ರಾಣದ ಚಲನೆಯು ಒಂದಾನೊಂದು ಸ್ಥಿತಿಯಲ್ಲಿರುವುದು. ಯಾವ ಯಾವ ಪ್ರಾಣಿಗಳಿಗೆ ಪ್ರಾಣದ ಚಲನೆಯು ಇದೇ ಸ್ಥಿತಿಯಲ್ಲಿರುವುದೊ ಅವುಗಳೆಲ್ಲ ಒಂದಕ್ಕೊಂದು ಕಾಣಿಸುತ್ತವೆ. ಆದರೆ ಯಾವ ಪ್ರಾಣಿಗಳಲ್ಲಿ ಈ ಚಲನೆಯು ಇದಕ್ಕಿಂತ ಮೇಲಿನ ಸ್ಥಿತಿಯಲ್ಲಿರುವುದೊ ಅವುಗಳು ಕಾಣಿಸುವುದಿಲ್ಲ. ದೀಪ ಪ್ರಕಾಶವನ್ನು ಹೆಚ್ಚು ಮಾಡುತ್ತ ಮಾಡುತ್ತ ಹೋದರೆ ಕೊನೆಗೆ ಅದು ನಮಗೆ ಕಾಣಿಸುವುದೆ ಇಲ್ಲ; ಆದರೆ ಕಣ್ಣಿನ ಸಾಮರ್ಥ್ಯವು ಹೆಚ್ಚಾಗಿರುವ ಪ್ರಾಣಿಗಳಿದ್ದರೆ ಅವಕ್ಕೆ ಈ ಹೆಚ್ಚಿನ ಬೆಳಕು ಕಾಣಿಸಬಹುದು. ಇದಲ್ಲದೆ ಕಂಪನಗಳು[1] ಬಹು ತಗ್ಗಾಗಿದ್ದರೆ ನಮಗೆ ಬೆಳಕು ಕಾಣಿಸುವುದಿಲ್ಲ. ಆದರೆ ಬೆಕ್ಕು, ಗೂಬೆ ಮೊದಲಾದ ಇನ್ನೂ ಕೆಲವು ಪ್ರಾಣಿಗಳಿಗೆ ಅದೇ ಬೆಳಕು ಕಾಣಿಸುವುದು. ನಮ್ಮ ದೃಷ್ಟಿಪಥವೆಂಬುದು ಈ ಪ್ರಾಣ ಚಲನೆಯು ನಡೆಯುವುದರಲ್ಲಿ ಒಂದು ಭಾಗ ಮಾತ್ರವಾಗಿರುತ್ತದೆ. ಉದಾಹರಣೆಗೆ ವಾಯುಮಂಡಲವನ್ನು[2]

---

1. ನವೀನಶಾಸ್ತ್ರಕಾರರ ಸಿದ್ಧಾಂತವೇನೆಂದರೆ : ಯಾವುದೇ ಆಗಲಿ ವಸ್ತುವಿನಲ್ಲಿರುವ ಅಣುಗಳು ಕಣ್ಣಿಗೆ ಕಾಣದಷ್ಟು ವೇಗದಲ್ಲಿ ಚಲನೆಯಾಗುತ್ತಲೆ ಇರುವುವು. ಈ ಚಲನೆ ಅಥವಾ ಅಣುಕಂಪನೆ ಬಹುವೇಗವಾದರೆ ಉಷ್ಣವೆಂಬುದು ಹುಟ್ಟಿ ಆಕಾಶವೆಂಬ ಒಂದಾನೊಂದು ಬಹುಸೂಕ್ಷ್ಮವಾದ ಪದಾರ್ಥದ ಮೂಲಕ ಎಲ್ಲಾ ಕಡೆಗೂ ಹರಡಿಕೊಳ್ಳುವುದು. ಈ ಉಷ್ಣವು ಶಕ್ತಿಯೇ ಹೊರತು ಸ್ವತಃ ಪದಾರ್ಥವಲ್ಲ. ಅಣುಗಳ ಕಂಪನೆಯು ಇನ್ನೂ ಜೋರಾದರೆ ಉಷ್ಣವೇ ಬೆಳಕೆನಿಸುವುದು. ಹೀಗೆ ಕಂಪನೆಯ ವೇಗವು ಎಷ್ಟು ಹೆಚ್ಚಾದರೆ ಅಷ್ಟು ಪ್ರಕಾಶವೂ ಹೆಚ್ಚುವುದು.

2. ಭೂಮಿಯ ಸುತ್ತಲೂ ವಾಯುವಿರುವುದೇ ಹೊರತು ಕೊನೆಯವರೆಗೂ ಇರುವುದಿಲ್ಲ. ಇನ್ನೂರು ಮೈಲಿಗಳ ಮೇಲೆ ಶುದ್ಧವಾಗಿ ನಿರ್ವಾತ ಪ್ರದೇಶವಿರುವುದೆಂದು ಈಗಿನ ಶಾಸ್ತ್ರಜ್ಞರು ಹೇಳುವರು. ವಾಯುವಿರುವ ಪ್ರದೇಶವನ್ನೆಲ್ಲ ವಾಯುಮಂಡಲವೆಂದು ಕರೆಯುವರು.

ತೆಗೆದುಕೊಳ್ಳೋಣ. ಇದು ರಾಶಿಯ ಮೇಲೆ ರಾಶಿಯಾಗಿ ಬಿದ್ದಿರುವುದು. ಆದರೆ ಭೂಮಿಗೆ ಹತ್ತಿರವಿರುವ ರಾಶಿಗಳು ಮೇಲಿನ ರಾಶಿಗಳಿಗಿಂತ ಒತ್ತೊತ್ತಾಗಿರುತ್ತವೆ. ಮೇಲಮೇಲಕ್ಕೆ ಹೋದ ಹಾಗೆಲ್ಲ ವಿರಳವಿರಳವಾಗುತ್ತ ಬರುವುದು. ಅಥವಾ ಸಾಗರವನ್ನು ದೃಷ್ಟಾಂತಕ್ಕೆ ತೆಗೆದುಕೊಳ್ಳೋಣ. ಅದರೊಳಗೆ ಎಷ್ಟೆಷ್ಟು ಕೆಳಕ್ಕೆ ಹೋದರೆ ನೀರಿನ ಭಾರವು[1] ಅಷ್ಟಷ್ಟು ಹೆಚ್ಚಾಗುತ್ತ ಹೋಗುತ್ತದೆ. ಆದುದರಿಂದ ಸಮುದ್ರದ ತಳದಲ್ಲಿರುವ ಪ್ರಾಣಿಗಳು ಮೇಲಕ್ಕೆ ಬರುವುದಕ್ಕಾಗುವುದಿಲ್ಲ. ಮೇಲಕ್ಕೆ ಬಂದರೆ ಅವುಗಳ ಮೈ ಚೂರುಚೂರಾಗಿ ಒಡೆದು ಹೋಗುತ್ತದೆ. ಬ್ರಹ್ಮಾಂಡವನ್ನೆಲ್ಲ ಆಕಾಶದ ಸಮುದ್ರವೆಂದು ಕಲ್ಪಿಸೋಣ. ಈ ಸಮುದ್ರದಲ್ಲಿ ಪ್ರಾಣಕಾರ್ಯದಿಂದ ಬೇರೆ ಬೇರೆ ಪ್ರಮಾಣದಲ್ಲಿ ಕಂಪಿಸುತ್ತಿರುವ ಆಕಾಶದ ಪದರಗಳು ಒಂದರ ಮೇಲೆ ಒಂದರಂತೆ ಒಡ್ಡಿರುವುವು. ಕೇಂದ್ರ ಸ್ಥಾನಕ್ಕೆ ಬಹುದೂರದಲ್ಲಿ ಕಂಪನಗಳ ವೇಗವು ಕಡಿಮೆಯಾಗಿಯೂ ಹತ್ತಿರಕ್ಕೆ ಬಂದ ಹಾಗೆಲ್ಲ ಹೆಚ್ಚಾಗಿಯೂ ಇರುವುದು. ಒಂದು ಜಾತಿಯ ಕಂಪನೆಯಿಂದ ಕೂಡಿರುವ ಭಾಗವು ಒಂದು ಲೋಕವೆನಿಸುವುದು. ಇಷ್ಟು ಲಕ್ಷ ಮೈಲಿಗಳವರೆಗೆ ಒಂದು ತರದ ಕಂಪನೆಯಿಂದ ಕೂಡಿರುವುದರಿಂದ ಒಂದು ಲೋಕ; ಅಲ್ಲಿಂದ ಮುಂದಕ್ಕೆ ಇಷ್ಟು ಲಕ್ಷ ಮೈಲಿಗಳವರೆಗೆ ಇನ್ನೂ ವೇಗವಾದ ಕಂಪನೆಯಿಂದ ಕೂಡಿರುವುದರಿಂದ ಮತ್ತೊಂದು ಲೋಕ; ಹೀಗೆ ಆಕಾಶ ಮಂಡಲವನ್ನು ಬೇರೆ ಬೇರೆ ಲೋಕಗಳಾಗಿ ವಿಂಗಡಿಸಿದೆಯೆಂದು ಕಲ್ಪಿಸೋಣ. ಆಗ ಒಂದು ಜಾತಿಯ ಕಂಪನಾವಿಶೇಷಗಳಿಂದ ಕೂಡಿದ ಒಂದು ಲೋಕದಲ್ಲಿರುವವರು ತಮ್ಮ ಲೋಕದಲ್ಲಿರುವವರನ್ನು ನೋಡಲಾಪರೆ ಹೊರತು ತಮಗಿಂತ ಮೇಲಿನ ಲೋಕದಲ್ಲಿರುವವರನ್ನು ನೋಡಲಾರರು. ಆದರೆ ದುರ್ಬೀನು, ಭೂತಗನ್ನಡಿ ಇವುಗಳ ಸಹಾಯದಿಂದ ನಮ್ಮ ದೃಷ್ಟಿ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಆಗುವಂತೆ ಯೋಗಾಭ್ಯಾಸದಿಂದ ಲೋಕಾಂತರದಲ್ಲಿರುವ ಕಂಪನಾಸ್ಥಿತಿಯನ್ನು ನಾವು ಪಡೆದುಕೊಂಡರೆ ಅಲ್ಲಿ ನಡೆಯುವದನ್ನು ನೋಡುವುದಕ್ಕಾಗುತ್ತದೆ. ಈ ಕೋಣೆಯಲ್ಲಿ ನಮಗೆ ಕಾಣದೆ ಇರುವ ಜಂತುಗಳು ಎಷ್ಟೋ ಇವೆಯೆಂದು ಭಾವಿಸೋಣ. ಅವುಗಳಲ್ಲಿ ಪ್ರಾಣವು ಒಂದಾನೊಂದು ಕಂಪನಾ ಸ್ಥಿತಿಯಲ್ಲಿರುವುದು; ನಮ್ಮಲ್ಲಿ ಬೇರೊಂದು ಸ್ಥಿತಿಯಿರುವುದು. ಅವುಗಳಲ್ಲಿರುವ ವೇಗವು ಜೋರಾಗಿಯೂ ನಮ್ಮಲ್ಲಿ ಕಡಿಮೆಯಾಗಿಯೂ ಇದೆಯೆಂದು ಇಟ್ಟುಕೊಳ್ಳೋಣ. ಅವುಗಳೂ ನಮ್ಮಂತೆಯೆ ಪ್ರಾಣದಿಂದಲೆ ಆಗಿರುತ್ತವೆ. ಎಲ್ಲರೂ ಪ್ರಾಣವೆಂಬ ಒಂದೇ ಸಾಗರದ ಅಲೆಗಳಾಗಿದ್ದರೂ ಅವರಲ್ಲಿ ಕಂಪನೆಯ ವೇಗವು ಬೇರೆ ಬೇರೆಯಾಗಿರುವುದು. ನನ್ನಲ್ಲಿರುವ ಕಂಪನೆಯು ಹೆಚ್ಚು ವೇಗವಾದರೆ ಈ ಲೋಕವೇ ನನ್ನ ಪಾಲಿಗೆ ಬೇರೆ ಆಗುವುದು. ಆಮೇಲೆ ನೀವು ನನಗೆ ಕಾಣಿಸುವುದೇ ಇಲ್ಲ; ನೀವು ಹೋಗಿ ಆ ಪ್ರಾಣಿಗಳು ಕಾಣಿಸುವುವು. ಈ ಮಾತು ನಿಜವೆಂಬುದು ನಿಮ್ಮಲ್ಲಿಯೂ ಕೆಲವರಿಗೆ ಗೊತ್ತಿರಬಹುದು. ಮನಸ್ಸನ್ನು ಹೆಚ್ಚಿನ ಸ್ಥಿತಿ ವಿಶೇಷಕ್ಕೆ ತರುವ ಪ್ರಕಾರಕ್ಕೆಲ್ಲ ಯೋಗದಲ್ಲಿ ಒಂದೇ

---

1. ದ್ರವರೂಪದಲ್ಲಿರುವ ವಸ್ತುಗಳೂ ವಾಯುರೂಪದಲ್ಲಿರುವ ವಸ್ತುಗಳೂ ಎಲ್ಲಾ ಕಡೆಯಲ್ಲಿಯೂ ನೂಕಿಕೊಂಡು ಹೋಗುವ ಶಕ್ತಿಯಾಗಿವೆಯೆಂದು ಶಾಸ್ತ್ರಜ್ಞರು ನಿರ್ಣಯಿಸಿರುವರು. ನೀರಿನ ಆಳವು ಹೆಚ್ಚಾದಷ್ಟೂ ಈ ಶಕ್ತಿಯು ಹೆಚ್ಚಾಗಿರುತ್ತದೆ. ಹೀಗಿರುವುದರಿಂದ ಈ ಪ್ರಾಣಿಗಳ ಮೈಯೊಳಗಿನ ವಾಯುವಿನ ನೂಕುವ ಶಕ್ತಿಯನ್ನು ತಡೆದುಕೊಳ್ಳುವುದಕ್ಕೆ ಅನುಕೂಲಿಸುವಷ್ಟು ನೀರಿನ ನೂಕುವ ಶಕ್ತಿ ಇರುವುದು. ಇಂಥ ಪ್ರಾಣಿಗಳು ನೀರಿನ ಮೇಲಕ್ಕೆ ಬಂದರೆ ಹೊರಗಣ ನೂಕುವ ಶಕ್ತಿಯು ಕಡಿಮೆಯಾಗುವುದು; ಒಳಗಣ ಶಕ್ತಿಯು ಹೆಚ್ಚಾಗುವುದು. ಇದರಿಂದ ಪ್ರಾಣಿಯ ಮೈಯೊಳಗಣ ವಾಯು ಹಿಗ್ಗಿ ಪ್ರಾಣಿಯ ಮೈಯನ್ನು ಒಡೆದು ಹಾಕುವುದು.

ಹೆಸರು. ಇದನ್ನೆ ಸಮಾಧಿಯೆನ್ನುವರು. ಈ ಹೆಚ್ಚಿನ ವೇಗದ ಕಂಪನಾ ಸ್ಥಿತಿಗಳೂ, ಸಂವೇದನಾಸ್ಥಿತಿಗೆ [1] ಮೀರಿದ ಮನಸ್ಸಿನ ವೃತ್ತಿಗಳೂ ಸಮಾಧಿಯೆಂಬ ಮಾತಿನಲ್ಲಿಯೆ ಅಂತರ್ಗತವಾಗಿವೆ. ಈ ಸಮಾಧಿ ಸ್ಥಿತಿಯ ಕೆಳಗಿನ ಮೆಟ್ಟಿಲುಗಳಲ್ಲಿ ಇಂಥ ಪ್ರಾಣಿಗಳನ್ನು ನೋಡುವುದಕ್ಕೆ ಆಗುತ್ತದೆ. ಉತ್ತಮ ಸಮಾಧಿಯಲ್ಲಿ ಪರಮಾರ್ಥವೇ ಗೋಚರವಾಗುವುದು. ಈ ವಿಧ ವಿಧವಾದ ಜೀವರಾಶಿಗಳು ಯಾವುದರಿಂದ ಆಗಿರುವರೊ ಆ ವಸ್ತುವೇ ಕಾಣುವುದು. ಆ ಮಣ್ಣಿನ ಮುದ್ದೆಯು [2] ನಮಗೆ ಗೊತ್ತಾಗುವುದರಿಂದ ಜಗತ್ತಿನಲ್ಲಿರುವ ಮಣ್ಣಿನ ವಸ್ತುಗಳೆಲ್ಲವೂ ಗೊತ್ತಾದಂತಾಗುವುದು.

ಈ ಪ್ರಕಾರವಾಗಿ ಪ್ರೇತಾತ್ಮವಾದದಲ್ಲಿ ಎಷ್ಟು ನಿಜವಾದ ಭಾಗವಿರುವುದೊ ಅದು ಪ್ರಾಣಾಯಾಮದಲ್ಲಿರುವುದು. ಹೀಗೆಯೆ ಯಾವ ದೇಶದಲ್ಲಿಯೇ ಆಗಲಿ ಯಾವ ಮತ ಭೇದದವರು ಅಥವಾ ಯಾವ ಸಮಾಜದವರು ಒಬ್ಬರೂ ಕಾಣದ, ರಹಸ್ಯವಾದ ಗುಟ್ಟೊಂದನ್ನೆ ಶೋಧಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದರೆ ಅದು ಕೂಡ ಈ ಯೋಗವೆ; ಈ ಪ್ರಾಣವನ್ನು ಜಯಿಸುವುದಕ್ಕಾಗಿ ಮಾಡಿದ ಪ್ರಯತ್ನವೆ ಎಂದು ಸಿದ್ಧವಾಗುವುದು. ಎಲ್ಲೆಲ್ಲಿ ಮಹಾ ಸಾಮರ್ಥ್ಯ ಕಂಡುಬಂದರೂ ಅದೆಲ್ಲ ಈ ಪ್ರಾಣದ ರೂಪಾಂತರವೆ ಎಂದು ತಿಳಿಯಬೇಕು. ಇಷ್ಟೇಕೆ, ಭೌತಿಕ ಶಾಸ್ತ್ರಗಳನ್ನು ಕೂಡ ಪ್ರಾಣಾಯಾಮದೊಳಗೇ ಸೇರಿಸಬಹುದು. ಹೊಗೇಯಂತ್ರವು ತಿರುಗುವುದು ಯಾತರಿಂದ? ನೀರಿನ ಆವಿಯಲ್ಲಿರುವ ಪ್ರಾಣದಿಂದ. ವಿದ್ಯುಚ್ಛಕ್ತಿ ಮೊದಲಾದ ರೂಪದಲ್ಲಿ ತೋರುವುದೆಲ್ಲ ಪ್ರಾಣವಲ್ಲದೆ ಮತ್ತೇನು? ಭೌತಿಕಶಾಸ್ತ್ರವೆಂದರೇನು? ಬಾಹ್ಯದ ಉಪಕರಣಗಳನ್ನು ಉಪಯೋಗಿಸುವ ಪ್ರಾಣಾಯಾಮವು. ಪ್ರಾಣದ ಭೌತಿಕ ರೂಪಗಳನ್ನು ಕೇವಲ ಭೌತಿಕ ಸಾಧನಗಳಿಂದಲೆ ವಶಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವ ಪ್ರಾಣಾಯಾಮಕ್ಕೆ ಭೌತಿಕ ಶಾಸ್ತ್ರವೆಂದೂ ಮನೋವೃತ್ತಿ ರೂಪವಾಗಿರುವ ಪ್ರಾಣವನ್ನು ಆಂತರಿಕ ಸಾಧನಗಳಿಂದ ವಶಮಾಡಿಕೊಳ್ಳುವ ಪ್ರಾಣಾಯಾಮದ ಭಾಗಕ್ಕೆ ರಾಜಯೋಗವೆಂದೂ ಹೆಸರು.

---

1. ನಾನು ಈ ಕಾರ್ಯವನ್ನು ಮಾಡುತ್ತಿದ್ದೇನೆಂದು ಎಚ್ಚರದಿಂದ ತಿಳಿಯುವುದಕ್ಕೆ ವೇದನೆಯೆಂದು ಹೆಸರು. ನಮಗೆ ಗೊತ್ತಿಲ್ಲದೆ ಸಹಜವಾಗಿ ನಡೆಯುವ ಕಾರ್ಯಗಳ ಸ್ಥಿತಿಗೆ ಸಹಜಬುದ್ಧಿಯೆನ್ನಬೇಕು. ಸಂವೇದನೆಗಿಂತ ಹೆಚ್ಚಿನ ಸ್ಥಿತಿಯೇ ಸಮಾಧಿ.

2. ಛಾಂದೋಗ್ಯೋಪನಿಷತ್ತಿನ ಆರನೆ ಅಧ್ಯಾಯದಲ್ಲಿ ಕೊಟ್ಟಿರುವ ದೃಷ್ಟಾಂತವಿದು. ಕಾರ್ಯವು ಕಾರಣಕ್ಕಿಂತ ಭಿನ್ನವಲ್ಲ. ಆದ ಕಾರಣ ಮಣ್ಣಿನಿಂದಾದ ಗಡಿಗೆ ಮೊದಲಾದವುಗಳು ಕಾರಣವಾದ ಮಣ್ಣಿನಿಂದ ಭಿನ್ನವಲ್ಲ. ವಿಕಾರಗಳೆಲ್ಲ ಕೇವಲ ಹೆಸರು ಮಾತ್ರಕ್ಕೆ ಇರುವವೇ ಹೊರತು ನಿಜವಾಗಿ ನೋಡಿದರೆ ವಿಕಾರವೇ ಇರುವುದಿಲ್ಲ. ಹೀಗಿರುವುದರಿಂದ ಕಾರಣರೂಪವಾದ ಮಣ್ಣನ್ನು ತಿಳಿದುಕೊಂಡರೆ ಕಾರ್ಯಗಳ ತತ್ತ್ವಾಂಶವನ್ನೆಲ್ಲ ತಿಳಿದುಕೊಂಡಂತೆಯೆ. ಹೀಗೆಯೆ ಜಗತ್ತಿಗೆಲ್ಲ ಕಾರಣವಾಗಿರುವ ಪರಮಾರ್ಥವನ್ನು ತಿಳಿದುಕೊಂಡರೆ ಜಗತ್ತನ್ನೆ ತಿಳಿದುಕೊಂಡಂತಾಯಿತು ಎಂದು ದೃಷ್ಟಾಂತದ ಅಭಿಪ್ರಾಯ.

# 4ನೇ ಅಧ್ಯಾಯ – ಆಧ್ಯಾತ್ಮಿಕ ಪ್ರಾಣವು

ಯೋಗಿಗಳು ಹೇಳುವುದೇನೆಂದರೆ, ಬೆನ್ನು ಮೂಳೆಯಲ್ಲಿ ಇಡೆ, ಪಿಂಗಳ ಎಂಬ ಎರಡು ನಾಡಿಗಳು ಸಂಚಾರಮಾಡುತ್ತಿವೆ. ಬೆನ್ನು ಹುರಿಯಲ್ಲಿ ಸುಷುಮ್ನೆಯೆಂಬ ಪೊಳ್ಳು ದಾರಿಯೊಂದಿರುವುದು. ಈ ದಾರಿಯ ಕೆಳಗಡೆಯಲ್ಲಿ ಕುಂಡಲಿನಿ ಪದ್ಮವಿರುವುದೆಂದು ಯೋಗಿಗಳು ಹೇಳುವರು. ಇದು ತ್ರಿಕೋಣಾಕಾರವಾಗಿರುವುದೆಂದು ಹೇಳುತ್ತಾರೆ. ಇದರಲ್ಲಿ ಕುಂಡಲಿನಿ ಎಂಬ ಶಕ್ತಿಯು ಮಂಡಲವನ್ನು ಹಾಕಿಕೊಂಡು ಕೂತಿರುವುದಂತೆ. ಇದು ಯೋಗಿಗಳ ಸಾಂಕೇತಿಕ ಭಾಷೆ. ಆ ಕುಂಡಲಿನಿಯು ಎಚ್ಚತ್ತರೆ ಈ ಪೊಳ್ಳುದಾರಿಯಲ್ಲಿ ನುಗ್ಗುವುದಕ್ಕೆ ಹೋಗುತ್ತದೆ. ಅದು ಹಾಗೆ ಮೇಲಮೇಲಕ್ಕೆ ಹತ್ತಿದ ಹಾಗೆಲ್ಲ ಮನಸ್ಸಿನ ಪದರಗಳು, ಒಂದಾಗುತ್ತಲೊಂದು ಬಿಚ್ಚಿದಂತಾಗಿ ಯೋಗಿಗೆ ಬೇರೆ ಬೇರೆ ಜ್ಞಾನವೂ ವಿಚಿತ್ರವಾದ ಸಿದ್ಧಿಗಳೂ ಆಗುತ್ತವೆ. ಯಾವಾಗ ಅದು ಮೆದುಳನ್ನು ಸೇರುತ್ತದೆಯೊ ಆಗ ಯೋಗಿಯು ಶರೀರದಿಂದಲೂ ಮನಸ್ಸಿನಿಂದಲೂ ಸಂಪೂರ್ಣವಾಗಿ ಬೇರ್ಪಟ್ಟು ಮುಕ್ತಾತ್ಮನಾಗುವನು. ಬೆನ್ನು ಮೂಳೆಯ ರಚನೆಯು ಒಂದು ವಿಲಕ್ಷಣ ರೀತಿಯಲ್ಲಿರುವುದು. ಇಂಗ್ಲೀಷಿನ (8) ಎಂಟೆಂಬ ಅಂಕೆಯನ್ನು 8 ಹೀಗೆ ಅಡ್ಡಡ್ಡವಾಗಿ ಹಾಕಿದರೆ ಎರಡು ಭಾಗಗಳು ನಡುವೆ ಸೇರಿಕೊಂಡಿರುತ್ತವೆ. ಎಂಟರ ಮೇಲೆ ಎಂಟು ಬರುವಂತೆ ಒಂದರ ಮೇಲೊಂದನ್ನು ಸೇರಿಸಿದರೆ ಬೆನ್ನು ಹುರಿಯಂತೆ ಕಾಣುವುದು. ಎಡಗಡೆಯೆ ಇಡೆ, ಬಲಗಡೆ ಪಿಂಗಳ; ಬೆನ್ನು ಮೂಳೆಯ ಮಧ್ಯದಲ್ಲಿರುವ ಪೊಳ್ಳು ಕೊಳವಿಯೆ ಸುಷುಮ್ನೆ. ಬೆನ್ನಿನ ಕಿಬ್ಬರಿಯಲ್ಲಿರುವ ಎಲುಬುಗಳಲ್ಲಿ ಬೆನ್ನು ಹುರಿಯು ಸೂಕ್ಷ್ಮವಾದ ದಾರವಾಗಿ ಕಾಣುತ್ತಿರುವುದು. ಆ ದಾರದಲ್ಲಿಯೂ ಕೂಡ ಪೊಳ್ಳಾದ ದ್ವಾರವಿದ್ದೇ ಇರುವುದು; ಆದರೆ ಬಹು ಸಣ್ಣದಾಗಿರುತ್ತದೆ. ಈ ದ್ವಾರವು ತೀರ ಕೆಳಗಡೆಯಲ್ಲಿ ಮುಚ್ಚಿರುವುದು. ಇಲ್ಲಿ ಅಧೋಮಂಡಲವೆಂಬ ನರಮಂಡಲವಿರುವುದು. ಇದು ತ್ರಿಕೋಣಾಕಾರವಾಗಿರುವುದೆಂದು ಶರೀರಶಾಸ್ತ್ರದಲ್ಲಿ ಹೇಳಿರುವುದು. ಬೆನ್ನು ಮೂಳೆಯಲ್ಲಿ ಅಲ್ಲಲ್ಲಿರುವ ಮಂಡಲಗಳನ್ನೆ ಯೋಗಿಯು ಹೇಳುವ ಕಮಲಗಳೆಂದರೂ ಕೂಡುವುದು.

ಯೋಗಿಯು ಇದರಲ್ಲಿ ಅನೇಕ ಚಕ್ರಗಳನ್ನು ಕಲ್ಪಿಸಿಕೊಂಡಿರುತ್ತಾನೆ. ಇವುಗಳಲ್ಲಿ ಮೂಲಾಧಾರವೆಂಬುದು ಮೊದಲನೆಯದು; ಮೆದುಳಿನಲ್ಲಿರುವ ಸಹಸ್ರಾರವೆಂಬ ಸಾವಿರ ದಳದ ಕಮಲವೇ ಕೊನೆಯದು. ಬೇರೆ ಬೇರೆ ಮಂಡಲಗಳನ್ನೆ ಈ ಕಮಲಗಳೆಂದು ನಾವು ಇಟ್ಟು ಕೊಂಡರೆ ಯೋಗಿಯ ಅಭಿಪ್ರಾಯವನ್ನು ಈಗಿನ ಶರೀರ ಶಾಸ್ತ್ರ ರೀತಿಯಿಂದ ಸುಲಭವಾಗಿ ತಿಳಿದುಕೊಳ್ಳಬಹುದು. ಈ ನರಗಳಲ್ಲಿ ಎರಡು ಬಗೆಯ ಕಾರ್ಯಗಳಿವೆ. ಒಂದು ಒಳಕ್ಕೆ

ಹೋಗುವುದು; ಇನ್ನೊಂದು ಹೊರಕ್ಕೆ ಹೋಗುವುದು. ಒಂದು ಜ್ಞಾನವಾಹಿಯಾಗಿರುವುದು[1]; ಇನ್ನೊಂದು ಕ್ರಿಯಾವಾಹಿಯಾಗಿರುವುದು. ಒಂದು ಕೇಂದ್ರದ ಕಡೆಗೆ ಹೋಗುವುದಾಗಿಯೂ ಇನ್ನೊಂದು ಕೇಂದ್ರವನ್ನು ಬಿಟ್ಟು ಹೊರಡುವುದಾಗಿಯೂ ಇರುವುವು. ಒಂದರಿಂದ ಮೆದುಳಿಗೆ ಇಂದ್ರಿಯಗಳ ಜ್ಞಾನವು ತಿಳಿಯುವುದು; ಇನ್ನೊಂದು ಕಾರ್ಯದಿಂದ ಮೆದುಳಿನಿಂದ ಶರೀರದ ಹೊರಕ್ಕೆ ವೃತ್ತಿಗಳು ಬರುವುವು. ಈ ಎಲ್ಲಾ ಕಾರ್ಯಗಳೂ ಮೆದುಳಿಗೆ ಸಂಬಂಧಪಟ್ಟೆ ಇರುತ್ತವೆ. ಮುಂದೆ ಹೇಳುವ ಸಂಗತಿಗಳನ್ನು ಚೆನ್ನಾಗಿ ತಿಳಿಯಲು ಅನುಕೂಲವಾಗಬೇಕಾದರೆ ನೆನಪಿನಲ್ಲಿಡಬೇಕಾದ ವಿಚಾರಗಳು ಇನ್ನೂ ಕೆಲವಿದೆ. ಈ ಬೆನ್ನು ಹುರಿಯು ಮೆದುಳಿನಲ್ಲಿ ಒಂದು ಬಗೆಯ ಬುರುಡೆಯಾಗಿ ಪರಿಣಮಿಸಿದೆ. ಇದು ಮೆದುಳಿಗೆ ಸೇರಿಕೊಂಡಿಲ್ಲ; ಇದರ ಒಳಗಡೆ ಒಂದು ದ್ರವದಲ್ಲಿ ತೇಲಾಡಿಕೊಂಡಿರುತ್ತದೆ. ಹೀಗಿರುವುದರಿಂದ ತಲೆಗೆ ಏನಾದರೂ ಪೆಟ್ಟು ತಗಲಿದರೂ ಆ ಶಕ್ತಿಯು ದ್ರವದಲ್ಲಿ ಚದರಿಹೋಗುತ್ತದೆಯೇ ಹೊರತು ಬುರುಡೆಗೇನೂ ಅಪಾಯವಾಗುವುದಿಲ್ಲ. ಈ ವಿಷಯವು ಮುಂದಿನ ಗ್ರಂಥ ಭಾಗಕ್ಕೆ ಬಹಳ ಬೇಕಾಗುವುದು. ಎರಡನೆಯದೇನೆಂದರೆ, ಚಕ್ರಗಳಲ್ಲಿ ಮೂಲಾಧಾರ (ತೀರ ಕೆಳಗಣ ಚಿತ್ರ), ಸಹಸ್ರಾರ (ಮೆದುಳಿನಲ್ಲಿರುವ ಸಾವಿರದ ದಳದ ಪದ್ಮ) ಮತ್ತು ಮಣಿಪೂರ (ನಾಭಿಪ್ರದೇಶದಲ್ಲಿರುವ ಕಮಲ) ಇವು ಮೂರನ್ನೂ ಮುಖ್ಯವಾಗಿ ನೆನಪಿಟ್ಟಿರಬೇಕು. ಇನ್ನು ಪ್ರಕೃತಿ ಶಾಸ್ತ್ರದಿಂದ ಒಂದು ಸಂಗತಿಯನ್ನು ತೆಗೆದುಕೊಳ್ಳೋಣ. ವಿದ್ಯುಚ್ಛಕ್ತಿಯೆಂಬುದನ್ನು ಅದರ ಸಂಬಂಧವಾದ ಇನ್ನೂ ಅನೇಕ ಶಕ್ತಿಗಳ ವಿಚಾರವಾಗಿಯೂ ನಾವೆಲ್ಲರೂ ಕೇಳಿದ್ದೇವಷ್ಟೆ. ವಿದ್ಯುಚ್ಛಕ್ತಿ ಯೆಂದರೇನೆಂಬುದು ಯಾರಿಗೂ ಗೊತ್ತೇ ಇಲ್ಲ. ಇದುವರೆಗೆ ಗೊತ್ತಾಗಿರುವುದೇನೆಂದರೆ ಅದೊಂದು ಬಗೆಯ ಚಲನೆ. ಈ ಪ್ರಪಂಚದಲ್ಲಿ ಇನ್ನೂ ಅನೇಕ ಬಗೆಯ ಚಲನೆಗಳಿವೆ. ಅವುಗಳಿಗೂ ವಿದ್ಯುಚ್ಛಕ್ತಿಗೂ ಹೆಚ್ಚು ಕಡಿಮೆ ಏನು? ಇಗೋ! ಈ ಮೇಜಿನಲ್ಲಿ ಚಲನೆಯಾಗುತ್ತಿದೆಯೆಂದು ಕಲ್ಪಿಸೋಣ; ಎಂದರೆ ಇದರಲ್ಲಿರುವ ಅಣುಗಳು ನಾನಾ ಕಡೆಯಲ್ಲಿ ಕಂಪಿಸುತ್ತಿವೆಯೆಂದು ಇಟ್ಟುಕೊಳ್ಳಿ. ಇವುಗಳೆಲ್ಲ ಒಂದೇ ಕಡೆಗೆ ಚಲಿಸಿದರೆ ವಿದ್ಯುಚ್ಛಕ್ತಿಯಾಗುವುದು. ವಿದ್ಯುಚ್ಛಲನೆಯಿಂದ ಯಾವ ವಸ್ತುವಿನಲ್ಲಿಯೇ ಆಗಲಿ ಇರುವ ಅಣುಗಳೇ ಆಗಲಿ ಒಂದೇ ದಿಕ್ಕಿನಲ್ಲಿ ಚಲಿಸುವಂತಾಗುತ್ತದೆ. ಒಂದು ಕೋಣೆಯೊಳಗಿರುವ ವಾಯು ಕಣಗಳೆಲ್ಲ ಒಂದೇ ಕಡೆಯಲ್ಲಿ ಚಲಿಸುವಂತೆ ಮಾಡಿದರೆ ಆ ಕೋಣೆಯೇ ಒಂದು ವಿದ್ಯುಚ್ಛಕ್ತಿಗೆ ದೊಡ್ಡ ತವರು ಮನೆಯಾಗುವುದು. ಇಲ್ಲಿ ಶರೀರ ಶಾಸ್ತ್ರದಲ್ಲಿರುವ ಇನ್ನೊಂದು ವಿಷಯವನ್ನು ನಾವು ನೆನಪಿನಲ್ಲಿಡಬೇಕು. ಶ್ವಾಸೋಚ್ಛ್ವಾಸ ಪದ್ಧತಿಯು ಎಂದರೆ ಉಸಿರಾಟವು ಯಾವ ಸ್ಥಾನದ[2] ಅಧೀನವಾಗಿರುವುದೊ ಅದೇ ಸ್ಥಾನಕ್ಕೆ ನರಗಳ ಕಾರ್ಯಗಳೂ ಸ್ವಲ್ಪ ಮಟ್ಟಿಗೆ ಒಳಪಟ್ಟಿರುತ್ತವೆ.

---

1. ಹೊರಗೆ ನಡೆಯುವ ಕಾರ್ಯಗಳಿಂದ ಇಂದ್ರಿಯಗಳಿಗೆ ಗೋಚರವಾದ ಜ್ಞಾನವು ನರಗಳ ಮೂಲಕ ಮೆದುಳಿಗೆ ಮುಟ್ಟಿ ನಮಗೆ ತಿಳಿಯುವುದು. ಈ ನರವನ್ನು ಜ್ಞಾನವಾಹಿಯೆಂಬರು. ನಮ್ಮ ಇಚ್ಛಾಶಕ್ತಿಯಿಂದ ಕ್ರಿಯೆಯು ನರಗಳ ಮೂಲಕ ಶರೀರಭಾಗಗಳಿಗೆ ಹೋಗುವುದು. ಈ ನರವನ್ನು ಕ್ರಿಯಾವಾಹಿಯೆನ್ನುತ್ತಾರೆ.

2. ಮೆದುಳಿನ ಭಾಗವನ್ನು ಕೆಲವು ಸ್ಥಾನಗಳಾಗಿ ವಿಂಗಡಿಸಿರುತ್ತಾರೆ.

ಈಗ ಶ್ವಾಸಕ್ರಮವನ್ನು ಏತಕ್ಕೆ ಅಭ್ಯಾಸಮಾಡಬೇಕೆಂಬುದನ್ನು ವಿಚಾರ ಮಾಡೋಣ. ಇದರಿಂದಾಗುವ ಮೊದಲನೆಯ ಪ್ರಯೋಜನವೇನೆಂದರೆ, ಒಂದೇ ಸಮವಾಗಿ ಉಸಿರಾಡುವುದರಿಂದ ಶರೀರದಲ್ಲಿರುವ ಕಣಗಳೆಲ್ಲ ಒಂದೇ ಕಡೆಗೆ ಆಗುವ ಸಂಭವವಿರುವುದು. ಮನಸ್ಸು ಇಚ್ಛಾಶಕ್ತಿಯಾಗುವಾಗ ವೃತ್ತಿಗಳು ವಿದ್ಯುಚ್ಛಕ್ತಿಯಂತೆ ಚಲಿಸುವುವು. ನರಗಳನ್ನು ವಿದ್ಯುತ್ಪ್ರವಾಹಕ್ಕೆ ಹಚ್ಚಿದರೆ ಅವುಗಳಿಗೆ ಧ್ರುವಪ್ರದೇಶಿತ್ವಶಕ್ತಿ[1] ಬರುತ್ತದೆ. ಇದರಿಂದ ಇಚ್ಛಾಶಕ್ತಿಯು ನರಗಳ ವೃತ್ತಿಯಾಗುವಾಗ ಒಂದು ಬಗೆಯ ವಿದ್ಯುಚ್ಛಕ್ತಿಯಾಗುವುದೆಂದು ಸಿದ್ಧವಾಗುತ್ತದೆ. ಶರೀರದಲ್ಲಿ ಎಲ್ಲಾ ಕ್ರಿಯೆಗಳೂ ಸಂಪೂರ್ಣವಾಗಿ ಹೊಂದುಗಡೆಯಾದರೆ ಶರೀರವೆಂಬುದು ಸಂಕಲ್ಪ ಶಕ್ತಿಗೆ ಒಂದು ದೊಡ್ಡ ಉತ್ಪತ್ತಿ ಸ್ಥಾನವಾಗುವುದು. ಈ ಮಹಾಸಂಕಲ್ಪವೇ ಯೋಗಿಗೆ ಬೇಕಾದುದು. ಶ್ವಾಸವನ್ನು ಅಭ್ಯಾಸ ಮಾಡುವುದೇಕೆಂಬುದಕ್ಕೆ ಇದು ಶರೀರಶಾಸ್ತ್ರ ರೀತಿಯಿಂದ ಕೊಟ್ಟ ಉತ್ತರವಾಗಿದೆ. ಈ ಅಭ್ಯಾಸದಿಂದ ಶರೀರದಲ್ಲಿ ಕಾರ್ಯಗಳು ಹೊಂದುಗಡೆಯಾಗುತ್ತವೆ. ಆಗ ಶ್ವಾಸೋಚ್ಛ್ವಾಸದ ಅಧಿಷ್ಠಾನದ ಮೂಲಕ ಇತರ ಸ್ಥಾನಗಳೂ ನಮ್ಮ ವಶವಾಗುತ್ತವೆ.

ಇಲ್ಲಿ ಪ್ರಾಣಾಯಾಮದ ಉದ್ದೇಶವೇನೆಂದರೆ, ಮೂಲಾಧಾರದಲ್ಲಿ ಮಂಡಲವನ್ನು ಹಾಕಿಕೊಂಡು ಕೂತಿರುವ ಕುಂಡಲಿನಿ ಎಂಬ ಶಕ್ತಿಯನ್ನು ಎಬ್ಬಿಸುವುದು. ನಾವು ಏನು ನೋಡಿದರೂ, ಏನು ಕಲ್ಪನೆ ಮಾಡಿದರೂ, ಏನು ಕನಸು ಕಂಡರೂ ಆಕಾಶದಲ್ಲಿಯೇ ಕಾಣಬೇಕು. ಇದು ಮಹಾಕಾಶವೆಂಬ ಭೌತಿಕವಾದ ಸಾಧಾರಣಾಕಾಶವು. ಯೋಗಿಯಾದವನಿಗೆ ಮತ್ತೊಬ್ಬರ ಆಲೋಚನೆಗಳು ಗೊತ್ತಾಗುವಾಗಲೂ, ಅತೀಂದ್ರಿಯ ಪದಾರ್ಥಗಳು ಗೋಚರಿಸುವಾಗಲೂ ಚಿತ್ತಾಕಾಶವೆಂಬ ಮತ್ತೊಂದು ಬಗೆಯ ಆಕಾಶದಲ್ಲಿ ಗೋಚರಿಸುತ್ತವೆ. ಎಲ್ಲಿ ವಿಷಯವಿಲ್ಲದೆ ಅನುಭವವಾಗುವುದೊ - ಸ್ವಸ್ವರೂಪವನ್ನೆ ಆತ್ಮವು ಅರಿಯುವುದೊ - ಅದನ್ನು ಚಿದಾಕಾಶ ಎಂದರೆ ಜ್ಞಾನದ ಆಕಾಶವೆನ್ನುತ್ತಾರೆ. ಕುಂಡಲಿನಿಯು ಎದ್ದು ಸುಷುಮ್ನಾ ದ್ವಾರವನ್ನು ಹೋಗುತ್ತಲೆ ಅವನಿಗೆ ಎಲ್ಲಾ ಅನುಭವಗಳೂ ಚಿತ್ತಾಕಾಶದಲ್ಲಿ ಆಗುತ್ತವೆ. ಆ ದ್ವಾರವು ಮೆದುಳಿಗೆ ಹೋಗಿ ಸೇರುವ ಕಡೆಯನ್ನು ಆ ಕುಂಡಲಿನಿಯು ಸೇರುತ್ತಲೆ ನಿರ್ವಿಷಯಜ್ಞಾನವು ಚಿದಾಕಾಶದಲ್ಲಿ ಆಗುತ್ತದೆ. ಈಗ ವಿದ್ಯುಚ್ಛಕ್ತಿಯ ದೃಷ್ಟಾಂತವನ್ನು ತೆಗೆದುಕೊಳ್ಳಿ. ಮನುಷ್ಯನಿಗೆ ವಿದ್ಯುತ್ಪ್ರವಾಹವನ್ನು ಕಳುಹಿಸುವುದಕ್ಕೆ ತಂತಿಯೇ ಆಗಬೇಕು. ಆದರೆ ಪ್ರಪಂಚದಲ್ಲಿ ದೊಡ್ಡ ದೊಡ್ಡ ವಿದ್ಯುತ್ಪ್ರವಾಹಗಳೂ ಹೋಗುತ್ತಿವೆ. ಅಲ್ಲಿ ಯಾವ ತಂತಿಯೂ ಇಲ್ಲ. ಇದರಿಂದ ತಂತಿಯು ನಿಜವಾಗಿ ಅವಶ್ಯಕವಿಲ್ಲವೆಂದೂ, ಆದರೆ ನಮಗೆ ಅದನ್ನು ಬಿಟ್ಟರೆ ಗತಿಯಿಲ್ಲವಾದುದರಿಂದ ಅದನ್ನುಪಯೋಗಿಸಲೇ ಬೇಕಾಗಿರುತ್ತದೆಂದೂ ಗೊತ್ತಾಗುವುದು. ಇದರಂತೆ ಶರೀರದ ಎಲ್ಲಾ ವೃತ್ತಿ ಜ್ಞಾನಗಳೂ,ಕ್ರಿಯೆಗಳೂ ಮೆದುಳಿಗೂ ಮೆದುಳಿನಿಂದ ಹೊರಕ್ಕೂ ಈ ನರಗಳೆಂಬ ತಂತಿಗಳ ಮೂಲಕವಾಗಿಯೆ ಸಾಗುತ್ತಿರುವುವು. ಬೆನ್ನು ಹುರಿಯಲ್ಲಿರುವ ಜ್ಞಾನವಾಹಿ ಕ್ರಿಯಾವಾಹಿಗಳಾದ ನರಗಳೆ ಯೋಗಿಗಳು ಹೇಳುವ ಇಡೆ ಮತ್ತು ಪಿಂಗಳೆ. ಇವೇ ಶರೀರದಲ್ಲಿ ಒಳಕ್ಕೂ ಹೊರಕ್ಕೂ ವೃತ್ತಿಪ್ರವಾಹಗಳು ಹೋಗುವ ಮುಖ್ಯದ್ವಾರಗಳು. ಆದರೆ ಮನಸ್ಸು ಯಾವ ತಂತಿಯೂ ಬೇಕಿಲ್ಲದೆ ಜ್ಞಾನವನ್ನು ಏತಕ್ಕೆ ಕಳುಹಿಸಬಾರದು? ಏತಕ್ಕೆ ಕ್ರಿಯಾ ಶಕ್ತಿಯನ್ನು

1. ಉತ್ತರಧ್ರುವ ದಕ್ಷಿಣಧ್ರುವಗಳನ್ನು ತೋರಿಸುವ ಶಕ್ತಿ.

ತೋರಿಸಬಾರದು? ಬಾಹ್ಯ ಪ್ರಪಂಚದಲ್ಲಿ ಹೀಗೆಯೆ ನಡೆಯುತ್ತಿರುವುದಲ್ಲ? ಹೀಗೆ ತಂತಿಯ ಅಪೇಕ್ಷೆ ಇಲ್ಲದೆ ಜ್ಞಾನಕ್ರಿಯೆಗಳನ್ನು ನಡೆಸುವ ಶಕ್ತಿ ಬಂದರೆ ಭೌತಿಕಬಂಧವೇ ಹೋಗುವುದೆಂದು ಯೋಗಿಗಳು ಹೇಳುವರು. ಇದನ್ನು ಮಾಡುವುದು ಹೇಗೆಂದರೆ, ಇದೇ ಪ್ರವಾಹವನ್ನು ಸುಷುಮ್ನೆಯೊಳಕ್ಕೆ ಬಿಟ್ಟರಾಯಿತು. ಆಗ ಕಷ್ಟವೆಲ್ಲ ತಪ್ಪುವುದು. ಮನಸ್ಸು ಈ ನರ ಮಂಡಲವೆಂಬ ಬಲೆಯನ್ನು ಕಟ್ಟಿಕೊಂಡಿರುವುದು. ಅದರ ಕೆಲಸಕ್ಕೆ ಯಾವ ತಂತಿಯ ಅಪೇಕ್ಷೆಯೂ ಇಲ್ಲದೆ ಇರಬೇಕಾದರೆ ಈ ಬಲೆಯನ್ನು ಕಡಿದು ಹಾಕಬೇಕು. ಆಗಲೆ ನಾವು ಸರ್ವಜ್ಞರಾಗುವೆವು; ಶರೀರ ಬಂಧವಿರುವುದಿಲ್ಲ, ಆದುದರಿಂದಲೆ ಸುಷುಮ್ನೆಯನ್ನು ಸ್ವಾಧೀನ ಪಡಿಸಿಕೊಳ್ಳುವುದು ಅತ್ಯಗತ್ಯವಾಗಿರುತ್ತದೆ. ಯಾವ ನರಗಳನ್ನೂ ತಂತಿಯ ಸ್ಥಾನದಲ್ಲಿ ಉಪಯೋಗಿಸದೆ ಈ ಪೊಳ್ಳು ಕೊಳವೆಯ ಮೂಲಕವೇ ಮನೋವೃತ್ತಿಗಳನ್ನು ಕಳುಹಿಸುವುದಕ್ಕಾದರೆ ಎಲ್ಲಾ ಕಷ್ಟವೂ ಬಿಡುಗಡೆಯಾಗುವುದೆಂದೂ ಹೀಗೆ ಮಾಡುವುದಕ್ಕೂ ಸಾಧ್ಯವಾಗುತ್ತದೆಯೆಂದೂ ಯೋಗಿಗಳು ಹೇಳುವರು.

ಈ ಸುಷುಮ್ನೆಯು ಸಾಮಾನ್ಯ ಜನರಲ್ಲಿ ಕೆಳಗಡೆ ಮುಚ್ಚಿಕೊಂಡಿರುವುದು. ಅದರಲ್ಲಿ ಯಾವ ಕಾರ್ಯವೂ ನಡೆಯುತ್ತಿರುವುದಿಲ್ಲ. ಯೋಗಿಯು ಹೇಳುವ ಅಭ್ಯಾಸದಿಂದ ಅದನ್ನು ತೆರೆದು ನರದ ವೃತ್ತಿ ಪ್ರವಾಹಗಳನ್ನು ಅದರ ಮೂಲಕವಾಗಿ ಸಾಗುವಂತೆ ಮಾಡುವುದಕ್ಕಾಗುತ್ತದೆ. ಯಾವುದಾದರೊಂದು ಇಂದ್ರಿಯಾನುಭವವು ಒಂದು ಸ್ಥಾನವನ್ನು ಸೇರಿದರೆ ಆ ಸ್ಥಾನವು ಪ್ರತಿಕ್ರಿಯೆಯನ್ನು ಮಾಡುವುದು. ಸ್ಥಾನವು ಸ್ವತಂತ್ರ ಕ್ರಿಯಾ[1] ಸ್ಥಾನವಾಗಿದ್ದರೆ ಈ ಪ್ರತಿಕ್ರಿಯೆಯಿಂದ ಕ್ರಿಯಾ ವೃತ್ತಿಯೊಂದುಂಟಾಗುವುದು; ಅನುಭವ ಸ್ಥಾನವಗಿದ್ದರೆ ಮೊದಲು ಅನುಭವವುಂಟಾಗಿ ಆಮೇಲೆ ಕ್ರಿಯೆಯುಂಟಾಗುವುದು. ಎಲ್ಲೆಲ್ಲಿ ಅನುಭವವಾಗುತ್ತದೆಯೊ ಅಲ್ಲಲ್ಲಿ ಹೊರಗಣ ಕಾರ್ಯದ ಪ್ರತಿಫಲವೆಂದು ತಿಳಿಯಬೇಕು. ಹಾಗಾದರೆ ಕನಸಿನಲ್ಲಿ ಅನುಭವವಾಗುವುದು ಹೇಗೆ? ಆಗ ಹೊರಗೆ ನಡೆಯುವ ಕಾರ್ಯವಾವುದೂ ಇರುವುದಿಲ್ಲ. ಆದುದರಿಂದ ಜ್ಞಾನಪ್ರವಾಹಗಳು ಎಲ್ಲಿಯೋ ಒಂದು ಕಡೆ ಸೇರಿಕೊಂಡಿರಬೇಕಾಯಿತು. ಹೇಗೆಂದರೆ, ನನಗೆ ಒಂದು ಪಟ್ಟಣವು ಕಾಣಿಸುತ್ತದೆ. ನನಗೆ ಆ ಪಟ್ಟಣದ ಅನುಭವವಾಗುವುದಕ್ಕೆ ಮನಸ್ಸಿನಲ್ಲಿ ಆ ಪಟ್ಟಣದಲ್ಲಿರುವ ನಾನಾ ಬಗೆಯ ವಸ್ತುಗಳಿಂದಾಗುವ ಇಂದ್ರಿಯಾನುಭವಗಳ ಪ್ರತಿಫಲನವಾಗಬೇಕು. ಎಂದರೆ ಜ್ಞಾನವಾಹಿಗಳೆಂಬ–ಒಳಕ್ಕೆ ಅನುಭವವನ್ನು ತರುವ – ನರಗಳು ಚಲನೆಯಾಗಿ ಮೆದುಳಿನಲ್ಲಿರುವ ಕಣಗಳಲ್ಲಿ ಒಂದು ಬಗೆಯ ಚಲನೆಯುಂಟಾಗಿರಬೇಕು. ಈ ನರಗಳ ಚಲನೆಯು ಪಟ್ಟಣದಲ್ಲಿರುವ ಬಾಹ್ಯವಸ್ತುಗಳಿಂದಲೆ ಹುಟ್ಟಿರಬೇಕು. ಹೀಗೆ ಅನುಭವವಾಗಿ ಬಹುಕಾಲವಾಗಿದ್ದರೂ ನನಗೆ ಈ ಪಟ್ಟಣದ ಸ್ಮರಣೆ ಇರಬಹುದಷ್ಟೆ. ಈ ಸ್ಮರಣೆಯೆಂಬುದು ಮೊದಲಿನಂತೆಯೆ[2]

1. ಹೇಗೆಂದರೆ, ನಮ್ಮ ಇಚ್ಛೆಯಿಂದ ನಾವು ಮಾಡುವ ಕೆಲಸಗಳು ಆಗುವಾಗ ಈ ಸ್ವತಂತ್ರ ಕ್ರಿಯಾಸ್ಥಾನಗಳಿಂದ ಕ್ರಿಯಾವೃತ್ತಿಯು ನರಗಳ ಮೂಲಕ ಮಾಂಸಖಂಡಗಳನ್ನು ಸೇರಿ ಅವುಗಳಿಂದ ವ್ಯಾಪಾರಮಾಡಿಸುತ್ತದೆ. ಆದರೆ ಕಡಿಯುವುದು ಮೊದಲಾದ ಹೊರಗಣ ಅನುಭವವಾಗುವಾಗ ಮೊದಲು ನರಗಳಿಂದ ಸ್ಥಾನಕ್ಕೆ ಅನುಭವ ಬರುವುದು. ಆಮೇಲೆ ಕ್ರಿಯೆಯು ನರಗಳ ಮೂಲಕ ಖಂಡಗಳಿಗೆ ಹೋಗಿ ಕೆಲಸವಾಗುವುದು. ಆಗ ಕೆರೆದುಕೊಳ್ಳುವುದು ಮೊದಲಾದ ಕೆಲಸಗಳನ್ನು ಮಾಡುತ್ತೇವೆ.

2. ಎಂದರೆ ಅದೇ ನರಗಳ ಮತ್ತು ಮೆದುಳಿನ ಕಣಗಳ ಚಲನೆಯಿಂದಲೆ.

ಆಗುವುದು. ಆದರೆ ಅಷ್ಟು ಜೋರಾಗಿ ಆಗುವುದಿಲ್ಲ. ಇಲ್ಲಿ ಮೆದುಳಿನಲ್ಲಿ ಅದೇ ಬಗೆಯ ಚಲನೆಯನ್ನು ಸ್ವಲ್ಪ ಮಟ್ಟಿಗಾದರೂ ಉಂಟು ಮಾಡಿದುದಾವುದು? ಹೊಸದಾಗಿ ಮತ್ತೆ ಇಂದ್ರಿಯಾನುಭವಗಳಾಗಿಲ್ಲವೆಂಬುದಂತು ಖಂಡಿತ. ಎಂದ ಮೇಲೆ ಈ ಅನುಭವಗಳು ಎಲ್ಲಿಯೋ ಒಂದು ಕಡೆ ಸಂಸ್ಕಾರರೂಪದಿಂದ ಇರುತ್ತವೆನ್ನಬೇಕಾಯಿತು. ಈ ಸಂಸ್ಕಾರಗಳ ಕಾರ್ಯದಿಂದಲೆ ಸ್ವಪ್ನವೆಂಬ ಸಾಧಾರಣದ ಪ್ರತಿಕ್ರಿಯೆಯುಂಟಾಗುವುದು. ಇಂಥ ಸಂಸ್ಕಾರಗಳೆಲ್ಲ ಒಟ್ಟುಗೂಡಿ ಇರುವ ಸ್ಥಾನವನ್ನು ಮೂಲಾಧಾರವೆಂದೂ ಅದರೊಳಗೆ ಮುದುರಿಕೊಂಡಿರುವ ಸಂಸ್ಕಾರಶಕ್ತಿಯನ್ನು ಕುಂಡಲಿನಿಯೆಂದೂ ಕರೆಯುತ್ತಾರೆ. ಸಂಸ್ಕಾರರೂಪವಾದ ಕ್ರಿಯಾಶಕ್ತಿಯೂ ಬಹಳ ಮಟ್ಟಿಗೆ ಇದೇ ಸ್ಥಾನದಲ್ಲಿಯೇ ಇದ್ದಿರಬೇಕು. ಏಕೆಂದರೆ ಬಹುಹೊತ್ತು ವಿಚಾರಮಾಡುತ್ತಿದ್ದರೆ ಅಥವಾ ಬಾಹ್ಯ ವಸ್ತುಗಳನ್ನು ಮನಸ್ಸಿಟ್ಟು ನೋಡುತ್ತಿದ್ದರೆ ಮೂಲಾಧಾರವಿರುವ ಸ್ಥಾನವೂ (ಎಂದರೆ ಈಗಿನ ಶರೀರಶಾಸ್ತ್ರದವರು ಹೇಳುವ ಅಧೋಮಂಡಲಸ್ಥಾನವೂ) ಬೆಚ್ಚಗಾಗುವುದು. ಹೀಗೆ ಕೂಡಿಹಾಕಿರುವ ಶಕ್ತಿಯನ್ನು ಎಬ್ಬಿಸಿ, ಕೆಲಸಕ್ಕೆ ಹಚ್ಚಿ, ಸುಷುಮ್ನಾದ್ವಾರದಲ್ಲಿ ಹೋಗುವಂತೆ ತಿಳಿದು ಮಾಡಿದರೆ ಅದು ಒಂದಾಗುತ್ತಲೊಂದು ಚಕ್ರವನ್ನು ಮುಟ್ಟುತ್ತ ಹೋದ ಹಾಗೆಲ್ಲ ಒಂದು ದೊಡ್ಡ ಪ್ರತಿಕ್ರಿಯೆ ಹುಟ್ಟುವುದು. ಒಂದು ಸ್ವಲ್ಪ ಶಕ್ತಿಯು ಒಂದು ನರದಿಂದ ಹೋಗಿ ಯಾವುದಾದರೊಂದು ಮೆದುಳಿನ ಸ್ಥಾನದಲ್ಲಿ ಪ್ರತಿಕ್ರಿಯೆಯನ್ನು ಹುಟ್ಟಿಸಿದರೆ ಆ ಅನುಭವವು ಸ್ವಪ್ನವೊ ಕಲ್ಪನೆಯೊ ಆಗುವುದು.

ಆದರೆ ಬಹುಕಾಲ ಅಂತರ್ಧ್ಯಾನ ಮಾಡಿದ ಬಲದಿಂದ ಸುಷುಮ್ನಾದ್ವಾರದಿಂದ ಹೊರಟು ಸ್ಥಾನಗಳನ್ನು ಮುಟ್ಟಿದರೆಉಂಟಾಗುವ ಪ್ರತಿಫಲವು ಸ್ವಪ್ನ ಮತ್ತು ಕಲ್ಪನೆಗಳಿಗಿಂತ ಬಲವಾಗಿರುವುದು; ಇಂದ್ರಿಯಾನುಭವದಿಂದಾಗುವ ಪ್ರತಿಕ್ರಿಯೆಗಿಂತಲೂ ಎಷ್ಟೋ ಬಲವಾಗಿರುವುದು. ಅದು ಅತೀಂದ್ರಿಯ ಜ್ಞಾನವೆನಿಸುವುದು. ಆ ಶಕ್ತಿಯು ಎಲ್ಲಾ ಅನುಭವಗಳಿಗೂ ಮಾತೃಸ್ಥಾನವಾದ ಮೆದುಳಿಗೆ ಹೋಗಿ ತಾಕಿದರೆ ಎಲ್ಲಾ ಮೆದುಳೂ ಪ್ರತಿಕ್ರಿಯೆಯನ್ನು ಮಾಡುವುದುಕ್ಕೆ ನಿಂತಂತೆ ಆಗಿ ಆತ್ಮಜ್ಞಾನವೆಂಬ ಸಂಪೂರ್ಣವಾದ ಅನುಭವವೇ ಪ್ರಕಾಶವಾಗುವುದು. ಈ ಕುಂಡಲಿನಿ ಶಕ್ತಿಯು ಒಂದು ಚಕ್ರವಾದ ಮೇಲೆ ಇನ್ನೊಂದು ಚಕ್ರವನ್ನು ಭೇದಿಸಿಕೊಂಡು ಹೋಗುವಾಗ ಮೆದುಳಿನಲ್ಲಿ ಬೇರೆ ಬೇರೆ ಪದರಗಳೆ ಬಿಚ್ಚಿಕೊಂಡಂತಾಗಿ ಈ ಜಗತ್ತೇ ಯೋಗಿಗೆ ತನ್ನ ಸೂಕ್ಷ್ಮಾವಸ್ಥೆಯಲ್ಲಿ ಗೋಚರವಾಗುವುದು. ಆಗ ಮಾತ್ರ ಈ ಜಗತ್ತಿನ ಕಾರಣಗಳು ಜ್ಞಾನರೂಪದಲ್ಲಿಯೂ ಕ್ರಿಯಾರೂಪದಲ್ಲಿಯೂ ಕೂಡ ಸ್ವರೂಪವನ್ನು ತೋರಿಸುವುವು. ಇದರಿಂದ ಕಾರಣದ ಸಂಪೂರ್ಣ ತಿಳಿವಳಿಕೆಯುಂಟಾಗುವುದು. ಯಾವಾಗ ಕಾರಣಗಳು ತಿಳಿಯುತ್ತವೆಯೊ ಕಾರ್ಯದ ತಿಳಿವಳಿಕೆಯೂ ಆಗಿಯೇ ಆಗುವುದು.

ಹೀಗೆ ಬ್ರಹ್ಮಜ್ಞಾನವನ್ನು ಸಂಪಾದಿಸುವುದಕ್ಕೆ–ಸಮಾಧಿ ಸ್ಥಿತಿಯನ್ನು ಪಡೆಯುವುದಕ್ಕೆ–ಆತ್ಮಾನುಭವವನ್ನು ಪಡೆಯುವುದಕ್ಕೆ–ಕುಂಡಲಿನಿಯನ್ನು ಎಬ್ಬಿಸುವುದೊಂದೇ ಮಾರ್ಗ. ಈ ಕುಂಡಲಿನಿಯ ಉತ್ಥಾಪನೆಯು ನಾನಾ ರೀತಿಯಿಂದ ಆಗುವುದು. ಪರಮೇಶ್ವರ ಭಕ್ತಿಯಿಂದಲಾಗಲಿ, ಮಹಾತ್ಮರ ಅನುಗ್ರಹದಿಂದಲಾಗಲಿ, ವೇದಾಂತ ವಿಚಾರದಿಂದ ಸಂಸ್ಕೃತವಾದ ಬುದ್ಧಿಯಿಂದಲಾಗಲಿ ಕುಂಡಲಿನಿಯು ಏಳುವುದು. ಎಲ್ಲೆಲ್ಲಿ ಶಕ್ತಿಯಲ್ಲಾಗಲಿ, ಬುದ್ಧಿಯಲ್ಲಾಗಲಿ

ಅಮಾನುಷ ಮಹತ್ತು ಕಂಡುಬಂದಿರುವುದೊ ಅಲ್ಲೆಲ್ಲ ಸ್ವಲ್ಪವಾದರೂ ಕುಂಡಲಿನಿಯು ಸುಷುಮ್ನಾ ದ್ವಾರವನ್ನು ಪ್ರವೇಶಿಸಿರಲೇಬೇಕು. ಆದರೆ ಇಂಥ ಸಂದರ್ಭಗಳಲ್ಲಿ ಬಹು ಜನರಿಗೆ ಕಾರಣ ಗೊತ್ತಿಲ್ಲದೆ ಯಾವುದೊ ಒಂದು ಸಾಧನ ವಿಶೇಷದಿಂದ ಈ ಕುಂಡಲಿನಿಯ ಸ್ವಲ್ಪ ಭಾಗವು ಹೊರಕ್ಕೆ ಬರುವುದು. ತಿಳಿದು ಅಥವಾ ತಿಳಿಯದೆ ನಾವು ಮಾಡುವ ಪೂಜೆಗಳಿಗೆಲ್ಲ ಇದೇ ಫಲವಾಗುವುದು. ಯಾವಾತನು ತಾನು ಮಾಡಿದ ಭಾವತ್ಪ್ರಾರ್ಥನೆಯು ಸಫಲವಾಯಿತೆನ್ನುವನೊ ಆತನಿಗೆ ಆ ಸಾಫಲ್ಯವು ತನ್ನ ಸ್ವರೂಪದಿಂದಲೆ ಬಂತೆಂಬುದೂ, ಪ್ರಾರ್ಥನಾರೂಪವಾದ ಮನೋಧರ್ಮದಿಂದ ತನ್ನಲ್ಲಿ ಕೂಡಿಟ್ಟಿರುವ ಅನಂತವಾದ ಶಕ್ತಿ ರಾಶಿಯಲ್ಲಿ ಒಂದಂಶವು ಎದ್ದು ಫಲದಾಯಕವಾಗಿರುವುದೆಂಬುದೂ ತಿಳಿಯುವುದಿಲ್ಲ. ಹೀಗೆ ಯಾವುದನ್ನು ಜನರು ಅರಿಯದೆ ಹೆದರಿಕೆಯಿಂದ ಸಾಯುತ್ತ ಬೇಯುತ್ತ ಬೇರೆ ಬೇರೆ ನಾಮಗಳಿಂದ ಪೂಜಿಸುತ್ತಿರುವರೊ ಅದನ್ನು ಯೋಗಗಳು ಪ್ರತಿಯೊಂದು ಜಂತುವಿನಲ್ಲಿಯೂ ಸಂಕೋಚವಾಗಿರುವ ಶಕ್ತಿಯೆಂದೂ, ಆ ಶಕ್ತಿಯೇ ಸದಾನಂದವನ್ನು ಕೊಡುವ ಮಹಾಮಾತೆಯೆಂದೂ, ಆಕೆಯ ಪ್ರಸಾದವನ್ನು ಪಡೆಯುವ ಕ್ರಮವನ್ನು ಮಾತ್ರ ತಿಳಿದುಕೊಳ್ಳಬೇಕೆಂದೂ ಹೇಳುವರು. ಆದುದರಿಂದ ರಾಜಯೋಗವೆಂಬುದು ಎಲ್ಲಾ ಬಗೆಯ ಪೂಜೆಗಳಲ್ಲಿಯೂ, ಪ್ರಾರ್ಥನೆಯಲ್ಲಿಯೂ, ವಿಗ್ರಹಗಳಲ್ಲಿಯೂ, ಕರ್ಮಗಳಲ್ಲಿಯೂ, ಅದ್ಭುತ ಶಕ್ತಿಗಳಲ್ಲಿಯೂ ಇರುವ ಸಾರವನ್ನು ವಿವೇಚನೆ ಮಾಡಿ ತಿಳಿಸುವ ಮತಶಾಸ್ತ್ರವು.

# 5ನೇ ಅಧ್ಯಾಯ

# ಅಧ್ಯಾತ್ಮ ಪ್ರಾಣವನ್ನು ಸ್ವಾಧೀನಮಾಡಿಕೊಳ್ಳುವ ಬಗೆ

ಇನ್ನು ಪ್ರಾಣಾಯಾಮದ ಸಾಧನಗಳನ್ನು ಕುರಿತು ವಿಚಾರ ಮಾಡೋಣ. ಇದಕ್ಕೆ ಮೊದಲು ಶ್ವಾಸಕೋಶದ ಚಲನೆಯನ್ನು ಕ್ರಮಕ್ಕೆ ತರಬೇಕೆಂದು ಯೋಗಿಗಳು ಹೇಳುತ್ತಾರೆಂದು ಈ ಮೊದಲೇ ಹೇಳಿದೆಯಷ್ಟೆ. ಶರೀರದಲ್ಲಿ ಆಗುತ್ತಿರುವ ಸೂಕ್ಷ್ಮ ವ್ಯಾಪಾರಗಳನ್ನು ತಿಳಿಯುವುದೆ ನಮ್ಮ ಉದ್ದೇಶವು. ನಮ್ಮ ಮನಸ್ಸುಗಳೆಲ್ಲ ಬಹಿರ್ಮುಖವಾಗಿ ಬಿಟ್ಟಿರುವುದರಿಂದ ಒಳಗಣ ವ್ಯಾಪಾರಗಳನ್ನೆ ಮರೆತುಬಿಟ್ಟಿವೆ. ಮೊದಲು ಆ ವ್ಯಾಪಾರಗಳು ನಮಗೆ ತಿಳಿಯುವುದಾದರೆ ಅವುಗಳನ್ನು ವಶಮಾಡಿಕೊಳ್ಳುವುದಕ್ಕೆ ಪ್ರಾರಂಭಿಸಬಹುದು. ಈ ನರಗಳ ವೃತ್ತಿಗಳು ಪ್ರತಿಯೊಂದು ಮಾಂಸಖಂಡಕ್ಕೂ ಪುಷ್ಟಿಯನ್ನೂ ತ್ರಾಣವನ್ನೂ ತಂದುಕೊಡುತ್ತ ಶರೀರದಲ್ಲೆಲ್ಲ ನಡೆಯುತ್ತಲೆ ಇರುವುವು. ಆದರೆ ನಮಗೆ ಅವು ಗೊತ್ತೇ ಆಗುವುದಿಲ್ಲ. ಅವುಗಳು ನಮಗೆ ಗೊತ್ತಾಗುವಂತೆ ಮಾಡಿಕೊಳ್ಳಬಹುದೆಂದು ಯೋಗಿಗಳು ಹೇಳುತ್ತಾರೆ. ಹೇಗೆಂದರೆ, ಶ್ವಾಸಕೋಶಗಳನ್ನು ಮೊದಲು ನಮ್ಮ ಹಿಡಿತದಲ್ಲಿಟ್ಟುಕೊಳ್ಳುವುದರಿಂದ ಕೆಲವು ಕಾಲದವರೆಗಾದರೂ ಈ ಅಭ್ಯಾಸವನ್ನು ಮಾಡಿದರೆ ಇದಕ್ಕಿಂತ ಸೂಕ್ಷ್ಮ ವ್ಯಾಪಾರಗಳು ನಮ್ಮ ಕೈಗೆ ಸಿಕ್ಕುವುವು.

ಈಗ ಪ್ರಾಣಾಯಾಮ ಕ್ರಮವನ್ನು ನೋಡೋಣ. ನೆಟ್ಟಗೆ ಕೂತುಕೊಳ್ಳಬೇಕು. ಶರೀರವು ನೆಟ್ಟಗಿರಬೇಕು. ಬೆನ್ನುಹುರಿಯು ಬೆನ್ನುಮೂಳೆಗೆ ಸೇರಿಕೊಂಡಿಲ್ಲ; ಆದರೂ ಅದರೊಳಗೆ ಇದೆ. ನಾವು ಚೊಟ್ಟಾಗಿ ಕೂತುಕೊಂಡರೆ ಆ ಬೆನ್ನು ಹುರಿಯು ವಿಘ್ನವಾಗುವುದು. ಆದುದರಿಂದ ಅದಕ್ಕೆ ಅಡ್ಡಿಯಿಲ್ಲದಂತಿರಬೇಕು. ಯಾವಾಗ ಚೊಟ್ಟಾಗಿ ಕೂತುಕೊಂಡು ಧ್ಯಾನ ಮಾಡುತ್ತೇವೆಯೊ ಆಗ ಅದರಿಂದೇನಾದರೂ ಕೇಡಾಗುವುದು. ಶರೀರದಲ್ಲಿ ಎದೆ, ಕುತ್ತಿಗೆ, ಮತ್ತು ತಲೆ ಈ ಮೂರು ಭಾಗಗಳೂ ನೆಟ್ಟಗೆ ಒಂದೇ ಪಂಕ್ತಿಯಲ್ಲಿರಬೇಕು. ಸ್ವಲ್ಪ ಅಭ್ಯಾಸ ಮಾಡಿದರೆ ಕೇವಲ ಉಸಿರಾಡದಂತೆ ಸುಲಭವಾಗಿ ಹೀಗೆ ನೆಟ್ಟಗೆ ಕೂತುಕೊಳ್ಳುವುದು ಬರುತ್ತದೆ. ನರಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಎರಡನೆಯ ಕೆಲಸವು. ಶ್ವಾಸಾವಯವಗಳ ಕಾರ್ಯವನ್ನು ಕ್ರಮಪಡಿಸುವ ನರ ಸ್ಥಾನಕ್ಕೆ ಇತರ ನರಗಳೂ ಸ್ವಲ್ಪ ಮಟ್ಟಿಗೆ ಒಳಪಟ್ಟಿರುವುವೆಂದು ಹಿಂದೆಯೆ ಹೇಳಿದ್ದೇವಷ್ಟೆ? ಆದುದರಿಂದ ಒಂದೇ ಕ್ರಮದಲ್ಲಿ ಉಸಿರಾಡುವುದವಶ್ಯವು. ನಾವು ಈಗ ಸಾಮಾನ್ಯವಾಗಿ

ಉಸಿರಾಡುವ ಕ್ರಮವನ್ನು ಉಸಿರಾಟವೆನ್ನುವಂತೆಯೇ ಇಲ್ಲ. ಏಕೆಂದರೆ ಇದು ಬಹಳ ಅಕ್ರಮವಾಗಿ ನಡೆಯುತ್ತಿರುವುದು. ಇದಲ್ಲದೆ ಹೆಂಗಸರೂ ಗಂಡಸರೂ ಉಸಿರಾಡುವ ಕ್ರಮದಲ್ಲಿ ಸ್ವಭಾವದಿಂದಲೆ ಕೆಲವು ವಿಶೇಷಗಳಿರುವುವು.

**ಮೊದಲನೆಯ** ಸಾಧನವೇನೆಂದರೆ, ಒಂದೇ ಅಳತೆಯಿಂದ ಹೊರಕ್ಕೂ ಒಳಕ್ಕೂ ಉಸಿರು ಬಿಡುವುದೂ ತೆಗೆದುಕೊಳ್ಳುವುದೂ ಮಾಡಬೇಕು. ಇದರಿಂದ ಶರೀರ ವ್ಯಾಪಾರವೆಲ್ಲಾ ಒಂದು ಕ್ರಮಕ್ಕೆ ಬರುವುದು. ಹೀಗೆ ಕೆಲವು ದಿನ ಮಾಡಿ ಆದ ಮೇಲೆ ಇದಕ್ಕೆ ಓಂಕಾರವನ್ನಾಗಲಿ ಅಥವಾ ಮತ್ತಾವ ಬೀಜ ಮಂತ್ರವನ್ನಾಗಲಿ ಕೂಡಿಸಿಕೊಳ್ಳುವುದುತ್ತಮ. ಇಂಡಿಯಾದಲ್ಲಿ ಒಂದು, ಎರಡು, ಮೂರು, ನಾಲ್ಕು ಎಂದು ಎಣಿಸಿಕೊಳ್ಳುವುದಕ್ಕೆ ಬದಲಾಗಿ ಕೆಲವು ಮಂತ್ರಗಳನ್ನುಪಯೋಗಿಸುತ್ತಾರೆ. ಅದರಿಂದಲೆ ಓಂಕಾರವನ್ನಾಗಲಿ ಮತ್ತಾವ ನಾಮವನ್ನಾಗಲಿ ಮನಸ್ಸಿನಿಂದ ಉಚ್ಚರಿಸುತ್ತ ಪ್ರಾಣಾಯಾಮಕ್ಕೆ ಸೇರಿಸಿಕೊಳ್ಳುವುದು ಉತ್ತಮವೆಂದು ಹೇಳಿದೆನು. ಆ ಮಂತ್ರವು ಉಸಿರಿಗೆ ಸೇರಿಕೊಂಡು ಒಳಕ್ಕೂ ಹೊರಕ್ಕೂ ಒಂದೇ ಸಮವಾಗಿ ತಾಳಹಾಕಿದಂತೆ ಹೋಗಿ ಬಂದರೆ ಶರೀರವೆಲ್ಲ ಹೊಂದಿಕೆಯಾಗುವುದು. ಆಗ ವಿಶ್ರಾಂತಿಯೆಂದರೇನೆಂಬುದು ನಿಮಗೆ ಗೊತ್ತಾಗುವುದು. ಇದಕ್ಕೆ ಹೋಲಿಸಿದರೆ ನಿದ್ರೆ ಕೂಡ ವಿಶ್ರಾಂತಿಯಾಗಲಾರದು. ಈ ವಿಶ್ರಾಂತಿ ಒಂದು ಸಲ ಸಿಕ್ಕಿದರೆ ಸಾಕು; ನರಗಳು ಎಷ್ಟೇ ಸೋತಿರಲಿ, ಸಮಾಧಾನವನ್ನು ಹೊಂದುವುವು. ಆಗ ನಿಮಗೆ ಇದಕ್ಕಿಂತ ಮುಂಚೆ ನಿಜವಾದ ವಿಶ್ರಾಂತಿಯೇ ಸಿಕ್ಕಿರಲಿಲ್ಲವೆಂದು ಗೊತ್ತಾಗುವುದು.

ಈ ಅಭ್ಯಾಸದಿಂದ ಆಗುವ ಮೊದಲನೆಯ ಫಲವೇನೆಂದರೆ, ಮುಖ ಭಾವವು ಬೇರೆ ಆಗುವುದು. ಮುಖದ ಮೇಲಿನ ಸುಕ್ಕುಗಳೆಲ್ಲ ಮಾಯವಾಗುವುವು. ಶಾಂತ ವಿಚಾರ ಬಂದ ಕೂಡಲೆ ಮುಖದ ಮೇಲೆಯೂ ಶಾಂತಿ ಕಾಣುವುದು. ಆಮೇಲೆ ಸುಸ್ವರ ಉದಿಸುವುದು. ನಾನು ಇದುವರೆಗೆ ಒಡಕಲು ಧ್ವನಿಯುಳ್ಳ ಯೋಗಿಯನ್ನೆ ಕಂಡಿಲ್ಲ. ಕೆಲವು ತಿಂಗಳು ಅಭ್ಯಾಸ ಮಾಡುವುದರಲ್ಲಿ ಈ ಗುರುತುಗಳು ಕಾಣುವುವು. ಮೇಲೆ ಹೇಳಿದ ಶ್ವಾಸದ ಕ್ರಮವನ್ನು ಕೆಲವು ದಿನ ಅಭ್ಯಾಸ ಮಾಡಿದ ಬಳಿಕ ಇದಕ್ಕಿಂತ ಉತ್ತಮವಾದ ಅಭ್ಯಾಸವನ್ನು ಪ್ರಾರಂಭಿಸಬೇಕು. ಉಸಿರನ್ನು ನಿಧಾನವಾಗಿ ಇಡೆಯಿಂದ ಎಂದರೆ ಎಡಗಡೆಯ ಹೊಳ್ಳೆಯಿಂದ ತುಂಬಿಕೊಂಡು ನಾಡೀಸಂಚಾರವನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಿರಬೇಕು. ನಾಡಿಯ ಪ್ರವಾಹವನ್ನು ಬೆನ್ನು ಹುರಿಯಿಂದ ಕೆಳಗಡೆಗೆ ಹೋಗಿ ಕೊನೆಯಲ್ಲಿರುವ ಕುಂಡಲಿನಿ ಸ್ಥಾನವಾದ ತ್ರಿಕೋಣಾಕಾರದ ಮೂಲಾಧಾರಕ್ಕೆ ಜೋರಾಗಿ ಬಡಿಯುವಂತೆ ಕಳುಹಿಸುತ್ತಿದ್ದೇನೆಂದು ಭಾವಿಸಿಕೊಳ್ಳಬೇಕು. ಆಮೇಲೆ ಈ ಪ್ರವಾಹವನ್ನು ಅಲ್ಲಿಯೇ ಸ್ವಲ್ಪ ಕಾಲ ನಿಲ್ಲಿಸಿರಬೇಕು. ಆ ನಾಡೀ ಪ್ರವಾಹವನ್ನು ಉಸಿರಿನೊಡನೆ ಪಿಂಗಳೆ ಎಂಬ ಇನ್ನೊಂದು ಕಡೆಯ ನಾಡಿಯಿಂದ ಎಳೆದುಕೊಳ್ಳುತ್ತಿದ್ದೇನೆಂದು ಭಾವಿಸುತ್ತ ಮೆಲ್ಲಗೆ ಬಲ ಹೊಳ್ಳೆಯಿಂದ ಹೊರಕ್ಕೆ ಬಿಡಬೇಕು. ಇದನ್ನು ಮಾಡುವುದು ಸ್ವಲ್ಪ ಕಷ್ಟವಾಗುವುದು. ಇದಕ್ಕೆ ಉಪಾಯವೇನೆಂದರೆ–ಬಲ ಹೊಳ್ಳೆಯನ್ನು ಹೆಬ್ಬೆಟ್ಟಿನಿಂದ ಮುಚ್ಚಿಕೊಂಡು ಮೆಲ್ಲಗೆ ಎಡಗಡೆಯಿಂದ ಉಸಿರನ್ನು ಎಳೆದುಕೊಳ್ಳಬೇಕು. ಆಮೇಲೆ ಎರಡು ಹೊಳ್ಳೆಗಳನ್ನೂ ಹೆಬ್ಬೆಟ್ಟು, ತರ್ಜನಿ ಇವುಗಳಿಂದ ಮುಚ್ಚಿಕೊಂಡು ಆ ಪ್ರವಾಹವನ್ನು ಸುಷುಮ್ನೆಯೊಳಕ್ಕೆ ಹೋಗಿ ತಗಲುವಂತೆ ಕಳುಹಿಸುತ್ತಿದ್ದೇನೆಂದು ಭಾವಿಸಬೇಕು. ಆಮೇಲೆ

ಹೆಬ್ಬೆಟ್ಟನ್ನು ತೆಗೆದು ಬಲದ ಹೊಳ್ಳೆಯಿಂದ ಉಸಿರನ್ನು ಹೊರಕ್ಕೆ ಬಿಡಬೇಕು. ಆಮೇಲೆ ಎಡಗಡೆಯ ಹೊಳ್ಳೆಯನ್ನು ತರ್ಜನಿಯಿಂದ ಮುಚ್ಚಿಕೊಂಡಿರುವುದನ್ನು ಹಾಗೆಯೇ ಇಟ್ಟುಕೊಂಡಿದ್ದು ಅದೇ ಬಲಗಡೆಯ ಹೊಳ್ಳೆಯಿಂದಲೆ ನಿಧಾನವಾಗಿ ಉಸಿರನ್ನು ಎಳೆದುಕೊಳ್ಳಬೇಕು. ಆಮೇಲೆ ಮತ್ತೆ ಎರಡನ್ನು ಮೊದಲಿನಂತೆ ಮುಚ್ಚಿಕೊಳ್ಳಬೇಕು. ಹಿಂದುಗಳು ಮಾಡುವ ಅಭ್ಯಾಸ ಕ್ರಮವು ಈ ದೇಶಕ್ಕೆ[1] ಬಹಳ ಕಷ್ಟವಾಗುವುದು. ಏಕೆಂದರೆ-ಅವರು ತಮ್ಮ ಬಾಲ್ಯದಿಂದಲೂ ಅಭ್ಯಾಸ ಮಾಡುತ್ತಾರೆ. ಅದರಿಂದ ಅವರ ಶ್ವಾಸಕೋಶವು ತಡೆದುಕೊಳ್ಳುತ್ತದೆ. ಈ ದೇಶದಲ್ಲಿ ನಾಲ್ಕು[2] ಸೆಕೆಂಡುಗಳಿಂದ ಪ್ರಾರಂಭಿಸುವದನುಕೂಲ. ಆಮೇಲೆ ಮೆಲ್ಲಮೆಲ್ಲಗೆ ಹೆಚ್ಚಿಸಿಕೊಳ್ಳಬಹುದು. ನಾಲ್ಕು ಸೆಕೆಂಡುಗಳ ಕಾಲದಲ್ಲಿ ಎಳೆದುಕೊಂಡು, ಹದಿನಾರು ಸೆಕೆಂಡುಗಳ ಕಾಲ ಹಿಡಿದುಕೊಂಡಿದ್ದು, ಆಮೇಲೆ ಎಂಟು ಸೆಕೆಂಡುಗಳ ಕಾಲದಲ್ಲಿ ಬಿಡಬೇಕು. ಇಷ್ಟಾದರೆ ಒಂದು ಪ್ರಾಣಾಯಾಮವಾಯಿತು. ಈ ಕಾಲದಲ್ಲಿ ತ್ರಿಕೋಣಾಕಾರ ವಾಗಿರುವ ಮೂಲಾಧಾರಪದ್ಮವನ್ನು ಧ್ಯಾನಿಸುತ್ತಿರಬೇಕು. ಆ ಚಕ್ರದಲ್ಲಿಯೇ ಮನಸ್ಸನ್ನು ಇಟ್ಟಿರಬೇಕು. ಮನಸ್ಸಿನಲ್ಲಿಯೇ ಹೀಗೆ ಕಲ್ಪಿಸಿಕೊಳ್ಳುವುದರಿಂದ ಎಷ್ಟೋ ಪ್ರಯೋಜನವಾಗುವುದು. ಎರಡನೆಯ ಪ್ರಾಣಾಯಾಮ ಕ್ರಮವೆಂತೆಂದರೆ-ಮೆಲ್ಲಗೆ ಉಸಿರನ್ನು ಒಳಕ್ಕೆ ಎಳೆದುಕೊಂಡು ಆಮೇಲೆ ಅದನ್ನು ಮೆಲ್ಲಗೆ ಹೊರಕ್ಕೆ ಬಿಟ್ಟು ಉಸಿರನ್ನು ಹೊರಗೇ ನಿಲ್ಲಿಸಬೇಕು. ಇಲ್ಲಿಯೂ ಮೇಲೆ ಹೇಳಿದಷ್ಟು ಸಂಖ್ಯೆಯ ಕಾಲವನ್ನೆ ಉಪಯೋಗಿಸಬೇಕು. ಇವೆರಡಕ್ಕೂ ಇರುವ ಭೇದವೇನೆಂದರೆ-ಮೊದಲನೆಯ ಕ್ರಮದಲ್ಲಿ ಉಸಿರನ್ನು ಒಳಗೆ ನಿಲ್ಲಿಸಿಕೊಳ್ಳುತ್ತೇವೆ; ಎರಡನೆಯ ಕ್ರಮದಲ್ಲಿ ಹೊರಗೆ ನಿಲ್ಲಿಸುತ್ತೇವೆ. ಈ ಎರಡನೆಯ ಕ್ರಮವು ಸುಲಭವಾಗಿರುವುದು. ಶ್ವಾಸಕೋಶದಲ್ಲಿಯೇ ಉಸಿರನ್ನು ನಿಲ್ಲಿಸುವ ಕ್ರಮವನ್ನು ಬಹಳ ಮಾಡಬಾರದು. ಬೆಳಿಗ್ಗೆ ನಾಲ್ಕು ಸಲ, ಸಾಯಂಕಾಲ ನಾಲ್ಕು ಸಲ ಮಾಡಿದರೆ ಸಾಕು. ಆಮೇಲೆ ಬರಬರುತ್ತ ಕಾಲವನ್ನೂ ಪ್ರಾಣಾಯಾಮ ಸಂಖ್ಯೆಯನ್ನೂ ಹೆಚ್ಚಿಸಿಕೊಳ್ಳಬಹುದು. ಹೀಗೆ ಮಾಡುವುದಕ್ಕೆ ಆಗುತ್ತದೆಯೆಂದು ಗೊತ್ತಾಗಿ ನಿಮಗೆ ಪ್ರಾಣಾಯಾಮವನ್ನು ಹೆಚ್ಚಿಸಿಕೊಳ್ಳುವುದೇ ಒಂದು ಆನಂದವಾಗುವುದು. ಆದುದರಿಂದ ಬಹು ಜಾಗರೂಕತೆಯಿಂದಲೂ, ಎಚ್ಚರಿಕೆಯಿಂದಲೂ ಸಾಧ್ಯವಾದೀತೆಂದು ಕಂಡುಬಂದ ಮೇಲೆ ನಾಲ್ಕರಿಂದ ಆರಕ್ಕೆ ಹೆಚ್ಚಿಸಿಕೊಳ್ಳಬೇಕು. ಮನಸ್ಸಿಗೆ ಬಂದಂತೆ ಹೆಚ್ಚಿಸಿಕೊಂಡು ಅಭ್ಯಾಸ ಮಾಡಿದರೆ ಅಪಾಯವಾಗುವುದು.

ನಾಡೀಶುದ್ಧಿಗಾಗಿ ಮೇಲೆ ಹೇಳಿದ ಮೂರು ಕ್ರಮಗಳಲ್ಲಿ ಮೊದಲನೆಯದು ಮತ್ತು ಕೊನೆಯದು ಮಾಡುವುದಕ್ಕೂ ಸುಲಭ; ಅವುಗಳಿಂದ ಅಪಾಯವೂ ಇಲ್ಲ. ಮೊದಲನೆಯ ಅಭ್ಯಾಸವನ್ನು ಎಷ್ಟು ಹೆಚ್ಚು ಮಾಡಿದರೆ ಅಷ್ಟು ಶಾಂತಿಯಾಗುವುದು. ಓಂಕಾರವನ್ನು ಧ್ಯಾನಮಾಡುತ್ತಿದ್ದರೆ ಕೆಲಸ ಮಾಡುತ್ತಿರುವಾಗ ಕೂಡ ಅಭ್ಯಾಸ ಮಾಡಬಹುದು. ಇದರಿಂದ ಬಹಳ ಅನುಕೂಲವುಂಟು. ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದರೆ ಕುಂಡಲಿನಿ ಶಕ್ತಿಯು ಏಳುವುದು.

---

1. ವಿಲಾಯತಿಗೆ

2. 3600 ಸೆಕೆಂಡುಗಳಿಗೆ ಒಂದು ಗಂಟೆ. ಸಾಮಾನ್ಯವಾಗಿ ಒಂದು ಮಾತ್ರೆಯ ಕಾಲಕ್ಕೆ ಒಂದು ಸೆಕೆಂಡು ಆಗುತ್ತದೆಯೆಂದು ಹೇಳಬಹುದು. ನಮ್ಮ ಒಂದು ವಿಘಳಿಗೆ 24 ಸೆಕೆಂಡಿಗೆ ಸಮ.

ದಿನಕ್ಕೆ ಒಂದೆರಡು ಸಲ ಅಭ್ಯಾಸ ಮಾತ್ರ ಮಾಡುವವರಿಗೆ ದೇಹದಲ್ಲಿಯೂ ಮನಸ್ಸಿನಲ್ಲಿಯೂ ಶಾಂತಿಯೂ ಮತ್ತು ಒಳ್ಳೆಯ ಕಂಠ ಸ್ವರವೂ ಆಗುವುವು. ಆದರೆ ಯಾರು ಇನ್ನೂ ಹೆಚ್ಚಾಗಿ ಅಭ್ಯಾಸ ಮಾಡುವರೊ ಅವರಿಗೆ ಕುಂಡಲಿನಿಯ ಉತ್ಥಾನವಾಗಿ ಸೃಷ್ಟಿಗೆ ಸೃಷ್ಟಿಯೆ ಬದಲಾಗಿ ಜ್ಞಾನವೆಂಬ ಪುಸ್ತಕವು ಅವರ ಮುಂದೆ ಬಿಚ್ಚಿಟ್ಟಂತೆ ತೋರುವುದು. ಆಮೇಲೆ ಜ್ಞಾನಕ್ಕಾಗಿ ಪುಸ್ತಕಗಳನ್ನು ಓದಬೇಕಾದುದಿಲ್ಲ. ನಿಮ್ಮ ಮನಸ್ಸೆಂಬುದೇ ಅಪಾರವಾದ ಜ್ಞಾನದ ಪುಸ್ತಕವಾಗುವುದು. ಬೆನ್ನು ಮೂಳೆಯ ಎರಡು ಕಡೆಗಳಲ್ಲಿಯೂ ಸಂಚರಿಸುತ್ತಿರುವ ಇಡೆ, ಪಿಂಗಳೆ ಮತ್ತು ಬೆನ್ನು ಹುರಿಯ ಮಧ್ಯದಲ್ಲಿರುವ ಸುಷುಮ್ನೆ ಎಂಬ ದ್ವಾರ ಇವುಗಳನ್ನು ಆಗಲೆ ಪ್ರಸ್ತಾಪಿಸಿರುತ್ತೇನಷ್ಟೆ. ಈ ಮೂರು ಪ್ರತಿಯೊಂದು ಪ್ರಾಣಿಯಲ್ಲಿಯೂ ಇರುತ್ತವೆ. ಯಾವ ಯಾವ ಪ್ರಾಣಿಗೆ ಬೆನ್ನು ಮೂಳೆ ಇರುವುದೊ ಅದಕ್ಕೆ ಈ ಮೂರೂ ಕಾರ್ಯ ಮಾರ್ಗಗಳು ಇದ್ದೇ ಇರುತ್ತವೆ. ಆದರೆ ಸಾಮಾನ್ಯ ಜನರಲ್ಲಿ ಸುಷುಮ್ನೆಯು ಮುಚ್ಚಿಕೊಂಡಿರುತ್ತದೆಂದೂ ಅದರ ಕಾರ್ಯವು ತೋರುತ್ತಿರುವುದಿಲ್ಲವೆಂದೂ ಉಳಿದ ಎರಡರಿಂದಲೇ ಶರೀರದ ಬೇರೆ ಬೇರೆ ಭಾಗಗಳಿಗೆ ಶಕ್ತಿಯು ಹೋಗುತ್ತಿರುವುದೆಂದೂ ಯೋಗಿಗಳು ಅನ್ನುತ್ತಾರೆ.

ಯೋಗಿಯೊಬ್ಬನಿಗೆ ಮಾತ್ರ ಸುಷುಮ್ನೆಯು ತೆರೆದಿರುವುದು. ಈ ಸುಷುಮ್ನಾ ಸಂಚಾರವು ಪ್ರಾರಂಭವಾಗಿ ಮೇಲಕ್ಕೆ ಹೊರಡುವಾಗ ನಾವು ಇಂದ್ರಿಯಗಳನ್ನು ಮೀರಿರುವೆವು; ನಮ್ಮ ಮನಸ್ಸು ಅತೀಂದ್ರಿಯ ಸ್ಥಿತಿಯನ್ನು ಪಡೆಯುವುದು; ನಾವು ಸಂವೇದನಾ ಸ್ಥಿತಿಯನ್ನು ಕೂಡ ಮೀರಿ ಬುದ್ಧಿಯಿಂದಾಚೆಗೆ ಹೋಗುವೆವು. ಅಲ್ಲಿಗೆ ಯಾವ ಯುಕ್ತಿಯೂ ಹೋಗಲಾರದು. ಸುಷುಮ್ನೆಯನ್ನು ತೆರೆಯುವುದೇ ಯೋಗಿಯ ಮುಖ್ಯೋದ್ದೇಶವು. ಅವನು ಹೇಳುವುದೇನೆಂದರೆ, ಈ ಸುಷುಮ್ನೆಯ ಮಾರ್ಗದಲ್ಲಿಯೆ ಈ ಸ್ಥಾನಗಳು ಅಥವಾ (ಯೋಗಿಗಳ ಅಲಂಕಾರಿಕ ಭಾಷೆಯನ್ನುಪಯೋಗಿಸಿದರೆ) ಈ ಕಮಲಗಳು ಒಂದರಮೇಲೊಂದು ಇರುವುವು. ಇವುಗಳಲ್ಲಿ ಎಲ್ಲವುಗಳಿಗಿಂತ ಕೆಳಗಣ ಕಮಲವು ಬೆನ್ನು ಹುರಿಯ ಕೆಳಗಡೆ ಇರುವುದು. ಇದನ್ನು ಮೂಲಾಧಾರವೆನ್ನುವರು. ಇದರ ಮೇಲಣ ಚಕ್ರವನ್ನು ಸ್ವಾಧಿಷ್ಠಾನವೆನ್ನುವರು. ಮೂರನೆಯ ಕಮಲವೆ ಮಣಿಪೂರವು. ನಾಲ್ಕನೆಯದೇ ಅನಾಹತವು. ವಿಶುದ್ಧವೆಂಬುದು ಐದನೆಯದು. ಆರನೆಯದು ಆಜ್ಞಾಚಕ್ರವು. ಕೊನೆಯದಾದ ಮೆದುಳಿನಲ್ಲಿರುವ ಕಮಲವೇ ಸಹಸ್ರಾರವೆಂಬ ಸಾವಿರ ಎಸಳಿನ ತಾವರೆಯು. ಇವುಗಳಲ್ಲಿ ನಾವು ಸದ್ಯಕ್ಕೆ ಎಲ್ಲಕ್ಕಿಂತಲೂ ಕೆಳಗಿರುವ ಮೂಲಾಧಾರ, ಎಲ್ಲಕ್ಕೂ ಮೇಲಿರುವ ಸಹಸ್ರಾರ ಈ ಎರಡನ್ನು ನೆನಪಿಟ್ಟುಕೊಂಡರೆ ಸಾಕು. ಮೂಲಾಧಾರದಲ್ಲಿರುವ ಶಕ್ತಿಯನ್ನೆಲ್ಲ ಎಬ್ಬಿಸಿ ಸಹಸ್ರಾರಕ್ಕೆ ತರಬೇಕಾಗಿದೆ. ಮನುಷ್ಯನ ಶರೀರದಲ್ಲಿರುವ ಶಕ್ತಿಗಳಲ್ಲೆಲ್ಲ ಓಜಸ್ಸೆಂಬುದೇ ಹೆಚ್ಚಿನದೆಂದು ಯೋಗಿಗಳು ಅನ್ನುವರು. ಈ ಓಜಸ್ಸೆಂಬುದು ಮೆದುಳಿನಲ್ಲಿರುವುದು. ಮನುಷ್ಯನ ತಲೆಯಲ್ಲಿ ಎಷ್ಟು ಓಜಸ್ಸಿದ್ದರೆ ಅಷ್ಟು ಶಕ್ತನಾಗಿಯೂ, ಅಷ್ಟು ಬುದ್ಧಿವಂತನಾಗಿಯೂ, ಅಷ್ಟು ಧರ್ಮಾತ್ಮನಾಗಿಯೂ ಇರುವನು. ಒಬ್ಬನು ಎಷ್ಟು ಚೆನ್ನಾಗಿ ಮಾತಾಡುತ್ತಿದ್ದರೂ, ಎಷ್ಟು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದರೂ ಜನರ ಮನಸ್ಸಿಗೆ ಹತ್ತುವುದಿಲ್ಲ. ಇನ್ನೊಬ್ಬನಿಗೆ ಚೆನ್ನಾಗಿ ಮಾತಾಡುವುದಕ್ಕೂ ಬರುತ್ತಿರುವುದಿಲ್ಲ; ಅವನ ಅಭಿಪ್ರಾಯಗಳೂ ಅಷ್ಟು ಉತ್ತಮವಾಗಿರುವುದಿಲ್ಲ; ಆದರೂ ಜನರು ಅವನ ಮಾತಿಗೆ

ಬೆರಗಾಗುವರು. ಅವರು ಸುಮ್ಮನೆ ಅತ್ತಿತ್ತ ಓಡಾಡಿದರೆ ಕೂಡ ಜನರು ವಶರಾಗುವರು. ಇದೇ ಓಜಸ್ಸಿನ ಶಕ್ತಿಯು.

ಪ್ರತಿಯೊಬ್ಬನಲ್ಲಿಯೂ ಈ ಓಜಸ್ಸೆಂಬುದು ಕೂಡಿಕೊಂಡೇ ಇರುವುದು. ಶರೀರದಲ್ಲಿ ವ್ಯಾಪಾರವುಳ್ಳ ಶಕ್ತಿ ವಿಶೇಷಗಳೆಲ್ಲ ಓಜಸ್ಸಾಗುತ್ತವೆ. ಇದು ಕೇವಲ ರೂಪಾಂತರವಾಗುವ ಮಾತಾಗಿದೆಯೆ ಹೊರತು ಹೊಸ ಶಕ್ತಿಯೇನೂ ಅಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಹೊರಗೆ ವಿದ್ಯುಚ್ಛಕ್ತಿ ಅಥವಾ ಸೂಚಿಕಾಂತಶಕ್ತಿಯಾಗುವ ಶಕ್ತಿ ವಿಶೇಷವೇ ಒಳಗಣ ಶಕ್ತಿಯಾಗುವುದು. ಸ್ತ್ರೀಪುರುಷರ ಯೋಚನೆ ಬಂದಾಗ ವೀರ್ಯ ಶಕ್ತಿಯಾಗಿ ತೋರುವ ಮನುಷ್ಯನ ಶಕ್ತಿಯಾವುದಿರುವುದೋ ಅದನ್ನು ತಡೆದು ವಶದಲ್ಲಿಟ್ಟುಕೊಂಡರೆ ಅದೇ ಓಜಸ್ಸಾಗಿ ಪರಿಣಾಮ ಹೊಂದುವುದೆಂದು ಯೋಗಿಗಳು ಹೇಳುವರು. ಈ ಶಕ್ತಿಯು ಮೂಲಾಧಾರದ ಅಧೀನವಾಗಿರುವುದರಿಂದ ಆ ಸ್ಥಾನದ ವಿಷಯಕ್ಕೆ ಯೋಗಿಯು ಹೆಚ್ಚು ಗಮನವನ್ನು ಕೊಡುತ್ತಾನೆ; ಈ ಜನನೇಂದ್ರಿಯ ಶಕ್ತಿಯನ್ನೆಲ್ಲ ಓಜಸ್ಸನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವನು. ಯಾವನು ಬ್ರಹ್ಮಚಾರಿಯಾಗಿರುವನೊ, ಯಾವಳು ಬ್ರಹ್ಮಚಾರಿಣಿಯಾಗಿರುವಳೊ ಅವರಿಬ್ಬರಿಗೆ ಮಾತ್ರ ಓಜಸ್ಸನ್ನು ಸಂಪಾದಿಸಿ ಮೆದುಳಿನಲ್ಲಿಡುವುದಕ್ಕಾಗುತ್ತದೆ. ಆದುದರಿಂದಲೆ ಬ್ರಹ್ಮಚರ್ಯವು ಅಷ್ಟು ಉತ್ತಮ ಸಾಧನವೆಂದು ಹೇಳುತ್ತಾರೆ. ಯಾವನು ಕಾಮುಕನಾಗಿರುವನೊ ಅವನಿಗೆ ಮನಶ್ಶುದ್ಧಿಯೂ ಮೇಧಾ ಶಕ್ತಿಯೂ ಹೋಗುವುದಲ್ಲದೆ ಸದ್ಗುಣಗಳ ಆಧಾರವೂ ಇಲ್ಲದಂತಾಗುವುದು. ಆದುದರಿಂದಲೆ ಲೋಕದಲ್ಲಿ ಯಾವ ಯಾವ ಮತಗಳಲ್ಲಿ ಮಹಾಜ್ಞಾನಿಗಳುಂಟಾಗಿರುವರೊ ಆ ಮತಗಳಲ್ಲೆಲ್ಲ ಪೂರ್ಣ ಬ್ರಹ್ಮಚರ್ಯವು ಅತ್ಯವಶ್ಯವೆಂದು ಹೇಳಿರುವುದು. ಕೆಲವು ಜನರು ಮದುವೆಯನ್ನು ಬಿಟ್ಟು ಸನ್ಯಾಸಿಗಳಾದ ಕಾರಣವೂ ಇದೆ. ಮನೋವಾಕ್ಕಾಯಗಳಲ್ಲಿ ಯಾವಾಗಲೂ ಸಂಪೂರ್ಣ ಬ್ರಹ್ಮಚರ್ಯವಿರಬೇಕು. ಬ್ರಹ್ಮಚರ್ಯವಿಲ್ಲದೆ ರಾಜಯೋಗವನ್ನು ಅಭ್ಯಾಸ ಮಾಡುವುದು ಅಪಾಯಕರವಾದುದು. ಇದರಿಂದ ಹುಚ್ಚು ಕೂಡ ಹಿಡಿಯುವುದುಂಟು. ರಾಜಯೋಗವನ್ನು ಅಭ್ಯಾಸ ಮಾಡುತ್ತ ಅಪವಿತ್ರವಾದ ಆಚರಣೆಗಳನ್ನು ಮಾಡುತ್ತಿದ್ದರೆ ಯೋಗಿಗಳಾದಾರೆ?

## 6ನೇ ಅಧ್ಯಾಯ

# ಪ್ರತ್ಯಾಹಾರವೂ ಧಾರಣೆಯೂ

ಮುಂದಿನ ಯೋಗಾಂಗಕ್ಕೆ ಪ್ರತ್ಯಾಹಾರವೆಂದು ಹೆಸರು. ಹಾಗೆಂದರೇನು? ಜ್ಞಾನವಾಗುವ ಕ್ರಮವು ಗೊತ್ತೇ ಇದೆಯಷ್ಟೆ. ಮೊದಲು ಹೊರಗೆ ಇಂದ್ರಿಯಗೋಳಕಗಳಿವೆ; ಆಮೇಲೆ ಒಳಗೆ ಮೆದುಳಿನ ಸ್ಥಾನಗಳ ಮೂಲಕ ಶರೀರ ವ್ಯಾಪಾರಗಳನ್ನು ನಡೆಸುವ ಇಂದ್ರಿಯಗಳಿವೆ; ಮತ್ತು ಇದರ ಮೇಲೆ ಮನಸ್ಸಿದೆ. ಇವುಗಳೆಲ್ಲ ಸೇರಿ ಹೊರಗಣ ವಿಷಯಕ್ಕೆ ಕೂಡಿಕೊಂಡರೆ ಅದರ ಜ್ಞಾನವಾಗುವುದು. ಆದರೆ ಮನಸ್ಸನ್ನು ಏಕಾಗ್ರಮಾಡಿ ಒಂದೇ ಒಂದು ಇಂದ್ರಿಯಕ್ಕೆ ಸಂಬಂಧಪಡುವಂತೆ ಮಾಡುವುದು ಬಹು ಕಷ್ಟ. ಮನಸ್ಸೆಂಬುದು ದಾಸನಾಗಿರುವುದು.

ಈ ಜಗತ್ತಿನಲ್ಲೆಲ್ಲ ಒಳ್ಳೆಯವರಾಗಿರಿ, ಒಳ್ಳೆಯವರಾಗಿರಿ ಎಂದು ಉಪದೇಶ ಮಾಡುತ್ತಲೆ ಇರುವರು. ಕದಿಯಬೇಡ, ಸುಳ್ಳು ಹೇಳಬೇಡ ಎಂಬ ಉಪದೇಶ ವಾಕ್ಯಗಳನ್ನು ಕೇಳದ ಹುಡುಗನೆ ಈ ಜಗತ್ತಿನಲ್ಲಿ ಯಾವ ದೇಶದಲ್ಲಿಯೂ ಇಲ್ಲವೆನ್ನಬಹುದು. ಈ ಕೆಲಸಗಳನ್ನು ಬಿಡುವುದಕ್ಕೇನು ಮಾಡಬೇಕೆಂಬುದನ್ನು ಮಾತ್ರ ಮಕ್ಕಳಿಗೆ ಯಾರೂ ಹೇಳಿಕೊಡುವುದಿಲ್ಲ. ಸುಮ್ಮನೆ ಮಾತಾಡುವುದರಿಂದ ಅವನಿಗೇನೂ ಪ್ರಯೋಜನವಾಗುವುದಿಲ್ಲ. ಅವನು ಕಳ್ಳನೇಕೆ ಆಗಬಾರದು? ಕದಿಯದೆ ಇರುವ ಕ್ರಮವನ್ನೇನೂ ನಾವು ಹೇಳಿಕೊಡುವುದಿಲ್ಲ; ಸುಮ್ಮನೆ ಕದಿಯಬೇಡವೆಂದು ಹೇಳುತ್ತೇವೆ. ಮನಸ್ಸನ್ನು ಸ್ವಾಧೀನಕ್ಕೆ ತಂದುಕೊಳ್ಳುವ ಬಗೆಯನ್ನು ಹೇಳಿಕೊಟ್ಟರೆ ಮಾತ್ರ ಅವನಿಗೆ ನಿಜವಾದ ಸಹಾಯಮಾಡಿದಂತಾಗುತ್ತದೆ. ಒಳಗಣ ವ್ಯಾಪಾರಗಳೇ ಆಗಲಿ, ಹೊರಗಣ ವ್ಯಾಪಾರಗಳೇ ಆಗಲಿ ನಡೆಯಬೇಕಾದರೆ ಮನಸ್ಸು ಇಂದ್ರಿಯಗಳೆಂಬ ಕೆಲವು ಸ್ಥಾನಗಳೊಡನೆ [1] ಸೇರಿದರೆ ಮಾತ್ರ ಆಗುತ್ತವೆ. ತನಗೆ ಬೇಕಿರಲಿ, ಬೇಕಿಲ್ಲದಿರಲಿ ಅದು ಈ ಸ್ಥಾನಗಳೊಡನೆ ಕೂಡಿಕೊಳ್ಳುವಂತೆ ಜಗ್ಗಿದಂತಾಗುತ್ತದೆ. ಆದುದರಿಂದಲೆ ಜನರು ಅಕೃತ್ಯಗಳನ್ನು ಮಾಡಿ ಪಶ್ಚಾತ್ತಾಪವನ್ನು ಅನುಭವಿಸುವರು. ಮನಸ್ಸು

---

1. ಮೂಗು, ಕಣ್ಣು ಮೊದಲಾದವು ಇಂದ್ರಿಯ ಗೋಳಕಗಳೇ ಹೊರತು ಇಂದ್ರಿಯಗಳಲ್ಲವೆಂದೂ ನಿಜವಾದ ಇಂದ್ರಿಯವು ಒಳಗೆ ಇರುವುದೆಂದೂ ನಮ್ಮ ದರ್ಶನಕಾರರು ಹೇಳುವರು. ಈ ಇಂದ್ರಿಯಗಳು ಮೆದುಳಿನಲ್ಲಿವೆಯೆಂದು ಈಗಿನ ಶರೀರ ಶಾಸ್ತ್ರಜ್ಞರು ಸಿದ್ಧ ಮಾಡಿರುವರು.

ಸ್ವಾಧೀನದಲ್ಲಿದ್ದರೆ ಅವರೇ ಈ ಕಾರ್ಯಗಳನ್ನು ಮಾಡುತ್ತಿರಲಿಲ್ಲ. ಮನಸ್ಸನ್ನು ಜಯಿಸಿದರೆ ಏನಾಗುವುದು? ಜ್ಞಾನವಾಗುವ ಇಂದ್ರಿಯ ಸ್ಥಾನಕ್ಕೆ ಹೋಗಿ ಮನಸ್ಸು ಸೇರಿಕೊಳ್ಳುವುದಿಲ್ಲ ಇದರಿಂದ ಅರಿಯುವುದೂ, ಸಂಕಲ್ಪಿಸುವುದೂ ತಾವಾಗಿಯೇ ಸ್ವಾಧೀನವಾಗುವುವು. ಇಲ್ಲಿಯವರೆಗೆ ನಿಶ್ಚಯವಾಯಿತು. ಆದರೆ ಇದು ಸಾಧ್ಯವೆ? ಎಂದರೆ ಸಂಪೂರ್ಣವಾಗಿ ಸಾಧ್ಯವಾಗುವುದು. ಈಗಿನ ಕಾಲದಲ್ಲಿ ನೋಡಿರಿ; ಶ್ರದ್ಧಾ ವೈದ್ಯರು ದುಃಖವೇ ಇಲ್ಲ, ನೋವೇ ಇಲ್ಲ, ಕೆಟ್ಟದ್ದೆಂಬುದೇ ಇಲ್ಲ ಎಂದು ಭಾವಿಸಿಕೊಳ್ಳಬೇಕೆಂದು ಜನರಿಗೆ ಬೋಧಿಸುತ್ತಿರುವರು. ಅವರು ಹೇಳುವ ಸಿದ್ಧಾಂತವು ಸ್ವಲ್ಪ ಮಟ್ಟಿಗೆ ದ್ರಾವಿಡ ಪ್ರಾಣಾಯಾಮವಾಗಿದೆ. ಆದರೇನು? ಅವರಿಗೂ ಹೇಗೂ ಯೋಗದ ಒಂದಂಶವು ಸಿಕ್ಕಿರುವುದು. ಇವರು ರೋಗವನ್ನು ಇಲ್ಲವೆಂದೇ ಭಾವಿಸುವಂತೆ ರೋಗಿಗೆ ಹೇಳಿ ಎಲ್ಲೆಲ್ಲಿ ಗುಣ ಮಾಡಿರುತ್ತಾರೆಯೊ ಅಲ್ಲೆಲ್ಲ ಅವರು ಪ್ರತ್ಯಾಹಾರವನ್ನೆ ಸ್ವಲ್ಪ ಮಟ್ಟಿಗೆ ಉಪಯೋಗಿಸಿರುತ್ತಾರೆನ್ನಬೇಕು. ಏಕೆಂದರೆ ಅವರು ರೋಗಿಯ ಮನಸ್ಸನ್ನು ಬಲಪಡಿಸಿ ಇಂದ್ರಿಯಗಳಿಂದ ಆಗುವ ಜ್ಞಾನವನ್ನು ಮರೆಯುವಂತೆ ಮಾಡುವರು. ಮೋಹನಶಾಸ್ತ್ರಜ್ಞರೂ ಇದರಂತೆ ರೋಗಿಯಲ್ಲಿ ತಾವು ಮಾಡುವ ಸೂಚನೆಯಿಂದ ಒಂದು ಬಗೆಯ ವಿಲಕ್ಷಣ ಪ್ರತ್ಯಾಹಾರವನ್ನು ತತ್ಕಾಲಕ್ಕೆ ಉಂಟು ಮಾಡುವರು. ಈ ಮೋಹನ ಸೂಚನೆಯೆಂಬುದು ಯಾವನ ಮನಸ್ಸು ದುರ್ಬಲವಾಗಿರುವುದೊ ಅವನಲ್ಲಿ ಮಾತ್ರ ಕಾರ್ಯಕಾರಿಯಾಗುವುದು. ಇಲ್ಲಿ ಈ ಶಾಸ್ತ್ರಜ್ಞನು ದುರದುರ ನೋಡುವುದು ಮೊದಲಾದ ರೀತಿಯಿಂದ ತನ್ನ ವಿದ್ಯೆಗೆ ವಿಷಯನಾಗಿರುವವನ ಮನಸ್ಸನ್ನು ಒಂದು ಬಗೆಯ ನಿಶ್ಚೇಷ್ಟೆಯ ವಿಲಕ್ಷಣ ಸ್ಥಿತಿಗೆ ತಂದ ಹೊರತು ಅವನ ಸೂಚನೆಗಳೇನೂ ನಾಟುವುದಿಲ್ಲ.

ಮೋಹನ ವಿದ್ಯೆಯಿಂದಲಾಗಲಿ, ಶ್ರದ್ಧಾವೈದ್ಯದಿಂದಲಾಗಲಿ ಕ್ರಮವನ್ನು ಜರುಗಿಸುವವನು ಸ್ವಲ್ಪ ಮಟ್ಟಿಗೆ ರೋಗಿಯಲ್ಲಿ ಉಂಟು ಮಾಡುವ ಇಂದ್ರಿಯ ಜಯವೆಂಬುದು ಅಯುಕ್ತವಾದದ್ದು. ಏಕೆಂದರೆ ಅದರಿಂದ ಕೊನೆಗೆ ಬಹಳ ಕೇಡುಂಟಾಗುವುದು. ಇಲ್ಲಿ ತನ್ನ ಸಂಕಲ್ಪ ಶಕ್ತಿಯಿಂದ ತನ್ನ ಇಂದ್ರಿಯಗಳನ್ನು ನಿಗ್ರಹಮಾಡಿದಂತಾಗಲೇ ಇಲ್ಲ. ಇನ್ನೊಬ್ಬನು ತನ್ನ ಸಂಕಲ್ಪದ ಜೋರಿನಿಂದ ರೋಗಿಯ ಮನಸ್ಸಿಗೆ ತಗಲಿಸುವ ಪೆಟ್ಟುಗಳಿಂದ ಇವನ ಮನಸ್ಸು ಸ್ವಲ್ಪ ಹೊತ್ತು ಎಚ್ಚರದಪ್ಪಿರುವದೆಂದು ಹೇಳಬಹುದು. ಹುಚ್ಚು ಹುಚ್ಚಾಗಿ ಹರಿಯುವ ದುಷ್ಟಾಶ್ವಗಳನ್ನು ಲಗಾಮನ್ನೂ ತನ್ನ ಬಾಹುಬಲವನ್ನೂ ಉಪಯೋಗಿಸಿ ನಿಲ್ಲಿಸಿದಂತಾಗಲಿಲ್ಲ; ಮತ್ತೊಬ್ಬನನ್ನು ಬೇಡಿಕೊಂಡು ಆ ಕುದುರೆಗಳ ತಲೆಯ ಮೇಲೆ ಬಲವಾದ ಪೆಟ್ಟುಗಳನ್ನು ಹಾಕಿಸಿ ಅದರಿಂದ ಅವು ತಬ್ಬಿಬ್ಬಾಗಿ ಸ್ವಲ್ಪ ಹೊತ್ತು ಸುಮ್ಮನಿರುವಂತೆ ಮಾಡಿದಂತಾಯಿತು. ಹೀಗೆ ಮಾಡುತ್ತ ಮಾಡುತ್ತ ಹೋದ ಹಾಗೆಲ್ಲ ಯಾವನ ಮನಸ್ಸಿನ ಮೇಲೆ ಕ್ರಿಯೆ ನಡೆಯುತ್ತಿದೆಯೊ ಅವನಿಗೆ ಸ್ವಲ್ಪ ಸ್ವಲ್ಪ ಮನಃಶಕ್ತಿ ಕಡಿಮೆಯಾಗುತ್ತಲೆ ಬರುವುದು. ಕೊನೆಗೆ ಸಂಪೂರ್ಣವಾಗಿ ಆತ್ಮದ ಮನನ ಮಾಡುವ ಶಕ್ತಿಯು ಮನಸ್ಸಿಗೆ ಬರುವುದು ಹಾಗಿರಲಿ; ಮನಸ್ಸು ತನ್ನ ಸ್ವರೂಪವನ್ನೆ ಕಳೆದುಕೊಂಡು ನಿರ್ಬಲವಾಗಿ ರೋಗಿಗೆ ಆಗುವ ಹುಚ್ಚರ ಆಸ್ಪತ್ರೆಯೇ ಉತ್ತಮ ಗತಿಯಾಗುವುದು.

ಯಾವ ಇಂದ್ರಿಯ ನಿಗ್ರಹವು ತನ್ನ ಇಚ್ಛೆಯಿಂದ ಹುಟ್ಟದೆ ಇರುವುದೊ–ಯಾವುದು ನಿಗ್ರಹಕರ್ತನ ಮನಸ್ಸಿನಿಂದ ಆಗುವುದಿಲ್ಲವೊ–ಅಂಥ ಪ್ರಯತ್ನವು ಅಪಾಯಕರವೆಂಬುದಿಷ್ಟೇ ಅಲ್ಲ;

ಕೊನೆಯ ಪುರುಷಾರ್ಥವನ್ನೆ ಹಾಳುಮಾಡಿಬಿಡುವುದು. ಪ್ರತಿಯೊಂದು ಆತ್ಮಕ್ಕೂ ಮುಕ್ತಿಯೆ-ಎಂದರೆ ವಿಷಯ ಮತ್ತು ಮನಸ್ಸುಗಳ ಬಂಧದಿಂದ ಬಿಡುಗಡೆಯಾಗುವುದೆ-ಆಧ್ಯಾತ್ಮಿಕ ಮತ್ತು ಆಧಿಭೌತಿಕ ಪ್ರಪಂಚವನ್ನು ತನ್ನ ಸ್ವಾಧೀನದಲ್ಲಿಟ್ಟು ಕೊಂಡಿರುವುದೆ-ಪರಮ ಪುರುಷಾರ್ಥವು. ಮತ್ತೊಬ್ಬನಿಂದ ಬರುವ ಸಂಕಲ್ಪ ಝರಿಯು ಇಂದ್ರಿಯಗಳನ್ನೆ ವಶಮಾಡಿಕೊಂಡರೂ ಸರಿಯೆ, ಅಥವಾ ಒಂದು ವಿಲಕ್ಷಣಾವಸ್ಥೆಯನ್ನುಂಟುಮಾಡಿ ಇಂದ್ರಿಯ ದಮನ ಮಾಡಿದರೂ ಸರಿಯೆ ಯಾವ ರೂಪದಿಂದ ಬಂದರೂ ಜೀವಿಯನ್ನು ಈ ಮುಕ್ತಿಗೆ ಒಯ್ಯುವುದನ್ನು ಬಿಟ್ಟು ಇದುವರೆಗೆ ಇದ್ದ ಸಂಸ್ಕಾರಗಳು ಮೂಢಬುದ್ಧಿಗಳೆಂಬ ದೊಡ್ಡ ಬಂಧನದ ಸಂಕೋಲೆಗೆ ಇನ್ನೊಂದು ಗೊಣಸನ್ನು ಕೊಡಿಸುವುದು. ಆದಕಾರಣ ಮತ್ತೊಬ್ಬರಿಗೆ ವಶರಾಗದಂತೆ ಎಚ್ಚರಿಕೆಯಿಂದಿರಬೇಕು. ನಮ್ಮ ಮೂಢತೆಯಿಂದ ಮತ್ತೊಬ್ಬರು ನಮ್ಮಿಂದ ಕೆಟ್ಟು ಹಾಳಾಗದಂತೆ ನೋಡಿಕೊಳ್ಳಬೇಕು. ಕೆಲವರು ಅನೇಕ ಜನರಿಗೆ ಅವರ ವಾಸನೆಗಳನ್ನು ತಿದ್ದಿ ಹೊಸ ಹೊಸ ಮಾರ್ಗಗಳನ್ನು ತೋರಿಸಿ ಕೆಲವು ಕಾಲದ ಉಪಕಾರ ಮಾಡುವುದೂ ನಿಜವೆ. ಆದರೆ ಇವರು ಎಚ್ಚರಿಕೆಯಿಲ್ಲದೆ ಹೊರ ಹಾಕುತ್ತಿರುವ ಸೂಚನೆಗಳಿಂದ ಹೆಂಗಸರಿಗೂ ಗಂಡಸರಿಗೂ ಒಂದು ಬಗೆಯ ವಿಲಕ್ಷಣವಾದ ನಿಶ್ಚೇಷ್ಟೆಯ ಮೋಹವುಂಟಾಗಿ ಕೊನೆಗೆ ಅವರನ್ನು ಅಚೇತನರಂತೆಯೆ ಮಾಡಿಬಿಡುವುದರಿಂದ ಎಷ್ಟೋ ಕೋಟಿ ಜನರಿಗೆ ಇವರಿಂದ ಕೇಡೇ ಉಂಟಾಗುವುದು. ಆದುದರಿಂದ ಯಾವಾತನು ಇತರರನ್ನು ಸುಮ್ಮನೆ ಮೂಢ ಭಕ್ತಿಯಿಂದ ನಂಬಬೇಕೆಂದು ಕೇಳುತ್ತಾನೊ ಅಥವಾ ತನ್ನಲ್ಲಿರುವ ಹೆಚ್ಚಿನ ಸಂಕಲ್ಪ ಶಕ್ತಿಯಿಂದ ಜನರನ್ನು ತನ್ನ ಕಡೆಗೆ ತಿರುಗಿಸಿಕೊಳ್ಳುವನೊ ಅವನು ತನಗೆ ಗೊತ್ತಿರಲಿ ಇಲ್ಲದಿರಲಿ ಲೋಕಕ್ಕೆ ಅಪಕಾರ ಮಾಡಿದವನಾಗುತ್ತಾನೆ.

ಆದುದರಿಂದ ನಿಮ್ಮ ನಿಮ್ಮ ಮನಸ್ಸುಗಳನ್ನೆ ಉಪಯೋಗಿಸಿಕೊಳ್ಳಿ. ನಿಮ್ಮ ಶರೀರವನ್ನೂ ಮನಸ್ಸನ್ನೂ ನೀವೇ ಸ್ವಾಧೀನಮಾಡಿಕೊಳ್ಳಿ. ನೀವು ರೋಗಿಗಳಾಗಿದ್ದ ಹೊರತು ನಿಮ್ಮ ಮೇಲೆ ಹೊರಗಿನ ಮನಸ್ಸು ಯಾವುದೂ ಕಾರ್ಯಕಾರಿಯಾಗಲಾರದೆಂಬುದನ್ನು ಮರೆಯದಿರಿ. ಯಾವನು ಸುಮ್ಮನೆ ನಂಬಬೇಕೆಂದು ಕೇಳುತ್ತಾನೊ, ಅವನು ಎಷ್ಟೇ ಒಳ್ಳೆಯವನಾಗಿರಲಿ, ಎಷ್ಟೇ ದೊಡ್ಡವನಾಗಿರಲಿ, ಅವನ ಹತ್ತಿರಕ್ಕೆ ಹೋಗಬೇಡಿ. ಈ ಜಗತ್ತಿನಲ್ಲೆಲ್ಲ ಕುಣಿಯುತ್ತ, ನೆಗೆಯುತ್ತ, ಕಿರಿಚಿಕೊಳ್ಳುವ ಮತಭೇದದವರು ಇದ್ದೇ ಇರುವರು. ಇವರು ಗಾನ ಮಾಡುತ್ತ, ನರ್ತನ ಮಾಡುತ್ತ ಮತವನ್ನು ಬೋಧಿಸಿದರೆ ಅಂಟುರೋಗದಂತೆ ಹಬ್ಬಿಕೊಳ್ಳುವುದು. ಯಾರ ಮನಸ್ಸು ಬಹು ನಾಜೂಕಾಗಿರುವುದೊ ಅವರು ಕೆಲವು ಕಾಲದವರೆಗೆ ಬಹುಬೇಗ ಇವರಿಗೆ ವಶರಾಗುವರು. ಆದರೆ ಬಹು ಸಂದರ್ಭಗಳಲ್ಲಿ ಇವರು ಎಷ್ಟೋ ಜನರನ್ನು ಹಾಳು ಮಾಡುವುದನ್ನು ನೋಡಿದರೆ ವ್ಯಸನಪಡಬೇಕಾಗಿರುವುದು. ನಿಜವಾಗಿ ನೋಡಿದರೆ, ಇಂಥ ವಿಲಕ್ಷಣ ರೀತಿಯಿಂದ ಮತ್ತೊಬ್ಬರಿಗೆ ವಶರಾಗಿ ಸದ್ಗುಣಾಭಾಸವನ್ನು ಪಡೆಯುವುದಕ್ಕಿಂತಲೂ, ಯಾವನೊಬ್ಬನೆ ಆಗಲಿ ಅಥವಾ ಯಾವುದೊಂದು ಜನಾಂಗವೇ ಆಗಲಿ ಕೆಟ್ಟವರಾಗಿರುವುದೇ ಮೇಲು. ಏನೊಂದು ವಿಚಾರವೂ ಇಲ್ಲದ ಇಂಥ ಮತಾಭಿಮಾನಿಗಳು ಸದಭಿಪ್ರಾಯದಿಂದಲೆ ಲೋಕಕ್ಕೆ ಮಾಡುವ ಅಪಕಾರವನ್ನು ನೆನಸಿಕೊಂಡರೆ ಹೃದಯವು ತಲ್ಲಣಿಸುವುದು. ಪಾಪ! ತಾವು ಮಾಡುವ ಸಂಗೀತ ಭಜನೆಗಳಿಂದ ಯಾರು ಇದ್ದಕ್ಕಿದ್ದ ಹಾಗೆ ಧರ್ಮಬುದ್ಧಿಯವರಾಗುವರೊ ಅವರು

ಸುಮ್ಮನೆ ಸ್ವಾತಂತ್ರ್ಯವಿಲ್ಲದವರಾಗಿಯೂ ವಿಲಕ್ಷಣರಾಗಿಯೂ ಬಲಹೀನರಾಗಿಯೂ ಆಗಿ ಇನ್ನಾರಾದರೂ ಅತ್ಯಂತ ದುಷ್ಟ ಸೂಚನೆಯನ್ನು ಮಾಡಿದರೆ ಅದನ್ನು ಅನುಸರಿಸುವವರಾದಾರೆಂದು ಇವರಿಗೇನು ಗೊತ್ತು? ಮನುಷ್ಯರ ಹೃದಯವನ್ನು ಸ್ವಲ್ಪದರಲ್ಲಿ ಉತ್ತಮ ರೀತಿಗೆ ತರುವ ಅದ್ಭುತ ಶಕ್ತಿಯು ತಮಗೆ ಇರುವುದೆಂದೂ, ಇಂಥ ಶಕ್ತಿಯನ್ನು ಮೇಘಮಂಡಲದ ಮೇಲೆ ಇರುವ ಯಾವುದೋ ಒಂದು ಅದ್ಭುತ ವ್ಯಕ್ತಿಯು ತಮಗೆ ಕೊಟ್ಟಿರುವುದೆಂದೂ ತಿಳಿದು ಹಿಗ್ಗುತ್ತಿರುವ ಈ ಮೂಢರಾದ ಭ್ರಾಂತ ಜನರಿಗೆ ತಾವು ಮುಂದೆ ನಡೆಯುವ ನಷ್ಟ, ಅಕೃತ್ಯ, ಹುಚ್ಚು ಹಿಡಿಯುವಿಕೆ, ಮರಣ ಮುಂತಾದವುಗಳ ಬೀಜವನ್ನು ಬಿತ್ತುತ್ತಿದ್ದೇವೆಂಬುದು ಸ್ವಲ್ಪವೂ ಗೊತ್ತಾಗುವುದಿಲ್ಲ. ಆದ ಕಾರಣ ಯಾವ ಯಾವುದರಿಂದ ನಿಮ್ಮ ಸ್ವಾತಂತ್ರ್ಯವು ಕಡಿಮೆಯಾಗುವುದೊ ಅದರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕು. ಅದು ಅಪಾಯಕರವೆಂದು ನಿಶ್ಚಯಿಸಿಕೊಂಡು ತನ್ನ ಕೈಲಾದ ಮಟ್ಟಿಗೆ ಅದರ ಹತ್ತಿರಕ್ಕೆ ಹೋಗದೆ ಇರಬೇಕು.

ಯಾವನು ತನ್ನ ಮನಸ್ಸನ್ನು ಇಂದ್ರಿಯಗಳಿಗೆ ತನಗೆ ಬೇಕಾದಾಗ ಸೇರಿಸುತ್ತಲೂ ಬೇಡವಾದಾಗ ಬಿಡಿಸುತ್ತಲೂ ಇರುವುದನ್ನು ಕಲಿತಿರುವನೊ ಅವನಿಗೆ ಪ್ರತ್ಯಾಹಾರವು ಬಂದಂತಾಯಿತು. ಪ್ರತ್ಯಾಹಾರವೆಂದರೆ ಈಚೆಗೆ ತೆಗೆದುಕೊಳ್ಳುವುದು; ಎಂದರೆ ಮನಸ್ಸಿನ ವೃತ್ತಿಗಳು ಹೊರಕ್ಕೆ ಹೋಗದಂತೆ ಅಡ್ಡಿ ಮಾಡುವುದು; ಅದನ್ನು ಇಂದ್ರಿಯ ಬಂಧದಿಂದ ಬಿಡಿಸುವುದು. ಇದು ಬಂದರೆ ನಮಗೆ ನಿಜವಾದ ಯೋಗ್ಯತೆ ಬಂದಂತಾಗುವುದು. ಆಗ ಮಾತ್ರ ಮುಕ್ತಿಯ ದಾರಿಯಲ್ಲಿ ಒಂದು ದೊಡ್ಡ ಹೆಜ್ಜೆಯನ್ನು ಇಟ್ಟಂತೆ ಆಗುವುದು. ಅಲ್ಲಿಯವರೆಗೆ ನಾವು ಸೂತ್ರದ ಬೊಂಬೆಗಳೆ.

ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವುದು ಎಷ್ಟು ಕಷ್ಟ! ಇದನ್ನು ಹುಚ್ಚು ಹಿಡಿದ ಮಂಗಕ್ಕೆ ಹೋಲಿಸಿರುವುದು ಬಹು ಚೆನ್ನಾಗಿ ಒಪ್ಪುತ್ತದೆ. ಎಲ್ಲಾ ಮಂಗಗಳೂ ಚಂಚಲವಾಗಿರುವುದು ಸ್ವಭಾವವಷ್ಟೆ. ಅದರಂತೆ ಚಂಚಲವಾಗಿದ್ದ ಒಂದು ಮಂಗವಿತ್ತು. ಇಷ್ಟಕ್ಕೆ ಸಾಲದೆ ಯಾರೋ ಅದಕ್ಕೆ ಯಥೇಷ್ಟವಾಗಿ ಮದ್ಯವನ್ನು ಕುಡಿಸಿಬಿಟ್ಟರು. ಆಮೇಲೆ ಅದು ಇನ್ನೂ ಚಂಚಲವಾಯಿತು. ಆಮೇಲೆ ಅದನ್ನೊಂದು ಚೇಳು ಕಚ್ಚಿತು. ಮನುಷ್ಯರಿಗೆ ಚೇಳು ಕಡಿದರೇ ದಿನವೆಲ್ಲ ಹಾರಾಡುತ್ತಿರುತ್ತಾರೆ. ಎಂದ ಮೇಲೆ ಈ ಮಂಗನ ಅವಸ್ಥೆಯಂತು ಹೇಳುವುದಕ್ಕೆ ಬಾರದಂತಾಯಿತು. ಈ ದುಃಖ ಪರಂಪರೆಯು ಪೂರ್ಣವಾಗಲಿಕ್ಕೆ ಅದನ್ನು ಒಂದು ದೆವ್ವ ಹಿಡಿಯಿತು. ಆ ಮಂಗನ ನಿಂತ ಬಳಿ ನಿಲ್ಲದ ಚಾಂಚಲ್ಯವನ್ನು ಯಾರಿಂದ ವರ್ಣಿಸಲಾದೀತು? ಮನುಷ್ಯರ ಮನಸ್ಸು ಆ ಮಂಗನಂತಿರುವುದು. ಇದು ಸ್ವಭಾವದಿಂದಲೆ ಚಂಚಲವಾಗಿರುತ್ತದೆ. ಆಮೇಲೆ ಇದಕ್ಕೆ ಆಶೆಯೆಂಬ ಮದ್ಯದ ಅಮಲು ಏರುತ್ತದೆ. ಇದರಿಂದ ಅದರ ಚೆಲ್ಲಾಟವು ಮತ್ತೂ ಹೆಚ್ಚಾಗುತ್ತದೆ. ಆಶೆ ಬಂದ ಮೇಲೆ ಇತರರು ಅಭಿವೃದ್ಧಿಗೆ ಬರುತ್ತಾರಲ್ಲ ಎಂಬ ಹೊಟ್ಟೆ ಕಿಚ್ಚಿನ ಚೇಳು ಕಚ್ಚುವುದು. ಕೊನೆಗೆ ದುರಹಂಕಾರವೆಂಬ ದೆವ್ವವೂ ಪ್ರವೇಶ ಮಾಡಿ ತಾನೇ ದೊಡ್ಡವನೆಂಬ ಭಾವನೆಯನ್ನುಂಟು ಮಾಡುವುದು. ಇಂಥ ಮನಸ್ಸನ್ನು ಬಿಗಿ ಹಿಡಿಯುವುದು ಎಷ್ಟೋ ಕಷ್ಟ!!

ಆದುದರಿಂದ ಮೊದಲು ಮಾಡತಕ್ಕದ್ದೇನೆಂದರೆ–ಸ್ವಲ್ಪ ಹೊತ್ತು ಸುಮ್ಮನೆ ಕೂತುಕೊಂಡಿದ್ದು ಮನಸ್ಸನ್ನು ಅದು ಹೋದ ಕಡೆಗೆ ಬಿಡಬೇಕು. ಮನಸ್ಸು ಗೆಜ್ಜೆಗುದಿ ಕುದಿಯುತ್ತಿರಲಿ, ಬಿಟ್ಟು ಬಿಡಬೇಕು. ಅದು ಹಾರಾಡುತ್ತಿದ್ದ ಆ ಮಂಗನಂತೆ ಇರುವುದು. ಮಂಗನು ಎಷ್ಟು ಬೇಕಾದರೆ ಅಷ್ಟು ಹಾರಾಡಲೆಂದು ಬಿಟ್ಟು ಬಿಟ್ಟು ಸುಮ್ಮನೆ ಕೂತುಕೊಂಡು ನೋಡುತ್ತಿರಬೇಕು.

ತಿಳಿವಳಿಕೆಯೇ ಶಕ್ತಿಯೆಂದು ಒಂದು ಇಂಗ್ಲೀಷು ಗಾದೆಯಿರುವುದು. ಇದು ನಿಜ. ಮನಸ್ಸು ಏನು ಮಾಡುವುದೆಂಬುದನ್ನು ತಿಳಿದುಕೊಂಡ ಹೊರತು ಅದನ್ನು ಸ್ವಾಧೀನ ಮಾಡಿಕೊಳ್ಳುವುದಾಗುವುದಿಲ್ಲ. ಲಗಾಮನ್ನು ಸಡಿಲ ಮಾಡಿರಿ. ಎಷ್ಟೋ ಕೆಟ್ಟ ಯೋಚನೆಗಳು ಬರುತ್ತವೆ. ಇಂಥ ಯೋಚನೆಗಳು ಬಂದದ್ದು ನೋಡಿ ನಿಮಗೇ ಆಶ್ಚರ್ಯವಾಗುವುದು. ಆದರೆ ದಿನದಿನಕ್ಕೆ ಮನಸ್ಸಿನ ಐಲಾಟಗಳು ಕಡಿಮೆಯಾಗುತ್ತ ಬರುತ್ತವೆ; ದಿನ ದಿನಕ್ಕೆ ಅದು ಶಾಂತಿಯಾಗುತ್ತ ಬರುವುದು. ಮೊದಲು ಕೆಲವು ತಿಂಗಳುಗಳವರೆಗೆ ಮನಸ್ಸಿಗೆ ಎಷ್ಟೋ ಯೋಚನೆಗಳು ಬರುವುವು; ಇನ್ನು ಕೆಲವು ದಿನಗಳಾದ ಮೇಲೆ ಸ್ವಲ್ಪ ಕಡಿಮೆಯಾಗುವುವು; ಮತ್ತು ಕೆಲವು ತಿಂಗಳಾದ ಮೇಲೆ ಇನ್ನೂ ಕಡಿಮೆಯಾಗಿ ಮನಸ್ಸು ಸಂಪೂರ್ಣವಾಗಿ ವಶವಾಗುವುದು. ಆದರೆ ನಾವು ಬೇಸರವಿಲ್ಲದೆ ಪ್ರತಿ ದಿನವೂ ಅಭ್ಯಾಸ ಮಾಡುತ್ತಿರಬೇಕು. ಆವಿಯನ್ನು ಬಿಟ್ಟರೆ ಎಂಜಿನ್ನು ನಡೆಯಲೇಬೇಕು. ನಮ್ಮ ಮುಂದೆ ಪದಾರ್ಥಗಳಿದ್ದರೆ ನಮಗೆ ಅವುಗಳ ಅನುಭವವಾಗಲೇ ಬೇಕು. ಹೀಗಿರುವುದರಿಂದ ತಾನೂ ಒಂದು ಬರೀ ಎಂಜಿನ್ನಿನಂಥ ಯಂತ್ರವಲ್ಲವೆಂದು ಸಿದ್ಧ ಮಾಡಬೇಕಾದರೆ ತಾನು ಯಾವುದಕ್ಕೂ ವಶನಾಗಿಲ್ಲವೆಂದು ತೋರಿಸಿಕೊಡಬೇಕು. ಹೀಗೆ ಮನಸ್ಸನ್ನು ವಶ ಮಾಡಿಕೊಂಡು ಅದನ್ನು ಇಂದ್ರಿಯಸ್ಥಾನಗಳೊಡನೆ ಸೇರಗೊಡದೆ ಇರುವುದೇ ಪ್ರತ್ಯಾಹಾರವು. ಇದನ್ನು ಮಾಡುವುದು ಹೇಗೆ? ಇದು ಬಹು ಕಷ್ಟವಾದ ಕೆಲಸ; ಒಂದು ದಿನಕ್ಕೆ ಬರುವುದಲ್ಲ; ವರ್ಷಗಟ್ಟಲೆಯಾಗಿ ಒಂದೇ ಸಮವಾಗಿ ಬೇಸರವಿಲ್ಲದೆ ಹೆಣಗಾಡಿದರೆ ಮಾತ್ರ ಸಾಧ್ಯವಾದೀತು.

ಪ್ರತ್ಯಾಹಾರವನ್ನು ಕೆಲವು ಕಾಲ ಅಭ್ಯಾಸ ಮಾಡಿದ ಮೇಲೆ ಧಾರಣೆಯೆಂಬ ಮುಂದಿನ ಸಾಧನವನ್ನು ಪ್ರಾರಂಭಿಸಬೇಕು. ಧಾರಣೆಯೆಂದರೆ ಮನಸ್ಸನ್ನು ಗೊತ್ತಾದ ಕೆಲವೆಡೆಗಳಲ್ಲಿ ನಿಲ್ಲಿಸುವುದು. ಗೊತ್ತಾದ ಕೆಲವೆಡೆಗಳಲ್ಲಿ ಮನಸ್ಸನ್ನು ನಿಲ್ಲಿಸೋಣವೆಂದರೇನು? ಮನಸ್ಸು ಶರೀರದ ಎಲ್ಲಾ ಭಾಗಗಳನ್ನೂ ಬಿಟ್ಟು ಕೆಲವು ಭಾಗಗಳನ್ನು ಮಾತ್ರ ಅನುಭವದಲ್ಲಿಟ್ಟುಕೊಳ್ಳುವಂತೆ ಮಾಡುವುದು. ಹೇಗೆಂದರೆ:– ಶರೀರದ ಎಲ್ಲಾ ಅವಯವಗಳನ್ನೂ ಬಿಟ್ಟು ಕೈಯೊಂದನ್ನೇ ಧ್ಯಾನಿಸುವುದಕ್ಕೆ ಯತ್ನಿಸುವುದು. ಹೀಗೆ ಚಿತ್ತವು ಎಂದರೆ ಅಂತಃಕರಣವು ಒಂದೇ ಒಂದು ಸ್ಥಾನದಲ್ಲಿ ನಿಲ್ಲುವುದೇ ಧಾರಣೆಯೆನಿಸುವುದು. ಈ ಧಾರಣೆಯೆಂಬುದು ನಾನಾ ವಿಧವಾಗಿರುವುದು. ಇದರ ಜೊತೆಗೆ ಸ್ವಲ್ಪ ಕಲ್ಪನಾ ಶಕ್ತಿಯುನ್ನೂ ಉಪಯೋಗಿಸಿ ಕೊಳ್ಳುವುದೊಳ್ಳೆಯದು. ಹೇಗೆಂದರೆ ಮನಸ್ಸಿನಿಂದ ಹೃದಯದಲ್ಲಿ ಒಂದೇ ಒಂದು ಭಾಗವನ್ನು ಧ್ಯಾನಿಸಬೇಕು. ಅದು ಬಹು ಕಷ್ಟವಾಗುವುದು. ಅಲ್ಲಿ ಒಂದು ಕಮಲವನ್ನು ಭಾವಿಸಿಕೊಳ್ಳುವುದು ಇದಕ್ಕೆ ಬಹಳ ಅನುಕೂಲವಾಗುವುದು. ಆ ಕಮಲವು ಉಜ್ವಲವಾದ ಪ್ರಭಾಮಯವಾದುದೆಂದು ಭಾವಿಸಿ ಅದರಲ್ಲಿ ಮನಸ್ಸನ್ನು ಇಡಬೇಕು. ಅಥವಾ ಮೆದುಳಿನಲ್ಲಿರುವ ಸಹಸ್ರಾರವನ್ನು

ತೇಜೋಮಯವಾಗಿರುವುದೆಂದು ಭಾವಿಸಬೇಕು. ಇಲ್ಲದಿದ್ದರೆ ಹಿಂದೆ ಹೇಳಿದ ಸುಷುಮ್ನಾ ಮಾರ್ಗದಲ್ಲಿ ಬೇರೆ ಬೇರೆ ಚಕ್ರಗಳನ್ನಾದರೂ ಈ ರೀತಿ ಭಾವಿಸಬೇಕು.

ಯೋಗಿಯಾದವನು ಯಾವಾಗಲೂ ಅಭ್ಯಾಸ ಮಾಡಬೇಕು; ಒಂಟಿಯಾಗಿರುವುದಕ್ಕೆ ಪ್ರಯತ್ನಿಸುತ್ತಿರಬೇಕು. ವಿಧವಿಧವಾದ ಜನರ ಸಂಗದಿಂದ ಮನಸ್ಸು ಚಂಚಲವಾಗುವುದು. ಬಹಳ ಮಾತಾಡಬಾರದು. ಏಕೆಂದರೆ ಮಾತು ಮನಸ್ಸನ್ನು ಚಂಚಲಗೊಳಿಸುವುದು. ಬಹಳ ಶ್ರಮಪಡಬಾರದು. ಹಗಲೆಲ್ಲ ಮೈ ಬೆವರುವಂತೆ ದುಡಿದ ಮೇಲೆ ಮನಸ್ಸು ಸ್ವಾಧೀನವಾಗುವುದು ಕಷ್ಟ. ಈ ಮೇಲಿನ ನಿಯಮಗಳನ್ನು ಅನುಸರಿಸುವವನು ಯೋಗಿಯಾಗುವನು. ಈ ಯೋಗ ಶಕ್ತಿಯು ಎಷ್ಟಿರುವುದೆಂದರೆ, ಇದರಲ್ಲಿ ಸ್ವಲ್ಪ ಭಾಗವನ್ನನುಸರಿಸಿದರೂ ಎಷ್ಟೋ ಉಪಯೋಗವಾಗುವುದು. ಇದರಿಂದ ಯಾರಿಗೂ ಅಪಾಯವಿಲ್ಲ; ಎಲ್ಲರಿಗೂ ಉಪಯೋಗವುಂಟು. ಮೊದಲು ಮನಸ್ಸಿನ ಎಲ್ಲಾ ವಿಧವಾದ ಬೆದರಿಕೆಯನ್ನೂ ತಪ್ಪಿಸಿ, ಶಾಂತಿಯನ್ನು ಕೊಟ್ಟು ಯಾವುದನ್ನಾದರೂ ಚೆನ್ನಾಗಿ ತಿಳಿಯುವುದಕ್ಕೆ ಅನುಕೂಲ ಮಾಡುವುದು; ಮನಸ್ಸ್ವಭಾವವೂ ಉತ್ತಮವಾಗುವುದು; ಆರೋಗ್ಯವೂ ಉತ್ತಮವಾಗುವುದು. ಮೊದಲು ತೋರುವ ಚಿಹ್ನೆಗಳಲ್ಲಿ ಆರೋಗ್ಯವೊಂದು, ಸುಸ್ವರವೊಂದು. ಕಂಠದಲ್ಲಿರುವ ಅಪಸ್ವರಗಳೆಲ್ಲ ಮಾಯವಾಗುವುವು. ಇನ್ನೂ ಎಷ್ಟೋ ಪ್ರಯೋಜನಗಳಾಗುವುವು. ಆದರೆ ಇವೆರಡೂ ಮೊದಲು ತೋರುವುವು. ಬಿಡದೆ ಅಭ್ಯಾಸ ಮಾಡುವವರಿಗೆ ಇನ್ನೂ ಕೆಲವು ಚಿಹ್ನೆಗಳು ತೋರುವುವು. ಕೆಲವು ಸಾರಿ ದೂರದಲ್ಲಿ ಅನೇಕ ಗಂಟೆಗಳನ್ನು ಒಂದೇ ಕಾಲಕ್ಕೆ ಬಾರಿಸಿದಂತೆ ಏಕರೂಪವಾದ ನಾದವು ಕೇಳಬರುವುದು. ಕೆಲವು ಸಾರಿ ಸಣ್ಣ ತೇಜೋ ಬಿಂದುಗಳು ಹಾರಾಡುತ್ತ ದೊಡ್ಡ ದೊಡ್ಡದಾಗಿ ತೋರುವುವು. ಈ ಕುರುಹುಗಳು ತೋರಿದರೆ ಅಭ್ಯಾಸವು ಚೆನ್ನಾಗಿ ನಡೆದಿದೆಯೆಂದು ತಿಳಿದುಕೊಳ್ಳಬೇಕು.

ಯಾರು ಯೋಗಿಗಳಾಗಬೇಕೆಂದು ಬಲವಾಗಿ ಅಭ್ಯಾಸಮಾಡುವವರೊ ಅವರಿಗೆ ಮೊದಮೊದಲು ಆಹಾರ ವಿಷಯದಲ್ಲಿ ಗಮನವಿರಬೇಕು. ಆದರೆ ಯಾರು ಸ್ವಲ್ಪ ಮಟ್ಟಿಗೆ ಸಾಮಾನ್ಯವಾಗಿ ಅಭ್ಯಾಸ ಮಾಡಬೇಕೆಂದಿರುವರೊ ಅವರು ಅತಿಯಾಗಿ ಭೋಜನ ಮಾಡದೆ ಇದ್ದರಾಯಿತು. ಅವರು ಏನನ್ನಾದರೂ ತಿನ್ನಬಹುದು. ಯಾರು ಬೇಗ ಬೇಗ ಅಭ್ಯಾಸ ಮಾಡಬೇಕೆಂದು ಬಲವಾದ ಪ್ರಯತ್ನ ಮಾಡುವರೊ ಅವರಿಗೆ ಆಹಾರನಿಯಮವು ಬಹಳ ಅವಶ್ಯ. ಇಂಥವರು ಕೆಲವು ತಿಂಗಳು ಬರೀ ಹಾಲು, ಧಾನ್ಯ ಇವೆರಡನ್ನೇ ಉಪಯೋಗಿಸುವುದು ಒಳ್ಳೆಯದು. ಶರೀರ ಪ್ರಕೃತಿಯು ಬರುತ ಬರುತ ಸೂಕ್ಷ್ಮವಾಗುವುದರಿಂದ ಮೊದಮೊದಲು ಆಹಾರದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಪ್ರಕೃತಿಯು ತಪ್ಪುತ್ತದೆ. ಒಂದು ತುತ್ತು ಅನ್ನ ಹೆಚ್ಚಾದರೂ ಕಡಿಮೆಯಾದರೂ ಶರೀರಕ್ಕೆ ತೊಂದರೆಯಾಗುವುದು. ಸಂಪೂರ್ಣವಾಗಿ ಶರೀರವು ಸ್ವಾಧೀನಕ್ಕೆ ಬರುವವರೆಗೆ ಹೀಗಿರಬೇಕು. ಆಮೇಲೆ ಬೇಕಾದುದನ್ನು ತಿನ್ನಬಹುದು. ಮನಸ್ಸನ್ನು ಏಕಾಗ್ರಮಾಡುವುದಕ್ಕೆ ಪ್ರಾರಂಭಿಸಿದರೆ ಆಗ ಒಂದು ಗುಂಡು ಸೂಜಿ ಬಿದ್ದರೂ ಮೆದುಳಿನಲ್ಲಿ ಸಿಡಿಲು ಬಡಿದಂತಾಗುವುದು. ಇಂದ್ರಿಯುಗಳು ಸೂಕ್ಷ್ಮವಾಗುವುದರಿಂದ ಅರಿವೂ ಸೂಕ್ಷ್ಮವಾಗುವುದು. ಈ ಸ್ಥಿತಿಗಳನ್ನೆಲ್ಲ ದಾಟಿ ಹೋಗಬೇಕಾಗಿರುವುದು. ಯಾರು ಬಿಡದೆ ಪ್ರಯತ್ನ ಮಾಡುವರೊ ಅವರಿಗೆ ಸಾಧ್ಯವಾಗುವುದು.

ವಾದವನ್ನೂ ಮನಸ್ಸನ್ನು ವಿಕ್ಷೇಪಗೊಳಿಸುವ ಮಿಕ್ಕ ನಡತೆಗಳನ್ನೂ ಬಿಟ್ಟುಬಿಡಬೇಕು. ಬರೀ ಒಣ ಚರ್ಚೆಯಲ್ಲಿ ಏನಿರುವುದು? ಇದರಿಂದ ಸುಮ್ಮನೆ ಮನಸ್ಸಿನ ಸಮತೋಲವು ತಪ್ಪಿ ಚಾಂಚಲ್ಯಕ್ಕೆ ಕಾರಣವಾಗುವುದು. ಸೂಕ್ಷ್ಮ ವಿಚಾರಗಳನ್ನು ಅನುಭವಕ್ಕೆ ತಂದುಕೊಳ್ಳಬೇಕು. ಇದು ಮಾತನಾಡುವುದರಿಂದ ಆಗುವುದೆ? ಆದುದರಿಂದ ಒಣಮಾತನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕು. ಅನುಭವಿಗಳಾದವರು ಬರೆದಿರುವ ಗ್ರಂಥಗಳನ್ನು ಮಾತ್ರವೆ ಓದುತ್ತಿರಬೇಕು.

ಮುತ್ತಿನ ಚಿಪ್ಪಿನ ಮೀನಿನಂತೆ ಇರಬೇಕು. ಸ್ವಾತಿ ನಕ್ಷತ್ರದಲ್ಲಿ ಮಳೆ ಬರುವಾಗ ಮುತ್ತಿನ ಚಿಪ್ಪಿನಲ್ಲಿ ಮಳೆಹನಿ ಬಿದ್ದರೆ ಮುತ್ತಾಗುವುದೆಂದು ಇಂಡಿಯಾದಲ್ಲಿ ಒಂದು ವಿಚಿತ್ರವಾದ ಐತಿಹ್ಯವಿರುವುದು. ಚಿಪ್ಪಿನ ಮೀನುಗಳಿಗೆ ಇದು ಗೊತ್ತಿರುವುದರಿಂದ ಸ್ವಾತಿ ಹುಟ್ಟುತ್ತಲೆ ಮೇಲಕ್ಕೆ ಬಂದು ಆ ಅಮೋಘವಾದ ಮಳೇ ಹನಿಯು ಬೀಳುವ ತನಕ ಕಾದುಕೊಂಡಿರುತ್ತವೆ. ಒಂದು ಹನಿ ಬಿತ್ತೊ ಇಲ್ಲವೊ, ಕೂಡಲೆ ಮೀನುಗಳು ತಮ್ಮ ಚಿಪ್ಪನ್ನು ಮುಚ್ಚಿಕೊಂಡು ದುಡುಮ್ಮನೆ ಮುಳುಗಿ ಸಮುದ್ರದ ತಳಕ್ಕೆ ಹೋಗಿ ನಿಧಾನವಾಗಿ ಆ ಹನಿಯಿಂದ ಒಂದು ಮುತ್ತನ್ನು ಸಿದ್ಧ ಮಾಡುವುವು. ನಾವು ಈ ಮೀನುಗಳಂತೆ ಇರಬೇಕು. ಮೊದಲು ಶ್ರವಣ ಮಾಡಬೇಕು. ಆಮೇಲೆ ಕೇಳಿದುದನ್ನು ಮನನ ಮಾಡಿ ತಿಳಿದುಕೊಳ್ಳಬೇಕು. ಆಮೇಲೆ ಮನಸ್ಸನ್ನು ಚಂಚಲಮಾಡುವುದರ ಸಂಗತಿಯನ್ನು ಸಂಪೂರ್ಣವಾಗಿ ಬಿಟ್ಟು ಹೊರಗೆ ಆಗುವ ಯಾವುದಕ್ಕೂ ನಿಮ್ಮ ಮನಸ್ಸನ್ನು ಕೊಡದೆ ನಿಮ್ಮಲ್ಲಿರುವ ತತ್ತ್ವವನ್ನು ವೃದ್ಧಿಗೊಳಿಸುವುದಕ್ಕೆ ನಿಮ್ಮ ಪ್ರಯತ್ನವನ್ನು ಹಾಕಬೇಕು. ಯಾವುದಾದರೂ ಒಂದು ಸಂಗತಿಯು ಹೊಸದಾಗಿ ಕಂಡರೆ ಅಷ್ಟು ಮಾತ್ರಕ್ಕೆ ಅದನ್ನು ಪರಿಗ್ರಹಿಸಿ, ಅದಕ್ಕಿಂತ ಹೊಸದಾಗಿರುವ ಇನ್ನೊಂದನ್ನು ಕಂಡ ಕೂಡಲೆ ಮೊದಲಿನದನ್ನು ಬಿಟ್ಟುಬಿಟ್ಟರೆ ನಮ್ಮ ಶಕ್ತಿಗಳು ವ್ಯರ್ಥವಾಗಿ ಹಾಳಾಗುವುವು. ಯಾವುದಾದರೊಂದು ವಿಷಯವನ್ನು ಹಿಡಿದು ಬಿಡದೆ ಪ್ರಯತ್ನ ಮಾಡಿ ಅದನ್ನು ಕೊನೆಗಾಣಿಸ ಬೇಕು. ಕೊನೆಗಾಣುವುದಕ್ಕೆ ಮುಂಚೆ ಅದನ್ನು ಬಿಡಬಾರದು. ಯಾವನು ಒಂದು ವಿಷಯವನ್ನು ತೆಗೆದುಕೊಂಡು ಅದರಲ್ಲಿಯೆ ಮಗ್ನನಾಗುವನೊ ಅವನಿಗೆ ಏನಾದರೂ ದಾರಿ ಸಿಕ್ಕುವುದು. ಇಲ್ಲೊಂದು ಚೂರು ಅಲ್ಲೊಂದು ಚೂರು ಹೀಗೆ ಮಾಡುವುದರಿಂದ ಯಾವುದೂ ಸಾಧಿಸುವುದಿಲ್ಲ. ಇಂಥವರು ಕೆಲವು ದಿನ ಬಹು ಗದ್ದಲ ಮಾಡಿ ತೆಪ್ಪಗಾಗುವರು. ಇವರು ಯಾವಾಗಲೂ ಸೃಷ್ಟಿಗೆ ದಾಸರಾಗಿರುವರು. ಅವರಿಂದ ಇಂದ್ರಿಯಗಳನ್ನು ಎಂದಿಗೂ ಮೀರುವುದಕ್ಕಾಗುವುದಿಲ್ಲ.

ಯೋಗಿಗಳಾಗಬೇಕೆಂಬುವರು ಈ ಹರಕು ಕೆಲಸಗಳನ್ನು ಬಿಟ್ಟು ಬಿಡಬೇಕು. ಒಂದು ವಿಚಾರವನ್ನು ತೆಗೆದುಕೊಂಡು ಅದೊಂದನ್ನೇ ತನ್ನ ಬದುಕು ಮಾಡಿಕೊಳ್ಳಬೇಕು. ಅದೇ ತನ್ನ ಜೀವನವಾಗಬೇಕು. ಅದರ ಕನಸನ್ನೇ ಕಾಣುತ್ತಿರಬೇಕು. ಅದೇ ತನ್ನ ಜೀವನವಾಗಬೇಕು. ಮೈಯಲ್ಲಿ ಮೆದುಳು, ಮಾಂಸಖಂಡ, ನರಗಳು ಮೊದಲಾದ ಅವಯವಗಳಲ್ಲೆಲ್ಲ ಇದೊಂದೆ ಅಭಿಪ್ರಾಯವೆ ತುಂಬಿತುಳುಕುತ್ತಿರಬೇಕು. ಮಿಕ್ಕ ವಿಚಾರಗಳನ್ನೆಲ್ಲ ಸುಮ್ಮನೆ ಬಿಟ್ಟುಬಿಡಬೇಕು. ಕಾರ್ಯಸಾಧನವಾಗುವುದಕ್ಕೆ ಇದೇ ಮಾರ್ಗ. ಮಹಾ ಮಹಾ ಜ್ಞಾನಿಗಳು ಹುಟ್ಟಿರುವುದು ಇದೇ ರೀತಿಯಲ್ಲಿ. ಇತರರು ಸುಮ್ಮನೆ ಮಾತನಾಡುವ ಬೊಂಬೆಗಳು. ನಾವೂ ಧನ್ಯರಾಗಿ ಇತರರನ್ನೂ

ಧನ್ಯರಾಗಿ ಮಾಡಬೇಕೆಂದು ನಮ್ಮ ಮನಸ್ಸಿನಲ್ಲಿ ನಿಜವಾಗಿದ್ದರೆ ಹೆಚ್ಚು ಕಷ್ಟಪಡಬೇಕು. ಎಲ್ಲಕ್ಕಿಂತ ಮೊದಲು ಮನಸ್ಸಿಗೆ ಕ್ಷೋಭೆಯನ್ನುಂಟು ಮಾಡದೆ ಇರಬೇಕು. ಯಾರ ಸಂಗದಿಂದ ಮನಸ್ಸು ಚಂಚಲವಾಗುವುದೊ ಅವರೊಡನೆ ಸೇರದೆ ಇರಬೇಕು. ಕೆಲವು ಜನರೂ, ಕೆಲವು ಸ್ಥಳಗಳೂ, ಕೆಲವು ಆಹಾರಗಳೂ ನಿಮಗೆ ಸರಿ ಬೀಳುವುದಿಲ್ಲವೆಂಬುದು ನಿಮಗೆಲ್ಲರಿಗೂ ಗೊತ್ತೇ ಇದೆ. ಅವುಗಳನ್ನು ಬಿಟ್ಟುಬಿಡಬೇಕು. ಯಾರು ಉತ್ತಮ ಸ್ಥಿತಿಯನ್ನು ಪಡೆಯಬೇಕೆಂದು ಬಯಸುತ್ತಾರೊ ಅವರು ಒಳ್ಳೆಯದಾಗಲಿ ಕೆಟ್ಟದ್ದಾಗಲಿ ಯಾವ ಸಂಗವನ್ನೂ ಮಾಡಲೇಬಾರದು. ಬಲವಾಗಿ ಸಾಧನ ಮಾಡಿರಿ. ಇದರಿಂದ ಸತ್ತರೇನು, ಬದುಕಿದರೇನು? ಏನೊಂದನ್ನೂ ವಿಚಾರ ಮಾಡದೆ ಅದರಲ್ಲಿಯೆ ಮಗ್ನರಾಗಿ ಕೆಲಸ ಮಾಡಿರಿ. ನೀವು ಧೀರರಾದರೆ ಆರು ತಿಂಗಳಲ್ಲಿಯೇ ಪೂರ್ಣ ಯೋಗಿಗಳಾಗಬಹುದು. ಆದರೆ ಇದರಲ್ಲಿ ಒಂದು ಚೂರನ್ನೂ ಇದರ ಜೊತೆಗೆ ಇನ್ನೂ ಬೇಕಾದುದನ್ನೆಲ್ಲ ಇಟ್ಟುಕೊಳ್ಳುವವರು ಸ್ವಲ್ಪವೂ ಮುಂದರಿಯರು. ಸುಮ್ಮನೆ ಗ್ರಂಥವನ್ನು ಹೇಳಿಸಿಕೊಳ್ಳುವುದರಿಂದ ಏನೂ ಅಷ್ಟು ಪ್ರಯೋಜನವಿಲ್ಲ. ಯಾರು ತಮೋಮಯರಾಗಿಯೂ, ಮೂಢರಾಗಿಯೂ, ಬುದ್ಧಿಹೀನರಾಗಿಯೂ, ಯಾವುದೊಂದು ವಿಷಯದಲ್ಲಿಯೂ ಮನಸ್ಸನ್ನು ನಿಲ್ಲಿಸದೆ ಇರುವವರಾಗಿಯೂ, ಏನಾದರೊಂದು ವಿನೋದವನ್ನು ಬಯಸುತ್ತ ಇರುವವರಾಗಿಯೂ, ಬೇಡುವವರಾಗಿಯೂ ಇರುವರೊ ಅವರಿಗೆ ಧರ್ಮವೂ ತತ್ತ್ವಶಾಸ್ತ್ರವೂ ಕೇವಲ ವಿನೋದ ವಿಷಯಗಳಾಗಿರುತ್ತವೆ. ಇವರೆ ಕೆಲಸಗಳ್ಳರು. ಇವರು ಏನಾದರೂ ಕೇಳಿದರೆ ಬಹು ಚೆನ್ನಾಗಿರುವದೆಂದುಕೊಳ್ಳುತ್ತ ಮನೆಗೆ ಹೋಗಿ ಅದರ ವಿಚಾರವನ್ನೆ ಮರೆತುಬಿಡುವರು. ಕಾರ್ಯಸಾಧನೆಯಾಗಬೇಕಾದರೆ "ಸಮುದ್ರವನ್ನಾದರೂ ಹೀರಿಬಿಡುವೆನು; ನನ್ನ ಇಚ್ಛಾ ಮಾತ್ರದಿಂದ ಪರ್ವತವನ್ನಾದರೂ ಪುಡಿ ಪುಡಿ ಮಾಡುವೆನು" ಎನ್ನಿಸುವಂಥ ಭಾರಿಯ ಸ್ಥಿರಪ್ರಯತ್ನದ ಶಕ್ತಿಯನ್ನೂ ದೃಢ ಸಂಕಲ್ಪವನ್ನೂ ಸಂಪಾದಿಸಿಕೊಂಡರೆ ಪುರುಷಾರ್ಥವು ಕೈಸೇರುವುದು.

# 7ನೇ ಅಧ್ಯಾಯ

# ಧ್ಯಾನವೂ ಸಮಾಧಿಯೂ

ಇದುವರೆಗೆ ರಾಜಯೋಗದ ಅಂಗಗಳನ್ನು ಸಂಕ್ಷೇಪವಾಗಿ ತಿಳಿಸಿದ್ದಾಯಿತು. ಮನಸ್ಸನ್ನು ಏಕಾಗ್ರ ಮಾಡುವುದಕ್ಕೆ ಬೇಕಾದ ಅಂತರಂಗ ಸಾಧನಗಳನ್ನು ಮಾತ್ರ ತಿಳಿಸಿಲ್ಲ. ಮನಸ್ಸಿನ ಸಮಾಧಿಯೆ ರಾಜಯೋಗದ ಫಲವು. ಮನುಷ್ಯರಾದ ನಮ್ಮ ಯುಕ್ತಿಜನ್ಯವಾದ ಜ್ಞಾನವೆಲ್ಲ ಅನುಭವ ವೇದ್ಯವಾಗಿರುವುದು. ಈ ಮೇಜೂ ನಿಮ್ಮ ಇರುವಿಕೆಯೂ ನನ್ನ ಅನುಭವದಲ್ಲಿರುವುದರಿಂದ ನೀವೂ ಮೇಜೂ ಇಲ್ಲಿರುವರೆಂದು ನನಗೆ ಗೊತ್ತಾಗುವುದು. ಇದಂತಿರಲಿ. ನನ್ನಲ್ಲಿರುವ ಎಷ್ಟೋ ಅಂಶಗಳು ನನ್ನ ಅನುಭವದಲ್ಲಿರುವುದಿಲ್ಲ. ಶರೀರದಲ್ಲಿರುವ ಬೇರೆ ಬೇರೆ ಅವಯವಗಳೂ, ಮೆದುಳಿನ ಬೇರೆ ಬೇರೆ ಭಾಗಗಳೂ ಯಾರಿಗೂ ಅನುಭವ ಗೋಚರವಾಗುವುದಿಲ್ಲ. ನಾನು ಆಹಾರವನ್ನು ತಿನ್ನುವಾಗ ತಿನ್ನುವುದು ನನ್ನ ಸ್ವಭಾವದಲ್ಲಿರುವುದು. ಅದನ್ನು ಅರಗಿಸಿಕೊಳ್ಳುವುದು ಸ್ವಾನುಭವಕ್ಕೆ ಬರುವುದಿಲ್ಲ. ಆಹಾರವು ಸ್ವಾನುಭವವಿಲ್ಲದೆಯೆ ರಕ್ತವಾಗುವುದು. ಆ ರಕ್ತದಿಂದ ಶರೀರದ ಅಂಗಾಗಗಳೆಲ್ಲ ಬಲಪಡುವಾಗಲೂ ಸ್ವಾನುಭವವಾಗುವುದಿಲ್ಲ. ಆದರೂ ಈ ಕಾರ್ಯವೆಲ್ಲ ನನ್ನಿಂದಲೆ ಆಗುತ್ತಿರುವುದು. ಇದೊಂದೇ ಶರೀರದಲ್ಲಿ ಇಪ್ಪತ್ತು ಜನರಿರಲಾರರು. ಈ ಕಾರ್ಯವನ್ನು ಮಾಡುವವನು ನಾನು ಹೊರತು ಮತ್ತೊಬ್ಬರಲ್ಲವೆಂದು ನನಗೆ ಹೇಗೆ ಗೊತ್ತು? ಆಹಾರವನ್ನು ತಿನ್ನುವುದೂ ಜೀರ್ಣಿಸುವುದೂ ಮಾತ್ರ ನನ್ನ ಕೆಲಸ. ಶರೀರಕ್ಕೆ ಆ ಆಹಾರದಿಂದ ಬಲವನ್ನುಂಟು ಮಾಡುವವರು ಬೇರೆ ಒಬ್ಬರಿದ್ದಾರೆಂದು ಯಾರಾದರೂ ಶಂಕಿಸಬಹುದು, ಆದರೆ ಇದು ಸರಿಯಲ್ಲ. ಏಕೆಂದರೆ ಈಗ ನಮಗೆ ಅನುಭವಕ್ಕೆ ಬರದಂತೆ ನಡೆಯುವ ಕಾರ್ಯಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಪ್ರತಿಯೊಂದು ಕ್ರಿಯೆಯನ್ನೂ ನಮ್ಮ ಅನುಭವಕ್ಕೆ ಗೋಚರವಾಗಿ ನಡೆಯುವಂತೆ ಮಾಡಿಕೊಳ್ಳಬಹುದೆಂದು ಸಿದ್ಧ ಮಾಡುವುದಕ್ಕಾಗುತ್ತದೆ. ಈಗ ನೋಡುವುದಕ್ಕೆ ಹೃದಯವು ನಮ್ಮ ಅಧೀನತೆಯನ್ನು ಮೀರಿ ಬಡಿದುಕೊಳ್ಳುತ್ತಿರುವುದು. ನಮ್ಮಲ್ಲಿ ಯಾರಿಗೂ ಹೃದಯವು ಸ್ವಾಧೀನದಲ್ಲಿರುವುದಿಲ್ಲ. ಅದು ತಾನೇ ತಾನಾಗಿ ಕೆಲಸಮಾಡುತ್ತಿರುವುದು. ಆದರೆ ಸಾಧನೆ ಮಾಡಿದರೆ ಇಂಥ ಹೃದಯವನ್ನು ಕೂಡ ವಶಮಾಡಿಕೊಳ್ಳುವುದಕ್ಕಾಗುತ್ತದೆ. ಆಗ ಅದು ನಮ್ಮ ಇಷ್ಟದಂತೆ ಮೆಲ್ಲಗೆ ಬೇಕಾದರೆ ಮೆಲ್ಲಗೆ, ಗಟ್ಟಿಯಾಗಿ ಬೇಕಾದರೆ ಗಟ್ಟಿಯಾಗಿ ಬಡಿದುಕೊಳ್ಳುವುದು; ಬೇಕಾದರೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಬಡಿದುಕೊಳ್ಳದಂತೆಯೆ

ಮಾಡಬಹುದು. ಶರೀರದಲ್ಲಿರುವ ಪ್ರತಿಯೊಂದು ಅಂಗವನ್ನೂ ಈ ರೀತಿ ವಶಮಾಡಿಕೊಳ್ಳುವುದಕ್ಕಾಗುತ್ತದೆಯೆನ್ನಬಹುದು. ಇದರಿಂದ ಏನು ಸಿದ್ಧವಾಗುತ್ತದೆ? ಯಾವ ಕಾರ್ಯಗಳು ಅನುಭವಕ್ಕೆ ತಿಳಿಯುವಂತೆ ಆಗುವುದಿಲ್ಲವೊ ಅವುಗಳನ್ನು ನಾವೇ ಮಾಡುತ್ತಿದ್ದೇವೆ. ಆದರೆ ಅದು ನಮಗೆ ಗೊತ್ತಾಗುವುದಿಲ್ಲ. ಎಂದ ಮೇಲೆ ಮನುಷ್ಯನ ಮನಸ್ಸು ಎರಡು ಅವಸ್ಥೆಗಳಲ್ಲಿ ಕೆಲಸ ಮಾಡುತ್ತದೆ ಎಂದಂದಾಯಿತು. ಮೊದಲನೆಯದು ಸಂವೇದನಾವಸ್ಥೆ. ಇದರಲ್ಲಿ ಯಾವ ಕೆಲಸವನ್ನು ಮಾಡುತ್ತಿದ್ದರೂ ಅಹಂಕಾರಾಭಿಸಂಧಿಯಿಂದ [1] ಕೂಡಿಕೊಂಡೇ ಇರುವುದು. ಎರಡನೆಯದು ಅಸಂವೇದನಾವಸ್ಥೆ. ಇದರಲ್ಲಿ ನಡೆಯುವ ಯಾವ ಕೆಲಸದಲ್ಲಿಯೂ ಅಹಂಕಾರದ ಅಭಿಸಂಧಿ ಇರುವುದಿಲ್ಲ. ಅಹಂಕಾರಬುದ್ಧಿಯಿಂದ ಕೂಡದೆ ಮನಸ್ಸಿನಿಂದ ನಡೆಯುವ ಕಾರ್ಯವೆ ಅರಿವಿಲ್ಲದ ಕಾರ್ಯವು. ಯಾವ ಕಾರ್ಯವು ಅಹಂಕಾರ ಬುದ್ಧಿಯಿಂದ ಕೂಡಿರುವುದೊ ಅದು ತಿಳಿದು ಮಾಡುವ ಕೆಲಸ. ಪಶು ಪ್ರಾಣಿಗಳಲ್ಲಿರುವ ಈ ಅರಿವಿಲ್ಲದ ಕಾರ್ಯವನ್ನು ಸಹಜ ಬುದ್ಧಿಯೆಂಬರು. ಉತ್ತಮ ಪ್ರಾಣಿಗಳಲ್ಲಿಯೂ, ಪ್ರಾಣಿಗಳಲ್ಲೆಲ್ಲ ಶ್ರೇಷ್ಠವಾದ ಮನುಷ್ಯನಲ್ಲಿಯೂ ಅರಿವಿನ ಕಾರ್ಯವು ಕಂಡುಬರುವುದು. ಆದರೆ ಇಷ್ಟೇ ಅಲ್ಲ. ಮನಸ್ಸು ಕೆಲಸಮಾಡುವುದಕ್ಕೆ ಇನ್ನೊಂದು ಹೆಚ್ಚಿನ ಅವಸ್ಥೆ ಇರುವುದು. ಸಂವೇದನಾವಸ್ಥೆಯನ್ನು ಮೀರುವುದಕ್ಕಾಗುತ್ತದೆ. ಅಸಂವೇದನಾವಸ್ಥೆಯು ಸಂವೇದನಾವಸ್ಥೆಗಿಂತ ಕೀಳಾಗಿರುವಂತೆ ಸಂವೇದನಾವಸ್ಥೆಗೆ ಮೇಲೆ ಇರುವ ಅವಸ್ಥೆಯೊಂದುಂಟು. ಇದರಲ್ಲಿಯೂ ಅಹಂಕಾರಾಭಿಸಂಧಿಯಿರುವುದಿಲ್ಲ. ಅಹಂಕಾರವು ಮಧ್ಯಮಾವಸ್ಥೆಯಲ್ಲಿ ಮಾತ್ರ ಇರುತ್ತದೆ. ಈ ಗೀಟಿನ ಕೆಳಗೆ ಹೋದರೂ ಸರಿ; ಮೇಲೆ ಹೋದರೂ ಸರಿ; ನಾನು ಎಂಬ ಬುದ್ಧಿಯೇ ಇರುವುದಿಲ್ಲ. ಆದರೂ ಮನಸ್ಸು ಕೆಲಸ ಮಾಡುತ್ತಲೆ ಇರುವುದು. ನಾನು ಎಂಬ ಜ್ಞಪ್ತಿಯನ್ನುಳ್ಳ ಈ ಗೀಟನ್ನು ಮೀರಿದರೆ ಅದಕ್ಕೆ ಸಮಾಧಿ (ಎಂದರೆ ಸಂವೇದನೆಗೆ ಮೀರಿದ ಅವಸ್ಥೆ) ಎಂದು ಕರೆಯುತ್ತಾರೆ. ಇಲ್ಲಿ ಸಮಾಧಿಗೆ ಹೋದವನು ಸಂವೇದನಾವಸ್ಥೆಯಿಂದ ಕೆಳಕ್ಕೆ ಹೋಗಿಲ್ಲವೆಂದೂ, ಅವನು ಅಧಮ ಸ್ಥಿತಿಗೆ ಹೋಗದೆ ಉತ್ತಮಸ್ಥಿತಿಗೆ ಹೋಗಿರುತ್ತಾನೆಂದೂ ಗೊತ್ತು ಮಾಡಿಕೊಳ್ಳುವುದು ಹೇಗೆ? ಅಧಮಾವಸ್ಥೆ, ಉತ್ತಮಾವಸ್ಥೆ ಈ ಎರಡರಲ್ಲಿಯೂ ಅಹಂಕಾರವಿರುವುದಿಲ್ಲವಲ್ಲ? ಎಂದರೆ ಇದನ್ನು ಕೆಲಸದ ಫಲದಿಂದಲೆ ತಿಳಿಯಬೇಕು. ಯಾವುದು ಕೆಳಗೆ, ಯಾವುದು ಮೇಲೆ ಎಂಬುದನ್ನು ಕೆಲಸದ ಫಲಿತಾಂಶದಿಂದ ಗೊತ್ತು ಮಾಡಬೇಕು. ಒಬ್ಬ ಮನುಷ್ಯನಿಗೆ ಗಾಢನಿದ್ರೆ ಬಂದರೆ ಅವನು ಸಂವೇದನೆಗಿಂತ ಕೆಳಗಿನ ಅವಸ್ಥೆಗೆ ಹೋದ ಹಾಗಾಯಿತು. ಈ ಅವಸ್ಥೆಯಲ್ಲಿರುವಾಗಲೂ ಅವನ ಶರೀರದಲ್ಲಿ ಕಾರ್ಯಗಳು ನಡೆಯುತ್ತಲೆ ಇರುವುವು. ಇವನು ಅಹಂಕಾರಬುದ್ಧಿಯಿಲ್ಲದೆಯೆ ಉಸಿರಾಡುತ್ತಿರುವನು; ಕೈಕಾಲುಗಳನ್ನು ಕೂಡ ಆಡಿಸುತ್ತಿರುವನು. ಅವನಿಗೆ ಎಚ್ಚರವೇ ಇರುವುದಿಲ್ಲ. ಅವನು ನಿದ್ರೆಯಿಂದ ಎಚ್ಚತ್ತರೆ ನಿದ್ರೆಯನ್ನು ಹೊಂದುವ ಮೊದಲು ಹೇಗೆ ಇದ್ದನೊ ಹಾಗೆಯೆ ಇರುವನು. ನಿದ್ರೆ ಮಾಡುವುದಕ್ಕೆ ಮೊದಲು ಅವನಿಗೆ ಇದ್ದ ಜ್ಞಾನ ಸಮಷ್ಟಿಯು ಒಂದೇ ಸಮವಾಗಿರುವುದು; ಎಳ್ಳಷ್ಟೂ ಹೆಚ್ಚಾಗಿರುವುದಿಲ್ಲ; ಯಾವ ಹೆಚ್ಚಿನ ಜ್ಞಾನವೂ ಉಂಟಾಗುವುದಿಲ್ಲ. ಆದರೆ ಸಮಾಧಿಯನ್ನು ಪಡೆದವನು ಮೊದಲು ಅಜ್ಞನಾಗಿದ್ದರೆ ಎಚ್ಚತ್ತಿರುವಾಗ ಸುಜ್ಞನಾಗಿರುವನು.

1. ನಾನು ಮಾಡುತ್ತಿದ್ದೇನೆಂಬ ಬುದ್ಧಿ

ಈಗ ಇವೆರಡಕ್ಕೂ ಏನು ಭೇದವಿದ್ದಂತಾಯಿತು? ಒಂದು ಸ್ಥಿತಿಯಲ್ಲಿ ಪ್ರವೇಶ ಮಾಡುವುದಕ್ಕೆ ಮುಂಚೆ ಇದ್ದಂತೆಯೆ ಎಚ್ಚತ್ತ ಮೇಲೆಯೂ ಇರುತ್ತಾನೆ; ಇನ್ನೊಂದರಲ್ಲಿ ಎಚ್ಚತ್ತ ಮೇಲೆ ಜ್ಞಾನಿಯಾಗಿ, ಸರ್ವಜ್ಞನಾಗಿ, ತತ್ತ್ವದರ್ಶಿಯಾಗಿ, ಮಹಾತ್ಮನಾಗಿ ತೋರುವನು. ಅವನ ಸ್ವಭಾವವೇ ಬೇರೆ ಆಗಿ, ಅವನ ಜೀವಿತವೇ ಬೇರೆ ಆಗಿ, ತೇಜೋಮಯವಾಗಿಬಿಡುವುದು. ಇವೆರಡೂ ಎರಡರ ಕಾರ್ಯಗಳು. ಹೀಗೆ ಕಾರ್ಯಗಳು ಬೇರೆ ಬೇರೆ ಆಗಿರುವುದರಿಂದ ಇವುಗಳ ಕಾರಣಗಳೂ ಬೇರೆ ಆಗಿರಬೇಕು. ಸಮಾಧಿಯಿಂದ ಎಚ್ಚತ್ತವನು ತರುವ ಜ್ಞಾನವು ಅಸಂವೇದನಾವಸ್ಥೆಯಿಂದ ಸಿಕ್ಕುವ ಜ್ಞಾನಕ್ಕಿಂತ ಹೆಚ್ಚಾಗಿರುವುದರಿಂದಲೂ, ಸಂವೇದನಾ ಸ್ಥಿತಿಯಲ್ಲಿ ತರ್ಕವನ್ನುಪಯೋಗಿಸಿ ಪಡೆಯುವ ಜ್ಞಾನಕ್ಕಿಂತಲೂ ಹೆಚ್ಚಾಗಿರುವುದರಿಂದಲೂ ಇದು ಸಂವೇದನಾ ಸ್ಥಿತಿಗಿಂತ ಮೇಲಿನದಾಗಿರಬೇಕಾಯಿತು. ಆದುದರಿಂದ ಸಮಾಧಿಯನ್ನು ಉನ್ಮನೀ ಎನ್ನುವರು.

ಇದೇ ಸಮಾಧಿಯೆಂಬುದರ ಸಂಕ್ಷೇಪಾಭಿಪ್ರಾಯವು. ಇದರ ಉಪಯೋಗವೇನು? ಇಗೊ, ಇದೇ ಉಪಯೋಗ. ತರ್ಕದಿಂದ ತಿಳಿಯುವ ಭಾಗವು, ಎಂದರೆ ಸಂವೇದನಾ ಸ್ಥಿತಿಯಲ್ಲಿ ಮನಸ್ಸಿನ ಕಾರ್ಯಕ್ಕೆ ಸಿಕ್ಕುವ ಭಾಗವು, ಬಹು ಸ್ವಲ್ಪವಾಗಿಯೂ, ಇಷ್ಟೆಂಬ ಮಿತಿಯುಳ್ಳದ್ದಾಗಿಯೂ ಇರುವುದು. ಮನುಷ್ಯನ ವಿಚಾರ ಶಕ್ತಿಯು ಒಂದಾನೊಂದು ಸಣ್ಣ ಪರಿಧಿಯೊಳಗೇ ಸಂಚರಿಸುತ್ತಿರಬೇಕು; ಇದರಿಂದ ಆಚೆಗೆ ಹೋಗುತ್ತಿರುವುದಿಲ್ಲ; ಆಚೆಗೆ ಹೋಗಬೇಕೆಂದು ಮಾಡುವ ಪ್ರಯತ್ನವೆಲ್ಲ ನಿಷ್ಫಲವಾಗುತ್ತಿರುವುದು. ಆದರೂ ಈ ತರ್ಕದ ಪರಿಧಿಯಿಂದಾಚೆಯಲ್ಲಿ ಜನರಿಗೆ ಬಹಳ ಬೇಕಾಗಿರುವ ಅಂಶಗಳೆಲ್ಲ ಇರುತ್ತಿರುವುವು. ನಾಶ ರಹಿತವಾದ ಆತ್ಮವೊಂದಿರುವುದೊ, ಇಲ್ಲವೊ? ದೇವರಿದ್ದಾನೊ, ಇಲ್ಲವೊ? ಈ ಜಗತ್ತಿನ ಕಾರ್ಯವನ್ನು ನಡೆಸುವ ಸರ್ವಜ್ಞ ಬುದ್ಧಿಯೊಂದು ಇರುವುದೊ, ಇಲ್ಲವೊ? ಇಂಥ ಪ್ರಶ್ನೆಗಳೆಲ್ಲ ತರ್ಕದ ವ್ಯಾಪಾರಕ್ಕೆ ಮೀರಿರುವುವು. ಈ ಪ್ರಶ್ನೆಗಳಿಗೆ ಉತ್ತರ ಹೇಳುವುದು ತರ್ಕದಿಂದ ಎಂದಿಗೂ ಆಗುವುದಿಲ್ಲ. ಯುಕ್ತಿಯು ಇದಕ್ಕೆ ಹೇಳುವುದೇನು? "ನಾನು ಅಜ್ಞನು. ಹೌದೊ ಅಲ್ಲವೊ ನನಗೆ ಗೊತ್ತಿಲ್ಲ" ಎನ್ನುತ್ತಿರುವುದು. ಆದರೂ ಈ ವಿಚಾರಗಳು ನಮಗೆ ಬಹಳ ಬೇಕಾಗಿವೆ. ಇವುಗಳಿಗೆ ಸರಿಯಾದ ಉತ್ತರವಿಲ್ಲದಿದ್ದರೆ ಮನುಷ್ಯ ಜನ್ಮವೇ ವ್ಯರ್ಥವಾಗುವುದು. ನಮ್ಮ ನೀತಿ ಸಮಯಗಳೂ ಧರ್ಮಬುದ್ಧಿಯೂ ಮನುಷ್ಯನಲ್ಲಿರುವ ಉತ್ತಮವಾದ ಮಹಾ ಸ್ವಭಾವಗಳು ಯಾವುದುಂಟೊ ಇವುಗಳೆಲ್ಲ ಈ ಪರಿಧಿಯಿಂದಾಚೆಯ ಕಡೆಯಿಂದ ತಿಳಿದ ಉತ್ತರಗಳನ್ನೆ ಆಶ್ರಯಿಸಿಕೊಂಡಿರುವುವು. ಆದುದರಿಂದ ನಮಗೆ ಈ ಪ್ರಶ್ನೆಗಳಿಗೆ ಅತ್ಯಗತ್ಯವಾಗಿ ಉತ್ತರ ಬೇಕಾಗಿದೆ. ನಮ್ಮ ಜೀವಮಾನವು ಮೂರುಗಳಿಗೆಯ ಬಾಳೆಂಬುದು ನಿಜವಾದರೆ, ಈ ಜಗತ್ತು ಯಾವುದೊಂದು ಕಾರಣವಿಲ್ಲದೆ ಪರಮಾಣುಗಳ ಸಂಯೋಗದಿಂದುಂಟಾಗಿರುವುದೇ ನಿಜವಾದರೆ, ನಾನು ಮತ್ತೊಬ್ಬನಿಗೆ ಉಪಕಾರವನ್ನೇಕೆ ಮಾಡಬೇಕು? ಕರುಣ, ನ್ಯಾಯಪರತೆ, ಭೂತದಯೆ ಮೊದಲಾದವುಗಳೇತಕ್ಕೆ ಬೇಕು? ಇದೇ ನಿಜವಾದರೆ ಈ ಲೋಕದಲ್ಲಿ ಜನರು ತಮ್ಮ ತಮ್ಮ ಪಾಡನ್ನು ತಾವು ನೋಡಿಕೊಂಡು ಗಾಳಿ ಬಂದಾಗ ತೂರಿಕೊಳ್ಳುವುದೇ ಉತ್ತಮವಾಗುವುದು. ಮತ್ತಾವ ಆಸೆಯೂ ಇಲ್ಲದಿದ್ದರೆ ನಾವು ನೆರೆಯವನನ್ನು ಪ್ರೀತಿಸುವುದನ್ನು ಬಿಟ್ಟು ಅವನ ತಲೆಯನ್ನೇಕೆ ಕಡಿದುಹಾಕಬಾರದು? ಈ ಲೋಕದಲ್ಲಿ ನಾನೊಬ್ಬನೇ

ಸುಖವಾಗಿರುವುದಕ್ಕೆ ಪ್ರಯತ್ನಪಡುವುದೇ ಒಳ್ಳೆಯದಾಗಿರುವುದಿಲ್ಲವೆ? ಈಗಿನ ಜನರು ನೀತಿಗೆ ಅನುಕೂಲವಾದ ಕಾರಣವೇ ಆಧಾರವೆಂದು ಹೇಳುವುದುಂಟು. ಈ ಆಧಾರವಾವುದೆಂದರೆ:- ಬಹು ಜನಕ್ಕೆ ಆದಷ್ಟು ಹಿತವನ್ನುಂಟು ಮಾಡುವುದೆನ್ನುವರು. ಆದರೆ ಅದನ್ನೇಕೆ ಮಾಡಬೇಕು? ಆದಷ್ಟು ಜನಕ್ಕೆ ಆದಷ್ಟು ಕೆಟ್ಟದನ್ನು ಮಾಡುವುದೇ ನನಗೆ ಅನುಕೂಲವಾಗುವುದಾದರೆ ಹಾಗೇಕೆ ಮಾಡಬಾರದು? ಈ ಪ್ರಶ್ನೆಗೆ ಅನುಕೂಲವಾದಿಗಳು ಏನುತ್ತರವನ್ನು ಕೊಡುತ್ತಾರೆ? ಯಾವುದು ಸರಿ, ಯಾವುದು ತಪ್ಪು ಎಂಬುದು ನಿಮಗೆ ಹೇಗೆ ಗೊತ್ತು? ನನಗೆ ಸುಖವಾಗಿರಬೇಕೆಂದು ಬಲವಾದ ಆಸೆಯಿರುವುದು. ಆ ಆಸೆಯನ್ನು ತೀರಿಸಿಕೊಳ್ಳುತ್ತೇನೆ. ಇದೇ ನನಗೆ ಸರಿಯಾಗಿದೆ. ಉಳಿದ ಯಾವುದನ್ನೂ ನಾನರಿಯೆ. ನನಗಿರುವ ಆಸೆಗಳನ್ನು ನಾನು ಪೂರ್ತಿಮಾಡಿಕೊಳ್ಳುತ್ತೇನೆ. ಇದಕ್ಕೆ ನೀವೇತಕ್ಕೆ ಅಡ್ಡ ಬರುತ್ತೀರಿ? ಮನುಷ್ಯನು ಹೀಗಿರಬೇಕು; ಹಾಗಿರಬೇಕು; ನೀತಿಯಿಂದಿರಬೇಕು; ಆತ್ಮವು ನಾಶರಹಿತವಾದುದು; ದೇವರೊಬ್ಬನಿರುವನು; ನಾವು ಇತರರನ್ನು ಪ್ರೀತಿಸಬೇಕು; ಅವರಲ್ಲಿ ಸಹಾನುಭೂತಿಯಿರಬೇಕು; ಉಪಕಾರ ಮಾಡಬೇಕು; ಇವೆಲ್ಲ ಎಲ್ಲಿಂದ ಬರುವುವು? ಇದೆಲ್ಲ ಹಾಗಿರಲಿ. ಅಸ್ವಾರ್ಥತೆಯೆಂಬುದೆಲ್ಲಿಂದ ಬಂತು? ನೀತಿಯೆಂಬುದೆಲ್ಲ, ಮನುಷ್ಯನ ಕರ್ತವ್ಯವೆಲ್ಲ, ಮನುಷ್ಯನ ವಿಚಾರವೆಲ್ಲ ಈ ಅಸ್ವಾರ್ಥತೆಯನ್ನವಲಂಬಿಸಿಕೊಂಡಿರುತ್ತವೆ. ಆದರೆ ನಾವೇಕೆ ಅಸ್ವಾರ್ಥವುಳ್ಳವರಾಗಿರಬೇಕು? ಅಸ್ವಾರ್ಥವಿರಬೇಕಾದ ಅವಶ್ಯಕತೆಯೆಲ್ಲಿ? ಇರಲೇಬೇಕೆಂಬ ನಿರ್ಬಂಧವೆಲ್ಲಿಯದು? ಹಾಗೆ ಬಲಾತ್ಕರಿಸುವುದಕ್ಕೆ ಯಾರಿಗೆ ಅಧಿಕಾರವುಂಟು? ನೀವು ಅನುಕೂಲವಾದಿಗಳೆಂದೂ, ಹೈತುಕರೆಂದೂ[1], ಅಂದುಕೊಳ್ಳುತ್ತೀರಷ್ಟೆ. ಜನರ ಅನುಕೂಲಕ್ಕೆ ಸರಿಯಾಗಿ ನಾವು ನಡೆಯಬೇಕೆಂಬುದಕ್ಕೆ ಕಾರಣವನ್ನು ಹೇಳದಿದ್ದರೆ ನಿಮ್ಮನ್ನು ಬುದ್ಧಿಹೀನರೆನ್ನಬೇಕಾಗುವುದು. ನಾನು ಏತಕ್ಕೆ ಸ್ವಾರ್ಥಪರನಾಗಿರಕೂಡದೆಂಬುದಕ್ಕೆ ಕಾರಣವನ್ನು ತೋರಿಸಿ; ನೋಡೋಣ. ಅಸ್ವಾರ್ಥಪರರಾಗಿರಬೇಕೆಂದು ಜನರಿಗೆ ಹೇಳುವುದೇನೊ ರಸಕವಿತೆಯ ಮಾತಾಗಿರಬಹುದು. ಆದರೆ ಕವಿತೆಯು ಕಾರಣವಾಗುವುದಿಲ್ಲ. ನಾನೇತಕ್ಕೆ ಅಸ್ವಾರ್ಥಪರನಾಗಿರಬೇಕು? ಏತಕ್ಕೆ ಒಳ್ಳೆಯ ನಡತೆಯುಳ್ಳವನಾಗಿರಬೇಕು? ಆತನು ಹೀಗೆನ್ನುತ್ತಾನೆ; ಈಕೆ ಹೀಗೆನ್ನುತ್ತಾಳೆ; ಎಂದರೆ ನಾನು ಕೇಳುವವನಲ್ಲ. ನಾನು ಅಸ್ವಾರ್ಥಪರನಾಗಿರುವುದರಿಂದ ಅನುಕೂಲವೇನು? ಅನುಕೂಲವೆಂದರೆ ಆದಷ್ಟು ಸುಖವಾಗಿರುವುದೆಂಬ ಅಭಿಪ್ರಾಯವಾದರೆ ನನಗೆ ಸ್ವಾರ್ಥವಾಗಿರುವುದೇ ಅನುಕೂಲ. ಇದಕ್ಕೆ ಉತ್ತರವೇನು? ಅನುಕೂಲವಾದಿಯಿಂದ ಇದಕ್ಕೆ ಉತ್ತರ ಹೇಳುವುದು ಎಂದಿಗೂ ಆಗಲಾರದು. ಇದಕ್ಕೆ ಉತ್ತರವೇನೆಂದರೆ, ಅಸ್ವಾರ್ಥರಾಗಿಯೆ ಇರಬೇಕೆಂದು ಬೋಧಿಸುತ್ತ ಅದರ ಕ್ರಮವನ್ನು ಯಾರು ಜನರಿಗೆ ತೋರಿಸಿಕೊಟ್ಟರೂ ಅವರಿಗೆ ಈ ಅಭಿಪ್ರಾಯವೆಲ್ಲಿಂದ ಬಂತು? ಇದು ಸಹಜ ಬುದ್ಧಿಯಿಂದಂತು ಬರುವುದಿಲ್ಲ. ಪಶುಪ್ರಾಣಿಗಳಿಗೆ ಸಹಜಬುದ್ಧಿ ಮಾತ್ರವೆ ಇರುವುದು. ಆದರೆ ಅವು ಈ ಅಸ್ವಾರ್ಥತೆಯನ್ನರಿಯವು. ಇದು ಯುಕ್ತಿಯಿಂದಲೂ ಬರುವುದಿಲ್ಲ. ಯುಕ್ತಿಗೆ ಇಂಥ ವಿಚಾರಗಳ ಬಗೆಗೆ ಏನೂ ತೋಚುವುದಿಲ್ಲ. ಹಾಗಾದಮೇಲೆ ಇವು ಎಲ್ಲಿಂದ ಬಂದವು?

---

1. ಎಲ್ಲದಕ್ಕೂ ಹೇತುವನ್ನು ಎಂದರೆ ಕಾರಣವನ್ನು ಕೇಳುತ್ತ ಕಾರಣವಿಲ್ಲದಿರುವದನ್ನು ನಂಬದೆ ಇರುವವರನ್ನು ಹೈತುಕರು, ಕಾರಣವಾದಿಗಳು ಎನ್ನುತ್ತಾರೆ.

ಚರಿತ್ರೆಯನ್ನು ಓದುವವರಿಗೆ ಜಗತ್ತಿನಲ್ಲಿ ಅನಾದಿಯಿಂದ ಆಗಿ ಹೋಗಿರುವ ಮತಾಚಾರ್ಯರುಗಳೆಲ್ಲ ಒಂದು ವಿಷಯವನ್ನು ಏಕಕಂಠರಾಗಿ ಹೇಳುತ್ತಿದ್ದರೆಂದು ಗೊತ್ತಾಗುವುದು. ಅವರೆಲ್ಲರೂ ತಾವು ಹೇಳುವ ತತ್ತ್ವಗಳನ್ನು ಬೇರೆ ಯಾವುದೋ ಕಡೆಯಿಂದ ಪಡೆದುಕೊಂಡಿದ್ದೇವೆಂದು ಹೇಳುತ್ತಿದ್ದರು. ಆದರೆ ಅನೇಕರಿಗೆ ನಿಜವಾಗಿ ಅವು ಎಲ್ಲಿಂದ ಬಂದವೆಂಬುದೇ ಗೊತ್ತಾಗಲಿಲ್ಲ. ಒಬ್ಬನನ್ನು ಕೇಳಿದರೆ ರೆಕ್ಕೆಗಳಿಂದ ಕೂಡಿದ ಒಬ್ಬಾನೊಬ್ಬ ದೇವತೆಯು ಮನುಷ್ಯಾಕಾರದಲ್ಲಿ ಬಂದು "ಅಯ್ಯಾ, ಈ ತತ್ತ್ವವನ್ನು ಕೇಳು" ಎಂದು ಹೇಳಿಕೊಟ್ಟನೆಂದು ಹೇಳುತ್ತಿದ್ದನು. ಇನ್ನೊಬ್ಬನು ತೇಜೋಮಯನಾದ ದೇವಪುರುಷನೊಬ್ಬನು ತನಗೆ ಕಾಣಿಸಿಕೊಂಡನೆಂದು ಹೇಳುವನು. ಮಗದೊಬ್ಬನು ತನಗೆ ತನ್ನ ಪೂರ್ವಿಕರಲ್ಲಿ ಯಾರೋ ಒಬ್ಬನು ಕನಸಿನಲ್ಲಿ ಕಾಣಿಸಿಕೊಂಡು ಕೆಲವು ಸಂಗತಿಗಳನ್ನು ಹೇಳಿಕೊಟ್ಟನೆಂದೂ ಇಷ್ಟು ಹೊರತು ನನಗೆ ಇನ್ನೇನೂ ಗೊತ್ತಿಲ್ಲವೆಂದೂ ಹೇಳುವನು. ಇದು ಹೇಗಾದರೂ ಇರಲಿ. ಇವರೆಲ್ಲರೂ ಒಂದು ವಿಷಯವನ್ನು ಮಾತ್ರ ಏಕಕಂಠದಿಂದ ಹೇಳುತ್ತಿರುವರು. ಅದೇನೆಂದರೆ, ಇವರೆಲ್ಲರೂ ತಮಗೆ ಜ್ಞಾನವು ಬೇರೊಂದು ಕಡೆಯಿಂದ ಬಂದಿತೇ ಹೊರತು ವಿಚಾರದಿಂದ ಬರಲಿಲ್ಲವೆಂದು ಇವರು ಹೇಳುವರು.

ಯೋಗಶಾಸ್ತ್ರವು ಈ ವಿಷಯದಲ್ಲಿ ಹೇಳುವುದೇನು? ಎಂದರೆ ಈ ಜ್ಞಾನವು ಯುಕ್ತಿಗೆ ಮೀರಿದ ಬೇರೊಂದು ಕಡೆಯಿಂದ ಬಂದಿತೆಂದು ಅವರು ಹೇಳಿದುದು ಸರಿಯೆ. ಆದರೆ ಅದು ಅವರೊಳಗಿನಿಂದಲೆ ಬಂತು. ಮನಸ್ಸಿಗೆ ಯುಕ್ತಿಯ ಮೇಲೆ ಇರುವ ಒಂದಾನೊಂದು ಅವಸ್ಥೆಯುಂಟೆಂದೂ, ಇದೇ ಸಮಾಧಿಯೆಂಬವಸ್ಥೆಯೆಂದೂ, ಆ ಮೇಲಣವಸ್ಥೆಯನ್ನು ಮನಸ್ಸು ಹೊಂದಿದರೆ ಯುಕ್ತಿಗೆ ಮೀರಿದ ಈ ಜ್ಞಾನವು ಬರುತ್ತದೆಂದೂ ಯೋಗಿಯು ಹೇಳುತ್ತಾನೆ. ಅತಿಭೌತಿಕವಾದ ಅತೀಂದ್ರಿಯ ಜ್ಞಾನವು ಇಂಥ ಮನುಷ್ಯನಿಗೇ ಬರುವುದು. ಈ ರೀತಿಯಲ್ಲಿ ಯುಕ್ತಿಯನ್ನು ಮೀರಿ ಸಾಮಾನ್ಯವಾಗಿರುವ ಮನುಷ್ಯ ಸ್ವಭಾವದಾಚೆಗೆ ಹೋಗುವ ಈ ಅವಸ್ಥೆಯು ಇದೆ ತತ್ತ್ವವನ್ನರಿಯದಾತನಿಗೂ ಹೇಗೋ ತನಗೆ ತಾನೇ ಬರುವುದೂ ಉಂಟು. ಗೊತ್ತಿಲ್ಲದೆ ನಿಧಿಯನ್ನು ಎಡವಿದಂತೆ ಅವನಿಗೆ ಅದು ಸಿಕ್ಕುವುದೂ ಉಂಟು. ಹೀಗೆ ಮುಗ್ಗರಿಸಿದವನಿಗೆ ತತ್ತ್ವವು ಸಿಕ್ಕಿದರೆ ಇವನು ಸಾಮಾನ್ಯವಾಗಿ ಹೊರಗಣಿಂದ ಎಲ್ಲಿಯೋ ಈ ಜ್ಞಾನವು ಬಂತೆಂದು ತಿಳಿದುಕೊಳ್ಳುವನು. ಬೇರೆ ಬೇರೆ ದೇಶಗಳಲ್ಲಿ ಸಿಕ್ಕಿರುವ ಅತೀಂದ್ರಿಯ ಜ್ಞಾನವು ಒಂದೇ ಆದರೂ ಒಂದು ದೇಶದಲ್ಲಿ ಒಬ್ಬ ದೇವದೂತನಿಂದ ಬಂದಂತೆಯೂ, ಮತ್ತೊಂದು ದೇಶದಲ್ಲಿ ಒಬ್ಬ ದೇವಪುರುಷನಿಂದ ಬಂದಂತೆಯೂ, ಮತ್ತೊಂದರಲ್ಲಿ ದೇವರಿಂದಲೇ ಬಂದಂತೆಯೂ, ತೋರುವುದಕ್ಕೆ ಇದೇ ಕಾರಣ. ಇದರಿಂದ ಏನು ಅರ್ಥವಾಯಿತು? ಏನಾಯಿತೆಂದರೆ ಮನಸ್ಸಿಗೆ ಜ್ಞಾನವೇನೋ ಅದರ ಸ್ವಭಾವದಿಂದಲೆ ಬಂತು. ಆ ಜ್ಞಾನ ಪ್ರಾಪ್ತಿಯನ್ನು ಪಡೆದವನು ತನ್ನ ತನ್ನ ನಂಬಿಕೆಯನ್ನೂ ಶಿಕ್ಷಣೆಯನ್ನೂ ಅನುಸರಿಸಿ ಅರ್ಥಮಾಡಿಕೊಂಡನು. ಈ ಜನರಿಗೆಲ್ಲ ಸಮಾಧಿಸ್ಥಿತಿಯು ಹೇಗೋ ಕಾಲಿಗೆ ತೊಡರಿದಂತೆ ಸಿಕ್ಕಿತೆಂಬುದೇ ಇಲ್ಲಿ ನಿಜವಾದಂಶವು.

ಹೀಗೆ ಈ ಅವಸ್ಥೆಗೆ ಮುಗ್ಗರಿಸಿ ಬಿದ್ದಂತೆ ಹೋಗುವುದು ಬಹಳ ಅಪಾಯಕರವೆಂದು

ಯೋಗಿ ಅನ್ನುತ್ತಾನೆ. ಬಹು ಸಂದರ್ಭಗಳಲ್ಲಿ ಮೆದಳು ಕೆಟ್ಟುಹೋಗುವ ಸಂಭವವುಂಟು. ಇದಲ್ಲದೆ ಯಾರು ಯಾರು ಹೀಗೆ ನಿಜವಾದ ತತ್ತ್ವವನ್ನು ತಿಳಿದುಕೊಳ್ಳದೆ ಮುಗ್ಗರಿಸಿ ಸಮಾಧಿಯನ್ನು ಪಡೆದಿದ್ದರೊ, ಅವರು ಎಷ್ಟೆ ದೊಡ್ಡವರಾಗಲಿ, ಅವರೆಲ್ಲರೂ ಕತ್ತಲೆಯಲ್ಲಿ ತಬ್ಬಿಬ್ಬಾಡುವಂತೆ ಕಾಣುತ್ತಿದ್ದುದಲ್ಲದೆ ಅವರು ಪಡೆದಿದ್ದ ಜ್ಞಾನದ ಜೊತೆಗೆ ಅವರಲ್ಲಿ ಏನಾದರೊಂದು ವಿಲಕ್ಷಣವಾದ ಮೂಢವಿಶ್ವಾಸವೊಂದಿದ್ದೇ ಇತ್ತು. ಅವರೆಲ್ಲರೂ ಭ್ರಾಂತಿಗೊಳಗಾಗಿದ್ದರು. ಮಹಮ್ಮದನು ತಾನು ಒಂದು ಗುಹೆಯಲ್ಲಿ ಇದ್ದಾಗ ಗೇಬ್ರಿಲನೆಂಬ ದೇವದೂತನು ಬಂದು ಹಾರಕ್ ಎಂಬ ಸ್ವರ್ಗಾಶ್ವದ ಮೇಲೆ ಕುಳ್ಳಿರಿಸಿಕೊಂಡು ಊರ್ಧ್ವಲೋಕಗಳನ್ನೆಲ್ಲ ತನಗೆ ತೋರಿಸಿದನೆಂದು ಹೇಳುತ್ತಿದ್ದನು. ಆದರೂ ಮಹಮ್ಮದನು ಕೆಲವು ಅದ್ಭುತ ತತ್ತ್ವಗಳನ್ನು ಹೇಳಿದನು. ಕುರಾನನ್ನು ಓದಿದರೆ ಸ್ವಾರಸ್ಯವಾದ ತತ್ತ್ವಗಳ ಜೊತೆಯಲ್ಲಿ ಎಷ್ಟೋ ಮೂಢ ಭಕ್ತಿಗಳೂ ತೋರಿಬರುವುವು. ಇದಕ್ಕೆ ಕಾರಣವೇನು? ಆತನು ಸಮಾಧಿ ಜ್ಞಾನದಿಂದ ಬರೆದನೆಂಬುವುದಕ್ಕೇನೂ ಸಂಶಯವಿಲ್ಲ. ಆದರೆ ಆ ಸ್ಥಿತಿಯನ್ನು ಅವನು ತನಗೆ ಗೊತ್ತಿಲ್ಲದೆ ಪಡೆದನು. ಅವನು ಸರಿಯಾಗಿ ಸಾಧನೆ ಮಾಡಿದ ಯೋಗಿಯಲ್ಲ. ಅವನಿಗೆ ತಾನು ಮಾಡುವ ಕಾರ್ಯಗಳಿಗೆ ಕಾರಣವೇ ಗೊತ್ತಿರಲಿಲ್ಲ. ಮಹಮ್ಮದನು ಲೋಕಕ್ಕೆ ಮಾಡಿದ ಉಪಕಾರವನ್ನೂ ನೋಡಿರಿ; ಅವನ ಮತಾಭಿನಿವೇಶದಿಂದ ಆಗಿರುವ ದೊಡ್ಡ ಕೇಡನ್ನೂ ವಿಚಾರ ಮಾಡಿ ನೋಡಿರಿ! ಅವನ ಉಪದೇಶದಿಂದ ಲಕ್ಷಗಟ್ಟಲೆ ಜನರು ಹತರಾಗಿರುವುದನ್ನೂ, ಎಷ್ಟೋ ಜನ ತಾಯಿಯರು ಮಕ್ಕಳನ್ನು ಕಳೆದುಕೊಂಡದ್ದನ್ನೂ, ಎಷ್ಟೋ ಜನ ಮಕ್ಕಳು ತಾಯಿ ತಂದೆಗಳಿಲ್ಲದೆ ಪರದೇಶಿಗಳಾದುದನ್ನೂ, ದೇಶದೇಶಗಳೆ ಹಾಳಾಗಿರುವುದನ್ನೂ, ಕೋಟಿಗಟ್ಟಲೆ ಜನರ ಪ್ರಾಣಹರಣವನ್ನೂ ಧ್ಯಾನಕ್ಕೆ ತಂದುಕೊಳ್ಳಿ!!

ಹೀಗೆ ಮಹಮ್ಮದ್ ಮೊದಲಾದ ಮತಗುರುಗಳ ಚರಿತ್ರೆಯನ್ನು ನೋಡಿದರೆ ಈ ಅಪಾಯವು ಗೊತ್ತಾಗುವುದು. ಆದರೂ ಇವರೆಲ್ಲರೂ ಸಮಾಧಿ ಜನ್ಯ ಜ್ಞಾನವನ್ನು ಪಡೆದವರೆ. ಎಲ್ಲೆಲ್ಲಿ ಮತಬೋಧಕನಾದವನು ಭಾವನೆಯನ್ನು ಹೆಚ್ಚು ಮಾಡಿ ಈ ಸಮಾಧಿಯನ್ನು ಪಡೆದನೊ ಅಲ್ಲೆಲ್ಲ ಸಮಾಧಿಯಿಂದ ಎಚ್ಚತ್ತಿರುವಾಗ ಕೆಲವು ಹೊಸತತ್ತ್ವವನ್ನು ತಂದು ಹೇಳಿದುದಲ್ಲದೆ ಏನಾದರೊಂದು ದುರಭಿಮಾನವನ್ನು ಬೋಧಿಸಿದ್ದಾನೆ. ಅವನು ಹೇಳಿದ ತತ್ತ್ವಬೋಧೆಯಿಂದ ಲೋಕಕ್ಕೆ ಎಷ್ಟು ಉಪಕಾರವಾಗಿದೆಯೊ ಅವನ ಬಯಲು ನಂಬಿಕೆಯ ಮಾತು ಅಷ್ಟು ಅಪಕಾರವನ್ನು ಮಾಡಿರುತ್ತದೆ. ಮನುಷ್ಯನ ಬಾಳೆಂದು ನಾವು ಕರೆಯುತ್ತಿರುವುದು ಎಷ್ಟೋ ಅಸಂಬದ್ಧ ವಿಷಯಗಳ ಮೊಟ್ಟೆಯಾಗಿದೆ. ಇದಕ್ಕೆ ಏನಾದರೂ ಸರಿಯಾದ ಕಾರಣವನ್ನು ಹುಡುಕ ಬೇಕಾದರೆ ಮೊದಲು ಯುಕ್ತಿಯನ್ನತಿಕ್ರಮಿಸಬೇಕಾಗುವುದು. ಆದರೆ ಈ ಕೆಲಸವನ್ನು ಶಾಸ್ತ್ರೀಯ ರೀತಿಯಿಂದ ಮೆಲ್ಲಗೆ ಕ್ರಮವಾದ ಅಭ್ಯಾಸ ಮಾಡಿ ನೆರವೇರಿಸಿಕೊಳ್ಳಬೇಕಲ್ಲದೆ ಎಲ್ಲಾ ವಿಧವಾದ ಬಯಲು ನಂಬಿಕೆಗಳನ್ನೂ ಬಿಟ್ಟು ಬಿಡಬೇಕು. ಈ ಸಮಾಧಿ ಸ್ಥಿತಿಯ ವಿಷಯವನ್ನು ಉಳಿದ ಶಾಸ್ತ್ರಗಳಂತೆಯೇ ವಿಚಾರ ಮಾಡಬೇಕು. ಮೊದಲು ಯುಕ್ತಿಯನ್ನೆ ತಳಪಾಯಮಾಡಿಕೊಳ್ಳಬೇಕು. ಯುಕ್ತಿಯು ಎಲ್ಲಿಯವರೆಗೆ ಹೋಗುವುದೊ ಅಲ್ಲಿಯವರೆಗೆ ಅದನ್ನು ಅನುಸರಿಸಬೇಕು. ಯಾವಾಗ ಯುಕ್ತಿಯು ಹಾಯದೆ ನಿಲ್ಲುವುದೊ ಆಗ ಯುಕ್ತಿಯೇ ಅತ್ಯಂತ ಉತ್ತಮವಾದ ಅವಸ್ಥೆಯನ್ನು ಪಡೆಯುವ ದಾರಿಯನ್ನು ತೋರಿಸಿಕೊಡುವುದು.

ಯಾವನು ನಾನು ಸದಾವೇಶವನ್ನು ಪಡೆದಿದ್ದೇನೆಂದು ಹೇಳಿ ಯುಕ್ತಿ ವಿರುದ್ಧವಾಗಿ ಮಾತನಾಡುತ್ತಾನೊ ಅವನ ಮಾತನ್ನು ಕೇಳಬಾರದು. ಏಕೆಂದರೆ, ಸಹಜ ಬುದ್ಧಿ, ಯುಕ್ತಿ; ಸಮಾಧಿ ಅಥವಾ ಅಸಂವೇದನೆ; ಸಂವೇದನೆ, ಸಮಾಧಿ; ಎಂಬ ಈ ಮೂರು ಅವಸ್ಥೆಗಳೂ ಅದೇ ಮನಸ್ಸಿಗೆ ಸೇರಿರುತ್ತವೆ. ಮನುಷ್ಯನಿಗೆ ಮೂರು ಮನಸ್ಸುಗಳಿಲ್ಲ. ಮನಸ್ಸಿನ ಒಂದು ಸ್ಥಿತಿಯೇ ಬೆಳೆದು ಉಳಿದ ಸ್ಥಿತಿಗಳಾಗುವುದು. ಸಹಜ ಬುದ್ಧಿಯೆ ಯುಕ್ತಿಯಾಗುವುದು. ಈ ಯುಕ್ತಿಯು ಬೆಳೆದು ಅತೀಂದ್ರಿಯವಾದ ಸಮಾಧಿಜ್ಞಾನವಾಗುವುದು. ಹೀಗಿರುವುದರಿಂದ ಯಾವ ಅವಸ್ಥೆಯೂ ಉಳಿದ ಅವಸ್ಥೆಗೆ ವಿರುದ್ಧವಾಗಿರುವುದಿಲ್ಲ. ನಿಜವಾದ ಸಮಾಧಿ ಜನ್ಯ ಜ್ಞಾನವೂ ಯುಕ್ತಿಗೆ ವಿರೋಧವಾಗಿರುವುದಿಲ್ಲ; ಅದಕ್ಕಿಂತ ಹೆಚ್ಚಿಗೆ ತಿಳಿಸುವುದು. ದೊಡ್ಡ ದೊಡ್ಡ ಮತಗುರುಗಳು "ನಾನು ಇದುವರೆಗೆ ನನಗೆ ತಿಳಿದುದನ್ನು ಕೆಡಿಸುವುದಕ್ಕೆ ಬಂದಿಲ್ಲ; ಅದನ್ನು ಪೂರ್ಣವಾಗಿ ನೆರವೇರಿಸುವುದಕ್ಕೆ ಬಂದಿರುತ್ತೇನೆ" ಎಂದು ಹೇಳುತ್ತಿದ್ದಂತೆ ಈ ಸಮಾಧಿಯು ಯುಕ್ತಿಯನ್ನು ಯಾವಾಗಲೂ ಪೂರ್ಣಮಾಡುತ್ತದೆ; ಅದಕ್ಕೆ ಹೊಂದಿಕೆಯಾಗಿಯೇ ಇರುತ್ತದೆ.

ಯೋಗದಲ್ಲಿ ಹೇಳಿರುವ ಅಂಗಗಳಿಗೆಲ್ಲ ಸಂವೇದನಾಸ್ಥಿತಿಗೆ ಮೀರಿದ ಈ ಸಮಾಧಿಯನ್ನು ಕ್ರಮವಾದ ರೀತಿಯಿಂದ ಪಡೆಯುವಂತೆ ಮಾಡುವುದೇ ಉದ್ದೇಶವು. ನಾವು ತಿಳಿಯಬೇಕಾದ ಇನ್ನೊಂದು ಮುಖ್ಯ ವಿಷಯವೇನೆಂದರೆ:- ಈ ಸಮಾಧಿಯು ಆ ಪೂರ್ವಾಚಾರ್ಯರುಗಳಿಗೆ ಸ್ವಭಾವ ಸಿದ್ಧವಾಗಿರುವಂತೆ ಪ್ರತಿಯೊಬ್ಬನಿಗೂ ಸಿದ್ಧವಾಗಿಯೇ ಇರುವುದು. ಈ ಆಚಾರ್ಯರೆಂಬುವರೇನೂ ಬೇರೆ ಒಂದು ಬಗೆಯ ಜನರಲ್ಲ. ಅವರೂ ನಮ್ಮಂತೆ ಮನುಷ್ಯರೆ. ಅವರು ಮಹಾಯೋಗಿಗಳು. ಅವರು ಈ ಸಮಾಧಿ ಸ್ಥಿತಿಯನ್ನು ಪಡೆದುಕೊಂಡಿದ್ದರು. ಹಾಗೆಯೇ ನಾವೂ ಪಡೆಯುವುದಕ್ಕಾಗುತ್ತದೆ. ಅವರೆಂದಿಗೂ ಒಂದು ಬಗೆಯ ವಿಲಕ್ಷಣ ಜನರಲ್ಲ. ಒಬ್ಬನಿಗೆ ಆ ಸ್ಥಿತಿಯು ಒಂದು ಸಲ ಬಂತೆಂಬುದೇ ಪ್ರತಿಯೊಬ್ಬನಿಗೂ ಅದು ಸಾಧ್ಯವೆಂಬುದನ್ನು ನಿಶ್ಚಯ ಮಾಡುತ್ತಲಿದೆ. ಸಾಧ್ಯವೆಂಬುದಿಷ್ಟೇ ಅಲ್ಲ; ಪ್ರತಿಯೊಬ್ಬನೂ ಒಂದಿಲ್ಲ ಒಂದು ವೇಳೆ ಆ ಸ್ಥಿತಿಯನ್ನು ಮುಟ್ಟಿಯೇ ತೀರಬೇಕು. ಅದೇ ಧರ್ಮವು. ನಮಗೆ ಅನುಭವವೆಂಬುದೊಂದೇ ಗುರು. ನಾವು ಸಾಯುವವರೆಗೂ ಮಾತನಾಡುತ್ತ, ತರ್ಕಮಾಡುತ್ತ ಇದ್ದರೂ ನಮ್ಮ ಸ್ವಂತ ಅನುಭವಕ್ಕೆ ಬಂದ ಹೊರತು ನಿಜವೆಂದರೆ ಇಂಥದ್ದೆಂದು ಎಳ್ಳಷ್ಟೂ ಗೊತ್ತಾಗಲಾರದು. ಒಬ್ಬನಿಗೆ ಕೆಲವು ಗ್ರಂಥಗಳನ್ನು ಕೊಟ್ಟ ಮಾತ್ರಕ್ಕೆ ಅವನು ಶಸ್ತ್ರವೈದ್ಯನಾಗುವುದಿಲ್ಲ. ಒಂದು ದೇಶವನ್ನು ನೋಡಬೇಕೆಂದಿರುವ ನನ್ನ ಕುತೂಹಲವು ನೀವು ನನಗೆ ಅದರ ನಕಾಶೆಯನ್ನು ತೋರಿದ ಮಾತ್ರಕ್ಕೇ ಹೋಗುವುದಿಲ್ಲ. ನನಗೆ ಸಾಕ್ಷಾದನುಭವ ಬೇಕಾಗಿರುವುದು. ನಕಾಶೆಗಳಿಂದ ಇನ್ನೂ ಹೆಚ್ಚು ಜ್ಞಾನವನ್ನು ಸಂಪಾದಿಸಬೇಕೆಂಬ ಜ್ಞಾನವುಂಟಾದೀತೇ ಹೊರತು ಇವುಗಳಿಗೆ ಮತ್ತೆ ಯಾವ ಹೆಚ್ಚಿನ ಉಪಯೋಗವೂ ಇಲ್ಲ. ಪುಸ್ತಕವನ್ನು ಎಂದೆಂದಿಗೂ ಕೈಬಿಡದೆ ಇರುವುದರಿಂದ ಮನುಷ್ಯರ ಮನಸ್ಸು ಹೀನಸ್ಥಿತಿಗೇ ಬರುವುದು. ದೇವರ ಜ್ಞಾನವೆಲ್ಲ ಈ ಪುಸ್ತಕದಲ್ಲಿದೆ, ಆ ಪುಸ್ತಕದಲ್ಲಿದೆ ಎಂದು ಹೇಳುವುದಕ್ಕಿಂತಲೂ ದೈವದ್ರೋಹವುಂಟೆ? ಜನರು ದೇವರನ್ನು ಅನಂತನೆಂದು ಕರೆಯುತ್ತಿದ್ದರೂ ಆತನನ್ನು ಒಂದು ಚಿಕ್ಕ ಪುಸ್ತಕದ ಕಟ್ಟುಗಳಲ್ಲಿ ಮಡಿಸಿ ಇಡುವುದಕ್ಕೆ ಪ್ರಯತ್ನಮಾಡುವುದು ಎಂಥ ಸಾಹಸ! ಗ್ರಂಥಗಳಲ್ಲಿ ಹೇಳಿರುವುದನ್ನು ನಂಬದೆ ಇರುವುದರಿಂದ, ದೇವರ ಜ್ಞಾನವೆಲ್ಲ ಒಂದು ಪುಸ್ತಕದಲ್ಲಿ

ಅಡಗಿರುವುದೆಂಬುದು ಅವರ ಮನಸ್ಸಿಗೆ ಸರಿ ಬೀಳದುದರಿಂದ ಕೋಟ್ಯನುಕೋಟಿ ಜನರು ಹತರಾಗಿದ್ದಾರೆ. ಹೀಗೆ ಕೊಲ್ಲುವುದು–ಖೂನಿ ಮಾಡುವುದು–ಈಗಿನ ಕಾಲದಲ್ಲಿಯೇನೋ ನಿಜ. ಆದರೆ ಇನ್ನೂ ಜಗತ್ತಿನಲ್ಲಿ ಗ್ರಂಥಗಳಲ್ಲಿರುವ ನಂಬಿಕೆಯಿಂದ ಭಯಂಕರ ರೀತಿಯಿಂದ ಬದ್ಧರಾಗಿಯೇ ಇದ್ದೇ ಇರುತ್ತಾರೆ.

ಸಮಾಧಿ ಸ್ಥಿತಿಯನ್ನು ಶಾಸ್ತ್ರೀಯ ಕ್ರಮದಿಂದ ಪಡೆಯುವುದಕ್ಕೆ ನಾನು ಇದುವರೆಗೆ ಹೇಳಿದ ಯೋಗಾಂಗಗಳನ್ನು ಒಂದೊಂದಾಗಿ ಅನುಸರಿಸಬೇಕಾದುದವಶ್ಯವು. ಪ್ರತ್ಯಾಹಾರ, ಧಾರಣೆ, ಇವಾದ ಬಳಿಕ ಧ್ಯಾನವನ್ನು ಮಾಡಬೇಕು. ಮನಸ್ಸು ಒಳಗೆ ಅಥವಾ ಹೊರಗೆ ಯಾವುದಾದರೊಂದು ಸ್ಥಾನದಲ್ಲಿ ನಿಲ್ಲುವುದಕ್ಕೆ ಕಲಿತ ಮೇಲೆ ಅದಕ್ಕೆ ಅದೇ ಸ್ಥಾನದ ಕಡೆಗೆ ಏಕಾಕಾರವಾದ ಪ್ರವಾಹವಾಗಿ ಹರಿಯುವ ಶಕ್ತಿಯು ಬರುತ್ತದೆ. ಧ್ಯಾನ ಶಕ್ತಿಯು ಚೆನ್ನಾಗಿ ಬಲಿತು ಧ್ಯೇಯದ ಬಾಹ್ಯ ಭಾಗವನ್ನೆ ಬಿಟ್ಟು ಅದರ ಅಂತರ್ಭಾಗವಾದ ಅರ್ಥವನ್ನು ಮಾತ್ರ ಧ್ಯಾನಿಸುತ್ತಿದ್ದರೆ ಅದಕ್ಕೆ ಸಮಾಧಿಯೆಂದು ಹೆಸರು. ಧಾರಣೆ, ಧ್ಯಾನ, ಸಮಾಧಿ ಈ ಮೂರೂ ಸೇರಿ ಸಂಯಮವೆಂದು ಹೆಸರು. ಎಂದರೆ ಮನಸ್ಸು ಮೊದಲು ಒಂದು ವಸ್ತುವನ್ನು ಧ್ಯಾನಿಸುತ್ತಿದ್ದು, ಹಾಗೆಯೇ ಬಹು ಹೊತ್ತು ನಿಲ್ಲುವುದಕ್ಕೆ ಕಲಿತು, ಆಮೇಲೆ ಬಿಡದೆ ಧ್ಯಾನಿಸುವುದರಿಂದ ಆ ವಸ್ತುವೆಂಬ ಕಾರ್ಯವು ಯಾವ ಜ್ಞಾನದಿಂದಾಗುವುದೊ ಅದರ ಅಂತಸ್ಸಾರವನ್ನು ಹಿಡಿದುಕೊಂಡುಬಿಟ್ಟರೆ ಅಂಥ ಮನಸ್ಸಿಗೆ ಎಲ್ಲವೂ ವಶವಾಗುವುದು.

ಈ ಧ್ಯಾನ ಸ್ಥಿತಿಯೆಂಬುದು ಅತ್ಯಂತ ಕೊನೆಯ ಸ್ಥಿತಿಯು. ಎಲ್ಲಿಯುವರೆಗೆ ಆಸೆಯಿರುವುದೊ ಅಲ್ಲಿಯುವರೆಗೆ ನಿಜವಾದ ಸುಖವೆಂದಿಗೂ ಬರಲಾರದು. ಧ್ಯಾನರೂಪಮನವಾಗಿ, ವಸ್ತುಗಳಿಗೆಲ್ಲ ಸಾಕ್ಷಿಯಾಗಿ ನಿಂತಾಗ ಮಾತ್ರ ನಿಜವಾದ ಭೋಗವೂ ಸೌಖ್ಯವೂ ದೊರಕುವುವು. ಪಶುವಿಗೆ ಇಂದ್ರಿಯಗಳಲ್ಲಿ ಸುಖ; ಮನುಷ್ಯನಿಗೆ ಬುದ್ಧಿಯಲ್ಲಿ ಸುಖ; ದೇವಪುರುಷರಿಗೆ ಧ್ಯಾನದಲ್ಲಿ ಸುಖ. ಈ ಧ್ಯಾನ ಸ್ಥಿತಿಯನ್ನು ಪಡೆದ ಜೀವನಿಗೆ ಮಾತ್ರವೇ ಈ ಜಗತ್ತು ಸುಂದರವಾಗಿರುವುದು. ಯಾವನಿಗೆ ಯಾವ ಆಸೆಯೂ ಇಲ್ಲವೊ ಯಾವನು ಆಸೆಗಳೊಡನೆ ಬೆರಕೆಯಾಗುವುದಿಲ್ಲವೊ, ಅವನಿಗೆ ಜಗತ್ತಿನಲ್ಲಿ ನಡೆಯುತ್ತಿರುವ ಬೇರೆ ಬೇರೆ ಮಾರ್ಪಾಟಗಳೆಲ್ಲ ಸುಂದರವಾಗಿ ಸೊಗಸಾಗಿರುವ ಚಿತ್ರ ಭಿತ್ತಿಯಾಗಿ ಕಾಣುತ್ತಿರುವುವು.

ಧ್ಯಾನದಲ್ಲಿ ಈ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೆಕು:– ನಮಗೊಂದು ಶಬ್ದ ಕೇಳಿಸುತ್ತದೆ. ಮೊದಲು ಹೊರಗೆ ಬಾಹ್ಯ ಕಣಗಳ ಕಂಪನೆಯಾಗುವುದು. ಇದನ್ನು ಮನಸ್ಸಿಗೆ ತೆಗೆದುಕೊಂಡುಹೋಗಿ ತಿಳಿಸುವ ನರದ ಚಲನೆ ಎರಡನೆಯದು. ಮನಸ್ಸಿನಲ್ಲಿ ಆಗುವ ಪ್ರತಿಕ್ರಿಯೆ ಮೂರನೆಯದು. ಈ ಪ್ರತಿಕ್ರಿಯೆ ಆದ ಕೂಡಲೆ ಹೊರಗಣ ಆಕಾಶಕಣಗಳ ಕಂಪನೆ ಮೊದಲುಗೊಂಡು ಮನಸ್ಸಿನ ಪ್ರತಿಕ್ರಿಯೆಯವರೆಗಿನ ಮಾರ್ಪಾಟಗಳಿಗೆಲ್ಲ ಕಾರಣವಾಗಿದ್ದ ಬಾಹ್ಯವಸ್ತುವಿನ ಜ್ಞಾನ ಉದಯಿಸುತ್ತದೆ. ಈ ಮೂರನ್ನು ಯೋಗದಲ್ಲಿ ಶಬ್ದ, ಅರ್ಥ, ಜ್ಞಾನ ಎಂದು ಕರೆಯುತ್ತಾರೆ. ಇವುಗಳೆ ಶಾರೀರಕಶಾಸ್ತ್ರದಲ್ಲಿ ಆಕಾಶ ಚಲನೆ, ನರ ಮತ್ತು ಮೆದುಳಿನಲ್ಲಿ ಆಗುವ ಕ್ರಿಯೆ ಮತ್ತು ಮನಸ್ಸಿನ ಪ್ರತಿಕ್ರಿಯೆ ಎನಿಸುವುವು. ಹೀಗೆ ಈ ಮೂರೂ ಬೇರೆ ಬೇರೆ ಕಾರ್ಯಗಳಾಗಿದ್ದರೂ ಪೂರ ಸೇರಿಕೊಂಡು ಇದು ಇಂಥದ್ದೆಂದು ವಿವೇಚಿಸುವುದಕ್ಕೂ

ಬರದಂತಾಗಿ ಬಿಟ್ಟಿರುವುವು. ನಿಜವಾಗಿ ವಿಚಾರ ಮಾಡಿದರೆ ನಮಗೆ ಈಗ ಇವುಗಳಲ್ಲಾದರೂ ಗೋಚರವಾಗುವುದೇ ಇಲ್ಲ. ಅವುಗಳ ಒಟ್ಟಿನ ಫಲರೂಪವಾದ ಬಾಹ್ಯ ವಸ್ತು ಎನ್ನುವುದರ ಜ್ಞಾನ ಒಂದು ಮಾತ್ರ ಆಗುವುದು. ಆದರೆ ಜ್ಞಾನವಾಗುವಾಗಲೆಲ್ಲ ಈ ಮೂರು ಭಾಗವಿದ್ದೇ ಇರಬೇಕಾದ ಮೇಲೆ ಇವುಗಳನ್ನು ವಿವೇಚನೆಮಾಡುವುದಕ್ಕೆ ಬರುವುದಿಲ್ಲವೆನ್ನುವುದಕ್ಕೇನೂ ಕಾರಣವಿಲ್ಲ.

ಹಿಂದೆ ಹೇಳಿದ ಮಾರ್ಗಗಳಿಂದ ಮನಸ್ಸು ಬಲವಾಗಿ ಸ್ವಾಧೀನಕ್ಕೆ ಬರುವುದಲ್ಲದೆ ಸೂಕ್ಷ್ಮ ವಿಷಯಗಳನ್ನು ತಿಳಿಯುವ ಶಕ್ತಿಯು ಇದಕ್ಕೆ ಬಂದ ಮೇಲೆ ಅದನ್ನು ಧ್ಯಾನಕ್ಕೆ ಹಚ್ಚಬೇಕು. ಈ ಧ್ಯಾನವೆಂಬುದು ಸ್ಥೂಲ ಪದಾರ್ಥಗಳನ್ನು ಮೊದಲು ಮಾಡಿಕೊಂಡು ಆಮೇಲೆ ಮೆಲ್ಲಮೆಲ್ಲಗೆ ಸಣ್ಣ ಸಣ್ಣ ಪದಾರ್ಥಗಳಿಗೆ ಹೋಗುತ್ತ ಕೊನೆಗೆ ನಿರ್ವಿಷಯವಾಗಬೇಕು. ಮನಸ್ಸನ್ನು ಮೊದಲು ಮನಃಪ್ರತ್ಯಯಗಳನ್ನುಂಟುಮಾಡುವುದಕ್ಕೆ ಕಾರಣವಾಗಿರುವ ಪದಾರ್ಥಗಳನ್ನು ಅರಿಯುವುದಕ್ಕೂ ಆಮೇಲೆ ಒಳಗೆ ನಡೆಯುವ ಕಾರ್ಯಗಳನ್ನು ತಿಳಿಯುವುದಕ್ಕೂ ಅದರ ಮೇಲೆ ತನ್ನಲ್ಲಿಯೆ ಆಗುವ ಪ್ರತಿಕ್ರಿಯೆಯನ್ನು ಗ್ರಹಿಸುವುದಕ್ಕೂ ಉಪಯೋಗಿಸಬೇಕು. ಹೊರಗೆ ಇರುವ ಜ್ಞಾನ ಕಾರಣಗಳನ್ನೆ ಬೇರೆಯಾಗಿ ತಿಳಿಯುವುದಕ್ಕೆ ಮನಸ್ಸಿಗೆ ಬಂದರೆ ಎಲ್ಲಾ ವಿಧವಾಗ ಸೂಕ್ಷ್ಮವಸ್ತುಗಳನ್ನೂ ಎಲ್ಲಾ ವಿಧವಾದ ಸಣ್ಣ ಸಣ್ಣ ರೂಪವಿಶೇಷಗಳನ್ನೂ ಅರಿಯುವ ಶಕ್ತಿಯನ್ನು ಹೊಂದುವುದು. ಒಳಗಣ ಕಾರ್ಯಗಳನ್ನು ಮಾತ್ರವೆ ಪ್ರತ್ಯೇಕಿಸಿ ತಿಳಿಯುವುದಕ್ಕೆ ಬಂದರೆ ಎಲ್ಲಾ ವಿಧವಾದ ಮಾನಸಿಕ ತರಂಗಗಳೂ—ಅವೂ ತನ್ನಲ್ಲಿಯೇ ಇರಲಿ, ಮತ್ತೊಬ್ಬರಲ್ಲಿರಲಿ—ಅವಿನ್ನೂ ಭೌತಿಕ ಶಕ್ತಿರೂಪವಾಗಿ ಪರಿಣಮಿಸುವುದರೊಳಗಾಗಿಯೆ ತನ್ನ ವಶವಾಗಿರುವುವು. ಮಾನಸಿಕ ಪ್ರತಿಕ್ರಿಯೆಯನ್ನು ಮಾತ್ರವೇ ಬೇರ್ಪಡಿಸಿ ತಿಳಿದರೆ ಯೋಗಿಗೆ ಎಲ್ಲದರ ಜ್ಞಾನವೂ ಉಂಟಾಗುವುದು. ಏಕೆಂದರೆ ಪ್ರತಿಯೊಂದಜ್ಞಾತ ವಸ್ತುವೂ, ಪ್ರತಿಯೊಂದಾಲೋಚನೆಯೂ ಈ ಪ್ರತಿಕ್ರಿಯೆಯಿಂದಲೆ ಆಗಿರುವುವು. ಆಗ ಅವನಿಗೆ ತನ್ನ ಮನಸ್ಸಿನ ತಳಹದಿಯೆ ಗೊತ್ತಾಗುವುದರಿಂದ ಅವನಿಗೆ ಅದು ಪೂರ್ಣವಾಗಿ ವಶವಾಗುವುದು. ಯೋಗಿಗೆ ನಾನಾ ಸಿದ್ಧಿಗಳು ಸಿಕ್ಕುತ್ತವೆ. ಆದರೆ ಇವುಗಳಲ್ಲಿ ಯಾವುದಕ್ಕಾದರೂ ಮನಸೋತನೆಂದರೆ ಮುಂದೆ ಅವನು ಹೋಗುವ ದಾರಿಗೆ ಅಡ್ಡಿಯಾಗುವುದು. ಭೋಗಕ್ಕೆಂದು ಹೋಗುವುದು ಇಂಥ ಅಪಾಯಕರವಾಗಿರುವುದು. ಅವನು ಈ ಅಮಾನುಷ ಸಿದ್ಧಿಗಳನ್ನು ಕೂಡ ಅಲಕ್ಷ್ಯ ಮಾಡುವಷ್ಟು ಧೈರ್ಯಶಾಲಿಯಾದರೆ ಅವನಿಗೆ ಮನಸ್ಸೆಂಬ ಸಾಗರದಲ್ಲಿ ಅಲೆಗಳನ್ನು ಸಂಪೂರ್ಣವಾಗಿ ಶಾಂತಿಗೊಳಿಸುವ ಯೋಗವಿದ್ಯೆಯ ನಿಜವಾದ ಫಲವು ದೊರೆಯುವುದು. ಆಗ ಆತ್ಮದ ಮಹತ್ತು ಮನಸ್ಸಿನ ಚಂಚಲತೆಗೊಳಪಡದೆ ಅಥವಾ ಶರೀರ ಕ್ರಿಯೆಗಳಿಂದಲ್ಲಾಡದೆ ತನ್ನ ಸಂಪೂರ್ಣ ಪ್ರಕಾಶದಿಂದ ಬೆಳಗುವುದು. ಆಗ ಯೋಗಿಗೆ ತನ್ನ ಸ್ವರೂಪವಾಗಿರುವ – ಎಂದೆಂದಿಗೂ ತನ್ನ ರೂಪವೆ ಆಗಿರುವ – ಜ್ಞಾನಸಾರವಾಗಿಯೂ, ನಾಶರಹಿತವಾಗಿಯೂ, ಸರ್ವವ್ಯಾಪಕವಾಗಿಯೂ ಇರುವ ಆತ್ಮವು ಗೋಚರವಾಗುವುದು.

ಸಮಾಧಿಯೆಂಬುದು ಪ್ರತಿಯೊಬ್ಬ ಮನುಷ್ಯನಿಗೂ—ಅಷ್ಟೇಕೆ, ಪ್ರತ್ಯೇಕ ಪ್ರಾಣಿಗೂ—ಸಲ್ಲತಕ್ಕದ್ದು. ಅತ್ಯಂತ ಸಣ್ಣ ಕ್ರಿಮಿಯಿಂದ ಮೊದಲು ಮಾಡಿಕೊಂಡು ಅತ್ಯಂತ ಉಚ್ಚ ತರಗತಿಯ

ದೇವತೆಗಳವರೆಗೂ ಇರುವವರಲ್ಲಿ ಪ್ರತಿಯೊಬ್ಬನೂ ಇಂದಿಲ್ಲದಿದ್ದರೆ ನಾಳೆ ಆ ಸ್ಥಿತಿಗೆ ಬರಲೇಬೇಕಾಗುವುದು. ಆಗಲೆ ಅವನಿಗೆ ನಿಜವಾಗಿ ಧರ್ಮವೆಂಬುದು ಪ್ರಾರಂಭವಾಗುವುದು. ಅಲ್ಲಿಯವರೆಗೂ ನಾವು ಆ ಸ್ಥಿತಿಯನ್ನು ಪಡೆಯುವುದಕ್ಕೆ ಹೆಣಗಾಡುತ್ತಿದ್ದೇವೆನ್ನಬಹುದು. ಈಗ ನಮಗೂ ಧರ್ಮಹೀನರಿಗೂ ಯಾವ ಭೇದವೂ ಇಲ್ಲ. ಏಕೆಂದರೆ ನಮಗೆ ಅನುಭವವಿಲ್ಲ. ಈ ಅನುಭವವನ್ನು ಪಡೆಯದೆ ಇದ್ದರೆ ಧ್ಯಾನದಿಂದ ಆಗಬೇಕಾದುದೇನು? ಸಮಾಧಿಯನ್ನು ಪಡೆಯುವುದಕ್ಕೆ ಮಾಡಬೇಕಾದ ಪ್ರತಿಯೊಂದು ಕೃತ್ಯವನ್ನೂ ಚೆನ್ನಾಗಿ ವಿಚಾರಮಾಡಿ ಸರಿಯಾದ ಕ್ರಮದಲ್ಲಿ ಹೊಂದಿಸಿ ಶಾಸ್ತ್ರೀಯವಾದ ಕಟ್ಟಿನಲ್ಲಿಟ್ಟಿರುತ್ತಾರೆ. ಅದನ್ನು ಶ್ರದ್ಧೆಯಿಂದ ನಡೆಸಿದರೆ ಇಷ್ಟಾರ್ಥವನ್ನು ಹೊಂದಿಸಿಯೇ ತೀರುವುದು. ಆಗ ಎಲ್ಲಾ ದುಃಖಗಳೂ ಪರಿಹಾರವಾಗುವುವು; ಎಲ್ಲಾ ಸಂಕಟಗಳೂ ಮಾಯವಾಗುವುವು; ಕರ್ಮಬೀಜಗಳೆಲ್ಲ ಸುಟ್ಟು ಆತ್ಮವು ಎಂದಿಗೂ ನಿತ್ಯ ಮುಕ್ತವಾಗಿರುವುದು.

# 8ನೇ ಅಧ್ಯಾಯ

# ರಾಜಯೋಗಸಾರ

(ಈ ಕೆಳಗೆ ಕೊಟ್ಟಿರುವುದು ಕೂರ್ಮಪುರಾಣದಲ್ಲಿರುವ ರಾಜಯೋಗ ಸಂಗ್ರಹದ ಅಭಿಪ್ರಾಯದ ಭಾಷಾಂತರವು)

ಯೋಗವೆಂಬ ಬೆಂಕಿಯು ಮನುಷ್ಯನನ್ನು ಸುತ್ತಿರುವ ಪಾಪ ಪಂಜರವನ್ನು ಸುಟ್ಟುಬಿಡುತ್ತದೆ. ಜ್ಞಾನವು ಶುದ್ಧವಾಗಿ ಸಾಕ್ಷಾನ್ನಿರ್ವಾಣವೇ ಪ್ರಾಪ್ತವಾಗುವುದು. ಯೋಗದಿಂದ ಜ್ಞಾನಪ್ರಾಪ್ತಿಯಾಗುವುದು. ಜ್ಞಾನವು ಯೋಗಿಗೆ ಸಹಕಾರಿಯಾಗುವುದು. ಯಾವನು ಯೋಗಜ್ಞಾನಗಳೆರಡನ್ನೂ ಕೂಡಿಸಿ ಅನುಷ್ಠಾನ ಮಾಡುವನೊ ಅವನಿಗೆ ಭಗವಂತನ ಅನುಗ್ರಹವಾಗುವುದು. ಮಹಾಯೋಗವನ್ನು ದಿನಕ್ಕೊಂದಾವರ್ತಿಯೊ, ಎರಡು ಸಲವೊ, ಮೂರು ಬಾರಿಯೊ ಅಥವಾ ಸದಾ ಕಾಲದಲ್ಲಿಯೂ ಯಾರು ಅಭ್ಯಾಸ ಮಾಡುತ್ತಾರೊ ಅವರನ್ನು ದೇವತೆಗಳೆಂದು ತಿಳಿಯಬೇಕು. ಯೋಗದಲ್ಲಿ ಎರಡು ಭಾಗವುಂಟು. ಮೊದಲನೆಯದು ಅಭಾವವು. ಎರಡನೆಯದು ಮಹಾಯೋಗವು. ಎಲ್ಲಿ ಆತ್ಮವನ್ನು ಶೂನ್ಯ ರೂಪವಾಗಿಯೂ, ಗುಣರಹಿತವಾಗಿಯೂ ಧ್ಯಾನಿಸುತ್ತಾರೊ ಅದಕ್ಕೆ ಅಭಾವವೆಂದು ಹೆಸರು. ಯಾವುದರಲ್ಲಿ ಆತ್ಮವನ್ನು ಆನಂದಮಯವೆಂದೂ ಸರ್ವದೋಷಗಳಿಂದ ಬಿಡಲ್ಪಟ್ಟದ್ದೆಂದೂ ಪರಮಾತ್ಮನೊಡನೆ ಐಕ್ಯರೂಪದಿಂದ ಎಣಿಸಲ್ಪಡುವುದೊ ಅದು ಮಹಾಯೋಗವೆನಿಸುವುದು. ಯೋಗಿಗೆ ಎರಡು ರೀತಿಯಿಂದಲೂ ಆತ್ಮ ಸಾಕ್ಷಾತ್ಕಾರವಾಗುವುದು. ನಾವು ಅಲ್ಲಲ್ಲಿ ಓದುವ, ಕೇಳುವ ಇತರ ಯೋಗಗಳು ಮಹಾ ಯೋಗವೆಂಬ ಉತ್ಕೃಷ್ಟ ಯೋಗಕ್ಕೆ ಸಮವಾಗಲಾರವು. ಈ ಯೋಗದಲ್ಲಿ ಯೋಗಿಯು ಸಮಸ್ತ ಜಗತ್ತೂ ತಾನೂ ಸಹ ಪರಮಾತ್ಮನೆಂದೇ ತಿಳಿಯುವನು. ಇದೇ ಯೋಗಗಳಲ್ಲೆಲ್ಲ ಉತ್ತಮವಾದುದು.

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ, ಧ್ಯಾನ, ಸಮಾಧಿ ಇವು ರಾಜಯೋಗದ ಅಂಗಗಳು. ಇವುಗಳಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಾನ ಪರಿಗ್ರಹ ಮಾಡದೆ ಇರುವುದು ಇವು ಯಮವೆನಿಸುವುವು. ಇದರಿಂದ ಚಿತ್ತ ಶುದ್ಧಿಯಾಗುವುದು. ಅಹಿಂಸೆಯೆಂದರೆ ಮನೋವಾಕ್ಕಾಯಗಳಲ್ಲಿ ಯಾವಾಗಲೂ ಯಾರಿಗೂ ಹಿಂಸೆಯನ್ನುಂಟುಮಾಡದಿರುವುದು. ಅಹಿಂಸೆಗಿಂತ ಹೆಚ್ಚಿನ ಧರ್ಮವೇ ಇಲ್ಲ.

ಸರ್ವಭೂತಗಳಲ್ಲಿಯೂ ಅಹಿಂಸೆಯನ್ನು ತೋರಿಸುವುದರಿಂದ ಆಗುವ ಸೌಖ್ಯಕ್ಕಿಂತಲೂ ಹೆಚ್ಚಿನ ಸುಖವೇ ಇಲ್ಲ. ಸತ್ಯದಿಂದ ಕ್ರಿಯಾಫಲಗಳು ಸಿಕ್ಕುತ್ತವೆ. ಸತ್ಯದಿಂದಲೆ ಸರ್ವವೂ ಸಿದ್ಧಿಸುವುದು. ಸತ್ಯದಲ್ಲಿಯೆ ಸರ್ವವೂ ಪ್ರತಿಷ್ಠಿತವಾಗಿರುವುದು. ಇದ್ದ ಸಂಗತಿಗಳನ್ನು ಇದ್ದಂತೆ ತಿಳಿಸುವುದೇ ಸತ್ಯವೆನಿಸುವುದು. ಮತ್ತೊಬ್ಬರ ಪದಾರ್ಥಗಳನ್ನು ಕಳುವಿನಿಂದಾಗಲಿ, ಬಲಾತ್ಕಾರದಿಂದ ಆಗಲಿ ತೆಗೆದುಕೊಳ್ಳದೆ ಇರುವುದೆ ಅಸ್ತೇಯವು. ಮನಸ್ಸಿನಲ್ಲಿಯೂ, ವಾಕ್ಕಿನಲ್ಲಿಯೂ, ಶರೀರದಲ್ಲಿಯೂ ಯಾವಾಗಲೂ ಎಲ್ಲಾ ಸ್ಥಿತಿಯಲ್ಲಿಯೂ ಪರಿಶುದ್ಧರಾಗಿರುವುದು ಬ್ರಹ್ಮಚರ್ಯೆಯೆನಿಸುವುದು. ಎಂಥ ಭಯಂಕರವಾದ ಸಂಕಟದಲ್ಲಿದ್ದರೂ ಯಾರಿಂದಲೂ ಏನನ್ನೂ ತೆಗೆದುಕೊಳ್ಳದೆ ಇರುವುದೇ ಅಪರಿಗ್ರಹವು. ಒಬ್ಬನು ಮತ್ತೊಬ್ಬನಿಂದ ದಾನವನ್ನು ಸ್ವೀಕರಿಸಿದರೆ ಇವನ ಹೃದಯವು ಅಪರಿಶುದ್ಧವಾಗಿ, ಇವನು ನೀಚನಾಗಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಬದ್ಧನೂ ಆಸಕ್ತನೂ ಆಗುತ್ತಾನೆ.

ಈ ಮುಂದೆ ಹೇಳಿದವುಗಳಿಂದ ಯೋಗವು ಬೇಗ ಸಿದ್ಧಿಸುವುದಕ್ಕೆ ಅನುಕೂಲವಾಗುವುದು. ನಿಯಮವೆಂದರೆ ಕ್ಲಿಪ್ತವಾದ ನಡತೆಗಳೂ, ಆಚರಣೆಗಳೂ, ತಪಸ್ಸೂ, ಸ್ವಾಧ್ಯಾಯವೆಂದರೆ ಓದುವುದೂ, ಸಂತೋಷವೆಂದರೆ ತೃಪ್ತಿಯೂ, ಶೌಚವೆಂದರೆ ಶುದ್ಧನಾಗಿರುವುದೂ, ಈಶ್ವರಪ್ರಣಿಧಾನವೆಂದರೆ ಈಶ್ವರನನ್ನು ಪೂಜಿಸುವುದೂ, ಉಪವಾಸ ಮಾಡುವುದು ಅಥವಾ ಮತ್ತೆ ಇನ್ನಾವ ರೀತಿಯಿಂದಲಾದರೂ ಶರೀರ ದಂಡನೆ ಮಾಡುವುದು. ಶಾರೀರ ತಪಸ್ಸೆನಿಸುವುದು. ವೇದಗಳನ್ನೂ ಇತರ ಮಂತ್ರಗಳನ್ನೂ ಶರೀರದಲ್ಲಿರುವ ಸತ್ತ್ವವು ಶುದ್ಧಿಯಾಗುತ್ತಿರುವಂತೆ ಜಪಿಸುತ್ತಿರುವುದು ಸ್ವಾಧ್ಯಾಯವೆನಿಸುವುದು. ಈ ಮಂತ್ರಗಳನ್ನು ಜಪಿಸುವುದರಲ್ಲಿ ಮೂರು ವಿಧವುಂಟು. ಮೊದಲನೆಯದು ವಾಚಕವೆನಿಸುವುದು; ಎರಡನೆಯದು ಉಪಾಂಶವೆನಿಸುವುದು; ಮೂರನೆಯದು ಮಾನಸವೆನಿಸುವುದು. ಇದರಲ್ಲಿ ವಾಚಕವೆಂಬ ವೈಖರೀ ಜಪವು ಅಧಮವು; ಕೇಳಿಸದೆ ಇರುವ ಮಾನಸವು ಎಲ್ಲಕ್ಕೆ ಉತ್ತಮವಾದುದು. ಗಟ್ಟಿಯಾಗಿ ಉಚ್ಚರಿಸುವುದೇ ವಾಚಕ ಜಪವು; ತುಟಿಗಳು ಮಾತ್ರ ಅಲ್ಲಾಡುತ್ತ ಶಬ್ದವು ಕೇಳ ಬರದಂತೆ ಜಪಿಸುವುದು ಉಪಾಂಶ; ಕೇಳಿಸದಂತೆ ಮಂತ್ರವನ್ನು ಉಚ್ಚರಿಸುತ್ತ ಅದರ ಅರ್ಥವನ್ನು ಅನುಸಂಧಾನ ಮಾಡುತ್ತಿದ್ದರೆ ಮಾನಸ ಜಪವೆನಿಸುವುದು. ಇದೇ ಉತ್ತಮವಾದುದು. ಜ್ಞಾನಿಗಳು ಶೌಚದಲ್ಲಿ ಎರಡು ಬಗೆಯನ್ನು ಹೇಳಿರುವರು. ಮೃಜ್ಜಲ ಮೊದಲಾದ ಪದಾರ್ಥಗಳಿಂದ ಶರೀರವನ್ನು ಶುದ್ಧಿ ಮಾಡುವುದು ಬಾಹ್ಯ ಶೌಚವು. ಸತ್ಯಾದಿ ಗುಣಗಳಿಂದ ಮನಸ್ಸನ್ನು ಶುದ್ಧಿಗೊಳಿಸುವುದೇ ಅಂತಃಶೌಚವು. ಎರಡೂ ಅವಶ್ಯವು. ಅಂತಃಶೌಚವೊಂದಿದ್ದು ಹೊರಗೆ ಕೊಳೆಯಿಂದಿದ್ದರೆ ಆಗುವುದಿಲ್ಲ. ಎರಡೂ ಸಾಧ್ಯವಾಗದೆ ಇರುವಾಗ ಅಂತಃಶೌಚವೇ ಉತ್ತಮವು. ಆದರೆ ಎರಡನ್ನೂ ಸಂಪಾದಿಸದೆ ಇರುವಾತನು ಯೋಗಿಯಾಗಲಾರನು. ಸ್ತೋತ್ರದಿಂದಲೂ, ಧ್ಯಾನದಿಂದಲೂ, ಭಕ್ತಿಯಿಂದಲೂ ಪೂಜಿಸುವುದೆ ಈಶ್ವರಪ್ರಣಿಧಾನವು. ಇಲ್ಲಿಯವರೆಗೆ ಯಮ ನಿಯಮಗಳನ್ನು ಹೇಳಿದಂತಾಯಿತು.

ಇನ್ನು ಆಸನವು. ಇದರ ವಿಷಯದಲ್ಲಿ ಮುಖ್ಯವಾಗಿ ಜ್ಞಾಪಕವಿಡಬೇಕಾದುದೇನೆಂದರೆ, ಶರೀರವನ್ನು ಧಾರಾಳವಾಗಿ ಬಿಟ್ಟು ಎದೆ, ಹೆಗಲು, ತಲೆ ಇವುಗಳನ್ನು ನೆಟ್ಟಗೆ ಇರುವಂತೆ

ಇಟ್ಟುಕೊಂಡಿರಬೇಕು. ಆಮೇಲೆ ಪ್ರಾಣಾಯಾಮವು. ಪ್ರಾಣವೆಂದರೆ ತನ್ನ ಶರೀರದಲ್ಲಿ ಸಂಚರಿಸುವ ಪ್ರಾಣವಾಯುವು. ಆಯಾಮವೆಂದರೆ ಅದನ್ನು ಜಯಿಸುವುದು. ಪ್ರಾಣಾಯಾಮವು ಉತ್ತಮಮಧ್ಯಮಾಧಮ ರೀತಿಯಿಂದ ಮೂರು ಬಗೆಯಾಗಿರುವುದು. ಪ್ರತಿಯೊಂದು ಪ್ರಾಣಾಯಾಮಕ್ಕೂ ಪೂರಕ, ಕುಂಭಕ, ರೇಚಕಗಳೆಂಬ ಮೂರು ಭಾಗಗಳುಂಟು. ಹನ್ನೆರಡು ಮಾತ್ರೆಗಳಿಂದ ಪ್ರಾರಂಭವಾಗುವುದೆ ಅಧಮ ಪ್ರಾಣಾಯಾಮವು; ಇಪ್ಪತ್ತನಾಲ್ಕು ಮಾತ್ರೆಗಳಿಂದ ಪ್ರಾರಂಭವಾಗುವುದು ಮಧ್ಯಮ ಪ್ರಾಣಾಯಾಮವು; ಮುವತ್ತಾರು ಮಾತ್ರೆಗಳಿಂದ ಮೊದಲಾಗುವುದು ಉತ್ತಮ ಪ್ರಾಣಾಯಾಮವು. ಯಾವ ಪ್ರಾಣಾಯಾಮದಲ್ಲಿ ಮೊದಲು ಮೈ ಬೆವರುವುದೊ, ಆಮೇಲೆ ಮೈ ನಡುಗುವುದೊ, ಆಮೇಲೆ ಮೈಮೇಲಕ್ಕೇಳುವುದೊ, ಕೊನೆಗೆ ಪರಮಾನಂದವೇ ಉಂಟಾಗುವುದೊ ಅದೇ ಉತ್ತಮೋತ್ತಮಪ್ರಾಣಾಯಾಮವು. ಗಾಯತ್ರಿಯೆಂಬ ಮಂತ್ರವೊಂದುಂಟು. ಅದು ವೇದದಲ್ಲಿ ಬಹು ಪರಿಶುದ್ಧವಾದ ಮಂತ್ರವು. "ಈ ಜಗತ್ತನ್ನುಂಟು ಮಾಡಿರುವ ದೇವನ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನ ಮಾಡುತ್ತೇವೆ; ಆತನು ನಮ್ಮ ಬುದ್ಧಿಗಳನ್ನು ಪ್ರೇರಣೆ ಮಾಡುವಾತನಾಗಲಿ." ಈ ಮಂತ್ರದ ಆದಿಯಲ್ಲಿಯೂ ಅಂತ್ಯದಲ್ಲಿಯೂ ಓಂಕಾರವನ್ನು ಸೇರಿಸುತ್ತಾರೆ. ಒಂದೊಂದು ಪ್ರಾಣಾಯಾಮಕ್ಕೆ ಮೂರು ಮೂರು ಗಾಯತ್ರಿಯನ್ನು ಉಚ್ಚಾರ ಮಾಡಬೇಕು. ಎಲ್ಲಾ ಗ್ರಂಥಗಳಲ್ಲಿಯೂ ಪ್ರಾಣಾಯಾಮದಲ್ಲಿ ರೇಚಕ (ಬಿಡುವುದು), ಪೂರಕ (ತುಂಬುವುದು) ಮತ್ತು ಕುಂಭಕ (ತುಂಬಿಕೊಂಡು ಹಾಗೇ ಇಟ್ಟಿರುವುದು) ಎಂದೆಂಬ ಮೂರು ಭಾಗಗಳಿವೆಯೆಂದು ಹೇಳಿರುತ್ತದೆ.

ಇಂದ್ರಿಯಗಳು ಹೊರಗಡೆಗೆ ವ್ಯಾಪಾರ ಮಾಡುತ್ತ ಬಾಹ್ಯ ವಿಷಯಗಳೊಡನೆ ಸಂಯೋಗವಾಗುತ್ತಿರುವುವು. ಇವುಗಳನ್ನು ತನ್ನ ಇಚ್ಛೆಗೆ ವಶ ಮಾಡಿಕೊಳ್ಳುವುದೇ ಪ್ರತ್ಯಾಹಾರವೆನಿಸುವುದು. ಪ್ರತ್ಯಾಹಾರವೆಂದರೆ ತನ್ನ ಕಡೆಗೆ ಎಳೆಕೊಳ್ಳುವುದು. ಮನಸ್ಸನ್ನು ಹೃದಯ ಕಮಲದಲ್ಲಿ ಆಗಲಿ, ಸಹಸ್ರಾರಕಮಲದಲ್ಲಿ ಆಗಲಿ ಇಟ್ಟಿರುವುದನ್ನು ಧಾರಣೆಯೆನ್ನುವರು. ಒಂದು ಸ್ಥಾನ ವಿಶೇಷದಲ್ಲಿ ಮನಸ್ಸಿಡುವುದರಿಂದ ಆ ಸ್ಥಾನವನ್ನೆ ಆಧಾರ ಮಾಡಿಕೊಂಡು ಒಂದು ಜಾತಿಯ ವಿಚಾರ ತರಂಗಗಳು ಉತ್ಪತ್ತಿಯಾಗುತ್ತವೆ. ಇವುಗಳು ಇತರ ವಿಧವಾದ ಅಲೆಗಳಲ್ಲಿ ಸೇರಿ ಹೋಗದೆ ಕ್ರಮಕ್ರಮವಾಗಿ ತಾವೇ ಪ್ರಧಾನವಾಗಿ ಉಳಿದವುಗಳೆಲ್ಲ ಹಿಂಜರಿದು ಕೊನೆಗೆ ಕಾಣದೇ ಹೋಗುತ್ತವೆ. ಕೊನೆಗೆ ಹೀಗೆ ನಾನಾ ವಿಧವಾಗಿದ್ದ ತೆರೆಗಳು ಒಂದಾಗಿ ಒಂದೇ ಒಂದು ತೆರೆಯಾಗುವುದು. ಇದೇ ಧ್ಯಾನವು. ಯಾವ ಆಧಾರವನ್ನೂ ಬಯಸದೆ ಮನಸ್ಸೆಲ್ಲ ಒಂದೇ ತರಂಗವಾಗಿ ಏಕ ರೂಪವಾಗಿದ್ದರೆ ಅದಕ್ಕೆ ಸಮಾಧಿಯೆಂದು ಹೆಸರು. ಇಲ್ಲಿ ಸ್ಥಾನಗಳ ಮತ್ತು ಚಕ್ರಗಳ ಅಪೇಕ್ಷೆಯನ್ನು ಮಾಡದೆ ಕೇವಲ ಅರ್ಥಮಾತ್ರವೇ ನಿಂತಿರುವುದು. ಆಧಾರದಲ್ಲಿ ಹನ್ನೆರಡು ಸೆಕೆಂಡುಗಳ ಕಾಲ ಮನಸ್ಸು ನಿಂತಿದ್ದರೆ ಧಾರಣೆಯೆನಿಸುವುದು. ಇಂಥ ಧಾರಣೆ ಹನ್ನೆರಡಾದರೆ ಒಂದು ಧ್ಯಾನವಾಗುವುದು. ಇಂಥ ಹನ್ನೆರಡು ಧ್ಯಾನವಾದರೆ ಒಂದು ಸಮಾಧಿಯಾಗುವುದು.

ಬೆಂಕಿ ಇರುವೆಡೆಯಲ್ಲಿಯೂ, ನೀರಿನಲ್ಲಿಯೂ, ಒಣಗಿದೆಲೆಗಳು ಬಿದ್ದಿರುವ ನೆಲದ ಮೇಲೆಯೂ, ಬಹಳ ಹುತ್ತಗಳು ಇರುವ ಕಡೆಯಲ್ಲಿಯೂ, ಕಾಡು ಪ್ರಾಣಿಗಳಿರುವೆಡೆಯಲ್ಲಿಯೂ,

ಭೀತಿಯಿರುವ ಸ್ಥಳದಲ್ಲಿಯೂ, ನಾಲ್ಕು ಬೀದಿಗಳು ಕೂಡುವಲ್ಲಿಯೂ, ಬಹಳ ಗದ್ದಲವಿರುವಲ್ಲಿಯೂ, ದುಷ್ಟ ಜನರು ಅನೇಕರು ಇರುವ ಕಡೆಯಲ್ಲಿಯೂ ಯೋಗವನ್ನು ಅಭ್ಯಾಸ ಮಾಡಬಾರದು. ಇದು ಇಂಡಿಯಾ ದೇಶಕ್ಕೆ ಹೆಚ್ಚು ಅನ್ವಯಿಸುತ್ತದೆ. ಮೈಯಲ್ಲಿ ಆಲಸ್ಯವಾಗಿರುವಾಗಲೂ, ರೋಗವಿರುವಾಗಲೂ, ಮನಸ್ಸಿಗೆ ಬಹು ಸಂಕಟವೂ ದುಃಖವೂ ತೋರುತ್ತಿರುವಾಗಲೂ ಅಭ್ಯಾಸ ಮಾಡಬಾರದು. ಯಾವುದು ರಹಸ್ಯಪ್ರದೇಶವಾಗಿ ಜನಬಾಧೆಯಿಲ್ಲದಿರುವುದೊ ಅಂಥ ಸ್ಥಳಕ್ಕೆ ಹೋಗಬೇಕು. ಶುಚಿಯಾಗಿಲ್ಲದ ಪ್ರದೇಶಗಳನ್ನು ಆರಿಸಿಕೊಳ್ಳಬಾರದು. ನೋಟಕ್ಕೆ ಸುಂದರವಾಗಿರುವ ಸ್ಥಳವನ್ನೆ ಗೊತ್ತು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ತನ್ನ ಮನೆಯಲ್ಲಿಯೆ ಸೊಗಸಾಗಿರುವ ಒಂದು ಕೋಣೆಯನ್ನು ಗೊತ್ತು ಮಾಡಿಕೊಳ್ಳುವುದುತ್ತಮ. ಅಭ್ಯಾಸ ಮಾಡುವುದಕ್ಕೆ ಮೊದಲು ಯೋಗಿಗಳೆಲ್ಲರಿಗೂ, ತನ್ನ ಗುರುಗಳಿಗೂ, ಪರಮಾತ್ಮನಿಗೂ ನಮಸ್ಕಾರ ಮಾಡಬೇಕು.

ಧ್ಯಾನದ ವಿಷಯವಾಗಿ ಪ್ರಸ್ತಾಪಿಸಿ ಯಾವ ವಸ್ತುವನ್ನು ಧ್ಯಾನ ಮಾಡಬೇಕೆಂಬುದನ್ನು ತಿಳಿಸುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟಿದೆ. ನೆಟ್ಟಗೆ ಕೂತುಕೊಂಡು ಮೂಗಿನ ತುದಿಯ ಕಡೆಗೆ ನೋಡುತ್ತಿರಬೇಕು. ಇದರಿಂದ ಮನಸ್ಸನ್ನು ಏಕಾಗ್ರಮಾಡುವುದಕ್ಕೆ ಹೇಗೆ ಅನುಕೂಲವಾಗುವುದೆಂಬುದೂ, ಕಣ್ಣಿನ ನರಗಳೆರಡನ್ನೂ ಸ್ವಾಧೀನಕ್ಕೆ ತಂದುಕೊಳ್ಳುವುದರಿಮದ ಪ್ರತಿಕ್ರಿಯೆಯ ಭಾಗವನ್ನೇ ಬಹುಮಟ್ಟಿಗೆ ಸ್ವಾಧೀನಕ್ಕೆ ತಂದುಕೊಂಡಂತಾಗಿ ಕೊನೆಗೆ ಸಂಕಲ್ಪ ಶಕ್ತಿಯೇ ತನ್ನ ಸ್ವಾಧೀನವಾದಂತಾಗುವುದೂ ಕೆಲವು ಕಾಲದ ಮೇಲೆ ಗೊತ್ತಾಗುವುದು. ಧ್ಯಾನ ಮಾಡತಕ್ಕ ಕ್ರಮಗಳಲ್ಲಿ ಇಲ್ಲಿ ಕೆಲವನ್ನು ಕೊಟ್ಟಿದೆ.

ತಲೆಯ ಮೇಲುಗಡೆಯಲ್ಲಿ ಬಹುವಿಸ್ತಾರವಾದ ಒಂದು ಕಮಲವಿದೆಯೆಂದು ಭಾವಿಸಿಕೊಳ್ಳಬೇಕು. ಸದ್ಗುಣವೆ ಇದಕ್ಕೆ ಮಧ್ಯ ಭಾಗವು. ಜ್ಞಾನವೆ ಇದರ ನಾಳವು. ಈ ಕಮಲದಲ್ಲಿರುವ ಎಂಟುದಳಗಳನ್ನೆ ಯೋಗಿಯು ಎಂಟು ಸಿದ್ಧಿಗಳೆಂದೂ ಒಳಗಡೆ ಇರುವ ಪರಾಗದ ಕುಸುಮ ಮತ್ತು ಶಲಾಕೆ ಇವುಗಳೆ ವೈರಾಗ್ಯವೆಂದೂ ಕಲ್ಪಿಸಬೇಕು. ಹೊರಗಣ ಸಿದ್ಧಿಗಳನ್ನು ಬೇಡವೆನ್ನುವ ಯೋಗಿಗೇ ಮೋಕ್ಷವಾಗುವುದು. ಆದುದರಿಂದ ಹೊರಗಿರುವ ಎಂಟು ದಳಗಳನ್ನು ಸಿದ್ಧಿಗಳೆಂದೂ, ಒಳಗಣ ಕೇಸರ ಮತ್ತು ಶಲಾಕೆ ಇವನ್ನು ಈ ಸಿದ್ಧಿಗಳ ತ್ಯಾಗವೆಂದೂ ಭಾವಿಸಬೇಕು. ಆ ಕಮಲ ಮಧ್ಯದಲ್ಲಿ ಅವಾಚ್ಯನಾಗಿಯೂ, ಪರಮತೇಜೋಮಯನಾಗಿಯೂ, ಸರ್ವಶಕ್ತನಾಗಿಯೂ, ಕೈಗೆ ನಿಲುಕದವನಾಗಿಯೂ, ಓಂಕಾರವೆಂಬ ನಾಮವುಳ್ಳವನಾಗಿಯೂ, ಇರುವ ಪರಮಾತ್ಮನನ್ನು ಸಂಕಲ್ಪಿಸಿ ಅದನ್ನೆ ಧ್ಯಾನಿಸುತ್ತಿರಬೇಕು.

ಈ ಕೆಳಗೆ ಹೇಳಿರುವುದು ಮತ್ತೊಂದು ಬಗೆಯ ಧ್ಯಾನವು. ಹೃದಯದಲ್ಲಿ ಒಂದು ಆಕಾಶವನ್ನು ಕಲ್ಪಿಸಿ ಆ ಆಕಾಶದಲ್ಲಿ ಒಂದು ಜ್ವಾಲೆಯು ಉರಿಯುತ್ತಿರುವುದೆಂದು ಭಾವಿಸಬೇಕು. ಈ ತೇಜಸ್ಸನ್ನು ತನ್ನ ಆತ್ಮನೆಂದು ಭಾವಿಸಿ ಆ ತೇಜಸ್ಸಿನಲ್ಲಿ ಮತ್ತೊಂದು ಪ್ರಕಾಶಮಯವಾದ ಆಕಾಶವನ್ನು ಕಲ್ಪಿಸಬೇಕು. ಅದನ್ನು ತನ್ನ ಆತ್ಮನಿಗೂ ಆತ್ಮನಾದ ಪರಮಾತ್ಮನೆಂದು ತಿಳಿದು ಹೃದಯುದಲ್ಲಿ ಅದನ್ನು ಧ್ಯಾನಿಸುತ್ತಿರಬೇಕು. ಬ್ರಹ್ಮಚರ್ಯ, ಅಹಿಂಸೆ, ಕ್ಷಮೆ–ತನ್ನ

ಪರಮಶತ್ರುವನ್ನಾದರೂ ಕ್ಷಮಿಸುವುದು–ಸತ್ಯ, ಪರಮಾತ್ಮನಲ್ಲಿ ಭಕ್ತಿ ಇವುಗಳೆಲ್ಲವೂ ಬೇರೆ ಬೇರೆ ವೃತ್ತಿಗಳು. ಇವೆಲ್ಲವೂ ಪೂರ್ಣವಾಗಲಿಲ್ಲವೆಂದು ಯೋಚನೆ ಮಾಡ ಕೆಲಸವಿಲ್ಲ. ಒಂದರಲ್ಲಿ ಪೂರ್ಣನಾಗುವುದಕ್ಕೆ ಪ್ರಯತ್ನಿಸಿದರಾಯಿತು: ಮಿಕ್ಕ ಗುಣಗಳು ತಾವೇ ಬರುತ್ತವೆ. ಯಾವಾತನು ಸಕಲ ವಿಧವಾದ ಆಸಕ್ತಿಯನ್ನೂ, ಭಯವನ್ನೂ, ಸಿಟ್ಟನ್ನೂ ಬಿಟ್ಟು ತನ್ನ ಆತ್ಮವನ್ನೆ ಪರಮಾತ್ಮನಿಗೆ ಅರ್ಪಿಸಿರುವನೊ, ಯಾವಾತನು ಭಗವಂತನನ್ನೇ ಆಶ್ರಯಿಸಿರುವನೊ, ಯಾವಾತನ ಹೃದಯವು ಶುದ್ಧವಾಗಿರುವುದೊ ಅವನು ಪರಮಾತ್ಮನಲ್ಲಿ ಏನನ್ನು ಬೇಡಿದರೂ ಆತನು ಅದನ್ನು ಅವನಿಗೆ ಕೊಡುವನು. ಆದುದರಿಂದ ಆತನನ್ನು ಜ್ಞಾನದಿಂದಾಗಲಿ, ಪ್ರೇಮದಿಂದಾಗಲಿ, ವೈರಾಗ್ಯದಿಂದಾಗಲಿ ಅರ್ಚನೆ ಮಾಡಬೇಕು.

"ಯಾರನ್ನೂ[1] ಹಗೆ ಮಾಡದೆ, ಎಲ್ಲರಿಗೂ ಸ್ನೇಹಿತನಾಗಿ, ಎಲ್ಲರಲ್ಲಿಯೂ ದಯೆಯುಳ್ಳವನಾಗಿ, ತನ್ನದೆಂಬುದೇ ಇಲ್ಲದೆ, ಅಹಂಕಾರವಿಲ್ಲದವನಾಗಿ, ಸುಖದುಃಖಗಳಲ್ಲಿ ಸಮವಾಗಿರುತ್ತ, ಕ್ಷಮಾಗುಣವುಳ್ಳವನಾಗಿ, ಯಾವಾಗಲೂ ತೃಪ್ತಿಯುಳ್ಳವನಾಗಿ, ಯಾವಾಗಲೂ ಯೋಗದಲ್ಲಿಯೆ ಇದ್ದು ಕೊಂಡು ಕೆಲಸ ಮಾಡುತ್ತ, ತನ್ನನ್ನು ತಾನು ಸ್ವಾಧೀನಪಡಿಸಿಕೊಂಡು ದೃಢವಾಗಿ ಬುದ್ಧಿಯುಳ್ಳವನಾಗಿ ನನ್ನಲ್ಲಿಯೆ ಮನಸ್ಸು ಮತ್ತು ಬುದ್ಧಿಗಳನ್ನು ಅರ್ಪಣೆ ಮಾಡಿರುವನೊ ಅವನೆ ನನ್ನ ಪ್ರಿಯ ಭಕ್ತನು. ಯಾವನಿಂದ ಜನರಿಗೆ ತೊಂದರೆ–ಯಾಗುವುದಿಲ್ಲವೊ, ಯಾರಿಗೆ ಇತರರಿಂದ ತೊಂದರೆಯಾಗಲಾರದೊ, ಯಾವನು ಹಿಗ್ಗುವುದು, ತಗ್ಗುವುದು, ಹೆದರುವುದು, ಯೋಚನೆ ಕಟ್ಟಿಕೊಳ್ಳುವುದು ಇವುಗಳಿಲ್ಲದೆ ಇರುವನೊ ಅಂಥವನು ನನ್ನ ಪ್ರಿಯನು. ಯಾವನು ಒಂದನ್ನೂ ಅಪೇಕ್ಷಿಸದೆ, ಪರಿಶುದ್ಧನಾಗಿ, ಕೆಲಸದಲ್ಲಿ ಗಟ್ಟಿಗನಾಗಿ, ಎಲ್ಲವನ್ನೂ ಬಿಟ್ಟು, ಒಳ್ಳೆಯದು ಬಂದರೂ ಕೆಟ್ಟದ್ದು ಬಂದರೂ ಮನಸ್ಸಿಗೆ ಹಚ್ಚಿಕೊಳ್ಳದೆ, ಎಂದಿಗೂ ವ್ಯಥೆ ಇಲ್ಲದಿರುವನೊ, ಯಾವನು ಹೊಗಳಿದರೂ ಬಯ್ದರೂ ಒಂದೆ ಸಮವಾಗಿದ್ದುಕೊಂಡು, ಸುಮ್ಮನೆ ತನ್ನಲ್ಲಿ ತಾನು ವಿಚಾರಮಾಡಿಕೊಳ್ಳುತ್ತ, ಕೈಗೆ ಬಂದಷ್ಟರಿಂದ ತೃಪ್ತಿಹೊಂದುತ್ತ, ತನ್ನದೆಂಬ ಮನೆಯಿಲ್ಲದೆ, ಜಗತ್ತನ್ನೆ ತನ್ನ ಮನೆಯನ್ನು ಮಾಡಿಕೊಂಡು ಬುದ್ಧಿಯನ್ನು ಸ್ಥಿರವಾಗಿ ಇಟ್ಟುಕೊಂಡಿರುವನೊ ಅವನೆ ನನ್ನ ಪ್ರಿಯಭಕ್ತನು". ಇಂಥವನೆ ಯೋಗಿಯಾಗತಕ್ಕವನು.

ನಾರದನೆಂಬ ಒಬ್ಬಾನೊಬ್ಬ ದೇವರ್ಷಿಯಿದ್ದನು. ಮನುಷ್ಯರಲ್ಲಿ ಋಷಿಗಳೂ ಯೋಗಿಗಳೂ ಇರುವಂತೆಯೇ ದೇವತೆಗಳಲ್ಲಿಯೂ ಮಹಾಯೋಗಿಗಳಿರುವರು. ನಾರದನು ಇಂಥ ಯೋಗಿಯು. ಆತನು ಎಲ್ಲಾ ಕಡೆಯಲ್ಲಿಯೂ ಸಂಚಾರ ಮಾಡುತ್ತಿದ್ದನು. ಒಂದು ದಿನ ಆತನು ಒಂದು ಕಾಡಿನಲ್ಲಿ ಹೋಗುತ್ತಿರುವಾಗ ಅಲ್ಲಿ ತಪಸ್ಸು ಮಾಡಿಕೊಂಡಿದ್ದ ಒಬ್ಬ ಮನುಷ್ಯನನ್ನು ನೋಡಿದನು. ಅವನ ಸುತ್ತಲೂ ಗೆದ್ದಲುಗಳು ಹುತ್ತವನ್ನು ಕಟ್ಟಿದ್ದವು. ಅವನು ಎಷ್ಟೋ ದಿನಗಳಿಂದ ತಪಸ್ಸು ಮಾಡುತ್ತ ಅದೇ ಆಸನದಲ್ಲಿ ಕುಳಿತಿದ್ದನು. ಅವನು ನಾರದನನ್ನು ಕುರಿತು "ತಾವು ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದನು. ನಾರದನು ವೈಕುಂಠಕ್ಕೆ ಹೋಗುತ್ತೇನೆಂದು ಹೇಳಲು ಅವನು "ಹಾಗಾದರೆ ನನ್ನ ಮೇಲೆ ದೇವರು ಎಂದು ದಯೆ

1. ಭಗವದ್ಗೀತೆಯ 12 ಅಧ್ಯಾಯದ 13ರಿಂದ 16 ಮತ್ತು 19ನೆ ಶ್ಲೋಕಗಳ ಸಾರವು.

ಮಾಡುವನು? ನನಗೆ ಎಂದು ಮೋಕ್ಷವಾದೀತು? ಇದನ್ನು ತಿಳಿದುಕೊಂಡು ಬನ್ನಿ" ಎಂದು ಹೇಳಿದನು. ಹಾಗೆಯೇ ಆಗಲೆಂದು ನಾರದನು ತನ್ನ ದಾರಿಯನ್ನು ಹಿಡಿದು ಸ್ವಲ್ಪ ದೂರ ಹೋಗುವುದರೊಳಗೇ ಇನ್ನೊಬ್ಬ ಪುರುಷನನ್ನು ಕಂಡನು. ಇವನು ಕುಣಿಯುತ್ತಲೂ, ಹಾಡುತ್ತಲೂ, ನಲಿದಾಡುತ್ತಿದ್ದನು. ಇವನೂ "ನಾರದರೆ ಎಲ್ಲಿಗೆ ಹೋಗುತ್ತೀರಿ?" ಎಂದು ಹುಚ್ಚು ಹುಚ್ಚಾಗಿ ಆಡುತ್ತ ಕೂಗಿ ಕೇಳಿದನು. ನಾರದನು "ವೈಕುಂಠಕ್ಕೆ ಹೋಗುತ್ತಿದ್ದೇನೆ" ಎಂದನು. "ಹಾಗಾದರೆ ನನಗೆಂದು ಮೋಕ್ಷವಾದೀತು? ಕೇಳಿ ಬನ್ನಿ" ಎಂದು ಅವನು ಹೇಳಲು ಹಾಗೆಯೆ ಆಗಲೆಂದು ನಾರದನು ಹೊರಟನು. ಕೆಲವು ಕಾಲದ ಮೇಲೆ ನಾರದನು ಅದೇ ಮಾರ್ಗದಲ್ಲಿ ಬರುತ್ತ ಮೈಮೇಲೆ ಹುತ್ತ ಬೆಳೆಯುವವರೆಗೆ ತಪಸ್ಸು ಮಾಡಿದ್ದವನನ್ನು ಕಂಡನು. "ನಾರದರೆ, ಭಗವಂತನಲ್ಲಿ ನನ್ನ ವಿಚಾರವನ್ನು ಕೇಳಿದಿರೊ?" ಎಂದು ಆತನು ಕೇಳಲು ನಾರದನು "ಆಹಾ, ಕೇಳಿದೆ" ಎಂದನು. "ಆತನು ಏನೆಂದನು?" ಎಂದು ಕೇಳಿದುದಕ್ಕೆ ಉತ್ತರವಾಗಿ ನಾರದನು "ಇನ್ನು ನಾಲ್ಕು ಜನ್ಮಗಳಲ್ಲಿ ನಿನಗೆ ಮೋಕ್ಷವಾಗುವುದೆಂದು ಭಗವಂತನಪ್ಪಣೆಯಾಯಿತು" ಎಂದನು. ಆಗ ಅವನು ಅತ್ತು ಗೋಳಿಡುತ್ತ "ಅಯ್ಯೋ, ಮೈಮೇಲೆ ಹುತ್ತ ಬೆಳೆಯುವವರೆಗೆ ತಪಸ್ಸು ಮಾಡಿದ್ದೇನೆ, ಇನ್ನೂ ನಾಲ್ಕು ಜನ್ಮಗಳನ್ನು ಕಳೆಯಬೇಕೆ?" ಎಂದನು. ನಾರದನು ಎರಡನೆಯವನ ಬಳಿಗೆ ಹೋಗಲು ಅವನು "ನನ್ನ ಪ್ರಶ್ನೆಯನ್ನು ಕೇಳಿದಿರಾ?' ಎಂದನು. "ಕೇಳಿದೆ, ಇಗೊ ಇಲ್ಲಿ ಹುಣಸೆಯ ಮರವಿದೆಯಲ್ಲ, ಇದರಲ್ಲಿ ಎಷ್ಟು ಎಲೆಗಳಿರುವುವೊ ಅಷ್ಟು ಸಲ ಹುಟ್ಟಿದ ಮೇಲೆ ನಿನಗೆ ಮುಕ್ತಿಯಾಗುವುದು" ಎಂದು ನಾರದನು ಹೇಳಿದನು. ಆಗ ಅವನು ಪರಮಾನಂದದಿಮದ ಕುಣಿಯುತ್ತ "ಇಷ್ಟು ಬೇಗನೆ ನನಗೆ ಮುಕ್ತಿಯಾಗುವುದಲ್ಲ!" ಎಂದು ಹಿಗ್ಗಿದನು. ಆ ಕ್ಷಣವೇ "ಅಪ್ಪ, ಮಗೂ, ಇಗೊ ನಿನಗೆ ಈ ಕ್ಷಣವೇ ಮುಕ್ತಿಯಾಗುವುದು" ಎಂದು ಅಶರೀರವಾಣಿಯಾಯಿತು. ಅವನಲ್ಲಿದ್ದ ಸ್ಥಿರಪ್ರಯತ್ನದಿಂದಲೆ ಈ ಫಲವುಂಟಾಯಿತು. ಅವನು ಅಷ್ಟು ಜನ್ಮಗಳಲ್ಲಿಯೂ ಸಾಧನೆ ಮಾಡುವುದಕ್ಕೆ ಸಿದ್ಧನಾಗಿದ್ದನೆ ಹೊರತು ಏತಕ್ಕೂ ಹಿಂಜರಿಯಲಿಲ್ಲ. ಆದರೆ ಮೊದಲನೆಯವನು ಮಾತ್ರ ಹಾಗೆ ಯೋಚಿಸಲಿಲ್ಲ. ಅವನಿಗೆ ನಾಲ್ಕು ಜನ್ಮಗಳೆ ಬಹಳವಾಗಿ ತೋರಿತು. ಎಷ್ಟು ಯುಗಗಳಾದರೂ ನೋಡುವೆನೆಂದು ಆ ಇನ್ನೊಬ್ಬನು ಮಾಡಿದಂಥ ಸ್ಥಿರಪ್ರಯತ್ನದಿಂದ ಮಾತ್ರವೆ ಉತ್ತಮ ಫಲವುಂಟಾಗುವುದು.

# 2ನೇ ಭಾಗ

# ಪತಂಜಲಿಗಳ ಯೋಗಸೂತ್ರಗಳು

## ಖಂಡ–ಅಖಂಡ

### ಪೀಠಿಕೆ

ಯೋಗಸೂತ್ರಗಳನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಒಂದು ಪ್ರಶ್ನೆಯನ್ನು ವಿಚಾರಮಾಡೋಣ. ಮತವೆಂಬುದೇ ಈ ವಿಷಯದ ಆಧಾರದ ಮೇಲೆ ನಿಂತಿರುವುದೆಂದು ಯೋಗಿಗಳು ಹೇಳುವರು. ನಾವು ಒಂದಾನೊಂದು ನಿರುಪಾಧಿಕ[1] ಸ್ಥಿತಿಯಿಂದ ಬಂದಿದ್ದೇವೆಂದೂ ನಾವು ಇನ್ನೂ ಉತ್ತಮ ಸ್ಥಿತಿಗೆ ಹೋಗುತ್ತ ಹೋಗುತ್ತ ಅದೇ ಸ್ಥಿತಿಗೆ ಹೋಗುತ್ತೇವೆಂದೂ ಈ ಪ್ರಪಂಚದಲ್ಲಿರುವ ಮುಖ್ಯ ಪಂಡಿತರುಗಳೆಲ್ಲರೂ ಒಪ್ಪಿದ್ದಾರೆಂದು ತೋರುವುದು. ಭೌತಿಕಶಾಸ್ತ್ರಜ್ಞರ ಪರೀಕ್ಷೆಯಿಂದಲೂ ಇದು ಸಿದ್ಧವಾಗಿರುವುದು. ಹೀಗಿದ್ದ ಮೇಲೆ ನಿರುಪಾಧಿಕ ಸ್ಥಿತಿಯು ಉತ್ತಮವಾದುದೋ ಈಗಿನ ಸೋಪಾಧಿಕ ಸ್ಥಿತಿಯೆ ಉತ್ತಮವೋ ಎಂಬುದೊಂದು ಪ್ರಶ್ನೆ ಹುಟ್ಟುವುದು. ಈಗ ಕಾಣುವ ಸ್ಥಿತಿಯೆ ಉತ್ತಮವೆನ್ನುವ ಜನರೇನೂ ಕಡಿಮೆ ಇಲ್ಲ. ಮಹಾಬುದ್ಧಿಶಾಲಿಗಳೂ ಕೂಡ ನಾವು ಒಂದಾನೊಂದು ಏಕರೂಪವಾದ ವಸ್ತುವಿನ ವ್ಯಕ್ತರೂಪಗಳೆಂದೂ ಹೀಗೆ ವಿವಿಧವಾಗಿ ಪರಿಣಾಮವಾಗಿರುವ ಸ್ಥಿತಿಯೆ ನಿರ್ಭೇದವಾದ ಸ್ಥಿತಿಗಿಂತಲೂ ಅಂದರೆ ನಿರುಪಾಧಿಕವಾದ ಸ್ಥಿತಿಗಿಂತಲೂ ಉತ್ತಮವಾದುದೆಂತಲೂ ಅಭಿಪ್ರಾಯಪಡುವರು. ಈ ನಿರುಪಾಧಿಕ ಸ್ಥಿತಿಯಲ್ಲಿ ಯಾವ ಗುಣವೂ ಇರುವುದಿಲ್ಲವಾದುದರಿಂದ ಅದು ಅಚೇತನವಾದ – ನಿರ್ಜೀವವಾದ–ಜಡರೂಪವೆಂದು ಅವರು ಭಾವಿಸುವರು. ಈ ಕಾರಣದಿಂದ ಸಂಸಾರವೇ ಸುಖವೆಂದೂ ಆದುದರಿಂದ ಇದನ್ನು ನಾವು ಬಿಡದೆ ಅನುಭವಿಸಬೇಕೆಂದೂ ಇವರ ಅಭಿಪ್ರಾಯ. ಇನ್ನು ಮನುಷ್ಯಜೀವಿತದ ವಿಚಾರದಲ್ಲಿ ಇತರರು ಹೇಳಿರುವುದನ್ನು ಮೊದಲು ಕೇಳೋಣ. ಪೂರ್ವಿಕರಲ್ಲಿ ಕೆಲವರು ಮನುಷ್ಯನು ಸತ್ತ ಮೇಲೆ ತಾನು ಇದ್ದಂತೆ ಇರುವನೆಂದೂ ಅವನಲ್ಲಿರುವ ದೋಷಗಳೆಲ್ಲ ಹೋಗಿ ಕೇವಲ ಗುಣಗಳು

---

1. ಯಾವುದಾದರೊಂದು ವಸ್ತುವನ್ನು ಇಷ್ಟೆಂದು ಗೊತ್ತು ಮಾಡುವುದಕ್ಕೆ ಅದಕ್ಕಿರುವ ಸುತ್ತುಗಟ್ಟೆಗೆ ಉಪಾಧಿಯೆಂದು ಹೆಸರು. ಉದಾಹರಣೆ: ಮನಸ್ಸು, ಇಂದ್ರಿಯಗಳು, ದೇಹ ಮೊದಲಾದವು ಒಬ್ಬೊಬ್ಬ ಜೀವನಿಗೂ ಉಪಾಧಿಗಳು. ಸೋಪಾಧಿಕವೆಂದರೆ ಉಪಾಧಿ ಇರುವುದು; ನಿರುಪಾಧಿಕವೆಂದರೆ ಉಪಾಧಿ ಇಲ್ಲದಿರುವುದು.

ಮಾತ್ರ ಶಾಶ್ವತವಾಗಿ ಉಳಿದುಕೊಳ್ಳುವುವೆಂದೂ ಹೇಳುತ್ತಿದ್ದರು. ಇದನ್ನು ಚೆನ್ನಾಗಿ ತಿಳಿಸಿ ಹೇಳಿದರೆ ಇದರ ಅಭಿಪ್ರಾಯವೇನಾಗುವುದೆಂದರೆ, ಮನುಷ್ಯನಿಗೆ ಸಂಸಾರವೇ ಪುರುಷಾರ್ಥವು; ಈ ಸಂಸಾರವನ್ನು ಸ್ವಲ್ಪ ಉತ್ತಮಸ್ಥಿತಿಗೆ ತಂದು ಇದರಲ್ಲಿರುವ ದೋಷಗಳನ್ನೆಲ್ಲ ತೆಗೆದು ಹಾಕಿದರೆ ಅದೇ ಸ್ವರ್ಗವೆಂಬ ಸ್ಥಿತಿಯು. ಈ ಮತವು ಅನಾದರಣೀಯವಾದುದೆಂದೂ ಕೇವಲ ಬಾಲಿಶರಿಗೆ ಯೋಗ್ಯವಾದುದೆಂದೂ ಮೇಲೆಯೇ ಕಾಣುವುದು. ಏಕೆಂದರೆ ಇದು ಸಾಧ್ಯವಲ್ಲ. ಕೆಟ್ಟದ್ದಿಲ್ಲದೆ ಒಳ್ಳೆಯದಿರಲಾರದು; ಒಳ್ಳೆಯದಿಲ್ಲದೆ ಕೆಟ್ಟದ್ದೂ ಇರಲಾರದು. ಸ್ವಲ್ಪವೂ ದೋಷವಿಲ್ಲದೆ ಸಂಪೂರ್ಣ ಗುಣಯುಕ್ತವಾದ ಜಗತ್ತಿನಲ್ಲಿರುವುದೆಂಬುದು ಗಂಧರ್ವ ನಗರದಲ್ಲಿ ಆಗುವ ಸ್ವಪ್ನವು; ಸಂಪೂರ್ಣವಾಗಿ ಅಸಂಭವವಾದುದು. ಈಗಿನ ಕಾಲದಲ್ಲಿ ಅನೇಕರು ಇನ್ನೊಂದಭಿಪ್ರಾಯವನ್ನು ಹೊರತಂದಿರುವರು. ಏನೆಂದರೆ, ಯಾವಾಗಲೂ ಮುಂದುವರಿ– ಯುತ್ತಲೆ ಇರುವುದೇ ಮನುಷ್ಯನ ಸ್ವಭಾವ. ಹೆಚ್ಚು ಹೆಚ್ಚು ಮುಂದಕ್ಕೆ ಹೋಗುತ್ತಲೆ ಇರುವುದು–ಶ್ರಮಪಟ್ಟು ಪ್ರಯತ್ನ ಮಾಡುತ್ತಿರುವುದು–ಎಂದಿಗೂ ಕೊನೆ ಮುಟ್ಟದೆ ಇರುವುದು, ಇದೇ ಮನುಷ್ಯನ ಸ್ವಭಾವ. ಹೀಗೆಂಬ ಮಾತು ನೋಡುವುದಕ್ಕೇನೋ ಬಲು ಚೆನ್ನಾಗಿದೆ. ಆದರೂ ಇದು ಹುಚ್ಚು ಮಾತು. ಹೇಗೆಂದರೆ, ಉದ್ದಕ್ಕೆ ಹೋಗುತ್ತಲೇ ಇರುವುದೆಂಬುದೇ ಸುಳ್ಳು. ಹೋಗುತ್ತ ಹೋಗುತ್ತ ಸುತ್ತಿಕೊಂಡು ವೃತ್ತಾಕಾರವಾಗಿಯೇ ತೀರಬೇಕು. ಒಂದು ಕಲ್ಲನ್ನು ತೆಗೆದುಕೊಂಡು ಅಂತರಿಕ್ಷದಲ್ಲಿ ಒಗೆದರೆ ಅದರ ಚಲನೆಗೆ ಅಡ್ಡಿಮಾಡುವ ಶಕ್ತಿ ವಿಶೇಷಗಳಿಲ್ಲದಿದ್ದರೆ ಅದು ತಕ್ಕಷ್ಟು ಕಾಲವಾದ ಮೇಲೆ ಹೊರಟ ಸ್ಥಳಕ್ಕೇ ಬಂದು ಮುಟ್ಟಬೇಕು. ಒಂದು ಸರಳ ರೇಖೆಯನ್ನು ಅನಂತವಾಗಿ ಎಳೆಯುತ್ತ ಹೋದರೆ ಕೊನೆಗೆ ವೃತ್ತವಾಗಿಯೇ ಪರಿಣಮಿಸಬೇಕು. ಹೀಗಿರುವುದರಿಂದ ಎಂದೆಂದಿಗೂ ನಿಲ್ಲದೆ ಮುಂದಮುಂದಕ್ಕೆ ಎಡೆಬಿಡದೆ ಹೋಗುತ್ತಿರುವುದೇ ಪರಮಪುರುಷಾರ್ಥವೆಂದು ಅವಿವೇಕದ ಮಾತು. ಈಗಿನ ಮಾತಿಗೆ ಸಂಬಂಧಪಡದೆ ಇದ್ದ ಒಂದು ಮಾತನ್ನು ಇಲ್ಲಿ ಪ್ರಸಕ್ತಿಯಿಂದ ಹೇಳುತ್ತೇನೆ. ಯಾವ ಶಕ್ತಿ ವಿಶೇಷವೇ ಆಗಲಿ ವೃತ್ತಾಕಾರವಾಗಿಯೇ ನಡೆಯುವುದೆಂಬುದರಿಂದ ಯಾರನ್ನೂ ಹಗೆಮಾಡಬಾರದು; ಎಲ್ಲರನ್ನೂ ಪ್ರೀತಿಸಬೇಕೆಂಬ ನೀತಿ ತತ್ತ್ವಕ್ಕೆ ಕಾರಣವೂ ತಿಳಿಯುವುದು. ಹೇಗೆಂದರೆ ವಿದ್ಯುಚ್ಛಕ್ತಿ ಮೊದಲಾದ ಶಕ್ತಿ ವಿಶೇಷವು ತನ್ನ ಜನ್ಮ ಸ್ಥಾನವಾದ ಯಂತ್ರದಿಂದ ಹೊರಟು ಆ ಯಂತ್ರಕ್ಕೇ ಬಂದು ಸೇರುವುದೆಂದು ಈಗಿನವರು ಹೇಳುವ ಮಾತು ಜಗತ್ತಿನಲ್ಲಿರುವ ಎಲ್ಲಾ ಶಕ್ತಿ ವಿಶೇಷಗಳಿಗೂ ಅನ್ವಯಿಸುವುದು. ಇವು ತಾವು ಹುಟ್ಟುವ ಸ್ಥಳಕ್ಕೆ ಮತ್ತೆ ಬಂದು ಸೇರಲೇಬೇಕು. ಆದುದರಿಂದ ಯಾರನ್ನೂ ದ್ವೇಷಿಸಬಾರದು. ಏಕೆಂದರೆ ಈ ಹಗೆತನವೆಂಬ ಶಕ್ತಿ ವಿಶೇಷವು ನಿಮ್ಮಿಂದ ಹೊರಟರೆ ಕೊನೆಗೆ ನಿಮ್ಮನ್ನೇ ಸೇರುವುದು. ಇತರರನ್ನು ಪ್ರೀತಿಸಿದರೆ ಅದೂ ಹೀಗೆಯೆ. ಒಂದು ಸುತ್ತು ಪೂರೈಸಿಕೊಂಡು ಮತ್ತೆ ನಿಮ್ಮ ಬಳಿಗೇ ಬರುವುದು. ರಾಗವೇ ಆಗಲಿ ದ್ವೇಷವೇ ಆಗಲಿ ಮನುಷ್ಯನ ಹೃದಯದಿಂದ ಹೊರಟದ್ದು ಪೂರ್ಣವಾಗಿ ಆತನನ್ನೇ ಸೇರುವುದೆಂಬುದನ್ನು ಎಷ್ಟು ಖಂಡಿತವೆಂದರೂ ತೀರದು. ಇದನ್ನು ಯಾರೂ ತಪ್ಪಿಸಲಾರರು. ಇದೂ ಅಲ್ಲದೆ ಎಂದೆಂದಿಗೂ ಅಭಿವೃದ್ಧಿಯಾಗುತ್ತಲೆ ಇರುವುದೆಂಬ ಸಿದ್ಧಾಂತವು ಯುಕ್ತವಲ್ಲವೆಂಬುದಕ್ಕೆ ಇನ್ನು

1. (Dynamo) ಡೈನಾಮೊ ಎಂಬ ಯಂತ್ರದಿಂದ ವಿದ್ಯುಚ್ಛಕ್ತಿಯ ಪ್ರವಾಹವನ್ನು ಹುಟ್ಟಿಸುವರು. ಸಾಮಾನ್ಯವಾಗಿ ಈ ಯಂತ್ರದಲ್ಲಿ ತಾಮ್ರದ ತಂತಿಗಳ ಸಿಂಬೆಗಳನ್ನು ಉಪಯೋಗಿಸುವರು. ತಂತಿಯ ಮೂಲಕ ಹೊರಟ ಶಕ್ತಿಯು ವೃತ್ತಾಕಾರವಾಗಿ ಪ್ರವಹಿಸಿ ಹೊರಟ ಸ್ಥಾನಕ್ಕೆ ಬರುವುದೆಂದು ಹೇಳುವರು.

ಕೆಲವು ವಿಶೇಷ ಕಾರಣಗಳುಂಟು. ಹೇಗೆಂದರೆ – ಈ ಜಗತ್ತಿನಲ್ಲಿ ಪ್ರತಿಯೊಂದೂ ಕೊನೆಗೆ ನಾಶವಾಗುತ್ತಿರುವುದು. ನಮ್ಮ ಪ್ರಯತ್ನಗಳೂ, ಆಸೆಗಳೂ, ಹೆದರಿಕೆಗಳೂ, ಸಂತೋಷಗಳೂ ಕೊನೆಗೆ ನಾಶವಾಗುವುವು. ಇದೇನೋ ಕಡುಖಂಡಿತವಾದ ಮಾತು. ಹೀಗಾದ ಮೇಲೆ ಈ ಕೊನೆಯಿಲ್ಲದ ಅಭಿವೃದ್ಧಿಯು ಸರಳರೇಖೆಯಂತೆಯೇ ಉದ್ದಕ್ಕೆ ಹೋಗುತ್ತಿರುವುದೆಂಬುದು ಎಲ್ಲಿಯ ಮಾತು? ಎಲ್ಲೆಲ್ಲಿ ನೋಡಿದರೂ ಪದಾರ್ಥಗಳು ಕೆಲವು ದೂರ ಹೋಗಿ ತಾವು ಹೊರಟು ಬಂದ ಸ್ಥಾನವನ್ನೇ ಮತ್ತೆ ಸೇರುತ್ತಿರುವುದೇ ಕಾಣುತ್ತಿರುವುದು. ದೃಷ್ಟಾಂತಕ್ಕೆ[1] ತೇಜೋಮಂಡಲದಿಂದ ಸೂರ್ಯಚಂದ್ರನಕ್ಷತ್ರಗಳು ಆಗಿರುವವಷ್ಟೆ. ಇವೆಲ್ಲ ಕೊನೆಗೆ ತೇಜೋಮಂಡಲದಲ್ಲಿಯೇ ಲಯವಾಗುವುವು. ಎಲ್ಲೆಲ್ಲಿಯೂ ಹೀಗೆಯೇ ನಡೆಯುತ್ತಿರುವುದು. ಗಿಡವು ಬೆಳೆಯುವುದಕ್ಕೆ ಭೂಮಿಯ ಸಾರವನ್ನು ಗ್ರಹಿಸುವುದು; ಕೊನೆಗೆ ಲಯವಾಗಿ ಅದನ್ನು ಭೂಮಿಗೆ ಕೊಡುವುದು. ಈ ಜಗತ್ತಿನಲ್ಲಿರುವ ಒಂದೊಂದು ಆಕಾರ ವಿಶೇಷವೂ ಸುತ್ತಲಿರುವ ಅಣುಗಳಿಂದ[2] ಹುಟ್ಟಿ ಕೊನೆಗೆ ಆ ಅಣುಗಳಲ್ಲಿಯೆ ಲಯವಾಗುವುದು. ಒಂದು ನಿಯಮವು ಒಂದೊಂದು ಕಡೆ ಒಂದೊಂದು ತೆರನಾಗಿದ್ದೀತೆ? ಇಲ್ಲ. ಏಕೆಂದರೆ ನಿಯಮವೆಂದ ಮೇಲೆ ಅದು ಒಂದೇ ರೀತಿಯಾಗಿರುವುದೆಂಬುದು ಖಂಡಿತ. ಈಗ ಮೇಲೆ ಹೇಳಿದ ಸಂಗತಿಯು ಜಗತ್ತಿನ ನಿಯಮವಾದ ಮೇಲೆ ಆಲೋಚನೆಯ ವಿಷಯದಲ್ಲಿಯೂ ಅದೇ ನಿಯಮವಿದ್ದೇ ಇರಬೇಕು. ಇದು ತನ್ನ ಜನ್ಮಸ್ಥಾನಕ್ಕೆ ಲಯವಾಗಿ ಸೇರಲೇಬೇಕು. ಆದುದರಿಂದ ನಮಗೆ ಇಷ್ಟವಿರಲಿ, ಇಲ್ಲದಿರಲಿ ನಮ್ಮ ಜನ್ಮ ಸ್ಥಾನವನ್ನು ಸೇರಲೇಬೇಕಾಗಿರುವುದು. ಇದನ್ನೇ ದೇವರು ಅಥವಾ ನಿರುಪಾಧಿಕ ಸ್ಥಿತಿಯೆನ್ನುವರು. ನಾವೆಲ್ಲರೂ ದೇವರಿಂದ ಬಂದಿದ್ದೇವೆ; ದೇವರನ್ನೇ ಸೇರಬೇಕು. ಆ ದೇವರಿಗೆ ಯಾವ ಹೆಸರು ಬೇಕಾದರೂ ಇಟ್ಟುಕೊಳ್ಳಿ. ದೇವರೆಂದಾರೂ, ನಿರುಪಾಧಿಕವೆಂದಾದರೂ, ಪ್ರಕೃತಿಯೆಂದಾದರೂ, ಏನಾದರೂ ಹೆಸರಿಡಿರಿ. ಇರುವ ಸಂಗತಿಯೇನೋ ಒಂದೇ ರೂಪಾಗಿರುವುದು. ದೇವರು ವೇದದಲ್ಲಿ ಸಾರಿ ಹೇಳಿರುವಂತೆ ಅದೇ ರೂಪದಲ್ಲಿಯೇ ಇರುವನು. "ಈ ಜಗತ್ತೆಲ್ಲ ಯಾವನಿಂದ ಬರುವುದೋ, ಹುಟ್ಟಿದುದೆಲ್ಲ ಯಾವನಲ್ಲಿ ಜೀವಿಸಿರುವುದೋ, ಜೀವಿಸಿರುವುದೆಲ್ಲ, ಯಾವನನ್ನೇ ಸೇರುವುದೋ ಅವನೇ ದೇವರು. ಇದೊಂದು ವಿಷಯವೇನೋ ಖಂಡಿತ. ಜಗತ್ತಿನ ವ್ಯಾಪಾರವು ಒಂದೇ ಬಗೆಯಾಗಿರುವುದು. ಒಂದು ಕಡೆ ನಡೆಯುತ್ತಿರುವುದೇ ಕೋಟ್ಯನುಕೋಟಿ ಪ್ರದೇಶಗಳಲ್ಲಿ ನಡೆಯುತ್ತಿರುವುದು. ಗ್ರಹಗಳ ವಿಚಾರದಲ್ಲಿ ನಡೆಯುವುದೇ ಭೂಮಿಯ ವಿಷಯದಲ್ಲಿಯೂ ಜನರ ವಿಷಯದಲ್ಲಿಯೂ ನಕ್ಷತ್ರಗಳ ವಿಷಯದಲ್ಲಿಯೂ ನಡೆಯುತ್ತಿರುವುದು. ದೊಡ್ಡ ತರಂಗವೆಂಬುದು ಕೋಟ್ಯನುಕೋಟಿ ಸಣ್ಣ ತೆರೆಗಳ ಸಂಯೋಗದಿಂದಾಗಿರುವುದು. ಹೀಗೆಯೆ ಜಗತ್ತಿನ ಜೀವನವೆಲ್ಲವೂ ಸಣ್ಣ ಸಣ್ಣ ಜೀವಗಳು ಕೋಟಿಗಟ್ಟಲೆ ಸೇರಿ ಆಗುವುದು. ಇದರಂತೆ ಈ ಇಡೀ ಜಗತ್ತಿನ ನಾಶವೆಂದರೆ ಕೋಟ್ಯನುಕೋಟಿ ಸಣ್ಣ ಪ್ರಾಣಿಗಳ ಸಾವು ಸೇರಿ ಆಗುವುದು.

---

1. ಈಗಿನ ಸೌರವ್ಯೂಹವು ಮೊದಲು ಕೇವಲ ತೇಜೋಮಯವಾಗಿತ್ತೆಂತಲೂ ಇದರಿಂದ ಈಗಿನ ಗ್ರಹಗಳು ಉಪಗ್ರಹಗಳು ಒಂದೊಂದಾಗಿ ಹುಟ್ಟಿವೆಯೆಂದೂ ಪಾಶ್ಚಾತ್ಯ ಜ್ಯೋತಿಷ್ಕರ ಮತವಿರುವುದು.

2. ಈ ಸಿದ್ಧಾಂತವು ವೈಶೇಷಿಕ ಮತಕ್ಕೆ ಅನುಸಾರವಾಗಿರುವುದಲ್ಲದೆ ಈಗಿನ ಭೌತಿಕ ಶಾಸ್ತ್ರಕ್ಕೂ ಅನುಗುಣವಾಗಿರುವುದು.

ಈಗ ದೇವರನ್ನು ಮತ್ತೆ ಸೇರುವುದು ಈಗಿನ ಸ್ಥಿತಿಗಿಂತ ಉತ್ತಮವೊ ಅಲ್ಲವೊ? ಎಂಬ ಪ್ರಶ್ನೆ ಹುಟ್ಟುವುದು. ಯೋಗಶಾಸ್ತ್ರಜ್ಞರು ಅದು ನಿಜವಾಗಿಯೂ ಉತ್ತಮವಾದುದೇ ಸರಿಯೆಂದು ಒತ್ತಿ ಹೇಳುತ್ತಿರುವರು. ಮನುಷ್ಯನು ಈಗ ಮೊದಲಿಗಿಂತ ಹೀನಸ್ಥಿತಿಗೆ ಬಂದಿದ್ದಾನೆಂದೂ ಮೊದಲಿಗಿಂತ ಮನುಷ್ಯನು ಉತ್ತಮಸ್ಥಿತಿಗೆ ಬಂದಿದ್ದಾನೆಂದೂ ಹೇಳುವ ಮತವು ಈ ಲೋಕದಲ್ಲಿ ಒಂದೂ ಇಲ್ಲವೆಂದೂ ಇವರು ಹೇಳುವರು. ಇವರ ಅಭಿಪ್ರಾಯವೇನೆಂದರೆ:– ಮೊದಲು ಮನುಷ್ಯನು ಸಂಪೂರ್ಣವಾಗಿಯೂ ಪರಿಶುದ್ಧನಾಗಿಯೂ ಇರುತ್ತಾನೆ. ಆಮೇಲೆ ಕೆಡುತ್ತ ಕೆಡುತ್ತ ಇನ್ನು ಹೆಚ್ಚು ಕೆಡುವುದಕ್ಕಾಗದಷ್ಟು ಮಟ್ಟಿಗೆ ಕೆಟ್ಟಮೇಲೆ ಕೊನೆಗೆ ಉತ್ತಮ ಸ್ಥಿತಿಗೆ ಹೊರಡುವ ಕಾಲ ಬರುವುದು. ಹೀಗೆ ಅವನು ಒಂದು ಸುತ್ತು ಪೂರೈಸುತ್ತಾನೆ. ಮೇಲೆ ಹೇಳಿದ ಸುತ್ತಿನ ಸಂಚಾರವು ಇಲ್ಲಿಯೂ ಇರಲೇಬೇಕು. ಮನುಷ್ಯನು ಎಷ್ಟೇ ಕೀಳುಸ್ಥಿತಿಗೆ ಇಳಿಯಲಿ ಮೇಲುಗಡೆಗೆ ಹೋಗುವುದಕ್ಕೆ ತಿರುಗಿಕೊಳ್ಳಲೇಬೇಕು. ಮೊದಲಿನ ಸ್ಥಾನವಾದ ದೇವರ ಬಳಿಗೆ ಹೋಗಲೇಬೇಕು. ಮನುಷ್ಯನು ಮೊದಲು ದೇವರಿಂದ ಬರುತ್ತಾನೆ; ನಡುವೆ ಮನುಷ್ಯನೆನಿಸಿ ಕೊಳ್ಳುತ್ತಾನೆ; ಕೊನೆಗೆ ದೇವರನ್ನು ಸೇರುತ್ತಾನೆ. ಇದು ದ್ವೈತ ರೀತಿಯಿಂದ ಹೇಳಿದ ಮಾತು. ಅದ್ವೈತದಂತೆ ಮನುಷ್ಯನು ಈಗಲೂ ದೇವರೆ ಆಗಿದ್ದಾನೆ; ಕೊನೆಗೂ ದೇವರನ್ನೇ ಸೇರುತ್ತಾನೆ. ಈಗಿನ ಸ್ಥಿತಿಯು ಮೊದಲಿಗಿಂತ ಉತ್ತಮವಾದುದಾದರೆ ಇದರಲ್ಲಿ ಇಷ್ಟು ಭಯವೂ ಸಂಕಟವೂ ಇರುವುದೇತಕ್ಕೆ? ಯಾವುದು ಕೆಡಿಸಿ ಹಾಳು ಮಾಡುವುದೋ ಅದು ಎಂದಿಗೂ ಉತ್ತಮವಾದ ಸ್ಥಿತಿಯಾಗಲಾರದು. ಅಂದ ಮೇಲೆ ಈ ಸ್ಥಿತಿಯು ಎಷ್ಟು ಪೈಶಾಚಿಕ ಸ್ವಭಾವವುಳ್ಳದ್ದಾಗಿ ಇಷ್ಟು ಅನುಪಯೋಗವಾಗಿ ಇರುವುದಕ್ಕೆ ಕಾರಣವೇನು? ಅದರಲ್ಲಿದ್ದು ಅದಕ್ಕಿಂತ ಉತ್ತಮಸ್ಥಿತಿಗೆ ಹೋಗಬೇಕಾಗಿದ್ದರೆ ಮಾತ್ರ ಒಂದು ವೇಳೆ ಒಪ್ಪಬಹುದು. ಮತ್ತೆ ಉತ್ತಮಸ್ಥಿತಿಗೆ ಹೋಗುವುದಕ್ಕೆ ಈ ಸ್ಥಿತಿಯನ್ನು ನಾವು ಹೊಕ್ಕು ಹೋಗಬೇಕಾಗಿರುವುದು. ನೆಲಕ್ಕೆ ಬೀಜವನ್ನು ಹಾಕಿದರೆ ಅದು ಒಡೆದು ಲಯವಾಗುವುದು. ಕೊನೆಗೆ ಆಲಯದಿಂದಲೆ ಸೊಗಸಾದ ಮರವುಂಟಾಗುವುದು. ಹೀಗೆ ಪ್ರತಿಯೊಂದು ಆತ್ಮವು ಮುಂದೆ ಮಹಾವೃಕ್ಷವಾಗುವುದಕ್ಕೆಂದೇ ಈಗಿನ ಕೀಳುಸ್ಥಿತಿಗೆ ಬಂದಿರುವುದು. ಆದುದರಿಂದ ಮಾನುಷವೆಂದು ನಾವು ಕರೆಯುವ ಈಗಿನ ಸ್ಥಿತಿಯನ್ನು ನಾವು ಎಷ್ಟು ಬೇಗ ಬಿಟ್ಟು ಹೊರಟರೆ ಅಷ್ಟು ಒಳ್ಳೆಯದು. ಹಾಗಾದರೆ ಈ ಸ್ಥಿತಿಯನ್ನು ಬಿಡುವುದಕ್ಕೆ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೊ? ಎಂದಿಗೂ ಕೂಡದು. ಅದರಿಂದ ನಮಗೆ ಇನ್ನೂ ತೊಂದರೆಯೆ ಆಗುವುದು. ದೇಹದಂಡನೆ ಮಾಡಿಕೊಳ್ಳುವುದೇ ಆಗಲಿ, ಪ್ರಪಂಚವನ್ನು ಬಯ್ಯುವುದೇ ಆಗಲಿ, ಈ ಸ್ಥಿತಿಯಿಂದ ಮುಂದಕ್ಕೆ ಹೋಗುವುದಕ್ಕೆ ಉಪಾಯವಲ್ಲ. ಈ ದುಃಖವೆಂಬ ಪರೆಯಲ್ಲಿದ್ದು ಆಮೇಲೆ ಅದನ್ನು ಬಿಟ್ಟು ಹೋಗಬೇಕಾಗಿರುವುದು. ಎಷ್ಟು ಬೇಗ ಬಿಟ್ಟು ಹೋದರೆ ಅಷ್ಟು ಒಳ್ಳೆಯುದು. ಆದರೆ ಈ ಸ್ಥಿತಿಯು ಅತ್ಯಂತೋತ್ತಮವಾದ ಸ್ಥಿತಿಯಲ್ಲವೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು.

# ನಮೋ ಯೋಗೇಶ್ವರಾಯ

# ಸಮಾಧಿಪಾದ

**1. ಅಥ ಯೋಗಾನುಶಾಸನಮ್**

**ಟೀ॥ ಇನ್ನು ಯೋಗವನ್ನು ವಿವರಿಸುತ್ತದೆ**

**2. ಯೋಗಶ್ಚಿತ್ತವೃತ್ತಿನಿರೋಧಃ**

**ಟೀ॥ ಯೋಗವೆಂದರೆ ಚಿತ್ತವು ಬೇರೆ ಬೇರೆ (ವೃತ್ತಿಗಳೆಂಬ) ರೂಪಗಳನ್ನು ಹೊಂದದಂತೆ ತಡೆಯುವುದು.**

ವಿ॥ ಇಲ್ಲಿ ಬಹಳ ವಿವರಣೆಯು ಅವಶ್ಯವಾಗಿರುವುದು. ಚಿತ್ತವೆಂದರೇನು? ಇದರ ವೃತ್ತಿಗಳೆಂದರೆ ಯಾವುವು? ಎಂಬುದನ್ನು ತಿಳಿದುಕೊಳ್ಳಬೇಕು. ಕಣ್ಣುಗಳಿವೆಯಷ್ಟೆ. ತಲೆಯಲ್ಲಿರುವ ಮೆದುಳಿನ ಸ್ಥಾನ ವಿಶೇಷವನ್ನು ತೆಗೆದುಬಿಟ್ಟರೆ ಬರೀ ಕಣ್ಣುಗಳೇ ನೋಡಲಾರವು. ಕಣ್ಣುಗಳೇನೋ ಅಲ್ಲಿಯೇ ಇರುತ್ತವೆ; ಗುಡ್ಡೆಯೂ ಸರಿಯಾಗಿಯೇ ಇರುತ್ತದೆ; ಆದರೆ ಮೇಲೆ ವಸ್ತುಗಳ ಪ್ರತಿಬಿಂಬವೂ ಬೀಳುತ್ತದೆ. ಆದರೂ ಕಣ್ಣಿಗೆ ವಸ್ತು ಕಾಣುವುದಿಲ್ಲ. ಆದುದರಿಂದ ಕಣ್ಣುಗಳು ಅಮುಖ್ಯಸಾಧನಗಳೇ ಹೊರತು ನಿಜವಾದ ಚಕ್ಷುರಿಂದ್ರಿಯಗಳೆನಿಸುವುದಿಲ್ಲ. ನಿಜವಾದ ದರ್ಶನೇಂದ್ರಿಯವು ಮೆದುಳಿನಲ್ಲಿರುವ ನರಗಳ ಸ್ಥಾನವಿಶೇಷದಲ್ಲಿರುವುದು. ಅದಿಲ್ಲದಿದ್ದರೆ ಬರೀ ಎರಡು ಕಣ್ಣುಗಳೇ ದೃಷ್ಟಿಗೆ ಸಾಕಾಗುವುದಿಲ್ಲ. ಇನ್ನು ಕೆಲವು ವೇಳೆಗಳಲ್ಲಿ ಒಬ್ಬೊಬ್ಬರು ಕಣ್ಣುಗಳನ್ನು ತೆರೆದುಕೊಂಡೇ ನಿದ್ದೆ ಮಾಡುವುದುಂಟು. ಆಗ ಪ್ರಕಾಶದ ಪ್ರತಿಬಿಂಬವೂ ಮೆದುಳಿನ ಸ್ಥಾನವಿಶೇಷವೂ ಇರುತ್ತಿದ್ದರೂ ಅವರಿಗೆ ಕಾಣಿಸುವುದಿಲ್ಲ. ಏಕೆಂದರೆ, ನೋಡುವುದಕ್ಕೆ ಇನ್ನೊಂದು ಸಂಗತಿಯು ಅಗತ್ಯ. ಅದೇನೆಂದರೆ ಮನಸ್ಸಿಗೂ ಇಂದ್ರಿಯಕ್ಕೂ ಸಂಯೋಗವಾಗಿರಬೇಕು. ಹೀಗೆ ಪ್ರತಿಯೊಂದು ನೋಟದಲ್ಲಿಯೂ ಕಣ್ಣು ಎಂಬ ಹೊರಗಣ ಗೋಳಕವು ಮೆದುಳಿನ ಸ್ಥಾನವು ಮತ್ತು ಮನಸ್ಸಿನ ಕಾರ್ಯವೂ ಈ ಮೂರೂ ಅವಶ್ಯವಾಗಿರಬೇಕು. ಗಾಡಿಗಳು ಬೀದಿಯಲ್ಲಿ ದಡದಡನೆ ಹೋಗುತ್ತಿದ್ದರೂ ನಾವು ಯಾತರಲ್ಲಾದರೂ ಮನಸ್ಸಿಟ್ಟುಕೊಂಡಿದ್ದರೆ ಅವುಗಳ ಸದ್ದೇ ಕೇಳಿಸುವುದಿಲ್ಲ. ಏಕೆ? ಏಕೆಂದರೆ

ಆಗ ಮನಸ್ಸು ಕೇಳುವ ಇಂದ್ರಿಯಕ್ಕೆ ಸೇರಿರಲಿಲ್ಲ. ಹೀಗೆ ಪ್ರತಿಯೊಂದು ಇಂದ್ರಿಯ ಜ್ಞಾನಕ್ಕೂ ಇಂದ್ರಿಯ ಸಾಧನವೊಂದು, ಇಂದ್ರಿಯವೊಂದು, ಇವೆರಡಕ್ಕೆ ಮನಸ್ಸು ಸಂಯೋಗವಾಗುವುದೊಂದು, ಹೀಗೆ ಈ ಮೂರೂ ಇರಲೇಬೇಕಾಯಿತು. ಮನಸ್ಸು ಮೊದಲು ವಸ್ತುವನ್ನು ಗ್ರಹಿಸಿ ಒಳಕ್ಕೆ ಆಗ್ರಹಣೆಯನ್ನು ನಿಶ್ಚಯಿಸುವ ಶಕ್ತಿಯಾದ ಬುದ್ಧಿಯ ವಶಕ್ಕೆ ಒಪ್ಪಿಸುವುದು. ಆಗ ಅದರ ಪ್ರತಿಕ್ರಿಯೆ ನಡೆಯುವುದು. ಈ ಪ್ರತಿಕ್ರಿಯೆ ನಡೆಯುವಾಗ ನಾನೆಂಬ ಬುದ್ಧಿ ಹುಟ್ಟುವುದು. ಆಮೇಲೆ ಈ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಸೇರಿದ ಒಟ್ಟು ಪುರುಷನನ್ನು ಎಂದರೆ ಆತ್ಮನನ್ನು ಸೇರುವುದು. ಈ ಪುರುಷನು ಪ್ರತಿಯೊಂದು ವಸ್ತುವನ್ನೂ, ಈ ಮಿಶ್ರ ಸ್ಥಿತಿಯಲ್ಲಿಯೇ ನೋಡುವನು. ಇಂದ್ರಿಯಗಳು, ಮನಸ್ಸು, ಬುದ್ಧಿ, ನಾನೆಂಬ ಅಹಂಕಾರ, ಇವೆಲ್ಲದರ*1 ಒಟ್ಟಿಗೆ ಅಂತಃಕರಣ (ಒಳಗಣ ಸಾಧನ) ಎಂದು ಹೆಸರು. ಮನಸ್ಸು, ಬುದ್ಧಿ, ಅಹಂಕಾರ ಇವು ಚಿತ್ತವೆಂಬುದರ ಬೇರೆ ಬೇರೆ ಕಾರ್ಯಗಳು. ಚಿತ್ತದಲ್ಲಿರುವ ಆಲೋಚನೆಗಳೆಂಬ ತೆರೆಗಳನ್ನೆ ವೃತ್ತಿ*2 ಗಳೆನ್ನುತ್ತಾರೆ. ಇನ್ನು ಆಲೋಚನೆಯೆಂದರೇನು? ಇದು ಆಕರ್ಷಣ. ಅಥವಾ ವಿಕ್ಷೇಪಣ [1], ಮೊದಲಾದವುಗಳಂತೆ ಒಂದು ಶಕ್ತಿ ವಿಶೇಷವು. ಈ ಶಕ್ತಿ ವಿಶೇಷವನ್ನು ಶಕ್ತಿಯ ದೊಡ್ಡ ತವರು ಮನೆಯಾದ ಜಗತ್ತಿನಿಂದ ನಾವು ತೆಗೆದುಕೊಂಡಿದ್ದೇವೆ. ಈ ಜಾತಿಯ ಶಕ್ತಿಯನ್ನು ಚಿತ್ತವೆಂಬ ಕರಣವು ಗ್ರಹಿಸಿಕೊಳ್ಳುವುದು. ಅದು ಚಿತ್ತದಿಂದ ಹೊರಕ್ಕೆ ಹೊರಟರೆ ಆಲೋಚನೆಯೆನಿಸುವುದು. ಈ ಶಕ್ತಿಯು ಆಹಾರದಿಂದಲೆ ನಮ್ಮನ್ನು ಸೇರುವುದು. ಆಹಾರದಿಂದ ಶರೀರಕ್ಕೆ ಚಲನೆ ಮೊದಲಾದ ಶಕ್ತಿಗಳು ಬರುವಂತೆಯೇ ಇದರಿಂದಲೇ ಇನ್ನೂ ಸೂಕ್ಷ್ಮ ಶಕ್ತಿ ವಿಶೇಷಗಳು ಆಗಿ ಆಲೋಚನೆಯೆನಿಸಿಕೊಳ್ಳುವುವು. ಹೀಗಿರುವುದರಿಂದ ಮನಸ್ಸು ನಿಜವಾಗಿ ಚೈತನ್ಯವುಳ್ಳದ್ದಲ್ಲ; ಆದರೂ ಚೈತನ್ಯದಂತೆ ಕಾಣುತ್ತಿರುವುದು. ಏಕೆಂದರೆ, ಚೈತನ್ಯರೂಪವಾದ ಆತ್ಮವು ಇದಕ್ಕೆ ಆಧಾರವಾಗಿರುವುದು. ನೀವು ಮಾತ್ರ ಚೇತನ ಸ್ವರೂಪರು. ನಿಮ್ಮ ಮನಸ್ಸೆಂಬುದು ಹೊರಗಣ ಜಗತ್ತನ್ನು ಗ್ರಹಿಸುವ ಸಾಧನವೇ ಹೊರತು ಮತ್ತೇನೂ ಅಲ್ಲ. ಇಗೊ, ಇದೊಂದು ಪುಸ್ತಕ. ಇದು ಪುಸ್ತಕರೂಪದಲ್ಲಿ ಹೊರಗೆ ಇರುವುದಿಲ್ಲ; ಹೊರಗೆ ಇರುವುದೆಂಬುದು ಗೊತ್ತಾಗಿಯೂ ಇಲ್ಲ; ಗೊತ್ತಾಗುವುದೂ ಇಲ್ಲ. ಅದು ಮನಸ್ಸಿಗೆ ತಗಲುವಂತೆ ಕೊಡುವ ಒಂದು ಸೂಚನೆಯ ರೂಪದಲ್ಲಿರುವುದು. ನೀರಿನ ಮೇಲೆ ಕಲ್ಲೆಸೆದರೆ ನೀರು ಆ ಕಡೆಗೆ ತೆರೆ ತೆರೆಗಳಾಗಿ ಹೋಗುವಂತೆ ಈ ಹೊರಗಣ ಸೂಚನೆಯು ತಗಲುತ್ತಲೆ ಮನಸ್ಸಿನಲ್ಲಿಯೂ ಒಂದು ಪ್ರತಿಕ್ರಿಯೆಯಾಗುವುದು. ನಿಜವಾದ ಜಗತ್ತೆಂಬುದು ಈ ರೀತಿಯಲ್ಲಿ ಮನಸ್ಸಿನ ಪ್ರತಿಕ್ರಿಯೆಗೆ ಕಾರಣವಾಗಿರುವುದು. ಪುಸ್ತಕರೂಪವಾಗಲಿ, ಆನೆಯ ರೂಪವಾಗಲಿ, ಮನುಷ್ಯನ ರೂಪವಾಗಲಿ ಹೊರಗಡೆ ಇರುವುದಿಲ್ಲ. ಇವುಗಳ ವಿಷಯದಲ್ಲಿ ಗೊತ್ತಾಗಿರುವುದು ಹೊರಗಣ ಸೂಚನೆಯಿಂದಾದ ನಮ್ಮ ಮನಸ್ಸಿನ ಪ್ರತಿಕ್ರಿಯೆಯೇ ಹೊರತು ಮತ್ತೇನೂ ಅಲ್ಲ. ಆದುದರಿಂದ

1. ಪ್ರಪಂಚದಲ್ಲಿ ಎಲ್ಲಾ ವಸ್ತುಗಳೂ ಪ್ರತಿಬಂಧಕವಾವುದೂ ಇಲ್ಲದಿದ್ದರೆ ಒಂದನ್ನೊಂದು ಸಮೀಪಿಸುವುದೆಂದು ಭೌತಿಕ ಶಾಸ್ತ್ರಜ್ಞರು ಹೇಳುವರು. ಹೀಗೆ ಸಮೀಪಿಸುವ ಶಕ್ತಿಗೆ ಆಕರ್ಷಣ ಶಕ್ತಿಯೆಂದು ಹೆಸರು. ಕೆಲವು ಸಂದರ್ಭಗಳಲ್ಲಿ ವಸ್ತುಗಳು ಅಥವಾ ಅವುಗಳ ಕಣಗಳು ಪರಸ್ಪರ ದೂರವಾಗುವುವು. ಹಾಗೆ ಮಾಡುವ ಶಕ್ತಿ ವಿಶೇಷಕ್ಕೆ ವಿಕ್ಷೇಪವೆಂದು (Repulsion) ಹೆಸರು.

*1. ಗುಂಪಿಗೆ *2 ಒಂದು ರೀತಿಯಲ್ಲಿ ಸುಳಿಗಳು.

"ಪದಾರ್ಥವೆಂದರೆ ಜ್ಞಾನವನ್ನುಂಟುಮಾಡುವುದಕ್ಕೆ ಇರುವ ಶಾಶ್ವತವಾದ ನಿಮಿತ್ತವು" ಎಂದು ಜಾನ್ ಸ್ಟ್ಯೂಅರ್ಟ್ ಮಿಲ್ ಎಂಬುವರು ಕೊಟ್ಟಿರುವ ಲಕ್ಷಣವು ಯುಕ್ತವೇ ಆಗಿರುವುದು. ಹೊರಗೆ ಇರುವುದು ಕೇವಲ ಸೂಚನೆಯು. ಮುತ್ತಿನ ಮೀನು ಮುತ್ತು ಮಾಡುವುದಷ್ಟೆ. ಮೊದಲು ಒಂದು ಮರಳಿನ ಕಾಳೊ ಅಥವಾ ಇನ್ನಾವ ವಸ್ತುವಿನ ಕಣವೊ ಇದರೊಳಕ್ಕೆ ಸೇರಿಕೊಳ್ಳುವುದು. ಇದರಿಂದ ಆ ಜಂತುವಿನ ಶರೀರದಲ್ಲಿ ನವೆ ಹತ್ತಿ ಆ ಮರಳಿನ ಸುತ್ತಲೂ ಒಂದು ಬಗೆಯ ಥಳಥಳಿಸುವ ಕಲಾಯುವೊಂದು ಕಟ್ಟಿಕೊಳ್ಳುವುದು. ಇದರಿಂದ ಮುತ್ತಾಗುವುದು. ನಮಗೆ ಕಾಣಿಸುವ ಜಗತ್ತು ನಮ್ಮ ನಮ್ಮ ಕಲಾಯದಿಂದಲೆ ಆಗಿರುವುದು. ಆ ಜಗತ್ತನ್ನು ನೋಡುವುದಕ್ಕೆ ನಿಜವಾದ ಕಾರಣವಾದ ಪದಾರ್ಥವು ಮುತ್ತಿನ ಮೀನಿನೊಳಗಣ ಮರಳಿನ ಕಾಳಿನಂತೆ ನಾವು ಮಾಡಿರುವ ಕಲಾಯದೊಳಗಡೆ ಇರುವುದು. ಸಾಮಾನ್ಯ ಮನುಷ್ಯನಿಗೆ ಇದು ಎಂದಿಗೂ ತಿಳಿಯುವುದಿಲ್ಲ. ಏಕೆಂದರೆ, ಅವನು ಅದನ್ನು ಅರಿಯುವುದಕ್ಕೆ ಯತ್ನಿಸುವ ಕಾಲದಲ್ಲಿ ತನ್ನ ಕಲಾಯವನ್ನು ಹಾಕುತ್ತಾನೆ. ಆದುದರಿಂದ ಆ ಕಲಾಯವೇ ಇವನಿಗೆ ಕಾಣುವುದು. ಈಗ ವೃತ್ತಿಗಳೆಂದರೇನೆಂಬುದನ್ನು ತಿಳಿದುಕೊಳ್ಳಬಹುದು. ಮನುಷ್ಯನೆಂಬುವನು ಮನಸ್ಸಿಗೆ ಆಧಾರವಾಗಿರುವನು. ಮನಸ್ಸೆಂಬುದು ಅವನ ಕೈಯೊಳಗಣ ಕೇವಲ ಸಾಧನವಿಶೇಷವು. ಆ ಮನಸ್ಸಿನೊಳಗೆ ಯಾವಾಗಲೂ ಜಿನುಗುತ್ತಿರುವುದು ಆತನ ಚೈತನ್ಯವೆ. ಪುರುಷನು ಅದಕ್ಕೆ ಆಧಾರನಾಗಿದ್ದರೆ ಮಾತ್ರ ಮನಸ್ಸು ಚೈತನ್ಯ ರೂಪವಾಗಿರುವುದು. ಪುರುಷನು ಇದನ್ನು ಕೈಬಿಟ್ಟರೆ ಕೂಡಲೆ ಅದು ತುಮರುತುಮರಾಗಿ ನಾಶವಾಗುವುದು. ಹೀಗೆ ಚಿತ್ತವೆಂದರೇನೆಂಬುದು ಗೊತ್ತಾಯಿತಷ್ಟೆ. ಚಿತ್ತವೆಂದರೆ ಮನೋದ್ರವ್ಯ. ವೃತ್ತಿಗಳೆಂದರೆ ಹೊರಗಣ ನಿಮಿತ್ತಗಳು ಅದಕ್ಕೆ ತಗಲಿ ಆಗುವ ದೊಡ್ಡ ಅಥವಾ ಸಣ್ಣ ತೆರೆಗಳು. ಆದುದರಿಂದ ಈ ವೃತ್ತಿಗಳೇ ಸಂಪೂರ್ಣವಾದ ನಮ್ಮ ಜಗತ್ತಿನ ಸ್ವರೂಪ.

ಇಲ್ಲಿ ತಿಳಿದುಕೊಳ್ಳುವುದಕ್ಕೆ ನಿಜವಾಗಿಯೂ ಕಷ್ಟವಾಗಿರುವ ಸಂಗತಿ ಯಾವುದೆಂದರೆ, ಯೋಗಿಗಳು ಎಲ್ಲದಕ್ಕಿಂತಲೂ ಹೆಚ್ಚಿನ ಸ್ಥಿತಿಯೆಂದು ಹೇಳುವ ನಿರುಪಾಧಿಕ ಸ್ಥಿತಿಯೆಂಬುದನ್ನು ಜೀವಿಸಸ್ಯದ[1] ಅಥವಾ ಕಲ್ಲಿನ ಸ್ಥಿತಿಯೆಂದು ಕೆಲವರು ಊಹಿಸುವರು. ಇದೆಂದಿಗೂ ಸರಿಯಲ್ಲ. ಹೀಗೆ ತಿಳಿಯುವುದು ಅಪಾಯಕರವಾದುದು. ಕಲ್ಲಿನ (ಅಚೇತನ) ಸ್ಥಿತಿಯೊಂದು, ಸಚೇತನ ಸ್ಥಿತಿ ಇನ್ನೊಂದು, ಇವೆರಡೇ ಸ್ಥಿತಿಗಳಿರುವುವೆಂದು ಈ ಜನರ ಅಭಿಪ್ರಾಯವು. ಆದರೆ ಇವರು ಇರುವುದೆಲ್ಲ ಇವೆರಡೇ ಎಂದು ಹೇಳುವುದಕ್ಕೆ ಆಧಾರವೇನು? ಸವಿಚಾರ ಸ್ಥಿತಿಗಿಂತಲೂ ಎಷ್ಟೋ ಉತ್ತಮವಾಗಿ ಇನ್ನೊಂದು ಸ್ಥಿತಿ ಏತಕ್ಕಿರಬಾರದು? ಬೆಳಕಿನ ಕಂಪನಗಳು ಬಹು ಕೆಳಗಣ ಸ್ಥಿತಿಯಲ್ಲಿರುವಾಗ ನಮಗೆ ಕಾಣಿಸುವುದಿಲ್ಲ; ವೇಗವು ಸ್ವಲ್ಪ ಬಲವಾಗುತ್ತಲೆ ಬೆಳಕಿನ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಕಂಪನಗಳು[2] ಇನ್ನೂ ಬಲವಾದರೆ ಕಾಣಿಸುವುದಿಲ್ಲ. ಕತ್ತಲೆ ಇದ್ದಂತೆಯೇ ಇರುವುದು. ಆದರೆ ಕೊನೆಯಲ್ಲಿ ಕಾಣುವ ಕತ್ತಲೆಯು ಮೊದಲು ನೋಡಿದ ಕತ್ತಲೆಯೆ?

1. ಕೆಲವು ವಸ್ತುಗಳು ಗಿಡಗಳಂತೆಯೂ ಪ್ರಾಣಿಗಳಂತೆಯೂ ಇರುವುವು. ಇವುಗಳನ್ನೆ ಬೇರೆ ಪಂಗಡವಾಗಿ ಶಾಸ್ತ್ರಜ್ಞರು ವಿಂಗಡಿಸಿರುವರು. ಇವುಗಳನ್ನೆ (Zoophyte) ಜೀವಿಸಸ್ಯಗಳೆಂದು ಕರೆಯುತ್ತಾರೆ. ಇಂಥ ತ್ರಿಶಂಕುಸ್ವರ್ಗದ ಸ್ಥಿತಿಯಲ್ಲವೆಂದು ತಾತ್ಪರ್ಯ.

2. ಈ ವಿಚಾರವು ಹಿಂದೆ ವಿವರಿಸಿರುತ್ತದೆ. 1ನೇ ಭಾಗ ಅಧ್ಯಾಯ 3, 35 ಪುಟವನ್ನು ನೋಡಿ.

ಅಲ್ಲವೇ ಅಲ್ಲ. ಅವೆರಡಕ್ಕೂ ಅಜಗಜಾಂತರ. ಹೀಗೆಯೇ ಕಲ್ಲು ಯೋಚನೆ ಮಾಡದೆ ಇರುವುದೂ ದೇವರು ಯೋಚನೆ ಮಾಡದೆ ಇರುವುದೂ ಎರಡೂ ಒಂದೆಯೆ? ಎಂದಿಗೂ ಅಲ್ಲ. ದೇವರು ಯೋಚಿಸುವುದಿಲ್ಲ. ಅವನು ಈ ಕಾರಣದಿಂದ ಹೀಗೆ ಇರಬೇಕೆಂದು ತರ್ಕಿಸುವುದಿಲ್ಲ. ಆತನು ಏತಕ್ಕೆ ತರ್ಕಿಸಬೇಕು? ಹಾಗೆ ತರ್ಕಿಸುವುದಕ್ಕೆ ಅವನಿಗೆ ಗೊತ್ತಿಲ್ಲದುದು ಏನಾದರೂ ಇದೆಯೆ? ಕಲ್ಲಿಗೆ ತರ್ಕಿಸುವುದಕ್ಕೆ ಶಕ್ತಿ ಇಲ್ಲ. ದೇವರು ತರ್ಕಿಸುವುದಿಲ್ಲ. ಇಷ್ಟೇ ವಿಶೇಷ. ಈ ತತ್ತ್ವಶಾಸ್ತ್ರಜ್ಞರೆಂಬುವರಿಗೆ ಯೋಚನೆಯನ್ನು ದಾಟಿಹೋಗುವುದೆಂದರೆ ಹೆದರಿಕೆ. ಆದರೆ ನಿಜವಾದ ಸಂಗತಿಯೇನೆಂದರೆ ತರ್ಕಕ್ಕಿಂತಲೂ ಹೆಚ್ಚಿನ ಸ್ಥಿತಿಗಳು ಇದ್ದೇ ಇವೆ. ಧಾರ್ಮಿಕ ವರ್ತನದ ಮೊದಲನೆಯ ಸ್ಥಿತಿಯು ಕೂಡ ನಿಜವಾಗಿ ನೋಡಿದರೆ ಬುದ್ಧಿ ಶಕ್ತಿಯ ಆಚೆಯೆ ಇರುವುದು. ಆಲೋಚನೆಯ, ಬುದ್ಧಿಯ ಮತ್ತು ತರ್ಕದ ಆಚೆಗೆ ಹೆಜ್ಜೆ ಇಟ್ಟ ಮೇಲೆಯೇ ದೇವರ ಕಡೆಗೆ ಮೊದಲನೆಯ ಹೆಜ್ಜೆ ಇಟ್ಟಂತಾಯಿತು. ನಿಜವಾಗಿ ನೋಡಿದರೆ ಅದೇ ಬಾಳು. ಈಗಿನ ಬಾಳೆಂಬುದು ಕೇವಲ ಗರ್ಭಗತ ಸ್ಥಿತಿ.

ಇನ್ನು ನಾವು ವಿಚಾರ ಮಾಡಬೇಕಾದ ಎರಡನೇ ವಿಷಯವೇನೆಂದರೆ, ಆಲೋಚನೆ ಮತ್ತು ತರ್ಕ ಇವುಗಳಾಚೆ ಇರುವ ಸ್ಥಿತಿಯು ಹೆಚ್ಚಿನದೆಂಬುದಕ್ಕೆ ಪ್ರಮಾಣವೇನು? ಈ ಜಗತ್ತಿನಲ್ಲಿ ದೊಡ್ಡವರೆನಿಸಿಕೊಂಡವರೆಲ್ಲ – ಈ ಜಗತ್ತನ್ನೆ ಕಲಕುವಷ್ಟು ಶಕ್ತಿಯುಳ್ಳವರಾಗಿದ್ದು ತಮ್ಮ ಸ್ವಾರ್ಥವನ್ನೆಳ್ಳಷ್ಟೂ ಯೋಚಿಸದ ಜನರೆಲ್ಲ–ಈಗಿನ ಬಾಳೆಂಬುದು ನಾವು ಹೋಗುತ್ತಿರುವ ದಾರಿಯಲ್ಲಿ ತಂಗುವ ಸ್ಥಳವೇ ಸರಿಯೆಂದೂ ನಿಜವಾದ ನಮ್ಮ ಬದುಕು ಇದರಾಚೆ ಇರುವ ಅನಂತ ಸ್ಥಿತಿಯೆಂದೂ ಹೇಳಿದ್ದಾರೆ. ಇದಲ್ಲದೆ ಅವರು ಹೀಗೆ ಬರೀ ಮಾತಿನಲ್ಲಿ ಹೇಳಿಬಿಟ್ಟಿಲ್ಲ. ಆ ಸ್ಥಿತಿಯನ್ನು ಪಡೆಯುವ ಮಾರ್ಗವೆ ಎಲ್ಲರಿಗೂ ಸಿಕ್ಕುವಂತೆ ಮಾಡಿದ್ದಾರೆ. ತಾವು ಆ ಸ್ಥಿತಿಯನ್ನು ಪಡೆದ ಕ್ರಮವನ್ನು ಎಲ್ಲರೂ ಅನುಸರಿಸುವುದಕ್ಕೆ ಆಗುವಂತೆ ಬರೆದಿಟ್ಟಿದ್ದಾರೆ. ಮತ್ತು ಇದನ್ನು ಬಿಟ್ಟು ಇನ್ನಾವ ಮಾರ್ಗವೂ ನಮಗೆ ಗೊತ್ತಿಲ್ಲ. ಈಗಿನ ಸೋಪಾಧಿಕಸ್ಥಿತಿಗೆ ಮತ್ತಾವ ಕಾರಣವೂ ತೋರುವುದಿಲ್ಲ. ಇನ್ನೊಂದು ಹೆಚ್ಚಿನ ಸ್ಥಿತಿಯೇ ಇಲ್ಲವೆಂದು ಇಟ್ಟುಕೊಳ್ಳೋಣ. ಆಗ ಈ ರೀತಿಯಲ್ಲಿ ಎಷ್ಟೋ ಕಾಲದಿಂದ ನಾವು ಸುತ್ತಿ ಸುತ್ತಿಕೊಂಡು ಬರುವುದಕ್ಕೇನು ಕಾರಣ? ಈ ಜಗತ್ತಿನಲ್ಲಿರುವುದೇತಕ್ಕೆಂಬುವುದಕ್ಕೆ ಮತ್ತೇನು ಕಾರಣವಿದ್ದೀತು? ಇಂದ್ರಿಯಗಳಿಗೆ ಎಷ್ಟು ಕಾಣುವುದೋ ಅಷ್ಟೆ ನಮ್ಮ ತಿಳಿವಳಿಕೆಯು ಕೊನೆಯಾದಂತಾಯಿತು. ಇದನ್ನೆ ಅಜ್ಞಾನವಾದವೆನ್ನುತ್ತಾರೆ[1]. ಆದರೆ ಇಂದ್ರಿಯಗಳ ಹೇಳಿಕೆಯನ್ನಾದರು ನಂಬುವುದಕ್ಕೇನು ಕಾರಣ? ಇಂದ್ರಿಯಗಳು ಈಗಲೊಂದು ಆಗಲೊಂದು ಹೇಳುತ್ತಿರುವುವೆಂಬುದನ್ನು ಎಂದಿಗೂ ತಿಳಿಯದೆ ಸುಮ್ಮನೆ ಅವುಗಳನ್ನು ನಂಬಿ ಸಾಯುವವನನ್ನು ನಿಜವಾದ ಅಜ್ಞಾನವಾದಿಯೆಂದು ನಾನು ಕರೆಯುತ್ತೇನೆ. ತರ್ಕವೇ ಸರ್ವಶ್ರೇಷ್ಠವಾದರೆ ಆ ವಿಚಾರವು ಶೂನ್ಯವಾದವನ್ನು ಬಿಟ್ಟು ಬೇರೆ ಹೋಗಗೊಡುವುದಿಲ್ಲ. ಹಾಗಿಲ್ಲದೆ ದುಡ್ಡು ಕಾಸು, ಹೆಸರುವಾಸಿ, ಬಿರುದುಬಾವಲಿ ಇವುಗಳನ್ನು ಬಿಟ್ಟು ಮಿಕ್ಕ ವಿಷಯದಲ್ಲಿ ಮಾತ್ರ ಅಜ್ಞಾನವಾದಿಯೆಂದರೆ ಅವನನ್ನು ಶುದ್ಧಮೋಸಗಾರನೆನ್ನಬೇಕು.

1. ದೇವರನ್ನು ಅರಿಯುವುದು ಆಗುವುದಿಲ್ಲವೆಂದು ಹೇಳುವ ಸಿದ್ಧಾಂತವು.

ಕ್ಯಾಂಟ್[1] ಎಂಬಾತನು ತರ್ಕವೆಂಬುವ ಭಾರಿಯ ಗಟ್ಟಿ ಗೋಡೆಯಿಂದಾಚೆಗೆ ನಮ್ಮ ದೃಷ್ಟಿ ಎಂದಿಗೂ ಹರಿಯಲಾರದೆಂಬುದನ್ನು ನಿಸ್ಸಂದೇಹವಾದ ರೀತಿಯಲ್ಲಿ ತೋರಿಸಿರುತ್ತಾನೆ. ಇಂಡಿಯ ದೇಶದವರು ಮೊದಲು ಈ ಅಭಿಪ್ರಾಯದಿಂದಲೆ ಹೊರಟು ಧೈರ್ಯವಾಗಿ ವಿಚಾರಕ್ಕಿಂತ ಹೆಚ್ಚಿನ ಸ್ಥಿತಿಯನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡಿದುದಲ್ಲದೆ ಕಂಡೇ ಹಿಡಿದುಬಿಟ್ಟಿರುವರು. ಆ ಸ್ಥಿತಿಯಿಂದಲೆ ಈಗಿನ ಸ್ಥಿತಿಗೆ ಕಾರಣವು ದೊರೆಯುವುದು. ನಿಜವಾಗಿ ನೋಡಿದರೆ ಇಂದ್ರಿಯಗಳ ಪ್ರಪಂಚದಿಂದ ಕಡೆ ಹಾಯಿಸುವುದೇ ಯೋಗಾಭ್ಯಾಸದ ವಿಶೇಷ ಫಲವು. ವೇದದಲ್ಲಿ "ನೀನೇ ನಮ್ಮ ತಂದೆಯು, ಈ ಅವಿದ್ಯಾಸಾಗರದಿಂದಾಚೆಗೆ ಹಾಯಿಸು" ಎಂದು ಮಾಡಿರುವ ಪ್ರಾರ್ಥನೆಯು ನಿಜವಾಗಿ ನೆರವೇರಿರುವುದು. ಯೋಗವೇ ಈ ವಿಚಾರದ ರಾಜ್ಯದಿಂದಾಚೆಗೆ ನಮ್ಮನ್ನೊಯ್ಯುವ ಧಾರ್ಮಿಕಶಾಸ್ತ್ರವು.

ಯಾವುದಾದರೊಂದು ಸರೋವರದ ಮೇಲು ಭಾಗದಲ್ಲಿ ಅಲೆಗಳು ತುಂಬಿದ್ದರೆ ಕೆಳಗಡೆಯು ಕಾಣಿಸುವುದಿಲ್ಲ. ಆದರೆ ಅಲೆಗಳೆಲ್ಲ ಶಾಂತವಾಗಿ ನೀರು ಒಂದೇ ಸಮನಾಗಿದ್ದರೆ ಆಗ ತಳವನ್ನು ಸ್ವಲ್ಪ ನೋಡಬಹುದು. ಇದಲ್ಲದೆ ನೀರು ಬಗ್ಗಡವಾಗಿದ್ದು ಅಳ್ಳಾಡುತ್ತಲೆ ಇದ್ದರೆ ತಳವು ಕಾಣಿಸುವುದಿಲ್ಲ. ಆದರೆ ನೀರೂ ತಿಳಿಯಾಗಿದ್ದು ಅಲೆಗಳೂ ಇಲ್ಲದಿದ್ದರೆ ಕಾಣಿಸುವುದು. ನಮ್ಮ ಸ್ವರೂಪವೇ ಸರೋವರದ ತಳವು. ಚಿತ್ತವೆಂಬುದೇ ಸರೋವರವು. ವೃತ್ತಿಗಳೇ ಅದರಲ್ಲಿರುವ ಅಲೆಗಳು. ಈ ಚಿತ್ತವೆಂಬುದಕ್ಕೆ ಮೂರು ಸ್ಥಿತಿಗಳುಂಟು. ತಮಸ್ಸೆಂಬುದು ಮೊದಲನೆಯ ಸ್ಥಿತಿಯು. ಪಶುಗಳಲ್ಲಿಯೂ ಅವಿವೇಕಿಗಳಲ್ಲಿಯೂ ಇರುವ ಚಿತ್ತವು ಇದಕ್ಕೆ ಉದಾಹರಣೆ. ಈ ಸ್ಥಿತಿಯಲ್ಲಿ ಇತರರನ್ನು ಹಿಂಸೆ ಮಾಡುವುದೊಂದೇ ಚಿತ್ತದ ಕಾರ್ಯವು. ಅದಕ್ಕೆ ಮತ್ತಾವುದೂ ತಿಳಿಯುವುದಿಲ್ಲ. ರಜಸ್ಸೆಂಬ ನಿಂತಲ್ಲಿ ನಿಲ್ಲದ ಸ್ಥಿತಿಯು ಎರಡನೆಯದು. ಆಗ ಅಧಿಕಾರವನ್ನು ಸಂಪಾದಿಸಿಕೊಳ್ಳುವುದೂ, ಸುಖಪಡುವುದೂ ಇವೆರಡೇ ಚಿತ್ತದ ಉದ್ದೇಶಗಳಾಗಿರುವುವು. ಈ ಸ್ಥಿತಿಯಲ್ಲಿ "ನಾನು ಉತ್ತಮ ಬಾಹುಬಲವನ್ನು ಸಂಪಾದಿಸಿ ಎಲ್ಲವನ್ನೂ ಆಳಬೇಕು" ಎನ್ನುತ್ತಿರುವುದು. ಕೊನೆಗೆ ಈ ಅಲೆಗಳೆಲ್ಲ ನಿಂತು ಸರೋವರದ ನೀರು ತಿಳಿಯಾದ ಮೇಲೆ ಸತ್ತ್ವವೆಂಬ ಶಾಂತವಾದ ಸಮಾಧಾನ ಸ್ಥಿತಿ ಬರುವುದು. ಈ ಸ್ಥಿತಿಯನ್ನು ಸೋಮಾರಿತನವೆನ್ನುವುದಕ್ಕಾಗುವುದಿಲ್ಲ. ಇಲ್ಲಿ ಕ್ರಿಯೆಯು ಬಹು ಜೋರಾಗಿರುವುದೆನ್ನಬೇಕು. ಏಕೆಂದರೆ ಯಾವಾಗಲೂ ಶಾಂತನಾಗಿರುವುದೆಂಬುದೇ ಮನಶ್ಶಕ್ತಿಯ ಹೆಗ್ಗುರುತು. ಅತ್ತಿತ್ತ ಅಲೆದಾಡುತ್ತಿರುವುದು ಸುಲಭ. ಲಗಾಮನ್ನು ಕೈಬಿಟ್ಟು ಕುದುರೆಗಳು ಕಂಡ ಕಂಡ ಕಡೆಗೆ ಎಳೆದುಕೊಂಡು ಹೋಗಲೆಂದು ಬಿಡುವುದೇ ಸುಲಭ. ಅದು ಯಾರ ಕೈಯಲ್ಲಿ ಆದರೂ ಆಗುತ್ತದೆ. ನಾಗಾಲೋಟದಲ್ಲಿರುವ ಕುದುರೆಗಳನ್ನು ನಿಲ್ಲಿಸುವವನೇ ಬಲಿಷ್ಠನು. ಕೈಬಿಡುವುದಕ್ಕೆ ಹೆಚ್ಚು ಬಲ ಬೇಕೊ? ಜಗ್ಗಿ ಹಿಡಿಯುವುದಕ್ಕೆ ಹೆಚ್ಚು ಬಲ ಬೇಕೊ? ಶಾಂತವಾಗಿರುವವನೆಂದರೆ ತೆಪ್ಪನೆ ಸೋಮಾರಿಯಾಗಿರುವವನಲ್ಲ. ಸತ್ತ್ವವೆಂದರೆ

---

1. ಈತನು ಜರ್ಮನಿ ದೇಶದ ತತ್ತ್ವಜ್ಞನು. ಜಗತ್ತೆಂಬುದೆಲ್ಲ ದೇಶ, ಕಾಲ ನಿಮಿತ್ತವೆಂಬ ಮೂರಕ್ಕೆ ಸಿಕ್ಕಿರುವುದೆಂದೂ ಈ ಮೂರು ಕೇವಲ ಮನಃಕಲ್ಪಿತವೆಂದೂ, ಹೀಗಿರುವುದರಿಂದ ನಮಗೆ ತಿಳಿಯುವ ಜಗತ್ತೆಂಬುದು ನಮ್ಮ ಮನೋಗುಣವಾಗಿಯೆ ಇರುವುದೇ ಹೊರತು ಜಗತ್ತಿನ ಸ್ವರೂಪವನ್ನೆ ಅರಿಯುವುದು ಆಗಲಾರದೆಂದೂ ಈತನ ಸಿದ್ಧಾಂತವು.

ಮಂಕುತನವೆಂದೂ, ಸೋಮಾರಿತನವೆಂದೂ ಎಂದಿಗೂ ತಿಳಿಯಬಾರದು. ತನಗೆ ಬೇಕಾದಾಗ ಮನಸ್ಸಿನ ಅಲೆಗಳನ್ನು ತಡೆಯಬಲ್ಲವನೇ ಶಾಂತನು. ಹರಿದಾಡುವುದೆಂಬುದು ಕೀಳುತರದ ಬಲದ ಫಲವು. ಶಾಂತತೆಯು ಹೆಚ್ಚಿನ ಬಲದ ಫಲವು.

ಚಿತ್ತವು ಯಾವಾಗಲೂ ತನ್ನ ಶುದ್ಧ ಸ್ಥಿತಿಯನ್ನು ಹೊಂದಬೇಕೆಂದು ಪ್ರಯತ್ನಿಸುತ್ತಿರುವುದು. ಆದರೆ ಇಂದ್ರಿಯಗಳು ಅದನ್ನು ಹೊರಕ್ಕೆ ಎಳೆಯುತ್ತಿರುವುವು. ಹೀಗೆ ಹೊರಗೆ ಹೋಗುವ ಚಟವನ್ನು ತಪ್ಪಿಸಿ ಚೈತನ್ಯ ಸ್ವರೂಪವನ್ನು ಪಡೆಯಲಿಕ್ಕೆಂದು ಹಿಂದಿರುಗಿ ಹೋಗುವಂತೆ ಮಾಡುವುದನ್ನೆ ಯೋಗವು ಕಲಿಸುವುದು. ಚಿತ್ತವನ್ನು ತನ್ನ ಸರಿಯಾದ ಹಾದಿಯನ್ನು ಹಿಡಿಯುವಂತೆ ಮಾಡುವುದಕ್ಕೆ ಇದೊಂದೇ ಉಪಾಯ.

ಅತ್ಯಂತ ನೀಚ ಪ್ರಾಣಿಯಿಂದ ಮೊದಲು ಮಾಡಿ ಕೊನೆಯುವರೆಗೂ ಎಲ್ಲಾ ಪ್ರಾಣಿಗಳಲ್ಲಿಯೂ ಚಿತ್ತವೆಂಬುದು ಇದ್ದೇ ಇರುವುದಾದರೂ ಮನುಷ್ಯನಲ್ಲಿ ಮಾತ್ರವೇ ವಿವೇಕಯುಕ್ತವಾಗಿರುವುದು. ಈ ಚಿತ್ತಕ್ಕೆ ವಿವೇಕವು ಬಂದ ಹೊರತು ಯೋಗದಲ್ಲಿ ಹೇಳಿರುವ ಬೇರೆ ಬೇರೆ ಸಾಧನಗಳನ್ನನುಸರಿಸಿ ತನ್ನೊಳಗೆ ತಾನು ಹೊಕ್ಕು ಹಿಂದಿರುಗಿ ಆತ್ಮನಿಗೆ ಮುಕ್ತಿ ಕೊಡುವುದೆಂಬುದು ಸಾಧ್ಯವಾಗಲಾರದು. ಹಸುವಿಗಾಗಲಿ, ನಾಯಿಗಾಗಲಿ, ಚಿತ್ತವಿದ್ದೇ ಇರುವುದಾದರೂ ಈಗಲೇ ಮುಕ್ತಿಯಾಗಬೇಕೆಂದರೆ ಆಗಲಾರದು. ಏಕೆಂದರೆ, ಅವುಗಳಲ್ಲಿರುವ ಚಿತ್ತವು ಬುದ್ಧಿಯೆಂಬ ರೂಪಾಂತರವನ್ನು ಇನ್ನೂ ಹೊಂದಿರುವುದಿಲ್ಲ.

ಈ ಚಿತ್ತಕ್ಕೆ ಅತ್ತಿತ್ತ ಚದರುವುದು (ಕ್ಷಿಪ್ತ), ಸುಮ್ಮನಾಗುವುದು (ಮೂಢ), ಎಚ್ಚರುವದು (ವಿಕ್ಷಿಪ್ತ), ಒಕ್ಕಡೆ ನಿಲ್ಲುವುದು (ಏಕಾಗ್ರ)[1] ಎಂಬ ಬೇರೆ ಬೇರೆ ರೂಪಗಳುಂಟು. ಚಿತ್ತವು ಈ ನಾಲ್ಕು ಸ್ಥಿತಿಗಳಲ್ಲಿ ಕಾಣಿಸಿಕೊಳ್ಳುವುದು. ಕ್ಷಿಪ್ತವೆಂಬ ಚದರುವ ಸ್ಥಿತಿಯಲ್ಲಿ ಚಾಂಚಲ್ಯವಿರುವುದು. ಆಗ ಮನಸ್ಸು ಅಧಿಕಾರವನ್ನೊ, ಇಂದ್ರಿಯಸುಖವನ್ನೊ ಅಥವಾ ಮತ್ತಾವುದನ್ನೊ ಬಯಸುತ್ತಿರುವುದು. ಆಗ ಇದು ಬಯಸುವ ಪದಾರ್ಥಗಳು ಕೊನೆಗೆ ದುಃಖವನ್ನು ಕೊಡುವಂಥವಾಗಿರುವುವು. ಮೂಢಸ್ಥಿತಿಯೆಂಬುದು ಮಂಕಿನ ಸ್ಥಿತಿ. ಅದರಲ್ಲಿ ಮತ್ತೇನೇನೂ ತಿಳಿಯುವುದಿಲ್ಲ. ಮತ್ತೊಬ್ಬರಿಗೆ ಹಿಂಸೆಮಾಡುವುದೊಂದೆ ಆಗಿನ ಉದ್ದೇಶವಾಗಿರುವುದು. ವ್ಯಾಖ್ಯಾನಕಾರರು ಮೊದಲನೆಯ[2] (ಕ್ಷಿಪ್ತ) ರೂಪವು ದೇವತೆಗಳಿಗೂ, ಎರಡನೆಯ (ಮೂಢ) ರೂಪವು ಅಸುರರಂತಿರುವವರಿಗೂ ಸ್ವಭಾವವಾಗಿರುತ್ತವೆಂದು ಹೇಳಿದ್ದಾರೆ. ವಿಕ್ಷಿಪ್ತವೆಂಬ ಎಚ್ಚರದ ಸ್ಥಿತಿಯು ಚಿತ್ತವು ಒಕ್ಕಡೆಗೆ ನಿಲ್ಲುವುದಕ್ಕೆ ಪ್ರಯತ್ನಿಸುವಾಗ ಬರುವುದು. ಏಕಾಗ್ರವೆಂಬುದು ಚಿತ್ತವನ್ನು ಒಂದು ಕಡೆಗೆ ತಂದು ಸಮಾಧಿಯನ್ನುಂಟು ಮಾಡುವುದು.

---

1. ವ್ಯಾಖ್ಯಾನಕಾರರು "ನಿರುದ್ಧ" ಎಂದರೆ ಸಂಪೂರ್ಣವಾಗಿ ನಿಲ್ಲುವುದೆಂದು ಮತ್ತೊಂದು ಚಿತ್ತದ ರೂಪವನ್ನು ಹೇಳಿರುವರು. ಆದರೆ ಏಕಾಗ್ರ ಮತ್ತು ನಿರುದ್ಧ ಇವೆರಡಕ್ಕೂ ಪರಿಮಾಣದಲ್ಲಿ ಹೆಚ್ಚು ಕಡಿಮೆಯೇ ಹೊರತು ರೂಪದಲ್ಲಿ ವಿಶೇಷವಿಲ್ಲವಾದುದರಿಂದಲೂ, ಇವೆರಡರಿಂದಲೂ ಸಮಾಧಿಯು ಆಗುವುದರಿಂದಲೂ ಸ್ವಾಮಿಗಳು ಇವೆರಡನ್ನೂ ಬೇರೆ ಬೇರೆ ಕೊಡಲಿಲ್ಲ. ಏಕಾಗ್ರಸ್ಥಿತಿಯಿಂದಲೇ ನಿರುದ್ಧ ಸ್ಥಿತಿಯು ಬರುವುದು.

2. ಭೋಜ ವೃತ್ತಿಯಲ್ಲಿ ಕ್ಷಿಪ್ತವು ದೈತ್ಯದಾನವರಿಗೂ, ಮೂಢವು ರಕ್ಷಃ ಪಿಶಾಚರೇ ಮೊದಲಾದವರಿಗೂ, ವಿಕ್ಷಿಪ್ತವು ದೇವತೆಗಳಿಗೂ ಸ್ವಭಾವವೆಂದು ಹೇಳಿದೆ.

## 3. ತದಾ ದ್ರಷ್ಟುಃ ಸ್ವರೂಪೇಽವಸ್ಥಾನಮ್

ಟೀ॥ ಆಗ (ಮನಸ್ಸು ಸಮಾಧಾನವಾಗಿರುವಾಗ) ನೋಡುವವನು (ಪುರುಷನು) ತನ್ನ ನಿಜವಾದ (ಹೆಚ್ಚು ಕಡಿಮೆ ಇಲ್ಲದ) ಸ್ಥಿತಿಯಲ್ಲಿಯೇ ಇರುವನು.

ವಿ॥ ಅಲೆಗಳು ನಿಂತು ಸರೋವರವು ಶಾಂತವಾದ ಕೂಡಲೆ ತಳದಲ್ಲಿರುವ ನೆಲವು ಕಾಣಿಸುವುದು. ಚಿತ್ತದ ವಿಚಾರವೂ ಹೀಗೆಯೆ. ಅದು ಶಾಂತವಾಗಿರುವಾಗ ನಮ್ಮ ನಿಜವಾದ ಸ್ವರೂಪವಾವುದೆಂಬುದು ತಿಳಿಯುವುದು. ಆಗ ಅಲೆಗಳೇ ನಾವೆಂದು ತಿಳಿದುಕೊಳ್ಳುವುದಿಲ್ಲ. ನಾವೇ ಬೇರೆ ಆಗಿ ಇದ್ದು ಬಿಡುತ್ತೇವೆ.

## 4. ವೃತ್ತಿಸಾರೂಪ್ಯಮಿತರತ್ರ

ಟೀ॥ (ಏಕಾಗ್ರವಾಗಿರುವುದನ್ನು ಬಿಟ್ಟು) ಉಳಿದ ಕಾಲಗಳಲ್ಲಿ ನೋಡುವವನು (ಚಿತ್ತದ) ವೃತ್ತಿಗಳಂತೆಯೇ ಆಗಿರುವನು.

ವಿ॥ ಹೇಗೆಂದರೆ, ಯಾರೋ ನನ್ನನ್ನು ಬಯ್ದರೆಂದು ನನಗೆ ದುಃಖವಾಗಿದೆಯೆಂದು ಇಟ್ಟುಕೊಳ್ಳೋಣ. ಇದೊಂದು ಮನೋವಿಕಾರವಾದುದರಿಂದ ವೃತ್ತಿಯೆನಿಸುವುದು. ಈ ವೃತ್ತಿಯೇ ನಾನೆಂದು ತಿಳಿದುಕೊಳ್ಳುವುದರಿಂದ ದುಃಖವಾಗುವುದು.

## 5. ವೃತ್ತಯಃ ಪಞ್ಚತಯ್ಯಃ ಕ್ಲಿಷ್ಟಾಕ್ಲಿಷ್ಟಾಃ

ಟೀ॥ ಕಷ್ಟವನ್ನು ಕೊಡುವ ವೃತ್ತಿಗಳು (ಕೆಲವು), ಕ್ಲೇಶವನ್ನು ಕೊಡದೆ ಇರುವ ವೃತ್ತಿಗಳು (ಕೆಲವು), ಇವು ಐದು ಬಗೆಯಾಗಿರುವವು.

## 6. ಪ್ರಮಾಣವಿಪರ್ಯಯವಿಕಲ್ಪನಿದ್ರಾಸ್ಮೃತಯಃ

ಟೀ॥ (ಇವು ಯಾವುವೆಂದರೆ) ಪ್ರಮಾಣ, ತಪ್ಪು ತಿಳಿವಳಿಕೆ, ಶಬ್ದದ ಭ್ರಮೆ, ನಿದ್ರೆ, ನೆನಪು.

## 7. ಪ್ರತ್ಯಕ್ಷಾನುಮಾನಾಗಮಾಃ ಪ್ರಮಾಣಾನಿ

ಟೀ॥ ಪ್ರತ್ಯಕ್ಷ, ಅನುಮಾನ, ಆಗಮ ಇವು ಪ್ರಮಾಣಗಳು ಎಂದರೆ ಸರಿಯಾದ [1]ತಿಳಿವಳಿಕೆಯೆನಿಸುವುವು.

ವಿ॥ ನಮಗೆ ಆದ ಅನುಭವಗಳಲ್ಲಿ ಒಂದಕ್ಕೊಂದು ವಿರೋಧವಾಗಿರದೆ ಇದ್ದರೆ ಅದಕ್ಕೇ ಪ್ರಮಾಣ ಅಥವಾ ಸರಿಯಾದ ತಿಳಿವಳಿಕೆಯೆಂದು ಹೆಸರು. ಹೇಗೆಂದರೆ, ನನಗೇನಾದರೂ ಕೇಳಿಸುತ್ತಿದೆಯೆಂದಿಟ್ಟುಕೊಳ್ಳೋಣ. ಇದು ನನಗೆ ಈ ಮೊದಲು ಆಗಿರುವ ಯಾವುದಾದರೂ ಅನುಭವಕ್ಕೆ ವಿರೋಧವಾಗಿದ್ದರೆ ನನಗೆ ಇದರ ವಿಷಯಕ್ಕೆ ಸಂಶಯ ಹುಟ್ಟುವುದು. ಅದನ್ನು ನಂಬುವುದಕ್ಕಾಗುವುದಿಲ್ಲ. ಪ್ರಮಾಣಗಳು ಮೂರು ಬಗೆ. ಪ್ರತ್ಯಕ್ಷವು ಎಂದರೆ ನಮಗೆ ಕಾಣಿಸುವುದು, ಅಥವಾ ಅನುಭವಕ್ಕೆ ಬರುವುದು, ಮೊದಲನೆಯ ಪ್ರಮಾಣವು. ಆದರೆ

1. ಸರಿಯಾದ ತಿಳಿವಳಿಕೆಯ ಸಾಧನವೆಂದರ್ಥ.

ಇಂದ್ರಿಯಗಳಿಗೆ ಭ್ರಮೆಯನ್ನು ಹುಟ್ಟಿಸುವಂಥದ್ದು ಏನೂ ಆಗಿರಬಾರದು. ಜಗತ್ತು ಕಾಣಿಸುತ್ತದೆ. ಇದು ಜಗತ್ತು ಇದೆಯೆಂಬುದಕ್ಕೆ ಸಾಕಾದ ಪ್ರಮಾಣವಾಗಿದೆ. ಎರಡನೆಯ ಪ್ರಮಾಣವು ಅನುಮಾನವು ಎಂದರೆ ಯಾವುದಾದರೂ ಗುರುತನ್ನು ಕಂಡು ಆ ಗುರುತಿನಿಂದ ಗುರುತಿನ ವಸ್ತುವನ್ನು ತಿಳಿಯುವುದು. ಮೂರನೆಯದು ಆಪ್ತ ವಾಕ್ಯವು ಎಂದರೆ ಯೋಗಿಗೆ ಅಥವಾ ತತ್ತ್ವಜ್ಞಾನಿಗೆ ಆಗಿರುವ ಸಾಕ್ಷಾತ್ಕಾರ ಜ್ಞಾನವು. ಎಲ್ಲರೂ ತಿಳಿವಳಿಕೆಯನ್ನು ಸಂಪಾದಿಸುವುದಕ್ಕೆಂದೇ ಪ್ರಯತ್ನಮಾಡುತ್ತಿರುವರು. ಆದರೆ ನಮ್ಮ ನಿಮ್ಮಂಥವರಿಗೆ ತಿಳಿವಳಿಕೆ ಬರಬೇಕಾದರೆ ನಾವು ಎಷ್ಟೋ ಕಾಲ ಶ್ರಮಪಟ್ಟು ವಿಚಾರಮಾಡಬೇಕಾಗಿರುವುದು. ಸಂಪೂರ್ಣವಾಗಿ ಮನಃಶುದ್ಧಿಯನ್ನು ಪಡೆದಿರುವ ಯೋಗಿಗೆ ಹೀಗೆ ವಿಚಾರ ಮಾಡ ಕೆಲಸವಿಲ್ಲ. ಏಕೆಂದರೆ, ಹಿಂದಿನ ಕಾಲ, ಈಗಿನ ಕಾಲ, ಮುಂದಿನ ಕಾಲ ಇವೆಲ್ಲವೂ ಅವನ ಮುಂದೆ ಓದುವುದಕ್ಕೆಂದು ತೆರೆದಿಟ್ಟ ಪುಸ್ತಕದಂತಿರುವುದು. ಆದುದರಿಂದ ಅವನು ಸುಮ್ಮನೆ ವಿಚಾರ ಮಾಡಿಯೇ ತಿಳಿಯಬೇಕಾದುದೇನೂ ಇಲ್ಲ. ಆದುದರಿಂದ ಅವನ ಮಾತೇ ಪ್ರಮಾಣವಾಗುವುದು. ಏಕೆಂದರೆ, ಅವನಿಗೆ ಎಲ್ಲಾ ತಿಳಿವಳಿಕೆಯೂ ತನ್ನಲ್ಲಿಯೇ ಅಡಗಿರುವಂತೆ ಕಾಣುತ್ತಿರುವುದು. ಹೀಗೆ ಅವನನ್ನು ಒಂದು ಬಗೆಯಿಂದ ನೋಡಿದರೆ ಸರ್ವಜ್ಞನೆನ್ನಬಹುದು. ಮತ ಗ್ರಂಥಗಳ ಕರ್ತರು ಇಂಥವರು. ಆದುದರಿಂದಲೇ ಶಾಸ್ತ್ರಗಳು ಪ್ರಮಾಣವೆನ್ನುತ್ತಾರೆ. ಇಂಥ ಜನರು ಈಗ ಇದ್ದರೆ ಅವರ ಮಾತೂ ಪ್ರಮಾಣವೆ. ಇನ್ನು ಕೆಲವು ಜನ ತತ್ತ್ವಶಾಸ್ತ್ರಜ್ಞರು ಆಪ್ತ ವಾಕ್ಯವೆಂಬುದರ ವಿಷಯದಲ್ಲಿ ಬಹಳವಾಗಿ ವಿಚಾರ ಮಾಡಿರುತ್ತಾರೆ. ಇವರು "ಈ ಆಪ್ತರ ಮಾತು ಪ್ರಮಾಣವೆಂಬುದೇನು?" ಎಂಬ ಪ್ರಶ್ನೆಯನ್ನು ತೆಗೆಯುತ್ತಾರೆ. ಆಪ್ತರ ಮಾತಿಗೆ ಅನುಭವವೇ ಪ್ರಮಾಣವು. ಹೇಗೆಂದರೆ, ಹಿಂದಿನ ಅನುಭವಗಳಿಗೆ ವಿರೋಧವಾಗಿ ಇರದೆ ಇದ್ದರೆ ನನಗೆ ಏನೇನು ಕಾಣಿಸುವುದೊ ಅದೆಲ್ಲ ಪ್ರಮಾಣವೆ. ಇಂದ್ರಿಯಾತೀತವಾದ ತಿಳಿವಳಿಕೆಯುಂಟಷ್ಟೆ. ಇದು ತರ್ಕ ವಿರುದ್ಧವಾಗದೆ ಹಿಂದೆ ಮನುಷ್ಯರಿಗಾಗಿರುವ ಅನುಭವಕ್ಕೆ ವಿರೋಧವಾಗದೆ ಇದ್ದರೆ ಇಂಥ ತಿಳಿವಳಿಕೆಯು ಪ್ರಮಾಣವಾಗುವುದು. ಯಾವನಾದರೂ ಒಬ್ಬ ಹುಚ್ಚನು ಈ ಕೊಠಡಿಗೆ ಬಂದು ಸುತ್ತಮುತ್ತ ದೇವತೆಗಳು ಕಾಣಿಸುತ್ತಿದ್ದಾರೆಂದು ಹೇಳಿಯಾನು. ಆದರೆ ಇಷ್ಟಕ್ಕೇ ಅದು ಪ್ರಮಾಣವಾಗಲಾರದು. ಮೊದಲು ಇದು ನಿಜವಾದ ತಿಳಿವಳಿಕೆಯಾಗಿರಬೇಕು. ಎರಡನೆಯದು, ಇದು ಹಿಂದಿನ ಅನುಭವಕ್ಕೆ ವಿರುದ್ಧವಾಗಿರಬಾರದು. ಮೂರನೆಯದು, ಈ ಮಾತನ್ನು ಹೇಳುವವನ ನಡತೆಗೆ ಒಪ್ಪುವಂತಿರಬೇಕು. ಮನುಷ್ಯನ ನಡತೆಯನ್ನು ನೋಡುವುದು ಅಷ್ಟು ಮುಖ್ಯವಲ್ಲವೆಂದೂ ಮೊದಲು ಅವನು ಹೇಳುವುದನ್ನು ಕೇಳಬೇಕೆಂದೂ ಜನರು ಹೇಳುವುದನ್ನು ನಾನು ಕೇಳಿದ್ದೇನೆ. ಇದು ಉಳಿದ ವಿಚಾರದಲ್ಲೇನೊ ನಿಜವಾಗಿರಬಹುದು. ಹೇಗೆಂದರೆ, ಒಬ್ಬ ಮನುಷ್ಯನ ನಡತೆ ಚೆನ್ನಾಗಿಲ್ಲದಿದ್ದರೂ ಅವನು ಜ್ಯೋತಿಶ್ಶಾಸ್ತ್ರದಲ್ಲಿ ಹೊಸ ವಿಷಯವನ್ನು ಕಂಡು ಹಿಡಿಯಬಹುದು. ಆದರೆ ಮತವಿಚಾರದಲ್ಲಿ ಮಾತ್ರ ಹೀಗಲ್ಲ. ಏಕೆಂದರೆ, ಚಿತ್ತ ಶುದ್ಧಿಯಿಲ್ಲದವನಿಗೆ ಎಂದಿಗೂ ಧರ್ಮ ತತ್ತ್ವವನ್ನು ತಿಳಿಯುವುದಕ್ಕಾಗುವಂತಿಲ್ಲ. ಆದುದರಿಂದ "ಯಾವನು ತಾನು ಆಪ್ತನೆಂದು ಹೇಳಿಕೊಳ್ಳುತ್ತಾನೋ ಅವನು ಸ್ವಲ್ಪವೂ ಸ್ವಾರ್ಥವಿಲ್ಲದವನಾಗಿಯೂ ಪರಿಶುದ್ಧನಾಗಿಯೂ ಇದ್ದಾನೆಯೆ?' ಎಂದು ಎಲ್ಲದಕ್ಕಿಂತ ಮೊದಲು ನೋಡಬೇಕು. ಎರಡನೆಯದೇನೆಂದರೆ, ಅವನು ಇಂದ್ರಿಯಗಳನ್ನು ಗೆದ್ದವನಾಗಿರಬೇಕು. ಮೂರನೆಯ ವಿಷಯವೇನೆಂದರೆ, ಆತನು ಹೇಳುವ ಮಾತು ಮನುಷ್ಯರಿಗೆ ಇದುವರೆಗೆ

ತಿಳಿದಿರುವ ಪ್ರಮಾಣಾನುಭವಕ್ಕೆ ವಿರುದ್ಧವಾಗಿರಬಾರದು. ಯಾವುದಾದರೂ ಒಂದು ಹೊಸ ತತ್ತ್ವವನ್ನು ಕಂಡು ಹಿಡಿದರೆ ಅದು ಮೊದಲಿನ ತತ್ತ್ವಕ್ಕೆ ವಿರುದ್ಧವಾಗಿರುವುದಿಲ್ಲ. ಅದಕ್ಕೆ ಹೊಂದಿಕೊಂಡೇ ಇರುವುದು. ನಾಲ್ಕನೆಯದಾಗಿ ನೋಡಬೇಕಾದುದೇನೆಂದರೆ, ಈ ಹೊಸ ತತ್ತ್ವವನ್ನು ಪರೀಕ್ಷೆ ಮಾಡಿ ನೋಡುವುದಕ್ಕೆ ಬರುವಂತಿರಬೇಕು. ಒಬ್ಬನು "ನನಗೆ ಒಂದು ಪದಾರ್ಥದ ಸಾಕ್ಷಾತ್ಕಾರವಾಗಿದೆ, ಅದನ್ನು ನೋಡುವುದಕ್ಕೆ ನಿಮಗೆ ಯಾರಿಗೂ ಅಧಿಕಾರವಿಲ್ಲ" ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ಯಾವನು ತನ್ನ ಅನುಭವವನ್ನು ಮಾರಿಕೊಳ್ಳುತ್ತಾನೊ ಅವನು ಆಪ್ತನಲ್ಲ. ಇವೆಲ್ಲ ಇದ್ದರೆ ಮಾತ್ರ ಆಪ್ತನೆನ್ನಬೇಕು. ಮೊದಲು ಅವನು ಪರಿಶುದ್ಧನಾಗಿಯೂ ಸ್ವಾರ್ಥದ ಉದ್ದೇಶವಾವುದೂ ಅವನಿಗೆ ಇಲ್ಲದೆಯೂ ಇರಬೇಕು. ಅವನಿಗೆ ಸಮಾಧಿಜ್ಞಾನವಿದೆಯೆಂಬುದು ಸಿದ್ಧವಾಗಬೇಕೆಂಬುದು ಎರಡನೇ ವಿಷಯ. ಕೇವಲ ನಮ್ಮ ಇಂದ್ರಿಯಗಳಿಗೆ ಗೋಚರವಾಗದೆ ಇರುವುದಾಗಿಯೂ ಲೋಕಕ್ಕೆ ಉಪಯೋಗವಾಗಿಯೂ ಇರುವ ಯಾವುದಾದರೊಂದು ವಿಷಯವನ್ನು ಆತನು ನಮಗೆ ತಿಳಿಸಬೇಕೆಂಬುದು ಮೂರನೆಯದು. ಮತ್ತು ಇದು ಇತರ ತತ್ತ್ವಗಳಿಗೆ ವಿರುದ್ಧವಾಗಿರಬಾರದು. ಈ ವಿಷಯದಲ್ಲಿ ಎಚ್ಚರಿಕೆಯಿಂದರಬೇಕು. ಇತರ ಶಾಸ್ತ್ರೀಯಾಂಶಗಳಿಗೆ ವಿರುದ್ಧವಾಗಿದ್ದರೆ ಕೂಡಲೆ ಅದನ್ನು ಬಿಟ್ಟುಬಿಡಬೇಕು. ನಾಲ್ಕನೆಯ ವಿಷಯವೇನೆಂದರೆ, ಈ ತತ್ತ್ವವನ್ನು ಹೇಳುವವನು ತಾನೇ ಒಂದು ವಿಜಾತೀಯಪುರುಷನಾಗಿರಬಾರದು. ಎಲ್ಲಾ ಮನುಷ್ಯರಿಗೂ ಸಾಧ್ಯವಾಗಬಹುದಾದ ವಿಷಯವೇ ಅವನಿಂದ ಹೊರಟಿರಬೇಕು. ಈ ರೀತಿಯಲ್ಲಿ ಪ್ರತ್ಯಕ್ಷ (ಇಂದ್ರಿಯಗಳಿಂದಲೆ ತಿಳಿಯುವುದು), ಅನುಮಾನ (ಊಹಿಸಿ ತಿಳಿಯುವುದು), ಆಪ್ತನ ಮಾತು ಈ ಮೂರೂ ಪ್ರಮಾಣಗಳೆನಿಸುವುವು. ಈ ಮಾತನ್ನು[1] ಇಂಗ್ಲೀಷಿಗೆ ಭಾಷಾಂತರ ಮಾಡುವುದಕ್ಕೆ ಆಗುವುದಿಲ್ಲ. (Inspired) ಪ್ರೇರಿತ[2] ಎಂಬ ಮಾತಿಗೆ ಇದು ಪರ್ಯಾಯವಲ್ಲ. ಏಕೆಂದರೆ, ಇಂಗ್ಲೀಷ್ ಮಾತಿಗೆ ಅರ್ಥವಾಗುವ ತಿಳಿವಳಿಕೆಯು ಹೊರಗಣಿಂದ ಬರುವುದೆಂದು ನಂಬುವರು. ಆದರೆ ಆಪ್ತನ ತಿಳಿವಳಿಕೆಯು ಅವನಿಂದಲೆ ಬರುವುದು. ಆಪ್ತನೆಂಬುದರ ಅಕ್ಷರಾರ್ಥವು "ಪಡೆದವನು" ಎಂದಾಗುವುದು.

## 8. ವಿಪರ್ಯಯೋಮಿಥ್ಯಾಜ್ಞಾನಮತದ್ರೂಪಪ್ರತಿಷ್ಠಮ್

ಟೀ॥ ವಿಪರ್ಯಯವೆಂದರೆ ನಿಜವಾದ ಸ್ಥಿತಿಯಲ್ಲಿ ನಿಲ್ಲದೆ ಇರುವ ತಪ್ಪು ತಿಳಿವಳಿಕೆ

ವಿ॥ ಒಂದು ಪದಾರ್ಥವನ್ನು ಮತ್ತೊಂದೆಂದು ತಪ್ಪಾಗಿ ತಿಳಿದುಕೊಳ್ಳುವುದೆಂಬುದು ಇನ್ನೊಂದು ಜಾತಿಯ ವೃತ್ತಿ. ಕಪ್ಪೆಯ ಚಿಪ್ಪನ್ನು ಬೆಳ್ಳಿಯೆಂದು ತಿಳಿಯುವುದು ಈ ಬಗೆಯ ವೃತ್ತಿ.

---

1. ಇದು ಇಂಗ್ಲಿಷರಿಗೋಸ್ಕರ ಹೇಳಿದ ಮಾತು.

2. ಬೈಬಲ್ ಗ್ರಂಥವನ್ನು ಬರೆದವರು ಪರಮಾತ್ಮನಿಂದ ಪ್ರೇರಿತರಾಗಿ ಬರೆದರೆಂದು ಪಾಶ್ಚಿಮಾತ್ಯರು ನಂಬುವರು. ಆ ಗ್ರಂಥಕರ್ತರಿಗೆ ಹೊರಗಣಿಂದ ಪ್ರೇರಣೆಯು ಬಂತೆಂದೂ ಆ ಆವೇಶದಲ್ಲಿ ಬೈಬಲನ್ನು ಅವರು ಬರೆದರೆಂದೂ ಆ ಮತದವರ ಭಾವನೆ ಇರುವದು.

## 9. ಶಬ್ದಜ್ಞಾನಾನುಪಾತೀ ವಸ್ತುಶೂನ್ಯೋ ವಿಕಲ್ಪಃ

ಟೀ॥ ವಿಕಲ್ಪವೆಂದರೆ ಶಬ್ದಕ್ಕೆ (ತಕ್ಕ) ನಿಜವಾದ ವಸ್ತುವಿಲ್ಲದೆ ಇರುವುದರಿಂದಾಗುವುದು.

ವಿ॥ ವಿಕಲ್ಪವೆಂಬ ಮತ್ತೊಂದು ಬಗೆಯ ವೃತ್ತಿಗಳುಂಟು. ಒಂದು ಮಾತನ್ನು ಕೇಳಿದ ಕೂಡಲೆ ಅದರ ಅರ್ಥವೇನೆಂದು ಯೋಚಿಸದೆ ಕೂಡಲೆ ಒಂದು ತೀರ್ಪನ್ನು ಮಾಡಿಕೊಂಡುಬಿಡುವೆವು. ಹೀಗಿದ್ದರೆ ಚಿತ್ತವು ದುರ್ಬಲವಾಗಿರುವುದೆಂದು ತಿಳಿಯಬೇಕು. ಮನೋಜಯವೆಂಬುದರ ಅರ್ಥವನ್ನು ಇದರಿಂದ ತಿಳಿಯಬಹುದು. ತನ್ನ ಕೈಯಲ್ಲಿ ಸಾಗದೆ ಇದ್ದಷ್ಟೂ ಮನಸ್ಸನ್ನು ತಡೆದುಕೊಳ್ಳುವುದು ಕಷ್ಟವಾಗುವುದು. ಈ ಪರೀಕ್ಷೆಯಿಂದ ಆಗಾಗ ತನ್ನನ್ನು ಪರೀಕ್ಷೆಮಾಡಿಕೊಳ್ಳುತ್ತಿರಬೇಕು. ತನಗೆ ಸಿಟ್ಟಾಗಲಿ ವ್ಯಸನವಾಗಲಿ ಆಗುತ್ತದೆಯೆಂದು ತೋಚಿದ ಕೂಡಲೆ ಈ ಮಾತನ್ನು ಕೇಳಿದ ಮಾತ್ರದಿಂದ ನನ್ನ ಮನಸ್ಸು ಬೇರೆ ಬೇರೆ ವೃತ್ತಿಗಳಾಗುತ್ತಿರುವುದಕ್ಕೆ ಕಾರಣವೇನೆಂದು ವಿಚಾರ ಮಾಡಬೇಕು.

## 10. ಅಭಾವಪ್ರತ್ಯಯಾಲಮ್ಬನಾ ವೃತ್ತಿರ್ನಿದ್ರಾ

ಟೀ॥ ನಿದ್ರೆ ಮತ್ತು ಸ್ವಪ್ನ ಇವು ಮತ್ತೊಂದು ಬಗೆಯ ವೃತ್ತಿಗಳು. ಎಚ್ಚೆತ್ತಾಗ ಇದುವರೆಗೂ ನಾವು ನಿದ್ದೆ ಮಾಡುತ್ತಿದ್ದೇವೆಂದು ಗೊತ್ತಾಗುವುದು. ಅನುಭವವಾದುದಕ್ಕೆ ಮಾತ್ರ ನೆನಪು ಬರುವುದು. ಕಾಣದುದರ ನೆನಪು ಎಂದಿಗೂ ಬರಲಾರದು. ಯಾವ ಪ್ರತಿಕ್ರಿಯೆಯಾಗಲಿ (ಚಿತ್ತವೆಂಬ) ಸರೋವರದಲ್ಲಿರುವ ಅಲೆಯಂತಿರುವುದು. ನಿದ್ರೆಯಲ್ಲಿದ್ದಾಗ ಚಿತ್ತದಲ್ಲಿ ಅಲೆಗಳಿಲ್ಲದಿದ್ದರೆ ಅದಕ್ಕೆ ಭಾವರೂಪವಾದ ತಿಳಿವೇ ಆಗಲಿ, ಅಭಾವ ರೂಪವಾದ ತಿಳಿವೇ ಆಗಲಿ ಆಗುತ್ತಿರಲಿಲ್ಲ. ಆದುದರಿಂದ ಅವುಗಳ ನೆನಪೂ ನಮಗಿರುತ್ತಿರಲಿಲ್ಲ. ನಮಗೆ ನಿದ್ರೆಯ ನೆನಪಿರುವುದಕ್ಕೆ ನಿದ್ರೆಯ ಕಾಲದಲ್ಲಿ ಒಂದು ವಿಧವಾದ ಅಲೆಗಳು ಇದ್ದವೆಂಬುದೇ ಕಾರಣ. ನೆನಪು ಎಂಬುದು ಸ್ಮೃತಿ ಎಂಬ ಮತ್ತೊಂದು ಜಾತಿಯ ವೃತ್ತಿ.

## 11. ಅನುಭೂತ ವಿಷಯಾಸಂಪ್ರಮೋಷಃ ಸ್ಮೃತಿಃ

ಟೀ॥ ಸ್ಮೃತಿಯಿಂದ ಅನುಭವಿಸಿದ ವಿಷಯಗಳ (ವೃತ್ತಿಗಳು) ಹೋಗದೆ ಇರುವಿಕೆ (ಮತ್ತು ಸಂಸ್ಕಾರಗಳ ಮೂಲಕ ಮತ್ತೆ ಬರುವಿಕೆ).

ವಿ॥ ನೆನಪು ಪ್ರತ್ಯಕ್ಷದಿಂದಲಾಗಲಿ, ತಪ್ಪು ತಿಳಿವಿನಿಂದಾಗಲಿ, ಶಬ್ದದ ಭ್ರಮೆಯಿಂದಾಗಲಿ, ನಿದ್ರೆಯಿಂದಾಗಲಿ ಬರುವುದು. ಹೇಗೆಂದರೆ, ಒಂದು ಮಾತು ಕೇಳಿಸುತ್ತದೆಯೆಂದು ಇಟ್ಟುಕೊಳ್ಳಿ. ಈ ಮಾತು ಚಿತ್ತವೆಂಬ ಸರೋವರದಲ್ಲಿ ಎಸೆದ ಕಲ್ಲಿನಂತಿರುವುದು. ಇದರಿಂದ ಒಂದು ಸಣ್ಣ ತೆರೆ ಹುಟ್ಟುವುದು. ಈ ತೆರೆಯಿಂದ ತೆರೆಗಳದೊಂದು ಸಾಲಿಗೆ ಸಾಲೇ ಹುಟ್ಟುವುದು. ಇದೇ ನೆನಪು. ನಿದ್ರೆಯಲ್ಲಿಯೂ ಹೀಗೆಯೆ. ನಿದ್ರೆಯೆಂಬ ಅಲೆಯಿಂದ ಚಿತ್ತದಲ್ಲಿ ನೆನಪೆಂಬ ಅಲೆಯಾದರೆ ಅದಕ್ಕೆ ಸ್ವಪ್ನವೆಂದು ಹೆಸರು. ಸ್ವಪ್ನವೆಂಬುದು ಎಚ್ಚರವಾಗಿರುವಾಗ ನೆನಪು ಎನ್ನಿಸಿಕೊಳ್ಳುವ ಅಲೆಯ ಮತ್ತೊಂದು ರೂಪವು.

## 12. ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ

ಟೀ॥ ಅಭ್ಯಾಸ ಮತ್ತು ವೈರಾಗ್ಯ ಇವುಗಳಿಂದ ಅವುಗಳನ್ನು ತಡೆಯಲಾಗುವುದು.

ವಿ॥ ಮನಸ್ಸಿಗೆ ವೈರಾಗ್ಯವಿರಬೇಕಾದರೆ ಅದು ಸ್ವಚ್ಛವಾಗಿಯೂ ಒಳ್ಳೆಯದಾಗಿಯೂ ವಿಚಾರಶೀಲವಾಗಿಯೂ ಇರಬೇಕು. ಅಭ್ಯಾಸ ಮಾಡುವುದೇತಕ್ಕೆ? ಎಂದರೆ ಪ್ರತಿಯೊಂದು ಕ್ರಿಯೆಯೂ ಸರೋವರದ ಮೇಲೆ ಸಂಚರಿಸುವ ತೆರೆಯಂತಿರುವುದು. ಸ್ವಲ್ಪ ಹೊತ್ತಿನಲ್ಲಿ ಮನಸ್ಸಂಚಾರವು ಕಳೆದು ಹೋಗುವುದು. ಆಮೇಲೆ ಉಳಿಯುವುದೇನು? ಸಂಸ್ಕಾರಗಳು, ವಾಸನೆಗಳು, ಇಂಥ ಸಂಸ್ಕಾರಗಳು ಮನಸ್ಸಿನಲ್ಲಿ ಹೆಚ್ಚು ಹೆಚ್ಚಾಗಿ ನಿಂತು ಕೂಡಿದವೆಂದರೆ ಅದೇ ಪದ್ಧತಿಯಾಗುವುದು. ಇಂಗ್ಲೀಷಿನಲ್ಲಿ "ಪದ್ಧತಿಯೆಂಬುದು ಎರಡನೇ ಸ್ವಭಾವವು" ಎಂಬದೊಂದು ಗಾದೆಯುಂಟು[1]. ನಿಜವಾಗಿ ನೋಡಿದರೆ ಇದೇ ಮೊದಲನೆಯ ಸ್ವಭಾವವು. ಮನುಷ್ಯನ ಪೂರ್ಣ ಸ್ವಭಾವವೇ ಪದ್ಧತಿಯೆಂದರೂ ಸಲ್ಲುವುದು. ಈಗ ನಾವು ಏನು ಏನು ಆಗಿದ್ದೇವೋ ಅದೆಲ್ಲ ಪದ್ಧತಿಯ ಫಲವು. ಇದರಿಂದ ಎಷ್ಟೋ ಮನಸ್ಸಮಾಧಾನ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಹೇಗೆಂದರೆ ಕೇವಲ ಪದ್ಧತಿಯಿಂದ ಇದೆಲ್ಲ ಆಗಿರುವುದು ನಿಜವಾಗಿದ್ದರೆ ಯಾವಾಗ ಬೇಕಾದರೂ ಅದನ್ನು ಮಾಡುವುದಕ್ಕೂ ಬಿಡುವುದಕ್ಕೂ ಬಂದೇ ಬರುತ್ತದೆ. ಹೀಗೆ ಮನೋವ್ಯಾಪಾರವಾದ ಮೇಲೆ ಮನಸ್ಸನ್ನು ಬಿಟ್ಟ ಕ್ರಿಯೆಗಳು ತಮ್ಮ ಸಂಸ್ಕಾರವನ್ನು ಬಿಟ್ಟು ಹೋಗುತ್ತವೆ. ಪ್ರತಿಯೊಂದು ಕ್ರಿಯೆಯೂ ಅದರದರ ಕಾರ್ಯವನ್ನು ಬಿಟ್ಟೇ ಹೋಗುವುದು. ಈ ಬೇರೆ ಬೇರೆ (ಸಂಸ್ಕಾರದ) ಗುರುತುಗಳೆಲ್ಲ ಸೇರಿ ನಮ್ಮ ನಡತೆಯೆನಿಸುವುದು. ಮತ್ತು ಯಾವುದೊಂದು ಅಲೆಯು ನಮ್ಮಲ್ಲಿ ಹೆಚ್ಚಾಗಿರುವುದೊ ನಾವು ಅದರಂತೆ ಇರುತ್ತೇವೆ. ಒಳ್ಳೆಯ ಅಲೆ ಬಲವಾಗಿದ್ದರೆ ಒಳ್ಳೆಯವರಾಗುತ್ತೇವೆ. ಕೆಟ್ಟದು ಬಲವಾಗಿದ್ದರೆ ಕೆಟ್ಟವರಾಗುತ್ತೇವೆ. ಸಂತೋಷದ ಅಲೆ ಬಲವಾಗಿದ್ದರೆ ಸುಖವಾಗಿರುತ್ತೇವೆ. ಕೆಟ್ಟ ನಡತೆಗಳಿಗೆಲ್ಲ ಅವುಗಳಿಗೆ ವಿರೋಧವಾದ ಪದ್ಧತಿಗಳೇ ಪ್ರತೀಕಾರವು. ಯಾವ ಯಾವ ಕೆಟ್ಟ ನಡತೆಗಳು ತಮ್ಮ ಸಂಸ್ಕಾರವನ್ನು ನಮ್ಮ ಮನಸ್ಸಿನಲ್ಲಿ ಬಿಟ್ಟಿವೆಯೊ ಅವನ್ನೆಲ್ಲ ಒಳ್ಳೆಯ ಪದ್ಧತಿಗಳಿಂದಲೆ ಗೆಲ್ಲಬೇಕು. ಯಾವಾಗಲೂ ಒಳ್ಳೆಯ ವಿಚಾರಗಳನ್ನೆ ಮಾಡುತ್ತ ಒಳ್ಳೆಯದನ್ನೆ ಮಾಡುತ್ತ ಹೋಗಬೇಕು. ಕೆಟ್ಟ ವಾಸನೆಗಳನ್ನು ತಪ್ಪಿಸುವುದಕ್ಕೆ ಅದೊಂದೇ ದಾರಿ. ಯಾವನೇ ಆಗಲಿ ತಿದ್ದುವುದಕ್ಕಾಗುವುದಿಲ್ಲವೆಂದು ಎಂದಿಗೂ ಹೇಳಬಾರದು. ಏಕೆಂದರೆ ಅವನೂ ಒಂದು ನಡತೆಯವನಾಗಿರುತ್ತಾನೆ. ಎಂದರೆ ಕೆಲವು ನಡತೆಗಳ ಒಟ್ಟಾಗಿರುತ್ತಾನೆ. ಈ ಪದ್ಧತಿಗಳನ್ನು ಉತ್ತಮವಾದ ಹೊಸ ಪದ್ಧತಿಗಳಿಂದ ನಿಲ್ಲಿಸುವುದಕ್ಕಾಗಿಯೆ ಆಗುತ್ತದೆ. ಯೋಗ್ಯತೆಯೆಂಬುದು ಮತ್ತೆ ಮತ್ತೆ ಅನುಸರಿಸಿದ ಪದ್ಧತಿಗಳಾದುದರಿಂದ ಮತ್ತೆ ಮತ್ತೆ ಹೊಸ ಪದ್ಧತಿಗಳನ್ನು ಅನುಸರಿಸುವುದರಿಂದಲೆ ಯೋಗ್ಯತೆಯನ್ನು ತಿದ್ದಿಕೊಳ್ಳುವುದಕ್ಕಾಗುವುದು.

---

1. ಯಾವ ಪದ್ಧತಿಯನ್ನುಟ್ಟು ಇಟ್ಟುಕೊಳ್ಳುತ್ತೇವೋ ಅದು ನಮ್ಮ ಸ್ವಭಾವದಂತೆ ಆಗಿ ತಪ್ಪದೆ ನಡೆಯುವದೆಂದು ಗಾದೆಯ ಅರ್ಥ. ಬೆಂಕಿಯು ಉರಿಯುವದು ಸ್ವಭಾವ. ಹೀಗೆ ಪದ್ಧತಿಗಳು ಪ್ರಭಾವದಂತೆ ಇರುವದೆಂದು ಸ್ವಭಾವ.

## 13. ತತ್ರ ಸ್ಥಿತೌ ಯತ್ನೋಽಭ್ಯಾಸಃ

**ಟೀ॥ ಅವುಗಳನ್ನು (ಅಂದರೆ ವೃತ್ತಿಗಳನ್ನು) ಪೂರ್ಣವಾಗಿ ತಡೆದುಕೊಂಡೇ ಇರುವುದಕ್ಕೆ ಮಾಡುವ ಎಡೆಬಿಡದ ಯತ್ನವೇ ಅಭ್ಯಾಸವು.**

ವಿ॥ ಅಭ್ಯಾಸವೆಂದರೇನು? ಮನಸ್ಸನ್ನು ಚಿತ್ತದ ರೂಪದಲ್ಲಿಯೆ ಇಟ್ಟುಕೊಳ್ಳುವುದು ಅಥವಾ ಅದರಲ್ಲಿ ಅಲೆಗಳುಂಟಾಗದಂತೆ ಮಾಡುವುದು.

## 14. ಸ ತು ದೀರ್ಘಕಾಲನೈರಂತರ್ಯಸತ್ಕಾರಾಸೇವಿತೋ ದೃಢಭೂಮಿಃ

ಟೀ॥ ಬಹುಕಾಲ ಬಿಡದೆ (ತಾನು ಪಡೆಯಬೇಕಾದ ಪುರುಷಾರ್ಥದಲ್ಲಿ) ಪೂರ್ಣಪ್ರೇಮವನ್ನಿಟ್ಟು ಪ್ರಯತ್ನ ಮಾಡಿದರೆ ಇದರ ನೆಲಗಟ್ಟು ಬಲವಾಗುವುದು. ಮನಸ್ಸನ್ನು ತಡೆಯುವುದು ಒಂದು ದಿನದಲ್ಲಿ ಆಗುವುದಿಲ್ಲ. ಬಹುದಿನಗಳವರೆಗೆ ಬಿಡದೆ ಅಭ್ಯಾಸಮಾಡಬೇಕು.

## 15. ದೃಷ್ಟಾನುಶ್ರವಿಕವಿಷಯವಿತೃಷ್ಣಸ್ಯ ವಶೀಕಾರಸಂಜ್ಞಾ ವೈರಾಗ್ಯಮ್.

ಟೀ॥ ನೋಡಿದ ಅಥವಾ ಕೇಳಿದ ವಿಷಯಗಳ ಬಯಕೆ ಹೋಗಿ ಅವುಗಳನ್ನು ಆಳಬೇಕೆಂಬ ಮನಸ್ಸಾಗುವ ಸ್ಥಿತಿಯೆ ವೈರಾಗ್ಯವು.

ವಿ॥ ನಾವು ಮಾಡುವ ಕೆಲಸಗಳಲ್ಲಿ ನಮಗೆ ಮನಸ್ಸು ಹಾಕುವಂತೆ ಮಾಡುವುದಕ್ಕೆ ಎರಡು ಕಾರಣಗಳುಂಟು. ಅವು ಯಾವುವೆಂದರೆ (1) ನಾವು ನೋಡುವುದು. (2) ಇತರರ ಅನುಭವ. ಈ ಎರಡು ಶಕ್ತಿ ವಿಶೇಷಗಳು ಮನಸ್ಸೆಂಬ ಸರೋವರದಲ್ಲಿ ಬಗೆಬಗೆಯ ಅಲೆಯನ್ನುಂಟುಮಾಡುತ್ತಿರುವುವು. ಈ ಶಕ್ತಿ ವಿಶೇಷಗಳನ್ನು ಎದುರಿಸಿ ಮನಸ್ಸನ್ನು ಬಿಗಿಹಿಡಿಯುವುದಕ್ಕೆ ಬೇಕಾದ ಶಕ್ತಿಯೇ ವೈರಾಗ್ಯವು. ಇವುಗಳಲ್ಲಿ ವೈರಾಗ್ಯವೇ ನಮಗೆ ಬೇಕಾದುದು. ನಾನು ಒಂದು ಬೀದಿಯಲ್ಲಿ ಹೋಗುತ್ತಿರುತ್ತೇನೆ. ಅಲ್ಲಿ ಒಬ್ಬನು ಬಂದು ನನ್ನ ಗಡಿಯಾರವನ್ನು ತೆಗೆದುಕೊಂಡು ಹೋಗಿಬಿಡುತ್ತಾನೆ. ಇದು ನಾನೇ ಕಂಡ ಅನುಭವ. ಇದನ್ನು ನಾನೇ ನೋಡುತ್ತಿರುತ್ತೇನೆ. ಇದು ನನ್ನ ಚಿತ್ತದಲ್ಲಿ ಕೂಡಲೆ ಸಿಟ್ಟೆಂಬ ರೂಪದ ಒಂದು ಅಲೆಯನ್ನು ಹುಟ್ಟಿಸುವುದು. ಇದನ್ನು ಬರಗೊಡಿಸಬಾರದು. ಇದನ್ನು ತಡೆಯದಿದ್ದರೆ ಏನೂ ಪ್ರಯೋಜನವಿಲ್ಲ; ತಡೆದರೆ ವೈರಾಗ್ಯವಿದ್ದಂತಾಯಿತು. ಇನ್ನು ಪ್ರಾಪಂಚಿಕರ ಅನುಭವದಿಂದ ವಿಷಯಗಳನುಭವವೇ ಎಲ್ಲದಕ್ಕಿಂತಲೂ ಹೆಚ್ಚಿನದೆಂದು ನಮಗೆ ತಿಳಿದುಬರುವುದು. ಇದರಿಂದ ಎಷ್ಟೋ ಆಸೆ ಹುಟ್ಟುವುದು. ಇವುಗಳನ್ನು ಒತ್ತಟ್ಟಿಗಿಟ್ಟು ಅವುಗಳ ವಿಷಯದಲ್ಲಿ ಚಿತ್ತವು ಅಲೆಗಳನ್ನು ಹೊಂದದಂತೆ ಮಾಡುವುದೇ ವೈರಾಗ್ಯ. ಹೀಗೆ ನನ್ನ ಅನುಭವದಿಂದಲೂ ಇತರರ ಅನುಭವದಿಂದಲೂ ಉಂಟಾಗುವ ಎರಡು ಬಗೆಯ ಕೆಲಸಕ್ಕೆ ಹಚ್ಚುವ ಶಕ್ತಿಗಳನ್ನು ತಡೆದುಕೊಂಡು ಚಿತ್ತವನ್ನು ಇವುಗಳ ವಶಮಾಡದೆ ಇರುವುದೇ ವೈರಾಗ್ಯವು. "ಇವುಗಳನ್ನು ನಾನು ಆಳಬೇಕೇ ಹೊರತು ನಾನು ಅವುಗಳ ಆಳಾಗಬಾರದು" ಇಂಥ ಮನಸ್ಸಿನ ನಿಶ್ಚಯವೇ ವೈರಾಗ್ಯವೆನಿಸುವುದು. ವೈರಾಗ್ಯವೇ ಮೋಕ್ಷಕ್ಕೆ ಮಾರ್ಗವು.

## 16. ತತ್ಪರಂ[1] ಪುರುಷಖ್ಯಾತೇರ್ಗುಣವೈತೃಷ್ಣ್ಯಮ್.

ಟೀ|| ಗುಣಗಳನ್ನು ಕೂಡ ಬಿಟ್ಟುಬಿಡುವ ಉತ್ತಮವಾದ ವೈರಾಗ್ಯವು ಪುರುಷನ (ನಿಜವಾದ ಸ್ವರೂಪವ)ನ್ನು ತೋರಿಸುವುದು.

ವಿ|| ಗುಣಗಳಲ್ಲಿರುವ ಆಸಕ್ತಿಯನ್ನು ಕೂಡ ತಪ್ಪಿಸುವ ವೈರಾಗ್ಯವೇ ಎಲ್ಲದಕ್ಕಿಂತಲೂ ಹೆಚ್ಚಿನದು. ಇಲ್ಲಿ ಪುರುಷನೆಂದರೇನು? ಗುಣಗಳೆಂದರೇನು? ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಯೋಗಸಿದ್ಧಾಂತದಂತೆ ಪ್ರಪಂಚವೆಲ್ಲ ಮೂರು ಗುಣಗಳೆಂಬ ಶಕ್ತಿವಿಶೇಷಗಳಿಂದಾಗಿರುವುದು. ಇವುಗಳಲ್ಲಿ ಒಂದಕ್ಕೆ ತಮಸ್ಸೆಂದೂ ಇನ್ನೊಂದಕ್ಕೆ ರಜಸ್ಸೆಂದೂ ಮತ್ತೊಂದಕ್ಕೆ ಸತ್ತ್ವವೆಂದೂ ಹೆಸರು. ಭೌತಿಕ ಪ್ರಪಂಚದಲ್ಲಿ ಈ ಮೂರು ಗುಣಗಳು ಮಬ್ಬು ಅಥವಾ ಸುಮ್ಮನಿರುವಿಕೆ, ಎಳೆದುಕೊಳ್ಳುವಿಕೆ ಅಥವಾ ದೊಬ್ಬುವಿಕೆ, ಮತ್ತು ಇವೆರಡರ ಸಾಮ್ಯಸ್ಥಿತಿ ಈ ಮೂರು ವಿಧವಾಗಿ ತೋರುತ್ತಿರುವುವು. ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳೂ ಎಲ್ಲಾ ರೂಪಗಳೂ ಈ ಮೂರು ಗುಣಗಳು ವಿಧವಿಧವಾಗಿ ಸೇರುವುದರಿಂದ ಆಗಿರುವುವು. ಸಾಂಖ್ಯರು ಜಗತ್ತನ್ನು ಬೇರೆ ಬೇರೆ ತತ್ತ್ವಗಳಾಗಿ ವಿಂಗಡಿಸಿರುವರು. ಮನುಷ್ಯನಲ್ಲಿರುವ ಆತ್ಮವು ಈ ತತ್ತ್ವಗಳನ್ನೆಲ್ಲ ಮೀರಿರುವುದು. ಎಂದರೆ ಜಗತ್ತನ್ನೆ ಬಿಟ್ಟು ಪುರುಷನು ಇರುವನು. ಅದು ಪ್ರಕಾಶರೂಪವಾಗಿಯೂ ಶುದ್ಧವಾಗಿಯೂ ಪೂರ್ಣವಾಗಿಯೂ ಇರುವುದು. ಜಗತ್ತಿನಲ್ಲಿ ಎಲ್ಲೆಲ್ಲಿ ಚೈತನ್ಯವಿರುವುದೊ ಅದೆಲ್ಲ ಪ್ರಕೃತಿಯಲ್ಲಿ – ಜಗತ್ತಿನಲ್ಲಿ – ಹೊಳೆಯುವ ಈ ಪುರುಷನ ಪ್ರತಿಬಿಂಬವೆಂದು ಅರಿಯಬೇಕು. ಈ ಪ್ರಕೃತಿಯೆಂಬುದು ಜಡ ಸ್ವರೂಪವಾದುದು. ಈ ಪ್ರಕೃತಿಯೆಂಬ ಮಾತಿನಲ್ಲಿ ಮನಸ್ಸೂ ಸೇರಿರುವುದೆಂಬುದನ್ನು ನೆನಪಿನಲ್ಲಿಡಬೇಕು. ಮನಸ್ಸು ಪ್ರಕೃತಿಯಲ್ಲಿಯೆ ಇರುವುದು. ಯೋಚನೆಯೆಂಬುದು ಪ್ರವೃತ್ತಿಯಲ್ಲಿಯೇ ಇರುವುದು. ಈ ಯೋಚನೆಯಿಂದ ಮೊದಲು ಮಾಡಿಕೊಂಡು ಅತ್ಯಂತ ಸ್ಥೂಲರೂಪವಾದ ಪದಾರ್ಥಗಳವರೆಗೂ ಇರುವ ಪ್ರತಿಯೊಂದು ವಸ್ತುವೂ ಪ್ರಕೃತಿಯೆ ಅಥವಾ ಪ್ರಕೃತಿಯ ರೂಪಾಂತರವೆ. ಈ ಪ್ರಕೃತಿಯು ಮನುಷ್ಯನಲ್ಲಿರುವ ಪುರುಷನನ್ನು ಮರೆಮಾಡಿಕೊಂಡಿರುವುದು. ಈ ಮರೆಯನ್ನು ಪ್ರಕೃತಿಯು ತೆಗೆದುಹಾಕಿದೊಡನೆಯೆ ಪುರುಷನು ತನ್ನ ಪರಮರೂಪದಲ್ಲಿ ತೋರಿಸಿಕೊಳ್ಳುವನು. 15ನೆಯ ಸೂತ್ರದಲ್ಲಿ ವಿವರಿಸಿರುವ ವೈರಾಗ್ಯವು (ಎಂದರೆ ಪ್ರಪಂಚದ ವಿಷಯಗಳನ್ನೆ ಆಳುವ ಶಕ್ತಿಯು) ಈ ಆತ್ಮವನ್ನು ಪ್ರಕಟಮಾಡುವುದಕ್ಕೆ ಅತ್ಯುತ್ತಮವಾದ ಸಾಧನವು. ಮುಂದಿನ ಸೂತ್ರದಲ್ಲಿ ಯೋಗಿಯು ಪಡೆಯಬೇಕಾಗಿರುವ ಸಮಾಧಿಯೆಂಬುದರ ಲಕ್ಷಣವನ್ನು ತಿಳಿಸುತ್ತದೆ.

## 17. ವಿತರ್ಕವಿಚಾರಾನನ್ದಾಸ್ಮಿತಾರೂಪಾನುಗಮಾತ್ಸಂಪ್ರಜ್ಞಾತಃ

ಟೀ|| ವಿತರ್ಕ, ವಿಚಾರ, ಆನಂದ, ಅಹಂಕಾರ ಇವುಗಳಿಂದ ಕೂಡಿರುವುದು ಸಂಪ್ರಜ್ಞಾತ (ಒಳ್ಳೆಯ ಜ್ಞಾನ) ವೆಂಬ ಸಮಾಧಿಯು.

---

1. ಈ ಸೂತ್ರಕ್ಕೆ ವ್ಯಾಖ್ಯಾನಕಾರರು "ಪುರುಷನನ್ನು ನೋಡಿದ ಬಳಿಕ ಈ ವೈರಾಗ್ಯವು ಉತ್ತಮವಾಗಿ ಗುಣಗಳಲ್ಲಿರುವ ಆಸಕ್ತಿಯನ್ನು ಕೂಡ ತಪ್ಪಿಸುವುದು" ಎಂದು ಅರ್ಥವನ್ನು ಬರೆದಿದ್ದಾರೆ. ಪುರುಷನನ್ನು ನೋಡುವುದೇ ಫಲವಾದುದರಿಂದ ಗುಣಗಳ ಆಸಕ್ತಿಯನ್ನು ಬಿಡುವುದು ಸಾಧನವೆಂದು ತೋರಿಸುವುದಕ್ಕೆ ಸ್ವಾಮಿಗಳು ಹೀಗೆ ಅರ್ಥಮಾಡಿರಬಹುದು.

ವಿ॥ ಸಮಾಧಿಯಲ್ಲಿ ಎರಡು ವಿಧವು. ಒಂದಕ್ಕೆ ಸಂಪ್ರಜ್ಞಾತವೆಂದೂ ಇನ್ನೊಂದಕ್ಕೆ ಅಸಂಪ್ರಜ್ಞಾತವೆಂದೂ ಹೆಸರು. ಸಂಪ್ರಜ್ಞಾತ ಸಮಾಧಿಯಲ್ಲಿ ಪ್ರಕೃತಿಯನ್ನೆ ಆಳುವ ಸಿದ್ಧಿಗಳೆಲ್ಲ ಬರುತ್ತವೆ. ಇದರಲ್ಲಿ ನಾಲ್ಕು ಬಗೆಯುಂಟು. ಮೊದಲನೆಯದಕ್ಕೆ ಸವಿತರ್ಕವೆಂದು ಹೆಸರು. ಇಲ್ಲಿ ಮನಸ್ಸು ಒಂದು ವಸ್ತುವನ್ನು ಇತರ ವಸ್ತುಗಳಿಂದ ಬೇರ್ಪಡಿಸಿ ಮತ್ತೆ ಮತ್ತೆ ಅದನ್ನೆ ಧ್ಯಾನಿಸುತ್ತಿರುವುದು. ಸಾಂಖ್ಯರ ಇಪ್ಪತ್ತೈದು ತತ್ತ್ವಗಳಲ್ಲಿ ಧ್ಯಾನ ಮಾಡುವುದಕ್ಕೆ ತಕ್ಕ ವಸ್ತುಗಳು ಎರಡು ಬಗೆ. ಪ್ರಕೃತಿಯಲ್ಲಿರುವ ಜಡ ರೂಪವಾದ ಇಪ್ಪತ್ನಾಲ್ಕು ತತ್ತ್ವಗಳು ಒಂದು ಜಾತಿ. ಚೈತನ್ಯರೂಪವಾದ ಪುರುಷನೊಬ್ಬನೇ ಒಂದು ಜಾತಿ. ಈ ಯೋಗದ ಭಾಗಕ್ಕೆಲ್ಲ ಸಾಂಖ್ಯವೇ ಆಧಾರವು. ಈ ಸಾಂಖ್ಯದ ವಿಷಯವಾಗಿ ಮೊದಲೇ ಹೇಳಿರುತ್ತೇನೆ. ಅಹಂಕಾರ, ಮನಸ್ಸು, ಬುದ್ಧಿ ಇವೆಲ್ಲಕ್ಕೂ ಚಿತ್ತವೆಂಬುದೊಂದೇ ಆಧಾರವೆಂಬುದೂ, ಅದರಿಂದಲೇ ಅವೆಲ್ಲ ಆಗಿರುವುದೆಂಬುದೂ ನಿಮಗೆ ಜ್ಞಾಪಕದಲ್ಲಿರಬಹುದು. ಈ ಚಿತ್ತವು ಜಗತ್ತಿನಲ್ಲಿರುವ ಶಕ್ತಿ ವಿಶೇಷಗಳನ್ನು ತೆಗೆದುಕೊಂಡು ಅವುಗಳನ್ನು ಯೋಚನೆಯ ರೂಪದಲ್ಲಿ ಹೊರಕ್ಕೆ ಬಿಡುತ್ತದೆ. ಇನ್ನು ಶಕ್ತಿಯೂ[1] ವಸ್ತುವೂ ಎರಡೂ ಒಂದುಗೂಡಿರುವ ಇವುಗಳಿಂದ ಬೇರೆ ಆದ ಪದಾರ್ಥವೊಂದಿರಬೇಕಷ್ಟೆ. ಇದನ್ನೆ ಅವ್ಯಕ್ತವೆನ್ನುವರು. ಇದು ಸೃಷ್ಟಿಗೆ ಪೂರ್ವದಲ್ಲಿರುವ ಪ್ರಕೃತಿಯ ಮೂಲರೂಪವು, ಎಲ್ಲಾ ಜಗತ್ತು ಕಲ್ಪಾಂತದಲ್ಲಿ ಇದರಲ್ಲಿ ಸೇರಿಕೊಳ್ಳುವುದು; ಮತ್ತೊಂದು ಕಾಲದಲ್ಲಿ ಇದರಿಂದಲೆ ಹೊರಗೆ ಬರುವುದು. ಈ ಅವ್ಯಕ್ತವನ್ನು ಮೀರಿ ಚೈತನ್ಯಸ್ವರೂಪನಾದ ಪುರುಷನಿರುವನು. ತಿಳಿವೆಂಬುದೇ ಶಕ್ತಿಯಾದುದರಿಂದ ಒಂದು ಪದಾರ್ಥವನ್ನು ತಿಳಿದುಕೊಂಡ ಕೂಡಲೆ ಅದು ನಮ್ಮ ಶಕ್ತಿಗೊಳಗಾಗುವುದು. ಇದರಂತೆ ಮನಸ್ಸು ಪಂಚಭೂತಗಳನ್ನು ಧ್ಯಾನಮಾಡುವುದಕ್ಕೆ ಪ್ರಾರಂಭಿಸುತ್ತಲೆ ಅವು ಇದರ ವಶವಾಗುವುವು. ಹೊರಗಣ ಸ್ಥೂಲಭೂತಗಳನ್ನು ಕುರಿತು ಧ್ಯಾನಮಾಡುತ್ತಿರುವುದಕ್ಕೆ ಸವಿತರ್ಕವೆಂದು ಹೆಸರು. ವಿತರ್ಕವೆಂದರೆ ಕೇಳುವುದು. ಸವಿತರ್ಕವೆಂದರೆ ವಿತರ್ಕದಿಂದ ಕೂಡಿರುವುದು. ಭೂತಗಳನ್ನು ಯಾವನು ಧ್ಯಾನಿಸುತ್ತಾನೋ ಅವನಿಗೆ ತಮ್ಮ ತತ್ತ್ವವನ್ನು – ಶಕ್ತಿ ವಿಶೇಷಗಳನ್ನು–ಕೊಡಬೇಕೆಂದು ಕೇಳುವುದು ಸವಿತರ್ಕವೆನ್ನಬಹುದು. ಇಂಥ ಶಕ್ತಿಗಳನ್ನು ಪಡೆಯುವುದರಿಂದ ಮೋಕ್ಷವೇನೂ ಆಗುವುದಿಲ್ಲ. ಈ ಶಕ್ತಿಗಳ ಸಿದ್ಧಿಯನ್ನು ಬಯಸುವುದೂ ಭೋಗಕ್ಕೆಂದು ಮಾಡುವ ಪ್ರಾಪಂಚಿಕ ಯತ್ನವೆ. ಈ ಸಂಸಾರದಲ್ಲಿ ಸುಖವೆಂಬುದಿಷ್ಟಾದರೂ ಇಲ್ಲ. ಸುಖವನ್ನು ಹುಡುಕುವುದಷ್ಟೂ ನಿಷ್ಪ್ರಯೋಜನವೆ. ಇದು ಬಹು ಪುರಾತನವಾದ ಸಂಗತಿ. ಇದನ್ನು ತಿಳಿದುಕೊಳ್ಳುವುದೆಂದರೆ ಜನಕ್ಕೆ ಬಹು ಕಷ್ಟವಾಗಿರುವುದು. ಯಾವಾಗ ಇದನ್ನು ತಿಳಿದುಕೊಳ್ಳುತ್ತಾರೋ ಆಗಲೆ ಅವರು ಪ್ರಪಂಚದಿಂದ ಆಚೆಗೆ ಹೋಗಿ ಮುಕ್ತರಾಗುವರು. ಸಿದ್ಧಿಗಳನ್ನು ಪಡೆಯುವುದು ಈ ಪ್ರಪಂಚವನ್ನು ಬಲಪಡಿಸುವುದಲ್ಲದೆ ಮತ್ತೆ ಬೇರೆ ಅಲ್ಲ. ಕೊನೆಗೆ ಇದರಿಂದ ದುಃಖವೇ ಹೆಚ್ಚುವುದು. ಶಾಸ್ತ್ರಕಾರರಾದ ಮೇಲೆ ಪತಂಜಲಿಗಳು ಈ ಶಾಸ್ತ್ರದಿಂದ ಆಗಬಹುದಾದ ಸಿದ್ಧಿಗಳನ್ನು ತಿಳಿಸಬೇಕಾದುದೇನೋ ಅಗತ್ಯವಾದುದರಿಂದ ಇವುಗಳನ್ನು ಹೇಳಿದ್ದಾರೆ. ಆದರೆ ಇವುಗಳಿಗೆ ಒಳಗಾಗಬಾರದೆಂದು ಸಂದರ್ಭ ಸಿಕ್ಕಿದಾಗಲೆಲ್ಲ ಎಚ್ಚರಿಕೆಯನ್ನು ಕೊಡದೆ ಬಿಡುವುದಿಲ್ಲ.

---

1. ಪ್ರಪಂಚದಲ್ಲಿರುವ ವಸ್ತುಗಳನ್ನೆಲ್ಲ ಮನಸ್ಸೆಂದೂ (ಶಕ್ತಿ), ಭೌತಿಕ ಪದಾರ್ಥ (ವಸ್ತು) ವೆಂದೂ ಎರಡು ಪಂಗಡವಾಗಿ ವಿಂಗಡಿಸುವ ಪದ್ಧತಿಯು ಪಾಶ್ಚಿಮಾತ್ಯರಲ್ಲಿರುವದು. ಇವೆರಡಕ್ಕೂ ಮೂಲವಾಗಿರುವದೇ ಸಾಂಖ್ಯರ ಅವ್ಯಕ್ತವು.

ಇದೇ ಭೂತಗಳನ್ನು ಕಾಲದೇಶಗಳಿಂದ ಹೊರಪಡಿಸಿ ಅವುಗಳ ಸ್ವರೂಪವನ್ನೇ ಧ್ಯಾನಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅದಕ್ಕೆ "ನಿರ್ವಿತರ್ಕ" (ಕೇಳದೆ ಇರುವುದು) ಎಂದು ಹೆಸರು. ಈ ಧ್ಯಾನವು ಇನ್ನೊಂದು ಮೆಟ್ಟಲು ಹತ್ತಿದರೆ ತನ್ಮಾತ್ರೆಗಳನ್ನು[1] ಕುರಿತು ದೇಶಕಾಲಗಳಲ್ಲಿರುವಂತೆ ಧ್ಯಾನ ಮಾಡುತ್ತಿದ್ದರೆ ಸವಿಚಾರ (ವಿಚಾರದೊಡನೆ ಕೂಡಿರುವುದು) ಎಂದು ಹೆಸರು. ಈ ಧ್ಯಾನದಲ್ಲಿ ದೇಶಕಾಲಗಳನ್ನು ಬಿಟ್ಟು ಬಿಟ್ಟರೆ ಅದಕ್ಕೆ ನಿರ್ವಿಚಾರ (ವಿಚಾರವಿಲ್ಲದುದು) ಎಂದು ಹೆಸರು. ಸ್ಥೂಲ ಮತ್ತು ಸೂಕ್ಷ್ಮ ಇವೆರಡು ಭೂತಗಳನ್ನು ಬಿಟ್ಟು ಅಂತಃಕರಣ (ಯೋಚನೆ ಮಾಡುವ ಇಂದ್ರಿಯ) ವನ್ನು ಕುರಿತು ಧ್ಯಾನ ಮಾಡುವುದು ಇದಕ್ಕಿಂತ ಮೇಲಣ ಮೆಟ್ಟಿಲು. ಅಂತಃಕರಣವನ್ನು ರಜೋಗುಣ (ಚಂಚಲತೆ), ತಮೋಗುಣ (ಮಂಕಾಗಿರುವುದು), ಇವುಗಳನ್ನು ಬಿಟ್ಟು ಧ್ಯಾನಿಸುತ್ತಿದ್ದರೆ ಸಾನಂದಂ ಎಂದರೆ ಆನಂದದಿಂದ ಕೂಡಿದ ಸಮಾಧಿಯೆನಿಸುವುದು. ಚಿತ್ತವನ್ನೆ ಕುರಿತು ಧ್ಯಾನ ಮಾಡುತ್ತ ಧ್ಯಾನವು ಪೂರ್ಣವಾಗಿ ಒಂದೇ ಕಡೆಯಲ್ಲಿ ನಿಂತು ಸ್ಥೂಲ ಸೂಕ್ಷ್ಮ ಪದಾರ್ಥಗಳೆಂಬ ಭಾವನೆಯೇ ಹೋಗಿ ಆತ್ಮನಲ್ಲಿ ಮಿಕ್ಕ ಪದಾರ್ಥಗಳಿಗಿಂತ ಬೇರೆ ಆಗಿ ಸತ್ತ್ವ ಸ್ಥಿತಿಯೊಂದೇ ಉಳಿದುಕೊಂಡು ಇದ್ದರೆ ಅದಕ್ಕೆ ಅಸ್ಮಿತಾ ಸಮಾಧಿಯೆಂದು ಹೆಸರು. ಈ ಸಮಾಧಿಯುನ್ನು ಪಡೆದವನಿಗೆ ವೇದದಲ್ಲಿ ಅಶರೀರತ್ವವೆಂದು ಹೇಳಿರುವ ಸ್ಥಿತಿ ಬಂದಂತಾಯಿತು. ಅವನಿಗೆ ಸ್ಥೂಲ ಶರೀರದ ಭಾವನೆಯೇ ಇರುವುದಿಲ್ಲ. ತನಗೆ ಸ್ಥೂಲ ದೇಹವೇ ಇಲ್ಲವೆಂದು ಅವನಿಗೆ ತೋರುತ್ತಿರುವುದು. ಆದರೆ ಅವನಿಗೆ ಸೂಕ್ಷ್ಮ ಶರೀರವು ಇರುವುದು ಗೊತ್ತಾಗಿಯೇ ತೀರುವುದು. ಪಡೆಯಬೇಕಾದ ಸ್ಥಾನವನ್ನು ಪಡೆಯದೆಯೆ ಈ ಸ್ಥಿತಿಯಲ್ಲಿಯೆ ಪ್ರಕೃತಿಯಲ್ಲಿ ಸೇರಿಕೊಳ್ಳುವವರಿಗೆ ಪ್ರಕೃತಿಲಯವೆಂದು ಹೆಸರು. ಈ ಸ್ಥಿತಿಯನ್ನು ಮೀರಿದವರು ಮೋಕ್ಷವೆಂಬ ಕೊನೆಯ ಗತಿಯನ್ನು ಮುಟ್ಟುವರು.

## 18. ವಿರಾಮಪ್ರತ್ಯಯಾಭ್ಯಾಸಪೂರ್ವಃ ಸಂಸ್ಕಾರಶೇಷೋಽನ್ಯಃ

ಟೀ|| ಮನಸ್ಸಿನ ವ್ಯಾಪಾರವನ್ನೆಲ್ಲ ನಿಲ್ಲಿಸುವದನ್ನು ಬಿಡದೆ ಅಭ್ಯಾಸಮಾಡುವದರಿಂದ ಬರುವ ಇನ್ನೊಂದು ಸಮಾಧಿಯುಂಟು. ಈ ಸಮಾಧಿಯಲ್ಲಿ ಹೊರತೋರದೆ ಇರುವ ಸಂಸ್ಕಾರಗಳು ಮಾತ್ರ ಚಿತ್ತದಲ್ಲಿ ಉಳಿಯುತ್ತದೆ.

ವಿ|| ಇದು ಪೂರ್ಣವಾಗಿ ಅರಿವಿನ ಸ್ಥಿತಿಯನ್ನು ಮೀರಿದ ಅಸಂಪ್ರಜ್ಞಾತ ಸಮಾಧಿಯೆಂಬ ಮುಕ್ತಿಯನ್ನು ಕೊಡುವ ಸ್ಥಿತಿಯು. ಮೊದಲು ಹೇಳಿದ ಸ್ಥಿತಿಯಿಂದ ಮುಕ್ತಿಯಾಗಲಾರದು: ಆತ್ಮನಿಗೆ ಅದರಿಂದ ಬಿಡುಗಡೆಯಾಗಲಾರದು. ಮನುಷ್ಯನಿಗೆ ಎಲ್ಲಾ ಸಿದ್ಧಿಗಳೂ ಬಂದರೂ ಕೆಳಗೆ ಬೀಳುವುದುಂಟು. ಜೀವನು ಪ್ರಕೃತಿಯನ್ನು ದಾಟಿದ ಹೊರತು ಇವನು ಕೆಡುವುದಿಲ್ಲವೆಂಬ ನಂಬಿಕೆಯಿಲ್ಲ. ಈ ದಾಟುವ ಮಾರ್ಗವು ನೋಡುವುದಕ್ಕೆ ಸುಲಭವಾಗಿ ಕಂಡರೂ ನಿಜವಾಗಿ ಬಹಳ ಕಷ್ಟವಾಗಿರುವುದು. ಈ ಮಾರ್ಗವಾವುದೆಂದರೆ ಮನಸ್ಸನ್ನೆ ಧ್ಯಾನ ಮಾಡುತ್ತಿರಬೇಕು. ಯಾವಾಗ ಒಂದು ವೃತ್ತಿ (ಯೋಚನೆ) ಬರುವುದೊ ಕೂಡಲೆ ಅದನ್ನು ಕೆಡವಿ ಒಂದು

---

1. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಇವುಗಳ ಸ್ಥೂಲರೂಪವನ್ನು ಮಹಾ ಭೂತಗಳೆಂದೂ ಇವುಗಳ ಸೂಕ್ಷ್ಮ ರೂಪಕ್ಕೆ ತನ್ಮಾತ್ರೆಗಳೆಂದೂ ಹೆಸರು.

ವೃತ್ತಿಯನ್ನೂ ಮನಸ್ಸಿನೊಳಕ್ಕೆ ಬರಗೊಡದೆ ಆ ಮನಸ್ಸನ್ನು ಪೂರ್ಣಶೂನ್ಯವಾಗಿ ಮಾಡಿಬಿಡಬೇಕು. ಉಪದೇಶವೂ ಸಾಧನವೂ ಇಲ್ಲದವರು ತಮ್ಮ ಮನಸ್ಸನ್ನು ಬರೀದು ಮಾಡುವುದಕ್ಕೆ ಪ್ರಯತ್ನಿಸಿ ಬಹುಮಟ್ಟಿಗೆ ಅಜ್ಞಾನದ ಕಾರಣವಾದ ತಮೋಗುಣವನ್ನು ಮರೆಮಾಡಿಕೊಳ್ಳುವರು. ಇದರಿಂದ ಮನಸ್ಸು ಮಂಕಾಗಿ, ಬೆಪ್ಪಾಗಿ, ಇವರಿಗೆ ಮನಸ್ಸು ಬರೀದಾಗುತ್ತಿದೆಯೆಂಬ ಭಾವನೆಯಾಗುವುದು. ನಿಜವಾಗಿ ಇದನ್ನು ಮಾಡುವುದಕ್ಕೆ ಹೆಚ್ಚಿನ ಶಕ್ತಿಯೂ ಭಾರಿ ಸಾಮರ್ಥ್ಯವೂ ಬೇಕಾಗುವುದು. ಈ ಅಸಂಪ್ರಜ್ಞಾತವೆಂಬ ಸ್ಥಿತಿಯು ಬಂದರೆ ಸಮಾಧಿಯು ನಿರ್ಬೀಜವಾಗುವುದು. ಹಾಗೆಂದರೇನು? ಯಾವ ಸಮಾಧಿಯಲ್ಲಿ ಅರಿವು ಇರುವುದೊ, ಯಾವ ಸಮಾಧಿಯಲ್ಲಿ ಮನಸ್ಸು ಚಿತ್ತದ ಅಲೆಗಳನ್ನು ತಗ್ಗಿಸಿ ಸುಮ್ಮನೆ ಕೆಳಗೆ ನಿಲ್ಲಿಸಿಕೊಂಡಿರುವುದೊ, ಅಲ್ಲಿ ಅಲೆಗಳು ವಾಸನೆಗಳ ರೂಪದಲ್ಲಿದ್ದುಕೊಂಡಿರುತ್ತವೆ. ಈ ವಾಸನೆಗಳು (ಅಥವಾ ಬೀಜಗಳು) ಕಾಲ ಬಂದಾಗ ಮತ್ತೆ ಅಲೆಗಳಾಗುವುವು. ಆದರೆ ಈ ಎಲ್ಲಾ ವಾಸನೆಗಳನ್ನೂ ನಾಶ ಮಾಡಿ ಮನಸ್ಸನ್ನೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ನಾಶಮಾಡಿಬಿಟ್ಟರೆ ಆಗ ಸಮಾಧಿಯು ಬೀಜವಿಲ್ಲದಂತಾಗುವುದು. ಇನ್ನು ಮುಂದೆ ಮನಸ್ಸಿನಲ್ಲಿ ಈ ಸಂಸಾರವೆಂಬ ಗಿಡವನ್ನು – ಈ ಹುಟ್ಟುಹೊಂದುಗಳ ಚಕ್ರವನ್ನು– ಬೆಳೆಯುವ ಬೀಜಗಳೇನೂ ಇರುವುದಿಲ್ಲ.

"ಮನಸ್ಸೆ ಇಲ್ಲದಿದ್ದರೆ – ತಿಳಿವೇ ಇಲ್ಲದಿದ್ದರೆ – ಅದೆಂಥ ಸ್ಥಿತಿ?" ಎಂದು ನೀವು ಕೇಳಬಹುದು. ನಾವು ತಿಳಿವು ಎನ್ನುತ್ತೇವಲ್ಲ, ಈ ಸ್ಥಿತಿಯು ತಿಳಿವನ್ನು ಮೀರಿದ ಸ್ಥಿತಿಗಿಂತ ಕೀಳಾದುದು. ತೀರ ತುದಿಗಳು ಬಹುಮಟ್ಟಿಗೆ ಒಂದೇ ರೀತಿಯಾಗಿ ಕಾಣುವವೆಂಬುದನ್ನು ಯಾವಾಗಲೂ ನೆನಪಿಡಬೇಕು. ಹೇಗೆಂದರೆ ಆಕಾಶದ ತೀರ ಮೆಲ್ಲಗೆ ನಡೆವ ಕಂಪನೆಯನ್ನು[1] ಕತ್ತಲೆಯೆಂದು ಭಾವಿಸಿದರೆ ಮಧ್ಯ ಸ್ಥಿತಿಯು ಬೆಳಕಾಗಿರುವುದು. ಇದಕ್ಕಿಂತ ಹೆಚ್ಚಿನ ಕಂಪನೆಯು ಮತ್ತೆ ಕತ್ತಲೆಯೇ ಆಗುವುದು. ಹೀಗೆಯೆ ಅಜ್ಞಾನ (ಮರವು) ಎಂಬುದು ತೀರ ಕೆಳಗಣ ಸ್ಥಿತಿ; ಜ್ಞಾನವು (ಅರಿವು) ಮಧ್ಯ ಸ್ಥಿತಿ; ಈ ಅರಿವಿನ ಮೇಲೆ ಮತ್ತೆ ಉತ್ತಮ ಸ್ಥಿತಿಯೊಂದಿರುವುದು. ಇಲ್ಲಿಯೂ ಕೊನೆಗಳೆರಡೂ ಒಂದೇ ತೆರನಾಗಿ ಕಾಣುತ್ತಿರುವುವು. ಅರಿವೆಂಬುದೇ ಒಂದು ಕಾರ್ಯರೂಪವಾದ ವಸ್ತು; ಒಂದಾನೊಂದು ಸೇರುವಿಕೆಯಿಂದಾದುದು. ಅದು ನಿಜವಾದುದಲ್ಲ.

ಈ ಹೆಚ್ಚಿನ ಸಮಾಧಿಯನ್ನು ಬಿಡದೆ ಅಭ್ಯಾಸ ಮಾಡುವುದರಿಂದ ಆಗುವುದೇನು? ಎಂದರೆ ಚಾಂಚಲ್ಯ, ಮಂಕುತನ ಇವುಗಳಿಂದ ಆದ ಎಲ್ಲಾ ಬಗೆಯ ಹಳೇ ವಾಸನೆಗಳೂ ನಾಶವಾಗುವುವು. ಇದರ ಜೊತೆಗೆ ಸಾತ್ತ್ವಿಕ (ಒಳ್ಳೆಯ) ವಾಸನೆಗಳೂ ನಾಶವಾಗುತ್ತವೆ. ಇದನ್ನು ಬಂಗಾರವನ್ನು ಶುದ್ಧಿಮಾಡಿ ಅದರಲ್ಲಿರುವ ಬೆಸಿಗೆಯ ಲೋಹಗಳನ್ನು ತೆಗೆಯುವುದಕ್ಕಾಗಿ ಸಂಯೋಗಕಾರಕವಸ್ತುಗಳನ್ನು[2] ಉಪಯೋಗಿಸುವುದಕ್ಕೆ ಹೋಲಿಸಬಹುದು. ಅದನ್ನು

---

1. 1ನೇ ಭಾಗ 35ನೇ ಪುಟವನ್ನು ನೋಡಿ.

2. ಎರಡು ವಸ್ತುಗಳು ಬೆರೆತು ಬೆರೆತ ವಸ್ತುಗಳ ಗುಣಗಳಿಂದ ಬೇರೆಯಾ ಗುಣಗಳುಳ್ಳ ಮತ್ತೊಂದು ವಸ್ತುವೇರ್ಪಟ್ಟರೆ ಅದಕ್ಕೆ ವಸ್ತುಶಾಸ್ತ್ರದಲ್ಲಿ ಸಂಯೋಗವೆನ್ನುವರು. ಹೇಗೆಂದರೆ ಸುಣ್ಣವೂ ಅರಿಸಿನವೂ ಸೇರಿ ಕೆಂಪು ವರ್ಣವುಳ್ಳ ಒಂದು ವಸ್ತುವಾಗುವುದು. ಇಲ್ಲಿ ಹೊಸದಾಗಿ ಆದ ವಸ್ತುವಿನಲ್ಲಿ ಸುಣ್ಣದ ಗುಣವಾಗಲಿ ಅರಿಸಿನದ ಗುಣವಾಗಲಿ ಇರುವುದಿಲ್ಲ. ಆದುದರಿಂದ ಇದು ಸಂಯೋಗವು. ಇಂಥ ಸಂಯೋಗವನ್ನುಂಟು ಮಾಡುವುದಕ್ಕೆ ಉಪಯೋಗಿಸುವ ವಸ್ತುಗಳನ್ನು ಸಂಯೋಗಕಾರಕವೆನ್ನುವರು.

ಕರಗಿಸುವುದರಲ್ಲಿ ಅದರಲ್ಲಿ ಬೆರಕೆಯಾಗಿರುವ ಕಶ್ಮಲದೊಡನೆ ಈ ಸಂಯೋಗಕಾರಕಗಳು ಸುಟ್ಟು ಹೋಗಿಬಿಡುತ್ತವೆ. ಹೀಗೆಯೆ ಮೇಲಿಂದ ಮೇಲೆ ಚಿತ್ತವನ್ನು ತಡೆಯುತ್ತ ಬರುವ ಬಲದಿಂದ ಹಿಂದಿನ ಕೆಟ್ಟ ವಾಸನೆಗಳು ನಿಂತು ಕೊನೆಗೆ ಒಳ್ಳೆಯ ವಾಸನೆಗಳೂ ನಿಂತುಹೋಗುವುವು. ಒಳ್ಳೆಯ ವಾಸನೆಗಳೂ ಕೆಟ್ಟ ವಾಸನೆಗಳೂ ಒಂದನ್ನೊಂದು ತಗ್ಗಿಸಿ ಆತ್ಮವನ್ನೊಂದನ್ನೆ ಬಿಟ್ಟು ಸರ್ವವ್ಯಾಪಿಯಾಗಿಯೂ ಸರ್ವಶಕ್ತಿಯಾಗಿಯೂ ಸರ್ವಜ್ಞವಾಗಿಯೂ ಒಳ್ಳೆಯದು ಕೆಟ್ಟದ್ದು ಎಂಬ ತೊಡಕೇ ಇಲ್ಲದೆ ತನ್ನ ಪ್ರಕಾಶದಿಂದ ತಾನು ಬೆಳಗುವಂತೆ ಮಾಡುವುವು. ಆಗ ಜೀವನಿಗೆ ತನಗೆ ಹುಟ್ಟು ಹೊಂದುಗಳು ಎಂದಿಗೂ ಬರಲಿಲ್ಲವೆಂದೂ ಸ್ವರ್ಗವಾಗಲಿ ಭೂಮಿಯಾಗಲಿ ತನಗೆ ಯಾವುದೂ ಬೇಕಿರಲಿಲ್ಲವೆಂದೂ ಗೊತ್ತಾಗುವುದು. ತಾನು ಬಂದುದೂ ಇಲ್ಲ; ಹೋದುದೂ ಇಲ್ಲ. ಪ್ರಕೃತಿಯೊಂದೇ ಚಲಿಸುತ್ತಲಿತ್ತು. ಆ ಚಲನೆಯೇ ತನ್ನಲ್ಲಿ ಪ್ರತಿಬಿಂಬಿಸಿತ್ತು ಎಂಬುದೂ ಆಗ ಗೊತ್ತಾಗುವುದು. ಕನ್ನಡಿಯಿಂದ ಗೋಡೆಯ ಮೇಲೆ ಬಿದ್ದ ಬೆಳಕಿನ ರೂಪವು ಚಲಿಸುತ್ತಿದ್ದರೆ ಗೋಡೆಯು ತಾನೇ ಚಲಿಸುತ್ತಿರುವೆನೆಂದು ಅವಿವೇಕದಿಂದ ತಿಳಿಯುವಂತೆ ನಾವೆಲ್ಲರೂ ಮಾಡುತ್ತಿರುವೆವು. ಚಿತ್ತವೇ ಚಲಿಸುತ್ತ ಬಗೆಬಗೆಯ ರೂಪಗಳನ್ನು ಧರಿಸುತ್ತಿರುವುದು. ಆದರೆ ನಾವು ಈ ಬೇರೆ ಬೇರೆ ರೂಪಗಳೇ ನಾವೆಂದು ಭಾವಿಸಿಕೊಳ್ಳುತ್ತಿರುವೆವು. ಇಂಥ ಭ್ರಾಂತಿಗಳೆಲ್ಲ ನಾಶವಾಗುವುವು. ಆ ಮುಕ್ತಾತ್ಮವು ಏನು ಅಪ್ಪಣೆ ಮಾಡುತ್ತದೆಯೊ (ಆಗ ಅದು ತನಗೆ ಬೇಕಾದುದನ್ನು ಪ್ರಾರ್ಥನೆಯನ್ನು ಮಾಡುವುದಿಲ್ಲ; ಅಥವಾ ಅಂಗಲಾಚಿ ಬೇಡಿಕೊಳ್ಳುವುದೂ ಇಲ್ಲ; ಅಪ್ಪಣೆಯನ್ನು ಮಾಡುವುದು. ಹೀಗೆ ಏನನ್ನು ಅಪ್ಪಣೆ ಮಾಡುವುದೊ) ಅದರಂತೆಯೆ ಅದರ ಇಚ್ಛೆಗಳೆಲ್ಲ ಪೂರ್ತಿಯಾಗುವುವು. ಅದಕ್ಕೆ ಏನೇನು ಬೇಕೊ ಅದನ್ನೆಲ್ಲ ಮಾಡಿಕೊಳ್ಳುವುದಕ್ಕಾಗುವುದು. ಸಾಂಖ್ಯ ಸಿದ್ಧಾಂತದಲ್ಲಿ ಈಶ್ವರನಿಲ್ಲ. ಈ ಸಿದ್ಧಾಂತದಲ್ಲಿ ಹೇಳಿರುವುದೇನೆಂದರೆ:– ಈ ಜಗತ್ತಿಗೆ ದೇವರಿರುವುದು ಸಾಧ್ಯವಿಲ್ಲ. ಏಕೆಂದರೆ ದೇವರಿದ್ದರೆ ಅವನು ಆತ್ಮನಾಗಿಯೆ ಇರಬೇಕು. ಆತ್ಮನೆಂದರೆ ಬದ್ಧನಾಗಿರಬೇಕು: ಇಲ್ಲದಿದ್ದರೆ ಮುಕ್ತನಾಗಿರಬೇಕು. ಪ್ರಕೃತಿಯಿಂದ ತಾನೇ ಬದ್ಧವಾಗಿರುವ ಆತ್ಮವು–ಪ್ರಕೃತಿಗೆ ವಶವಾಗಿರುವ ಆತ್ಮವು–ಸೃಷ್ಟಿ ಮಾಡುವುದು ಹೇಗೆ? ತಾನೇ ದಾಸನಾಗಿರುವುದು. ಹಾಗಲ್ಲದೆ ಆತ್ಮವು ಮುಕ್ತವಾಗಿದ್ದರೆ ಈ ಪದಾರ್ಥಗಳನ್ನೆಲ್ಲ ಸೃಷ್ಟಿ ಮಾಡಿ ಬೇರೆ ಬೇರೆ ರೂಪಗಳಲ್ಲಿಡುವುದಕ್ಕೇನು ಕಾರಣ? ಅದಕ್ಕೆ ಯಾವ ಆಸೆಯೂ ಇರುವುದಿಲ್ಲ. ಆದುದರಿಂದ ಅದಕ್ಕೆ ಸೃಷ್ಟಿ ಮಾಡಬೇಕಾದ ಅಗತ್ಯವೇನೂ ಇಲ್ಲ. ಮತ್ತು ಈ ಸಿದ್ಧಾಂತವು ದೇವರನ್ನು ಕಲ್ಪನೆ ಮಾಡಿಕೊಳ್ಳುವುದೇ ಅನವಶ್ಯವೆಂದೂ ಪ್ರಕೃತಿಯಿಂದಲೇ ಎಲ್ಲಾ ಕಾರ್ಯವೂ ಸಾಗುವುದೆಂದೂ ಹೇಳುತ್ತದೆ. ಹೀಗಿರುವಲ್ಲಿ ದೇವರಿಂದ ಆಗತಕ್ಕದ್ದೇನು? ಆದರೆ ಕಪಿಲರ ಪ್ರಕಾರ ಎಷ್ಟೋ ಜೀವರುಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿ ಪೂರ್ಣಸ್ಥಿತಿಯನ್ನು ಪಡೆದರೂ ಎಲ್ಲಾ ಸಿದ್ಧಿಗಳನ್ನೂ ಪೂರ್ಣವಾಗಿ ಬಯಸದೆ ಇರುವುದಕ್ಕೆ ಕೈಯ್ಯಲ್ಲಿ ಸಾಗದೆ ಇರುವುದರಿಂದ ಪೂರ್ಣಸ್ಥಿತಿಗೆ ಸ್ವಲ್ಪ ಕಡಿಮೆಯ ಸ್ಥಿತಿಯನ್ನು ಪಡೆಯುತ್ತಾರೆ. ಅವರ ಮನಸ್ಸುಗಳು ಸ್ವಲ್ಪ ಕಾಲದವರೆಗೆ ಪ್ರಕೃತಿಯಲ್ಲಿ ಲಯವಾಗಿದ್ದು ಕೊನೆಗೆ ಅದರ ಒಡೆಯರಾಗಿ ಹೊರಬೀಳುತ್ತವೆ. ಇಂಥ ದೇವತೆಗಳೇನೋ ಇದ್ದೇ ಇರುವರು. ಇಂಥ ದೇವ ಪದವಿಯನ್ನು ನಾವೆಲ್ಲರೂ ಪಡೆಯಬಹುದು. ಸಾಂಖ್ಯದ ಸಿದ್ಧಾಂತದಂತೆ ವೇದದಲ್ಲಿ ಹೇಳುವ ದೇವರೆಂದರೆ ಈ ಮುಕ್ತಾತ್ಮರಲ್ಲಿ ಒಬ್ಬನೆಂದರ್ಥ. ಇವರನ್ನು

ಬಿಟ್ಟರೆ ಎಂದೆಂದಿಗೂ ಮುಕ್ತನಾಗಿ ಆನಂದರೂಪನಾಗಿ ಜಗತ್ತನ್ನು ಸೃಷ್ಟಿ ಮಾಡುವ ದೇವರಾರೂ ಇಲ್ಲ. ಆದರೆ ಯೋಗಿಗಳು "ಹಾಗಲ್ಲ; ದೇವರೊಬ್ಬನು ಇದ್ದೇ ಇರುತ್ತಾನೆ. ಎಲ್ಲಾ ಆತ್ಮರುಗಳಿಂದಲೂ ಬೇರೆ ಆಗಿರುವ ಒಬ್ಬಾನೊಬ್ಬ ಆತ್ಮನುಂಟು. ಆತನೆ ಎಲ್ಲಾ ಸೃಷ್ಟಿಗೂ ಎಂದೆಂದಿಗೂ ಒಡೆಯನು. ಅವನು ನಿತ್ಯಮುಕ್ತನು. ಗುರುಗಳಿಗೆಲ್ಲ ಗುರು" ಎಂದು ಹೇಳುವರು. ಸಾಂಖ್ಯರು ಹೇಳುವ ಪ್ರಕೃತಿಲಯರೆಂಬುವರು ಇರುವರೆಂದೂ ಯೋಗಿಗಳು ಒಪ್ಪಿಕೊಳ್ಳುತ್ತಾರೆ. ಇಂಥವರು ಯೋಗಸಿದ್ಧಿಯನ್ನು ಪೂರ್ಣವಾಗಿ ಪಡೆಯದೆ ಇರುವವರೆಂದೂ ಇವರು ಸ್ವಲ್ಪ ಕಾಲದವರೆಗೆ ಮಾತ್ರ ಕೊನೆಯ ಗತಿಯನ್ನು ಪಡೆಯದೆ ಇರುವವರೆಂದೂ ಇವರು ಜಗತ್ತಿನ ಕೆಲಕೆಲವು ಭಾಗಗಳಿಗೆ ಒಡೆಯರಾಗಿರುತ್ತಾರೆಂದೂ ಹೇಳುವರು.

## 19. ಭವಪ್ರತ್ಯಯೋ ವಿದೇಹಪ್ರಕೃತಿಲಯಾನಾಮ್.

ಟೀ॥ (ಈ ಸಮಾಧಿಯಲ್ಲಿ ಪರಮ ವೈರಾಗ್ಯವಿಲ್ಲದಿದ್ದರೆ ಇದು) ದೇವತೆಗಳಿಗೂ ಪ್ರಕೃತಿಲಯರಿಗೂ ಮತ್ತೆ ಹುಟ್ಟುವುದಕ್ಕೆ ಕಾರಣವಾಗುವುದು.

ವಿ॥ ಇಂಡಿಯಾ ದೇಶದ ದರ್ಶನಗಳಲ್ಲಿ ದೇವತೆಗಳೆಂದರೆ ಕೆಲಕೆಲವು ಹೆಚ್ಚಿನ ಅಧಿಕಾರ ಸ್ಥಾನಗಳು. ಇವುಗಳನ್ನು ಬೇರೆ ಬೇರೆ ಜೀವರು ಒಬ್ಬರಾದ ಮೇಲೆ ಮತ್ತೊಬ್ಬರು ಅನುಭವಿಸುವರು. ಆದರೆ ಈ ದೇವತೆಗಳಾರೂ ಪೂರ್ಣರಾಗಿರುವುದಿಲ್ಲ.

## 20. ಶ್ರದ್ಧಾವೀರ್ಯಸ್ಮೃತಿಸಮಾಧಿಪ್ರಜ್ಞಾಪೂರ್ವಕ ಇತರೇಷಾಮ್

ಟೀ॥ ಉಳಿದವರಿಗೆ (ಈ ಸಮಾಧಿಯು) ಶ್ರದ್ಧೆ, ಶಕ್ತಿ, ನೆನಪು, ಸಮಾಧಿ, ತತ್ತ್ವವನ್ನು ತಿಳಿಯುವುದು ಇವುಗಳಿಂದುಂಟಾಗುವುದು.

ವಿ॥ ಇವರು ಯಾರೆಂದರೆ ದೇವತೆಗಳ ಪದವಿಯನ್ನಾಗಲಿ, ಕಲ್ಪಕಲ್ಪಕ್ಕೆ ಸಿಕ್ಕುವ ಜಗತ್ತಿನ ಒಡೆಯತನವನ್ನಾಗಲಿ ಒಲ್ಲದವರು. ಅವರು ಮುಕ್ತಿಯನ್ನೆ ಪಡೆಯುವರು.

## 21. ತೀವ್ರಸಂವೇಗಾನಾಮಾಸನ್ನಃ

ಟೀ॥ ಬಹು ಬಲವಾಗಿರುವವರಿಗೆ ಸಿದ್ಧಿಯು ಬೇಗನೆ ಆಗುವುದು

## 22. ಮೃದುಮಧ್ಯಾಧಿಮಾತ್ರತ್ವಾತ್ತತೋಽಪಿವಿಶೇಷಃ

ಟೀ॥ ಯೋಗಿಗಳಿಗಾಗುವ ಸಿದ್ಧಿಯು, ಅವರು ಉಪಯೋಗಿಸುವ ಸಾಧನವು ಮೆತ್ತಗಿರುವದೊ ಮಧ್ಯಮ ಸ್ಥಿತಿಯಲ್ಲಿರುವುದೊ ಅಥವಾ ಬಲವಾಗಿರುವುದೊ ಎಂಬುದರ ಮೇಲೆ ಹೆಚ್ಚು ಕಡಿಮೆ ಇರುವುದು.

## 23. ಈಶ್ವರಪ್ರಣಿಧಾನಾದ್ವಾ

ಟೀ॥ ಅಥವಾ ಈಶ್ವರ ಭಕ್ತಿಯಿಂದ

## 24. ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷವಿಶೇಷ ಈಶ್ವರಃ

ಟೀ॥ ಈಶ್ವರ (ಎಲ್ಲದಕ್ಕೂ ಒಡೆಯ) ನೆಂದರೆ ಕ್ಲೇಶ ಕರ್ಮಗಳು, ಇವುಗಳ ಫಲಗಳು, ಮತ್ತೆ ಆಶಯಗಳು, ಇವುಗಳ ಸಂಬಂಧವಿಲ್ಲದ ಒಬ್ಬಾನೊಬ್ಬ ಪುರುಷನು.

ವಿ॥ ಪಾತಂಜಲಯೋಗದರ್ಶನವು ಸಾಂಖ್ಯಸಿದ್ಧಾಂತದ ಆಧಾರದ ಮೇಲೆ ಹುಟ್ಟಿದೆಯೆಂಬುದನ್ನು – ಆದರೆ ಸಾಂಖ್ಯದಲ್ಲಿ ದೇವರಿಲ್ಲ; ಯೋಗಿಗಳಿಗೆ ದೇವರೊಬ್ಬನುಂಟು; ಇಷ್ಟೇ ಭೇದವೆಂಬುದನ್ನು–ಇಲ್ಲಿಯೂ ನೆನಪಿಟ್ಟುಕೊಳ್ಳಬೇಕು. ಆದರೆ ಯೋಗಿಗಳು ದೇವರ ವಿಷಯಕ್ಕೆ ಸೃಷ್ಟಿ ಮೊದಲಾದವುಗಳನ್ನು ಹೇಳುವುದಿಲ್ಲ. ಯೋಗಿಗಳು ಹೇಳುವ ಈಶ್ವರನು ಜಗತ್ತಿನ ಸೃಷ್ಟಿಕರ್ತನಲ್ಲ, ವೇದಗಳಲ್ಲಿ ಈಶ್ವರನನ್ನು ಜಗತ್ತಿನ ಸೃಷ್ಟಿಕರ್ತನೆಂದೂ ಜಗತ್ತೆಲ್ಲ ಒಂದೇ ಬಗೆಯಲ್ಲಿ ಹೊಂದುಗಡೆಯಾಗಿರುವುದರಿಂದ ಯಾವುದೋ ಒಂದು ಸಂಕಲ್ಪದಿಂದ ಹುಟ್ಟಿರಬೇಕೆಂದೂ ಹೇಳಿರುತ್ತದೆ. ಯೋಗಿಗಳಿಗೂ ಈಶ್ವರನಿದ್ದಾನೆಂದು ತೋರಿಸುವುದು ಅಗತ್ಯ. ಆದರೆ ಅವರ ದೇವರಿದ್ದಾನೆಂದು ತೋರಿಸುವ ಮಾರ್ಗವೇ ಒಂದು ಬಗೆಯಾಗಿರುವುದು. ಅವರು ಹೇಳುವುದೇನೆಂದರೆ–

## 25. ತತ್ರನಿರತಿಶಯಂ ಸರ್ವಜ್ಞಬೀಜಮ್

ಟೀ॥ ಉಳಿದವರಲ್ಲಿ ಬೀಜ (ಮಾತ್ರ) ವಾಗಿರುವ ಸರ್ವಜ್ಞತೆಯು ಆತನಲ್ಲಿ ಅನಂತವಾಗಿರುವುದು.

ವಿ॥ ಮನಸ್ಸು ಯಾವಾಗಲೂ ಎರಡು ತುದಿಗಳ ನಡುವೆ ಸಂಚರಿಸುತ್ತಿರುವುದು. ಹೇಗೆಂದರೆ ಇಷ್ಟೆಂದು ಗೊತ್ತಿರುವ ಸ್ಥಳದ ವಿಚಾರವು ಮನಸ್ಸಿಗೆ ಬರಬಹುದಷ್ಟೆ. ಆದರೆ ಅದೇ ಯೋಚನೆಯಿಂದಲೆ ಆಳವಿಲ್ಲದ ಸ್ಥಳದ ಅಭಿಪ್ರಾಯವೂ ಮನಸ್ಸಿಗೆ ಬರುವುದು. ಕಣ್ಣುಮುಚ್ಚಿಕೊಂಡು ಒಂದು ಸ್ವಲ್ಪ ಸ್ಥಳವನ್ನು ಯೋಚಿಸಿಕೊಳ್ಳಿರಿ. ಆ ಸಣ್ಣ ದುಂಡನ್ನು ಮನಸ್ಸಿಗೆ ತಂದೊಡನೆಯೆ ಅದರ ಸುತ್ತಲೂ ಇಲ್ಲಿಗೆ ಮುಗಿಯಿತೆಂಬ ಪ್ರಮಾಣವಿಲ್ಲದಿರುವ ಮತ್ತೊಂದು ಬಯಲು ಕಾಣುವುದು. ಕಾಲದ ವಿಷಯದಲ್ಲಿಯೂ ಹೀಗೆಯೆ. ಒಂದು ಕ್ಷಣವನ್ನು ಮನಸ್ಸಿಗೆ ತಂದುಕೊಂಡರೆ ಅದೇ ಅನುಭವದಲ್ಲಿ ಅನಂತಕಾಲವನ್ನು ಯೋಚಿಸಿಕೊಳ್ಳಬೇಕಾಗುವುದು. ತಿಳಿವಳಿಕೆಯ ವಿಷಯದಲ್ಲಿಯೂ ಹೀಗೆಯೆ. ತಿಳಿವಳಿಕೆಯೆಂಬುದು ಮನುಷ್ಯನಲ್ಲಿ ಕೇವಲ ಬೀಜವಾಗಿರುವುದು. ಆದರೆ ಅದರ ಸುತ್ತಲೂ ಅನಂತ ಜ್ಞಾನವು ಇದ್ದೇ ಇದೆಯೆಂದು ಭಾವಿಸಬೇಕಾಗುವುದು. ಈ ಕೊನೆಗಾಣದ ತಿಳಿವಳಿಕೆಯನ್ನೆ ಯೋಗಿಗಳು ದೇವರೆನ್ನುವರು.

## 26. ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್

ಟೀ॥ ಆತನು ಪೂರ್ವದ ಗುರುಗಳಿಗೆಲ್ಲ ಗುರುವು. ಏಕೆಂದರೆ ಆತನಿಗೆ ಕಾಲದ ನಿಯಮವಿಲ್ಲ

ವಿ॥ ತಿಳಿವಳಿಕೆಯೆಂಬುದೆಲ್ಲ ನಮ್ಮಲ್ಲಿಯೆ ಇದೆಯೆಂಬುದೇನೋ ನಿಜವೆ. ಆದರೆ ಈ

ತಿಳಿವಳಿಕೆಯು ಮತ್ತೊಂದು ತಿಳಿವಳಿಕೆಯಿಂದ ಹೊರಕ್ಕೆ ಬರಬೇಕಾಗಿರುವುದು. ತಿಳಿಯುವ ಶಕ್ತಿಯೇನೋ ನಮ್ಮೊಳಗೇ ಇರುವುದು. ಆದರೆ ಅದನ್ನು ಹೊರಕ್ಕೆ ತರಬೇಕಲ್ಲ. ಹೀಗೆ ಹೊರಕ್ಕೆ ತರುವುದೆಂಬುದು ಇನ್ನೊಂದು ತಿಳಿವಳಿಕೆಯಿಂದಲೆ ಆಗಬೇಕೆಂದು ಯೋಗಿಯ ಅಭಿಪ್ರಾಯ. ಕೇವಲ ಜಡರೂಪವಾಗಿರುವ ವಸ್ತುವಿನಿಂದ ತಿಳಿವಳಿಕೆಯು ಹೊರಕ್ಕೆ ಬರಲಾರದು. ಜ್ಞಾನದ ಕಾರ್ಯದಿಂದಲೆ ಜ್ಞಾನವು ಹೊರಕ್ಕೆ ಬರಬೇಕು. ನಮ್ಮಲ್ಲಿರುವುದನ್ನು ಹೊರಕ್ಕೆ ತರುವುದಕ್ಕೆ ತಿಳಿದವರು ನಮ್ಮ ಹತ್ತಿರವಿರಲೇಬೇಕು. ಆದುದರಿಂದ ಈ ಗುರುಗಳೆಂಬುವರು ಯಾವಾಗಲೂ ಅವಶ್ಯ. ಈ ಗುರುಗಳು ಇಲ್ಲದ ಕಾಲವೇ ಇಲ್ಲ. ಅವರಿಲ್ಲದೆ ತಿಳಿವಳಿಕೆಯೇ ಉಂಟಾಗುವುದಿಲ್ಲ. ಈಶ್ವರನು ಗುರುಗಳಿಗೆಲ್ಲ ಗುರು. ಏಕೆಂದರೆ ಈ ಗುರುಗಳು ಎಷ್ಟೇ ದೊಡ್ಡವರಾಗಿರಲಿ–ದೇವತೆಗಳಾಗಿದ್ದರೂ ಕೂಡ–ಇವರಿಗೆಲ್ಲ ಕಾಲದ ನಿಯಮವುಂಟು. ಆದರೆ ದೇವರಿಗೆ ಕಾಲದ ನಿಯಮವಿಲ್ಲ. ಯೋಗಿಗಳಲ್ಲಿ ಎರಡು ವಿಶೇಷ ತೀರ್ಮಾನಗಳುಂಟು. ಪರಿಮಿತಿಯುಳ್ಳ ವಸ್ತುವನ್ನು ಯೋಚಿಸುವಾಗ ಪರಿಮಿತಿಯಿಲ್ಲದ ವಸ್ತುವನ್ನು ಮನಸ್ಸು ಯೋಚಿಸಲೇಬೇಕು. ಈ ಅನುಭವದಲ್ಲಿ ಒಂದು ನಿಜವಾದರೆ ಇನ್ನೊಂದು ನಿಜವಾಗಲೇಬೇಕು. ಏಕೆಂದರೆ ಎರಡೂ ಮನಸ್ಸಿನ ಅನುಭವಗಳಾದುದರಿಂದ ಇವೆರಡರ ಬೆಲೆಯೂ ಒಂದೇ. ಇದೇ ಮೊದಲನೆಯ ತೀರ್ಮಾನವು. ಮನುಷ್ಯನಿಗೆ ಸ್ವಲ್ಪ ತಿಳಿವಳಿಕೆ ಇದೆಯೆಂಬುದರಿಂದಲೆ ದೇವರಿಗೆ ಪರಿಮಿತಿಯಿಲ್ಲದ ತಿಳಿವಳಿಕೆಯಿದೆ ಎಂಬುದು ತೋರುತ್ತದೆ. ಇದರಲ್ಲಿ ಒಂದು ಅನುಭವನ್ನು ನಂಬಿದರೆ ಇನ್ನೊಂದನ್ನು ಏತಕ್ಕೆ ನಂಬಕೂಡದು? ವಿಚಾರಿಸಿ ನೋಡಿದರೆ ಎರಡನ್ನೂ ನಂಬಬೇಕು. ಇಲ್ಲದಿದ್ದರೆ ಎರಡನ್ನೂ ಬಿಟ್ಟುಬಿಡಬೇಕು. ಸ್ವಲ್ಪ ತಿಳಿವಳಿಕೆಯಿರುವ ಮನುಷ್ಯನೊಬ್ಬನಿದ್ದಾನೆಂದು ನಂಬುವುದಾದರೆ ಅವನಿಗಿಂತ ಬೇರೆ ಒಬ್ಬನಲ್ಲಿ ಮಿತಿ ಇಲ್ಲದ ತಿಳಿವಳಿಕೆ ಇರುವುದೆಂದೂ ನಂಬಲೇಬೇಕು. ಇನ್ನು ಎರಡನೆ ತೀರ್ಪು ಏನೆಂದರೆ ತಿಳಿವಳಿಕೆಯಿಂದ ಮೇಲೆ ಗುರುವಿಲ್ಲದೆ ಬರುವುದಿಲ್ಲ. ಈಗಿನ ತತ್ತ್ವಶಾಸ್ತ್ರಜ್ಞರು ಹೇಳುವಂತೆ ಮನುಷ್ಯನಲ್ಲಿ ಏನೋ ಒಂದು ಶಕ್ತಿ ಇರುವುದು. ಅದು ಹೊರಕ್ಕೆ ಬಂದು ತೋರಿಸಿಕೊಳ್ಳುತ್ತಿರುವುದೂ ನಿಜವೆ. ತಿಳಿವಳಿಕೆಯೆಂಬುದೆಲ್ಲವೂ ಮನುಷ್ಯನಲ್ಲಿಯೇ ಇರುವುದು; ಆದರೆ ಅದನ್ನು ಹೊರ ತರುವುದಕ್ಕೆ ಕೆಲವು ಪರಿಸ್ಥಿತಿಗಳು ಬೇಕು. ಯಾವ ತಿಳಿವಳಿಕೆಯಾಗಲಿ ಗುರುವಿಲ್ಲದೆ ಬರುವುದಿಲ್ಲ. ಮನುಷ್ಯಗುರುಗಳೂ, ದೇವಗುರುಗಳೂ, ಅಥವಾ ಇತರ ದೇವಯೋನಿಗುರುಗಳೂ ಇರುವುದು ನಿಜ. ಆದರೆ ಅವರೆಲ್ಲರಿಗೂ (ಕಾಲದ) ಪರಿಮಿತಿ ಯುಂಟು. ಅವರೆಲ್ಲರಿಗೂ ಮೊದಲು ಇದ್ದ ಗುರು ಯಾರು? ನಿಲುಗಡೆ ಯಾಗುವುದಕ್ಕೋಸ್ಕರ ಕಾಲದ ನಿಯುಮವಿಲ್ಲದ ಒಬ್ಬ ಗುರುವಿದ್ದಾನೆಂದು ಒಪ್ಪಿಕೊಳ್ಳಬೇಕಾಗುವುದು. ಈ ಸರ್ವಜ್ಞನಾದ ತುದಿ ಮೊದಲುಗಳನ್ನು ಕಾಣದ ಗುರುವೇ ದೇವರು.

## 27. ತಸ್ಯ ವಾಚಕಃ ಪ್ರಣವಃ

ಟೀ॥ ಓಂಕಾರವೇ ಆತನನ್ನು ತೋರಿಸುವ ಮಾತು.

ವಿ॥ ಮನಸ್ಸಿನಲ್ಲಿರುವ ಪ್ರತಿಯೊಂದು ಯೋಚನೆಗೂ ತಕ್ಕಂತೆ ಒಂದೊಂದು ಮಾತು ಇರುವುದು. ಮಾತೂ ಯೋಚನೆಯೂ ಒಂದನ್ನೊಂದು ಬಿಟ್ಟಿರುವುದಿಲ್ಲ. ಅದೇ ವಸ್ತುವಿನ

ಹೊರಭಾಗವನ್ನು ಮಾತೆನ್ನುತ್ತಲೂ ಒಳಗಣ ಭಾಗವನ್ನು ಯೋಚನೆಯೆನ್ನುತ್ತಲೂ ಕರೆಯುವರು. ಯೋಚನೆಯನ್ನು ಮಾತಿನಿಂದ ವಿಂಗಡಿಸಿ ಬೇರೆ ಮಾಡುವುದು ಯಾರಿಂದಲೂ ಆಗುವುದಿಲ್ಲ. ಕೆಲವು ಜನರು ಒಂದು ಕಡೆ ಸೇರಿ ಇಂಥಿಂಥ ಮಾತುಗಳಿರಲಿ ಎಂದು ಗೊತ್ತುಮಾಡಿಕೊಂಡುದರಿಂದ ಭಾಷೆಯಾಗಿರುವುದೆಂದು ಹೇಳುವುದು ತಪ್ಪೆಂಬುದು ರುಜುವಾತಾಗಿರುತ್ತದೆ. ಮನುಷ್ಯನು ಎಂದಿನಿಂದ ಇದ್ದಾನೊ ಅಂದಿನಿಂದಲೂ ಮಾತುಗಳೂ ಭಾಷೆಯೂ ಇದ್ದುಕೊಂಡೇ ಬಂದಿವೆ. ಯೋಚನೆಗೂ ಮಾತಿಗೂ ಇರುವ ಸಂಬಂಧವೇನು? ಯೋಚನೆಗೊಂದು ಮಾತು ಇದ್ದೇ ಇರಬೇಕೆಂಬುದೇನೋ ಗೊತ್ತಾಯಿತಷ್ಟೆ. ಅದೇ ಯೋಚನೆಗೆ ಅದೇ ಮಾತು ಬೇಕೆಂಬ ನಿಯಮವೇನೂ ಇಲ್ಲ. ಬೇರೆ ಬೇರೆ ಇಪ್ಪತ್ತು ದೇಶಗಳಲ್ಲಿ ಯೋಚನೆಯು ಅದೇ ಆಗಿದ್ದರೂ ಭಾಷೆ ಬೇರೆ ಆಗಿರುವುದು. ಪ್ರತಿಯೊಂದು ಯೋಚನೆಯನ್ನು ತಿಳಿಸುವುದಕ್ಕೂ ಒಂದು ಮಾತೇನೋ ಇರಬೇಕು. ಆದರೆ ಈ ಮಾತುಗಳಿಗೆಲ್ಲ ಒಂದೇ ಧ್ವನಿ ಇರಬೇಕೆಂಬ ನಿರ್ಬಂಧವೇನೂ ಇಲ್ಲ. ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ಧ್ವನಿಗಳಿರುವುವು. ವ್ಯಾಖ್ಯಾನಕಾರರು "ಶಬ್ದಕ್ಕೂ ಯೋಚನೆಗೂ ಇರುವ ಸಂಬಂಧವು ಸ್ವಾಭಾವಿಕವಾದುದಾದರೂ ಇದನ್ನು ಒಂದು ವಿಧವಾದ ಧ್ವನಿಗೂ ಒಂದೇ ಒಂದು ಅರ್ಥಕ್ಕೂ ಇರುವ ಎಂದಿಗೂ ಬಿಡದ ಸಂಬಂಧವೆಂದು ತಿಳಿಯಬಾರದು" ಎಂದು ಹೇಳಿದ್ದಾರೆ. ಈ ಧ್ವನಿಗಳು ಬೇರೆ ಬೇರೆ ಆಗಿರುವುವು. ಆದರೂ ಧ್ವನಿಗಳಿಗೂ ಯೋಚನೆಗಳಿಗೂ ಇರುವ ಸಂಬಂಧವಂತು ಸ್ವಾಭಾವಿಕವಾಗಿಯೆ ಇರುವುದು. ಯೋಚನೆಗಳಿಗೂ ಶಬ್ದಗಳಿಗೂ ಇರುವ ಸಂಬಂಧವು ಸರಿಯೆನಿಸಬೇಕಾದರೆ ಗುರ್ತಿಸಬೇಕಾದ ವಸ್ತುವಿಗೂ ಅದನ್ನು ತೋರಿಸುವ ಗುರ್ತಿಗೂ ಏನಾದರೂ ನಿಜವಾದ ಸಂಬಂಧವಿರಬೇಕು. ಹಾಗಿಲ್ಲದಿದ್ದರೆ ಆ ಗುರ್ತಿನ ಶಬ್ದವನ್ನು ಬಹು ಜನರು ಉಪಯೋಗಿಸುವುದೇ ಇಲ್ಲ. ಗುರ್ತೆಂಬುದು ವಸ್ತುವನ್ನು ತೋರಿಸತಕ್ಕದ್ದು. ಆ ಗುರ್ತಿಟ್ಟ ವಸ್ತುವು ಮೊದಲೆ ಇದ್ದುಕೊಂಡಿದ್ದು ಆ ವಸ್ತುವನ್ನು ಗುರ್ತು ಎಷ್ಟೋ ಸಲ ತಿಳಿಸಿರುವುದೆಂದು ಅನುಭವದಿಂದ ತಿಳಿದಿದ್ದರೆ ಇವೆರಡಕ್ಕೆ ನಿಜವಾದ ಸಂಬಂಧವಿದೆಯೆಂದು ಖಂಡಿತವಾಗಿ ಗೊತ್ತಾದೀತು. ವಸ್ತುಗಳು ಹತ್ತಿರ ಇಲ್ಲದಿದ್ದರೂ ಅವುಗಳ ಗುರ್ತನ್ನು ಕೇಳಿದೊಡನೆಯೆ ಅವುಗಳೆಂದೇ ಸಾವಿರಾರು ಜನರು ತಿಳಿದುಕೊಳ್ಳುವರು. ಹೀಗೆ ಅದಕ್ಕೂ ಅರ್ಥವನ್ನು ತೋರಿಸುವ ಸಂಜ್ಞೆಗೂ ಸ್ವಾಭಾವಿಕವಾದ ಸ್ಸಂಬಂಧವಿದ್ದರೆ ಆಗ ಆ ಸಂಜ್ಞೆಯನ್ನು ಉಚ್ಚರಿಸುತ್ತಲೆ ಆ ಅರ್ಥವು ಮನಸ್ಸಿಗೆ ಹೊಳೆಯುವುದು. ವ್ಯಾಖ್ಯಾನಕಾರರು ಈಶ್ವರನಿಗೆ ಓಂಕಾರವೇ ವಾಚಕ (ಆತನನ್ನು ಹೇಳುವ ಮಾತು) ಎಂದು ಬರೆದಿದ್ದಾರೆ. ಇದೊಂದು ಮಾತನ್ನೆ ವಿಶೇಷವಾಗಿ ಹೇಳಿರುವುದೇತಕ್ಕೆ? ದೇವರನ್ನು ಹೇಳುವುದಕ್ಕೆ ನೂರಾರು ಮಾತುಗಳಿವೆ. ಒಂದು ಯೋಚನೆಗೆ ಸಾವಿರ ಮಾತುಗಳಿರುತ್ತವೆ. ದೇವರೆಂಬ ಯೋಚನೆಗೂ ನೂರಾರು ಮಾತುಗಳಿರುವುವು. ಇವುಗಳಲ್ಲಿ ಪ್ರತಿಯೊಂದೂ ದೇವರನ್ನು ತೋರಿಸುವ ಗುರ್ತು ಆಗಿರುವುದು. ಇದೇನೋ ನಿಜವೆ. ಆದರೆ ಇವೆಲ್ಲಕ್ಕೆ ಏನಾದರೂ ಒಂದು ಸಾಮಾನ್ಯ ಧರ್ಮವು, ಯಾವುದೋ ಒಂದು ಆಧಾರವಾದುದು, ಇವೆಲ್ಲಾ ಗುರ್ತುಗಳಲ್ಲಿಯೂ ಇದ್ದುಕೊಂಡಿರುವ ಯಾವುದೋ ಒಂದು ಗುರ್ತು, ಇರಬೇಕಷ್ಟೆ. ಇವೆಲ್ಲದರಲ್ಲಿಯೂ ಇದ್ದುಕೊಂಡಿರುವ ವಾಚಕವೇ ಉತ್ತಮವಾದುದು. ಏಕೆಂದರೆ ಅದರಲ್ಲಿ ಇವೆಲ್ಲವೂ

ಸೇರಿಕೊಂಡಿರುತ್ತವೆ. ಯಾವುದಾದರೂ ಶಬ್ದವನ್ನು ಉಚ್ಚರಿಸುವಾಗ ಗಂಟಲನ್ನು ಶಬ್ದಗಳ ಉತ್ಪತ್ತಿಗಾಗಿ ರಾಗದ ಪೆಟ್ಟಿಗೆಯಂತೆ ಉಪಯೋಗಿಸುತ್ತೇವಷ್ಟೆ. ತನ್ನಿಂದಲೆ ಇತರ ಶಬ್ದಗಳೆಲ್ಲ ಹುಟ್ಟಿ ಬೆಳಗುವಂತೆಯೂ ತಾನು ಅತ್ಯಂತ ಸ್ವಾಭಾವಿಕವಾದುದಾಗಿಯೂ ಇರುವ ಎಲ್ಲಕ್ಕೆ ಕಾರಣವಾದ ಶಬ್ದವಾವುದಾದರೂ ಇದೆಯೆ? ಓಂಕಾರವೇ ಹೀಗೆ ಎಲ್ಲಾ ಶಬ್ದಗಳಿಗೂ ಆಧಾರವಾಗಿರುವ ಮಾತು. ಇದರಲ್ಲಿರುವ [1] ಅಕಾರವು ಮೂಲ ಸ್ವರವು (ಮೊದಲನೆಯ ಶ್ರುತಿ [2]). ಇದು ನಾಲಿಗೆಯ ಅಥವಾ ದವಡೆಯ ಯಾವ ಭಾಗವನ್ನೂ ಮುಟ್ಟದೆಯೆ ಉಚ್ಚಾರವಾಗುವುದು. ಮಕಾರವು ವರ್ಣಗಳಲ್ಲೆಲ್ಲ ಕೊನೆಯದು. ಏಕೆಂದರೆ ಇದು ತುಟಿಯನ್ನು ಮುಚ್ಚುವುದರಿಂದ ಉಂಟಾಗುವುದು. ಇನ್ನು ಉಕಾರವು ಮುಖವೆಂಬ ರಾಗದ ಪೆಟ್ಟಿಗೆಯ ಬುಡದಿಂದ ತುದಿಯವರೆಗೂ ಹೊರಳಿಕೊಂಡು ಹುಟ್ಟುವುದು. ಈ ರೀತಿಯಲ್ಲಿ ಓಂಕಾರದಲ್ಲಿ ವರ್ಣಗಳುತ್ಪತ್ತಿ ಕ್ರಮವೆಲ್ಲ ಸೇರಿರುವುದು. ಹೀಗಿರುವುದರಿಂದ ಇದೇ ಸ್ವಾಭಾವಿಕವಾದ ಗುರ್ತಾಯಿತು. ಇದೇ ಎಲ್ಲಾ ಧ್ವನಿಗಳಿಗೂ ಮಾತೃಸ್ಥಾನವಾಯಿತು. ಯಾವ ಯಾವ ಮಾತುಗಳನ್ನು ಮಾಡಬಹುದೋ, ಎಷ್ಟುರಮಟ್ಟಿಗೆ ಮಾತುಗಳನ್ನು ಕಲ್ಪಿಸಬಹುದೊ ಅದೆಲ್ಲವೂ ಇದರಲ್ಲಿಯೇ ಸೇರಿದಂತಾಯಿತು. ಈ ವಿಚಾರಗಳು ಹಾಗಿರಲಿ. ಇಂಡಿಯಾದ ಜನರ ಎಲ್ಲಾ ಬಗೆಯ ಧಾರ್ಮಿಕ ತತ್ತ್ವಗಳೂ ಈ ಓಂಕಾರಕ್ಕೆ ಸಂಬಂಧಪಟ್ಟಿರುವುವು. ವೇದಗಳಲ್ಲಿ ಹೇಳಿರುವ ಧರ್ಮಸಂಬಂಧವಾದ ಅಭಿಪ್ರಾಯಗಳೆಲ್ಲ ಓಂಕಾರವನ್ನು ಕೂಡಿಕೊಂಡಿರುವುವು. ಇದರಿಂದ ಅಮೇರಿಕಕ್ಕೆ ಅಥವಾ ಇಂಗ್ಲೆಂಡಿಗೆ ಅಥವಾ ಮತ್ತೊಂದು ದೇಶಕ್ಕೆ ಏನಾಯಿತು? ಎಂದರೆ ಕೇಳಿರಿ. ಇಂಡಿಯಾದಲ್ಲಿ ಧರ್ಮವು ಯಾವ ಯಾವ ರೀತಿ ಬೆಳೆದರೂ ಈ ಓಂಕಾರವನ್ನು ಇಟ್ಟುಕೊಂಡೇ ಹೋಗಿದ್ದಾರೆ. ದೇವರ ವಿಚಾರದಲ್ಲಿ ಯಾವ ಯಾವ ಅಭಿಪ್ರಾಯಗಳು ಬಂದರೂ ಆಯಾ ಅರ್ಥಗಳಲ್ಲಿ ಈ ಓಂಕಾರವನ್ನೇ ಉಪಯೋಗಿಸುತ್ತ ಬಂದಿದ್ದಾರೆ. ಅದ್ವೈತಿಗಳು, ದ್ವೈತಿಗಳು, ವಿಶಿಷ್ಟಾದ್ವೈತಿಗಳು, ಭೇದವಾದಿಗಳು ಇಷ್ಟೇಕೆ ನಾಸ್ತಿಕರು ಇವರೆಲ್ಲರೂ ಈ ಓಂಕಾರವನ್ನು ಅಂಗೀಕರಿಸಿರುವರು. ಮನುಷ್ಯರಲ್ಲಿ ಬಹುಜನರು ತಮ್ಮ ಧಾರ್ಮಿಕಾಭಿಪ್ರಾಯಗಳನ್ನು ಸೂಚಿಸುವುದಕ್ಕೆ ಓಂಕಾರವನ್ನೆ ಉಪಯೋಗಿಸುತ್ತಿದ್ದಾರೆ. ಇನ್ನು ಇಂಗ್ಲೀಷರ ಮಾತಾದ "ಗಾಡ್" (ದೇವರು) ಎಂಬ ಮಾತನ್ನು ತೆಗೆದುಕೊಳ್ಳೋಣ. ಅದಕ್ಕೆ ಒಂದೇ ಒಂದು ಗೊತ್ತಾದ ಅರ್ಥವಿದೆ. ಈ ಅರ್ಥವನ್ನು ಬಿಟ್ಟು ಮತ್ತೊಂದು ಅರ್ಥವನ್ನು ಸೂಚಿಸಬೇಕಾದರೆ ಗುಣವಾಚಕಗಳನ್ನು ಸೇರಿಸಿ "ಪರ್ಸನಲ್ ಗಾಡ್" (ಸಗುಣರೂಪನಾದ ದೇವರು), "ಇಂಪರ್ಸನಲ್ ಗಾಡ್" (ನಿರ್ಗುಣರೂಪನಾದ ದೇವರು), "ಅಬ್ಸೊಲ್ಯೂಟ್ ಗಾಡ್" (ನಿರುಪಾಧಿಕನಾದ ದೇವರು) ಎಂದು ಹೇಳಬೇಕಾಗುವುದು. ದೇವರ ವಾಚಕಗಳಾದ ಇತರ ಭಾಷೆಯ ಶಬ್ದಗಳೂ ಹೀಗೆಯೆ. ಅವುಗಳಿಗೆಲ್ಲ ಅರ್ಥವು ಸ್ವಲ್ಪ ಭಾಗವನ್ನು ಮಾತ್ರ ಸೂಚಿಸುವುದು. ಆದರೆ ಈ ಓಂಕಾರವು ಎಲ್ಲಾ ಅಭಿಪ್ರಾಯಗಳನ್ನೂ ಒಳಕೊಂಡಿರುವುದು. ಹೀಗಿರುವುದರಿಂದ ಇದನ್ನು ಎಲ್ಲರೂ ಅಂಗೀಕರಿಸಬೇಕು.

---

1. ಅ+ಉ+ಮ್ ಹೀಗೆ ಮೂರೂ ಸೇರಿ ಸಂಧಿಯಾಗಿ ಓಂ ಎಂಬುದಾಗಿರುವುದೆಂದು ಆರ್ಯರ ಶಾಸ್ತ್ರಗಳಲ್ಲಿ ಹೇಳಿರುವರು.

2. ಶ್ರುತಿಯೆಂಬುದು ಸಂಗೀತದಲ್ಲಿ ಆರಂಭಕ ಸ್ವರವನ್ನು ಹೇಳುವುದು.

## 28. ತಜ್ಜಪಸ್ತದರ್ಥಭಾವನಮ್.

ಟೀ॥ ಇದನ್ನು ಮತ್ತೆ ಮತ್ತೆ ಉಚ್ಚರಿಸುವುದೂ ಇದರ ಅರ್ಥವನ್ನು ಧ್ಯಾನಿಸುತ್ತಿರುವುದೂ (ಸಾಧನವು).

ವಿ॥ ಮತ್ತೆ ಮತ್ತೆ ಏತಕ್ಕೆ ಜಪಮಾಡಬೇಕು? ವಾಸನೆಗಳೆಲ್ಲ ಒಟ್ಟು ಗೂಡಿ ಮನಸ್ಸಿನಲ್ಲಿರುತ್ತವೆಯೆಂದು ಹಿಂದೆ ಹೇಳಿದೆಯಷ್ಟೆ. ಆ ಸಂಸ್ಕಾರ ಸಿದ್ಧಾಂತವನ್ನು ಮರೆಯದೆ ಇರಬೇಕು. ವಾಸನೆಗಳೆಲ್ಲ ಮನಸ್ಸಿನಲ್ಲಿಯೆ ಇದ್ದುಕೊಂಡಿರುತ್ತವೆ. ಇವು ಬರುತ್ತ ಬರುತ್ತ ಹೆಚ್ಚು ಹೆಚ್ಚು ಸುಮ್ಮನೆ ಕೆಲಸವಿಲ್ಲದೆ ಇರುವುವು. ಆದರೆ ಅವಕ್ಕೆ ತಕ್ಕ ಜೋರು ಕೊಟ್ಟರೆ ಕೂಡಲೆ ಹೊರಕ್ಕೆ ಬರುತ್ತವೆ. ಅಣು ಕಂಪನೆ[1] ಯೆಂಬುದು ಎಂದಿಗೂ ನಿಲ್ಲುವುದೆ ಇಲ್ಲ. ಈ ಜಗತ್ತೆಲ್ಲವೂ ಪ್ರಲಯವಾಗುವಾಗ ದೊಡ್ಡ ದೊಡ್ಡ ವಸ್ತುಗಳಲ್ಲಿರುವ ಚಲನೆಗಳು ಹೋಗಿಬಿಡುತ್ತವೆ. ಸೂರ್ಯ, ಚಂದ್ರ, ನಕ್ಷತ್ರ, ಭೂಮಿ ಇವೆಲ್ಲವೂ ಹೋಗಿಬಿಡುವುವು. ಆದರೆ ಇವುಗಳ ಅಣುಗಳ ಕಂಪನೆಗಳೇನೋ ಇದ್ದೇ ಇರುವುವು. ದೊಡ್ಡ ದೊಡ್ಡ ಲೋಕಗಳಲ್ಲಿ ಆಗುವ ಕಾರ್ಯವೂ ಪ್ರತಿಯೊಂದು ಅಣುವಿನಲ್ಲಿಯೂ ನಡೆಯುತ್ತಲೆ ಇರುವುದು. ಹೀಗೆಯೇ ಚಿತ್ತದ ವ್ಯಾಪಾರಗಳು ನಿಂತು ಹೋದರೂ ಅದರಲ್ಲಿ ಸೂಕ್ಷ್ಮ ವ್ಯಾಪಾರಗಳು ಇದ್ದೇ ಇರುವುವು. ಅವುಗಳಿಗೆ ತಕ್ಕ ಜೋರು ಸಿಕ್ಕಿದ ಕೂಡಲೆ ಅವು ಮತ್ತೆ ಹೊರಕ್ಕೆ ಬರುತ್ತವೆ. ಈಗ ಜಪವೆಂದರೇನೆಂಬುದು ಗೊತ್ತಾಗುವುದು. ಇದು ಮನಸ್ಸಿನಲ್ಲಿರುವ ಧಾರ್ಮಿಕ ಸಂಸ್ಕಾರಗಳಿಗೆ ಕೊಡಬಹುದಾದ ಅತ್ಯಂತ ಬಲವಾದ ಜೋರು. "ಸಜ್ಜನರ ಸಂಗವನ್ನು ಒಂದು ನಿಮಿಷ ಮಾಡಿದರೂ ಈ ಸಂಸಾರ ಸಾಗರವನ್ನು ದಾಟುವ ನಾವೆ ಆಗುವುದು." ಸಂಗತಿಯ ಬಲವೆಂಬುದು ಇಂಥದ್ದು. ಆದುದರಿಂದ ಓಂಕಾರವನ್ನು ಹೀಗೆ ಜಪ ಮಾಡುತ್ತ ಅದರ ಅರ್ಥವನ್ನು ಭಾವಿಸುತ್ತಿದ್ದರೆ ನಿಮ್ಮ ಮನಸಿನಲ್ಲಿಯೆ ಸತ್ಸಂಗತಿಯನ್ನು ಮಾಡಿದಂತಾಯಿತು. ಓದಬೇಕು[2] ಆಮೇಲೆ ಧ್ಯಾನಮಾಡಬೇಕು; ಧ್ಯಾನ ಮಾಡಿದ ಮೇಲೆ ಓದಬೇಕು; ಇದರಿಂದ ಜ್ಞಾನವು ಬಂದು ಪರಮಾತ್ಮನು ಪ್ರಕಾಶಿಸುವನು.

## 29. ತತಃ ಪ್ರತ್ಯಕ್ಚೇತನಾಧಿಗಮೋಽಪ್ಯನ್ತರಾಯಾಭಾವಶ್ಚ.

ಟೀ॥ ಇದರಿಂದ ಆತ್ಮ ಪರೀಕ್ಷೆ (ಯ ತಿಳಿವಳಿಕೆ) ಯೂ ಅಡ್ಡಿಗಳ ನಾಶವೂ ಆಗುವುವು.

ವಿ॥ ಓಂಕಾರವನ್ನು ಜಪ ಮಾಡುತ್ತ ಅದರ ಅರ್ಥವನ್ನು ಭಾವನೆ ಮಾಡುತ್ತಿರುವುದರಿಂದ ಆಗುವ ಮೊದಲನೆಯ ಫಲವೇನೆಂದರೆ, ಅಂತರ್ದೃಷ್ಟಿಯ ಶಕ್ತಿಯು (ತನ್ನೊಳಗೆ ತಾನು ಪರೀಕ್ಷೆ ಮಾಡಿ ತಿಳಿದುಕೊಳ್ಳುವುದು) ಹೆಚ್ಚು ಹೆಚ್ಚಾಗಿ ಬರುವುದು; ಮತ್ತು ಎಲ್ಲಾ ವಿಧವಾದ ಆಧ್ಯಾತ್ಮಿಕ

---

1. ಜಗತ್ತೆಲ್ಲ ಅಣುಗಳಿಂದ ಉಂಟಾಗಿದೆಯೆಂದೂ ಅಣುಗಳು ನಿತ್ಯವೆಂದೂ ಕಣಾದ ಸಿದ್ಧಾಂತವು. ಈಗಿನ ಭೌತಿಕಶಾಸ್ತ್ರಗಳಲ್ಲಿಯೂ ವಸ್ತುಗಳು ಅಣುಗಳಿಂದಾಗಿರುವವೆಂದು ಹೇಳಿದೆ.

2. "ಸ್ವಾಧ್ಯಾಯಾದ್ಯೋಗಮಾಸೀತ ಯೋಗಾತ್ಸ್ವಾಧ್ಯಾಯಮಾಮನೇತ್ ॥ ಸ್ವಾಧ್ಯಾಯಯೋಗಸಂಪತ್ತ್ಯಾ ಪರಮಾತ್ಮಾ ಪ್ರಕಾಶತೇ ॥" ಯೋಗಭಾಷ್ಯದಲ್ಲಿ ಕೊಟ್ಟಿರುವ ಈ ಶ್ಲೋಕದ ತಾತ್ಪರ್ಯವನ್ನು ಸ್ವಾಮಿಗಳು ಮೇಲೆ ಹೇಳಿದ್ದಾರೆ.

(ಮನಸ್ಸಿನಿಂದಾಗುವ) ವಿಘ್ನಗಳೂ, ಆಧಿಭೌತಿಕ (ಭೌತಿಕ ತತ್ತ್ವಗಳಿಂದಾಗುವ) ವಿಘ್ನಗಳೂ ಮಾಯವಾಗುವುದಕ್ಕೆ ಮೊದಲಾಗುವುವು. ಯೋಗಿಗಳಿಗಿರುವ ವಿಘ್ನಗಳಾವುವು?

**30. ವ್ಯಾಧಿಸ್ತ್ಯಾನಸಂಶಯಪ್ರಮಾದಾಲಸ್ಯಾವಿರತಿ ಭ್ರಾನ್ತಿದರ್ಶನಾಲಬ್ಧಭೂಮಿಕತ್ವಾನವಸ್ಥಿತತ್ವಾನಿ ಚಿತ್ತವಿಕ್ಷೇಪಾಸ್ತೇಽನ್ತರಾಯಾಃ**

ಟೀ॥ ರೋಗ, ಮನಸ್ಸಿನ ಬೇಸರ, ಸಂದೇಹ, ಉತ್ಸಾಹವಿಲ್ಲದಿರುವುದು, ಅಲಸಿಕೆ, ಬಯಕೆ, ಸುಳ್ಳು ತಿಳಿವಳಿಕೆ, ಸಮಾಧಿಯು ದೊರೆಯದಿರುವುದು, ಪಡೆದರೂ ಆ ಸ್ಥಿತಿಯಲ್ಲಿಲ್ಲದೆ ಕೆಳಗೆ ಬೀಳುವುದು ಇವೇ ಅಡ್ಡಿಗಳು.

ವಿ॥ ರೋಗವೆಂಬುದು ಒಂದು ವಿಘ್ನ. ಈ ಶರೀರವೇ ನಮ್ಮನ್ನು ಸಂಸಾರ ಸಾಗರದ ಆಚೆಗೆ ತೆಗೆದುಕೊಂಡು ಹೋಗುವ ದೋಣಿಯು. ಆದುದರಿಂದ ಇದನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಆರೋಗ್ಯವಿಲ್ಲದವರು ಯೋಗಿಗಳಾಗಲಾರರು. ಮನಸ್ಸಿನ ಬೇಸರದಿಂದ ಪ್ರಕೃತ ವಿಷಯದಲ್ಲಿ ರುಚಿಯೇ ಇಲ್ಲದಂತಾಗುವುದು. ಈ ರುಚಿ ಇಲ್ಲದಿದ್ದರೆ ಅಭ್ಯಾಸ ಮಾಡುವುದಕ್ಕೆ ಮನಸ್ಸೂ ಬರುವುದಿಲ್ಲ; ಉತ್ಸಾಹವೂ ಇರುವುದಿಲ್ಲ. ವಿಚಾರದಶೆಯಲ್ಲಿ ಎಷ್ಟೇ ನಿಜವೆಂದು ಮನಗಂಡಿದ್ದರೂ ಈ ಶಾಸ್ತ್ರವು ನಿಜವೊ ಸುಳ್ಳೊ ಎಂಬ ಸಂಶಯಗಳೂ ಬರುವುವು. ದೂರದಿಂದಲೆ ವಸ್ತು ಕಾಣಿಸುವುದು, ಅಥವಾ ಶಬ್ದ ಕೇಳಿಸುವುದು ಇವೇ ಮೊದಲಾದ ಕೆಲವು ಅನುಭವಗಳು ಬರುವವರೆಗೆ ಸಂಶಯಗಳು ಬಂದೇ ಬರುವುವು. ಇಷ್ಟಿಷ್ಟು ಸಣ್ಣ ಅನುಭವಗಳಿಂದ ಕೂಡ ಮನಸ್ಸಿಗೆ ಧೈರ್ಯ ಬಂದು ಸಾಧಕನು ಮುಂದೆ ಮುಂದೆ ಪ್ರಯತ್ನ ಮಾಡುತ್ತಾನೆ. ಪಡೆದು ಕೆಳಗೆ ಬೀಳುವುದು ಹೇಗೆಂದರೆ, ಕೆಲವು ದಿನಗಳವರೆಗೆ ಅಥವಾ ಕೆಲವು ವಾರಗಳವರೆಗೆ ಧ್ಯಾನ ಮಾಡುವಾಗ ಮನಸ್ಸು ಶಾಂತವಾಗಿರುತ್ತದೆ ಮತ್ತು ಸುಲಭವಾಗಿ ಏಕಾಗ್ರವಾಗುತ್ತದೆ. ಮತ್ತು ಬೇಗ ಬೇಗ ಅಭ್ಯಾಸ ಸಾಗುತ್ತದೆಯೆಂದು ತೋರುತ್ತದೆ. ಹೀಗೆ ಇರುವಲ್ಲಿ ಇದ್ದಕ್ಕಿದ್ದ ಹಾಗೆ ಒಂದು ದಿನ ಮುಂದೆ ಸಾಗುವುದು ನಿಂತು ಸಮುದ್ರದಲ್ಲಿ ತೇಲುತ್ತಿದ್ದ ಹಡಗು ನೆಲಕ್ಕೆ ಬಡಿದು ನಿಂತಂತೆ ಆಗುವುದು. ಆದರೂ ಪ್ರಯತ್ನ ಮಾಡಬೇಕು. ಹೀಗೆ ಏಳುವುದು ಬೀಳುವುದು ಈ ಕ್ರಮದಲ್ಲಿಯೇ ಎಲ್ಲಾ ವಿಧವಾದ ಕಾರ್ಯವೂ ಮುಂದೆ ಸಾಗುವುದು.

**31. ದುಃಖದೌರ್ಮನಸ್ಯಾಙ್ಗಮೇಜಯತ್ವಶ್ವಾಸಪ್ರಶ್ವಾಸಾ ವಿಕ್ಷೇಪಸಹಭುವಃ**

ಟೀ॥ ದುಃಖ, ಮನಸ್ಸಿಗೆ ಆಗುವ ವ್ಯಥೆ, ಮೈ ಅಲುಗಾಡುವುದು, ಉಸಿರು ಹೆಚ್ಚು ಕಡಿಮೆಯಾಗುವುದು ಇವುಗಳು ಮನಸ್ಸು ನಿಲ್ಲದೆ ಇರುವಾಗ ಜತೆಯಲ್ಲಿರುವುವು.

ವಿ॥ ಸಮಾಧಿಯನ್ನು ಅಭ್ಯಾಸಮಾಡಿದಾಗಲೆಲ್ಲ ಶರೀರಕ್ಕೂ ಮನಸ್ಸಿಗೂ ಪೂರ್ಣವಿಶ್ರಾಂತಿಯಾಗುವುದು. ಈ ಅಭ್ಯಾಸವು ತಪ್ಪು ದಾರಿಯಲ್ಲಿ ನಡೆದರೆ ಅಥವಾ ತಕ್ಕಷ್ಟು ಸ್ವಾಧೀನದಲ್ಲಿಲ್ಲದೆ ಇದ್ದರೆ ಓಂಕಾರವನ್ನು ಜಪಿಸುವುದರಿಂದಲೂ ಭಗವಂತನಿಗೆ ಆತ್ಮ ಸಮರ್ಪಣ ಮಾಡುವುದರಿಂದಲೂ ಮನಸ್ಸಿಗೆ ಧೈರ್ಯವು ಹುಟ್ಟಿ ಹೆಚ್ಚಿನ ಉತ್ಸಾಹವು ಬರುವುದು. ಮಧ್ಯೆ

ಎದೆಗೆಟ್ಟು ಗಾಬರಿಯಾಗುವುದೆಂಬುದು ಸ್ವಲ್ಪ ಹೆಚ್ಚು ಕಡಿಮೆ ಎಲ್ಲರಿಗೂ ಉಂಟು. ಇವುಗಳನ್ನು ಮನಸ್ಸಿಗೇ ಹಚ್ಚಿಕೊಳ್ಳದೆ ಅಭ್ಯಾಸ ಮಾಡುತ್ತಿರಬೇಕು. ಅಭ್ಯಾಸದಿಂದಲೆ ಅದೆಲ್ಲ ತಪ್ಪಿ ಮನಸ್ಸಿಗೆ ಧೈರ್ಯಬರುವುದು.

## 32. ತತ್ಪ್ರತಿಷೇಧಾರ್ಥಮೇಕತತ್ತ್ವಾಭ್ಯಾಸಃ

ಟೀ|| ಇದನ್ನು ಹೋಗಲಾಡಿಸುವುದಕ್ಕೆ ಒಂದೇ ತತ್ತ್ವದ ಅಭ್ಯಾಸ (ಮಾಡಬೇಕು)

ವಿ|| ಕೆಲವು ಕಾಲ ಮನಸ್ಸು ಒಂದೇ ಒಂದು ವಿಷಯದ ರೂಪನ್ನು ಪಡೆಯುವಂತೆ ಮಾಡಿದರೆ ಈ ವಿಘ್ನಗಳೆಲ್ಲ ನಾಶವಾಗುವುವು. ಇದು ಸಾಮಾನ್ಯವಾಗಿ ಹೇಳಿದ ಮಾತು. ಈ ಮುಂದಿನ ಸೂತ್ರಗಳಲ್ಲಿ ಇದನ್ನೇ ವಿಸ್ತರಿಸಿ ವಿಶೇಷ ರೀತಿಯಿಂದ ತಿಳಿಸುತ್ತಾರೆ. ಒಂದೇ ಅಭ್ಯಾಸವು ಎಲ್ಲರಿಗೂ ಸರಿ ಬೀಳುವುದಿಲ್ಲವಾದುದರಿಂದ ಬೇರೆ ಬೇರೆ ಮಾರ್ಗಗಳನ್ನು ತಿಳಿಸುತ್ತಾರೆ. ಅವರವರು ತಮತಮಗೆ ಯಾವುದು ಹೆಚ್ಚು ಅನುಕೂಲವಾಗಿದೆಯೆಂಬುದನ್ನು ಅನುಭವದಿಂದ ತಿಳಿದುಕೊಳ್ಳಬಹುದು.

## 33. ಮೈತ್ರೀಕರುಣಾಮುದಿತೋಪೇಕ್ಷಾಣಾಂ ಸುಖ ದುಃಖಪುಣ್ಯಾಪುಣ್ಯ ವಿಷಯಾಣಾಂ ಭಾವನಾತಶ್ಚಿತ್ತಪ್ರಸಾದನಮ್

ಟೀ|| ಸ್ನೇಹ, ಕರುಣ, ಸಂತೋಷ, ಉದಾಸೀನತೆ (ಇವು)ಗಳನ್ನು ಕ್ರಮವಾಗಿ ಸುಖವುಳ್ಳ, ದುಃಖವುಳ್ಳ, ಒಳ್ಳೆಯ ಮತ್ತು ಕೆಟ್ಟ ವಿಷಯಗಳಲ್ಲಿ ಭಾವಿಸುವುದರಿಂದ ಚಿತ್ತವು ಸಮಾಧಾನವಾಗುವುದು.

ವಿ|| ಈ ನಾಲ್ಕು ವಿಧವಾದ ಭಾವನೆಗಳಿರಬೇಕು. ಎಲ್ಲರಲ್ಲಿಯೂ ಸ್ನೇಹವಿರಬೇಕು; ಕಷ್ಟದಲ್ಲಿರುವವರಲ್ಲಿ ಕರುಣೆಯುಳ್ಳವರಾಗಿರಬೇಕು; ಜನರು ಸುಖವಾಗಿದ್ದರೆ ಸಂತೋಷಪಡಬೇಕು; ಕೆಟ್ಟವರಲ್ಲಿ ಉಪೇಕ್ಷೆಯುಳ್ಳವರಾಗಿರಬೇಕು; ನಮ್ಮ ಮುಂದೆ ಬರುವ ಎಲ್ಲಾ ವಿಷಯಗಳಲ್ಲಿಯೂ ಹೀಗೆಯೆ ಇರಬೇಕು. ಅದು ಸರಿಯಾಗಿದ್ದರೆ ನಾವು ಅದರಲ್ಲಿ ಸ್ನೇಹವುಳ್ಳವರಾಗಿರಬೇಕು. ನಾವು ಯೋಚಿಸುವ ಪ್ರಾಣಿಯು ದುಃಖದಲ್ಲಿದ್ದರೆ ಅದರಲ್ಲಿ ಕರುಣೆಯುಳ್ಳವರಾಗಿರಬೇಕು. ಅದು ಒಳ್ಳೆಯದಾಗಿದ್ದರೆ ನಾವು ಸಂತೋಷವಾಗಿರಬೇಕು; ಕೆಟ್ಟದ್ದಾಗಿದ್ದರೆ ಉಪೇಕ್ಷೆಯಿಂದಿರಬೇಕು. ಈ ರೀತಿಯಲ್ಲಿ ತನ್ನ ಮುಂದೆ ಬರುವ ಬೇರೆ ಬೇರೆ ವಿಷಯದಲ್ಲಿ ಆಯಾ ಭಾವನೆಗಳು ಇದ್ದರೆ ಮನಸ್ಸು ಸಮಾಧಾನದಿಂದಿರುವುದು. ನಾವು ದಿನದಿನವೂ ಮಾಡುತ್ತಿರುವ ವ್ಯವಹಾರದಲ್ಲಿ ನಮ್ಮ ಮನಸ್ಸನ್ನು ಈ ರೀತಿ ಇಟ್ಟುಕೊಂಡಿರುವುದಕ್ಕೆ ಆಗದೆ ಇರುವುದರಿಂದಲೆ ನಮಗೆ ಅನೇಕ ತೊಂದರೆಗಳು ಬರುತ್ತಿರುವುವು. ಹೇಗೆಂದರೆ, ಒಬ್ಬನು ನಮಗೆ ಕೆಡಕು ಮಾಡಿದರೆ ಕೂಡಲೆ ಆತನಿಗೆ ಕೇಡು ಮಾಡಬೇಕೆನ್ನುವೆವು. ಹೀಗೆ ಅಪಕಾರಕ್ಕೆ ಪ್ರತಿಯಾಗಿ ಅಪಕಾರವನ್ನು ಮಾಡುವಾಗಲೆಲ್ಲ ಚಿತ್ತವನ್ನು ಬಿಗಿ ಹಿಡಿಯುವುದಕ್ಕೆ ನಮ್ಮಿಂದಾಗುವುದಿಲ್ಲವೆಂದು ಗೊತ್ತಾಗುವುದು. ಆ ಚಿತ್ತವು ತನ್ನ ವಿಷಯದ ಕಡೆಗೆ ಅಲೆಗಳಾಗಿ ಬರುತ್ತಲೆ ನಮ್ಮ ಕೈಮೀರುವುದು. ದ್ವೇಷರೂಪದಲ್ಲಿಯೊ ಅಥವಾ ಅಪಕಾರವನ್ನು ಮಾಡುವುದರಿಂದಲೊ ತೋರಿಸುವ

ಪ್ರತಿಯೊಂದು ಪ್ರತಿಕ್ರಿಯೆಯಿಂದಲೂ ಅಷ್ಟಷ್ಟು ಮನಸ್ಸಿನ ಶಕ್ತಿ ನಷ್ಟವಾಗುವುದು ಮತ್ತು ನಾವು ಯಾವ ಯಾವ ಕೆಟ್ಟ ಯೋಚನೆಯನ್ನೂ ಹಗೆತನವನ್ನೂ ಅಥವಾ ಪ್ರತಿಕ್ರಿಯೆ ಮಾಡಬೇಕೆಂಬ ಮತ್ತಾವ ಯೋಚನೆಯನ್ನೂ ಗೆಲ್ಲುತ್ತೇವೆಯೊ ಅದೆಲ್ಲದರಿಂದಲೂ ನಮಗೆ ಲಾಭವುಂಟು. ಹೀಗೆ ನಮ್ಮನ್ನು ನಾವು ತಡೆದುಕೊಳ್ಳುತ್ತಿರುವುದರಿಂದ ನಷ್ಟವಾಯಿತೆಂದೆಣಿಸಬಾರದು. ಇದರಿಂದ ನಮಗೆ ಗೊತ್ತಿಲ್ಲದೆಯೆ ನಮಗೆಷ್ಟೋ ಲಾಭವಾಗಿರುವುದು. ಹಗೆತನವನ್ನಾಗಲಿ, ಸಿಟ್ಟನ್ನಾಗಲಿ ತಡೆದುಕೊಂಡಾಗಲೆಲ್ಲ ನಮ್ಮಲ್ಲಿ ಅಷ್ಟಷ್ಟು ಒಳ್ಳೆಯ ಶಕ್ತಿಯನ್ನು ಕೂಡಿಟ್ಟ ಹಾಗೆ ಆಯಿತು. ಇಂಥ ಶಕ್ತಿಯಿಂದ ಇನ್ನೂ ಮೇಲುತರದ ಶಕ್ತಿಗಳುಂಟಾಗುವುವು.

## 34. ಪ್ರಚ್ಛರ್ದನವಿಧಾರಣಾಭ್ಯಾಂ ವಾ ಪ್ರಾಣಸ್ಯ

**ಟೀ॥ ಉಸಿರನ್ನು ಹೊರಕ್ಕೆ ಬಿಡುವುದು ಮತ್ತು ಹಿಡಿದುಕೊಳ್ಳುವುದರಿಂದಲೂ**

ವಿ॥ ಮೂಲದಲ್ಲಿ ಪ್ರಾಣವೆಂಬ ಮಾತನ್ನುಪಯೋಗಿಸಿದೆ. ಪ್ರಾಣವೆಂದರೆ ಉಸಿರೆಂತಲೆ ಅರ್ಥವಲ್ಲ. ಇದು ಜಗತ್ತಿನಲ್ಲಿಯ ಶಕ್ತಿಯ ಹೆಸರು. ಈ ಜಗತ್ತಿನಲ್ಲಿ ಏನೇನು ಕಾಣಿಸುವುದೊ ಯಾವ ಯಾವದು ಚಲಿಸುತ್ತಿರುವುದೊ ಅಥವಾ ಕೆಲಸಮಾಡುತ್ತಿರುವುದೊ ಅಥವಾ ಬದುಕಿದೆಯೊ ಅದೆಲ್ಲ ಪ್ರಾಣದ ರೂಪವು. ಈ ಜಗತ್ತಿನಲ್ಲಿ ಕಾಣುವ ಶಕ್ತಿಯ ಒಟ್ಟೇ ಪ್ರಾಣವೆಂಬುದು. ಈ ಪ್ರಾಣವು ಕಲ್ಪವು ಪ್ರಾರಂಭಿಸುವ ಮುಂಚೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಅಲ್ಲಾಡದೆಯೆ ಇರುವುದು. ಕಲ್ಪವು ಪ್ರಾರಂಭಿಸುತ್ತಲೆ ಈ ಪ್ರಾಣವು ತೋರಿಕೊಳ್ಳುವುದಕ್ಕೆ ಮೊದಲು ಮಾಡುವುದು. ಸಂಚಾರ ರೂಪವಾಗಿಯೂ ಮನುಷ್ಯರಲ್ಲಿ ಮತ್ತು ಪ್ರಾಣಿಗಳಲ್ಲಿರುವ ನರಗಳ ಕಾರ್ಯ ರೂಪವಾಗಿಯೂ ಕಾಣಿಸುವುದು ಈ ಪ್ರಾಣವೆ. ಯೋಚನೆಯೇ ಮೊದಲಾದ ರೂಪದಲ್ಲಿ ಕಾಣಿಸುತ್ತಿರುವುದೂ ಈ ಪ್ರಾಣವೇ. ಈ ಬ್ರಹ್ಮಾಂಡವೆಲ್ಲ ಪ್ರಾಣ ಮತ್ತು ಆಕಾಶಗಳ ಸೇರುವೆಯಾಗಿರುವುದು. ಮನುಷ್ಯನ ಶರೀರವೂ ಇದರಂತೆಯೆ (ಇವೆರಡರಿಂದಾಗಿರುವುದು). ಆಕಾಶದಿಂದ ನಮ್ಮ ಅನುಭವದಲ್ಲಿ ಬರುವ ಮತ್ತು ಕಣ್ಣಿಗೆ ಕಾಣಿಸುವ ಎಲ್ಲಾ ಪದಾರ್ಥಗಳೂ ಆಗಿರುತ್ತವೆ ಮತ್ತು ಪ್ರಾಣದಿಂದ ಎಲ್ಲಾ ಶಕ್ತಿ ವಿಶೇಷಗಳೂ ಆಗಿವೆ. ಈ ಪ್ರಾಣವನ್ನು ಹೊರಕ್ಕೆ ಬಿಡುವುದೂ ಬಿಗಿಹಿಡಿಯುವುದೂ ಪ್ರಾಣಾಯಾಮವೆನಿಸುವುದು. ಪತಂಜಲಿಗಳು ಯೋಗಸಿದ್ಧಾಂತಕ್ಕೆ ಮೂಲ ಪ್ರವರ್ತಕರಾದುದರಿಂದ ಪ್ರಾಣಾಯಾಮದ ವಿಚಾರವಾಗಿ ವಿಶೇಷವಿಧಿಗಳನ್ನೇನೂ ಹೇಳಿಲ್ಲ. ಅವರಿಂದೀಚೆಗೆ ಇತರ ಯೋಗಿಗಳು ಈ ಪ್ರಾಣಾಯಾಮದಲ್ಲಿ ಅನೇಕ ವಿಷಯಗಳನ್ನು ಕಂಡು ಹಿಡಿದು ಅದನ್ನೆ ಒಂದು ಶಾಸ್ತ್ರವನ್ನಾಗಿ ಮಾಡಿರುತ್ತಾರೆ. ಪತಂಜಲಿಗಳ ಪ್ರಕಾರ ಅನೇಕ ಸಾಧನಗಳಲ್ಲಿ ಇದೂ ಒಂದು. ಅವರೇನೂ ಅದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ವಾಯುವನ್ನು ಹೊರಕ್ಕೆ ಬಿಡುವುದು, ಒಳಕ್ಕೆ ತೆಗೆದುಕೊಳ್ಳುವುದು, ಸ್ವಲ್ಪ ಹೊತ್ತು ಹಾಗೆಯೇ ಹಿಡಿದುಕೊಂಡಿರುವುದು ಇದೇ ಪ್ರಾಣಾಯಾಮವೆಂದೂ ಇದರಿಂದ ಮನಸ್ಸು ಸ್ವಲ್ಪ ಶಾಂತವಾಗುವುದೆಂದೂ ಅವರ ಅಭಿಪ್ರಾಯ. ಆದರೆ ಇಷ್ಟರಿಂದಲೆ ಈಚೆಗೆ ಪ್ರಾಣಾಯಾಮವೆಂಬುದೊಂದು ಶಾಸ್ತ್ರವೇ ಏರ್ಪಟ್ಟುಬಿಟ್ಟಿದೆ. ಈ ಆಧುನಿಕ ಯೋಗಿಗಳ ಅಭಿಪ್ರಾಯದಲ್ಲಿ ಕೆಲವನ್ನು ಇಲ್ಲಿ ಹೇಳುತ್ತೇನೆ. ಸ್ವಲ್ಪ ಭಾಗವನ್ನು ಮೊದಲು ಹೇಳಿರುತ್ತೇನೆ. ಆದರೆ ಇನ್ನೊಂದು ಸಲ ಹೇಳುವುದರಿಂದ ಮನಸ್ಸಿನಲ್ಲಿ ಚೆನ್ನಾಗಿ ನಿಲ್ಲುವುದಕ್ಕೆ

ಅವಕಾಶವಾಗುವುದು. ಈ ಪ್ರಾಣವೆಂಬುದು ಉಸಿರಲ್ಲವೆಂಬುದನ್ನು ಮೊದಲು ನೆನಪಿನಲ್ಲಿಡಬೇಕು. ಈ ಉಸಿರಿನ ಕೆಲಸಕ್ಕೆ ಕಾರಣವಾಗಿರುವುದಾವುದೋ–ಈ ಉಸಿರಿಗೆ ಸಾರಭೂತವಾಗಿರುವುದಾವುದೊ–ಅದೇ ಪ್ರಾಣವು. ಇದೂ ಅಲ್ಲದೆ ಪ್ರಾಣವೆಂಬ ಮಾತನ್ನು ಎಲ್ಲಾ ಇಂದ್ರಿಯಗಳಿಗೂ ಉಪಯೋಗಿಸುತ್ತಾರೆ. ಇಂದ್ರಿಯಗಳನ್ನೆಲ್ಲ ಪ್ರಾಣಗಳೆಂದೇ ಕರೆಯುವರು. ಮನಸ್ಸನ್ನು ಪ್ರಾಣವೆಂದೇ ಕರೆಯುತ್ತಾರೆ. ಇದರಿಂದ ಪ್ರಾಣವೆಂಬುದು ಶಕ್ತಿಯೆಂದು ಗೊತ್ತಾಗುತ್ತದೆ. ಆದರೆ ಪ್ರಾಣವನ್ನು ಶಕ್ತಿಯೆಂತಲೇ ಹೇಳಿಬಿಡುವುದಕ್ಕಾಗುವುದಿಲ್ಲ. ಏಕೆಂದರೆ ಶಕ್ತಿಯೆಂಬುದು ಪ್ರಾಣದ ಕಾರ್ಯರೂಪವು. ಯಾವುದು ಶಕ್ತಿಯ ರೂಪದಲ್ಲಿಯೂ ಮಿಕ್ಕ ಎಲ್ಲಾ ಕ್ರಿಯೆಗಳ ರೂಪದಲ್ಲಿಯೂ ಕಾಣಿಸಿಕೊಳ್ಳುವುದೋ ಅದೇ ಪ್ರಾಣವು. ಚಿತ್ತವೆಂಬ ಎಂಜಿನ್ನು ಯಂತ್ರವು ಸುತ್ತಮುತ್ತಣ ಪ್ರದೇಶದಿಂದ ಪ್ರಾಣವನ್ನು ಎಳೆದುಕೊಂಡು ಆ ಪ್ರಾಣದಿಂದ ಶರೀರವನ್ನು ಸರಿಯಾದ ಸ್ಥಿತಿಯಲ್ಲಿ ಇಡುವುದಕ್ಕೆ ಬೇಕಾಗಿರುವ ಶಕ್ತಿವಿಶೇಷಗಳನ್ನೂ ಯೋಚನೆಗಳನ್ನೂ ಸಂಕಲ್ಪವನ್ನೂ ಮತ್ತು ಉಳಿದ ಶಕ್ತಿ ವಿಶೇಷಗಳನ್ನೂ ಉಂಟು ಮಾಡುತ್ತಿರುವುದು. ಮೇಲೆ ಹೇಳಿದಂತೆ ಉಸಿರನ್ನಾಡಿಸುವುದರಿಂದ ಶರೀರದಲ್ಲಿರುವ ಎಲ್ಲಾ ಕಾರ್ಯಗಳನ್ನೂ ಶರೀರದಲ್ಲಿ ನಡೆಯುತ್ತಿರುವ ಎಲ್ಲಾ ಬಗೆಯ ನರಗಳ ಕಾರ್ಯಗಳನ್ನೂ ವಶಮಾಡಿಕೊಳ್ಳಬಹುದು. ಮೊದಲು ಆ ಕಾರ್ಯಗಳು ಇಂಥಿಂಥವೆಂದು ಗೊತ್ತಾಗುವುವು. ಆಮೇಲೆ ಅವುಗಳು ನಮ್ಮ ಸ್ವಾಧೀನವಾಗುವುವು. ಈ ಆಧುನಿಕ ಯೋಗಿಗಳು ಮನುಷ್ಯನ ಶರೀರದಲ್ಲಿ ಮುಖ್ಯವಾಗಿ ಮೂರು ಬಗೆಯ ಪ್ರಾಣದ ಪ್ರವಾಹಗಳು ಇವೆಯೆಂದು ಅಭಿಪ್ರಾಯ ಪಡುತ್ತಾರೆ. ಇವುಗಳಲ್ಲಿ ಒಂದಕ್ಕೆ ಇಡಾ ಎಂದೂ ಮತ್ತೊಂದಕ್ಕೆ ಪಿಂಗಳಾ ಎಂದೂ ಇನ್ನೊಂದಕ್ಕೆ ಸುಷುಮ್ನಾ ಎಂದೂ ಹೆಸರಿಟ್ಟಿದ್ದಾರೆ. ಇವರ ಸಿದ್ಧಾಂತದಂತೆ ಪಿಂಗಳೆಯು ಬೆನ್ನು ಹುರಿಯ ಬಲಗಡೆಯೂ ಇಡೆಯು ಎಡಗಡೆಯೂ ಇರುವುದು. ಈ ಬೆನ್ನು ಮೂಳೆಯ ನಡುವೆ ಸುಷುಮ್ನೆಯೆಂಬ ಬರಿಗಾಲುವೆಯೊಂದಿರುವುದು. ಇಡೆಪಿಂಗಳೆಗಳೆಂಬುವು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಕೆಲಸ ಮಾಡುತ್ತಿರುವ ನಾಡಿಗಳು. ಈ ಎರಡು ನಾಡಿಗಳಿಂದ ನಾವು ನಮ್ಮ ವ್ಯವಹಾರವನ್ನೆಲ್ಲ ಮಾಡುತ್ತಿರುವೆವು. ಸುಷುಮ್ನೆಯೇನೋ ಎಲ್ಲರಲ್ಲಿಯೂ ಇದ್ದೇ ಇರುವುದು. ಆದರೆ ಅದರ ಕೆಲಸವು ಯೋಗಿಯಲ್ಲಿ ಮಾತ್ರವೇ ಕಾಣುವುದು. ಯೋಗದಿಂದ ಶರೀರವೇ ಬದಲಾಯಿಸುವುದೆಂಬುದನ್ನು ನೆನಪಿನಲ್ಲಿಡಬೇಕು. ಅಭ್ಯಾಸ ಮಾಡುತ್ತ ಹೋದಹಾಗೆಲ್ಲ ಶರೀರವೂ ಬೇರೆ ಆಗುತ್ತಿರುವುದು; ಅಭ್ಯಾಸಕ್ಕಿಂತ ಮೊದಲು ಇದ್ದಂತೆ ಇರುವುದೇ ಇಲ್ಲ. ಇದು ಯುಕ್ತಿಯುಕ್ತವಾಗಿಯೇ ಇದೆ. ಇದಕ್ಕೆ ಕಾರಣವನ್ನು ಸುಲಭವಾಗಿ ಹೇಳಬಹುದು. ಹೇಗೆಂದರೆ ನಮಗೆ ಬರುವ ಪ್ರತಿಯೊಂದು ಹೊಸತರದ ಯೋಚನೆಯಿಂದಲೂ ನಮ್ಮ ಮೆದುಳಿನಲ್ಲಿ ಒಂದು ರೀತಿಯಿಂದ ಹೊಸ ಕಾಲುವೆಯೊಂದು ಆಗಲೇಬೇಕು. ಇದರಿಂದ ಮನುಷ್ಯರ ಸ್ವಭಾವವು ಪದ್ಧತಿಗಳನ್ನನುಸರಿಸಿಯೇ ಇರುವುದೇಕೆಂಬುದು ಗೊತ್ತಾಗುವುದು. ಮೊದಲೇ ಏರ್ಪಾಡಾಗಿರುವ ಹಾದಿಗಳಲ್ಲಿ ಹೋಗುವುದೇ ಮನುಷ್ಯ ಸ್ವಭಾವ. ಏಕೆಂದರೆ ಇದರಲ್ಲಿ ಏನೂ ಕಷ್ಟವಿಲ್ಲ. ಮನಸ್ಸೆಂಬುದು ಒಂದು ಸೂಜಿಯಂತೆ ಇರುವುದೆಂದೂ ಮೆದುಳಿನ ಪದಾರ್ಥವು ಈ ಸೂಜಿಗೆ ಸಿಕ್ಕಿರುವ ಒಂದು ಮೆತ್ತನೆಯ ಪದಾರ್ಥವೆಂದೂ ದೃಷ್ಟಾಂತವನ್ನು ಕಲ್ಪಿಸಿಕೊಂಡರೆ ನಮಗೆ ಬರುವ ಪ್ರತಿಯೊಂದು ಯೋಚನೆಯಿಂದಲೂ ಆ ಮೆದುಳಿನಲ್ಲಿ ಒಂದೊಂದು ಉದ್ದನೆಯು

ದಾರಿಯನ್ನು ಮಾಡಬೇಕಾಯಿತು. ಈ ದಾರಿಯು ಸ್ವಲ್ಪದರಲ್ಲಿ ಮುಚ್ಚಿಕೊಳ್ಳಬೇಕಾಗಿತ್ತು. ಆದರೆ ಮೆದುಳಿನಲ್ಲಿ ಬೂದುಬಣ್ಣದ ವಸ್ತು ಇದಕ್ಕೆ ಬಳಿದುಕೊಂಡು ಇದನ್ನು ಹಾಗೆಯೆ ಇಟ್ಟಿರುತ್ತದೆ. ಈ ಬೂದು ಬಣ್ಣದ ಬಳಿತವಿಲ್ಲದಿದ್ದರೆ ನೆನಪೇ ಇರುತ್ತಿರಲಿಲ್ಲ. ಏಕೆಂದರೆ ಈ ಹಳೇ ದಾರಿಗಳಲ್ಲಿ ನಡೆಯುವುದೇ–ಒಂದು ಯೋಚನೆಯು ಮೊದಲು ಹೋಗಿದ್ದ ಹಾದಿಯನ್ನು ಮತ್ತೆ ಹಿಡಿಯುವುದೆ–ನೆನಪು ಎನಿಸಿಕೊಳ್ಳುವುದು. ಎಲ್ಲರಿಗೂ ಗೊತ್ತಿರುವ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ಕುರಿತು ಯಾರಾದರೂ ಮಾತನಾಡುತ್ತಿದ್ದರೆ ಅವುಗಳನ್ನು ಬೇರೆ ಬೇರೆ ಬಗೆಯಲ್ಲಿ ಸೇರಿಸಿ ಮಾತನಾಡಿದರೂ ಅದನ್ನು ತಿಳಿದುಕೊಳ್ಳುವುದು ಕಷ್ಟವಾಗುವುದಿಲ್ಲ. ಏಕೆಂದರೆ ಈ ವಿಧವಾದ ದಾರಿಗಳು ಎಲ್ಲರ ಮೆದುಳಿನಲ್ಲಿಯೂ ಇದ್ದೇ ಇರುವುವು. ಆ ಕಡೆಗೆ ಹೋದರಾಯಿತು; ತಿಳಿಯುತ್ತದೆ. ಆದರೆ ಹೊಸ ವಿಚಾರವೇನಾದರೂ ಬಂದರೆ ಹೊಸ ಹಾದಿಗಳಾಗಬೇಕಾದುದರಿಂದ ಆ ವಿಷಯವು ಬೇಗ ತಿಳಿಯುವುದಿಲ್ಲ. ಆದುದರಿಂದಲೆ ಮೆದುಳು (ಮೆದುಳೇ; ಮನುಷ್ಯರಲ್ಲ) ಹೊಸ ಅಭಿಪ್ರಾಯಗಳಿಗೆ ಒಳಗಾಗುವುದಕ್ಕೆ ಒಲ್ಲದು. ಹೀಗೆ ತಾನು ಅದನ್ನೊಲ್ಲೆನೆಂಬುದು ಕೂಡ ಅದಕ್ಕೆ ಗೊತ್ತಿರುವುದಿಲ್ಲ. ಅದು ಇದಕ್ಕೆ ಅಡ್ಡಿ ಮಾಡುವದು. ಪ್ರಾಣವು ಹೊಸ ದಾರಿಗಳನ್ನು ಮಾಡುವುದಕ್ಕೆ ಯತ್ನಿಸುತ್ತಿರುವುದು. ಮೆದುಳು ಅದಕ್ಕೊಪ್ಪುವುದಿಲ್ಲ. ಇದೇ ಪದ್ಧತಿಗಳನ್ನನುಸರಿಸುವುದರ ರಹಸ್ಯ. ಮೆದುಳಿನಲ್ಲಿ ಆಗಿರುವ ಹಾದಿಗಳು ಎಷ್ಟು ಸ್ವಲ್ಪವಾಗಿದ್ದರೆ ಪ್ರಾಣವೆಂಬ ಸೂಜಿಯಿಂದ ಎಷ್ಟು ಸ್ವಲ್ಪ ಇಂಥ ಮಾರ್ಗಗಳೇರ್ಪಟ್ಟಿರುವುವೊ ಮೆದುಳೆಂಬುದು ಅಷ್ಟಷ್ಟು ಹೆಚ್ಚಾಗಿ ಹಳೆಯ ಪದ್ಧತಿಗಳನ್ನೆ ಹಿಡಿಯುವುದು. ಅಷ್ಟಷ್ಟು ಹೆಚ್ಚಾಗಿ ಹೊಸ ಅಭಿಪ್ರಾಯಗಳಿಗೆ ಬರದಂತೆ ಪ್ರಯತ್ನ ಮಾಡುವುದು. ಮನುಷ್ಯನು ಎಷ್ಟೆಷ್ಟು ಹೆಚ್ಚು ವಿಚಾರಿಯಾಗಿರುವನೊ ಅವನ ಮೆದುಳಿನಲ್ಲಿರುವ ಬೀದಿಗಳೂ ಅಷ್ಟಷ್ಟು ವಿಧದಲ್ಲಿ ಒಂದನ್ನೊಂದು ಕೂಡಿಕೊಂಡಿರುವುವು. ಅಷ್ಟಷ್ಟು ಬೇಗನೆ ಹೊಸ ವಿಚಾರಗಳನ್ನು ಆತನು ಅಂಗೀಕರಿಸಿ ಅವುಗಳನ್ನು ತಿಳಿದುಕೊಳ್ಳುವನು. ಪ್ರತಿಯೊಂದು ಹೊಸ ವಿಚಾರದಲ್ಲಿಯೂ ಹೀಗೆಯೇ ತಿಳಿಯಬೇಕು. ಇದರಿಂದ ಮೆದುಳಿನಲ್ಲಿ ಬೇರೆ ತರದಲ್ಲಿ ಅಚ್ಚುಪಡಿಯಾಗುವುದು; ಬೇರೆ ತರದ ಕಾಲುವೆಗಳನ್ನು ತೆಗೆದಂತೆ ಆಗುವುದು. ಇದರಿಂದಲೆ (ಇದು ಸಂಪೂರ್ಣವಾಗಿ ಹೊಸ ತರದ ವಿಚಾರಗಳಿಂದಲೂ ಸಂಕಲ್ಪಗಳಿಂದಲೂ ಕೂಡಿರುವುದರಿಂದಲೆ) ಯೋಗಾಭ್ಯಾಸದಲ್ಲಿ ಮೊದಲು ಅಷ್ಟೊಂದು ಅಡ್ಡಿಯಾಗುವುದು. ಧರ್ಮದಲ್ಲಿ ವ್ಯವಹಾರ ಸಂಬಂಧವಾಗಿ ಹೇಳಿರುವ ಭಾಗವನ್ನು ಅಷ್ಟೊಂದು ಜನರು ಅಂಗೀಕರಿಸುವರು; ಆದರೆ ಇನ್ನೊಂದು ಭಾಗವನ್ನು ಎಂದರೆ ಮನುಷ್ಯ ಪ್ರತ್ಯಕ್ಸ್ವಭಾವ (ಒಳಗಿನ ಸ್ವರೂಪ)ವನ್ನು ಕುರಿತು ಹೇಳುವ ತತ್ತ್ವಶಾಸ್ತ್ರವನ್ನು ಅಥವಾ ಮನಶ್ಶಾಸ್ತ್ರವನ್ನು ಜನರು ಅನೇಕ ವೇಳೆಗಳಲ್ಲಿ ತಾತ್ಸಾರ ಮಾಡುವುದೂ ಇದರಿಂದಲೆ. ಈ ಜಗತ್ತೆಂದರೇನೆಂಬ ಲಕ್ಷಣವನ್ನು ನೆನಪಿಡಬೇಕು. ಅನಂತಸತ್ತೆಯು[1] ತಿಳಿವಿನಲ್ಲಿ ಬಿಂಬಿಸಿದರೆ ಅದಕ್ಕೆ ಜಗತ್ತೆಂದು ಹೆಸರು. ಅನಂತದಲ್ಲಿ ಒಂದು ಭಾಗವು ನಮ್ಮ ತಿಳಿವಿನಲ್ಲಿ ಬರುವುದು. ಅದನ್ನೆ ನಮ್ಮ ಜಗತ್ತೆಂದು ಕರೆಯುತ್ತಿರುವೆವು. ಹೀಗಿರುವುದರಿಂದ ಈ ಜಗತ್ತಿನಿಂದಾಚೆ ಅನಂತವೊಂದಿದೆ. ಧರ್ಮವೆಂಬುದು ನಮ್ಮ ಜಗತ್ತೆಂಬ ಈ ಸ್ವಲ್ಪ ಭಾಗವನ್ನೂ ಇದರಾಚೆಗೆ ಇರುವ ಅನಂತವನ್ನೂ

1. ಅನಂತವೆಂದರೆ ಇಷ್ಟೆಂದು ಗೊತ್ತುಮಾಡಿ ಹೇಳುವದಕ್ಕಾಗದುದು. ಸತ್ತೆ ಎಂದರೆ ಇರುವಿಕೆ.

ಎರಡನ್ನೂ ಕುರಿತು ಹೇಳಬೇಕಾಗಿರುವುದು. ಈ ಎರಡರಲ್ಲಿ ಒಂದು ಭಾಗವನ್ನು ಮಾತ್ರ ಕುರಿತು ಹೇಳುವ ಮತವು ಪೂರ್ತಿಯಾಗಲಾರದು. ಇವೆರಡನ್ನೂ ಕುರಿತು ಹೇಳಲೇಬೇಕು. ತಿಳಿವಿನಲ್ಲಿ ಸೇರಿರುವ – ತಿಳಿವಿನಲ್ಲಿ ಎಂದರೆ ದೇಶಕಾಲನಿಮಿತ್ತವೆಂಬ ಪ್ರಪಂಚದಲ್ಲಿ ಸಿಕ್ಕಿಕೊಂಡಿರುವ ಅನಂತದ ಭಾಗವನ್ನು ಕುರಿತು ಹೇಳುವ–ಧರ್ಮವು ನಮಗೆ ಚೆನ್ನಾಗಿ ಗೊತ್ತಾಗಿರುವುದು. ಏಕೆಂದರೆ, ನಾವು ಇರುವುದೇ ಅದರಲ್ಲಿ. ಈ ಜಗತ್ತಿನ ವಿಷಯವಾದ ವಿಚಾರಗಳು ಅನಾದಿ ಕಾಲದಿಂದ ನಮ್ಮಲ್ಲಿದ್ದೇ ಇರುವುವು. ಆದರೆ ಇದರಿಂದಾಚೆ ಇರುವ ಅನಂತವಸ್ತುವನ್ನು ಕುರಿತು ಹೇಳುವ ಧರ್ಮವು ನಮಗೆ ಪೂರ ಹೊಸದಾಗಿರುವುದರಿಂದ ಅದರ ವಿಷಯದಲ್ಲಿ ಅಭಿಪ್ರಾಯಗಳು ಬರುವುದಕ್ಕೆ ಮೆದುಳಿನಲ್ಲಿ ಹೊಸ ಹೊಸ ಕಾಲುವೆಗಳಾಗಬೇಕು. ಇದರಿಂದ ಶರೀರಕ್ಕೆ ಶರೀರವೇ ಹೆಚ್ಚು ಕಡಿಮೆಯಾಗುವುದು. ಸಾಮಾನ್ಯ ಜನರು ಯೋಗಾಭ್ಯಾಸ ಮಾಡುವಾಗ ಮೊದಲಿನ ಪದ್ಧತಿಗಳನ್ನೆಲ್ಲ ಬಿಡುವುದು ಇದರಿಂದಲೆ. ಈ ತೊಂದರೆಗಳನ್ನು ಆದಷ್ಟು ಕಡಿಮೆ ಮಾಡುವುದಕ್ಕಾಗಿ ಪತಂಜಲಿಗಳು ನಮಗೆ ಯಾವುದು ಹೆಚ್ಚು ಅನುಕೂಲವೊ ಅದನ್ನು ಅಭ್ಯಾಸ ಮಾಡಲಿ ಎಂದು ಈ ಬೇರೆಬೇರೆ ವಿಧವಾದ ಕ್ರಮಗಳನ್ನೇರ್ಪಡಿಸಿದ್ದಾರೆ.

## 35. ವಿಷಯವತೀ ವಾ ಪ್ರವೃತ್ತಿರುತ್ಪನ್ನಾ ಮನಸಃ ಸ್ಥಿತಿನಿಬಂಧನೀ

[1]ಟೀ|| ಅಪೂರ್ವವಾದ ವಿಷಯಜ್ಞಾನಗಳನ್ನುಂಟು ಮಾಡುವ ಧಾರಣೆಗಳಿಂದ ಸ್ಥಿರ ಪ್ರಯತ್ನ ಮಾಡುವುದಕ್ಕೆ ಕಾರಣವಾಗುವುದು.

ವಿ|| ಇದು ನಿಜವಾಗಿ ನೋಡಿದರೆ ಧಾರಣೆಗೆ ಸೇರತಕ್ಕದ್ದು. ಯೋಗಿಗಳು ಏನು ಹೇಳುತ್ತಾರೆಂದರೆ, ಮನಸ್ಸು ಮೂಗಿನ ತುದಿಯ ಮೇಲೆ ಧಾರಣೆಯಿಂದ ನಿಂತರೆ ಕೆಲವು ದಿನಗಳಲ್ಲಿ ದಿವ್ಯಗಂಧವು ತೋರುವುದು. ನಾಲಗೆಯ ಬುಡದಲ್ಲಿ ಮನಸ್ಸನ್ನು ನಿಲ್ಲಿಸಲು ಶಬ್ದಗಳು ಕೇಳಿಸುವುವು. ನಾಲಗೆಯ ಕೊನೆಯಲ್ಲಿ ನಿಲ್ಲಿಸಲು ವಿಚಿತ್ರವಾದ ರುಚಿಗಳು ತೋರುವುವು. ನಾಲಗೆಯ ಮಧ್ಯದಲ್ಲಿ ನಿಲ್ಲಿಸಿದರೆ ಏನನ್ನೊ ಮುಟ್ಟಿದಂತಾಗುವುದು. ದವಡೆಯಲ್ಲಿ ಮನಸ್ಸನ್ನು ನಿಲ್ಲಿಸಿದರೆ ಕೆಲವು ವಿಶೇಷ ರೂಪಗಳು ತೋರುವುವು. ಮನಸ್ಸು ಚಂಚಲವಾಗಿದ್ದು ಈ ಯೋಗಾಭ್ಯಾಸಗಳಲ್ಲಿ ಕೆಲವನ್ನು ಮಾಡಬೇಕೆಂಬ ಬಯಕೆ ಇದ್ದು ಇವುಗಳು ನಿಜವೊ ಸುಳ್ಳೊ ಎಂದು ಸಂಶಯ ಪಡುವಾತನಿಗೆ ಸ್ವಲ್ಪ ಅಭ್ಯಾಸ ಮಾಡುವುದರಲ್ಲಿ ಇಂಥ ಅನುಭವಗಳು ಬರುವುದರಿಂದ ಸಂಶಯಗಳೆಲ್ಲ ತೊಲಗಿ ಅವನು ಮುಂದೆ ಪ್ರಯತ್ನ ಮಾಡುವನು.

## 36. ವಿಶೋಕಾ ವಾ ಜ್ಯೋತಿಷ್ಮತೀ

ಟೀ|| ಅಥವಾ ಯಾವ ಶೋಕವೂ ಇಲ್ಲದ ಜ್ಯೋತಿಷ್ಮತಿಯ (ದೊಡ್ಡ ಬೆಳಕ)ನ್ನು ಧ್ಯಾನಿಸುವುದರಿಂದಲಾಗಲಿ

---

1. ಅಥವಾ ವಿಷಯದಿಂದ ಕೂಡಿದ ಪ್ರವೃತ್ತಿಯು ಹುಟ್ಟಿದ ಮನಸ್ಸನ್ನು ಸ್ಥಿತಿಯಲ್ಲಿ ನಿಲ್ಲಿಸುವುದು ಎಂಬುದು ಸೂತ್ರದ ಅಕ್ಷರಾರ್ಥವಾಗುವುದು. ಭಾಷ್ಯಾನುಸಾರವಾಗಿ ಪ್ರವೃತ್ತಿಯೆಂಬ ಮಾತನ್ನು ಆಯಾ ವಿಷಯಗಳ ಜ್ಞಾನವನ್ನುಂಟು ಮಾಡುವ ಧಾರಣೆಯೆಂದು ಸ್ವಾಮಿಗಳವರು ಅರ್ಥಮಾಡಿದ್ದಾರೆ.

ವಿ॥ ಇದು ಮತ್ತೊಂದು ಬಗೆಯ ಧಾರಣೆ. ಹೃದಯ ಕಮಲದ ಎಸಳುಗಳು ಕೆಳಕ್ಕೆ ಬೆಳೆದಿರುವವೆಂತಲೂ ಅದರ ಮಧ್ಯದಲ್ಲಿ ಸುಷುಮ್ನೆ ಇರುವದೆಂತಲೂ ಭಾವಿಸಬೇಕು. ಉಸಿರನ್ನು ಎಳೆದುಕೊಂಡು ಅದನ್ನು ಹೊರಕ್ಕೆ ಬಿಡುವಾಗ ಆ ಕಮಲವು ಮೇಲಕ್ಕೆ ತಿರುಗಿಕೊಳ್ಳುವುದೆಂದೂ ಆ ಕಮಲದ ಮಧ್ಯದಲ್ಲಿ ದೊಡ್ಡ ಪ್ರಭೆಯಿದೆಯೆಂದೂ ಭಾವಿಸಬೇಕು. ಅದನ್ನು ಧ್ಯಾನಿಸಬೇಕು.

## 37. ವೀತರಾಗವಿಷಯಂ ವಾ ಚಿತ್ತಮ್.

ಟೀ॥ ವಿಷಯಗಳಲ್ಲಿ ಯಾವ ಆಸಕ್ತಿಯೂ ಇಲ್ಲದ ಚಿತ್ತವನ್ನು (ಧ್ಯಾನಿಸುವುದರಿಂದಲಾಗಲಿ)

ವಿ॥ ಯಾವನಾದರೂ ಒಬ್ಬ ಮಹಾತ್ಮನನ್ನು–ನಮಗೆ ಯಾವನಲ್ಲಿ ಹೆಚ್ಚು ಗೌರವವಿದೆಯೊ ಅಂಥ ದೊಡ್ಡ ಮನುಷ್ಯನನ್ನು–ಸಂಪೂರ್ಣವಾಗಿ ಅನಾಸಕ್ತನಾಗಿರುವನೆಂದು ನಮಗೆ ಗೊತ್ತಿರುವ ಯಾವನಾದರೂ ಮಹಾತ್ಮನನ್ನು–ನೆನೆದು ಆತನ ಹೃದಯವನ್ನು ಧ್ಯಾನಿಸಬೇಕು. ಆ ಹೃದಯವು ವಿಷಯಾಸಕ್ತಿ ಇಲ್ಲದೆ ಇರುತ್ತದೆಯಷ್ಟೆ, ಅದನ್ನೆ ಧ್ಯಾನಿಸಬೇಕು. ಅದರಿಂದ ಮನಸ್ಸಿಗೆ ಸಮಾಧಾನವುಂಟಾಗುವುದು. ಇದು ಆಗದಿದ್ದರೆ ಇನ್ನೊಂದುಪಾಯವಿರುವುದು.

## 38. ಸ್ವಪ್ನನಿದ್ರಾಜ್ಞಾನಾಲಮ್ಬನಂ ವಾ

ಟೀ॥ ನಿದ್ರೆಯಲ್ಲಿರುವ ಜ್ಞಾನವನ್ನು ಧ್ಯಾನಿಸುವುದರಿಂದಲಾಗಲಿ

ವಿ॥ ಕೆಲವು ವೇಳೆಗಳಲ್ಲಿ ಒಬ್ಬೊಬ್ಬರಿಗೆ ದೇವತೆಗಳನ್ನು ಕಂಡ ಹಾಗೂ ಅವರು ತನ್ನೊಡನೆ ಮಾತನಾಡುತ್ತಿರುವ ಹಾಗೂ ಅಥವಾ ತನಗೆ ಸಮಾಧಿಯುಂಟಾದಂತೆಯೂ, ಅಥವಾ ಆಕಾಶದಲ್ಲಿ ಗಂಧರ್ವಗಾನವನ್ನು ಕೇಳಿದಂತೆಯೂ ಕನಸು ಬೀಳುವುದುಂಟು. ಅಂಥವರಿಗೆ ಆ ಸ್ವಪ್ನದಲ್ಲಿ ಆನಂದ ಸ್ಥಿತಿಇರುವುದರಿಂದ ಎಚ್ಚತ್ತ ಮೇಲೆ ಅದು ಮರೆಯದಂತೆ ಬಲವಾಗಿ ಮನಸ್ಸಿಗೆ ಹತ್ತಿಕೊಂಡಿರುವುದು. ಆ ಸ್ವಪ್ನವನ್ನೆ ದಿಟವೆಂದು ಭಾವಿಸಿ ಅದನ್ನು ಧ್ಯಾನಿಸುತ್ತಿರಬೇಕು. ಅದೂ ಆಗದಿದ್ದರೆ ನಿಮಗೆ ಒಪ್ಪುವ ಯಾವುದಾದರೂ ಪರಿಶುದ್ಧವಾದ ವಸ್ತುವನ್ನು ಧ್ಯಾನಿಸಬೇಕು.

## 39. ಯಥಾಭಿಮತಧ್ಯಾನಾದ್ವಾ

ಟೀ॥ ತನಗೆ ಒಪ್ಪುವ ಪದಾರ್ಥವನ್ನು ಧ್ಯಾನಿಸುವುದರಿಂದಲಾಗಲಿ

ವಿ॥ ಎಂದರೆ ಯಾವ ಕೆಟ್ಟ ವಸ್ತುವಾದರೂ ಆಗಬಹುದೆಂದರ್ಥವಲ್ಲ; ಒಳ್ಳೆಯದಾಗಿದ್ದು ನಿಮಗೆ ಒಪ್ಪುವ ಯಾವುದಾದರೊಂದು ಪದಾರ್ಥವು. ಹೇಗೆಂದರೆ, ನಿಮಗೆ ಉತ್ತಮವಾಗಿ ತೋರುವ ಯಾವುದಾದರೊಂದು ಸ್ಥಳವು[1], ನಿಮಗೆ ಬಹು ಚೆನ್ನಾಗಿ ತೋರಿದ ಯಾವುದಾದರೊಂದು ನೋಟವು[2], ನಿಮಗೆ ತೋರಿದ ಯಾವುದಾದರೊಂದು ಉತ್ತಮವಾದ

1. ಪುಣ್ಯ ಕ್ಷೇತ್ರ ಮೊದಲಾದುದು.

2. ರಥೋತ್ಸವ ಮೊದಲಾದುದು.

ಅಭಿಪ್ರಾಯವು[1] ಹೀಗೆ ಮನಸ್ಸಿಗೆ ನಿಲ್ಲುವುದಕ್ಕೆ ಸಾಧನವಾಗಿರುವ ಯಾವುದಾದರೊಂದು ವಸ್ತು[2]ವೆಂದರ್ಥ.

## 40. ಪರಮಾಣುಪರಮಮಹತ್ತ್ವಾನ್ತೋಽಸ್ಯ ವಶೀಕಾರಃ

ಟೀ|| ಹೀಗೆ ಧ್ಯಾನ ಮಾಡುವ ಯೋಗಿಯ ಮನಸ್ಸಿಗೆ ಪರಮಾಣು (ಬಹು ಚಿಕ್ಕದು) ಮೊದಲುಗೊಂಡು ಎಲ್ಲದಕ್ಕಿಂತಲೂ ದೊಡ್ಡದಾದುದರವರೆಗೂ ಅಡ್ಡಿ ಇಲ್ಲದೆ ಇರುವುದು.

ವಿ|| ಈ ಅಭ್ಯಾಸದಿಂದ ಮನಸ್ಸಿಗೆ ಅತ್ಯಂತದೊಡ್ಡದಾದ ವಸ್ತುಗಳನ್ನು ಹೇಗೋ ಹಾಗೆ ಅತ್ಯಂತ ಸೂಕ್ಷ್ಮ ವಸ್ತುವನ್ನೂ ಧ್ಯಾನಿಸುವುದು ಸುಲಭವಾಗಿ ಬರುವುದು.

## 41. ಕ್ಷೀಣವೃತ್ತೇರಭಿಜಾತಸ್ಯೇವಮಣೇರ್ಗ್ರಹೀತೃ ಗ್ರಹಣಗ್ರಾಹ್ಯೇಷು ತತ್ಸ್ಥತದಞ್ಜನತಾಸಮಾಪತ್ತಿಃ

ಟೀ|| ಹೀಗೆ ವೃತ್ತಿಗಳು ಕ್ಷಯವಾದ (ವಶವಾದ) ಯೋಗಿಗೆ (ಬೇರೆ ಬೇರೆ ಬಣ್ಣದ ವಸ್ತುಗಳ ಮುಂದಿಟ್ಟ) ಸ್ಫಟಿಕಮಣಿಯಂತೆ ಹೊಂದುವವನು, ಹೊಂದುವುದು (ಕರಣ), ಮತ್ತು ಹೊಂದುವ ವಸ್ತು (ಆತ್ಮ, ಮನಸ್ಸು ಮತ್ತು ವಿಷಯಗಳು) ಇವುಗಳಲ್ಲಿ ಅಲ್ಲಿಯೆ ನಿಲ್ಲುವುದು ಮತ್ತು ಅದೇ ರೂಪವಾಗಿರುವುದು ಇವುಗಳುಂಟಾಗುತ್ತವೆ.

ವಿ|| ಹೀಗೆ ಬಿಡದೆ ಧ್ಯಾನ ಮಾಡುವುದರಿಂದ ಏನಾಗುತ್ತದೆ? ಹಿಂದೆ ಪತಂಜಲಿಗಳು ಬೇರೆ ಬೇರೆ ಧ್ಯಾನಗಳನ್ನು ತಿಳಿಸಿ ಅವುಗಳಲ್ಲಿ ಮೊದಲು ಸ್ಥೂಲ ರೂಪವಾಗಿರಬೇಕೆಂದೂ, ಎರಡನೆಯದು ಸೂಕ್ಷ್ಮವಾಗಿರಬೇಕೆಂದೂ, ಅಲ್ಲಿಂದಾಚೆಗೆ ಇನ್ನೂ ಸೂಕ್ಷ್ಮವಾಗಿರಬೇಕೆಂದೂ ಹೇಳಿದ್ದಾರಷ್ಟೆ. ಈ ಧ್ಯಾನಗಳಿಂದ ಆಗುವ ಫಲವೇನೆಂದರೆ, ಸ್ಥೂಲವಸ್ತುಗಳನ್ನು ಧ್ಯಾನ ಮಾಡುವುದಕ್ಕಾಗುವಂತೆಯೆ ಸೂಕ್ಷ್ಮವಸ್ತುಗಳನ್ನು ಸುಲಭವಾಗಿ ಧ್ಯಾನ ಮಾಡುವುದಕ್ಕೂ ಬರುತ್ತದೆ. ಯೋಗಿಗೆ ಆತ್ಮ, ವಿಷಯಗಳು, ಮನಸ್ಸು ಎಂಬ–ಗ್ರಹಿಸುವವನು, ಗ್ರಹಿಸಬೇಕಾದ ವಿಷಯಗಳು, ಗ್ರಹಿಸುವ ಸಾಧನ, ಎಂಬ–ಮೂರು ಪದಾರ್ಥಗಳು ತೋರುತ್ತಿರುವುವು. ಧ್ಯಾನ ಮಾಡುವುದಕ್ಕೆ ಮೂರು ಜಾತಿಯ ವಸ್ತುಗಳು ಸಿಕ್ಕಿದಂತಾಯಿತು. ಮೊದಲನೆಯದು ಹೊರಗಿನ ಭೌತಿಕ ವಸ್ತುಗಳೆ ಮೊದಲಾದ ಸ್ಥೂಲವಸ್ತುಗಳು. ಎರಡನೆಯದು ಮನಸ್ಸೇ ಮೊದಲಾದ ಸೂಕ್ಷ್ಮ ವಸ್ತುಗಳು. ಮೂರನೆಯದು ಸೋಪಾಧಿಕ[3] ಪುರುಷ–ಕೇವಲ ಪುರುಷನಲ್ಲ–ಅಹಂಕಾರದಿಂದ ಕೂಡಿದ ಪುರುಷ. ಯೋಗಿಗೆ ಅಭ್ಯಾಸದಿಂದ ಈ ಎಲ್ಲಾ ವಿಧವಾದ ಧ್ಯಾನಗಳೂ ದೃಢವಾಗುವುವು. ಧ್ಯಾನ ಮಾಡುವಾಗ ಧ್ಯಾನಮಾಡುವ ಒಂದು ವಸ್ತು ಹೊರತು ಮಿಕ್ಕ ಎಲ್ಲಾ ವಸ್ತುಗಳ ಯೋಚನೆಯನ್ನೂ ಬರಗೊಡಿಸದೆ ಇರುವುದಕ್ಕೆ ಅವನಿಗೆ ಬರುತ್ತದೆ. ಅವನು ಏನನ್ನು

1. ಬಾವಿ, ಕೆರೆ, ಕಟ್ಟೆ ಮೊದಲಾದವುಗಳನ್ನು ಕಟ್ಟಿಸುವುದೂ ಅನ್ನದಾನವಿದ್ಯಾದಾನ ಮಾಡುವುದೂ ಮೊದಲಾದುದು.

2. ಯಾವುದು ಅತಿಶಯ ಗುಣದಿಂದಲಾಗಲಿ, ಸಂಪತ್ತಿನಿಂದಲಾಗಲಿ, ಬಲದಿಂದಲಾಗಲಿ ಉತ್ತಮವೆನಿಸುವುದೊ ಅಂಥ ಒಳ್ಳೆಯ ವಸ್ತು. ಭಗವದ್ಗೀತೆಯಲ್ಲಿ ಹೇಳಿದ ವಿಭೂತಿಗಳೆಲ್ಲ ಇಂಥವು.

3. ಯಾವುದಾದರೂ ವಿಶೇಷಣದಿಂದ ಕೂಡಿದುದನ್ನುಸೋಪಾಧಿಕವೆನ್ನುವರು.

ಧ್ಯಾನಿಸುತ್ತಾನೋ ತತ್ಕಾಲಕ್ಕೆ ಅದೇ ಆಗಿಬಿಡುತ್ತಾನೆ. ಧ್ಯಾನ ಕಾಲದಲ್ಲಿ ಸ್ಫಟಿಕ ಮಣಿಯಂತೆ ಇರುತ್ತಾನೆ. ಹೂಗಳ ಮುಂದಿರುವ ಸ್ಫಟಿಕವು ಹೂಗಳಂತೆಯೆ ಆಗಿಬಿಡುವುದು. ಹೂ ಕೆಂಪಗೆ ಇದ್ದರೆ ಸ್ಫಟಿಕವೂ ಕೆಂಪಗೆ ಕಾಣಿಸುವುದು. ಹೂ ನೀಲಿಯಾಗಿದ್ದರೆ ಸ್ಫಟಿಕವೂ ನೀಲಿಯಾಗಿ ಕಾಣುವುದು.

## 42. ತತ್ರ ಶಬ್ದಾರ್ಥಜ್ಞಾನವಿಕಲ್ಪೈಃ ಸಙ್ಕೀರ್ಣಾಸವಿತರ್ಕಾ ಸಮಾಪತ್ತಿಃ

ಟೀ॥ ಶಬ್ದ, ಅರ್ಥ, ಇವುಗಳಿಂದಾದ ಜ್ಞಾನ ಇವುಸೇರಿಕೊಂಡಿರುವುದು ಸವಿತರ್ಕ (ಸಮಾಧಿಯೆನಿಸುವುದು).

ವಿ॥ ಇಲ್ಲಿ ಶಬ್ದವೆಂದರೆ ಕಂಪನೆಯು. ಅರ್ಥವೆಂದರೆ[1] ಅಂಥ ಕಂಪನೆಯನ್ನು ತೆಗೆದುಕೊಂಡು ಹೋಗುವ ನರಗಳ ಪ್ರವಾಹಗಳು. ಜ್ಞಾನವೆಂದರೆ ಪ್ರತಿಕ್ರಿಯೆ. ಇದುವರೆಗೆ ಹೇಳಿದ ಸಮಾಧಿಗಳಿಗೆಲ್ಲ ಸವಿತರ್ಕ (ಕೇಳುವ ಸಮಾಧಿ) ಎಂದು ಹೆಸರಿಟ್ಟಿದ್ದಾರೆ. ಇನ್ನೂ ಮುಂದೆ ಮುಂದೆ ಹೋಗುತ್ತ ಇದಕ್ಕಿಂತಲೂ ಹೆಚ್ಚಿನ ಧ್ಯಾನಗಳನ್ನು ತಿಳಿಸುತ್ತಾರೆ. ಸವಿತರ್ಕವೆಂಬ ಈ ಸಮಾಧಿಗಳಲ್ಲಿ ಶಬ್ದ, ಅರ್ಥ ಮತ್ತು ಜ್ಞಾನ ಇವುಗಳ ಸೇರೋಣದರಿಂದ ಆಗುವ ವಿಷಯವಿಷಯಿ[2]ಗಳೆಂಬ ಭೇದವು ಇದ್ದೇ ಇರುವುದು. ಹೊರಗೆ ವಸ್ತುವಿನಿಂದುಂಟಾಗುವ ಕಂಪನೆಯೇ ಶಬ್ದವು. ಇದನ್ನು ಜ್ಞಾನವಾಹಿಗಳು[3] ಒಳಕ್ಕೆ ತಂದರೆ ಇದು ಅರ್ಥವಾಗುವುದು. ಆಮೇಲೆ ಚಿತ್ತದಲ್ಲಿ ಪ್ರತಿಕ್ರಿಯಾರೂಪವಾದ ಅಲೆಯೊಂದು ಹುಟ್ಟುವುದು. ಇದೇ ಜ್ಞಾನವು. ಆದರೆ ನಾವು ಸಾಮಾನ್ಯವಾಗಿ ತಿಳಿದುಕೊಂಡಿರುವ ಜ್ಞಾನವೆಂಬುದು ಈ ಮೂರರ ಮಿಶ್ರವಾಗಿರುವುದು. ಇಲ್ಲಿಯವರೆಗೆ ಹೇಳಿದ ಎಲ್ಲಾ ವಿಧವಾದ ಧ್ಯಾನಗಳಲ್ಲಿಯೂ ಈ ಮಿಶ್ರವೇ ಧ್ಯಾನಕ್ಕೆ ವಿಷಯವಾಗಿರುವುದು. ಮುಂದೆ ಹೇಳಿರುವ ಸಮಾಧಿಯು ಇದಕ್ಕಿಂತ ಹೆಚ್ಚಿನದು.

## 43. ಸ್ಮೃತಿಪರಿಶುದ್ಧೌ ಸ್ವರೂಪಶೂನ್ಯೇವಾರ್ಥಮಾತ್ರನಿರ್ಭಾಸಾ ನಿರ್ವಿತರ್ಕಾ

ಟೀ॥ ಸ್ಮೃತಿಯು ಶುದ್ಧಿಯಾಗಿ ಅಥವಾ ಗುಣಗಳಿಲ್ಲದಂತೆ ಆಗಿ (ಧ್ಯಾನ ಮಾಡುವ ವಸ್ತುವಿನ) ಅರ್ಥವನ್ನು ಮಾತ್ರ ತೋರಿಸುತ್ತಿದ್ದರೆ ನಿರ್ವಿತರ್ಕವೆಂಬ ಸಮಾಧಿ (ಬರುವುದು).

ವಿ॥ ಈ ಮೂರನ್ನೂ ಧ್ಯಾನ ಮಾಡುವುದನ್ನು ಅಭ್ಯಾಸ ಮಾಡುವುದರಿಂದ ಇವುಗಳು ಸೇರಿಕೊಳ್ಳದೆ ಇರುವ ಸ್ಥಿತಿ ಬರುವುದು. ಇವುಗಳನ್ನು ಬರದಂತೆಯೆ ಮಾಡಬಹುದು. ಈ ಮೂರರ ಸ್ವರೂಪವನ್ನು ಮೊದಲು ವಿಚಾರಿಸೋಣ. ಇಗೋ ಇದು ಚಿತ್ತವೆಂದು ಇಟ್ಟುಕೊಳ್ಳಿ. ಚಿತ್ತವನ್ನು ಸರೋವರವೆಂದೂ ಅದರಲ್ಲಿರುವ ಕಂಪನೆಯನ್ನು (ಶಬ್ದವನ್ನು) ಅದರ ಮೇಲಣ

---

1. ಯಾವುದಾದರೂ ಒಂದು ವಸ್ತುವನ್ನು ಅರಿಯುವಲ್ಲಿ ನಮ್ಮ ಮೆದುಳಿನಲ್ಲಿರುವ ನರಗಳಲ್ಲಿ ಒಂದಾನೊಂದು ಚಲನೆ ಹುಟ್ಟುವುದು. ಅದು ನರಗಳಲ್ಲಿ ಹರಿದುಹೋಗಿ ಜ್ಞಾನ ಸ್ಥಾನಕ್ಕೆ ತಗಲಿ ತಿಳಿವಳಿಕೆಯೆಂಬ ಪ್ರತಿಕ್ರಿಯೆ ಆಗುವುದು – ಎಂದು ಈಗಿನ ಭೌತಿಕ ಶಾಸ್ತ್ರಜ್ಞರು ಹೇಳುವರು.

2. 1ನೇ ಭಾಗದ 8ನೇ ಪುಟವನ್ನು ನೋಡಿ

3. 1ನೇ ಭಾಗದ 39ನೇ ಪುಟವನ್ನು ನೋಡಿ

ಅಲೆಯೆಂದೂ ಹೇಳಿದ ಹೋಲಿಕೆಯನ್ನು ಯಾವಾಗಲೂ ನೆನಪಿಟ್ಟುಕೊಂಡಿರಬೇಕು. ಈ ಶಾಂತವಾದ ಸರೋವರವು ನಿಮ್ಮಲ್ಲಿದೆಯಷ್ಟೆ. ಇಗೊ "ಹಸು" ಎಂಬ ಶಬ್ದವನ್ನು ನಾನು ಉಚ್ಚರಿಸುತ್ತೇನೆಂದು ಇಟ್ಟುಕೊಳ್ಳಿ. ಅದು ನಿಮ್ಮ ಕಿವಿಗೆ ಬಿತ್ತೊ ಇಲ್ಲವೊ ಅದರ ಜತೆಯಲ್ಲಿಯೇ ನಿಮ್ಮ ಮನಸ್ಸಿನಲ್ಲಿ ಅಲೆಯೂ ಉಂಟಾಗುವುದು. ಆ ಅಲೆಯೇ ಹಸುವೆಂಬುದರ ಭಾವನೆ ಅಥವಾ ರೂಪ ಅಥವಾ ಅರ್ಥವೆನ್ನುವುದು. ಒಳಗೂ ಹೊರಗೂ ಆಗುವ ಶಬ್ದದ ಕಂಪನಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟುವ ಚಿತ್ತದ ಅಲೆಯೇ ನಿಮಗೆ ತಿಳಿಯುವ ಹಸು. ಶಬ್ದವು ನಾಶವಾಗುತ್ತಲೇ ಅಲೆಯೂ ನಾಶವಾಗುವುದು. ಒಂದು ಮಾತಿಲ್ಲದೆ ಅದು (ಅಲೆಯು) ಎಂದಿಗೂ ಇರಲಾರದು. ಶಬ್ದವನ್ನು ಕೇಳದೆ ಸುಮ್ಮನೆ ಹಸುವನ್ನು ಯೋಚಿಸಿಕೊಂಡಾಗಲೊ? ಎಂದರೆ ಆಗ ಶಬ್ದವನ್ನು ನೀವೇ ಕಲ್ಪಿಸಿಕೊಳ್ಳುತ್ತೀರಿ. ಮೆಲ್ಲಗೆ ನಿಮ್ಮ ಮನಸ್ಸಿನಲ್ಲಿಯೇ "ಹಸು" ಎಂದು ಅಂದುಕೊಳ್ಳುತ್ತೀರಿ. ಅದರ ಜತೆಯಲ್ಲಿಯೇ ಒಂದು ಅಲೆ ಹುಟ್ಟುವುದು. ಈ ಶಬ್ದದ ಜೋರಿಲ್ಲದೆ ಅಲೆಯೇ ಹುಟ್ಟುವುದಿಲ್ಲ. ಯಾವಾಗ ಹೊರಗಣಿಂದ ಈ ಶಬ್ದವು ಬರುವುದಿಲ್ಲವೊ ಆಗ ಒಳಗಣಿಂದಲೆ ಹುಟ್ಟುವುದು. ಶಬ್ದವು ಹೋಗುತ್ತಲೆ ಅಲೆಯೂ ಮುಗಿಯುವುದು. ಇನ್ನು ಉಳಿಯುವದೇನು? ಈ ಪ್ರತಿಕ್ರಿಯೆಯಿಂದಾದ ಫಲವೊಂದು ಉಳಿಯುವುದು. ಇದೇ ತಿಳಿವಳಿಕೆ. ನಿಮ್ಮ ಮನಸ್ಸಿನಲ್ಲಿ ಇವು ಮೂರಕ್ಕೂ ಅಷ್ಟು ಸಮೀಪ ಸಂಬಂಧವಿರುವುದರಿಂದ ನಮಗೆ ಅವುಗಳನ್ನು ಬೇರೆ ಬೇರೆಯಾಗಿ ಅರಿಯುವುದೇ ಆಗುವುದಿಲ್ಲ. ಶಬ್ದವು ಬಂದೊಡನೆ ಇಂದ್ರಿಯಗಳ ಕಂಪನವು ಹುಟ್ಟಿ ಚಿತ್ತದಲ್ಲಿ ಅಲೆಯೆಂಬ ಪ್ರತಿಕ್ರಿಯೆ ಹುಟ್ಟುವುದು. ಇವು ಒಂದರ ಹಿಂದೊಂದು ಸರ್ರನೆ ಬಂದು ಬಿಡುವುದರಿಂದ ಅವುಗಳನ್ನು ಬಿಡಿಸಿ ಇಂಥಿಂಥವೆಂದು ತಿಳಿಯುವುದು ಆಗುವಂತೆ ಇಲ್ಲ. ಈ ಧ್ಯಾನವನ್ನು ಬಹುಕಾಲ ಅಭ್ಯಾಸ ಮಾಡಿದರೆ ಎಲ್ಲಾ ವಿಧವಾದ ಕಲ್ಪನೆಗಳನ್ನು ಇಟ್ಟುಕೊಂಡು ಇರುವ ಸ್ಮೃತಿಯು ಶುದ್ಧಿಯಾಗುವುದು. ಇದರಿಂದ ನಮಗೆ ಇವು ಇಂಥಿಂಥವೆಂದು ತಿಳಿಯುವುದಕ್ಕಾಗುವುದು. ಇದನ್ನೇ ನಿರ್ವಿತರ್ಕ (ಕೇಳದೆ ಇರುವ ಸಮಾಧಿ) ಎನ್ನುವರು.

## 44. ಏತಯೈವ ಸವಿಚಾರಾ ನಿರ್ವಿಚಾರಾ ಚ ಸೂಕ್ಷ್ಮ ವಿಷಯಾ ವ್ಯಾಖ್ಯಾತಾ

ಟೀ॥ ಈ ಕ್ರಮದಿಂದಲೇ ಸವಿಚಾರನಿರ್ವಿಚಾರಗಳೆಂಬ ಸೂಕ್ಷ್ಮ ವಿಷಯಕವಾದ ಸಮಾಧಿಗಳನ್ನೂ ತಿಳಿಸಿದಂತಾಯಿತು.

ವಿ॥ ಇಲ್ಲಿಯೂ ಹಿಂದೆ ಹೇಳಿದ ಕ್ರಮವನ್ನೆ ಅನುಸರಿಸಬೇಕು. ಆದರೆ ಚಿಂತಿಸುವ ವಸ್ತುಗಳು ಹಿಂದಿನ ಧ್ಯಾನದಲ್ಲಿ ಸ್ಥೂಲವಾಗಿರುವುವು. ಇದರಲ್ಲಿ ಸೂಕ್ಷ್ಮವಾಗಿರುವುವು.

## 45. ಸೂಕ್ಷ್ಮವಿಷಯತ್ವಂ ಚಾಲಿಙ್ಗಪರ್ಯವಸಾನಮ್

ಟೀ॥ ಸೂಕ್ಷ್ಮವಿಷಯಗಳಿಗೆ ಪ್ರಧಾನವೇ ಕೊನೆ

ವಿ॥ ಸ್ಥೂಲವಿಷಯಗಳಲ್ಲಿ ಭೂತಗಳು, ಭೌತಿಕ ಪದಾರ್ಥಗಳು ಇವುಗಳು ಮಾತ್ರ ಸೇರಿರುತ್ತವೆ. ಸೂಕ್ಷ್ಮ ವಿಷಯಗಳಿಗೆ ತನ್ಮಾತ್ರೆಗಳೆಂಬ ಸೂಕ್ಷ್ಮವಾದ ಅಣುಗಳೇ ಮೊದಲು.

ಇಂದ್ರಿಯಗಳು, ಮನಸ್ಸು[1], ಅಹಂಕಾರ, ಚಿತ್ತ (ಸರ್ವರೂಪಕ್ಕೆ ಕಾರಣವಾದುದು), ಪ್ರಧಾನ (ಮುಖ್ಯವಾದುದು), ಪ್ರಕೃತಿ (ಸ್ವಭಾವ), ಅವ್ಯಕ್ತ (ತೋರದೆ ಇರುವುದು) ಎಂಬ ಹೆಸರುಳ್ಳ ಸತ್ತ್ವರಜಸ್ತಮೋಗುಣಗಳ ಸಾಮ್ಯಸ್ಥಿತಿ. ಇವೆಲ್ಲವೂ ಸೂಕ್ಷ್ಮ ವಿಷಯಗಳಲ್ಲಿಯೇ ಸೇರಿವೆ; ಪುರುಷ ಮಾತ್ರ ಸೇರಿಲ್ಲ.

## 46. ತಾ ಏವ ಸಬೀಜಃ ಸಮಾಧಿಃ

ಟೀ॥ ಈ ಸಮಾಧಿಗಳು ಬೀಜದಿಂದ ಕೂಡಿರುವುವು.

ವಿ॥ ಇವುಗಳಿಂದ ಪೂರ್ವಕರ್ಮಗಳೆಂಬ ಬೀಜವು ನಾಶವಾಗುವುದಿಲ್ಲ. ಆದುದರಿಂದ ಇವುಗಳಿಂದಲೆ ಮುಕ್ತಿಯಾಗಲಾರದು. ಆದರೆ ಇವುಗಳಿಂದಾಗುವುದೇನೆಂಬುದನ್ನು ಈ ಕೆಳಗಣ ಸೂತ್ರದಲ್ಲಿ ತಿಳಿಸಿರುತ್ತೆ.

## 47. ನಿರ್ವಿಚಾರವೈಶಾರದ್ಯೇಽಧ್ಯಾತ್ಮಪ್ರಸಾದಃ

ಟೀ॥ ನಿರ್ವಿಚಾರವೆಂಬ ಸಮಾಧಿಯು ಶುದ್ಧವಾದರೆ ಚಿತ್ತವು ಬಲವಾಗಿ ನಿಲ್ಲುವುದು.

## 48. ಋತಂಭರಾ ತತ್ರ ಪ್ರಜ್ಞಾ

ಟೀ॥ ಅದರಲ್ಲಿರುವ ತಿಳಿವಳಿಕೆಗೆ "ನಿಜದಿಂದ ತುಂಬಿರುವುದು" ಎಂದು ಹೆಸರು

ವಿ॥ ಇದನ್ನು ಮುಂದಿನ ಸೂತ್ರದಲ್ಲಿ ವಿವರಿಸಿದೆ.

## 49. ಶ್ರುತಾನುಮಾನಪ್ರಜ್ಞಾಭ್ಯಾಮನ್ಯವಿಷಯಾವಿಶೇಷಾರ್ಥತ್ವಾತ್

ಟೀ॥ ಆಗಮದಿಂದಲೂ ಅನುಮಾನದಿಂದಲೂ ಬರುವ ತಿಳಿವಳಿಕೆಯು ಸಾಮಾನ್ಯವಸ್ತುಗಳ ವಿಷಯವಾಗಿರುತ್ತದೆ. ಈಗ ಹೇಳಿದ ಸಮಾಧಿಯಿಂದ ಬರುವುದು ಅನುಮಾನಾಗಮಗಳು ಹೋಗದೆ ಇರುವಲ್ಲಿಗೂ ಹೋಗುವುದಾದುದರಿಂದ ಹೆಚ್ಚಿನದಾವುದು.

ವಿ॥ ಇಲ್ಲಿರುವ ಅಭಿಪ್ರಾಯವೇನೆಂದರೆ ಸಾಮಾನ್ಯ ವಿಷಯಗಳಲ್ಲಿ ತಿಳಿವಳಿಕೆಯುಂಟಾಗಬೇಕಾದರೆ ಪ್ರತ್ಯಕ್ಷದಿಂದಲಾಗಲಿ ಅಥವಾ ಪ್ರತ್ಯಕ್ಷದಿಂದ ಮಾಡುವ ಅನುಮಾನದಿಂದ (ಊಹೆಯಿಂದ) ಆಗಲಿ ಅಥವಾ ಆಪ್ತ ವಾಕ್ಯದಿಂದಲಾಗಲಿ ಆಗಬೇಕು. ಆಪ್ತವಾಕ್ಯವೆಂದರೆ ಯೋಗಿಗಳ ಮತದಲ್ಲಿ ವೇದಗಳಲ್ಲಿರುವ ಮಂತ್ರಗಳನ್ನು ಕಂಡು ಹಿಡಿದ ಋಷಿಗಳೆಂದೇ ಅರ್ಥ. ಈ ಮತದಲ್ಲಿ ವೇದದ ಪ್ರಾಮಾಣ್ಯವು ಆಪ್ತ ವಾಕ್ಯವೆಂಬುದರ ಮೇಲೆಯೇ ಸಿದ್ಧವಾಗುವುದು. ಆದರೂ ವೇದಗಳಿಂದ ಅನುಭವವಾಗಲಾರದೆಂದು

---

1. ಇಲ್ಲಿ ಮನಸ್ಸೆಂದರೆ ಎಲ್ಲಾ ಇಂದ್ರಿಯಗಳಿಗೂ ಸಾಧಾರಣವಾಗಿರುವ ಜ್ಞಾನಸಾಧನವಾದ ಇಂದ್ರಿಯವೆಂದು ಅರ್ಥ. ಇದು ಅಂತಃಕರಣದಲ್ಲಿ ಒಂದು ವೃತ್ತಿ ಮಾತ್ರವಾಗಿದೆ. ಈ ಗ್ರಂಥದಲ್ಲಿ ಬಹಳ ಕಡೆಯಲ್ಲಿ ಮನಸ್ಸೆಂಬ ಶಬ್ದವನ್ನು ಚಿತ್ತವೆಂಬ ಅರ್ಥದಲ್ಲಿ ಉಪಯೋಗಿಸಿರುತ್ತೆ.

ಯೋಗಿಗಳು ಹೇಳುತ್ತಾರೆ. ವೇದಗಳನ್ನೆಲ್ಲ ಓದಿದರೂ ಏನೂ ಅನುಭವವಾಗದೆ ಇರಬಹುದು. ಆದರೆ ಅಲ್ಲಿ ಹೇಳಿದಂತೆ ನಾವು ಸಾಧನೆ ಮಾಡಿದರೆ ಆ ವೇದಗಳಲ್ಲಿ ಹೇಳಿರುವ ಸ್ಥಿತಿಯು ಅನುಭವಕ್ಕೆ ಬರುವುದು. ಈ ಸ್ಥಿತಿಯನ್ನು ತರ್ಕದಿಂದಲಾಗಲಿ ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ಪಡೆಯುವುದಕ್ಕೆ ಆಗುವುದಿಲ್ಲ. ಆ ಸ್ಥಿತಿಯ ವಿಷಯಕ್ಕೆ ಇತರರ ವಾಕ್ಯವು ಉಪಯೋಗಕ್ಕೆ ಬರದು. ಇದೇ ಸೂತ್ರದ ತಾತ್ಪರ್ಯವು. ಅನುಭವವೇ ಧರ್ಮವು. ಶ್ರವಣ, ಅಧ್ಯಯನ, ವಿಚಾರ ಇವೆಲ್ಲ ಮೊದಲಿನ ಸಾಧನೆಯೆ ಹೊರತು ಧರ್ಮವಲ್ಲ. ಸುಮ್ಮನೆ ಮನಸ್ಸಿನ ವಿಚಾರದಿಂದ ನೋಡಿ ಹೌದೆನ್ನುವುದೊ ಅಲ್ಲವೆನ್ನುವುದೊ ಧರ್ಮವಲ್ಲ. ಯೋಗಿಗಳು ಹೇಳುವ ಅಂಶಗಳಲ್ಲಿ ಮುಖ್ಯವಾದುದೇ ಇದು. ವಿಷಯಗಳನ್ನು ಸಾಕ್ಷಾದನುಭವಿಸುವಂತೆ ಧರ್ಮವನ್ನೂ ಇನ್ನೂ ಹೆಚ್ಚಿನ ಅರ್ಥದಲ್ಲಿ ಅನುಭವಕ್ಕೆ ತಂದುಕೊಳ್ಳಬಹುದು. ದೇವರು, ಆತ್ಮ ಮೊದಲಾದ ಧರ್ಮದ ತತ್ತ್ವಗಳನ್ನು ಹೊರಗಣ ಇಂದ್ರಿಯಗಳಿಂದ ಅರಿಯುವುದಕ್ಕೆ ಆಗುವುದಿಲ್ಲ. ದೇವರನ್ನು ಕಣ್ಣಿನಿಂದ ನೋಡುವುದೂ ಆಗುವುದಿಲ್ಲ; ಕೈಯಿಂದ ಮುಟ್ಟುವುದೂ ಆಗುವುದಿಲ್ಲ. ಇದಲ್ಲದೆ ಇಂದ್ರಿಯಗಳನ್ನು ಬಿಟ್ಟು ವಿಚಾರ ಮಾಡುವುದು ಕೂಡ ಆಗುವಂತೆ ಇಲ್ಲ. ವಿಚಾರವು ಏನನ್ನೂ ಸಿದ್ಧ ಮಾಡದೆಯೆ ಸುಮ್ಮನಾಗುತ್ತದೆ. ಸಾಯುವವರೆಗೆ ವಿಚಾರಮಾಡುತ್ತಿರಬಹುದು. ಎಷ್ಟೋ ಸಾವಿರಾರು ವರ್ಷಗಳಿಂದ ಜನರು ವಿಚಾರಮಾಡುತ್ತಲೇ ಬಂದಿರುತ್ತಾರೆ. ಇದರಿಂದ ಧರ್ಮದ ತತ್ತ್ವಗಳನ್ನು ನಿಜವೆಂತಲಾಗಲಿ ಸುಳ್ಳೆಂತಲಾಗಲಿ ಗೊತ್ತು ಮಾಡುವುದಾಗುವುದಿಲ್ಲ. ನಮಗೆ ಯಾವುದು ಸಾಕ್ಷಾದನುಭವವಾಗಿರುವುದೊ ಅದನ್ನೇ ಆಧಾರವಾಗಿಟ್ಟುಕೊಂಡು ಆ ಆಧಾರದ ಮೇಲೆಯೆ ವಿಚಾರಮಾಡುತ್ತೇವೆ. ಆದುದರಿಂದ ವಿಚಾರವೆಂಬುದು ನಾವು ನೋಡಿ ತಿಳಿದುದರ ಗಡಿಯೊಳಗೇ ನಡೆಯಬೇಕೆಂದು ಸ್ಪಷ್ಟವಾಯಿತು. ಅದು ಆಚೆಗೆ ಎಂದೂ ಹೋಗಲಾರದು. ಇಂದ್ರಿಯಗಳ ಜ್ಞಾನವನ್ನು ಮೀರುವುದಲ್ಲದೆ ವಿಚಾರವನ್ನೂ ಮೀರುವುದಕ್ಕಾಗುತ್ತದೆಯೆಂದು ಯೋಗಿಗಳು ಹೇಳುವರು. ಮನುಷ್ಯನಲ್ಲಿ ತನ್ನ ಬುದ್ಧಿಯನ್ನು ಕೂಡ ಮೀರುವ ಒಂದಾನೊಂದು ಸಾಧನವು–ಒಂದಾನೊಂದು ಶಕ್ತಿಯು–ಇರುವುದು. ಈ ಶಕ್ತಿಯು ಪ್ರತಿಯೊಬ್ಬನಲ್ಲಿಯೂ ಪ್ರತಿಯೊಂದು ಪ್ರಾಣಿಯಲ್ಲಿಯೂ ಇರುವುದು. ಯೋಗಾಭ್ಯಾಸದಿಂದ ಆ ಶಕ್ತಿಯು ಬೆಳೆಯುವುದು. ಆಗ ಮನುಷ್ಯನು ವಿಚಾರದ ಗಡಿಯನ್ನು ಮೀರಿ ಯಾವ ವಿಚಾರಕ್ಕೂ ನಿಲುಕದ ವಸ್ತುಗಳನ್ನು ಕೂಡ ಸಾಧನವಿಲ್ಲದೆಯೆ ಅನುಭವಿಸುವನು.

## 50. ತಜ್ಜಃ ಸಂಸ್ಕಾರೋಽನ್ಯಸಂಸ್ಕಾರಪ್ರತಿಬನ್ಧೀ

ಟೀ॥ ಈ ಸಮಾಧಿಯಿಂದುಂಟಾಗುವ ಸಂಸ್ಕಾರವು ಉಳಿದ ವಾಸನೆಗಳನ್ನೆಲ್ಲ ನಿಲ್ಲಿಸುವುದು.

ವಿ॥ ಹಿಂದಿನ ಸೂತ್ರದಲ್ಲಿ ಅರಿಕೆಯನ್ನು ಮೀರಿದ ಸಮಾಧಿಯನ್ನು ಪಡೆಯಬೇಕಾದರೆ ಮನಸ್ಸನ್ನು ಏಕಾಗ್ರ ಮಾಡುವುದರಿಂದಾಗುವುದೆಂದೂ ಹೀಗೆ ಸಮಾಧಿಯಾಗುವುದಕ್ಕೆ ಪೂರ್ವಸಂಸ್ಕಾರಗಳೇ ಅಡ್ಡಿಯಾಗಿರುತ್ತವೆಂದೂ ಗೊತ್ತಾಗಿರುವುದಷ್ಟೆ. ಮನಸ್ಸನ್ನು ನೆಟ್ಟಗೆ ಇಟ್ಟುಕೊಳ್ಳಬೇಕೆಂದು ಪ್ರಯತ್ನಪಡುವಾಗ ಯೋಚನೆಗಳು ಎತ್ತೆತ್ತಲೋ ಹೋಗುತ್ತವೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ದೇವರ ವಿಷಯವನ್ನು ಧ್ಯಾನಿಸುತ್ತಿದ್ದರೆ ಆ ಕಾಲಕ್ಕೆ ಸರಿಯಾಗಿ ಈ ಸಂಸ್ಕಾರಗಳು ಬಂದು ನಿಲ್ಲುವುವು. ಉಳಿದ ಕಾಲಗಳಲ್ಲಿ ಇವು ಇಷ್ಟು ಪ್ರಬಲವಾಗಿರುವುದಿಲ್ಲ.

ಅವು ಬೇಕಿಲ್ಲವೆಂದಾಗ ಅವು ಸಿದ್ಧವಾಗಿ ಮನಸ್ಸಿನಲ್ಲಿ ತುಂಬಿಕೊಂಡಿರುವುದು ಖಂಡಿತ. ಇದಕ್ಕೇನು ಕಾರಣ? ಮನಸ್ಸನ್ನು ನಿಲ್ಲಿಸಬೇಕೆಂಬಾಗ ಅವು ಏಕೆ ಅಷ್ಟು ಪ್ರಬಲವಾಗಿರಬೇಕು? ಏಕೆಂದರೆ ಅವುಗಳನ್ನು ತುಳಿಯುವುದಕ್ಕೆ ನಾವು ಪ್ರಯತ್ನಿಸುತ್ತಿರುವುದರಿಂದ ಅವು ಮತ್ತಷ್ಟು ಜೋರಿನಿಂದ ಪ್ರತಿಕ್ರಿಯೆಯನ್ನು ತೋರಿಸುವುವು. ಉಳಿದ ಕಾಲದಲ್ಲಿ ಅವುಗಳ ಪ್ರತಿಕ್ರಿಯೆ ಇರುವುದಿಲ್ಲ. ಚಿತ್ತದಲ್ಲಿ ಎಲ್ಲಿಯೋ ಒಂದು ಕಡೆ ಹುಲಿಗಳಂತೆ ಅವಿತುಕೊಂಡು ಯಾವಾಗ ಮೇಲಕ್ಕೆ ಹಾರೇವೆಂದು ಕಾದುಕೊಂಡಿರುವ ಈ ಹಳೇ ಪೂರ್ವ ಸಂಸ್ಕಾರಗಳು ಎಷ್ಟೊಂದಿರಬೇಕು! ಉಳಿದ ಎಲ್ಲಾ ಭಾವನೆಗಳೂ ಹೋಗಿ ನಮಗೆ ಬೇಕಾದುದೊಂದೇ ಮೇಲಕ್ಕೆ ಬರಬೇಕಾದರೆ ಇವುಗಳನ್ನೆಲ್ಲ ತಗ್ಗಿಸಬೇಕಾಯಿತು. ಇದಕ್ಕೆ ಬದಲು ಅವೇ ಆ ಕಾಲದಲ್ಲಿಯೇ ಬರಬೇಕೆಂದು ಹೆಣಗಾಡುತ್ತಿರುವುವು. ಮನಸ್ಸನ್ನು ಸಮಾಧಾನಮಾಡಿಕೊಳ್ಳುವುದನ್ನು ಅಡ್ಡಿ ಮಾಡುವುದಕ್ಕೆ ಸಂಸ್ಕಾರಗಳಲ್ಲಿ ಹೀಗೆ ಬಗೆ ಬಗೆಯ ಶಕ್ತಿಗಳಿರುವುವು. ಆದುದರಿಂದ ಈಗ ಹೇಳಿದಂಥ ಸಮಾಧಿಯೆ ಅಭ್ಯಾಸ ಮಾಡುವುದಕ್ಕೆ ಅತ್ಯುತ್ತಮವಾದುದು. ಏಕೆಂದರೆ ಇದಕ್ಕೆ ಸಂಸ್ಕಾರಗಳನ್ನು ತಗ್ಗಿಸುವ ಶಕ್ತಿಯುಂಟು. ಈ ವಿಧವಾದ ಸಮಾಧಿಯಿಂದ ಹುಟ್ಟುವ ಸಂಸ್ಕಾರಗಳು ಬಹು ಬಲವಾಗಿರುವುದರಿಂದ ಉಳಿದ ಸಂಸ್ಕಾರಗಳ ಕೆಲಸಕ್ಕೆ ಅಡ್ಡಿ ಮಾಡಿ ಅವುಗಳನ್ನು ಅಡ್ಡಗಟ್ಟಿ ನಿಲ್ಲಿಸಿಬಿಡುತ್ತವೆ.

## 51. ತಸ್ಯಾಪಿ ನಿರೋಧೇ ಸರ್ವನಿರೋಧಾನ್ನಿರ್ಬೀಜಃ ಸಮಾಧಿಃ

ಟೀ।। ಇದನ್ನು (ಎಂದರೆ ಉಳಿದ ಸಂಸ್ಕಾರಗಳನ್ನೆಲ್ಲ ತಗ್ಗಿಸುವ ಸಂಸ್ಕಾರವನ್ನು) ಕೂಡ ತಡೆಯುವುದರಿಂದ ಎಲ್ಲವನ್ನೂ ತಡೆದಂತಾಗಿ "ಬೀಜವಿಲ್ಲದ" ಸಮಾಧಿಯು ಬರುವುದು.

ವಿ।। ಪುರುಷನನ್ನು ಕಾಣುವುದೇ ಉದ್ದೇಶವಷ್ಟೆ. ಪ್ರಕೃತಿಯೊಡನೆಯೂ ಮನಸ್ಸಿನೊಡನೆಯೂ ಶರೀರದೊಡನೆಯೂ ಬೆರೆತಿರುವುದರಿಂದ ಪುರುಷನನ್ನು ನೋಡುವುದಕ್ಕೆ ಆಗುವಂತೆ ಇಲ್ಲ. ಮೂಢನಾದವನು ಶರೀರವನ್ನೆ ಪುರುಷನೆಂದುಕೊಳ್ಳುವನು. ತಿಳಿದವನು ಬುದ್ಧಿಯೇ ಪುರುಷನೆಂದು ಭಾವಿಸುವನು. ಆದರೆ ಇಬ್ಬರೂ ತಪ್ಪು ತಿಳಿದುಕೊಂಡಿರುತ್ತಾರೆ. ಇವೆಲ್ಲದರೊಡನೆ ಪುರುಷನು ಸೇರಿಕೊಳ್ಳುವುದಕ್ಕೇನು ಕಾರಣ? ಚಿತ್ತದಲ್ಲಿ ನಾನಾ ಬಗೆಯ ಅಲೆಗಳೆದ್ದು ಪುರುಷನನ್ನು ಮರೆಮಾಡುತ್ತವೆ. ಈ ಅಲೆಗಳಲ್ಲಿ ಎಲ್ಲಿಯೋ ಸ್ವಲ್ಪ ಪುರುಷನ ಪ್ರತಿಬಿಂಬವು ಮಾತ್ರ ಕಾಣಿಸುತ್ತಿರುವುದು. ಆದುದರಿಂದ ಅಲೆಯು ಸಿಟ್ಟಿನದಾಗಿದ್ದರೆ ಪುರುಷನೇ ಸಿಟ್ಟಾಗಿರುವನೆಂದು ತಿಳಿದುಕೊಳ್ಳುವೆವು. "ನಾನು ಸಿಟ್ಟಾಗಿದ್ದೇನೆ" ಎಂದು ಜನರು ಹೇಳಿಕೊಳ್ಳುವರು. ಅಲೆಯು ಪ್ರೇಮವಾಗಿದ್ದರೆ ನಾವು ಆ ಅಲೆಯಲ್ಲಿ ನಮ್ಮ ಪ್ರತಿಬಿಂಬವನ್ನು ಕಂಡು ನಾವು ಪ್ರೀತಿಸುತ್ತಿದ್ದೇವೆನ್ನುವೆವು. ಅದೇ ಅಲೆಯು ದುರ್ಬಲವಾಗಿದ್ದರೆ ಅದರಲ್ಲಿ ಆತ್ಮವು ಪ್ರತಿಬಿಂಬಿಸಿ ನಾವೇ ಬಲಹೀನರೆಂದು ಭಾವಿಸಿಕೊಳ್ಳುವೆವು. ಈ ಸಂಸ್ಕಾರಗಳು ಆತ್ಮವನ್ನು ಮರೆ ಮಾಡುವುದರಿಂದ ಇಂಥ ಅಭಿಪ್ರಾಯಗಳು ಉಂಟಾಗುವುವು. ಚಿತ್ತದಲ್ಲಿ ಒಂದು ಅಲೆ ಇದ್ದರೂ ಪುರುಷನ ದಿಟವಾದ ಸ್ವರೂಪವು ಗೊತ್ತಾಗುವುದಿಲ್ಲ. ಎಲ್ಲಾ ಅಲೆಗಳೂ ಶಾಂತವಾದ ಹೊರತು ನಿಜ ಸ್ವರೂಪವು ಕಾಣಿಸಿಕೊಳ್ಳುವುದಿಲ್ಲ. ಆದುದರಿಂದ ಪತಂಜಲಿಗಳು ಮೊದಲು ಈ ಅಲೆಗಳಾವುವೆಂಬುದನ್ನು ಹೇಳಿ ಆಮೇಲೆ ಅವುಗಳನ್ನು ನಿಲ್ಲಿಸುವುದಕ್ಕೆ ಉತ್ತಮವಾದ

ಉಪಾಯವನ್ನು ಹೇಳಿದ್ದಾರೆ. ಇದಾದ ಮೇಲೆ ಬೆಂಕಿಯು ಬೆಂಕಿಯನ್ನು ತಿನ್ನುವಂತೆ ಒಂದು ಅಲೆಯನ್ನು ಬಲವಾಗಿ ಎಬ್ಬಿಸಿ ಮಿಕ್ಕ ಅಲೆಗಳನ್ನೆಲ್ಲ ತಗ್ಗಿಸುವ ಕ್ರಮವನ್ನು ಹೇಳಿದ್ದಾರೆ. ಒಂದೇ ಅಲೆ ಉಳಿದುಕೊಂಡರೆ ಅದನ್ನು ನಿಲ್ಲಿಸುವುದು ಸುಲಭವಾಗುವುದು. ಅದೂ ಹೋದರೆ ಈ ಸಮಾಧಿಗೆ ನಿರ್ಬೀಜವೆಂದು ಹೆಸರು. ಅದದ [illegible] ಉಳಿಯುವುದಿಲ್ಲ. ಆತ್ಮವು ತನ್ನ ಸ್ವರೂಪದಲ್ಲಿ ಸ್ವಪ್ರಕಾಶದಲ್ಲಿ ತೋರಿಕೊಳ್ಳುವುದು. ಆಗ ಮಾತ್ರ ನಮಗೆ ಆತ್ಮವೆಂಬುದು ಸಂಯೋಗಪದಾರ್ಥ[1] ವಲ್ಲವೆಂದೂ ಅದೊಂದೇ ಒಂದು ಮೂಲ ಪದಾರ್ಥವೆಂದೂ ಆದುದರಿಂದ ಅದು ಹುಟ್ಟುವುದೂ ಇಲ್ಲ ಸಾಯುವುದೂ ಇಲ್ಲವೆಂದು ಗೊತ್ತಾಗುವುದು. ಅದು ಮರಣವಿಲ್ಲದುದಾಗಿಯೂ ನಾಶವಿಲ್ಲದುದಾಗಿಯೂ ಎಂದೆಂದಿಗೂ ಇರುವ ಜ್ಞಾನಸ್ವರೂಪವಾಗಿಯೂ ಇರುವುದು.

1. ವಸ್ತುಶಾಸ್ತ್ರದಲ್ಲಿ ಯಾವ ಪದಾರ್ಥವೂ ಸೇರದೆ ಆಗಿರುವ ಪದಾರ್ಥವನ್ನು ಮೂಲ ವಸ್ತುವೆಂದೂ ಸೇರಿ ಆಗಿರುವ ವಸ್ತುವಿಗೆ ಸಂಯುಕ್ತ ವಸ್ತುವೆಂದೂ ಹೆಸರು. ನೀರು ಸಂಯುಕ್ತ ವಸ್ತು. ಇದು ಎರಡು ವಾಯುಪದಾರ್ಥಗಳು ಸೇರಿ ಆಗಿರುವುದು; ಆದರೆ ಕಬ್ಬಿಣವು ಮೂಲವಸ್ತು. ಅದು ಏತರಿಂದಲೂ ಆದುದಲ್ಲ.

# 2. ಸಾಧನ ಪಾದ

## 1. ತಪಃಸ್ವಾಧ್ಯಾಯೇಶ್ವರಪ್ರಣಿಧಾನಾನಿ ಕ್ರಿಯಾಯೋಗಃ

ಟೀ॥ ತಪಸ್ಸು, ಅಧ್ಯಯನ, ಕರ್ಮಫಲವನ್ನು ದೇವರಿಗೆ ಸಮರ್ಪಣೆ ಮಾಡುವುದು ಇವುಗಳಿಗೆ ಕ್ರಿಯಾಯೋಗವೆಂದು ಹೆಸರು.

ವಿ॥ ಹಿಂದಿನ ಪಾದದ ಕೊನೆಯಲ್ಲಿ ಹೇಳಿದ ಸಮಾಧಿಗಳು ಸಿದ್ಧಿಯಾಗುವುದು ಬಹಳ ಕಷ್ಟ. ಆದುದರಿಂದ ಇವುಗಳನ್ನು ಒಂದೊಂದಾಗಿ ಮಾಡಬೇಕು. ಇದರಲ್ಲಿ ಮೊದಲು ಮಾಡಬೇಕಾದುದಕ್ಕೆ ಕ್ರಿಯಾಯೋಗವೆಂದು ಹೆಸರು. ಕ್ರಿಯಾಯೋಗವೆಂದರೆ ಯೋಗಕ್ಕಾಗಿ ಮಾಡುವ ಕೆಲಸವೆಂದು ಅರ್ಥವಾಗುವುದು. ಇಂದ್ರಿಯಗಳೆ[1] ಕುದುರೆಗಳು; ಮನಸ್ಸೇ ಲಗಾಮು; ಬುದ್ಧಿಯೇ ಸಾರಥಿಯು; ಆತ್ಮನೇ ಸವಾರನು; ಶರೀರವೇ ರಥವು. ಇವೆಲ್ಲಕ್ಕೂ ಯಜಮಾನನಾದ ಮನುಷ್ಯನಲ್ಲಿರುವ ಆತ್ಮನು ಈ ರಥದಲ್ಲಿ ಕುಳಿತಿದ್ದಾನೆ. ಕುದುರೆಗಳು ಬಲವಾಗಿದ್ದು ಲಗಾಮು ತಿರುಗಿದಂತೆ ತಿರುಗದಿದ್ದರೆ, ಬುದ್ಧಿಯೆಂಬ ಸಾರಥಿಗೆ ಕುದುರೆಗಳನ್ನು ನಡೆಸುವುದಕ್ಕೆ ಬರದಿದ್ದರೆ, ರಥವೇ ಮುರಿದುಬೀಳುವುದು. ಆದರೆ ಕುದುರೆಗಳಾದ ಇಂದ್ರಿಯಗಳನ್ನು ಸರಿಯಾಗಿ ವಶದಲ್ಲಿಟ್ಟುಕೊಂಡಿದ್ದರೆ, ಮನಸ್ಸೆಂಬ ಕಡಿವಾಣವು ಬುದ್ಧಿಯೆಂಬ ಸಾರಥಿಯ ಕೈಯಲ್ಲಿ ಬಿಗಿಯಾಗಿದ್ದರೆ, ರಥವು ಮುಟ್ಟಬೇಕಾದ ಸ್ಥಾನವನ್ನು ಸೇರುವುದು. ಹಾಗಾದರೆ ಇಲ್ಲಿ ತಪಸ್ಸೆಂದರೇನಾಯಿತು? ಶರೀರವನ್ನೂ ಇಂದ್ರಿಯಗಳನ್ನೂ ನಡೆಸುವಾಗ ಲಗಾಮನ್ನು ಬಿಗಿಯಾಗಿ ಹಿಡಿಯುವುದೆಂದರ್ಥ. ಅವುಗಳು ಸ್ವೇಚ್ಛೆಯಾಗಿ ಹೋಗದಂತೆ ಇವೆರಡನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವದು. ಆಧ್ಯಯನವೆಂದರೆ ಓದುವುದು. ಇಲ್ಲಿ ಓದುವದೆಂದರೇನು? ಕಥೆಯ ಪುಸ್ತಕಗಳನ್ನು ಓದುವದಲ್ಲ. ಆತ್ಮಕ್ಕೆ ಮುಕ್ತಿಯಾಗುವ ಮಾರ್ಗವನ್ನು ತಿಳಿಸುವ ಗ್ರಂಥಗಳನ್ನು ಓದುವುದು. ಓದುವುದೆಂದರೆ ವಾದಗ್ರಂಥಗಳನ್ನು ಓದುವುದೆಂಬ ಅರ್ಥವಲ್ಲ. ಯೋಗಿಯಾದವನು ಇಂಥ ವಾದ ಮಾಡುವ ಕಾಲವನ್ನು ಮೀರಿರಬೇಕು. ಬೇಕಾದಷ್ಟು ವಾದಮಾಡಿ ಮಾಡಿ ಸಾಕಾಗಿರಬೇಕು. ಇವನು ತನಗೆ ಉಂಟಾಗಿರುವ ಜ್ಞಾನವು ದೃಢವಾಗುವುದಕ್ಕೆಂದೇ ಓದಬೇಕು. ಶಾಸ್ತ್ರದಲ್ಲಿ ವಾದಗ್ರಂಥಗಳೆಂದೂ ಸಿದ್ಧಾಂತಗ್ರಂಥಗಳೆಂದೂ ಎರಡು ಬಗೆ. ವಾದವೆಂದರೆ ಚರ್ಚೆಮಾಡುವುದು. ಸಿದ್ಧಾಂತವೆಂದರೆ ಕೊನೆಗೆ ಬರುವ ನಿಶ್ಚಯ.

---

1. ಕಠೋಪನಿಷತ್ 1–3–3–5.

ಏನೂ ತಿಳಿಯದೆ ಇರುವಾಗ ಮೊದಲನೆಯ ತರದ ಗ್ರಂಥಗಳನ್ನು ಓದಬೇಕು. ಅನುಕೂಲ ಪ್ರತಿಕೂಲ ತರ್ಕಗಳನ್ನು ವಿಚಾರಮಾಡಬೇಕು. ಅದು ಮುಗಿದ ಮೇಲೆ ಹೀಗೆಂದು ನಿಶ್ಚಯಮಾಡುವ ಸಿದ್ಧಾಂತ ಗ್ರಂಥಗಳನ್ನು ಓದಬೇಕು. ಸುಮ್ಮನೆ ಹೀಗೆಂದು ನಿಶ್ಚಯ ಮಾಡಿಕೊಂಡರೆ ಸಾಲದು. ಅದನ್ನೆ ಬಲಪಡಿಸಿಕೊಳ್ಳಬೇಕು. ಶಾಸ್ತ್ರಗಳ[1] ಸಂಖ್ಯೆಯು ಅನಂತವಾಗಿರುವುದು; ಕಾಲವು ಸ್ವಲ್ಪವಾಗಿರುವುದು. ಆದುದರಿಂದ ತಿಳಿವಳಿಕೆಯಲ್ಲಿ ರಹಸ್ಯವೇನೆಂದರೆ ಸಾರವಾದುದನ್ನೇ ಗ್ರಹಿಸಬೇಕು. ಅದನ್ನು ಗ್ರಹಿಸಿಕೊಂಡು ಅದರಂತೆ ನಡೆಯುವುದಕ್ಕೆ ಪ್ರಯತ್ನ ಮಾಡಬೇಕು. ರಾಜಹಂಸದ ಮುಂದೆ ನೀರು ಬೆರಸಿದ ಹಾಲನ್ನು ಇಟ್ಟರೆ ಹಾಲನ್ನೆಲ್ಲ ಹೀರಿಕೊಂಡು ನೀರನ್ನು ಬಿಡುತ್ತದೆಂದು ಒಂದು ಕಥೆಯುಂಟು. ಇದರಂತೆಯೆ ತಿಳಿವಳಿಕೆಯಲ್ಲಿಯೂ ಯಾವುದು ಬೆಲೆಯುಳ್ಳದೊ ಅದನ್ನೇ ತೆಗೆದುಕೊಂಡು ಉಪಯೋಗವಿಲ್ಲದುದನ್ನು ಬಿಟ್ಟುಬಿಡಬೇಕು. ಮೊದಮೊದಲು ಬುದ್ಧಿಯಿಂದ ಗರುಡಿಯ ಸಾಧನೆ ಮಾಡುವುದೂ ಅವಶ್ಯ. ಯಾವುದನ್ನೂ ಸುಮ್ಮನೆ ನಂಬಬಾರದು. ಆದರೆ ಯೋಗಿಯು ಆ ವಾದದ ಸ್ಥಿತಿಯನ್ನು ಮೀರಿ ಪರ್ವತದಂತೆ ಅಲ್ಲಾಡದ ನಿಶ್ಚಯವನ್ನು ಪಡೆದಿರುತ್ತಾನೆ. ಅವನಿಗೆ ಈಗ ಬೇಕಾದುದೇನೆಂದರೆ, ತನಗೆ ಉಂಟಾಗಿರುವ ನಿಶ್ಚಯವನ್ನು ಬಲಪಡಿಸಿಕೊಳ್ಳುವುದು. ವಾದವನ್ನು ಮಾಡಬಾರದು. ಯಾರಾದರೂ ವಾದಕ್ಕೆ ಬಲಾತ್ಕಾರದಿಂದ ಕರೆದರೂ ಸುಮ್ಮನಿರಬೇಕು. ಯಾವ ವಾದಕ್ಕೂ ಉತ್ತರಕೊಡದೆ ಸುಮ್ಮನೆ ಅಲ್ಲಿಂದ ಎದ್ದು ಹೋಗಬೇಕು ಎಂದು ಅವನು ಹೇಳುತ್ತಾನೆ. ಸುಮ್ಮನೆ ಚರ್ಚೆಮಾಡುವುದರಿಂದ ಮನಸ್ಸಿಗೆ ಚಾಂಚಲ್ಯವುಂಟಾಗುವುದು. ನಿಜವಾಗಿ ನಮಗೆ ಬೇಕಾದುದು ಬುದ್ಧಿಯನ್ನು ಕ್ರಮಪಡಿಸುವುದು. ಆದುದರಿಂದ ಸುಮ್ಮನೆ ಅದನ್ನು ತಳಮಳಗೊಳಿಸುವುದರಿಂದ ಪ್ರಯೋಜನವೇನು? ಬುದ್ಧಿಯೆಂಬುದೇ ಬಹು ದುರ್ಬಲವಾದ ಸಾಧನ. ಅದರಿಂದ ನಮಗೆ ಇಂದ್ರಿಯಗಳಿಗೆ ಸಿಕ್ಕುವ ತಿಳಿವಳಿಕೆ ಮಾತ್ರವೆ ಬರುವುದು. ಆದರೆ ಯೋಗಿಯು ಇಂದ್ರಿಯಗಳನ್ನು ಮೀರಬೇಕೆಂದಿರುವುದರಿಂದ ಆತನಿಗೆ ಬುದ್ಧಿಯಿಂದ ಏನೂ ಉಪಯೋಗವಿಲ್ಲ. ಇದು ಚೆನ್ನಾಗಿ ಗೊತ್ತಿರುವುದರಿಂದಲೆ ಅವನು ಸುಮ್ಮನಿರುತ್ತಾನೆ; ಚರ್ಚೆ ಮಾಡುವುದಿಲ್ಲ. ಪ್ರತಿಯೊಂದು ಚರ್ಚೆಯಿಂದಲೂ ಮನಸ್ಸು ಚಂಚಲವಾಗುವುದು; ಚಿತ್ತದಲ್ಲಿ ಗಲಿಬಿಲಿಯುಂಟಾಗುವುದು. ಇಷ್ಟು ತೊಂದರೆಯಾಗುವುದೂ ದೋಷವೆ. ಸುಮ್ಮನೆ ಚರ್ಚೆಮಾಡುವುದೂ ಕಾರ್ಯಕಾರಣಗಳನ್ನು ಹುಡುಕಿ ನೋಡುವುದೂ ಕೇವಲ ಮೊದಲನೆಯ ಸಾಧನಗಳು. ಇವುಗಳಿಗಿಂತ ಹೆಚ್ಚಿನ ಸಂಗತಿಗಳೆಷ್ಟೋ ಇವೆ. ಮನುಷ್ಯನು ಬದುಕಿರುವುದೆಲ್ಲ ಸುಮ್ಮನೆ ಪಾಠಶಾಲೆಯ ಹುಡುಗರಂತೆ ಕಚ್ಚಾಡುತ್ತ ಇರುವುದಕ್ಕಲ್ಲ; ಬರೀಚರ್ಚೆಯ[2] ಸಂಘಗಳನ್ನು ಮಾಡಿಕೊಂಡಿರುವುದಕ್ಕಲ್ಲ.

---

1. ಅನ್ತಶಾಸ್ತ್ರಂ ಬಹು ವೇದಿತವ್ಯಂ । ಸ್ವಲ್ಪಶ್ಚ ಕಾಲೋ ಬಹವಶ್ಚ ವಿಘ್ನಾಃ ॥ ಯತ್ಸಾರಭೂತಂ ತದುಪಾಸಿತವ್ಯಂ । ಹಂಸೋ ಯಥಾ ಕ್ಷೀರಮಿವಾಮ್ಬುಮಿತ್ರಂ ॥ ಉತ್ತರ ಗೀತೆಯ ಮೂರನೆಯ ಅಧ್ಯಾಯದ ಮೊದಲನೆಯ ಶ್ಲೋಕವಿದು. ಇದರ ತಾತ್ಪರ್ಯವನ್ನು ಇಲ್ಲಿ ಸ್ವಾಮಿಗಳು ಹೇಳಿರುತ್ತಾರೆ.

2. ಈಗಿನ ಪಾಠಶಾಲೆಗಳಲ್ಲಿ ಹುಡುಗರಿಗೆ ಸಭೆಗಳಲ್ಲಿ ಮಾತನಾಡುವ ಅಭ್ಯಾಸವಾಗುವುದಕ್ಕಾಗಿಯೂ ಬುದ್ಧಿಶಕ್ತಿಯು ಹೆಚ್ಚಾಗುವುದಕ್ಕಾಗಿಯೂ ಕೆಲವು ಸಂಘಗಳನ್ನು ಮಾಡಿರುವುದುಂಟು. ಇಲ್ಲಿ ಯಾವುದಾದರೊಂದು ವಾದಾಸ್ಪದವಾದ ವಿಷಯವನ್ನು ಹುಡುಗರು ಒಂದೊಂದು ಪಕ್ಷವನ್ನು ಹಿಡಿದು ಚರ್ಚಿಸುತ್ತಾರೆ.

ಕರ್ಮಫಲವನ್ನು ದೇವರಿಗೆ ಸಮರ್ಪಣೆಮಾಡುವುದೆಂದರೆ ಅವುಗಳಿಂದಾಗುವ ಒಳ್ಳೆಯ ಫಲವನ್ನಾಗಲಿ, ಕೆಟ್ಟದನ್ನಾಗಲಿ ಬಯಸದೆ ಎರಡನ್ನೂ ದೇವರಿಗೆ ಅರ್ಪಿಸಿ ಶಾಂತರಾಗಿರುವುದು.

## 2. ಸಮಾಧಿಭಾವನಾರ್ಥಃ ಕ್ಲೇಶತನೂಕರಣಾರ್ಥಶ್ಚ

ಟೀ॥ (ಇದು) ಸಮಾಧಿಯನ್ನು ಅಭ್ಯಾಸಮಾಡುವುದಕ್ಕೆ ಮತ್ತು ಕ್ಲೇಶಗಳನ್ನು ಕಡಿಮೆಮಾಡುವುದಕ್ಕೆ

ವಿ॥ ನಾವೆಲ್ಲ ನಮ್ಮ ಮನಸ್ಸನ್ನು ಚಿಕ್ಕ ಹುಡುಗರನ್ನು ಕೆಡಿಸುವಂತೆ ಕೆಡಿಸುತ್ತ ಅದಕ್ಕೆ ಬೇಕುಬೇಕಾದುದನ್ನು ಮಾಡುವುದಕ್ಕೆ ಬಿಡುತ್ತಿದ್ದೇವೆ. ಆದುದರಿಂದ ಮನಸ್ಸನ್ನು ವಶಮಾಡಿಕೊಂಡು ಅದು ಹೇಳಿದಂತೆ ಕೇಳುವ ಹಾಗೆ ಮಾಡಬೇಕಾದರೆ ಕ್ರಿಯಾಯೋಗವನ್ನು ಬಿಡದೆ ಮಾಡುತ್ತಿರಬೇಕು. ಮನಸ್ಸು ವಶವಾಗದೆ ಇರುವುದರಿಂದ ಯೋಗಕ್ಕೆ ಅಡ್ಡಿಗಳು ಉಂಟಾಗಿ ನಮಗೆ ಕ್ಲೇಶವನ್ನುಂಟುಮಾಡುವುವು. ಮನಸ್ಸು ಹೇಳಿದಂತೆ ಕೇಳದೆ ಅದನ್ನು ಕ್ರಿಯಾಯೋಗದಿಂದ ಬಿಗಿಹಿಡಿಯುವುದರಿಂದ ಮಾತ್ರ ಅವುಗಳನ್ನು ಹೋಗಲಾಡಿಸಬಹುದು.

## 3. ಅವಿದ್ಯಾಸ್ಮಿತಾರಾಗದ್ವೇಷಾಭಿನಿವೇಶಾಃ ಕ್ಲೇಶಾಃ

ಟೀ॥ ಅವಿದ್ಯೆ (ತಪ್ಪು ತಿಳಿವಳಿಕೆ), ಅಸ್ಮಿತೆ (ಅಹಂಕಾರ), ರಾಗ (ಆಸಕ್ತಿ), ದ್ವೇಷ (ಹಗೆತನ), ಅಭಿನಿವೇಶ (ಬದುಕಿರಬೇಕೆಂಬ ಆಸೆ) ಇವೇ ಕ್ಲೇಶಗಳು.

ವಿ॥ ಇವೈದೂ ಕ್ಲೇಶಗಳು. ನಮ್ಮನ್ನು ಕಟ್ಟಿಹಾಕಿರುವ ಐದು ಮಡಿಕೆಯ ಗಂಟೇ ಇದು. ಇವುಗಳಲ್ಲಿ ಅಜ್ಞಾನವೇ ಕಾರಣವು. ಉಳಿದ ನಾಲ್ಕೂ ಇದರಿಂದಾಗಿರುವ ಕಾರ್ಯಗಳು. ನಿಜವಾಗಿ ನಮಗಾಗಿರುವ ದುಃಖಕ್ಕೆಲ್ಲ ಇದೊಂದೇ ಕಾರಣ. ನಮಗೆ ದುಃಖವಾಗುವುದಕ್ಕೆ ಮತ್ತೇನು ಕಾರಣವಾಗಿದ್ದೀತು? ಪುರುಷನ ಸ್ವಭಾವವೇ ನಿತ್ಯಾನಂದವು. ಅದಕ್ಕೆ ಅಜ್ಞಾನವಲ್ಲದೆ– ಕಲ್ಪನೆಯಲ್ಲದೆ – ಭ್ರಾಂತಿಯಲ್ಲದೆ – ಮತ್ತಾವುದು ದುಃಖವನ್ನುಂಟು ಮಾಡೀತು? ಆತ್ಮಕ್ಕೆ ಆಗಿರುವ ದುಃಖವೆಲ್ಲ ಕೇವಲ ಭ್ರಾಂತಿಯೆ.

## 4. ಅವಿದ್ಯಾಕ್ಷೇತ್ರಮುತ್ತರೇಷಾಂ ಪ್ರಸುಪ್ತತನುವಿಚ್ಛಿನ್ನೋದಾರಾಣಾಮ್

ಟೀ॥ ಇದರ ಮುಂದೆ ಬರುವುವು ಸುಮ್ಮಗಿರಲಿ, ಸಣ್ಣಗಿರಲಿ, ಅಡ್ಡಿಯುಳ್ಳವಾಗಿರಲಿ, ಅಥವಾ ಬೆಳೆದಿರಲಿ, ಇವಕ್ಕೆಲ್ಲ ಅವಿದ್ಯೆಯು ಹುಟ್ಟುವ ಹೊಲವು.

ವಿ॥ ಅಹಂಕಾರ, ಆಸಕ್ತಿ, ಹಗೆತನ, ಜೀವದ ಮೇಲಣ ಆಸೆ ಇವುಗಳಿಗೆ ಅವಿದ್ಯೆಯೇ ಕಾರಣ. ಈ ವಾಸನೆಗಳು ಬೇರೆ ಬೇರೆ ಸ್ಥಿತಿಗಳಲ್ಲಿರುವುದುಂಟು. ಕೆಲವು ವೇಳೆಗಳಲ್ಲಿ ಅವು ಮಲಗಿದಂತೆ (ಸುಮ್ಮನೆ) ಇರುವುವು. "ಏನೂ ಅರಿಯದ ಮಗು" ವೆಂಬ ಮಾತನ್ನು ಅನೇಕ ಸಾರಿ ಕೇಳಿದ್ದೀರಷ್ಟೆ. ಆದರೂ ಆ ಮಗುವಿನಲ್ಲಿ ಒಬ್ಬ ರಾಕ್ಷಸನ ಸ್ಥಿತಿಯೊ ಅಥವಾ ಒಬ್ಬ ದೇವತೆಯ ಸ್ಥಿತಿಯೋ ಅಡಗಿರಬಹುದು. ಇದು ಸ್ವಲ್ಪ ದಿನಗಳಲ್ಲಿಯೆ ವ್ಯಕ್ತವಾಗುವುದು.

ಯೋಗಿಯಲ್ಲಿ ಈ ಪೂರ್ವ ಕರ್ಮದಿಂದ ಹುಟ್ಟಿದ ವಾಸನೆಗಳು ಸಣ್ಣಗಿರುವುವು. ಅಂದರೆ ಬಹು ಸೂಕ್ಷ್ಮವಾಗಿರುವುವು. ಅವುಗಳನ್ನು ಅವನು ತಡೆದುಕೊಳ್ಳುವನೇ ಹೊರತು ತೋರಗೊಡುವುದಿಲ್ಲ. ಅಡ್ಡಿಯುಳ್ಳವಾಗಿರುವುವು ಎಂದರೆ ಒಂದೊಂದು ವೇಳೆ ಒಂದು ಜಾತಿಯ ವಾಸನೆಗಳನ್ನು ಅದಕ್ಕಿಂತ ಬಲವಾದ ವಾಸನೆಗಳು ತಗ್ಗಿಸಿ ಇಟ್ಟುಕೊಂಡಿರುವುದು. ಆದರೆ ಹೀಗೆ ಅವುಗಳನ್ನು ಅಮುಕಿರುವ ಕಾರಣವು ಹೋಗುತ್ತಲೆ ಅವು ಈಚೆಗೆ ಬಂದು ಬಿಡುತ್ತವೆ. ವಾಸನೆಗಳು ಇರುವ ಮತ್ತೊಂದು ಸ್ಥಿತಿ ಯಾವುದೆಂದರೆ ಬೆಳೆದಿರುವುದು ಎಂದರೆ ಸಂಸ್ಕಾರಗಳು ತಮಗೆ ತಕ್ಕ ಪರಿಸ್ಥಿತಿಗಳಿಂದ ಒಳ್ಳೆಯವುಗಳಾಗಿಯೊ ಅಥವಾ ಕೆಟ್ಟವಾಗಿಯೊ ತೀರ ಪ್ರಬಲಕ್ಕೆ ಬರುವುದು.

## 5. ಅನಿತ್ಯಾಶುಚಿದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ

ಟೀ|| ಎಲ್ಲಾ ವಾಸನೆಗಳಿಗೂ ಅವಿದ್ಯೆಯೆಂಬುದೊಂದೇ ಕಾರಣ. ಆದುದರಿಂದ ಅವಿದ್ಯೆಯೆಂದರೇನೆಂಬುದನ್ನು ತಿಳಿಯಬೇಕು. ನಾವೆಲ್ಲರೂ "ನಾನು ಶರೀರವೆ; ಶುದ್ಧವಾಗಿಯೂ ಪ್ರಕಾಶ ರೂಪವಾಗಿಯೂ ನಿತ್ಯಾನಂದ ರೂಪವಾಗಿಯೂ ಇರುವ ಆತ್ಮವಲ್ಲ" ಎಂದು ಭಾವಿಸುತ್ತೇವೆ. ಇದೇ ಅವಿದ್ಯೆಯು. ಮನುಷ್ಯನೆಂದಾಗಲೆಲ್ಲ ಶರೀರವೆಂದೇ ಎಣಿಸುತ್ತೇವೆ. ಇದೇ ದೊಡ್ಡ ಅವಿದ್ಯೆಯು.

## 6. ದೃಗ್ದರ್ಶನಶಕ್ತ್ಯೋರೇಕಾತ್ಮತೇವಾಸ್ಮಿತಾ

ಟೀ|| ಅಹಂಕಾರವೆಂದರೆ ನೋಡುವವನನ್ನೂ ನೋಡುವ ಸಾಧನವನ್ನೂ ಒಂದು ಮಾಡುವುದು.

ವಿ|| ನೋಡುವವನು ನಿಜವಾಗಿ ಸ್ವಚ್ಛನಾಗಿ, ಎಂದೆಂದಿಗೂ ಪರಿಶುದ್ಧನಾಗಿ, ಕಡೆಗಾಣದವನಾಗಿ, ಸಾವಿಲ್ಲದವನಾಗಿರುವ ಆತ್ಮನೆ. ಇದೇ ಮನುಷ್ಯನ ಆತ್ಮನೆನ್ನುವುದು. ಇನ್ನು ಕರಣಗಳು (ಸಾಧನಗಳು) ಯಾವುವು? ಎಂದರೆ ಚಿತ್ತವು ಮನಸ್ಸಿನ ಉಪಾದಾನಕಾರಣವು; ಬುದ್ಧಿಯೆಂದರೆ ನಿಶ್ಚಯಿಸುವ ಶಕ್ತಿಯು; ಮನಸ್ಸು ಎಂದರೆ ತಿಳಿಯುವ ಅಂತರಿಂದ್ರಿಯ; ಮತ್ತು ಇಂದ್ರಿಯಗಳು ಎಂದರೆ ಹೊರಗಣ ಜ್ಞಾನವನ್ನು ಕೊಡುವ ಸಾಧನಗಳು. ಹೊರಗಣ ಪ್ರಪಂಚವನ್ನು ನೋಡುವುದಕ್ಕೆ ಇವೆಲ್ಲವೂ ಅವನಿಗೆ ಸಾಧನಗಳು. ಆತ್ಮನನ್ನೂ ಸಾಧನಗಳನ್ನೂ ಒಂದಾಗಿ ತಿಳಿಯುವುದೆ ಅಹಂಕಾರವೆಂಬ ಅಜ್ಞಾನವು. ನಾವೆಲ್ಲ "ನಾನೇ ಮನಸ್ಸು; ನಾನೇ ಬುದ್ಧಿಯು; ನನಗೆ ಸಿಟ್ಟು ಬಂತು; ನಾನು ಸುಖವಾಗಿದ್ದೇನೆ; ಎನ್ನುತ್ತಿದ್ದೇವೆ. ಎಂದೆಂದಿಗೂ ಬೇರೆಯಾಗಲರಿಯದ ಆತ್ಮನೇ ನಾವೆಂದು ತಿಳಿಯಬೇಕು. ಅದು ಬೇರೆಯಾಗದುದಾದ ಮೇಲೆ ಒಂದು ಹೊತ್ತಿಗೆ ಸುಖವಾಗಿ ಮತ್ತೊಂದು ಹೊತ್ತಿನಲ್ಲಿ ದುಃಖದಿಂದ ಕೂಡಿ ಇರುವುದು ಹೇಗೆ? ಅದಕ್ಕೆ (ಆ ಆತ್ಮನಿಗೆ) ರೂಪವಿಲ್ಲ. ಅದು ಕಡೆಗಾಣದುದು; ಎಲ್ಲೆಲ್ಲಿಯೂ ಇರುವುದು. ಅದನ್ನು ಬೇರ್ಪಡಿಸುವ ಶಕ್ತಿ ಏತಕ್ಕಿರುವುದು? ಅದು ಎಲ್ಲಾ ನಿಯಮವನ್ನೂ ಮೀರಿರುವುದು. ಅದು ಯಾವುದಕ್ಕೆ ಸಿಲುಕೀತು? ಈ ಜಗತ್ತಿನಲ್ಲಿ ಯಾವುದರಿಂದಲೂ ಅದಕ್ಕೆ ಏನೇನೂ ಆಗಲಾರದು. ಹೀಗಿದ್ದರೂ ತಪ್ಪು ತಿಳಿವಳಿಕೆಯಿಂದ ನಾವೇ ಚಿತ್ತವೆಂದು ಮಾಡಿಕೊಂಡು ನಮಗೆ ಸುಖವಾಯಿತೆಂದೂ ದುಃಖವಾಯಿತೆಂದೂ ಭಾವಿಸಿಕೊಳ್ಳುತ್ತೇನೆ.

## 7. ಸುಖಾನುಶಯೀ ರಾಗಃ

ಟೀ|| ಸುಖವನ್ನು ಆಶ್ರಯಿಸಿಕೊಂಡಿರುವುದೇ ರಾಗವು (ಆಸಕ್ತಿ).

ವಿ|| ಕೆಲವು ಪದಾರ್ಥಗಳೆಂದರೆ ನಮಗೆ ಸಂತೋಷವಾಗುವುದು. ಮನಸ್ಸು ಅವುಗಳ ಕಡೆಗೇ ಪ್ರವಾಹದಂತೆ ಹರಿಯುತ್ತಿರುವುದು. ಹೀಗೆ ಸಂತೋಷದ ಸ್ಥಾನದ ಕಡೆಗೆ ಹೋಗುವುದೇ ಆಸಕ್ತಿಯೆನಿಸುವುದು. ಎಲ್ಲಿ ನಮಗೆ ಸಂತೋಷವಾಗುವುದಿಲ್ಲವೋ ಅಲ್ಲಿ ನಮಗೆ ಆಸಕ್ತಿ ಇರುವುದಿಲ್ಲ. ಕೆಲಕೆಲವು ವೇಳೆಗಳಲ್ಲಿ ಬಹುವಿಜಾತೀಯವಸ್ತುಗಳಲ್ಲಿ ನಮಗೆ ಸಂತೋಷ ವಾಗುವುದು. ಇದು ಹೇಗಾದರೂ ಇರಲಿ; ನಮಗೆ ಎಲ್ಲೆಲ್ಲಿ ಸಂತೋಷವಾಗುವುದೋ ಅಲ್ಲಲ್ಲಿ ಆಸಕ್ತಿಯಾಗುವುದೆಂಬುವುದೇನೋ ನಿಜ.

## 8. ದುಃಖಾನಿಶಯೀ ದ್ವೇಷಃ

ಟೀ|| ದುಃಖವನ್ನು ಆಶ್ರಯಿಸಿಕೊಂಡಿರುವುದು ದ್ವೇಷವು

ವಿ|| ಯಾವುದರಿಂದ ನಮಗೆ ದುಃಖವಾಗುವುದೊ ಅದನ್ನು ಕೂಡಲೆ ತಪ್ಪಿಸಿಕೊಳ್ಳಬೇಕೆಂದು ಬಯಸುತ್ತೇವೆ.

## 9. ಸ್ವರಸವಾಹೀ ವಿದುಷೋऽಪಿ ತಥಾ ರೂಢೋऽಭಿನಿವೇಶಃ

ಟೀ|| ತನ್ನ ಸ್ವಭಾವದಿಂದಲೆ ಪ್ರವಹಿಸುತ್ತಿರುವುದಾಗಿ ವಿದ್ವಾಂಸರಲ್ಲಿಯೂ ಕೂಡ ನಿಂತುಬಿಟ್ಟಿರುವುದೇ ಜೀವದಾಸೆಯು.

ವಿ|| ಈ ಜೀವದಾಸೆಯೆಂಬುದು ಎಲ್ಲಾ ಪ್ರಾಣಿಗಳಲ್ಲಿಯೂ ತೋರುತ್ತಿರುವುದು. ಇದರಿಂದ ಮತ್ತೊಂದು ಜನ್ಮವುಂಟೆಂಬುದನ್ನು ಸಿದ್ಧಮಾಡಬೇಕೆಂದು ಅನೇಕರು ಪ್ರಯತ್ನಮಾಡಿದ್ದಾರೆ. ಏಕೆಂದರೆ ಜನರಿಗೆ ಜೀವದ ಮೇಲೆ ಬಹಳ ಆಸೆ ಇರುವುದರಿಂದ ಅವರಿಗೆ ಇನ್ನೊಂದು ಸಲ ಬದುಕಿರಬೇಕೆಂತಲೂ ಆಸೆಯಾಗುವುದು. ಇಲ್ಲಿ ಹೇಳಿರುವ ಯುಕ್ತಿಯು ಅಷ್ಟು ಬಲವಾದುದಲ್ಲವೆಂಬುದನ್ನು ಹೇಳಬೇಕಾದುದೇನೂ ಇಲ್ಲ. ಆದರೆ ಇಲ್ಲಿ ಒಂದು ಚಮತ್ಕಾರವೇನೆಂದರೆ ಪಾಶ್ಚಿಮಾತ್ಯರು ಹೀಗೆ ಜೀವದ ಮೇಲಣ ಆಸೆ ಇರುವುದರಿಂದ ಮತ್ತೊಂದು ಜನ್ಮವುಂಟೆಂಬುದನ್ನು ಮನುಷ್ಯರಿಗೆ ಮಾತ್ರ ಹೇಳುತ್ತಾರೆಯೇ ಹೊರತು ಉಳಿದ ಪ್ರಾಣಿಗಳಿಗೆ ಇದು ಅನ್ವಯಿಸುವುದಿಲ್ಲವೆನ್ನುತ್ತಾರೆ. ಇಂಡಿಯಾದಲ್ಲಿ ಈ ಜೀವದಾಸೆಯಿಂದ ಪೂರ್ವಜನ್ಮವುಂಟೆಂಬುದನ್ನೂ ಪೂರ್ವಜನ್ಮದ ವಾಸನೆಯು ಈ ಜನ್ಮದಲ್ಲಿರುವುದೆಂಬುದನ್ನೂ ತೋರಿಸುವುದಕ್ಕೆ ಇದೂ ಒಂದು ಯುಕ್ತಿಯಾಗಿರುವುದು. ನಮಗೆ ಬರುವ ತಿಳಿವಳಿಕೆಯೆಲ್ಲ ಅನುಭವದಿಂದಲೆ ಬಂದಿರುವುದು ನಿಜವಾದರೆ ನಮಗೆ ಎಂದೂ ಅನುಭವಕ್ಕೆ ಬರದೆ ಇದ್ದ ವಿಷಯದಲ್ಲಿ ನಮಗೆ ಕಲ್ಪನೆಯೂ ಆಗುವುದಿಲ್ಲ. ಅದು ನಮಗೆ ತಿಳಿಯುವುದೂ ಇಲ್ಲವೆಂಬುದು ಖಂಡಿತ. ಕೋಳಿಯ ಪಿಳ್ಳೆಗಳು ಮೊಟ್ಟೆಗಳಿಂದ ಹುಟ್ಟಿದ ಕೂಡಲೆ ಆಹಾರವನ್ನು ಹುಡುಕಿಕೊಂಡು ಹೋಗುತ್ತವೆ. ಅನೇಕ ಸಂದರ್ಭಗಳಲ್ಲಿ ಬಾತುಮರಿಗಳನ್ನು ತಾಯಿಯು

ಹೊಟ್ಟೆಯಿಂದ ಹೊರಕ್ಕೆ ಹೊರಡಿಸುವಾಗ ಮೊಟ್ಟೆಗಳಿಂದ ಹೊರಕ್ಕೆ ಬಂದವೊ ಇಲ್ಲವೊ ಅವು ಸರ್ರನೆ ನೀರೊಳಕ್ಕೆ ಹೋಗುವುದೂ ತಾಯಿ ಅವೆಲ್ಲಿ ನೀರಲ್ಲಿ ಮುಳುಗಿ ಸತ್ತಾವೊ ಎಂದು ಹೆದರುವುದೂ ಕಂಡುಬಂದಿದೆ. ತಿಳಿವಳಿಕೆಗೆ ಅನುಭವವೇ ಕಾರಣವಾಗಿದ್ದರೆ ಈ ಕೋಳಿಪಿಳ್ಳೆಗಳು ಆಹಾರವನ್ನು ಆರಿಸಿಕೊಳ್ಳುವುದನ್ನೂ ಬಾತುಮರಿಗಳು ತಮಗೆ ನೀರೇ ಸರಿಯಾದ ಸ್ಥಳವೆಂಬುದನ್ನೂ ಎಲ್ಲಿ ಕಲಿತವು? ಇದು ಹುಟ್ಟುಗುಣವೆಂದು ಕೆಲವರು ಹೇಳುವರು. ಆದರೆ ಇವರು ಒಂದು ಶಬ್ದವನ್ನು ಹೇಳಿದಂತಾಯಿತೇ ಹೊರತು ಕಾರಣವನ್ನು ಹೇಳಿದಂತೆ ಆಗಲಿಲ್ಲ. ಈ ಹುಟ್ಟುಗುಣವೆಂಬುದೇನು? ನಮ್ಮಲ್ಲಿ ಎಷ್ಟೋ ಹುಟ್ಟುಗುಣಗಳಿವೆ. ಪಿಯಾನವನ್ನು ಬಾರಿಸುವುದಕ್ಕೆ ಮೊದಲು ಮಾಡಿದಾಗ ಕರೀಮನೆ ಮತ್ತು ಬಿಳೀಮನೆಗಳನ್ನು ಒಂದಾದಮೇಲೊಂದನ್ನು ನೋಡಿಕೊಂಡು ಎಚ್ಚರದಿಂದ ಕೈಯಿಡಬೇಕಾಗುತ್ತೆಂಬುದೂ ಬಹುವರ್ಷಗಳ ಅಭ್ಯಾಸದಿಂದ ಈಗ ಮತ್ತೊಬ್ಬರೊಡನೆ ಮಾತನಾಡುತ್ತಿದ್ದರೂ ಕೂಡ ಬೆರಳುಗಳು ತಮಗೆ ತಾವೇ ಬೇಕಾದ ಕಡೆಗೆ ಹೋಗುತ್ತವೆಯೆಂಬುದೂ ಎಷ್ಟೋ ಜನರಿಗೆ ಗೊತ್ತಿದ್ದ ಮಾತು. ಈಗ ಅದೇ ಹುಟ್ಟುಗುಣವಾಯಿತು. ನಾವು ಮಾಡುವ ಕೆಲಸವೆಲ್ಲ ಹೀಗೆಯೆ. ಅಭ್ಯಾಸದಿಂದ ಹುಟ್ಟುಗುಣವಾಗಿ ತನಗೆ ತಾನೇ ನಡೆಯುವುದು. ಆದರೆ ನಮಗೆ ಗೊತ್ತಿದ್ದ ಮಟ್ಟಿಗೆ ಈಗ ಯಾವುದು ತನಗೆ ತಾನೇ ನಡೆಯುತ್ತಿರುವುದೊ ಅದೆಲ್ಲ ಬುದ್ಧಿಶಕ್ತಿಯು ಕೆಟ್ಟು ಹೀಗಾಗಿರುವುದೆಂದು ಗೊತ್ತಾಗುವುದು. ಹುಟ್ಟುಗುಣವೆಂಬುದು ಬುದ್ಧಿಶಕ್ತಿಯ ಬೀಜರೂಪವೆಂದು ಯೋಗಿಗಳು ಹೇಳುವರು. ಬುದ್ಧಿಯೆಂಬುದು ಅನುಭವವಿಲ್ಲದೆ ಬರುವುದಿಲ್ಲವಾದುದರಿಂದ ಹುಟ್ಟುಗುಣವು ಪೂರ್ವದನುಭವದ ಫಲವೇ ಆಗಬೇಕಾಯಿತು. ಕೋಳಿಪಿಳ್ಳೆಗಳು ಗಿಡುಗನಿಗೆ ಹೆದರುವುದೂ ಬಾತುಮರಿಗಳಿಗೆ ನೀರಿನ ಮೇಲೆ ಪ್ರೀತಿಯಿರುವುದೂ ಇವೆರಡೂ ಪೂರ್ವದನುಭವದ ಫಲವೆ. ಇನ್ನು ಈ ಅನುಭವವೆಂಬುದು ಯಾವುದಾದರೊಂದು ಗೊತ್ತಾದ ಜೀವಕ್ಕೆ ಸೇರಿದುದೋ ಅಥವಾ ಶರೀರಕ್ಕೇ ಸೇರಿದುದೋ; ಬಾತುವಿಗೆ ಬರುವ ಅನುಭವವು ಬಾತುಮರಿಯ ಪೂರ್ವಿಕರದೊ ಅಥವಾ ಬಾತುಮರಿಯ ಅನುಭವವೊ ಎಂಬುದನ್ನು ನಿಶ್ಚಯಮಾಡಬೇಕು. ಈಗಿನ ಶಾಸ್ತ್ರಜ್ಞರು ಅದು ಶರೀರದ ಅನುಭವವೆಂತಲೂ ಯೋಗಿಗಳು ಅದು ಶರೀರದಿಂದ ಮನಸ್ಸಿಗೆ ಆದ ಅನುಭವವೆಂತಲೂ ಹೇಳುತ್ತಾರೆ. ಇದಕ್ಕೆ ಪೂರ್ವಜನ್ಮವಾದವೆನ್ನುತ್ತಾರೆ. ಹೀಗೆ ನಮಗೆ ಬರುವ ತಿಳಿವಳಿಕೆಯು ಪ್ರತ್ಯಕ್ಷವಾಗಿರಲಿ, ಬುದ್ಧಿಯಿಂದ ಊಹಿಸಿದುದಾಗಿರಲಿ, ಅಥವಾ ಹುಟ್ಟು ಗುಣವಾಗಿರಲಿ, ಅನುಭವವೆಂಬ ಒಂದೇ ಒಂದು ಮಾರ್ಗದಿಂದ ಬರಬೇಕೆಂತಲೂ ಈಗ ನಾವು ಯಾವಯಾವುದನ್ನು ಹುಟ್ಟುಗುಣವೆನ್ನುತ್ತಿದ್ದೇವೆಯೋ ಇದೆಲ್ಲವೂ ಪೂರ್ವದನುಭವದ ಫಲವೆಂದೂ ಬುದ್ಧಿಯಿಂದ ಹುಟ್ಟುಗುಣವೆಂಬ ಕಡಿಮೆಯ ದರ್ಜೆಯ ತಿಳಿವಳಿಕೆಯುಂಟಾಗಿದೆಯೆಂದೂ ಈ ಹುಟ್ಟುಗುಣವೇ ಮತ್ತೆ ಬುದ್ಧಿಯಾಗಿ ಬೆಳೆಯುವುದೆಂತಲೂ ಗೊತ್ತಾಯಿತಷ್ಟೆ. ಪ್ರಪಂಚದಲ್ಲೆ ಇದನ್ನು ಅನ್ವಯಿಸಬಹುದು. ಇಂಡಿಯಾದಲ್ಲಿ ಇದನ್ನು ಪೂರ್ವಜನ್ಮವುಂಟೆಂಬುದನ್ನು ತೋರಿಸುವುದಕ್ಕೆ ಒಂದು ಮುಖ್ಯ ಕಾರಣವಾಗಿ ಮಾಡಿಕೊಂಡಿರುತ್ತಾರೆ. ಮೇಲಿಂದ ಮೇಲೆ ನಾನಾ ವಿಧವಾದ ಹೆದರಿಕೆಗಳ ಅನುಭವವನ್ನು ಮಾಡಿ ಮಾಡಿ ಕೊನೆಗೆ ಈ ಜೀವದಾಸೆಯೆಂಬುದು ಹುಟ್ಟುತ್ತದೆ. ಮಗುವು ಹುಟ್ಟುತ್ತಲೆ ಹೆದರುತ್ತಿರುವುದು ಇದರಿಂದಲೆ. ಇದಕ್ಕೆ ಪೂರ್ವಜನ್ಮದಲ್ಲಿ ಅನುಭವಿಸಿದ

ದುಃಖವು ಗೊತ್ತೆ ಇರುವುದು. ವಿದ್ವಾಂಸರಲ್ಲಿಯೂ ಕೂಡ–ಈ ಶರೀರವು ಹೋಗಲೇಬೇಕೆಂಬುದನ್ನು ತಿಳಿದುಕೊಂಡು "ಆದರೇನು? ಇದುವರೆಗೆ ಎಷ್ಟೋ ಶರೀರಗಳನ್ನು ಧರಿಸಿದುದಾಗಿದೆ. ಆತ್ಮವು ಎಂದಿಗೂ ಸಾಯುವುದಿಲ್ಲ" ಎಂದು ಹೇಳುವವರಲ್ಲಿಯೂ ಕೂಡ–ಅವರು ವಿಚಾರದಿಂದ ಎಷ್ಟೇ ನಿಶ್ಚಯಮಾಡಿಕೊಂಡಿದ್ದರೂ ಈ ಜೀವದಾಸೆಯೆಂಬುದು ಇದ್ದೇ ಇರುವುದು. ಈ ಜೀವದಾಸೆಯೆಂಬುವುದಕ್ಕೇನು ಕಾರಣ? ಮೇಲೆ ಹೇಳಿದಂತೆ ಅದು ಹುಟ್ಟುಗುಣವಾಗಿಬಿಟ್ಟಿದೆ. ಯೋಗಿಗಳು ಹೇಳುವಂತೆ ಶಾಸ್ತ್ರೀಯ ರೀತಿಯಿಂದ ಹೇಳಿದರೆ ಅದು ಸಂಸ್ಕಾರಗಳಾಗಿದೆಯೆನ್ನಬೇಕು. ಈ ಸಂಸ್ಕಾರಗಳು ಬಹುಸೂಕ್ಷ್ಮವಾಗಿ ಒಳಗೇ ಇದ್ದುಕೊಂಡು ಚಿತ್ತದಲ್ಲಿಯೇ ಮಲಗಿರುವುವು. ಹಿಂದಿನ ಮರಣಸಂಬಂಧವಾದ ಅನುಭವಗಳೆಲ್ಲ–ಹುಟ್ಟುಗುಣಗಳೆಂಬುವೆಲ್ಲ–ಅರಿವಿನ ಅಂತಸ್ತಿಗಿಂತ ಕೆಳಗಿಳಿದ ಅನುಭವವೆ. ಅದು ಚಿತ್ತದಲ್ಲಿಯೇ ಇರುತ್ತದೆ. ಅಲ್ಲಿ ಸುಮ್ಮಗಿರುವುದಿಲ್ಲ; ಕೆಳಗಡೆಯಲ್ಲಿಯೆ ಕೆಲಸಮಾಡುತ್ತಿರುವುದು. ಸ್ಥೂಲವಾಗಿರುವ ಚಿತ್ತವೃತ್ತಿಗಳೆಂಬ ಅಲೆಗಳೇನೋ ಇಂಥಿಂಥವೆಂದು ಗೊತ್ತಾಗಿ ಅನುಭವಕ್ಕೆ ಬರುತ್ತದೆ. ಆದುದರಿಂದ ಇವುಗಳನ್ನು ಹೇಗಾದರೂ ಮಾಡಿ ಸ್ವಾಧೀನಕ್ಕೆ ತರಬಹುದು. ಆದರೆ ಸೂಕ್ಷ್ಮವಾಗಿರುವ ಹುಟ್ಟುಗುಣಗಳಿಗೇನು ಗತಿ? ಇವುಗಳನ್ನು ವಶಮಾಡಿಕೊಳ್ಳುವುದು ಹೇಗೆ? ನನಗೆ ಸಿಟ್ಟು ಬಂದರೆ ನನ್ನ ಚಿತ್ತಕ್ಕೆ ಚಿತ್ತವೆ ಸಿಟ್ಟೆಂಬ ದೊಡ್ಡ ತರಂಗವಾಗುವುದು. ಆಗ ಅದು ನನ್ನ ಅನುಭವಕ್ಕೆ ಬಂದು, ಗೋಚರವಾಗಿ, ಮುಟ್ಟಿ, ಅತ್ತಿತ್ತ ತಿರುಗಿಸುವುದಕ್ಕೆ ಆಗುವಂತಿರುವುದು. ಇದರೊಡನೆ ಹೋರಾಡಬಹುದು; ಆದರೆ ಈ ಹೋರಾಟದಲ್ಲಿ ಸಂಪೂರ್ಣವಾಗಿ ಜಯಹೊಂದುವುದು ಮಾತ್ರ ಇದಕ್ಕಿಂತ ಕೆಳಗಿರುವ ಕಾರಣಗಳನ್ನು ಕಂಡ ಹೊರತು ಆಗುವುದಿಲ್ಲ. ನನಗೆ ಒಬ್ಬನು ಏನಾದರೊಂದು ಕೆಟ್ಟ ಮಾತನ್ನಾಡಿದರೆ ನನಗೆ ಮನಸ್ಸು ಕುದಿಯುತ್ತಿರುವುದು ಕಾಣುವುದು. ಅವನು ನನಗೆ ಪೂರ್ಣವಾಗಿ ಸಿಟ್ಟು ಬರುವವರೆಗೆ ಬಯ್ಯುತ್ತಲೆ ಇದ್ದರೆ ನನ್ನನ್ನು ನಾನು ಮರೆತು ನಾನೇ ಸಿಟ್ಟಾಗಿ ಬಿಡುವೆನು. ಅವನು ಬಯ್ಯುವುದಕ್ಕೆ ಮೊದಲು ಮಾಡಿದಾಗ "ಇಗೊ ನನಗೆ ಸಿಟ್ಟುಬರುತ್ತದೆ" ಎಂದು ಗೊತ್ತಾಗುತ್ತಿತ್ತು. ಸಿಟ್ಟು ಬೇರೆ ನಾನು ಬೇರೆ ಆಗಿದ್ದೆವು. ಸಿಟ್ಟು ಬಂದ ಮೇಲೆಯೊ ನಾನೇ ಸಿಟ್ಟಾಗಿಬಿಟ್ಟೆನು. ಇಂಥ ವೃತ್ತಿಗಳನ್ನು ಬೀಜರೂಪದಲ್ಲಿಯೆ–ಬೇರುಬಿಡುವುದರೊಳಗೇ–ಅವುಗಳಿನ್ನೂ ಸೂಕ್ಷ್ಮವಾಗಿದ್ದು ನಮ್ಮ ಮೇಲೆ ಕೈ ಮಾಡುತ್ತವೆ ಎಂಬ ಭಾವನೆ ಬರುವುದರೊಳಗೇ–ಅವುಗಳನ್ನು ವಶಮಾಡಿಕೊಳ್ಳಬೇಕು. ಎಷ್ಟೋ ಜನರಿಗೆ ಈ ವೃತ್ತಿಗಳ ಸೂಕ್ಷ್ಮಸ್ಥಿತಿಗಳು–ಅರಿವಿನ ಕೆಳಗಣಿಂದ ಅವು ಮೇಲಕ್ಕೆ ಬರುವಾಗಳಿನ ಸ್ಥಿತಿಗಳು–ಇವೆಯೆಂಬುದೇ ಗೊತ್ತಿರುವುದಿಲ್ಲ. ಸರೋವರದ ತಳದಿಂದ ಒಂದು ಗುಳ್ಳೆಯು ಏಳುತ್ತಿರುವಾಗ, ಅಥವಾ ಇನ್ನೇನು ಮೇಲಕ್ಕೆ ಬಂತೆನ್ನುವಾಗ ಕೂಡ, ಅದು ನಮಗೆ ಕಾಣಿಸುವುದಿಲ್ಲ. ಅದು ಒಡೆದುಕೊಂಡು ನೀರನ್ನು ಕದಲಿಸಿದಾಗಲೆ ಅದು ಇರುವುದು ನಮಗೆ ಗೊತ್ತಾಗುವುದು. ಸೂಕ್ಷ್ಮಸ್ಥಿತಿಯಲ್ಲಿರುವಾಗ ಹಿಡಿದುಕೊಳ್ಳುವುದಕ್ಕಾದರೆ ಅಲೆಗಳನ್ನು ಗೆಲ್ಲಬಹುದು. ಸ್ಥೂಲರೂಪಕ್ಕೆ ಬರುವುದರೊಳಗೆ ಹಿಡಿದು ಕಟ್ಟುವುದಕ್ಕಾಗದಿದ್ದರೆ ಯಾವ ವೃತ್ತಿಯನ್ನೆ ಆಗಲಿ ಸಂಪೂರ್ಣವಾಗಿ ಜಯಿಸುವೆವೆಂಬ ಭರವಸೆ ಇಲ್ಲ. ನಮ್ಮ ಕೆಟ್ಟವೃತ್ತಿಗಳನ್ನು ಗೆಲ್ಲಬೇಕಾದರೆ ಅವುಗಳ ಮೂಲರೂಪವನ್ನು ಗೆಲ್ಲಬೇಕು. ಆಗ ಅವುಗಳ ಬೀಜವನ್ನೇ ಸುಟ್ಟುಹಾಕಿಬಿಡಬಹುದು. ಹುರಿದ ಬೀಜಗಳನ್ನು ಬಿತ್ತಿದರೂ ಹುಟ್ಟದಂತೆ ಆಮೇಲೆ ಈ ಪ್ರವೃತ್ತಿಗಳು ಮತ್ತೆ ತಲೆ ಹಾಕುವುದಿಲ್ಲ.

## 10. ತೇ ಪ್ರತಿಪ್ರಸವಹೇಯಾಃ ಸೂಕ್ಷ್ಮಾಃ

ಟೀ॥ ವಿರುದ್ಧವಾದ ವೃತ್ತಿಗಳಿಂದ ತ್ಯಜಿಸಬೇಕಾದ ಈ ವೃತ್ತಿಗಳು ಸೂಕ್ಷ್ಮವೆನಿಸುವುವು.

ವಿ॥ ಈ ಸೂಕ್ಷ್ಮಸಂಸ್ಕಾರಗಳನ್ನು ಗೆಲ್ಲುವುದು ಹೇಗೆ? ದೊಡ್ಡ ಅಲೆಗಳಿಂದ ಪ್ರಾರಂಭ ಮಾಡಿಕೊಂಡು ಆಮೇಲೆ ಕೆಳಕೆಳಗಣ ಅಲೆಗಳನ್ನು ನೋಡೋಣ. ಒಂದು ಸಿಟ್ಟಿನ ಅಲೆಯು ಬಂತೆಂದು ಇಟ್ಟುಕೊಳ್ಳಿ. ಅದನ್ನು ಗೆಲ್ಲುವುದು ಹೇಗೆ? ಇದಕ್ಕೆ ವಿರುದ್ಧವಾದುದೊಂದು ದೊಡ್ಡ ಅಲೆಯನ್ನು ಎಬ್ಬಿಸಿದರಾಯಿತು. ಆಗ ಪ್ರೇಮವನ್ನು ಮನಸ್ಸಿಗೆ ತಂದರಾಯಿತು. ಕೆಲವು ವೇಳೆ ಗಂಡನೊಡನೆ ಜಗಳವಾಡುತ್ತಿರುವ ಹೆಂಡತಿಯ ಹತ್ತಿರಕ್ಕೆ ಮಗು ಬಂದರೆ ಮಗುವಿಗೆ ಮುದ್ದಿಡುತ್ತಾಳೆ. ಮೊದಲಿನ ಸಿಟ್ಟೆಂಬ ಅಲೆಯು ಹೋಗಿ ಮಗುವಿನ ಪ್ರೇಮವೆಂಬುದೊಂದು ಅಲೆಯು ಏಳುವುದು. ಇದು ಮೊದಲಿನ ಅಲೆಯನ್ನು ಅಮುಕಿಬಿಡುವುದು. ಸಿಟ್ಟಿಗೆ ಪ್ರೇಮವೆಂಬುದು ವಿರುದ್ಧವು. ಹೀಗೆ ಯಾವ ಅಲೆಯುನ್ನು ಬಿಡಬೇಕೆಂದು ನಮ್ಮ ಮನಸ್ಸಿನಲ್ಲಿರುವುದೊ ಅದಕ್ಕೆ ವಿರುದ್ಧವಾದ ಮತ್ತೊಂದು ಅಲೆಯನ್ನು ಎಬ್ಬಿಸಿದರೆ ಅದನ್ನು ಗೆಲ್ಲಬಹುದೆಂದು ಗೊತ್ತಾಯಿತು. ಇನ್ನು ನಮ್ಮ ಸೂಕ್ಷ್ಮಸ್ಥಿತಿಯಲ್ಲಿಯೂ ಇಂಥ ವಿರುದ್ಧವಾದ ಅಲೆಗಳನ್ನು ಹುಟ್ಟಿಸಿದರೆ ಅವು ಅರಿವಿನ ಕೆಳಗೆ ಇರುವ ಸಿಟ್ಟಿನ ಸೂಕ್ಷ್ಮವ್ಯಾಪಾರಗಳನ್ನು ತಗ್ಗಿಸುತ್ತವೆ. ಹುಟ್ಟುಗುಣವೆಂಬುದೆಲ್ಲ ಮೊದಲು ತಿಳಿದು ಮಾಡುವ ಕೆಲಸವಾಗಿದ್ದು ಆಮೇಲೆ ಸೂಕ್ಷ್ಮವಾಗುತ್ತ ಬಂದಿರುವುದೆಂದು ಹಿಂದೆಯೇ ಹೇಳಿದೆ. ಆದುದರಿಂದ ಅರಿವಿನ ಚಿತ್ತದಲ್ಲಿ ಬಿಡದೆ ಒಳ್ಳೆಯ ಅಲೆಗಳೇ ಏಳುತ್ತಿದ್ದರೆ ಇವು ಕೆಳಕ್ಕೆ ಇಳಿದು ಸೂಕ್ಷ್ಮವಾಗಿ ಕೆಟ್ಟಯೋಚನೆಗಳ ಸಂಸ್ಕಾರಗಳನ್ನು ಕಡಿಮೆಮಾಡುವುವು.

## 11. ಧ್ಯಾನಹೇಯಾಸತದ್ವೃತ್ತಯಃ

ಟೀ॥ ಧ್ಯಾನದಿಂದ ಅವುಗಳ ವೃತ್ತಿಗಳನ್ನು ಬಿಡಬೇಕು.

ವಿ॥ ಈ ಅಲೆಗಳು ಏಳದಂತೆ ಮಾಡುವುದಕ್ಕೆ ಧ್ಯಾನವು ಒಂದು ದೊಡ್ಡ ಉಪಾಯ. ಧ್ಯಾನದಿಂದ ಮನಸ್ಸು ಈ ಅಲೆಗಳನ್ನು ಗೆಲ್ಲುವಂತೆ ಮಾಡಬಹುದು. ಹೀಗೆ ದಿನಗಟ್ಟಲೆ, ತಿಂಗಳುಗಟ್ಟಲೆ, ವರ್ಷಗಟ್ಟಲೆ, ಧ್ಯಾನಮಾಡುತ್ತ ಹೋದರೆ ಕೊನೆಗೆ ಅದೇ ಪದ್ಧತಿಯಾಗಿ ನೀವು ಬೇಡವೆಂದರೂ ತನ್ನಷ್ಟಕ್ಕೆ ತಾನೇ ಬಂದು ಸಿಟ್ಟು, ಹಗೆ ಮೊದಲಾದವು ಸ್ವಾಧೀನಕ್ಕೆ ಬಂದು ನಿಂತುಹೋಗುವುವು.

## 12. ಕ್ಲೇಶಮೂಲಃ ಕರ್ಮಾಶಯೋ ದೃಷ್ಟಾದೃಷ್ಟಜನ್ಮವೇದನೀಯಃ

ಟೀ॥ ಕರ್ಮದ ಆಸರೆಗೆ ಈ ಕ್ಲೇಶಗಳೇ ಮೂಲವು. ಅವುಗಳ ಅನುಭವವು ಈ ಕಾಣುವ ಜನ್ಮದಲ್ಲಿಯೊ ಕಾಣದ ಜನ್ಮದಲ್ಲಿಯೊ ಆಗುವುದು.

ವಿ॥ ಕರ್ಮಾಶಯವೆಂದರೆ ಸಂಸ್ಕಾರಗಳ ಒಟ್ಟೆಂದರ್ಥ. ನಾವು ಏನೇ ಕೆಲಸವನ್ನು ಮಾಡಲಿ ಆಗ ಚಿತ್ತವು ಒಂದೊಂದು ಅಲೆಯ ರೂಪವಾಗುವುದು. ಆ ಕೆಲಸ ಮುಗಿದರೆ

ಅಲೆಯು ಹೋಯಿತೆಂದು ನಾವು ಭಾವಿಸುತ್ತೇವಷ್ಟೆ: ಅದು ಹೋಗಿರುವುದಿಲ್ಲ; ಸುಮ್ಮನೆ ಸೂಕ್ಷ್ಮವಾಗಿ ಅಲ್ಲಿಯೆ ಇದ್ದುಕೊಂಡಿರುವುದು. ಆ ಕೆಲಸವನ್ನು ನೆನಪಿಗೆ ತಂದುಕೊಳ್ಳಬೇಕೆಂದು ಯತ್ನಿಸಿದರೆ ಅದು ಮೇಲಕ್ಕೆ ಬಂದು ಮತ್ತೆ ಅಲೆಯಾಗುವುದು. ಆದುದರಿಂದ ಅದು ಅಲ್ಲಿ ಇದ್ದೇ ಇತ್ತು; ಇಲ್ಲದಿದ್ದರೆ ನೆನಪೇ ಇರುತ್ತಿರಲಿಲ್ಲ. ಹೀಗೆ ಪ್ರತಿಯೊಂದು ಕಾರ್ಯವೂ ಪ್ರತಿಯೊಂದು ಒಳ್ಳೆಯ ಅಥವಾ ಕೆಟ್ಟ ಯೋಚನೆಯೂ ಸುಮ್ಮನೆ ಕೆಳಕ್ಕಿಳಿದು ಸೂಕ್ಷ್ಮವಾಗಿ ಅಲ್ಲಿ ಸೇರಿಕೊಂಡಿರುವುದು. ಒಳ್ಳೆಯ ಯೋಚನೆಗಳನ್ನೂ ಕೆಟ್ಟ ಯೋಚನೆಗಳನ್ನೂ ಯೋಗಿಗಳು ಕ್ಲೇಶಗಳೆಂದೇ ಕರೆಯುತ್ತಾರೆ. ಏಕೆಂದರೆ ಕೊನೆಗೆ ಇವು ಕ್ಲೇಶವನ್ನೇ ಉಂಟುಮಾಡುತ್ತವೆ. ಇಂದ್ರಿಯಗಳಿಂದ ಬರುವ ಸುಖವೆಲ್ಲ ಕೊನೆಗೆ ದುಃಖವನ್ನೇ ತರುವುದು. ಎಷ್ಟು ಸುಖಪಟ್ಟರೂ ಇನ್ನಷ್ಟು ಬೇಕೆನ್ನಿಸುವುದು. ಇದರಿಂದ ಕೊನೆಗೆ ದುಃಖವೇ ಉಂಟಾಗುವುದು. ಮನುಷ್ಯನ ಆಸೆಗೆ ಪಾರವೇ ಇಲ್ಲ. ಆಸೆ ಮಾಡುತ್ತ ಮಾಡುತ್ತ ಕೊನೆಗೆ ಆಸೆ ನಡೆಯದ ಕಾಲ ಬರುವುದು. ಆಗ ದುಃಖವಾಗುವುದು. ಹೀಗಿರುವುದರಿಂದ ಯೋಗಿಗಳು ಸಂಸ್ಕಾರಗಳನ್ನೆಲ್ಲ-ಅವು ಕೆಟ್ಟವಾಗಲಿ, ಒಳ್ಳೆಯವಾಗಲಿ-ಕ್ಲೇಶಗಳೆಂದೇ ಕರೆಯುವರು. ಇವು ಆತ್ಮನಿಗೆ ಮುಕ್ತಿಯಾಗುವ ಮಾರ್ಗಕ್ಕೆ ಅಡ್ಡಿಯಾಗುವುವು.

ನಾವು ಮಾಡುವ ಎಲ್ಲಾ ಕೆಲಸಗಳ ಸಂಸ್ಕಾರಗಳೆಂಬ ಸೂಕ್ಷ್ಮವಾದ ಬೇರುಗಳೂ ಒಂದೇ. ಇವುಗಳು ಈ ಜನ್ಮದಲ್ಲಿಯೊ ಅಥವಾ ಮುಂದಿನ ಜನ್ಮಗಳಲ್ಲಿಯೊ ಫಲಗಳನ್ನು ಕೊಡುವುದಕ್ಕೆ ಕಾರಣವಾಗಿರುವುವು. ಈ ಸಂಸ್ಕಾರಗಳು ಅತ್ಯುತ್ಕಟವಾಗಿರುವಂಥ ವಿಶೇಷ ಸಂದರ್ಭಗಳಲ್ಲಿ ಕೂಡಲೆ ಇವುಗಳ ಫಲವಾಗುವುದು. ಪುಣ್ಯಪಾಪಗಳು ಬಹು ಜೋರಾಗಿದ್ದರೆ ಈ ಜನ್ಮದಲ್ಲಿಯೆ ಫಲವಾಗುವುದು. ಒಳ್ಳೆಯ ಸಂಸ್ಕಾರಗಳು ಬಹಳ ಬಲವಾದರೆ ಅಂಥವರು ಸಾಯಬೇಕಾದುದೇ ಇಲ್ಲ. ಅವರ ಶರೀರವು ಈ ಜನ್ಮದಲ್ಲಿಯೇ ದೇವ ಶರೀರವಾಗುವುದು ಎಂದು ಯೋಗಿಗಳು ಹೇಳುತ್ತಾರೆ. ಯೋಗ ಗ್ರಂಥಗಳಲ್ಲಿ ಇಂಥ ಅನೇಕ ಉದಾಹರಣೆಗಳನ್ನು ಕೊಟ್ಟಿರುತ್ತಾರೆ. ಇಂಥ ಜನರಿಗೆ ಶರೀರದಲ್ಲಿರುವ ಪದಾರ್ಥವೇ ಬೇರೆಯಾಗಿ ಬಿಡುವುದು. ಶರೀರದಲ್ಲಿರುವ ಅಣುಗಳನ್ನು ಮತ್ತೊಂದು ಕ್ರಮದಲ್ಲಿಟ್ಟುಕೊಳ್ಳುವುದರಿಂದ ಇವರಿಗೆ ರೋಗವೇ ಇಲ್ಲವಾಗುವುದು. ಆದುದರಿಂದ ಮರಣವೆಂಬುದು ಇವರಿಗೆ ಬರುವುದಿಲ್ಲ. ಇದೇತಕ್ಕಾಗಬಾರದು? ಶರೀರಶಾಸ್ತ್ರದಂತೆ ಆಹಾರವೆಂದರೆ ಸೂರ್ಯ ಶಕ್ತಿಯನ್ನು ತನ್ನಲ್ಲಿ ಕೂಡಿಸಿಕೊಳ್ಳುವುದೆಂದರ್ಥ. ಈ ಶಕ್ತಿಯು ಮೊದಲು ಗಿಡಕ್ಕೆ ಬರುವುದು. ಇದನ್ನೆ ಪ್ರಾಣಿಯು ತಿನ್ನುವುದು. ಈ ಪ್ರಾಣಿಯನ್ನು ಮನುಷ್ಯನು ತಿನ್ನುತ್ತಾನೆ. ಇದರಿಂದಾದ ಸಿದ್ಧಾಂತವೇನೆಂದರೆ-ನಾವು ಅಷ್ಟಷ್ಟು ಶಕ್ತಿಯನ್ನು ಸೂರ್ಯನಿಂದ ತೆಗೆದುಕೊಂಡು ನಮ್ಮಲ್ಲಿ ಸೇರಿಸಿಕೊಳ್ಳುತ್ತಿರುವೆವು. ಹೀಗಿರುವುದರಿಂದ ಶಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಒಂದೇ ಮಾರ್ಗವಿರಬೇಕೆನ್ನುವುದೇನು ? ಸಸ್ಯದ ಮಾರ್ಗವು ನಮ್ಮ ಮಾರ್ಗದಂತೆ ಇಲ್ಲ. ಭೂಮಿಯು ಶಕ್ತಿಯನ್ನು ಹೀರಿಕೊಳ್ಳುವ ಕ್ರಮಕ್ಕೂ ನಮ್ಮ ಕ್ರಮಕ್ಕೂ ಭೇದವಿದೆ. ಅಂತು ಎಲ್ಲರೂ ಈ ಶಕ್ತಿಯನ್ನು ಒಂದು ರೂಪವಲ್ಲದಿದ್ದರೆ ಮತ್ತೊಂದು ರೂಪದಲ್ಲಿ ಹೀರಿಕೊಳ್ಳುತ್ತಲೆ ಇರುವರು. ಕೇವಲ ಮನಸ್ಸಿನ ಶಕ್ತಿಯಿಂದಲೆ ಶಕ್ತಿಯನ್ನು ಹೀರಿಕೊಳ್ಳುವದಕ್ಕೆ ತಮಗೆ ಬರುತ್ತದೆಂದೆಂತಲೂ ಎಲ್ಲರೂ ಉಪಯೋಗಿಸುವ ಮಾರ್ಗಗಳಿಲ್ಲದೆಯೆ ಎಷ್ಟು ಬೇಕೆಂದರೆ ಅಷ್ಟು ಶಕ್ತಿಯನ್ನು ಎಳೆದುಕೊಳ್ಳುತ್ತೇವೆಂದೂ ಯೋಗಿಗಳು

ಹೇಳುವರು. ಜೇಡರ ಹುಳವು ತನ್ನೊಳಗಿಂದಲೆ ಒಂದು ಬಲೆಯನ್ನು ಮಾಡಿ ಅದರೊಳಗೆ ಸಿಕ್ಕಿಕೊಂಡು ಆ ಬಲೆಯಲ್ಲಿರುವ ಸಾಲುಗಳನ್ನು ಬಿಟ್ಟು ಮತ್ತೊಂದು ಕಡೆಗೆ ಹೋಗುವುದಕ್ಕೆ ಆಗದೆ ಇರುವಂತೆಯೆ ನಾವು ನಮ್ಮೊಳಗಿಂದಲೇ ಈ ನರಗಳೆಂಬ ಈ ಬಲೆಯನ್ನು ಹೊರಕ್ಕೆ ಹಾಕಿರುವೆವು. ಆ ನರಗಳ ಮಾರ್ಗವನ್ನು ಬಿಟ್ಟರೆ ಬೇರೆ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುವಂತೆ ಇಲ್ಲ. ಆದರೆ ಹೀಗೆ ಇದಕ್ಕೆ ಕಟ್ಟುಬಿದ್ದಿರಬೇಕೆಂಬ ನಿರ್ಬಂಧವೇನೂ ಇಲ್ಲವೆಂದು ಯೋಗಿ ಅನ್ನುತ್ತಾನೆ. ಹೀಗೆಯೇ ವಿದ್ಯುಚ್ಛಕ್ತಿಯನ್ನು ಪ್ರಪಂಚದ ಯಾವ ಭಾಗಕ್ಕೆ ಬೇಕಾದರೂ ಕಳುಹಿಸಬಹುದಷ್ಟೆ. ಆದರೆ ಹಾಗೆ ಕಳುಹಿಸುವುದಕ್ಕೆ ನಮಗೆ ತಂತಿಗಳೇ[1] ಆಗಬೇಕು. ಸೃಷ್ಟಿಯಲ್ಲಿ ಎಷ್ಟೋ ವಿದ್ಯುಚ್ಛಕ್ತಿಯು ತಂತಿಗಳಿಲ್ಲದೆಯೆ ಸ್ವಭಾವದಿಂದ ಸಂಚರಿಸುತ್ತಿರುವುದು. ನಾವೂ ಏತಕ್ಕೆ ಕಳುಹಿಸಬಾರದು? ನಮಗೆ ಮನಸ್ಸಿನ ವಿದ್ಯುಚ್ಛಕ್ತಿಯನ್ನು ಕಳುಹಿಸುವುದಕ್ಕೆ ಬರುತ್ತದೆ. ನಾವು "ಮನಸ್ಸು ಮನಸ್ಸು" ಎನ್ನುತ್ತಿರುವುದೂ ಬಹುಮಟ್ಟಿಗೆ ಒಂದು ಬಗೆಯ ವಿದ್ಯುಚ್ಛಕ್ತಿಯಂತೆಯೇ ಇರುವುದು. ನರದಲ್ಲಿ ಹರಿಯುತ್ತಿರುವ ವಸ್ತುವಿನಲ್ಲಿಯೂ ಸ್ವಲ್ಪ ವಿದ್ಯುಚ್ಛಕ್ತಿ ಇರಬೇಕು. ಏಕೆಂದರೆ ಇದಕ್ಕೆ ಧ್ರುವಾಕರ್ಷಣ[2] ಶಕ್ತಿಯಿರುವುದು; ಮತ್ತು ವಿದ್ಯುಚ್ಛಕ್ತಿಯು ದಿಕ್ಕುಗಳನ್ನೆಲ್ಲ ತೋರಿಸುತ್ತದೆ. ನಮಗೆ ನಮ್ಮಲ್ಲಿರುವ ವಿದ್ಯುಚ್ಛಕ್ತಿಯನ್ನು ಈ ನರಗಳ ಮಾರ್ಗವಾಗಿ ಮಾತ್ರ ಕಳುಹಿಸುವುದಕ್ಕೆ ಬರುತ್ತದೆ. ಈ ಸಾಧನವೆ ಇಲ್ಲದೆ ಮಾನಸಿಕ ವಿದ್ಯುತ್ತನ್ನು ಏತಕ್ಕೆ ಕಳುಹಿಸಕೂಡದು? ಇದು ಸಂಪೂರ್ಣವಾಗಿ ಸಾಧ್ಯವಾಗುವುದೆಂದೂ ಮಾಡುವುದಕ್ಕೆ ಆಗಿಯೂ ಆಗುವುದೆಂತಲೂ ಅದನ್ನು ಮಾಡುವುದಕ್ಕೆ ಬಂದರೆ ಜಗತ್ತಿನಲ್ಲೆಲ್ಲ ಕೆಲಸಮಾಡಬಹುದೆಂದೂ ಯೋಗಿಗಳು ಹೇಳುವರು. ಆಗ ಯಾವ ಶರೀರದಲ್ಲಿ ಎಲ್ಲಿ ಬೇಕೆಂದರೂ ನರ ಮಂಡಲದ ಸಹಾಯವಿಲ್ಲದೆಯೆ ಕೆಲಸ ಮಾಡಬಹುದು. ಈ ನರ ಮಾರ್ಗಗಳಲ್ಲಿ ಒಬ್ಬನು ಕೆಲಸ ಮಾಡುತ್ತಿದ್ದರೆ ಬದುಕಿದ್ದಾನೆಂದೂ ಅವನು ಕೆಲಸ ಮಾಡದೆ ಇದ್ದರೆ ಅವನು ಸತ್ತನೆಂತಲೂ ಅನ್ನುತ್ತೇವೆ. ಆದರೆ ಈ ಮಾರ್ಗಗಳಿದ್ದರೂ ಇಲ್ಲದಿದ್ದರೂ ಕೆಲಸ ಮಾಡುವ ಶಕ್ತಿಯುಳ್ಳವನ ವಿಷಯದಲ್ಲಿ ಹುಟ್ಟುವುದು ಸಾಯುವುದೆಂಬುದು ಅರ್ಥವಿಲ್ಲದ ಮಾತಾಗುವುವು. ಜಗತ್ತಿನಲ್ಲಿರುವ ಶರೀರಗಳೆಲ್ಲ ತನ್ಮಾತ್ರೆಗಳಿಂದಲೆ ಆಗಿರುವುದು. ಇವುಗಳು ಸೇರಿಕೊಂಡಿರುವ ರಚನಾಕ್ರಮದಲ್ಲಿರುವ ಭೇದವೇ ಇದಕ್ಕಿರುವ ಪರಸ್ಪರ ವ್ಯತ್ಯಾಸ. ನಿಮಗೆ ಇವುಗಳನ್ನು ಕೂಡಿಸುವುದಕ್ಕೆ ಬರುವುದಾದರೆ ನಿಮಗೆ ಹೇಗೆ ಬೇಕೆಂದರೆ ಹಾಗೆ ಕೂಡಿಸುವುದಕ್ಕಾಗುವುದು. ಈ ಶರೀರವನ್ನು ನಿಜವಾಗಿ ನೀವಲ್ಲದೆ ಮತ್ತಾರು ಮಾಡುವರು? ಆಹಾರವನ್ನು ತಿನ್ನುವರು ಯಾರು? ನಿಜವಾಗಿ ಮತ್ತೊಬ್ಬನು ಊಟಮಾಡುತ್ತಿದ್ದರೆ ಬಹುದಿನ ಬದುಕಿರಲಾರಿರಿ. ಆಹಾರದಿಂದ ರಕ್ತವನ್ನು ಮಾಡುವವರು ಯಾರು? ಖಂಡಿತವಾಗಿಯೂ ನೀವೇ. ಆ ರಕ್ತವನ್ನು ಶುದ್ಧಿ ಮಾಡಿ ರಕ್ತ ನಾಳಗಳ ಮೂಲಕ ಕಳುಹಿಸುವವರು ಯಾರು? ನೀವೇ. ಈ ಶರೀರಕ್ಕೆ ನಾವೇ ಯಜಮಾನರು. ಅದರಲ್ಲಿರುವವರೂ ನಾವೆ. ಆದರೆ ಅದಕ್ಕೆ ಹೊಸ ಶಕ್ತಿಯನ್ನು

1. ಈ ಗ್ರಂಥವನ್ನು ಸ್ವಾಮಿಯವರು ಬರೆದಾಗ ತಂತಿಯಿಲ್ಲದ ಟೆಲಿಗ್ರಾಫ್ ಇರಲಿಲ್ಲ.

2. ಉತ್ತರಮುಖಿಯ ಸೂಜಿಯನ್ನು ವಿದ್ಯುಚ್ಛಕ್ತಿಯ ಪ್ರವಾಹದ ಸಮೀಪದಲ್ಲಿ ಹಿಡಿದರೆ ಅದು ಸ್ವಾಭಾವಿಕವಾದ ಉತ್ತರದಿಕ್ಕಿನಿಂದ ಈಚೆಗೆ ಬರುವುದು. ಪ್ರವಾಹವು ಇಂಥಿಂಥ ಕಡೆಗೆ ಹೀಗೆ ಹೀಗೆ ಇದ್ದರೆ ಸೂಜಿಯು ಇಂಥಿಂಥ ಕಡೆಗೆ ತಿರುಗುವುದೆಂದು ಭೌತಿಕ ಶಾಸ್ತ್ರದಲ್ಲಿ ಗೊತ್ತುಮಾಡಿದ್ದಾರೆ. ನರಗಳಲ್ಲಿರುವ ಪ್ರವಾಹಕ್ಕೆ ಈ ಸೂಜಿಯನ್ನು ಹಿಡಿದರೆ ಅದೇ ದಿಕ್ಕುಗಳಿಗೆ ತಿರುಗುವುದರಿಂದ ಅಲ್ಲಿಯೂ ವಿದ್ಯುಚ್ಛಕ್ತಿಯಿರಬೇಕೆಂದು ಅಭಿಪ್ರಾಯ.

ಕೊಡುವ ಕ್ರಮವನ್ನು ಮರೆತಿದ್ದೇವೆ. ನಾವು ಸುಮ್ಮನೆ ಗಾಣದ ಎತ್ತುಗಳಂತೆ ಮಾಡಿದುದನ್ನೆ ಮಾಡಿಕೊಳ್ಳುತ್ತ ಕೆಳಕ್ಕೆ ಇಳಿದಿದ್ದೇವೆ. ಶರೀರದ ಅಣುಗಳನ್ನು ಕೂಡಿಸುವ ಕ್ರಮಗಳನ್ನು ಮರೆತುಬಿಟ್ಟಿದ್ದೇವೆ. ಈಗ ನಾವು ಅಭ್ಯಾಸದಿಂದ ತಿಳಿಯದೆ ಮಾಡುತ್ತಿರುವುದನ್ನು ತಿಳಿದು ಮಾಡಬೇಕು. ನಾವೇ ಯಜಮಾನರು. ಈ ಕ್ರಮವನ್ನು ನಾವೇ ಸರಿಪಡಿಸಬೇಕು. ಹೀಗೆ ಸರಿಪಡಿಸುವುದಕ್ಕೆ ಬಂದ ಕೂಡಲೆ ನಮಗೆ ಬೇಕಾದ ರೀತಿಯಲ್ಲಿ ಅದಕ್ಕೆ ಜೀವಕಳೆಯನ್ನು ಕೊಡುವುದಕ್ಕಾಗುವುದು. ಆಗ ನಮಗೆ ಹುಟ್ಟು, ರೋಗ, ಸಾವು ಇವು ಯಾವುವೂ ಬರುವುದಿಲ್ಲ.

## 13. ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ

ಟೀ॥ ಮೂಲವಿರಲಾಗಿ ಜಾತಿ, ಆಯಸ್ಸು, ಸುಖ ದುಃಖಗಳ ಅನುಭವ (ಎಂಬ) ಅದರ ಫಲವು ಬರುವುದು.

ವಿ॥ ಮೂಲಗಳು ಎಂದರೆ ಕಾರಣಗಳಾದ ಸಂಸ್ಕಾರಗಳು ಇರಲಾಗಿ ಅವು ಹೊರತೋರಿ ಫಲಗಳಾಗುವುವು. ಕಾರಣವು ಹೋಗಿ ಫಲವಾಗುವುದು. ಆ ಫಲವು ಸೂಕ್ಷ್ಮವಾಗಿ ಮುಂದಿನ ಫಲಕ್ಕೆ ಕಾರಣವಾಗುವುದು. ಗಿಡದಲ್ಲಿ ಬೀಜ ಹುಟ್ಟುವುದು. ಈ ಬೀಜವು ಮತ್ತೊಂದು ಮರಕ್ಕೆ ಕಾರಣವಾಗುವುದು. ಹೀಗೆಯೆ ನಡೆಯುತ್ತಿರುವುದು. ಈಗ ನಾವು ಮಾಡುತ್ತಿರುವುದೆಲ್ಲ ಪೂರ್ವಸಂಸ್ಕಾರಗಳ ಫಲಗಳು. ಇನ್ನು ಈ ಕೆಲಸಗಳು ಸಂಸ್ಕಾರಗಳಾಗಿ ಮುಂದಿನ ಕೆಲಸಗಳಿಗೆ ಕಾರಣವಾಗುತ್ತವೆ. ಹೀಗೆಯೇ ನಡೆಯುತ್ತಿರುವೆವು. ಆದುದರಿಂದ ಈ ಸೂತ್ರದಲ್ಲಿ ಹೇಳಿರುವುದೇನೆಂದರೆ–ಕಾರಣಗಳಿದ್ದ ಮೇಲೆ ಫಲವು ಜಾತಿಯ ರೂಪದಲ್ಲಿ ಬಂದೇ ತೀರಬೇಕು. ಒಬ್ಬನು ಮನುಷ್ಯ ಜಾತಿಯಲ್ಲಿ, ಮತ್ತೊಬ್ಬನು ದೇವತೆಯಾಗಿ, ಮಗದೊಬ್ಬನು ತಿರ್ಯಕ್ಪ್ರಾಣಿಯಾಗಿ, ಇನ್ನೊಬ್ಬನು ರಾಕ್ಷಸನಾಗಿ ಹುಟ್ಟುವನು. ಮತ್ತು ವಯಸ್ಸಿನಲ್ಲಿಯೂ ಕರ್ಮದ ಫಲಗಳು ಬೇರೆ ಬೇರೆ ಆಗಿರುವುವು. ಒಬ್ಬನು ಐವತ್ತು ವರ್ಷ ಬದುಕಿದ್ದರೆ ಇನ್ನೊಬ್ಬನು ನೂರು ವರ್ಷ ಬದುಕುತ್ತಾನೆ; ಮತ್ತೊಬ್ಬನು ಎರಡೇ ವರ್ಷ ಬದುಕಿದ್ದು ಪ್ರಾಯವನ್ನು ಪಡೆಯುವುದರಲ್ಲಿಯೆ ಸಾಯುತ್ತಾನೆ. ಹೀಗೆ ಆ ವಯಸ್ಸಿನಲ್ಲಿ ಆಗುವ ಭೇದಗಳೂ ಪೂರ್ವ ಕರ್ಮವನ್ನು ಅನುಸರಿಸಿರುತ್ತವೆ. ಒಬ್ಬನು ಸುಖಪಡುವುದಕ್ಕೆ ಹುಟ್ಟಿರುತ್ತಾನೆ. ಅಂಥವನು ಕಾಡಿನಲ್ಲಿ ಅವಿತುಕೊಂಡಿದ್ದರೂ ಅವನಿಗೆ ಸುಖವು ಹಿಂದೆಯೆ ಬರುವುದು. ಮತ್ತೊಬ್ಬನು ಎಲ್ಲಿ ಹೋದರೂ ಅವನನ್ನು ದುಃಖವು ಬೆನ್ನಟ್ಟಿಬರುವುದು. ಅವನಿಗೆ ಯಾವುದನ್ನು ಕಂಡರೂ ದುಃಖಮಯವಾಗಿರುವುದು. ಇವೆಲ್ಲ ಅವರವರ ಪೂರ್ವಕರ್ಮದ ಫಲವೆ. ಯೋಗಿಗಳ ಸಿದ್ಧಾಂತದಂತೆ ಎಲ್ಲಾ ವಿಧವಾದ ಪುಣ್ಯಗಳಿಂದ ಸುಖವೂ ಎಲ್ಲಾ ವಿಧವಾದ ಪಾಪಗಳಿಂದ ದುಃಖವೂ ಬರುವುದು. ಕೆಟ್ಟ ಕೆಲಸ ಮಾಡಿದವನು ಯಾವನೇ ಆಗಲಿ ದುಃಖರೂಪವಾದ ಅವುಗಳ ಫಲವನ್ನು ಖಂಡಿತವಾಗಿ ಅನುಭವಿಸುವನು.

## 14. ತೇಽಹ್ಲಾದಪರಿತಾಪಫಲಾಃ ಪುಣ್ಯಾಪುಣ್ಯಹೇತುತ್ವಾತ್

ಟೀ॥ ಇವುಗಳಿಂದ ಪುಣ್ಯದಿಂದ ಅಥವಾ ಪಾಪದಿಂದ ಉಂಟಾದ ಸುಖದುಃಖ–ರೂಪವಾದ ಫಲಗಳಾಗುವುವು.

## 15. ಪರಿಣಾಮತಾಪಸಂಸ್ಕಾರದುಃಖೈರ್ಗುಣವೃತ್ತಿವಿರೋಧಾಚ್ಚ ದುಃಖಮೇವ ಸರ್ವಂ ವಿವೇಕಿನಃ

ಟೀ॥ ಕೊನೆಯಲ್ಲಿ ಸುಖವು ಹೋದೀತೆಂಬ ತಾಪದ ರೂಪದಲ್ಲಿಯೊ ಸುಖಸಂಸ್ಕಾರಗಳಿಂದುಂಟಾಗುವ ಬಯಕೆಗಳ ರೂಪದಲ್ಲಿಯೊ ದುಃಖಗಳನ್ನು ತರುವುದರಿಂದಲೂ ಗುಣವೃತ್ತಿಗಳಿಗೆ ವಿರೋಧವಾಗಿರುವುದರಿಂದಲೂ ಸರ್ವವೂ ವಿವೇಕಿಯಾದವನಿಗೆ ದುಃಖವೆ

ವಿ॥ ಯೋಗಿಗಳು ಹೇಳುವುದೇನೆಂದರೆ, ವಿವೇಕವುಳ್ಳಾತನಿಗೆ–ವಿಚಾರ ಮಾಡಿ ನೋಡಬಲ್ಲಾತನಿಗೆ–ಸುಖದುಃಖಗಳೆರಡನ್ನೂ ನೋಡಲಾಗಿ ಇವೆಲ್ಲರಿಗೂ ಬರುವವೆಂತಲೂ ಒಂದರ ಹಿಂದೊಂದು ಬಂದು ಒಂದರಲ್ಲಿ ಒಂದು ಸೇರಿಕೊಳ್ಳುವುವೆಂದೂ ತೋರುವುದು. ಅವನಿಗೆ ಜನರು ಯಾವುದೋ ಒಂದು ಕೊಳ್ಳಿಯ ದೆವ್ವವನ್ನು ಓಡಿಸಿಕೊಂಡು ಹೋಗುತ್ತಿರುವರೆಂಬುದೂ, ಆಸೆಗಳನ್ನೆಲ್ಲ ಪೂರ್ಣಮಾಡಿಕೊಳ್ಳುವುದು ಎಂದಿಗೂ ಆಗುವುದಿಲ್ಲವೆಂಬುದೂ ಗೊತ್ತಾಗುವುದು. ಯುಧಿಷ್ಠಿರ ಮಹಾರಾಜನು ಒಂದು ಸಂದರ್ಭದಲ್ಲಿ "ಪ್ರತಿಕ್ಷಣದಲ್ಲಿಯೂ ಜನರು ಸಾಯುವುದು ಕಾಣುತ್ತಿದ್ದರೂ ನಾವು ಎಂದಿಗೂ ಸಾಯುವುದಿಲ್ಲವೆಂದು ಭಾವಿಸುತ್ತಿದ್ದೇವೆ. ಜಗತ್ತಿನಲ್ಲೆಲ್ಲ ಇದೇ ಆಶ್ಚರ್ಯವು" ಎಂದು ಹೇಳಿದನು. ಎಲ್ಲಾ ಕಡೆಯಲ್ಲಿಯೂ ಅವಿವೇಕಿಗಳು ತುಂಬಿರುವರು. ನಾವು ಒಬ್ಬರು ಮಾತ್ರ ಹಾಗಲ್ಲವೆಂದು ನಾವು ಮಹಾ ಪಂಡಿತರೆಂದೂ ಭಾವಿಸುತ್ತೇವೆ. ಎಲ್ಲರ ಪ್ರೇಮವೂ ಸ್ವಲ್ಪ ಹೊತ್ತಿನಲ್ಲಿ ಚಂಚಲವಾಗುತ್ತಿದ್ದರೂ ನಾವು ಮಾಡುವ ಪ್ರೇಮವೊಂದು ಎಂದೆಂದಿಗೂ ಇರುವುದೆಂದು ತಿಳಿದುಕೊಂಡಿರುವೆವು. ಅದು ಹೇಗೆ ನಿಜವಾದೀತು? ಪ್ರೇಮವೆಂಬುದು ಕೂಡ ಸ್ವಾರ್ಥದಿಂದ ಬಂದುದು. ಆದುದರಿಂದ ಯೋಗಿಗಳು ಕೊನೆಗೆ ಗಂಡಹೆಂಡರ ಪ್ರೇಮವೂ ಮಕ್ಕಳ ಮತ್ತು ಗೆಳೆಯರ ಪ್ರೇಮವೂ ಮೆಲ್ಲಮೆಲ್ಲಗೆ ಕಡಿಮೆಯಾಗುವುದೆಂದು ಹೇಳುವರು. ಈ ಜಗತ್ತಿನಲ್ಲಿ ಎಲ್ಲಕ್ಕೂ ನಾಶವುಂಟು ಎಲ್ಲವೂ ಕೊನೆಗೆ ಪ್ರೇಮವೂ–ಸಾಗದೆ ಹೋದರೆ ಮಾತ್ರವೇ ಮನುಷ್ಯನಿಗೆ ಇದ್ದಕ್ಕಿದ್ದ ಹಾಗೆ "ಆಹಾ ಈ ಪ್ರಪಂಚವು ಎಂಥಾ ಸ್ವಪ್ನ!" ಎನ್ನುವುದು ಗೊತ್ತಾಗುವುದು. ಆಗ ಸ್ವಲ್ಪ ವೈರಾಗ್ಯವು ಕಣ್ಣಿಗೆ ಬೀಳುವುದು; ಈ ಜಗತ್ತಿನಾಚೆ ಇರುವುದೊಂದಿಷ್ಟು ಗೋಚರವಾಗುವುದು. ಈ ಪ್ರಪಂಚವನ್ನು ಬಿಟ್ಟರೆ ಮತ್ತೊಂದು ಸಿಕ್ಕುವುದು. ಇದನ್ನು ಹಿಡಿದುಕೊಂಡೇ ಇದ್ದರೆ ಎಂದಿಗೂ ಸಿಕ್ಕುವುದಿಲ್ಲ ದೊಡ್ಡವನೆನ್ನಿಸಿಕೊಳ್ಳುವುದಕ್ಕೆ ವಿಷಯ ಸುಖಗಳನ್ನು–ಭೋಗಗಳನ್ನು–ಬಿಡದೆ ಆದ ಮಹಾತ್ಮ ಇದುವರೆಗೆ ಹುಟ್ಟಲಿಲ್ಲ. ನಿಜವಾಗಿ ದುಃಖಕ್ಕೆ ಕಾರಣವೇನೆಂದರೆ–ಪ್ರಕೃತಿಯ ಮೂರು ಗುಣಗಳು–ವಿರುದ್ಧವಾಗಿ ನಡೆಯುತ್ತ ಒಂದು ಆ ಕಡೆಗೆಳೆಯುವುದು ಇನ್ನೊಂದು ಈ ಕಡೆಗೆಳೆಯುವುದು ಹೀಗೆ ಮಾಡುವುದೆ. ಇದರಿಂದ ಶಾಶ್ವತ ಸುಖವೇ ಇಲ್ಲದಂತಾಗುವುದು.

## 16. ಹೇಯಂ ದುಃಖಮನಾಗತಮ್

ಟೀ॥ ಇನ್ನು ಬರದೆ ಇರುವ ದುಃಖವನ್ನು ತಪ್ಪಿಸಿಕೊಳ್ಳಬೇಕು.

ವಿ॥ ಕರ್ಮದಲ್ಲಿ ಸ್ವಲ್ಪ ಭಾಗವನ್ನು ಅನುಭವಿಸಿ ಆಗಿಬಿಟ್ಟಿದೆ; ಸ್ವಲ್ಪವನ್ನು ಈಗ ಅನುಭವಿಸುತ್ತಿದ್ದೇವೆ; ಮತ್ತೆ ಸ್ವಲ್ಪ ಭಾಗ ಮುಂದೆ ಫಲವನ್ನು ಕೊಡಬೇಕಾಗಿರುವುದು.

ಮೊದಲನೆಯದು ಆಗಿ ಹೋಗಿರುವುದು. ಎರಡನೆಯದನ್ನು ಅನುಭವಿಸಲೇಬೇಕು. ಇನ್ನು ಮೂರನೆಯದನ್ನು ಮಾತ್ರ ಜಯಿಸಿ ವಶಮಾಡಿಕೊಳ್ಳುವುದಕ್ಕಾಗುತ್ತದೆ. ಆದುದರಿಂದ ಇದಕ್ಕಾಗಿ ನಮ್ಮ ಪ್ರಯತ್ನವನ್ನೆಲ್ಲ ವಿನಿಯೋಗಿಸಬೇಕು. ಸಂಸ್ಕಾರಗಳನ್ನು ಅವುಗಳ ವಿರುದ್ಧವಾದ ವೃತ್ತಿಗಳಿಂದ ಗೆಲ್ಲಬೇಕೆಂದು ಪತಂಜಲಿಗಳು (2.10) ಹೇಳಿರುವುದಕ್ಕೆ ಇದೇ ಅಭಿಪ್ರಾಯ.

## 17. ದ್ರಷ್ಟೃದೃಶ್ಯಯೋಃ ಸಂಯೋಗೋ ಹೇಯ ಹೇತುಃ

ಟೀ|| ಯಾವುದನ್ನು ಬಿಡಬೇಕೋ ಅದಕ್ಕೆ ನೋಡುವವನು, ನೋಡತಕ್ಕದ್ದು ಇವೆರಡರ ಸಂಯೋಗವೇ ಕಾರಣ.

ವಿ|| ನೋಡುವವನೆಂದರೆ ಯಾರು? ಮನುಷ್ಯನ ಆತ್ಮನು–ಪುರುಷನು. ನೋಡತಕ್ಕದ್ದು ಯಾವುದು? ಮನಸ್ಸಿನಿಂದ ಮೊದಲುಮಾಡಿಕೊಂಡು ಸ್ಥೂಲವಾಗಿರುವ ಭೌತಿಕ ವಸ್ತುವಿನವರೆಗೆ ಇರುವ ಪ್ರಕೃತಿಯು. ಸುಖದುಃಖಗಳೆಲ್ಲ ಪುರುಷ ಮತ್ತು ಮನಸ್ಸು ಇವುಗಳ ಸಂಯೋಗದಿಂದ ಆಗುತ್ತವೆ. ಈ ಸಿದ್ಧಾಂತದಲ್ಲಿ ಪುರುಷನು ಶುದ್ಧನಾಗಿರುವನೆನ್ನು ವುದನ್ನು ನೆನಪಿನಲ್ಲಿಟ್ಟಿರಬೇಕು. ಪ್ರಕೃತಿಗೆ ಸೇರಿದಾಗ ಅದರಲ್ಲಿ ಪ್ರತಿಬಿಂಬಿಸುವುದರಿಂದ ಪುರುಷನು ಸುಖವನ್ನೊ ದುಃಖವನ್ನೊ ಅನುಭವಿಸುವಂತೆ ಕಾಣುವುದು.

## 18. ಪ್ರಕಾಶಕ್ರಿಯಾಸ್ಥಿತಿಶೀಲಂ ಭೂತೇನ್ದ್ರಿಯಾತ್ಮಕಂ ಭೋಗಾಪವರ್ಗಾರ್ಥಂ ದೃಶ್ಯಮ್

ಟೀ|| ಅನುಭವಿಸತಕ್ಕದ್ದು ಭೂತಗಳೂ ಇಂದ್ರಿಯಗಳೂ ಸೇರಿ ಆಗಿರುವುದು. ಅದು ಬೆಳಕು, ಕೆಲಸ, ಸುಮ್ಮನಿರುವುದು ಈ ಸ್ವರೂಪವುಳ್ಳದ್ದಾಗಿರುವುದು ಮತ್ತು (ಅನುಭವಿಸುವವನ) ಭೋಗಕ್ಕೂ ಮತ್ತು ಬಿಡುಗಡೆಗೂ ಕಾರಣವಾಗಿರುವುದು.

ವಿ|| ಅನುಭವಿಸತಕ್ಕದ್ದು ಎಂದರೆ ಪ್ರಕೃತಿಯು ಭೂತಗಳೂ ಇಂದ್ರಿಯಗಳೂ ಸೇರಿ ಆಗಿರುವುದು. ಭೂತಗಳೆಂದರೆ ಸ್ಥೂಲಭೂತಗಳೂ ಮತ್ತು ಸೂಕ್ಷ್ಮ ಭೂತಗಳೂ ಇವುಗಳಿಂದಲೆ ಸೃಷ್ಟಿಯೆಲ್ಲ ಆಗಿರುವುದು. ಇಂದ್ರಿಯಗಳು ಎಂದರೆ ಜ್ಞಾನೇಂದ್ರಿಯಗಳು, ಮನಸ್ಸು ಮೊದಲಾದವು. ಪ್ರಕೃತಿಯು–ಬೆಳಕು ಎಂದರೆ ಸತ್ತ್ವ, ಕೆಲಸವೆಂದರೆ ರಜಸ್ಸು, ಸುಮ್ಮನಿರುವುದೆಂದರೆ ತಮಸ್ಸು ಇವುಗಳ ಸ್ವರೂಪವಾಗಿರುವುದು. ಪ್ರಕೃತಿಯ ಉದ್ದೇಶವೇನು? ಪುರುಷನಿಗೆ ಅನುಭವವುಂಟಾಗಲೆಂಬುವುದೇ. ಪುರುಷನು ತನ್ನ ಹೆಚ್ಚಿನ ದೈವಿಕಸ್ವರೂಪವನ್ನು ಮರೆತಂತಿರುವನು. ದೇವತೆಗಳಿಗೆಲ್ಲ ಒಡೆಯನಾದ ಇಂದ್ರನು ಒಂದಾನೊಂದು ಕಾಲದಲ್ಲಿ ಕೆಸರಿನಲ್ಲಿ ಹೊರಳಾಡುವ ಹಂದಿಯಾಗಿದ್ದನೆಂದು ಒಂದು ಕಥೆ ಇರುವುದು. ಅವನಿಗೆ ಆಗ ಒಂದು ಹಂದಿ ಹೆಂಡತಿಯಾಯಿತು. ಎಷ್ಟೋ ಮರಿಗಳು ಹುಟ್ಟಿದವು. ಹೀಗೆ ಸುಖದಿಂದಿರುತ್ತಿದ್ದನು. ಅವನ ದುರವಸ್ಥೆಯನ್ನು ಕಂಡು ಕೆಲವು ದೇವತೆಗಳು "ನೀನು ದೇವತೆಗಳಿಗೆಲ್ಲ ಒಡೆಯನು. ದೇವತೆಗಳೆಲ್ಲ ನೀನು ಹೇಳಿದಂತೆ ಕೇಳುವರು. ಹೀಗಿರುವಲ್ಲಿ ನೀನು ಇಲ್ಲಿ ಏತಕ್ಕೆ ಇದ್ದೀಯೆ?" ಎನಲು ಇಂದ್ರನು "ಏನಾದರೂ ಆಗಲಿ. ನಾನು ಈಗ ಇರುವ

ಸ್ಥಿತಿಯಲ್ಲಿ ಸುಖವಾಗಿಯೇ ಇದ್ದೇನೆ. ಇಗೂ ಈ ಹೆಣ್ಣು ಹಂದಿಯೂ, ಈ ಮರಿಗಳೂ ಇರುವವರೆಗೆ ಸ್ವರ್ಗದಿಂದ ನನಗೆ ಆಗಬೇಕಾದುದೇನು?" ಎಂದನು. ಪಾಪ, ಆಗ ದೇವತೆಗಳಿಗೆ ಏನೂ ತೋಚದೆ ಹೋಯಿತು. ಕೊನೆಗೆ ಅವರು ಆ ಹಂದಿಗಳನ್ನೆಲ್ಲ ಒಂದೊಂದಾಗಿ ಕೊಂದುಹಾಕಬೇಕೆಂದು ನಿಶ್ಚಯಿಸಿದರು. ಎಲ್ಲಾ ಹಂದಿಗಳೂ ಸತ್ತ ಮೇಲೆ ಇಂದ್ರನು ಅಯ್ಯಯ್ಯೋ! ಎಂದು ಗೋಳಾಡುವುದಕ್ಕೆ ಮೊದಲು ಮಾಡಿದನು. ಆಗ ದೇವತೆಗಳು ಅವನ ಶರೀರವನ್ನು ಸೀಳಲು ಇಂದ್ರನು ಅದರಿಂದ ಈಚೆಗೆ ಬಂದು ತನಗೆ ಆಗಿದ್ದ ಭಯಂಕರ ಸ್ವಪ್ನವನ್ನು ಯೋಚಿಸಿಕೊಂಡು ಬಿದ್ದು ಬಿದ್ದು ನಗುವುದಕ್ಕಾರಂಭಿಸಿದನು. ದೇವತೆಗಳಿಗೆಲ್ಲ ಒಡೆಯನಾಗಿದ್ದ ಆತನು ಹಂದಿಯಾಗಿ ಹಂದಿಯ ಜನ್ಮವೆ ಜನ್ಮವೆಂದು ಭಾವಿಸಿದುದಕ್ಕೆ ಏನು ಹೇಳಬೇಕು? ಇದು ಹಾಗಿರಲಿ. ಪ್ರಪಂಚವೆಲ್ಲ ಹಂದಿಗಳಾಗಿಯೆ ಇರಬೇಕೆಂದು ತಿಳಿದುಕೊಂಡದ್ದನ್ನು ಏನು ಹೇಳೋಣ! ಪುರುಷನು ಪ್ರಕೃತಿಯೆ ತಾನೆಂದು ತಿಳಿದ ಕೂಡಲೆ ತಾನು ಶುದ್ಧನೆಂಬುದನ್ನೂ ಅನಂತನಾಗಿರುವವನೆಂಬುದನ್ನೂ ಮರೆತುಬಿಡುತ್ತಾನೆ. ಪುರುಷನು ಪ್ರೀತಿಸುವುದಿಲ್ಲ; ಪ್ರೇಮವೇ ಆಗಿರುವನು. ಅದು ಇರುವುದಿಲ್ಲ; ಇರುವಿಕೆಯೆ ಅದು. ಆತ್ಮವು ತಿಳಿಯುವುದೇ ಇಲ್ಲ; ತಿಳಿವೇ ಅದು. ಆತ್ಮವು ಪ್ರೀತಿಸುತ್ತದೆಯೆಂದೂ ಇರುತ್ತದೆಯೆಂದೂ ತಿಳಿಯುತ್ತದೆಯೆಂದೂ ಹೇಳುವುದು ತಪ್ಪು. ಪ್ರೇಮ, ಇರುವಿಕೆ, ತಿಳಿವು ಇವು ಪುರುಷನ ಗುಣಗಳಲ್ಲ. ಅದರ ಸ್ವರೂಪವೇ ಇವು. ಅವು ಮತ್ತೊಂದರಲ್ಲಿ ಪ್ರತಿಬಿಂಬಿಸಿದರೆ ಆ ವಸ್ತುವಿನ ಗುಣಗಳೆನ್ನಬಹುದು. ಆ ಪುರುಷನ, ಆ ಪರಮಾತ್ಮನ, ಹುಟ್ಟು ಸಾವುಗಳಿಲ್ಲದೆ ತನ್ನ ಮಹಿಮೆಯಲ್ಲಿಯೆ ಪ್ರತಿಷ್ಠಿತನಾಗಿರುವ ಆ ಅನಂತಸದ್ರೂಪನ, ಸ್ವರೂಪಗಳೇ ಅವು. ಆದರೆ ಅದು ತೀರ ಕೆಟ್ಟು "ನೀನು ಹಂದಿಯಲ್ಲ" ಎಂದು ಹೇಳುವುದಕ್ಕೆ ಹತ್ತಿರಕ್ಕೆ ಹೋಗುವುದರೊಳಗೆ ಗುರುಗುಟ್ಟುತ್ತ ಕಚ್ಚುವುದಕ್ಕೆ ಬರುವಂತಾಗಿರುವುದು.

ಈ ಮಾಯೆಯಲ್ಲಿ ಈ ಸ್ವಪ್ನ ಪ್ರಪಂಚದಲ್ಲಿರುವ ನಮ್ಮಗಳ ವಿಚಾರವೆಲ್ಲ ಹೀಗೆಯೆ. ಇದರಲ್ಲಿ ಸುಮ್ಮನೆ ಅಳುತ್ತ ಕರೆಯುತ್ತ ಸಂಕಟಪಡುತ್ತಿರುವುದೆ. ಕೆಲವು ಚಿನ್ನದ ಗೋಲಿಗಳನ್ನು ಉರುಳಬಿಟ್ಟಿರುತ್ತಾರೆ. ಪ್ರಪಂಚವೆಲ್ಲ ನನಗೆ ತನಗೆಂದು ಅವುಗಳ ಹಿಂದೆ ಕಚ್ಚಾಡುತ್ತ ಓಡುತ್ತಿರುವುದು. "ಯಾವ ಕಾಲಕ್ಕೂ ನಿಯಮಗಳ ನಿರ್ಬಂಧವು ನಿಮಗೆ ಇಲ್ಲ. ಸೃಷ್ಟಿಯಲ್ಲಿ ನಿಮಗೆ ಉಂಟಾಗಿರುವ ಬಂಧವೇ ಇಲ್ಲ" ಹೀಗೆಂದು ಯೋಗಿಯು ಹೇಳುತ್ತಾನೆ. ಇದನ್ನು ತಾಳ್ಮೆಯಿಂದ ತಿಳಿದುಕೊಳ್ಳಬೇಕು. ಪ್ರಕೃತಿಯೊಡನೆ ಸಂಯೋಗವಾಗುವುದರಿಂದ ಮನಸ್ಸು ಮತ್ತು ಪ್ರಪಂಚವೇ ತಾನೆಂದೂ ತಿಳಿದುಕೊಂಡು ಪುರುಷನು ತನಗೆ ದುಃಖವಾಯಿತೆಂದು ಕೊಳ್ಳುತ್ತಾನೆಂಬುದನ್ನು ಯೋಗಿಯು ತೋರಿಸುತ್ತಾನೆ. ಇದಲ್ಲದೆ ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಭವವೇ ಮಾರ್ಗವೆಂಬುದನ್ನು ಯೋಗಿಯು ತೋರಿಸುತ್ತಾನೆ. ಈ ಅನುಭವವೆಲ್ಲ ಆಗಿಯೇ ತೀರಬೇಕು. ಆದರೆ ಅವನ್ನು ಬೇಗ ಮುಗಿಸಿಬಿಡಿ. ಈ ಬಲೆಗೆ ಬಿದ್ದ ಮೇಲೆ ತಪ್ಪಿಸಿಕೊಳ್ಳಬೇಕು. ನಾವು ಬೋನಿಗೆ ಬಿದ್ದಿದ್ದೇವೆ. ಇನ್ನು ಬಿಡುಗಡೆ ಹೊಂದಬೇಕು. ಆದುದರಿಂದ ಹೆಂಡಿರು, ಮಕ್ಕಳು, ಸ್ನೇಹಿತರು, ಚಿಕ್ಕ ಚಿಕ್ಕ ಪ್ರೀತಿಗಳು ಇವುಗಳ ಅನುಭವವನ್ನು ಮಾಡಿಕೊಳ್ಳಬೇಕು. ಆದರೆ ಅವುಗಳಿಂದ ಸುರಕ್ಷಿತವಾಗಿ ಪಾರಾಗಬೇಕಾದರೆ ನಮ್ಮ ನಿಜಸ್ವರೂಪವನ್ನು ಮರೆಯದೆ ಇರಬೇಕು. ಇದು ಒಂದು ಗಳಿಗೆಯು ಬಾಳೆಂಬುದನ್ನೂ ಅದನ್ನು ಅನುಭವಿಸಿ ಮುಂದಕ್ಕೆ ಹೋಗಬೇಕಾಗಿದೆಯೆಂಬುದನ್ನೂ ಎಂದಿಗೂ ಮರೆಯದೆ ಇರಬೇಕು. ಅನುಭವವೆಂಬುದು–

ಸುಖ ದುಃಖಗಳ ಅನುಭವವೆಂಬುದು–ದೊಡ್ಡ ಗುರು. ಆದರೆ ಅದು ಅನುಭವವೇ ಹೊರತು ಇನ್ನೇನೂ ಅಲ್ಲವೆಂಬುದನ್ನು ಮರೆಯದೆ ಇರಬೇಕು. ಈ ಅನುಭವದಿಂದ ಮೆಲ್ಲ ಮೆಲ್ಲಗೆ ಒಂದಾನೊಂದು ಸ್ಥಿತಿ ಬರುವುದು. ಆಗ ಎಲ್ಲವೂ ತುಚ್ಛವಾಗಿ ಪುರುಷನು ಎಷ್ಟು ದೊಡ್ಡವನಾಗಿ ಕಾಣುವನೆಂದರೆ ಈ ಜಗತ್ತೆಲ್ಲ ಅವನಿಗೆ ಹೋಲಿಸಿದರೆ ಸಮುದ್ರದಲ್ಲಿ ಒಂದು ತೊಟ್ಟಿನಂತಾಗಿ ನಿಷ್ಪ್ರಯೋಜನವೆಂದು ಚೆನ್ನಾಗಿ ಗೊತ್ತಾಗಿ ತನಗೆ ತಾನೇ ಹೋಗಿ ಬಿಡುವುದು. ನಮಗೆ ಬೇರೆ ಬೇರೆ ಅನುಭವಗಳು ಆಗಿಯೇ ತೀರಬೇಕೆಂಬುದೇನೋ ನಿಜ. ಆದರೆ ಕೊನೆಗೆ ಬರುವ ಪರಮಾರ್ಥಸ್ಥಿತಿಯನ್ನು ಮಾತ್ರ ಎಂದಿಗೂ ಮರೆಯಬಾರದು.

## 19. ವಿಶೇಷಾವಿಶೇಷಲಿಙ್ಗಮಾತ್ರಾಲಿಙ್ಗಾನಿ ಗುಣಪರ್ವಾಣಿ.

ಟೀ॥ ಗೊತ್ತಾಗಿರುವುದು, ಗೊತ್ತಾಗದಿರುವುದು, ಬರೀ ಗುರ್ತು ಇರುವುದು, ಗುರ್ತಿಲ್ಲದುದು ಇವು ಗುಣಗಳ ಸ್ಥಿತಿಗಳು.

ವಿ॥ ಯೋಗದರ್ಶನಕ್ಕೆ ಸಾಂಖ್ಯ ದರ್ಶನವೇ ಆಧಾರವೆಂದು ಹಿಂದೆಯೆ ಹೇಳಿರುತ್ತದೆ. ಇಲ್ಲಿ ಮತ್ತೆ ಸಾಂಖ್ಯ ಸಿದ್ಧಾಂತದಲ್ಲಿ ಹೇಳಿರುವ ಸೃಷ್ಟಿ ಕ್ರಮವನ್ನು ತಿಳಿಸುತ್ತೇನೆ. ಸಾಂಖ್ಯರ ಮತದಲ್ಲಿ ಪ್ರಕೃತಿಯು ಜಗತ್ತಿಗೆ ಉಪಾದಾನಕಾರಣವೂ[1] ನಿಮಿತ್ತ ಕಾರಣವೂ ಆಗಿರುವುದು. ಪ್ರಕೃತಿಯಲ್ಲಿ ಸತ್ತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳಿವೆ. ಯಾವುದು ಕಪ್ಪಾಗಿರುವುದೊ, ಮೂಢವಾಗಿ ಮಂಕಾಗಿರುವುದೊ ಅದೆಲ್ಲ ತಮಸ್ಸು. ರಜಸ್ಸೆಂಬುದು ಚಟುವಟಿಕೆಯು. ಸತ್ತ್ವವೆಂಬುದು ಶಾಂತಿ–ಬೆಳಕಿನ ರೂಪವು. ಸೃಷ್ಟಿಗೆ ಪೂರ್ವದಲ್ಲಿ ಪ್ರಕೃತಿಗೆ ಅವ್ಯಕ್ತವು (ಗೊತ್ತಾಗದೆ ಇರುವುದು) ಎಂದು ಹೆಸರಿಟ್ಟಿರುವರು. ಇದರಲ್ಲಿ ನಾಮರೂಪಗಳೆಂಬ ಭೇದವಿರುವುದಿಲ್ಲ. ಅದರಲ್ಲಿ ಈ ಮೂರು ಗುಣಗಳೂ ಸಮತೋಲದಲ್ಲಿರುವುವು. ಆಮೇಲೆ ಏರುಪೇರಾಗಿ ಮೂರು ಗುಣಗಳೂ ಬಗೆ ಬಗೆಯಲ್ಲಿ ಸೇರಿಕೊಂಡು ಜಗತ್ತಾಗುವುದು. ಪ್ರತಿಯೊಬ್ಬನಲ್ಲಿಯೂ ಈ ಮೂರು ಗುಣಗಳಿರುತ್ತವೆ. ಸತ್ತ್ವಗುಣವು ಹೆಚ್ಚಿದಾಗ ಜ್ಞಾನವೂ ರಜಸ್ಸಿನಿಂದ ಚಟುವಟಿಕೆಯೂ ತಮಸ್ಸಿನಿಂದ ಮಬ್ಬು, ಬೇಸರ, ಸೋಮಾರಿತನ, ಮಂಕುತನಗಳೂ ಬರುತ್ತವೆ. ಸಾಂಖ್ಯಮತದಂತೆ ಈ ಮೂರುಗುಣಗಳಿಂದ ಕೂಡಿದ ಪ್ರಕೃತಿಯ ಉತ್ತಮ ವಿಕಾರವನ್ನು ಮಹತ್ತು (ಬುದ್ಧಿ) ಎಂದು ಕರೆಯುತ್ತಾರೆ. ಈ ಬುದ್ಧಿಯು ಒಟ್ಟುಬುದ್ಧಿ[2], ಪ್ರತಿಯೊಂದು ಮನುಷ್ಯ ಭಾಗವೂ ಇದರ ಭಾಗವು. ಸಾಂಖ್ಯ ಸಿದ್ಧಾಂತದಲ್ಲಿ ಮನಸ್ಸಿಗೂ ಬುದ್ಧಿಗೂ ಬಹಳ ವ್ಯತ್ಯಾಸವಿದೆ. ಹೊರಗೆ ಉಂಟಾದ ತಿಳಿವುಗಳನ್ನು ಬುದ್ಧಿಯೆಂಬ ವ್ಯಷ್ಟಿಮಹತ್ತಿಗೆ ಕೊಡುವುದೇ ಮನುಷ್ಯನ ಕೆಲಸ. ಬುದ್ಧಿಯು ಅದೇನೆಂಬುದನ್ನು ಗೊತ್ತುಮಾಡುತ್ತದೆ. ಮಹತ್ತಿನಿಂದ ಅಹಂಕಾರವೂ ಅಹಂಕಾರದಿಂದ ಸೂಕ್ಷ್ಮಭೂತಗಳೂ ಆಗುವುವು. ಈ ಸೂಕ್ಷ್ಮ ಭೂತಗಳು ಒಂದಕ್ಕೊಂದು

---

1. ಒಂದು ವಸ್ತುವನ್ನು ಮಾಡುವುದಕ್ಕೆ ಏನನ್ನು ತೆಗೆದುಕೊಳ್ಳಬೇಕೋ ಅದಕ್ಕೆ ಉಪಾದಾನ ಕಾರಣವೆಂದು ಹೆಸರು. ಮಡಕೆಯಾಗುವುದಕ್ಕೆ ಮಣ್ಣನ್ನು ತೆಗೆದುಕೊಳ್ಳಬೇಕು. ಇದು ಮಡಕೆಯ ಉಪಾದಾನಕಾರಣ. ಮಡಕೆಯಾಗುವುದಕ್ಕೆ ಕುಂಬಾರನೂ ಒಂದು ಕಾರಣವಷ್ಟೆ. ಇವನು ಉಪಾದಾನಕಾರಣನಲ್ಲ; ನಿಮಿತ್ತ ಕಾರಣನು.

2. ಒಟ್ಟನ್ನು ಸಮಷ್ಟಿಯೆಂದೂ ಅದರಲ್ಲಿ ಬಿಡಿಗಳನ್ನು ವ್ಯಷ್ಟಿಯೆಂದೂ ಶಾಸ್ತ್ರದಲ್ಲಿ ಕರೆಯುವರು. ಕಾಡು ಎಂಬುದು ಸಮಷ್ಟಿ; ಗಿಡವೆಂಬುದು ವ್ಯಷ್ಟಿ. ರಾಶಿಯೆಂಬುದು ಸಮಷ್ಟಿ; ಕಾಳು ಎಂಬುದು ವ್ಯಷ್ಟಿ. ಮಹತ್ತೆಂಬುದು ಸಮಷ್ಟಿ ಬುದ್ಧಿ; ನಮ್ಮಗಳ ಬುದ್ಧಿಯು ವ್ಯಷ್ಟಿಬುದ್ಧಿ.

ಸೇರಿಕೊಂಡು ಸ್ಥೂಲ ಭೂತಗಳೆಂಬ ಹೊರಗಿನ ಪ್ರಪಂಚವಾಗುವುದು. ಬುದ್ಧಿಯಿಂದ ಕಲ್ಲಿನವರೆಗೂ ಎಲ್ಲವೂ ಒಂದೇ ವಸ್ತುವಿನ ವಿಕಾರವು; ಅವುಗಳು ಸ್ಥೂಲವಾಗಿರುವುದರಿಂದ ಅಥವಾ ಸೂಕ್ಷ್ಮವಾಗಿರುವುದರಿಂದ ಒಂದಕ್ಕೊಂದು ಭೇದವಿರುವುದು ಎಂಬುದೇ ಸಾಂಖ್ಯ ಸಿದ್ಧಾಂತವು. ಸೂಕ್ಷ್ಮವಾಗಿರುವುದು ಕಾರಣ. ಸ್ಥೂಲವಾಗಿರುವುದು ಕಾರ್ಯ[1]. ಸಾಂಖ್ಯ ಶಾಸ್ತ್ರದಲ್ಲಿ ಪ್ರಕೃತಿಯನ್ನೆಲ್ಲ ಮೀರಿ ಪುರುಷನಿರುವನು. ಇವನು ಪ್ರಕೃತಿಯಿಂದಾದವನಲ್ಲ; ಬುದ್ಧಿ, ಮನಸ್ಸು, ತನ್ಮಾತ್ರೆಗಳು, ಮಹಾಭೂತಗಳು ಇವುಗಳಲ್ಲಿ ಯಾವುದರಂತೆಯೂ ಇಲ್ಲ. ಇವುಗಳಲ್ಲಿ ಯಾವುದರಂತೆಯೂ ಇಲ್ಲದೆ ಸಂಪೂರ್ಣವಾಗಿ ಬೇರೆ ಆದ ಎಲ್ಲಾ ವಿಧದಿಂದಲೂ ಭಿನ್ನವಾದ ರೂಪವುಳ್ಳದ್ದಾಗಿರುವನು. ಆದುದರಿಂದ ಪುರುಷನು ಮರಣವಿಲ್ಲದೆ ಇರಬೇಕಾಯಿತು. ಏಕೆಂದರೆ ಅವನು ಬೇರೆ ಪದಾರ್ಥಗಳ ಸೇರಿಕೆಯಿಂದ ಆಗಿಲ್ಲ. ಯಾವುದು ಇತರ ವಸ್ತುಗಳ ಸೇರಿಕೆಯಿಂದ ಆಗಿಲ್ಲವೊ ಅದು ನಾಶವಾಗಲಾರದು. ಇಂಥ ಪುರುಷರು ಅಥವಾ ಆತ್ಮರು ಅನೇಕರಿರುವರು.

ಇನ್ನು ಗೊತ್ತಾಗಿರುವುದು, ಗೊತ್ತಾಗದಿರುವುದು, ಬರೀ ಗುರ್ತಿರುವುದು, ಗುರ್ತಿಲ್ಲದಿರುವುದು ಎಂಬಿವುಗಳು ಗುಣಗಳ ಸ್ಥಿತಿಗಳು–ಎಂಬ ಸೂತ್ರವನ್ನು ವಿಚಾರ ಮಾಡೋಣ. ಇಲ್ಲಿ ಗೊತ್ತಾಗಿರುವುದು ಎಂದರೆ ಸ್ಥೂಲಭೂತಗಳು. ಇವು ನಮ್ಮ ಇಂದ್ರಿಯಗಳಿಗೆ ಗೊತ್ತಾಗುತ್ತವೆ. ಗೊತ್ತಾಗದಿರುವುದು ಎಂದರೆ ಸಾಮಾನ್ಯ ಜನರ ಇಂದ್ರಿಯಕ್ಕೆ ಗೊತ್ತಾಗದೆ ಇರುವ ಸೂಕ್ಷ್ಮ ವಸ್ತುಗಳಾದ ತನ್ಮಾತ್ರೆಗಳು. ಆದರೆ ಯೋಗಾಭ್ಯಾಸದಿಂದ ಕೆಲವು ಕಾಲದ ಮೇಲೆ ಇಂದ್ರಿಯ ಜ್ಞಾನಗಳೂ ಸೂಕ್ಷ್ಮವಾಗಿ ಈ ತನ್ಮಾತ್ರೆಗಳನ್ನು ಕಣ್ಣಾರೆ ಕಾಣಬಹುದೆಂದು ಪತಂಜಲಿಗಳು ಹೇಳುತ್ತಾರೆ. ಹೇಗೆಂದರೆ ಪ್ರತಿಯೊಬ್ಬನಲ್ಲಿಯೂ ಒಂದು ಬೆಳಕಿರುವುದೆಂಬುದನ್ನು ನೀವು ಕೇಳಿರಬಹುದು. ಪ್ರತಿಯೊಂದು ಪ್ರಾಣಿಯಿಂದಲೂ ಒಂದು ಬಗೆಯ ಬೆಳಕು ಹೊರಟು ಬರುತ್ತಿರುವುದು. ಅದು ಯೋಗಿಗೆ ಕಾಣಿಸುವುದೆಂದು ಇವರು ಹೇಳುತ್ತಾರೆ. ನಮಗೆಲ್ಲರಿಗೂ ಇದು ಕಾಣಿಸುವುದಿಲ್ಲ. ಈ ತನ್ಮಾತ್ರೆಗಳು ಹೊರಕ್ಕೆ ಹೊರಡುತ್ತಲೆ ಇರುವುವು. ಇದಕ್ಕೆ ಹೂವಿನಿಂದ ಸಣ್ಣ ಸಣ್ಣ ಅಣುಗಳು ಹೊರಕ್ಕೆ ಬರುತ್ತಿರುವುದನ್ನು ದೃಷ್ಟಾಂತವೆನ್ನಬಹುದು. ಹೂವಿನ ಕಣಗಳು ಹೊರಕ್ಕೆ ಬರುತ್ತಿರುವುದರಿಂದಲೆ ಅದರ ವಾಸನೆ ನಮಗೆ ಬರುವುದು. ನಮ್ಮ ಜೀವಿತ ಕಾಲದಲ್ಲಿ ಪ್ರತಿಯೊಂದು ದಿನವೂ ನಮ್ಮಿಂದ ಎಷ್ಟೋ ಒಳ್ಳೆಯ ವಾಸನೆಗಳು ಅಥವಾ ಕೆಟ್ಟ ವಾಸನೆಗಳು ಹೊರಕ್ಕೆ ಬರುತ್ತಲೆ ಇರುವುವು. ಇದರಿಂದಲೆ ಮನುಷ್ಯರಿಗೆ ಹೇಗೊ ದೇವಸ್ಥಾನಗಳನ್ನು ಕಟ್ಟಬೇಕೆಂದು ಅನ್ನಿಸಿತು. ದೇವರನ್ನು ಪೂಜಿಸುವುದಕ್ಕೆ ಮನುಷ್ಯರು ಗುಡಿಗಳನ್ನೇಕೆ ಕಟ್ಟಬೇಕು? ಆತನನ್ನು ಎಲ್ಲಾ ಕಡೆಯಲ್ಲಿಯೂ ಪೂಜಿಸಬಾರದೆ? ನಿಜವಾದ ಕಾರಣ ಗೊತ್ತಾಗದೆ ಹೋದರೂ ಜನರಿಗೆ ಹೇಗೋ ದೇವರ ಪೂಜೆಯಾಗುವ ಸ್ಥಳದಲ್ಲಿ ಒಳ್ಳೆಯ ತನ್ಮಾತ್ರೆಗಳು ತುಂಬಿರುವವೆಂದು ಗೊತ್ತಾಯಿತು. ಪ್ರತಿದಿನವೂ ಜನರು ಅಲ್ಲಿಗೆ ಹೋಗುತ್ತಿರುವರು. ಎಷ್ಟೆಷ್ಟು ಹೆಚ್ಚಾಗಿ ಅಲ್ಲಿಗೆ ಹೋಗುತ್ತಿದ್ದರೆ ಅವರಿಗೆ ಅಷ್ಟಷ್ಟು ಮನಶ್ಶುದ್ಧಿಯಾಗುವುದು; ಆ ಸ್ಥಳವೂ ಅಷ್ಟು ಪವಿತ್ರವಾಗುವುದು. ತನ್ನಲ್ಲಿ ಬಹಳ ಸತ್ತ್ವ ಗುಣವಿಲ್ಲದವನು ಯಾರಾದರೂ ಅಲ್ಲಿಗೆ ಹೋದರೆ ಆ ಸ್ಥಳದ ಮಹಿಮೆಯಿಂದ ಅವನಲ್ಲಿ

1. ಇಲ್ಲಿ ಕಾರ್ಯವೆಂದರೆ ಆಗಿರುವ ವಸ್ತು. ಕಾರಣವೆಂದರೆ ಯಾವುದರಿಂದ ಆಗಿರುವುದೊ ಅದು. ಮಣ್ಣು ಕಾರಣ; ಮಡಕೆ ಕಾರ್ಯ.

ಸತ್ತ್ವವುದಯಿಸುವುದು. ದೇವಾಲಯಗಳೂ ಕ್ಷೇತ್ರಗಳೂ ಪವಿತ್ರವಾಗಿರುವುದಕ್ಕೆ ಇದೇ ಕಾರಣ. ಆದರೆ ಇವು ಪವಿತ್ರವಾಗಬೇಕಾದರೆ ಪವಿತ್ರ ಜನರು ಅಲ್ಲಿ ಸೇರುತ್ತಿರಬೇಕೆಂಬುದನ್ನು ನೆನಪಿಡಬೇಕು. ಮನುಷ್ಯರಲ್ಲಿ ಒಂದು ತೊಂದರೆಯೇನೆಂದರೆ ಇವರು ಮೊದಲಿನ ಅರ್ಥವನ್ನು ಮರೆತು ಎತ್ತಿಗಿಂತ ಮೊದಲು ಗೋಣಿಯನ್ನು ಹಾರಿಸುವರು. ಈ ಸ್ಥಳವನ್ನು ಪವಿತ್ರ ಮಾಡಿದವರು ಮನುಷ್ಯರು. ಈ ಕಾರ್ಯವೇ ಕಾರಣವಾಗಿ ಜನರನ್ನು ಪವಿತ್ರಗೊಳಿಸಿತು. ಬರೀ ಪಾಪಿಷ್ಟರೇ ಅಲ್ಲಿಗೆ ಹೋಗುತ್ತಿದ್ದರೆ ಅದು ಇತರ ಸ್ಥಳಗಳಂತೆಯೇ ಕೆಟ್ಟದ್ದಾಗಿರುವುದು. ದೇವಾಲಯವಾಗುವುದು ಜನರಿಂದಲೆ ಹೊರತು ಕಟ್ಟಡದಿಂದಲ್ಲ. ಇದನ್ನು ನಾವು ಯಾವಾಗಲೂ ಮರೆಯುತ್ತಿದ್ದೇವೆ. ಈ ಸತ್ತ್ವಗುಣವು ವಿಶೇಷವಾಗಿರುವ ಜ್ಞಾನಿಗಳಿಂದ ಮತ್ತು ಮಹಾತ್ಮರುಗಳಿಂದ ಇದು ಹೊರಟು ಹಗಲಿರುಳೂ ಅವರ ಸುತ್ತಮುತ್ತಲಿರುವವರ ಮೇಲೆ ಉತ್ತಮ ಪರಿಣಾಮವನ್ನು ಮಾಡುತ್ತಿರುವುದು. ಒಬ್ಬನು ಬಹಳ ಪರಿಶುದ್ಧನೆಂದರೆ ಅವನ ಶುದ್ಧಿಯು ಮುಟ್ಟಿ ನೋಡುವುದಕ್ಕೆ ಕೂಡ ಆಗುವಂತೆ ಆಗುವುದು. ಅವನ ಹತ್ತಿರಕ್ಕೆ ಯಾರೇ ಬರಲಿ ಅವರೆಲ್ಲ ಪರಿಶುದ್ಧರಾಗುವರು.

ಇನ್ನು ಬರೀ ಗುರ್ತಿರುವುದು ಎಂದರೆ ಬುದ್ಧಿಯು. ಈ ಬರೀ ಗುರ್ತಿರುವುದೆಂಬುದು ಪ್ರಕೃತಿಯ ಮೊದಲನೆಯ ವಿಕಾರವು. ಇದರಿಂದಲೆ ಉಳಿದ ವಿಕಾರಗಳೆಲ್ಲ ಹುಟ್ಟುವುವು. ಕೊನೆಯ ಸ್ಥಿತಿಯು ಗುರ್ತಿಲ್ಲದುದು. ಈ ವಿಷಯದಲ್ಲಿ ಈಗಿನ ಭೌತಿಕಶಾಸ್ತ್ರಕ್ಕೂ ಧರ್ಮಗಳಿಗೂ ದೊಡ್ಡ ವ್ಯತ್ಯಾಸವಿರುವಂತೆ ಕಾಣುವುದು. ಜಗತ್ತು ಬುದ್ಧಿಯಿಂದ ಬಂತೆಂಬ ಭಾವನೆಯು ಪ್ರತಿಯೊಂದು ಧರ್ಮದಲ್ಲಿಯೂ ಉಂಟು. ದೇವರೊಬ್ಬನಿದ್ದಾನೆಂಬುವ ವಾದವನ್ನು ಕೇವಲ ಮನಶ್ಶಾಸ್ತ್ರ ರೀತಿಯಿಂದ ದೇವರೊಬ್ಬ ಮನುಷ್ಯನೆಂಬುದನ್ನು ಬಿಟ್ಟು ಯೋಚಿಸಿದರೆ ಈ ವಾದದಲ್ಲಿ ಜ್ಞಾನವೇ ಮೊದಲು ಸೃಷ್ಟಿಯಾಗುವುದೆಂತಲೂ ಈ ಜ್ಞಾನದಿಂದ ಸ್ಥೂಲಭೂತಗಳೆಲ್ಲ ಬಂದವೆಂತಲೂ ಈ ವಾದದಿಂದ ಗೊತ್ತಾಗುವುದು. ಈಗಿನ ಶಾಸ್ತ್ರಕಾರರು ಜ್ಞಾನವೇ ಕೊನೆಯದೆನ್ನುತ್ತಾರೆ. ಇವರು ಅಚೇತನ ಪ್ರಾಣಿಗಳು ಮೆಲ್ಲಮೆಲ್ಲಗೆ ಪ್ರಾಣಿಗಳಾಗಿ ಪರಿಣಮಿಸುವವೆಂದೂ ಆಮೇಲೆ ಪ್ರಾಣಿಗಳು ಮನುಷ್ಯರಾಗುವವೆಂದೂ ಹೇಳುತ್ತಾರೆ. ಹೀಗೆ ಧಾರ್ಮಿಕ ಮತ್ತು ಭೌತಿಕ ಶಾಸ್ತ್ರೀಯ ಸಿದ್ಧಾಂತಗಳು ಪರಸ್ಪರ ವಿರುದ್ಧವಾಗಿರುವಂತೆ ಕಂಡರೂ ಇವೆರಡೂ ನಿಜ. ಅ–ಬ–ಅ–ಬ–ಅ–ಬ–ಇತ್ಯಾದಿಯಾಗಿ ತುದಿಮೊದಲಿಲ್ಲದ ಒಂದು ಸಾಲಿದೆ ಎಂದಿಟ್ಟುಕೊಳ್ಳಿ. ಇಲ್ಲಿ[1] ಅಕಾರವು ಮೊದಲೊ ಬಕಾರವು ಮೊದಲೊ ಎಂದು ವಿಚಾರಿಸೋಣ. ಸಾಲು ಅ–ಬ– . . ಎಂದು ತೆಗೆದುಕೊಂಡರೆ ಅಕಾರವೇ ಮೊದಲೆನ್ನಬೇಕು. ಆದರೆ ಸಾಲು ಬ–ಅ– . . . ಹೀಗೆಂದು ತೆಗೆದುಕೊಂಡರೆ ಬಕಾರವೇ ಮೊದಲಾಗುವುದು. ಅದು ನಾವು ಯೋಚನೆ ಮಾಡಿದಂತೆ ಹೋಗುತ್ತದೆ. ಜ್ಞಾನವು ಪರಿಣಾಮವಾಗಿ ಸ್ಥೂಲವಸ್ತುವಾಗುವುದು. ಈ ವಸ್ತು ಮತ್ತೆ ಜ್ಞಾನದಲ್ಲಿಯೇ ಲಯವಾಗುವುದು. ಹೀಗೆ ನಡೆಯುತ್ತಲೆ ಇರುವುದು. ಸಾಂಖ್ಯರೇ ಮೊದಲಾದ ಧಾರ್ಮಿಕ ಜನರು ಜ್ಞಾನವನ್ನು ಮೊದಲಿಟ್ಟು ಚೇತನ, ಜಡ ಹೀಗೆ ಕ್ರಮವನ್ನು

---

1. ಬೀಜ ಮೊದಲೊ ವೃಕ್ಷ ಮೊದಲೊ? ಸುತ್ತಿಗೆ ಮೊದಲೊ ಇಕ್ಕಳ ಮೊದಲೊ? ಮೊದಲಾದ ಪ್ರಶ್ನೆಗಳೂ ಇಂಥವೆ.

ಹೇಳುವರು. ಭೌತಿಕ ಶಾಸ್ತ್ರಜ್ಞರು ಜಡ ಪದಾರ್ಥಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಮೊದಲು ಜಡ ಆಮೇಲೆ ಜ್ಞಾನವೆನ್ನುತ್ತಾರೆ. ಇವೆರಡೂ ಒಂದೇ ಸರಪಣಿಗೆ ಸೇರಿದವು. ಆದರೆ ಇಂಡಿಯಾದ ತತ್ತ್ವಶಾಸ್ತ್ರದಲ್ಲಿ ಜ್ಞಾನ ಮತ್ತು ಜಡ ಇವೆರಡಕ್ಕೂ ಆಚೆ ಹೋಗಿ ಬುದ್ಧಿಗೆ ಆಚೆ ಇರತಕ್ಕದ್ದಾಗಿಯೂ ಬುದ್ಧಿಯನ್ನು ಪ್ರಕಾಶ ಮಾಡುವುದಾಗಿಯೂ ಇರುವ ಪುರುಷ ಅಥವಾ ಆತ್ಮ ಎಂಬ ಬೇರೊಂದು ವಸ್ತುವನ್ನು ಅಂಗೀಕರಿಸಿದೆ.

## 20. ದ್ರಷ್ಟಾದೃಶಿಮಾತ್ರಃ ಶುದ್ಧೋಽಪಿ ಪ್ರತ್ಯಯಾನುಪಶ್ಯಃ

ಟೀ|| ನೋಡುವವನು ಜ್ಞಾನಮಾತ್ರನಾಗಿರುವನು ಮತ್ತು ಶುದ್ಧನಾಗಿದ್ದರೂ ಬುದ್ಧಿಯನ್ನನುಸರಿಸಿ ನೋಡುತ್ತಾನೆ.

ವಿ|| ಇದೂ ಸಾಂಖ್ಯ ಸಿದ್ಧಾಂತವೆ. ಆ ಸಿದ್ಧಾಂತದಲ್ಲಿ ಅತ್ಯಂತ ಕೀಳು ರೂಪ ಮೊದಲಾಗಿ ಬುದ್ಧಿಯವರೆಗೆ ಇರುವುದೆಲ್ಲ ಪ್ರಕೃತಿಯೆಂದು ಹಿಂದೆಯೆ ಗೊತ್ತಾಯಿತಷ್ಟೆ. ಪ್ರಕೃತಿಯನ್ನು ಮೀರಿ ಗುಣಗಳಿಲ್ಲ; ಪುರುಷರು (ಆತ್ಮರು) ಇರುತ್ತಾರೆ. ಹಾಗಾದರೆ ಆತ್ಮಕ್ಕೆ ಸುಖವಾಗುವಂತೆ ಅಥವಾ ದುಃಖವಾಗುವಂತೆ ಕಾಣುವುದು ಹೇಗೆ? ಎಂದರೆ ಪ್ರತಿಬಿಂಬಿಸುವುದರಿಂದ. ಪರಿಶುದ್ಧವಾದ ಸ್ಫಟಿಕದ ಹತ್ತಿರ ಒಂದು ಕೆಂಪುಹೂವನ್ನು ಇಟ್ಟರೆ ಸ್ಫಟಿಕವೂ ಕೆಂಪಾಗಿರುವಂತೆ ಕಾಣಿಸುವುದು. ಇದರಂತೆ ಸುಖದುಃಖಗಳೆಂಬಿವು ಪ್ರತಿಬಿಂಬ ಮಾತ್ರವಾಗಿರುವುವು. ಆತ್ಮನಲ್ಲಿಯೆ ಯಾವ ಬಣ್ಣವೂ ಇಲ್ಲ. ಪುರುಷನು ಪ್ರಕೃತಿಯಿಂದ ಬೇರೆಯಾಗಿದ್ದಾನೆ. ಪ್ರಕೃತಿಯೇ ಒಂದು ಪದಾರ್ಥ; ಪುರುಷನೇ ಒಂದು ಪದಾರ್ಥ. ಇವು ಎಂದೆಂದಿಗೂ ಬೇರೆ ಬೇರೆ ಆಗಿರುವುವು. ಬುದ್ಧಿಯೆಂಬುದು ಮಿಶ್ರವಸ್ತುವೆಂದೂ ಅದು ಹೆಚ್ಚುವುದೂ ತಗ್ಗುವುದೂ ಉಂಟೆಂದೂ ಶರೀರವು ಮಾರ್ಪಡುವಂತೆಯೆ ಅದೂ ಮಾರ್ಪಡುವುದೆಂದೂ ಇದರ ಸ್ವಭಾವವೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ಶರೀರದ ಸ್ವಭಾವದಂತೆಯೆ ಇರುವುದೆಂದೂ ಸಾಂಖ್ಯರು ಹೇಳುತ್ತಾರೆ. ಶರೀರಕ್ಕೆ ಬೆರಳಿನ ಉಗುರು ಹೇಗೋ ಹಾಗೆ ಬುದ್ಧಿಗೆ ಶರೀರವು ಸಂಬಂಧಿಸಿರುವುದು. ಉಗುರು ಶರೀರದ ಭಾಗವೇ ಅಹುದು. ಆದರೆ ನೂರು ಸಲ ಕತ್ತರಿಸಿದರೂ ಶರೀರವು ಇದ್ದೇ ಇರುವುದು. ಹೀಗೆ ಬುದ್ಧಿಯೆಂಬುದು ಯುಗಯುಗಗಳಲ್ಲಿಯೂ ಇರುವುದು. ಆದರೆ ಶರೀರವನ್ನು ಕಿತ್ತು ಹಾಕಬಹುದು; ಬಿಟ್ಟುಬಿಡಬಹುದು. ಹೀಗಿದ್ದಾಗ ಬುದ್ಧಿಯು ನಾಶವಿಲ್ಲದುದೆನ್ನುವುದಕ್ಕಾಗು ವುದಿಲ್ಲ. ಏಕೆಂದರೆ ಇದಕ್ಕೆ ಹೆಚ್ಚು ಕುಂದುಗಳುಂಟು. ಯಾವುದಕ್ಕೆ ವಿಕಾರವುಂಟೊ ಅದು ನಾಶವಿಲ್ಲದೆ ಇರಲಾರದು. ಬುದ್ಧಿಯು ಒಂದರಿಂದ ಮಾಡಿದ ಪದಾರ್ಥವೆನ್ನುವುದು ಖಂಡಿತ. ಇದರಿಂದಲೆ ಇದರಿಂದಾಚೆಗೆ ಒಂದು ವಸ್ತುವಿರಬೇಕೆಂದು ಗೊತ್ತಾಗುತ್ತದೆ. ಇದು (ಬುದ್ಧಿಯು) ಸ್ವತಂತ್ರವಾಗಿಯೂ ಇರಲಾರದು. ಏಕೆಂದರೆ ಯಾವಯಾವದು ಭೌತಿಕವೊ ಅದೆಲ್ಲ ಪ್ರಕೃತಿಗೆ ಸೇರಿರುವುದು; ಆದುದರಿಂದಲೆ ಎಂದೆಂದಿಗೂ ಕಟ್ಟು ಬಿದ್ದಿರುವುದು. ಸ್ವತಂತ್ರನಾರು? ಸ್ವತಂತ್ರನೆಂಬುವನು ಕಾರ್ಯಕಾರಣಗಳಿಂದಾಚೆ ಇರಬೇಕು. ಸ್ವತಂತ್ರತೆಯೆಂಬುವುದೇ ಭ್ರಾಂತಿಯೆಂದರೆ ಬಂಧವೆಂದರೂ ಭ್ರಮೆಯೇ ಎನ್ನಬೇಕಾಗುವುದು. ನಮ್ಮ ಅರಿವಿಗೆ ಎರಡು ಸಂಗತಿಗಳು ಗೋಚರಿಸುತ್ತವೆ. ಇವೆರಡೂ ನಿಲ್ಲಬೇಕು; ಇಲ್ಲದಿದ್ದರೆ ಎರಡೂ ಸುಳ್ಳಾಗಬೇಕು. ಬಂಧ ಮತ್ತು ಮುಕ್ತಿಯ ವಿಚಾರದಲ್ಲಿ ಇದೆ ನಮಗೆ ಗೊತ್ತಿರುವುದು.

ಗೋಡೆಯಿಂದಾಚೆಗೆ ಹೋಗಬೇಕೆನ್ನುವಾಗ ಗೋಡೆಗೆ ತಲೆ ಹಾಕಿದರೆ ನಮಗೆ ಗೋಡೆಯಿಂದ ಅಡ್ಡಿಯಾಗಿದೆಯೆಂದು ಗೊತ್ತಾಗುವುದು. ಆದರೂ ನಮ್ಮ ಇಚ್ಛೆಯು ಎಲ್ಲೆಲ್ಲಿಯೂ ನಡೆಯುವುದೆಂದು ನಮಗೆ ಗೊತ್ತಾಗಿರುವುದು. ಅದೇ ನಮ್ಮ ಮನಸ್ಸಿನ ಸಂಕಲ್ಪ. ಹಾಗೆಯೇ ನಾವು ಯೋಚಿಸುತ್ತಿರುವೆವು. ಹೀಗೆ ಹೆಜ್ಜೆ ಹೆಜ್ಜೆಗೂ ಈ ಎರಡು ವಿರುದ್ಧಾಭಿಪ್ರಾಯಗಳು ತೋಚುತ್ತಲಿರುವುವು. ನಮಗೆ ಸ್ವತಂತ್ರವಿದೆಯೆನ್ನುವ ಹಾಗಿರುವುದು; ಪ್ರತಿಕ್ಷಣದಲ್ಲಿಯೂ ನಮಗೆ ಸ್ವಾತಂತ್ರ್ಯವಿಲ್ಲವೆಂದು ನಮಗೇ ಕಾಣುತ್ತಲೂ ಇರುವುದು. ಒಂದು ಭ್ರಾಂತಿಯಾದರೆ ಇನ್ನೊಂದೂ ಭ್ರಾಂತಿಯೆ. ಒಂದು ನಿಜವಾದರೆ ಮತ್ತೊಂದೂ ನಿಜವೆ. ಏಕೆಂದರೆ ಎರಡಕ್ಕೂ ಅನುಭವವೇ ಆಧಾರ. ಯೋಗಿಯು ಎರಡೂ ನಿಜವೆನ್ನುತ್ತಾನೆ. ನಮ್ಮ ಬುದ್ಧಿಯನ್ನು ತೆಗೆದುಕೊಂಡರೆ ನಾವು ಬದ್ಧರು. ಆತ್ಮವನ್ನು ತೆಗೆದುಕೊಂಡರೆ ಮುಕ್ತರು. ಮನುಷ್ಯನ ನಿಜವಾದ ಸ್ವರೂಪವಾದ ಆತ್ಮವು (ಪುರುಷನು) ಕಾರ್ಯಕಾರಣ ನಿಯಮವನ್ನು ಮೀರಿರುವುದು. ಅದರಲ್ಲಿರುವ ಸ್ವಾತಂತ್ರ್ಯವು ಬುದ್ಧಿ ಮತ್ತು ಮನಸ್ಸು ಮುಂತಾದ ಬೇರೆ ಬೇರೆ ರೂಪಗಳಲ್ಲಿರುವ ಪ್ರಕೃತಿಯ ಪದರಗಳಲ್ಲಿ ಜಿನುಗಿ ಬರುತ್ತಿರುವುದು. ಎಲ್ಲದರಲ್ಲಿಯೂ ಹೊಳೆಯುತ್ತಿರುವುದು ಅದರ ಬೆಳಕೇ. ಬುದ್ಧಿಗೆ ತನ್ನದಾಗಿಯೇ ಇರುವ ಬೆಳಕೊಂದಿಲ್ಲ. ಪ್ರತಿಯೊಂದು ಇಂದ್ರಿಯಕ್ಕೂ ಮೆದುಳಿನಲ್ಲಿ ಒಂದೊಂದು ಸ್ಥಾನವಿರುವುದು. ಎಲ್ಲಾ ಇಂದ್ರಿಯಗಳಿಗೂ ಒಂದೇ ಸ್ಥಾನವಿಲ್ಲ. ಪ್ರತಿಯೊಂದು ಇಂದ್ರಿಯವೂ ಬೇರೆ ಬೇರೆಯಾಗಿ ಇರುವುದು. ಎಲ್ಲಾ ಇಂದ್ರಿಯಗಳೂ ಒಂದಕ್ಕೊಂದು ಹೊಂದಿಕೊಂಡಿರುವುದೇತಕ್ಕೆ? ಇವೆಲ್ಲ ಒಂದಾಗುವುದೆಲ್ಲಿ? ಇವೆಲ್ಲ ಮೆದುಳಿನಲ್ಲಿ ಒಂದಾಗುವುದು ನಿಜವಾಗಿದ್ದರೆ ಕಣ್ಣು, ಕಿವಿ, ಮೂಗು ಮುಂತಾದವುಗಳಿಗೆಲ್ಲ ಒಂದೇ ಸ್ಥಾನವಿರಬೇಕಾಗಿತ್ತು. ಆದರೆ ಇವೆಲ್ಲಕ್ಕೂ ಬೇರೆ ಬೇರೆ ಸ್ಥಾನಗಳು ಇವೆಯಷ್ಟೆ. ಆದರೂ ಒಬ್ಬ ಮನುಷ್ಯನು ಏಕಕಾಲದಲ್ಲಿ ನೋಡುತ್ತಲೂ ಕೇಳುತ್ತಲೂ ಇರುವನು. ಆದುದರಿಂದ ಇವೆರಡಕ್ಕೂ ಒಂದೇ ಆಧಾರವಿರಲೇಬೇಕು. ಬುದ್ಧಿಯೆಂಬುದು ಮೆದುಳಿಗೆ ಸೇರಿರುವುದು. ಆದರೆ ಈ ಬುದ್ಧಿಗೂ ಆಧಾರವಾಗಿ ಪುರುಷನಿರುವನು. ಇದರಲ್ಲಿಯೆ ಬಗೆಬಗೆಯ ಅನುಭವಗಳೂ ಇಂದ್ರಿಯ ಜ್ಞಾನಗಳೂ ಸೇರಿ ಒಂದಾಗುವುವು. ಎಲ್ಲಾ ಇಂದ್ರಿಯ ಜ್ಞಾನಗಳೂ ಬೇರೆ ಬೇರೆ ಕಡೆಯಿಂದ ಬಂದು ಸೇರಿ ಒಂದಾಗುವ ಕೇಂದ್ರವೇ ಆತ್ಮವು. ಈ ಆತ್ಮವು ಸ್ವತಂತ್ರವಾಗಿರುವುದರಿಂದ ಇದರ ಸ್ವಾತಂತ್ರ್ಯವೆ ನಮಗೆ ಪ್ರತಿಕ್ಷಣವೂ ನಾವು ಸ್ವತಂತ್ರರೆಂಬುದನ್ನು ತಿಳಿಸುತ್ತಿರುವುದು. ಆದರೆ ಇದನ್ನು ತಿಳಿದುಕೊಳ್ಳದೆ ಸ್ವಾತಂತ್ರ್ಯವನ್ನು ಮನಸ್ಸಿಗೂ ಬುದ್ಧಿಗೂ ಕೊಡಿಸುತ್ತೇವೆ. ಈ ಸ್ವಾತಂತ್ರ್ಯವು ಬುದ್ಧಿಗಿರುವುದೆಂದು ಹೇಳಬೇಕೆನ್ನುವುದರೊಳಗೇ ಬುದ್ಧಿಗೆ ಸ್ವಾತಂತ್ರ್ಯವಿಲ್ಲವೆಂದು ಗೊತ್ತಾಗುವುದು. ಅದೇ ಸ್ವಾತಂತ್ರ್ಯವನ್ನು ಶರೀರಕ್ಕೆ ಉಂಟೆಂದು ಹೇಳಿದರೆ ಕೂಡಲೆ ಇದು ತಪ್ಪೆಂದು ಸೃಷ್ಟಿಯು ನಮಗೆ ತಿಳಿಸುವುದು. ಈ ಕಾರಣದಿಂದಲೇ ಬಂಧಮೋಕ್ಷಗಳ ಅಭಿಪ್ರಾಯಗಳೆರಡೂ ಏಕ ಕಾಲದಲ್ಲಿರುವುವು. ಯೋಗಿಯು ಸ್ವತಂತ್ರವಾಗಿರುವುದನ್ನೂ ಕಟ್ಟುಬಿದ್ದಿರುವುದನ್ನೂ ವಿಂಗಡಿಸುತ್ತಾನಾದುದರಿಂದ ಅವನ ಅಜ್ಞಾನವು ಮಾಯವಾಗುವುದು. ಪುರುಷನು ಸ್ವತಂತ್ರನೆಂದೂ ಜ್ಞಾನಸ್ವರೂಪನೆಂದೂ ಅಜ್ಞಾನವೇ ಬುದ್ಧಿಯ ಮೂಲಕ ಬಂದು ಬುದ್ಧಿಯೆನಿಸುವುದೆಂದೂ ಬುದ್ಧಿಯ ರೂಪದಲ್ಲಿ ಅದು ಬದ್ಧವಾಗಿರುವುದೆಂದೂ ಅವನಿಗೆ ಗೊತ್ತು.

## 21. ತದರ್ಥ ಏವ ದೃಶ್ಯಸ್ಯಾತ್ಮಾ

ಟೀ॥ ಅನುಭವಿಸಬೇಕಾದುದರ ಸ್ವರೂಪವು ಅವನಿಗೋಸ್ಕರವೆ

ವಿ॥ ಪ್ರಕೃತಿಗೆ ಸ್ವಂತ ಬೆಳಕು ಇಲ್ಲ. ಅದರಲ್ಲಿ ಪುರುಷನಿರುವವರೆಗೂ ಬೆಳಕಾಗಿ ಕಾಣುವುದು. ಆದರೆ ಆ ಬೆಳಕು ಮತ್ತೊಂದರಿಂದ ಬಂದುದು. ಚಂದ್ರನಿಗೆ[1] ಬೆಳಕು ಮತ್ತೊಂದರಿಂದ ಬಂದಂತೆಯೆ ಇದು. ಪ್ರಕೃತಿಯಲ್ಲಿ ಕಾಣುವ ವಿಕಾರಗಳೆಲ್ಲ ಪ್ರಕೃತಿಯಿಂದಲೆ ಆಗುವುವು. ಆದರೆ ಪುರುಷನನ್ನು ಬಿಡುಗಡೆಮಾಡುವುದನ್ನು ಬಿಟ್ಟರೆ ಪ್ರಕೃತಿಗೆ ಮತ್ತಾವ ಪ್ರಯೋಜನವೂ ಇಲ್ಲವೆಂಬುದೇ ಯೋಗಿಗಳ ಮತವು.

## 22. ಕೃತಾರ್ಥಂ ಪ್ರತಿ ನಷ್ಟಮಪ್ಯನಷ್ಟಂ ತದನ್ಯಸಾಧಾರಣತ್ವಾತ್

ಟೀ॥ ಕೃತಾರ್ಥನಾದವನಿಗೆ ಅದು ನಷ್ಟವಾದರೂ ಉಳಿದವರಿಗೆಲ್ಲ ಇರುವುದರಿಂದ ಅದು ನಷ್ಟವಾಗುವುದಿಲ್ಲ.

ವಿ॥ ಪ್ರಕೃತಿಯು ಮಾಡುವ ಕೆಲಸವೆಲ್ಲ ಪುರುಷನಿಗೆ ತಾನು ಸಂಪೂರ್ಣವಾಗಿ ಪ್ರಕೃತಿಯಿಂದ ಬೇರೆಯಾಗಿದ್ದೇನೆಂದು ತಿಳಿಸುವುದಕ್ಕೆ. ಪುರುಷನಿಗೆ ಇದು ಗೊತ್ತಾದ ಮೇಲೆ ಪ್ರಕೃತಿಯು ಮೋಹಪಡಿಸುವುದಿಲ್ಲ. ಆದರೆ ಯಾವಾತನು ಮುಕ್ತನಾದನೊ ಅವನಿಗೊಬ್ಬನಿಗೆ ಪ್ರಕೃತಿಯು ನಷ್ಟವಾಗುವುದು. ಇನ್ನೂ ಅನೇಕರು ಇದ್ದೇ ಇರುವರು. ಅವರಿಗಾಗಿ ಪ್ರಕೃತಿಯು ಕೆಲಸಮಾಡುತ್ತಲೆ ಇರುವದು.

## 23. ಸ್ವಸ್ವಾಮಿಶಕ್ತ್ಯೋಃ ಸ್ವರೂಪೋಪಲಬ್ಧಿ ಹೇತುಃ ಸಂಯೋಗಃ

ಟೀ॥ ಅನುಭವಿಸತಕ್ಕದ್ದು, ಅದರ ಸ್ವಾಮಿ ಈ ಎರಡು ಶಕ್ತಿಗಳ ಸ್ವರೂಪವನ್ನು ತಿಳಿಯುವುದಕ್ಕೆ ಕಾರಣವಾದುದೇ ಸಂಯೋಗವು.

ವಿ॥ ಈ ಸೂತ್ರದ ತಾತ್ಪರ್ಯವೇನೆಂದರೆ ಆತ್ಮದ ಮತ್ತು ಪ್ರಕೃತಿಯ ಶಕ್ತಿಗಳು ಅವೆರಡೂ ಸೇರಿಕೊಂಡಿರುವಾಗ ಪ್ರಕಟವಾಗುವುವು. ಆಗ ಎಲ್ಲವೂ ಹೊರಬೀಳುವುದು. ಹೀಗೆ ಸಂಯೋಗವಾಗು(ಸೇರು)ವುದಕ್ಕೆ ಅಜ್ಞಾನವೇ ಕಾರಣ. ನಮಗೆ ಸುಖದುಃಖಗಳು ಆಗುವುದಕ್ಕೆ ನಾವು ನಮ್ಮ ಶರೀರದೊಡನೆ ಸೇರಿಕೊಳ್ಳುವುದೇ ಕಾರಣವೆಂಬುದು ಪ್ರತಿದಿನವೂ ಗೊತ್ತಾಗುತ್ತಿರುವುದು. ನಾನು ಈ ಶರೀರವಲ್ಲವೆಂಬುದು ಕಡು ಖಂಡಿತವಾಗಿ ಗೊತ್ತಿದ್ದರೆ ಸೆಕೆ, ಚಳಿ ಮೊದಲಾದುದೇನೂ ನನಗೆ ಹತ್ತುತ್ತಿರಲಿಲ್ಲ. ಈ ಶರೀರವೆಂಬುದು ಅನೇಕ ವಸ್ತುಗಳ ಸೇರಿಕೆಯಿಂದಾಗಿರುವುದು. ನನಗೊಂದು, ನಿನಗೊಂದು, ಸೂರ್ಯನಿಗೊಂದು ಹೀಗೆ ಬೇರೆ ಬೇರೆ ದೇಹಗಳಿರುವವೆನ್ನುವುದು ಬರೀ ಸುಳ್ಳು. ಇಡೀ ಜಗತ್ತೇ ಒಂದು ವಸ್ತುವಿನ ಸಾಗರವಾಗಿರುವುದು. ಅದರಲ್ಲಿ ನೀನು ಎಂದುದೊಂದು ರೇಣು; ನಾನು ಮತ್ತೊಂದು ರೇಣು;

---

1. ಸೂರ್ಯನ ಬೆಳಕು ಪ್ರತಿಫಲಿಸಿ ಚಂದ್ರನಲ್ಲಿರುವುದೆಂದು ಭೌತಿಕಶಾಸ್ತ್ರಜ್ಞರ ನಂಬಿಕೆ.

ಸೂರ್ಯನು ಮಗದೊಂದು. ಈ ವಸ್ತು ಒಂದೇ ಸಮನೆ ಬೇರೆ ಬೇರೆ ಕಡೆಗೆ ಹೋಗುತ್ತಲೆ ಇರುವುದೆಂಬುದು ನಮಗೆ ಗೊತ್ತೇ ಇದೆ. ಈ ದಿನ ಸೂರ್ಯನಲ್ಲಿರುವ ವಸ್ತು ನಾಳೆಯ ದಿನವೇ ನಮ್ಮ ಶರೀರದಲ್ಲಿರಬಹುದು.

## 24. ತಸ್ಯ ಹೇತುರವಿದ್ಯಾ

ಟೀ|| ಅವಿದ್ಯೆಯು ಅದಕ್ಕೆ ಕಾರಣವು

ವಿ|| ಅಜ್ಞಾನದಿಂದ ಒಂದು ಗೊತ್ತಾದ ಶರೀರಕ್ಕೆ ನಾವು ಸೇರಿಕೊಂಡಿರುವುದರಿಂದ ದುಃಖಕ್ಕೆ ಒಳಗಾಗಿರುವೆವು. ಈ ಶರೀರವೆಂಬ ಭಾವನೆಯೇ ಮೂಢವಿಶ್ವಾಸ. ಮೂಢ ವಿಶ್ವಾಸದಿಂದಲೆ ನಮಗೆ ಸುಖವಾಗುವುದು ಅಥವಾ ದುಃಖವಾಗುವುದು. ಅಜ್ಞಾನದಿಂದಾದ ಮೂಢವಿಶ್ವಾಸದಿಂದಲೆ ನಮಗೆ ಚಳಿ, ಸೆಕೆ, ಸುಖ, ದುಃಖ ಇವುಗಳು ಆಗುತ್ತಿರುವುದು. ಈ ಮೂಢ ನಂಬಿಕೆಗೊಳಗಾಗದೆ ಇರುವುದೇ ನಮ್ಮ ಕರ್ತವ್ಯ. ಒಳಗಾಗದೆ ಇರುವುದನ್ನು ಯೋಗಿಯು ತೋರಿಸಿಕೊಡುತ್ತಾನೆ. ಮನಸ್ಸಿನ ಸ್ಥಿತಿ ಒಂದಾನೊಂದು ರೀತಿಯಲ್ಲಿ ಇದ್ದರೆ ನಮ್ಮನ್ನು ಸುಟ್ಟರೂ ನೋವಾಗುವುದಿಲ್ಲವೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಆದರೆ ಹೀಗೆ ಇದ್ದಕ್ಕಿದ್ದ ಹಾಗೆ ಮನಸ್ಸು ಆ ಸ್ಥಿತಿಗೆ ಸುಂಟರುಗಾಳಿಯಂತೆ ಭರ್‍ರನೆ ಬಂದು ಒಂದು ಕ್ಷಣದಲ್ಲಿ ಬೇರೆ ಸ್ಥಿತಿಯಾಗುವುದು. ಆದರೆ ಅದೇ ಸ್ಥಿತಿಯನ್ನು ಯೋಗದಿಂದ ಪಡೆದುಕೊಂಡರೆ ಆತ್ಮವನ್ನು ಶರೀರದಿಂದ ಎಂದೆಂದಿಗೂ ಬೇರ್ಪಡಿಸಿಕೊಂಡಿರಬಹುದು.

## 25. ತದಭಾವಾತ್ಸಂಯೋಗಾಭಾವೋ ಹಾನಂ ತದ್ದೃಶೇಃ ಕೈವಲ್ಯಮ್

ಟೀ|| ಅದು (ಅಜ್ಞಾನವು) ಇಲ್ಲದಿದ್ದರೆ ಸಂಯೋಗವಿರುವುದಿಲ್ಲ. ಇದೇ ಬಿಡತಕ್ಕದ್ದು. ನೋಡುವವನಿಗೆ ಅದೇ ಕೈವಲ್ಯವು.

ವಿ|| ಯೋಗಸಿದ್ಧಾಂತದಲ್ಲಿ ಅಜ್ಞಾನದಿಂದಲೆ ಪ್ರಕೃತಿಗೂ ಪುರುಷನಿಗೂ ಸೇರಿಕೆಯಾಗಿರುವುದು. ಪ್ರಕೃತಿಯು ನಮ್ಮನ್ನು ವಶಮಾಡಿಕೊಳ್ಳದಂತೆ ಮಾಡುವುದೇ ಉದ್ದೇಶವು. ಎಲ್ಲಾ ಮತಗಳಿಗೂ ಇದೇ ಪ್ರಯೋಜನ. ಪ್ರತಿಯೊಂದು ಆತ್ಮನಲ್ಲಿ ಅವ್ಯಕ್ತರೂಪದಲ್ಲಿ ದೈವಿಕ ಶಕ್ತಿ ಇರುವುದು. ಆಧ್ಯಾತ್ಮಿಕ ಮತ್ತು ಆಧಿಭೌತಿಕರೂಪವಾದ ಪ್ರಕೃತಿಯನ್ನು ಗೆದ್ದು ಈ ದೇವತ್ವವನ್ನು ಪ್ರಕಟಮಾಡುವುದೇ ಪುರುಷಾರ್ಥವು. ಇದನ್ನು ಕರ್ಮದಿಂದಲಾಗಲಿ ಭಜನೆಯಿಂದಲಾಗಲಿ ಮನೋನಿಗ್ರಹದಿಂದಲಾಗಲಿ ತತ್ತ್ವವಿಚಾರದಿಂದಲಾಗಲಿ ಇವುಗಳಲ್ಲಿ ಒಂದು ಅಥವಾ ಅನೇಕ ಅಥವಾ ಎಲ್ಲಾ ಸಾಧನಗಳಿಂದಲಾಗಲಿ ಈ ಕೆಲಸವನ್ನು ಮಾಡಿ ಮುಕ್ತರಾಗಬೇಕು. ಇಷ್ಟೇ ಧರ್ಮದ ತತ್ತ್ವವು. ವಾದಗಳು, ಸಿದ್ಧಾಂತಗಳು, ಮಂತ್ರತಂತ್ರಗಳು, ಶಾಸ್ತ್ರಗಳು, ದೇವಾಲಯಗಳು, ಅಥವಾ ಪದ್ಧತಿಗಳು ಇವೆಲ್ಲ ಗೌಣವಿಷಯಗಳು. ಯೋಗಿಯು ಈ ಪುರುಷಾರ್ಥವನ್ನು ಮನೋನಿಗ್ರಹದಿಂದ ಪಡೆಯಬೇಕೆಂದು ಪ್ರಯತ್ನಿಸುತ್ತಾನೆ. ನಾವು ಪ್ರಕೃತಿಯಿಂದ ಬಿಡುಗಡೆಯಾಗುವವರೆಗೆ ದಾಸರು. ಪ್ರಕೃತಿಯು ಹೇಳಿದಂತೆ ನಡೆಯಬೇಕು. ಮನಸ್ಸನ್ನು ಜಯಿಸಿದವನಿಗೆ ಪದಾರ್ಥಗಳೆಲ್ಲ ವಶವಾಗುವವನೆಂದು ಯೋಗಿಯ ಮತ. ಹೊರಗಿನ

ಪ್ರಕೃತಿಗಿಂತ ಒಳಗಿನ ಪ್ರಕೃತಿಯು ಹೆಚ್ಚಿನದಾಗಿರುವುದು. ಇದನ್ನು ನಿಗ್ರಹಿಸಿ ವಶಮಾಡಿಕೊಳ್ಳುವುದು ಹೆಚ್ಚು ಕಷ್ಟವಾಗಿರುವುದು. ಇದನ್ನು ನಿಗ್ರಹಿಸಿ ವಶಮಾಡಿಕೊಳ್ಳುವುದು ಹೆಚ್ಚು ಕಷ್ಟವಾಗಿರುವುದು. ಆದುದರಿಂದ ಒಳಗಿನ ಪ್ರಕೃತಿಯನ್ನು ಗೆದ್ದಾತನು ಜಗತ್ತನ್ನೇ ಆಳುವನು. ಅದು ಅವನ ಅಡಿಯಾಳಾಗುವುದು. ರಾಜಯೋಗವು ಈ ವಶೀಕಾರವನ್ನು ಪಡೆಯುವ ಕ್ರಮವನ್ನು ಹೇಳಿಕೊಡುತ್ತದೆ. ಭೌತಿಕ ಸೃಷ್ಟಿಯಲ್ಲಿ ನಮಗೆ ಗೊತ್ತಿರುವ ಶಕ್ತಿ ವಿಶೇಷಗಳಿಗಿಂತ ಹೆಚ್ಚಿನ ಶಕ್ತಿಗಳನ್ನು ಗೆಲ್ಲಬೇಕಾಗುವುದು. ಈ ಶರೀರವೆಂಬುದು ಮನಸ್ಸಿನ ಹೊರಗಣ ಸಿಪ್ಪೆಯಂತಿರುವುದು. ಇವೆರಡೂ ಬೇರೆ ಬೇರೆ ವಸ್ತುಗಳಲ್ಲ. ಇವು ಮೀನು ಮತ್ತು ಅದರ ಚಿಪ್ಪಿನಂತೆ ಇವೆ. ಒಂದೇ ವಸ್ತುವಿನ ಎರಡು ಭಾಗಗಳಿವು. ಮೀನಿನ ಒಳಸಾರವು ಹೊರಗಣಿಂದ ಪದಾರ್ಥವನ್ನು ತೆಗೆದುಕೊಂಡೇ ಚಿಪ್ಪನ್ನು ಮಾಡುವುದು. ಇದರಂತೆ ಮನಸ್ಸೆಂಬ ಒಳಗಣ ಸೂಕ್ಷ್ಮಶಕ್ತಿಗಳು ಹೊರಗಣಿಂದ ಸ್ಥೂಲಪದಾರ್ಥವನ್ನು ತೆಗೆದುಕೊಂಡು ಅದರಿಂದ ಈ ಶರೀರವೆಂಬ ಹೊರಚಿಪ್ಪನ್ನು ಮಾಡಿಡುತ್ತವೆ. ಇದೂ ಅಲ್ಲದೆ ಈ ಶಕ್ತಿ ವಿಶೇಷಗಳು ಬೇರೆ ಬೇರೆ ಅಲ್ಲ. ಕೆಲವು ಶಕ್ತಿಗಳು ಶಾರೀರಕ ಶಕ್ತಿಗಳೆಂದೂ ಕೆಲವು ಮಾನಸಿಕವೆಂದೂ ಎರಡು ಬಗೆಯೆಂದು ತಿಳಿಯಬಾರದು. ಭೌತಿಕ ಪ್ರಪಂಚವೇ ಸೂಕ್ಷ್ಮ ಪ್ರಪಂಚದ ಸ್ಥೂಲ ರೂಪವಾಗಿರುವಂತೆ ಭೌತಿಕ ಶಕ್ತಿಗಳೆಂಬಿವು ಸೂಕ್ಷ್ಮಶಕ್ತಿಗಳ ಹೊರರೂಪಗಳಾಗಿರುತ್ತವೆ.

## 26. ವಿವೇಕಖ್ಯಾತಿರವಿಪ್ಲವಾ ಹಾನೋಪಾಯಃ

ಟೀ॥ ಬಿಡದೆ ವಿವೇಕವನ್ನು ಅಭ್ಯಾಸ ಮಾಡುವುದು ಅಜ್ಞಾನವನ್ನು ಹೋಗಲಾಡಿಸುವ ಉಪಾಯವು.

ವಿ॥ ಅಭ್ಯಾಸಕ್ಕೆ ಇದೇ ನಿಜವಾದ ಪ್ರಯೋಜನವು. ಇದು ನಿಜ; ಇದು ಸುಳ್ಳು; ಪುರುಷನು ಪ್ರಕೃತಿಯಲ್ಲ; ಮನಸ್ಸೂ ಅಲ್ಲ; ಭೌತಿಕ[1] ಪದಾರ್ಥವೂ ಅಲ್ಲ; ಅದು ಪ್ರಕೃತಿಯಲ್ಲದುದರಿಂದ ಅದಕ್ಕೆ ಯಾವ ವಿಕಾರವೂ ಆಗಲಾರದು ಎಂದು ತಿಳಿಯುವುದೇ ಅಭ್ಯಾಸದ ಪ್ರಯೋಜನವು. ಹಾಗೆ ಹೀಗೆ ಸೇರಿಕೊಳ್ಳುತ್ತ ಮತ್ತೆ ಮತ್ತೆ ಬಿಚ್ಚಿಕೊಳ್ಳುತ್ತ ಬೇರ್ಪಡುತ್ತಿರುವುದು ಪ್ರಕೃತಿಯೆ. ಬಿಡದೆ ಅಭ್ಯಾಸಮಾಡುವುದರಿಂದ ವಿವೇಕವುಂಟಾಗುತ್ತಲೆ ಅಜ್ಞಾನವು ಓಡಿಹೋಗಿ ಸರ್ವಜ್ಞನೂ, ಸರ್ವಶಕ್ತನೂ, ಸರ್ವವ್ಯಾಪಿಯೂ, ಆದ ಪುರುಷನ ದಿಟವಾದ ಸ್ವರೂಪವು ಬೆಳಗತೊಡಗುತ್ತದೆ.

## 27. ತಸ್ಯ ಸಪ್ತಧಾ ಪ್ರಾಂತಭೂಮಿಃ ಪ್ರಜ್ಞಾ

ಟೀ॥ ಅವನ ತಿಳಿವಳಿಕೆಯು ಏಳು ಅಂತಸ್ತುಗಳುಳ್ಳದ್ದು

ವಿ॥ ಈ ಜ್ಞಾನವು ಬಂದರೆ ಒಂದಾಗುತ್ತಲೊಂದರಂತೆ ಏಳು ಅಂತಸ್ತುಗಳಾಗಿ ಬರುವುದು. ಇವುಗಳಲ್ಲಿ ಯಾವುದಾದರೊಂದು ಪ್ರಾರಂಭವಾದರೆ ನಮಗೆ ತಿಳಿವಳಿಕೆಯುಂಟಾಯಿತೆಂದು ಗೊತ್ತಾಗುವುದು. ಇವುಗಳಲ್ಲಿ ತಿಳಿಯತಕ್ಕದ್ದನ್ನು ತಿಳಿದೆವೆಂಬುದೇ ಮೊದಲನೇದು. ಮನಸ್ಸಿಗೆ ಅತೃಪ್ತಿಯಾಗುವುದು ನಿಂತುಹೋಗುವುದು. ತಿಳಿವಳಿಕೆಬೇಕೆಂಬ ಬಯಕೆ ಇರುವುದು ತೋರಿದರೆ ಎಲ್ಲೆಲ್ಲಿ ಸ್ವಲ್ಪವಾದರೂ ನಿಜವು ದೊರಕೀತೆಂದು ತಿಳಿಯುವುದೊ ಅಲ್ಲೆಲ್ಲ

1. ಸ್ಥೂಲಭೂತದಿಂದ ಆಗಿರುವ ವಸ್ತು.

ಹುಡುಕಲಾರಂಭಿಸುತ್ತೇವೆ. ಅಲ್ಲಿ ಸಿಕ್ಕದೆ ಹೋದರೆ ನಮ್ಮ ಮನಸ್ಸಿಗೆ ತೃಪ್ತಿಯಾಗುವುದಿಲ್ಲ ಮತ್ತೊಂದು ಕಡೆ ಹುಡುಕುತ್ತೇವೆ. ಎಷ್ಟು ಹುಡುಕಿದರೂ ಪ್ರಯೋಜನವಾಗುವುದಿಲ್ಲ. ಕೊನೆಗೆ ತಿಳುವಳಿಕೆಯೆಂಬುದು ನಮ್ಮಲ್ಲಿಯೆ ಇದೆಯೆಂದೂ ಯಾರೂ ನಮಗೆ ಸಹಾಯ ಮಾಡಲಾರರೆಂದೂ ನಮಗೆ ನಾವೇ ಸಹಾಯ ಮಾಡಿಕೊಳ್ಳಬೇಕೆಂದೂ ಗೊತ್ತಾಗುವುದು. ವಿವೇಕವೆಂಬ ಶಕ್ತಿಯನ್ನುಪಯೋಗಿಸುವುದಕ್ಕೆ ಪ್ರಾರಂಭಿಸಿದಾಗ ನಮ್ಮ ನಿಜವು ಸಿಕ್ಕಿತೆಂಬುದಕ್ಕೆ ಬರುವ ಮೊದಲನೆಯ ಗುರ್ತೇನೆಂದರೆ ಇಂಥ ಅತೃಪ್ತಿಯು ಹೋಗಿಬಿಡುವುದು. ನಮಗೆ ನಿಜವಾಗಿ ತತ್ತ್ವವು ಸಿಕ್ಕುವುದೆಂದೂ ಇದು ನಿಜವೇ ಸರಿಯೆಂದೂ ನಿಶ್ಚಯವಾಗಿ ಗೊತ್ತಾಗುವುದು. "ಇನ್ನು ಸೂರ್ಯೋದಯವಾಯಿತು. ಇನ್ನು ಬೆಳಕುಹರಿಯಿತು" ಎಂದುಕೊಂಡು ಧೈರ್ಯದಿಂದ ಕೊನೆಯ ಗತಿಯನ್ನು ಸೇರುವವರೆಗೂ ಪ್ರಯತ್ನ ಮಾಡಬೇಕು. ಎಲ್ಲಾ ವಿಧವಾದ ಕ್ಲೇಶಗಳೂ ಹೋದವೆಂಬುದು ಎರಡನೇ ಅಂತಸ್ತು. ಆಮೇಲೆ ಒಳಗಣ ಅಥವಾ ಹೊರಗಣ ಪ್ರಪಂಚದಲ್ಲಿ ಯಾವುದರಿಂದಲೂ ನಮಗೆ ದುಃಖವನ್ನುಂಟುಮಾಡುವುದು ಆಗಲಾರದು. ಪೂರ್ಣಜ್ಞಾನವನ್ನು ಪಡೆಯುವುದು ಮೂರನೆಯದು. ಸರ್ವಜ್ಞತೆಯೇ ನಮ್ಮದಾಗುವುದು. ವಿವೇಕದಿಂದ ಮಾಡಬೇಕಾದುದೆಲ್ಲ ಮುಗಿಯಿತೆಂಬುದು ನಾಲ್ಕನೇದು. ಚಿತ್ತದ ವಿಮುಕ್ತಿಯೆಂಬುದು ಮುಂದಿನ ಅಂತಸ್ತು. ಎಲ್ಲಾ ವಿಧವಾದ ಕಷ್ಟಗಳೂ ತೊಂದರೆಗಳೂ ಎಲ್ಲಾ ವಿಧವಾದ ಚಿತ್ತದ ಚಾಂಚಲ್ಯಗಳೂ ಪರ್ವತ ಶಿಖರದಿಂದ ಕೆಳಕ್ಕೆ ಬಿದ್ದ ಕಲ್ಲಿನಂತೆ ಬಿದ್ದು ಬಿಡುತ್ತವೆ. ಆಮೇಲೆ ಮೇಲಕ್ಕೆ ಬರುವುದೇ ಇಲ್ಲ. ಈ ಚಿತ್ತವೇ ನಮಗೆ ಬೇಕಾದಾಗಲೆಲ್ಲ ತನ್ನ ಕಾರಣದಲ್ಲಿ ಲಯವಾಗ ಹತ್ತುವುದು ಮುಂದಿನ ಅಂತಸ್ತು. ಕೊನೆಗೆ ನಾವು ನಮ್ಮಲ್ಲಿಯೇ ನಿಲ್ಲುವವರಾಗಿ ಜಗತ್ತಿನಲ್ಲೆಲ್ಲ ನಾವು ಯಾವಾಗಲೂ ಒಬ್ಬರೇ ಇದ್ದವೆಂತಲೂ ಶರೀರವಾಗಲಿ ಮನಸ್ಸಾಗಲಿ ನಮಗೆ ಸಂಬಂಧಪಟ್ಟಿರಲಿಲ್ಲವೆಂತಲೂ ನಮ್ಮೊಡನೆ ಕೂಡಿದ್ದುದಂತು ಇಲ್ಲವೇ ಇಲ್ಲವೆಂತಲೂ ಗೊತ್ತಾಗುವುದು. ಅವು ತಮ್ಮ ಹಾದಿಯನ್ನು ಹಿಡಿದುಕೊಂಡು ತಾವು ಕೆಲಸಮಾಡುತ್ತಿದ್ದವು. ನಾವು ಅಜ್ಞಾನದಿಂದ ಅವುಗಳೊಡನೆ ಕೂಡಿಕೊಂಡೆವು. ಆದರೆ ನಾವು ಯಾವಾಗಲೂ ಒಂಟಿಯಾಗಿ ಸರ್ವಶಕ್ತರಾಗಿ ಸರ್ವವ್ಯಾಪಿಗಳಾಗಿ ನಿತ್ಯಾನಂದರಾಗಿಯೆ ಇದ್ದುಕೊಂಡಿದ್ದೇವೆ. ನಮ್ಮ ಆತ್ಮವೂ ಶುದ್ಧವಾಗಿ ಪೂರ್ಣವಾಗಿದ್ದುದರಿಂದ ಮತ್ತೆ ಯಾರೂ ನಮಗೆ ಬೇಕಾಗಲಿಲ್ಲ. ನಮ್ಮನ್ನು ಸುಖಪಡಿಸಲಿಕ್ಕೆ ಯಾರೂ ಬೇಕಿಲ್ಲ. ಏಕೆಂದರೆ ನಾವೇ ಸುಖರೂಪರಾಗಿದ್ದೇವೆ. ಈ ತಿಳಿವಳಿಕೆಯು ಮತ್ತೊಂದನ್ನಾಶ್ರಯಿಸಿಕೊಂಡಿಲ್ಲವೆಂಬುದು ಮುಂದೆ ಗೊತ್ತಾಗುವುದು. ನಮ್ಮ ತಿಳಿವಳಿಕೆಯ ಮುಂದೆ ಬೆಳಗದೆ ಇರುವ ಪದಾರ್ಥವೇ ಲೋಕದಲ್ಲಿಲ್ಲ. ಈ ಸ್ಥಿತಿಯೆ ಕೊನೆಯ ಸ್ಥಿತಿಯು. ಇದರಿಂದ ಯೋಗಿಯು ಸಮಾಧಾನವುಳ್ಳವನಾಗಿ, ಶಾಂತನಾಗಿ, ಇನ್ನೆಂದೆಂದಿಗೂ ದುಃಖಪಡದೆ, ಇನ್ನೆಂದೆಂದಿಗೂ ಭ್ರಾಂತನಾಗದೆ, ಎಂದೆಂದಿಗೂ ವ್ಯಥೆಗೆ ಸಿಕ್ಕದೆ ಇರುತ್ತಾನೆ. ತಾನು ನಿತ್ಯಾನಂದನೆಂದೂ ನಿತ್ಯ ಮುಕ್ತನೆಂದೂ ಸರ್ವಶಕ್ತನೆಂದೂ ಅವನಿಗೆ ಗೊತ್ತಾಗುವುದು.

## 28. ಯೋಗಾಙ್ಗಾನುಷ್ಠಾನಾದಶುದ್ಧಿಕ್ಷಯೆ ಜ್ಞಾನದೀಪ್ತಿರಾವಿವೇಕಖ್ಯಾತೇಃ

ಟೀ॥ ಯೋಗಾಂಗಗಳನ್ನು ಅಭ್ಯಾಸಮಾಡುವುದರಿಂದ ಅಶುದ್ಧಿಗಳು ನಾಶವಾಗಿ ವಿವೇಕದವರೆಗೂ ಜ್ಞಾನವು ಬೆಳಗುವುದು.

ವಿ॥ ಇನ್ನು ಸಾಧನದ ತಿಳಿವಳಿಕೆಯನ್ನು ಹೇಳುತ್ತಾರೆ. ಇದುವರೆಗೂ ಹೇಳಿದುದು ಇದಕ್ಕಿಂತ ಹೆಚ್ಚಿನ ಜ್ಞಾನವು. ಅದು ಬಹಳ ಮೇಲೆ ಇರುವುದು. ಆದರೂ ಅದೇ ಕೊನೆಗೆ ಬರಬೇಕಾದುದು. ಇದಕ್ಕಿಂತ ಮೊದಲು ಶರೀರ ಜಯವನ್ನೂ ಮನಸ್ಸಿನ ಜಯವನ್ನೂ ಮಾಡಿಕೊಳ್ಳಬೇಕು. ಆಗ ಪಡೆಯಬೇಕಾದುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಸುಲಭವಾಗುವುದು. ಇಂಥದ್ದನ್ನು ಪಡೆಯತಕ್ಕದ್ದೆಂದು ಗೊತ್ತಾದ ಮೇಲೆ ಅದನ್ನು ಹೊಂದುವ ಕ್ರಮವನ್ನು ಅಭ್ಯಾಸಮಾಡುವುದು ಮಾತ್ರ ಉಳಿಯಿತು.

## 29. ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನಸಮಾಧಯೋಽಷ್ಟಾವಙ್ಗಾನಿ.

ಟೀ॥ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಇವೇ ಯೋಗಕ್ಕೆ ಎಂಟು ಅಂಗಗಳು.

## 30. ಅಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾ ಯಮಾಃ

ಟೀ॥ ಹಿಂಸೆ ಮಾಡದಿರುವುದು, ನಿಜವನ್ನು ಹೇಳುವುದು, ಕದಿಯದಿರುವುದು, ಬ್ರಹ್ಮಚರ್ಯ, ದಾನವನ್ನು ತೆಗೆದುಕೊಳ್ಳದಿರುವುದು, ಇವಕ್ಕೆ ಯಮವೆಂದು ಹೆಸರು.

ವಿ॥ ಪೂರ್ಣಯೋಗಿಯಾಗಬೇಕೆಂಬುವನಿಗೆ ಹೆಣ್ಣು ಗಂಡೆಂಬ ಭಾವನೆ ಇರಬಾರದು. ಆತ್ಮಕ್ಕೆ ಹೆಣ್ಣುಗಂಡಿನ ಭೇದವಿಲ್ಲ. ಈ ಭಾವನೆಗಳಿಂದ ಏತಕ್ಕೆ ಕೆಡಬೇಕು? ಇಂಥಾ ಭಾವನೆಗಳನ್ನು ಏತಕ್ಕೆ ಬಿಡಬೇಕೆಂಬುದು ಮುಂದೆ ಗೊತ್ತಾಗುವುದು. ಯಾವನು ದಾನವನ್ನು ತೆಗೆದುಕೊಳ್ಳುವನೋ ಅವನ ಮನಸ್ಸಿನ ಮೇಲೆ ದಾನವನ್ನು ಕೊಡುವವನ ಮನಸ್ಸು ಪರಿಣಾಮ ಮಾಡುವುದು. ಇದರಿಂದ ತೆಗೆದುಕೊಳ್ಳುವವನು ಕೆಡುವ ಸಂಭವವಿರುವುದು. ದಾನಗಳನ್ನು ತೆಗೆದುಕೊಳ್ಳುವುದರಿಂದ ಮನಸ್ಸಿನ ಸ್ವಾತಂತ್ರ್ಯವು ಹೋಗಿ ನಾವು ದಾಸರಾಗುವೆವು. ಆದುದರಿಂದ ಎಂಥಾ ದಾನಗಳನ್ನೂ ಪ್ರತಿಗ್ರಹ ಮಾಡಬಾರದು.

## 31. ಜಾತಿದೇಶಕಾಲಸಮಯಾನವಚ್ಛಿನ್ನಾಃ ಸಾರ್ವಭೌಮಾ ಮಹಾವ್ರತಮ್

ಟೀ॥ ಇವು ಜಾತಿ, ದೇಶ, ಕಾಲ, ಪದ್ಧತಿಗಳಿಂದ ಮುರಿಯದಿದ್ದರೆ (ಎಲ್ಲೆಲ್ಲಿಯೂ ಇರುವ) ಮಹಾವ್ರತಗಳೆನಿಸುವುವು[1].

ವಿ॥ ಕೊಲ್ಲದಿರುವುದು, ನಿಜ ಹೇಳುವುದು, ಕದಿಯದಿರುವುದು, ಬ್ರಹ್ಮಚರ್ಯ, ದಾನವನ್ನು ತೆಗೆದುಕೊಳ್ಳದಿರುವುದು, ಈ ಅಭ್ಯಾಸಗಳನ್ನು ಪ್ರತಿಯೊಬ್ಬ ಗಂಡಸೂ, ಹೆಂಗಸೂ, ಮಗುವೂ ಆಚರಿಸಬೇಕು. ಯಾವ ಜನಾಂಗದವರಾಗಲಿ ಯಾವ ದೇಶದವರಾಗಲಿ ಯಾವ ಪದವಿಯಲ್ಲಿರುವವರಾಗಲಿ ಮಾಡತಕ್ಕದ್ದು.

---

1. "ಹಿಂದೆ ಹೇಳಿದ ನಿಯಮಗಳನ್ನು ಎಲ್ಲೆಲ್ಲಿಯೂ ಅಡ್ಡಿಮಾಡದೆ ನಡೆಸಿದರೆ ಸಾರ್ವಭೌಮಮಹಾವ್ರತಗಳೆನ್ನಿಸುತ್ತವೆ" ಎಂದು ಭಾಷ್ಯದಲ್ಲಿ ಬರೆದಿರುತ್ತಾರೆ.

## 32. ಶೌಚಸನ್ತೋಷತಪಃಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ

ಟೀ॥ ಒಳಗೆ ಮತ್ತು ಹೊರಗೆ ಶುದ್ಧಿಮಾಡಿಕೊಳ್ಳುವುದು, ತೃಪ್ತಿಯಾಗಿರುವುದು, ತಪಸ್ಸು ಶಾಸ್ತ್ರವನ್ನು ಓದುವುದು, ದೇವರನ್ನು ಪೂಜಿಸುವುದು ಇವು ನಿಯಮಗಳು.

ವಿ॥ ಹೊರಗಣ ಶೌಚವೆಂದರೆ ಶರೀರವನ್ನು ಶುಚಿಯಾಗಿಟ್ಟುಕೊಂಡಿರುವುದು. ಕೊಳಕನಾಗಿರುವವನು ಎಂದಿಗೂ ಯೋಗಿಯಾಗುವುದಿಲ್ಲ. ಇದರ ಜತೆಗೆ ಅಂತಃಶುದ್ಧಿ ಯಾಗಿಯೂ ಇರಬೇಕು. ಇದು 1ನೇ ಪಾದದ 33ನೇ ಸೂತ್ರದಲ್ಲಿ ಹೇಳಿದ ಸದ್ಗುಣಗಳಿಂದ ಬರುತ್ತದೆ. ಒಳಗಣ ಶುದ್ಧಿಯೆಂಬುದು ಹೊರಗಣ ಶುದ್ಧಿಗಿಂತ ಉತ್ತಮವಾದುದೇನೋ ನಿಜ. ಆದರೆ ಎರಡೂ ಅವಶ್ಯಕವೆ. ಒಳಗಣ ಶುದ್ಧಿಯಿಲ್ಲದೆ ಹೊರಗಣ ಶುದ್ಧಿಯಿದ್ದರೂ ಏನೂ ಉಪಯೋಗವಿಲ್ಲ.

## 33. ವಿತರ್ಕಬಾಧನೇ ಪ್ರತಿಪಕ್ಷಭಾವನಮ್

ಟೀ॥ ಯೋಗಿಗಳಿಗೆ ವಿರುದ್ಧವಾದ ಯೋಚನೆಗಳನ್ನು ನಿಲ್ಲಿಸುವುದಕ್ಕೆ ಇವುಗಳಿಗೆ ಆಗದ ಯೋಚನೆಗಳನ್ನು ತಂದುಕೊಳ್ಳಬೇಕು.

ವಿ॥ ಹಿಂದೆ ಹೇಳಿದ ಸದ್ಗುಣಗಳನ್ನು ಅಭ್ಯಾಸಮಾಡುವುದಕ್ಕೆ ಇದೇ ಮಾರ್ಗ. ಕದಿಯಬೇಕೆಂಬ ಯೋಚನೆ ಬಂದರೆ ಕದಿಯಬಾರದೆಂಬುದನ್ನು ಯೋಚಿಸಿಕೊಳ್ಳಬೇಕು. ದಾನವನ್ನು ತೆಗೆದುಕೊಳ್ಳಬೇಕೆಂಬ ಯೋಚನೆ ಬಂದರೆ ಇದಕ್ಕೆ ಪ್ರತಿಯಾಗಿ ಮತ್ತೊಂದು ಯೋಚನೆಯನ್ನು ಅದರ ಸ್ಥಳಕ್ಕೆ ತರಬೇಕು.

## 34. ವಿತರ್ಕಾ ಹಿಂಸಾದಯಃ ಕೃತಕಾರಿತಾನುಮೋದಿತಾ ಲೋಭಕ್ರೋಧ ಮೋಹಪೂರ್ವಕಾ ಮೃದುಮಧ್ಯಾಧಿಮಾತ್ರಾ ದುಃಖಾಜ್ಞಾನಾನನ್ತಫಲಾ ಇತಿ ಪ್ರತಿಪಕ್ಷಭಾವನಮ್

ಟೀ॥ ಆಸೆಯಿಂದ, ಸಿಟ್ಟಿನಿಂದ ಅಥವಾ ತಪ್ಪು ತಿಳಿವಳಿಕೆಯಿಂದ ಮಾಡಿದ, ಮಾಡಿಸಿದ ಅಥವಾ ಒಪ್ಪಿದ ದುಃಖರೂಪವಾದ ಅಥವಾ ಅಜ್ಞಾನರೂಪವಾದ ಅನಂತಫಲವುಳ್ಳ ಹಿಂಸೆ ಮೊದಲಾದವುಗಳೆ ಯೋಗಕ್ಕೆ ವಿಘ್ನಗಳು. ಇದೇ ಪ್ರತಿಪಕ್ಷವನ್ನು ಭಾವಿಸುವ ಕ್ರಮವು.

ವಿ॥ ನಾನು ಒಂದು ಸುಳ್ಳು ಹೇಳಿದರೆ ಅಥವಾ ಮತ್ತೊಬ್ಬನಿಂದ ಹೇಳಿಸಿದರೆ ಅಥವಾ ಮತ್ತೊಬ್ಬನು ಹೇಳಿದುದನ್ನು ಸರಿಯೆಂದು ಒಪ್ಪಿದರೆ ಎಲ್ಲವೂ ಪಾಪವೆ. ಎಷ್ಟೇ ಸುಳ್ಳಾಗಲಿ ಸುಳ್ಳೆ. ಪ್ರತಿಯೊಂದು ಕೆಟ್ಟ ಯೋಚನೆಯೂ ಹಿಂದಕ್ಕೆ ಪುಟನೆಗೆಯುತ್ತದೆ. ಪ್ರತಿಯೊಂದು ಹಗೆತನದ ಯೋಚನೆಯೂ–ಅದು ಎಲ್ಲಿಯೋ ಗುಹೆಯಲ್ಲಿ ಮಾಡಿದ ಯೋಚನೆಯಾಗಿದ್ದರೂ ಕೂಡ– ಒಂದು ಕಡೆ ಕೂಡಿಟ್ಟುಕೊಂಡಿದ್ದು ಒಂದಿಲ್ಲದಿದ್ದರೆ ಒಂದು ದಿನ ಬಹಳ ಶಕ್ತಿಯಿಂದ ಕೂಡಿ ದುಃಖವೆಂಬ ರೂಪವನ್ನು ಧರಿಸಿಕೊಂಡು ನಮ್ಮಲ್ಲಿಗೆ ಬಂದುಬಿಡುತ್ತದೆ. ಹಗೆತನ, ಹೊಟ್ಟೆಕಿಚ್ಚು ಇಂಥ ಯೋಚನೆಗಳನ್ನು ಹೊರಕ್ಕೆ ಬಿಟ್ಟರೆ ಅವು ಚಕ್ರಬಡ್ಡಿಯ ಸಮೇತ ನಿಮ್ಮಲ್ಲಿಗೆ ತಿರುಗಿ

ಬರುತ್ತವೆ. ಅವುಗಳನ್ನು ತಪ್ಪಿಸುವುದು ಯಾರಿಂದಲೂ ಆಗುವುದಿಲ್ಲ. ಅವುಗಳನ್ನು ಈಚೆಗೆ ಹೊರಡಿಸುವುದೇ ತಡ; ಅವುಗಳನ್ನು ಸಹಿಸಿಕೊಳ್ಳಬೇಕಾಗುವುದು. ಇದನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದರೆ ಕೆಟ್ಟ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ.

## 35. ಅಹಿಂಸಾಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ

ಟೀ|| ಅಹಿಂಸೆ ನಿಂತುಬಿಟ್ಟರೆ ಅವನ ಹತ್ತಿರ (ಇತರರಲ್ಲಿರುವ) ಎಲ್ಲಾ ವಿಧವಾದ ವೈರಗಳೂ ಹೋಗುವುವು.

ವಿ|| ಮತ್ತೊಬ್ಬರಿಗೆ ಹಿಂಸೆ ಮಾಡದೆ ಇರುವುದರ ಕೊನೆಯನ್ನು ಮುಟ್ಟಿದರೆ ಅಂಥವನ ಬಳಿಯಲ್ಲಿ ಕ್ರೂರಸ್ವಭಾವವುಳ್ಳ ಪ್ರಾಣಿಗಳು ಕೂಡ ಶಾಂತವಾಗಿರುವುವು. ಯೋಗಿಯ ಮುಂದೆ ಹುಲಿಯೂ ಕುರಿಯೂ ಒಟ್ಟಿಗೆ ನಲಿದಾಡುತ್ತಿರುವುವು. ಆ ಸ್ಥಿತಿಯನ್ನು ಪಡೆದರೆ ಆಗ ಮಾತ್ರ ಅಹಿಂಸೆಯು ಗಟ್ಟಿಯಾಗಿ ನಿಂತಂತಾಯಿತೆಂದು ತಿಳಿಯಬೇಕು.

## 36. ಸತ್ಯಪ್ರತಿಷ್ಠಾಯಾಂ ಕ್ರಿಯಾಫಲಾಶ್ರಯತ್ವಮ್

ಟೀ|| ಸತ್ಯವು ನಿಂತರೆ ಯೋಗಿಗೆ ತನಗೂ ಇತರರಿಗೂ ಕ್ರಿಯೆಗಳಿಲ್ಲದೆ ಕ್ರಿಯಾಫಲವನ್ನು ಪಡೆಯುವ ಶಕ್ತಿ ಬರುವುದು.

ವಿ|| ಈ ಸತ್ಯವೆಂಬ ಶಕ್ತಿಯು ರೂಢವಾದರೆ ಕನಸಿನಲ್ಲಿಯೂ ಸುಳ್ಳು ಹೇಳುವುದಿಲ್ಲ. ಮನಸ್ಸಿನಲ್ಲಿಯೂ ಮಾತಿನಲ್ಲಿಯೂ ಕೆಲಸದಲ್ಲಿಯೂ ಸತ್ಯವಂತರಾಗಿಯೆ ಇರುತ್ತೇವೆ. ನಾವು ಹೇಳಿದುದೇ ಸತ್ಯವಾಗುವುದು. ಸುಖಿಯಾಗಿರೆಂದು ಒಬ್ಬನಿಗೆ ಹೇಳಿದರೆ ಅವನು ಸುಖಿಯಾಗುವನು. ಒಬ್ಬನು ರೋಗಿಯಾಗಿದ್ದರೆ "ವಾಸಿಯಾಗಲಿ" ಎಂದರೆ ಕೂಡಲೆ ಅವನಿಗೆ ವಾಸಿಯಾಗುವುದು.

## 37. ಅಸ್ತೇಯಪ್ರತಿಷ್ಠಾಯಾಂ ಸರ್ವರತ್ನೋಪಸ್ಥಾನಮ್

ಟೀ|| ಕದಿಯದಿರುವುದು ನಿಂತರೆ ಯೋಗಿಗೆ ಎಲ್ಲಾ ಐಶ್ವರ್ಯವೂ ಬರುವುದು.

ವಿ|| ಪ್ರಕೃತಿಯನ್ನು ಎಷ್ಟೆಷ್ಟು ಬಿಟ್ಟೋಡಿದರೆ ಅದು ಅಷ್ಟಷ್ಟು ಬೆನ್ನು ಹತ್ತುವುದು. ಅದನ್ನು ಲಕ್ಷ್ಯವೇ ಮಾಡದಿದ್ದರೆ ನಿನಗೆ ದಾಸನಾಗುವುದು.

## 38. ಬ್ರಹ್ಮಚರ್ಯಪ್ರತಿಷ್ಠಾಯಾಂ ವೀರ್ಯಲಾಭಃ

ಟೀ|| ಬ್ರಹ್ಮಚರ್ಯವು ರೂಢವಾದರೆ ಶಕ್ತಿಯು ಬರುವುದು.

ವಿ|| ಬ್ರಹ್ಮಚರ್ಯವುಳ್ಳಾತನ ಮೆದುಳಿನಲ್ಲಿ ಹೆಚ್ಚಿನ ಶಕ್ತಿಯೂ ಮಹಾ ಸಂಕಲ್ಪಶಕ್ತಿಯೂ ಇರುವುದು. ಬ್ರಹ್ಮಚರ್ಯವಿಲ್ಲದಿದ್ದರೆ ಧಾರ್ಮಿಕ ಶಕ್ತಿ ಬರಲಾರದು. ಬ್ರಹ್ಮಚರ್ಯದಿಂದ ಜನರೆಲ್ಲರೂ ಸಂಪೂರ್ಣವಾಗಿ ತನ್ನ ವಶರಾಗುವರು. ಯಾರು ಯಾರು ಲೋಕದಲ್ಲಿ

ಧರ್ಮೋಪದೇಶಕರಾಗಿದ್ದರೂ ಅವರೆಲ್ಲ ಮಹಾಬ್ರಹ್ಮಚಾರಿಗಳಾಗಿರುತ್ತಿದ್ದರು. ಇದರಿಂದಲೆ ಅವರಿಗೆ ಹೆಚ್ಚಿನ ಶಕ್ತಿ ಬಂದಿತ್ತು. ಆದುದರಿಂದ ಯೋಗಿಯು ಬ್ರಹ್ಮಚಾರಿಯಾಗಿರಬೇಕು.

## 39. ಅಪರಿಗ್ರಹಸ್ಥೈರ್ಯೇ ಜನ್ಮ ಕಥಂತಾಸಂಬೋಧಃ

ಟೀ॥ (ದಾನಗಳನ್ನು) ತೆಗೆದುಕೊಳ್ಳದೆ ಇರುವುದು ಗಟ್ಟಿಯಾಗಲು ಹಿಂದಿನ ಜನ್ಮದ ನೆನಪುಬರುವುದು.

ವಿ॥ ದಾನಗಳನ್ನು ಸ್ವೀಕರಿಸದೆ ಇರುವಾತನಿಗೆ ಮತ್ತೊಬ್ಬರ ಹಂಗು ಇರುವುದಿಲ್ಲ. ಒಬ್ಬರ ಆಶ್ರಯವಿಲ್ಲದೆ ಸ್ವತಂತ್ರನಾಗಿರುತ್ತಾನೆ. ಅವನ ಮನಸ್ಸು ಶುದ್ಧವಾಗಿರುವುದು. ದಾನವನ್ನು ತೆಗೆದುಕೊಳ್ಳುವವನಿಗೆ ಒಂದೊಂದು ದಾನವನ್ನು ತೆಗೆದುಕೊಂಡರೆ ಅಷ್ಟಷ್ಟು ದಾತನ ಪಾಪವೂ ಬರುವ ಸಂಭವವುಂಟು. ಹಾಗೆ ದಾನಸ್ವೀಕಾರಮಾಡದವನಿಗೆ ಚಿತ್ತಶುದ್ಧಿಯಾಗಿ ಅದಕ್ಕೆ ಪೂರ್ವಜನ್ಮದ ಸ್ಮರಣೆಯು ಮೊದಲು ತೋರುವುದು. ಆಗ ಮಾತ್ರ ಯೋಗಿಗೆ ತಾನು ಪಡೆಯಬೇಕಾದುದರಲ್ಲಿ ದೃಢವಿಶ್ವಾಸ ಕೂಡುವುದು. ಹೀಗೆ ಎಷ್ಟೋ ಸಾರಿ ಹುಟ್ಟುತ್ತ ಸಾಯುತ್ತ ಇದ್ದೇನೆಂದು ಗೊತ್ತಾಗುವುದರಿಂದ "ಈ ಸಲ ನಾನು ಮುಕ್ತನಾಗುವೆನು. ಇನ್ನು ಮುಂದೆ ಹೋಗುವುದೂ ಇಲ್ಲ; ಬರುವುದೂ ಇಲ್ಲ; ಪ್ರಕೃತಿಗೆ ದಾಸನಾಗುವುದೂ ಇಲ್ಲ" ಎಂದು ನಿಶ್ಚಯಿಸಿಕೊಳ್ಳುತ್ತಾನೆ.

## 40. ಶೌಚಾತ್ಸ್ವಾಂಗಜುಗುಪ್ಸಾ ಪರೈರಸಂಸರ್ಗಃ

ಟೀ॥ ಒಳಗಣ ಮತ್ತು ಹೊರಗಣ ಶುಚಿತ್ವವು ನಿಲ್ಲುವುದರಿಂದ ತನ್ನ ಶರೀರದಲ್ಲಿ ಜಿಗುಪ್ಸೆಯೂ ಇನ್ನೊಬ್ಬರೊಡನೆ ಸೇರದಿರುವುದೂ ಆಗುವುವು.

ವಿ॥ ನಿಜವಾದ ಒಳಗಣ ಶುದ್ಧಿಯೂ ಹೊರಗಣ ಶುದ್ಧಿಯೂ ಆದರೆ ಶರೀರದ ಮೇಲೆ ಅಕ್ಕರೆ ತಪ್ಪಿ ಅದನ್ನು ಅಂದವಾಗಿಟ್ಟುಕೊಂಡಿರಬೇಕೆಂಬ ಭಾವನೆ ತಪ್ಪುವುದು. ಅತ್ಯಂತ ಸುಂದರವಾದುದೆಂದು ಇತರರು ಹೇಳುವ ಮುಖಕ್ಕೆ ಬುದ್ಧಿಯ ಆಧಾರವಿಲ್ಲದಿದ್ದರೆ ಯೋಗಿಗೆ ಅದು ಕೇವಲ ಪಶುವಿನ ಮುಖವಾಗಿ ತೋರುತ್ತಿರುವುದು. ಅವನು ಸರ್ವಸಾಧಾರಣ ಮುಖವೆಂದು ಜನರು ಆಡಿಕೊಳ್ಳುವ ಮುಖವನ್ನೆ ಬ್ರಹ್ಮತೇಜಸ್ಸಿನಿಂದ ಕೂಡಿದ್ದರೆ ದಿವ್ಯ ಮುಖವೆನ್ನುವನು. ಈ ಶರೀರದ ಮೇಲೆ ಇರುವ ಆಸಕ್ತಿಯೆ ಮನುಷ್ಯ ಜನ್ಮದಲ್ಲಿರುವ ದೊಡ್ಡ ದೋಷವು. ಶುಚಿತ್ವವು ದೃಢವಾಯಿತೆನ್ನುವುದಕ್ಕೆ ನಾವು ಶರೀರವಲ್ಲವೆಂದು ತಿಳಿದುಕೊಳ್ಳದಿರುವುದೇ ಮೊದಲನೇ ಗುರ್ತು. ಈ ಶುದ್ಧಿ ಬಂದರೆ ಮಾತ್ರ ದೇಹ ಭಾವನೆ ಹೋಗುವುದು.

## 41. ಸತ್ತ್ವಶುದ್ಧಿಸೌಮನಸ್ಯೈಕಾಗ್ರ್ಯೇನ್ದ್ರಿಯಜಯಾತ್ಮದರ್ಶನಯೋಗ್ಯತ್ವಾನಿ ಚ.

ಟೀ॥ ಸತ್ತ್ವವು ಶುದ್ಧಿಯಾಗುವುದು, ಮನಸ್ಸು ಸಂತೋಷದಿಂದಿರುವುದು, (ಮನಸ್ಸು) ಒಂದೇ ಕಡೆಗೆ ನಿಲ್ಲುವುದು, ಇಂದ್ರಿಯಗಳನ್ನು ಗೆಲ್ಲುವುದು, ಆತ್ಮನನ್ನು ಕಾಣುವ ಯೋಗ್ಯತೆ ಇವುಗಳೂ ಆಗುತ್ತವೆ.

ವಿ॥ ಶುಚಿತೆಯನ್ನು ಅಭ್ಯಾಸ ಮಾಡುವುದರಿಂದ ಸತ್ತ್ವ ಗುಣವು ವೃದ್ಧಿಯಾಗಿ ಮನಸ್ಸು ಒಂದು ಕಡೆಗೆ ನಿಂತು ಸಮಾಧಾನದಿಂದಿರುವುದು. ಮನಸ್ಸು ಸಮಾಧಾನವಾಗ ಹತ್ತುವುದೇ ಧಾರ್ಮಿಕನಾದುದಕ್ಕೆ ಮೊದಲನೇ ಗುರ್ತು. ಮುಖವನ್ನು ಜೋಲು ಹಾಕಿಕೊಂಡಿರುವುದು ಅಜೀರ್ಣದ ಗುರ್ತೇ ಹೊರತು ಧರ್ಮದ ಗುರ್ತಲ್ಲ. ಸಂತೋಷವಾಗಿರುವುದೇ ಸತ್ತ್ವದ ಸ್ವಭಾವ. ಸಾತ್ತ್ವಿಕನಾದವನಿಗೆ ಎಲ್ಲವೂ ಸುಖಮಯವಾಗಿಯೇ ಇರುವುದು. ಈ ಗುಣ ಬಂದರೆ ಯೋಗದ ಅಭ್ಯಾಸವು ಮುಂದೆ ಸಾಗುತ್ತಿದೆಯೆಂದರಿಯಬೇಕು. ದುಃಖವೆಂಬುದೆಲ್ಲ ತಮಸ್ಸಿನಿಂದಲೆ ಆಗಿರುವುದು. ಆದುದರಿಂದ ಇದನ್ನು ಬಿಟ್ಟುಬಿಡಬೇಕು. ಮಂಕಾಗಿರುವುದೂ ತಮಸ್ಸಿನ ಫಲವೆ. ಬಲವಾಗಿ, ಚನ್ನಾಗಿ ಮೈಕಟ್ಟುಳ್ಳವರಾಗಿ, ಪ್ರಾಯದವರಾಗಿ, ಅರೋಗರಾಗಿ, ಧೈರ್ಯಶಾಲಿಗಳಾಗಿರುವವರೇ ಯೋಗಿಗಳಾಗುವುದಕ್ಕೆ ಅರ್ಹರು. ಯೋಗಿಯಾದವನಿಗೆ ಪ್ರತಿಯೊಂದೂ ಆನಂದವೆ. ಯಾರ ಮುಖವನ್ನು ಕಂಡರೂ ಅವನಿಗೆ ಸಂತೋಷವಾಗುವುದು. ಇದೇ ಸತ್ಪುರುಷನ ಗುರ್ತು. ದುಃಖವು ಪಾಪದಿಂದ ಹೊರತು ಮತ್ತಾವುದರಿಂದಲೂ ಬರುವುದಿಲ್ಲ. ಸಪ್ಪೆ ಸಪ್ಪೆಯಾಗಿ ಮುಖವನ್ನೇಕೆ ಹಾಕಿಕೊಳ್ಳಬೇಕು? ಅದನ್ನು ಕೇಳಿದರೆ ಹೆದರಿಕೆಯಾಗುವುದು. ಮುಖವನ್ನು ಜೋಲು ಹಾಕಿಕೊಂಡಿರಬೇಕಾದರೆ ಆ ದಿನ ಹೊರಕ್ಕೆ ಹೋಗಬಾರದು. ಒಂದು ಕೋಣೆಯಲ್ಲಿ ಯಾರಿಗೂ ಕಾಣದಂತೆ ಅವಿತುಕೊಂಡಿರಬೇಕು. ಈ ರೋಗವನ್ನೇತಕ್ಕೆ ಜನರ ಹತ್ತಿರಕ್ಕೊಯ್ಯಬೇಕು? ಮನಸ್ಸು ವಶವಾದರೆ ಶರೀರವೆಲ್ಲ ವಶವಾಗುವುದು. ಈ ಯಂತ್ರಕ್ಕೆ ದಾಸರಾಗುವುದಕ್ಕೆ ಬದಲು ಯಂತ್ರವೇ ನಮ್ಮ ಅಡಿಯಾಳಾಗುವುದು. ಈ ಯಂತ್ರವು ಆತ್ಮವನ್ನು ಕೆಳಕ್ಕೆ ಜಗ್ಗುವುದಕ್ಕಾಗುವುದು ಹಾಗಿರಲಿ; ತಾನೆ ಅದಕ್ಕೆ ಅತ್ಯಂತ ಉತ್ತಮವಾದ ಸಾಧನವಾಗುವುದು.

## 42. ಸಂತೋಷಾದನುತ್ತಮಸುಖಲಾಭಃ

ಟೀ॥ ತೃಪ್ತಿಯಾಗುವುದರಿಂದ ಎಲ್ಲಕ್ಕೂ ಹೆಚ್ಚಿನ ಸುಖವು ಬರುವುದು.

## 43. ಕಾಯೇನ್ದ್ರಿಯಸಿದ್ಧಿರಶುದ್ಧಿಕ್ಷಯಾತ್ತಪಸಃ

ಟೀ॥ ತಪಸ್ಸಿನಿಂದ ಅಶುದ್ಧಿಯು ನಾಶವಾಗಿ ಶರೀರ ಮತ್ತು ಇಂದ್ರಿಯಗಳಿಗೆ ಸಿದ್ಧಿಗಳು ಬರುವುವು.

ವಿ॥ ತಪಸ್ಸಿನ ಫಲಗಳು ಬಹು ಬೇಗನೆ ಕಾಣಿಸಿಕೊಳ್ಳುತ್ತವೆ; ದೃಷ್ಟಿ ಶಕ್ತಿಯು ಹೆಚ್ಚುವುದು; ದೂರದಿಂದ ಶಬ್ದ ಕೇಳಿಸುವುದು ಮೊದಲಾದವು ಇದರ ಫಲಗಳು.

## 44. ಸ್ವಾಧ್ಯಾಯಾದಿಷ್ಟದೇವತಾಸಂಪ್ರಯೋಗಃ

ಟೀ॥ ಮಂತ್ರಜಪದಿಂದ ಬೇಕಾದ ದೇವತೆಯು ಸಾಕ್ಷಾತ್ಕಾರವಾಗುವುದು.

ವಿ॥ ಪಡೆಯಬೇಕೆಂಬ ದೇವತೆಯು ಎಷ್ಟೆಷ್ಟಿನ ಹೆಚ್ಚಿನದಾದರೆ ಸಾಧನವೂ ಅಷ್ಟಷ್ಟು ಕಷ್ಟವಾಗಿರುವುದು.

## 45. ಸಮಾಧಿಸಿದ್ಧಿರೀಶ್ವರಪ್ರಣಿಧಾನಾತ್

ಟೀ॥ ಎಲ್ಲವನ್ನೂ ಈಶ್ವರನಿಗೆ ಸಮರ್ಪಿಸುವುದರಿಂದ ಸಮಾಧಿಯಾಗುವುದು.

ವಿ॥ ಈಶ್ವರನಲ್ಲಿ ಅರ್ಪಣೆ ಮಾಡುವುದರಿಂದ ಸಮಾಧಿಯು ಪೂರ್ಣವಾಗುವುದು.

## 46. ಸ್ಥಿರಸುಖಮಾಸನಮ್

ಟೀ॥ ಸ್ಥಿರವಾಗಿ ಸುಖವಾಗಿರುವುದೇ ಆಸನವು.

ವಿ॥ ಇನ್ನು ಆಸನವೆಂದರೆ ಕೂತುಕೊಳ್ಳುವ ಬಗೆ. ಸ್ಥಿರವಾಗಿ ಕೂತುಕೊಳ್ಳುವುದಕ್ಕೆ ಬಂದ ಹೊರತು ಪ್ರಾಣಾಯಾಮವೇ ಮೊದಲಾದ ಸಾಧನಗಳನ್ನು ಮಾಡುವುದಕ್ಕಾಗುವುದಿಲ್ಲ. ಆಸನವು ಸ್ಥಿರವಾಗುವುದೆಂದರೆ ಶರೀರವಿದೆಯೆಂಬುದೇ ತೋರಬಾರದು. ಎಂದಿನಂತೆ ಕೂತಿದ್ದರೆ ಕೆಲವು ನಿಮಿಷಗಳಾಗುವುದರಲ್ಲಿ ಶರೀರಕ್ಕೆ ಏನೇನೋ ತೊಂದರೆಗಳು ಬರುತ್ತವೆ. ಶರೀರವೊಂದು ಇದೆಯೆಂಬ ಭಾವನೆಯೆ ಹೋಗಿಬಿಟ್ಟರೆ ಶರೀರದ ಅನುಭವಗಳೂ ಹೋಗಿಬಿಡುತ್ತವೆ. ಸುಖವೂ ಆಗುವುದಿಲ್ಲ; ದುಃಖವೂ ಆಗುವುದಿಲ್ಲ. ಮತ್ತೆ ಶರೀರಧಾರಣೆ ಮಾಡಿದರೆ ಎಷ್ಟೋ ಆಯಾಸ ಹೋದಂತೆ ಕಾಣುವುದು. ಶರೀರಕ್ಕೆ ಪೂರ್ಣವಿಶ್ರಾಂತಿ ಕೊಡುವುದೆಂದರೆ ಇದೊಂದೇ ಮಾರ್ಗ. ಹೀಗೆ ಶರೀರವನ್ನು ಜಯಿಸಿ ಸ್ಥಿರವಾಗಿಟ್ಟು ಕೊಂಡಿರುವುದಕ್ಕೆ ಬಂದರೆ ಸಾಧನವೂ ಸ್ಥಿರವಾಗಿರುವುದು. ಆದರೆ ಶರೀರದ ತೊಂದರೆಗಳು ಬರುತ್ತಲೆ ಇದ್ದರೆ ಮನಸ್ಸಿಗೆ ಬಾಧೆಯಾಗಿ ಅದನ್ನು ಒಂದು ಕಡೆ ನಿಲ್ಲಿಸುವುದಾಗದೆ ಹೋಗುವುದು.

## 47. ಪ್ರಯತ್ನಶೈಥಿಲ್ಯಾನನ್ತಸಮಾಪತ್ತಿಭ್ಯಾಮ್

ಟೀ॥ ಸ್ವಲ್ಪ ಪ್ರಯತ್ನದಿಂದಲೂ ಅನಂತವನ್ನು ಧ್ಯಾನಿಸುವುದರಿಂದಲೂ (ಆಸನವು ಸ್ಥಿರವಾಗಿ ಸುಖವಾಗಿರುವುದು).

ವಿ॥ ಅನಂತವನ್ನು ಯೋಚಿಸುತ್ತಿದ್ದರೆ ಆಸನವು ಸ್ಥಿರವಾಗುವುದು. ನಿರುಪಾಧಿಕವಾದ ಅನಂತವನ್ನು ಧ್ಯಾನಿಸಲಾಗುವುದಿಲ್ಲ. ಆದರೆ ಅನಂತವಾಗಿರುವ ಆಕಾಶವನ್ನು ಧ್ಯಾನಿಸಬಹುದು.

## 48. ತತೋ ದ್ವಂದ್ವಾನಭಿಘಾತಃ

ಟೀ॥ ಆಸನವನ್ನು ಜಯಿಸಿದರೆ ದ್ವಂದ್ವಗಳು ವಿಘ್ನ ಮಾಡುವುದಿಲ್ಲ.

ವಿ॥ ದ್ವಂದ್ವಗಳೆಂದರೆ ಒಳ್ಳೆಯದು, ಕೆಟ್ಟದ್ದು, ಶೀತ, ಉಷ್ಣ, ಮೊದಲಾದ ಒಂದಕ್ಕೊಂದು ವಿರುದ್ಧವಾಗಿರುವುವು. ಇವು ಈಗ ತೊಂದರೆ ಮಾಡುವುದಿಲ್ಲ.

## 49. ತಸ್ಮಿನ್ ಸತಿ ಶ್ವಾಸಪ್ರಶ್ವಾಸಯೋರ್ಗತಿವಿಚ್ಛೇದಃ ಪ್ರಾಣಾಯಾಮಃ

ಟೀ॥ ಇದಾದ ಮೇಲೆ ಉಸಿರು ಬಿಡುವುದು ತೆಗೆದುಕೊಳ್ಳುವುದು ಇವೆರಡರ ಗತಿಯನ್ನು ನಿಲ್ಲಿಸುವುದು ಪ್ರಾಣಾಯಾಮವು.

ವಿ॥ ಆಸನವನ್ನು ಜಯಿಸಿದ ಮೇಲೆ ಪ್ರಾಣದ ಗತಿಯನ್ನು ತಡೆದು ಅದನ್ನು ವಶಮಾಡಿಕೊಳ್ಳಬೇಕು. ಪ್ರಾಣಾಯಾಮವೆಂದರೆ ದೇಹದಲ್ಲಿರುವ ಪ್ರಾಣಶಕ್ತಿಯನ್ನು ವಶಮಾಡಿಕೊಳ್ಳುವುದು. ಪ್ರಾಣವೆಂಬುದನ್ನು ಉಸಿರೆಂದು ಭಾಷಾಂತರಮಾಡುವುದು ಸಾಧಾರಣವಾಗಿ ವಾಡಿಕೆಯಾಗಿದೆ. ಆದರೆ ಪ್ರಾಣವೆಂದರೆ ಉಸಿರಲ್ಲ; ಪ್ರಪಂಚದಲ್ಲಿರುವ ಶಕ್ತಿಯ ಒಟ್ಟೇ ಪ್ರಾಣವು. ಪ್ರತಿಯೊಂದು ದೇಹದಲ್ಲಿರುವ ಶಕ್ತಿಯೂ ಅದೆ. ಅದು ಶ್ವಾಸಗತಿಯ ರೂಪದಲ್ಲಿ ಬೇಗನೆ ತೋರ್ಪಡಿಸಿಕೊಳ್ಳುತ್ತಿರುವುದು. ಪ್ರಾಣವು ಉಸಿರನ್ನು ಒಳಕ್ಕೆ ಎಳೆದುಕೊಳ್ಳುತ್ತಿರುವುದರಿಂದ ಈ ಗತಿಯು ಆಗುತ್ತಿರುವುದು. ಪ್ರಾಣವನ್ನು ಜಯಿಸುವುದಕ್ಕೆ ಶ್ವಾಸವನ್ನು ಜಯಿಸುವುದೇ ಸುಲಭವಾದ ಮಾರ್ಗವಾದುದರಿಂದ ಅದನ್ನೆ ಮೊದಲು ಮಾಡಬೇಕು.

## 50. ಬಾಹ್ಯಭ್ಯನ್ತರಸ್ತಂಭವೃತ್ತಿರ್ದೇಶಕಾಲ ಸಂಖ್ಯಾಭಿಃ ಪರಿದೃಷ್ಟೋ ದೀರ್ಘಸೂಕ್ಷ್ಮಃ

ಟೀ॥ ಇದರ ವೃತ್ತಿಗಳು ಹೊರಗೆ ಒಳಗೆ ಅಥವಾ ಗತಿಯಿಲ್ಲದೆ ಇರುವವಾಗಿರುವುವು; ದೇಶ, ಕಾಲ ಮತ್ತು ಸಂಖ್ಯೆ ಇವುಗಳಿಂದ ಗೊತ್ತಾಗಿರುವುವು; ದೀರ್ಘವಾಗಿ ಆಗಲಿ ಅಥವಾ ಸಣ್ಣದಾಗಿ ಆಗಲಿ ಇರುವುವು.

ವಿ॥ ಪ್ರಾಣಾಯಾಮದಲ್ಲಿರುವ ಮೂರು ವಿಧಗಳಾವುವೆಂದರೆ ಉಸಿರೆಳೆದುಕೊಳ್ಳುವುದು ಮೊದಲನೇದು; ಹೊರಕ್ಕೆ ಬಿಡುವುದು ಎರಡನೇದು; ಉಸಿರನ್ನು ಶ್ವಾಸಕೋಶದಲ್ಲಿಯೇ ಇಟ್ಟಿರುವುದು ಅಥವಾ ಶ್ವಾಸಕೋಶವನ್ನು ಹೋಗದಂತೆ ಮಾಡುವುದು ಇದೇ ಮೂರನೇದು. ಇನ್ನು ಇವುಗಳು ದೇಶ ಕಾಲಗಳಿಗನುಗುಣವಾಗಿರುತ್ತವೆ. ದೇಶವೆಂದರೆ [1] ಪ್ರಾಣವನ್ನು ಶರೀರದ ಯಾವುದಾದರೊಂದು ಗೊತ್ತಾದ ಭಾಗದಲ್ಲಿ ಇಟ್ಟುಕೊಂಡಿರುವುದು. ಕಾಲವೆಂದರೆ ಒಂದು ಸ್ಥಳದಲ್ಲಿ ಪ್ರಾಣವನ್ನು ಎಷ್ಟು ಹೊತ್ತು ನಿಲ್ಲಿಸಬೇಕೆಂಬುದು. ಇಷ್ಟು ಸೆಕೆಂಡುಗಳು ಒಂದು ಕ್ರಿಯೆ ನಡೆಯಬೇಕು. ಈ ಪ್ರಾಣಾಯಾಮಕ್ಕೆ ಉದ್ಘಾತವೇ (ಎಂದರೆ ಕುಂಡಲಿನಿಯನ್ನು ಎಬ್ಬಿಸುವುದೇ) ಫಲವು.

## 51. ಬಾಹ್ಯಾಭ್ಯನ್ತರವಿಷಯಾಕ್ಷೇಪೀ ಚತುರ್ಥಃ

ಟೀ॥ ಹೊರಗಿನ ಅಥವಾ ಒಳಗಿನ ವಿಷಯದ ಕಡೆಗೆ ತಿರುಗಿಸಿ ಪ್ರಾಣವನ್ನು ಬಿಗಿಹಿಡಿಯುವುದೇ ನಾಲ್ಕನೇದು.

ವಿ॥ ಇದೇ ನಾಲ್ಕನೇ ಬಗೆಯ ಪ್ರಾಣಾಯಾಮವು. ಪ್ರಾಣವು ಹೊರಕ್ಕಾಗಲಿ ಒಳಕ್ಕಾಗಲಿ ತಿರುಗಿಸುವುದಕ್ಕಾಗುತ್ತದೆ.

## 52. ತತಃ ಕ್ಷೀಯತೇ ಪ್ರಕಾಶಾವರಣಮ್

ಟೀ॥ ಅದರಿಂದ ಚಿತ್ತದ ಬೆಳಕಿನ ಮರೆಯು ಹೋಗುವುದು.

---

1. ಇಲ್ಲಿ ದೇಶವೆಂದರೆ ಉಸಿರನ್ನು ಹೊರಕ್ಕೆ ಬಿಡುವಾಗ ಎಷ್ಟು ದೂರ ಹೊಗುತ್ತದೆಯೊ ಒಳಕ್ಕೆ ತೆಗೆದುಕೊಂಡಾಗ ಎಷ್ಟು ದೂರ ಹೋಗುತ್ತದೆಯೊ ಅದೆಂದು ವಾಚಸ್ಪತಿ ಟೀಕೆಯಲ್ಲಿ ಹೇಳಿದೆ.

ವಿ।। ಚಿತ್ತದಲ್ಲಿ ಸ್ವಭಾವವಾಗಿ ಎಲ್ಲಾ ತಿಳುವಳಿಕೆಯೂ ಇದ್ದೇ ಇರುವುದು. ಇದು ಸತ್ತ್ವ ದ್ರವ್ಯದಿಂದಲೆ ಆಗಿರುವುದು. ಆದರೂ ಅದು ರಜೋಗುಣತಮೋಗುಣಗಳಿಂದ ಮರೆಯಾಗಿರುವುದು. ಪ್ರಾಣಾಯಾಮದಿಂದ ಈ ಮರೆ ಹೋಗುವುದು.

## 53. ಧಾರಣಾಸು ಚ ಯೋಗ್ಯತಾ ಮನಸಃ

ಟೀ।। ಮನಸ್ಸು ಧಾರಣೆಗೆ ಯೋಗ್ಯವಾಗುವುದು

ವಿ।। ಈ ಮರೆ ಹೋದ ಮೇಲೆ ಮನಸ್ಸನ್ನು ನಿಲ್ಲಿಸಬಹುದು.

## 54. ಸ್ವವಿಷಯಾಸಂಪ್ರಯೋಗೇ ಚಿತ್ತಸ್ಯ ಸ್ವರೂಪಾನುಕಾರ ಇವೇನ್ದ್ರಿಯಾಣಾಂ ಪ್ರತ್ಯಾಹಾರಃ

ಟೀ।। ಇಂದ್ರಿಯುಗಳು ತಮ್ಮ ವಿಷಯುಗಳನ್ನು ಬಿಟ್ಟು ಚಿತ್ತದ ರೂಪವನ್ನು ಹೊಂದುವುದರಿಂದ ಅವುಗಳನ್ನು ಒಳಕ್ಕೆ ಎಳೆದುಕೊಳ್ಳುವುದಾಗುವುದು.

ವಿ।। ಇಂದ್ರಿಯಗಳೆಂಬಿವು ಚಿತ್ತದ ಬೇರೆ ಬೇರೆ ರೂಪಾಂತರಗಳು. ಒಂದು ಪುಸ್ತಕವು ಕಾಣುವಾಗ ರೂಪವು ಪುಸ್ತಕದಲ್ಲಿರುವುದಿಲ್ಲ; ಅದು ಮನಸ್ಸಿನಲ್ಲಿಯೇ ಇರುವುದು. ಆ ರೂಪವನ್ನು ಹೊರಡಿಸುವುದಕ್ಕೆ ಯಾವುದೋ ಒಂದು ವಸ್ತು ಹೊರಗಿರುವುದು. ನಿಜವಾದ ರೂಪವೇನೋ ಚಿತ್ತದಲ್ಲಿಯೆ ಇರುವುದು. ಇಂದ್ರಿಯಗಳಿಗೆ ಏನೇನು ಸಿಕ್ಕುವುದೊ ಅವು ಅದರದರಂತೆ ಆಗಿ ಅದರ ಆಕಾರವನ್ನೆ ಹೊಂದುವುವು. ಮನಸ್ಸು ಈ ಆಕಾರವನ್ನು ಪಡೆಯದಂತೆ ಮಾಡಿದರೆ ಶಾಂತರಾಗಿರಬಹುದು. ಇದೇ ಪ್ರತ್ಯಾಹಾರವು.

## 55. ತತಃ ಪರಮಾ ವಶ್ಯತೇನ್ದ್ರಿಯಾಣಾಮ್

ಟೀ।। ಅದರಿಂದ ಇಂದ್ರಿಯಗಳು ಪೂರ್ಣವಾಗಿ ವಶವಾಗುತ್ತವೆ.

ವಿ।। ಯೋಗಿಯಾದವನು ಇಂದ್ರಿಯಗಳು ಹೊರಗಣ ವಿಷಯಗಳ ಆಕಾರವನ್ನು ಪಡೆಯದಂತೆ ಮಾಡಿ ಚಿತ್ತದಂತೆಯೆ ಇರುವಂತೆ ಮಾಡಿಬಿಟ್ಟರೆ ಆಗ ಇಂದ್ರಿಯಗಳು ಸಂಪೂರ್ಣವಾಗಿ ವಶವಾಗುತ್ತವೆ. ಇಂದ್ರಿಯಗಳು ಪೂರ್ಣವಾಗಿ ವಶವಾದರೆ ಪ್ರತಿಯೊಂದು ಮಾಂಸಖಂಡವೂ ಪ್ರತಿಯೊಂದು ನರವೂ ಕೂಡ ವಶವಾಗುವುದು. ಏಕೆಂದರೆ ಎಲ್ಲಾ ವಿಧವಾದ ತಿಳಿವಳಿಕೆಗಳಿಗೂ ಕ್ರಿಯೆಗಳಿಗೂ ಇಂದ್ರಿಯಗಳೇ ಸ್ಥಾನಗಳು. ಇಂದ್ರಿಯಗಳನ್ನು ಜಯಿಸಿದರೆ ಎಲ್ಲಾ ಅನುಭವವನ್ನೂ ಕ್ರಿಯೆಯನ್ನೂ ಯೋಗಿಯು ಜಯಿಸಿದಂತಾಯಿತು. ಶರೀರವೆಲ್ಲ ಅವನು ಹೇಳಿದಂತೆ ಕೇಳುವುದು. ಆಗಲೆ ಜನ್ಮವು ಸಫಲವಾಯಿತು. "ಹುಟ್ಟಿದುದಕ್ಕೆ ಧನ್ಯನಾದೆ" ಎಂದು ಆಗ ಹೇಳಿಕೊಳ್ಳಬಹುದು. ಆ ಇಂದ್ರಿಯನಿಗ್ರಹವೊಂದು ದೊರಕಿದರೆ ಈ ಶರೀರವೆಂಬುದು ಎಷ್ಟು ವಿಚಿತ್ರಕರವಾಗಿರುವುದೆಂಬುದು ಗೊತ್ತಾಗುವುದು.

# ವಿಭೂತಿ ಪಾದ

## ಈ ಅಧ್ಯಾಯದಲ್ಲಿ ಯೋಗಿಯ ಸಿದ್ಧಿಗಳನ್ನು ಹೇಳುತ್ತಾರೆ.

### 1. ದೇಶಬಂಧಶ್ಚಿತ್ತಸ್ಯ ಧಾರಣಾ

ಟೀ॥ ಧಾರಣೆಯೆಂದರೆ ಚಿತ್ತವನ್ನು ಯಾವುದಾದರೊಂದು ವಸ್ತುವಿನಲ್ಲಿ ಹಿಡಿದು ನಿಲ್ಲಿಸುವುದು.

ವಿ॥ ಶರೀರದಲ್ಲಿಯೇ ಆಗಲಿ ಹೊರಗೇ ಆಗಲಿ ಯಾವುದಾದರೊಂದು ವಸ್ತುವಿನಲ್ಲಿ ಮನಸ್ಸು ನಿಂತು ಹಾಗೆಯೆ ಇರುವುದು ಧಾರಣೆಯು

### 2. ತತ್ರ ಪ್ರತ್ಯಯೈಕತಾನತಾ ಧ್ಯಾನಮ್

ಟೀ॥ ಆ ವಸ್ತುವಿನಲ್ಲಿಯೆ ತಿಳಿವಳಿಕೆಯು ಬಿಡದೆ ಹರಿಯುತ್ತಿದ್ದರೆ ಧ್ಯಾನವಾಗುವುದು.

ವಿ॥ ತಲೆಯ ಮೇಲ್ಭಾಗ, ಹೃದಯವೇ ಮೊದಲಾದ ಯಾವುದೊಂದು ಗೊತ್ತಾದ ಸ್ಥಳದಲ್ಲಿ ನಿಂತು ಒಂದೇ ವಸ್ತುವನ್ನು ಯೋಚನೆ ಮಾಡುವುದಕ್ಕೆ ಯತ್ನಿಸುವಾಗ ಆ ಶರೀರ ಭಾಗದಿಂದ ಮಾತ್ರವೇ ಅದಕ್ಕೆ ತಿಳಿವಳಿಕೆಯಾಗುತ್ತ ಇನ್ನಾವ ಭಾಗದಲ್ಲಿಯೂ ಅನುಭವಗಳಾಗದಿದ್ದರೆ ಧಾರಣೆಯೆನಿಸುವುದು. ಕೆಲವು ಕಾಲ ಅದೇ ಸ್ಥಿತಿಯಲ್ಲಿರುವುದಕ್ಕೆ ಮನಸ್ಸಿಗೆ ಬಂದರೆ ಅದೇ ಧ್ಯಾನವು.

### 3. ತದೇವಾರ್ಥಮಾತ್ರನಿರ್ಭಾಸಂ ಸ್ವರೂಪಶೂನ್ಯಮಿವ ಸಮಾಧಿಃ

ಟೀ॥ ಅದೇ ಎಲ್ಲಾ ರೂಪಗಳನ್ನೂ ಬಿಟ್ಟು ಅರ್ಥವನ್ನು ಮಾತ್ರ ತೋರಿಸುತ್ತಿದ್ದರೆ ಸಮಾಧಿಯೆನಿಸುವುದು.

ವಿ॥ ಧ್ಯಾನದಲ್ಲಿ ಎಲ್ಲಾ ರೂಪಗಳೂ ಹೋದರೆ – ಒಂದು ಪುಸ್ತಕವನ್ನು ಧ್ಯಾನಿಸುತ್ತಿದ್ದರೆ ಅದರಲ್ಲಿಯೇ ಮನಸ್ಸಿಡುವುದು ಬಂದರೆ ಮತ್ತು ಅರ್ಥವನ್ನು[1] ಎಂದರೆ ಒಳಗೆ ಆಗುವ

1. ಇಲ್ಲಿ ಭಾಷ್ಯಕಾರರು ಧ್ಯಾನವು ಧ್ಯಾನಿಸತಕ್ಕದ್ದರಲ್ಲಿ ಸೇರಿಕೊಂಡು ಧ್ಯೇಯವಸ್ತುವನ್ನು ತೋರಿಸುತ್ತ ಧ್ಯಾನಾಕಾರವನ್ನು ತೋರದೆಯು ಇದ್ದರೆ ಸಮಾಧಿಯೆಂದು ಹೆಸರು ಬರೆದಿರುತ್ತಾರೆ. ನಾನು ಧ್ಯಾನಮಾಡುತ್ತಿರುವೆನೆಂಬುದೂ ಮರೆತುಹೋಗಿ ಧ್ಯಾನಮಾಡುತ್ತಿರುವ ವಸ್ತುವೊಂದ ಮನಸ್ಸಿನಲ್ಲಿರುವದು ಸಮಾಧಿಯೆಂಬುದೇ ಇಲ್ಲಿ ತಾತ್ಪರ್ಯವು.

ಅನುಭವವನ್ನು ಮಾತ್ರ ಯಾವ ರೂಪವನ್ನೂ ಹೊಂದದೆ ಇರುವ ಹಾಗೆ ಕಂಡರೆ–ಈ ಧ್ಯಾನಕ್ಕೆ ಸಮಾಧಿಯೆಂದು ಹೆಸರು.

## 4. ತ್ರಯಮೇಕತ್ರ ಸಂಯಮಃ

ಟೀ॥ ಈ ಮೂರನ್ನೂ ಒಂದು ವಿಷಯದಲ್ಲಿ (ಅಭ್ಯಾಸ ಮಾಡಿದರೆ) ಸಂಯಮವಾಗುವುದು.

ವಿ॥ ತನ್ನ ಮನಸ್ಸನ್ನು ಒಂದು ವಸ್ತುವಿನ ಕಡೆಗೆ ತಿರುಗಿಸಿ ಅಲ್ಲಿಯೆ ಇಟ್ಟು ವಸ್ತುವನ್ನು ಅದರ ಒಳಭಾಗದಿಂದ ಬೇರ್ಪಡಿಸಿಕೊಂಡು ಬಹುಕಾಲ ಮನಸ್ಸನ್ನು ಅದರ ಸ್ವರೂಪದಲ್ಲಿಯೆ ಇಟ್ಟುಕೊಂಡಿರುತ್ತಿದ್ದರೆ ಅದಕ್ಕೆ ಸಂಯಮವೆಂದು ಹೆಸರು. ಸಂಯಮವೆಂದರೆ ಧಾರಣೆ, ಧ್ಯಾನ ಮತ್ತು ಸಮಾಧಿಗಳು ಒಂದರ ಹಿಂದೊಂದು ಬಂದು ಒಟ್ಟುಗೂಡುವುದು. ಆಗ ಆ ವಸ್ತುವಿನ ಆಕಾರವು ಹೋಗಿ ಅದರ ಅರ್ಥ ಮಾತ್ರ ಮನಸ್ಸಿನಲ್ಲಿರುವುದು.

## 5. ತಜ್ಜಯಾತ್ಪ್ರಜ್ಞಾಲೋಕಃ

ಟೀ॥ ಅದರ ಜಯದಿಂದ ತಿಳಿವಳಿಕೆಯೆಂಬ ಬೆಳಕು ಬರುವುದು.

ವಿ॥ ಈ ಸಂಯಮವನ್ನು ಮಾಡುವುದಕ್ಕೆ ಬಂದರೆ ಎಲ್ಲಾ ಸಿದ್ಧಿಗಳೂ ವಶವಾಗುತ್ತವೆ. ಯೋಗಿಗೆ ಇದೇ ಪರಮಸಾಧನವು. ಜ್ಞಾನದಿಂದ ತಿಳಿಯಬೇಕಾದ ವಸ್ತುಗಳು ಎಷ್ಟೋ ಇವೆ. ಅವು ಸ್ಥೂಲ (ದೊಡ್ಡದು), ಸ್ಥೂಲತರ (ಬಲು ದೊಡ್ಡದು), ಸ್ಥೂಲತಮ (ಎಲ್ಲಕ್ಕಿಂತ ದೊಡ್ಡದು), ಸೂಕ್ಷ್ಮ (ಸಣ್ಣದು), ಸೂಕ್ಷ್ಮತರ (ಬಲು ಸಣ್ಣದು), ಸೂಕ್ಷ್ಮತಮ (ಎಲ್ಲಕ್ಕಿಂತ ಸಣ್ಣದು) ಎಂದು ಮೊದಲಾಗಿ ಅನೇಕ ಬಗೆಯಾಗಿರುವುವು. ಈ ಸಂಯಮವನ್ನು ಮೊದಲು ಸ್ಥೂಲವಸ್ತುಗಳಲ್ಲಿ ಮಾಡಿ ಆಮೇಲೆ ಬರುತ್ತ ಬರುತ್ತ ಸೂಕ್ಷ್ಮವಸ್ತುಗಳಲ್ಲಿ ಮಾಡಬೇಕು.

## 6. ತಸ್ಯ ಭೂಮಿಷು ವಿನಿಯೋಗಃ

ಟೀ॥ ಅದನ್ನು ಅಂತಸ್ತುಗಳಾಗಿ ವಿನಿಯೋಗಿಸಬೇಕು

ವಿ॥ ಬೇಗಬೇಗನೆ ಹೋಗಬೇಕೆಂದು ಪ್ರಯತ್ನಮಾಡದೆ ಇರುವುದಕ್ಕಾಗಿ ಕೊಟ್ಟ ಎಚ್ಚರಿಕೆಯಿದು.

## 7. ತ್ರಯಮನ್ತರಙ್ಗಂ ಪೂರ್ವೇಭ್ಯಃ

ಟೀ॥ ಇವು ಮೂರೂ ಇದಕ್ಕೆ ಮೊದಲು ಹೇಳಿದವುಗಳಿಗಿಂತ ಒಳಸಾಧನಗಳು.

ವಿ॥ ಮೊದಲು ಇದ್ದವು ಎಂದರೆ ಪ್ರಾಣಾಯಾಮ, ಆಸನ, ನಿಯಮ, ಯಮ ಇವು. ಇವು ಧಾರಣಾ, ಧ್ಯಾನ, ಸಮಾಧಿ ಇವಕ್ಕೆ ಹೊರಗಿನ ಅಂಗಗಳು. ಇವುಗಳನ್ನು ಪಡೆದವನಿಗೆ ಸರ್ವಜ್ಞತೆಯೂ ಸರ್ವಶಕ್ತಿತ್ವವೂ ದೊರಕುವುವು; ಆದರೆ ಮುಕ್ತಿಯಾಗಲಾರದು. ಇವು ಮೂರರಿಂದ ಮನಸ್ಸು ನಿರ್ವಿಕಲ್ಪ (ಬೇರೆ ಆಗದಿರುವುದು) ಆಗಲಾರದು. ಇನ್ನೂ ಶರೀರಗಳನ್ನು

ಪಡೆಯುವ ಬೀಜಗಳು ಇದ್ದೇ ಇರುವುವು. ಈ ಬೀಜಗಳನ್ನು ಹುರಿದರೆ ಮತ್ತೆ ಗಿಡಗಳು ಬೆಳೆಯುವುದಿಲ್ಲವೆಂದು ಅನ್ನುತ್ತಾನೆ. ಈ ಸಿದ್ಧಿಗಳಿಂದ ಬೀಜಗಳನ್ನು ಹುರಿದಂತೆ ಆಗುವುದಿಲ್ಲ.

## 8. ತದಪಿ ನಿರ್ಬೀಜಂ ಬಹಿರಙ್ಗಸ್ಯ

ಟೀ॥ ಆದರೆ ಅವೂ ನಿರ್ಬೀಜ (ಸಮಾಧಿಯೆಂಬುದ)ಕ್ಕೆ ಬಹಿರಂಗವಾಗಿವೆ.

ವಿ॥ ಆದುದರಿಂದ ನಿರ್ಬೀಜ ಸಮಾಧಿಯ ದೃಷ್ಟಿಯಿಂದ ನೋಡಿದರೆ ಇವೂ ಹೊರಗಣ ಅಂಗಗಳಾಗುವುವು. ಇನ್ನು ನಿಜವಾದ, ಎಲ್ಲದಕ್ಕೂ ಹೆಚ್ಚಿನ, ಸಮಾಧಿಯನ್ನು ಪಡೆದಂತೆ ಆಗಲಿಲ್ಲ; ಅದಕ್ಕಿಂತ ಕಡಿಮೆಯ ಇನ್ನೊಂದು ಸ್ಥಿತಿಯನ್ನು ಪಡೆದಂತಾಯಿತು. ಇದರಲ್ಲಿ ಈ ಜಗತ್ತೆಲ್ಲ ಇದ್ದುಕೊಂಡಿದ್ದು ಈ ಸಿದ್ಧಿಗಳೆಲ್ಲ ಇರುವುವು.

## 9. ವ್ಯುತ್ಥಾನನಿರೋಧಸಂಸ್ಕಾರಯೋರಭಿಭವಪ್ರಾದುರ್ಭಾವೌ ನಿರೋಧ ಕ್ಷಣಚಿತ್ತಾನ್ವಯೋ ನಿರೋಧಪರಿಣಾಮಃ

ಟೀ॥ ಮನಸ್ಸಿನ[1] ಚಂಚಲವಾದ ವೃತ್ತಿಗಳನ್ನು ತಗ್ಗಿಸುವುದರಿಂದಲೂ ತಗ್ಗಿಸಿದ ವೃತ್ತಿಗಳು ಏಳುವುದರಿಂದಲೂ ಮನಸ್ಸು ತಡೆಯುವ ವೃತ್ತಿಗಳನ್ನು ಪಡೆಯಿತೆಂದೂ ಇದು ತಡೆಯುವುದರ ಫಲವೆಂದೂ ಅನ್ನುವರು.

ವಿ॥ ಎಂದರೆ ಸಮಾಧಿಯು ಈ ಮೊದಲನೇ ಸ್ಥಿತಿಯಲ್ಲಿ ಮನಸ್ಸಿನ ವೃತ್ತಿಗಳು ವಶವಾಗಿರುತ್ತವೆ; ಆದರೆ ಪೂರ್ಣವಾಗಿ ವಶವಾಗಿರುವುದಿಲ್ಲ. ಏಕೆಂದರೆ ಹಾಗೆ ವಶವಾಗಿದ್ದರೆ ವೃತ್ತಿಗಳೆ ಇರುತ್ತಿರಲಿಲ್ಲ. ಇಂದ್ರಿಯಗಳ ದ್ವಾರದಿಂದ ಹೊರಕ್ಕೆ ನುಗ್ಗಬೇಕೆಂದೆನ್ನುವಂತೆ ಮಾಡುವ ವೃತ್ತಿಯನ್ನು ಯೋಗಿಯಾದವನು ಜಯಿಸುವುದಕ್ಕೆ ಪ್ರಯತ್ನಪಟ್ಟರೆ ಆ ರೀತಿ ತಡೆಯುವುದೆಂಬುವುದೇ ಒಂದು ವೃತ್ತಿಯಾಗಿರುವುದು. ಒಂದು ಅಲೆಯನ್ನು ಮತ್ತೊಂದು ಅಲೆಯಿಂದ ಜಯಿಸಿದಂತಾಗುವುದು. ಆದುದರಿಂದ ನಿಜವಾದ ಸಮಾಧಿಯಾಗುವುದಿಲ್ಲ. ಎಲ್ಲಾ ಅಲೆಗಳೂ ಶಾಂತವಾದರೂ ಅವುಗಳನ್ನು ನಿಲ್ಲಿಸುವುದೆಂಬುದೇ ಒಂದು ಅಲೆಯಾಗುವುದು. ಆದರೂ ಮನಸ್ಸು ಸುಮ್ಮನೆ ಗುಳ್ಳೆಗುಳ್ಳೆಗಳಾಗಿರುವುದಕ್ಕಿಂತಲೂ ಈ ಸಮಾಧಿ ಉತ್ತಮ. ಇದು ಹೆಚ್ಚಿನ ಸಮಾಧಿಗೆ ಕೇವಲ ಸಮೀಪದಲ್ಲಿರುವುದು.

## 10. ತಸ್ಯ ಪ್ರಶಾಂತವಾಹಿತಾ ಸಂಸ್ಕಾರಾತ್

ಟೀ॥ ಅದು ಅಭ್ಯಾಸಬಲದಿಂದ ಒಂದೇ ಸಮನೆ ಹರಿಯುವುದು.

ವಿ॥ ಹೀಗೆ ಒಂದೇ ಸಮನೆ ಮನಸ್ಸನ್ನು ಬಿಗಿಹಿಡಿಯುವುದೆಂಬ ಪ್ರವಾಹವು–ದಿನದಿನವೂ

---

1. ಇದು ತಾತ್ಪರ್ಯಾರ್ಥವು. "ವೃತ್ತಿಗಳು ಚಂಚಲವಾಗಿರುವುವು. ಇವುಗಳನ್ನು ತಡೆಯುವುದು, ಇವುಗಳಿಂದ ಆದ ಸಂಸ್ಕಾರಗಳಲ್ಲಿ ಕ್ರಮವಾಗಿ ಕಾಣದೆ ಹೋಗುವುದು, ಕಾಣುವುದು, ಇವಾದರೆ (ಎಂದರೆ ಚಂಚಲತೆಯ ಸಂಸ್ಕಾರವು ಹೋಗಿ ತಡೆದುದರ ಸಂಸ್ಕಾರವು ಕಾಣುತ್ತಿರುವಾಗ) ಆಗ ಅದಕ್ಕೆ (ನಿರೋಧ ಕ್ಷಣದಲ್ಲಿರುವ ಚಿತ್ತಕ್ಕೆ) ನಿರೋಧ ಪರಿಣಾಮವೆಂದರೆ ತಡೆದುದರ ಫಲವೆಂದು ಹೆಸರು" ಎಂದು ಅಕ್ಷರಾರ್ಥವಾಗುವುದು.

ಅಭ್ಯಾಸಮಾಡುತ್ತ ಬಿಡದೆ ಧ್ಯಾನಮಾಡುವ ಶಕ್ತಿಯು–ಮನಸ್ಸಿಗೆ ಬಂದರೆ ಒಂದೇ ಸಮನಾಗುವುದು.

## 11. ಸರ್ವಾರ್ಥತೈಕಾಗ್ರತಯೋಃ ಕ್ಷಯೋದಯೌಚಿತ್ತಸ್ಯ ಸಮಾಧಿಪರಿಣಾಮಃ

ಟೀ॥ ಎಲ್ಲಾ ವಿಷಯಗಳನ್ನೂ ತೆಗೆದುಕೊಳ್ಳುವುದನ್ನು ಕ್ಷೀಣಗೊಳಿಸಿ ಒಂದೇ ವಿಷಯದಲ್ಲಿ ನಿಲ್ಲಿಸುವುದನ್ನು ಬೆಳೆಸುತ್ತ ಬಂದರೆ ಚಿತ್ತಕ್ಕೆ ಸಮಾಧಿಯೆಂಬ ಪರಿಣಾಮವಾಗುವುದು.

ವಿ॥ ಮನಸ್ಸು ಕಂಡಕಂಡ ಪದಾರ್ಥಗಳನ್ನು ತೆಗೆದುಕೊಳ್ಳುತ್ತ ಅವುಗಳ ಹಿಂದೆ ಓಡುತ್ತಿರುವುದು. ಇದು ಕೆಳಗಣ ಸ್ಥಿತಿ. ಇದಕ್ಕೆ ಹೆಚ್ಚಿನ ಸ್ಥಿತಿಯಲ್ಲಿ ಒಂದೇ ವಿಷಯವನ್ನು ಚಿಂತಿಸುತ್ತ ಮಿಕ್ಕವುಗಳನ್ನೆಲ್ಲ ಬಿಟ್ಟುಬಿಡುವುದು. ಇದರಿಂದ ಸಮಾಧಿಯುಂಟಾಗುವುದು.

## 12. ಶಾಂತೋದಿತೌ ತುಲ್ಯಪ್ರತ್ಯಯೌ ಚಿತ್ತಸ್ಯೈಕಾಗ್ರತಾಪರಿಣಾಮಃ

ಟೀ॥ ಒಂದೇ ಸಲಕ್ಕೆ ಹಿಂದಣ ಮತ್ತು ಮುಂದಣದನ್ನು ತಿಳಿದರೆ ಚಿತ್ತದ ಏಕಾಗ್ರತೆಯೆನಿಸುವುದು.

ವಿ॥ ಮನಸ್ಸು ಏಕಾಗ್ರವಾಯಿತೆಂದು ತಿಳಿಯುವುದು ಹೇಗೆ? ಕಾಲವೆಂಬ ಭಾವನೆಯೆ ಹೋಗುವುದರಿಂದ ನಮಗೆ ಗೊತ್ತಿಲ್ಲದಂತೆ ಎಷ್ಟು ಕಾಲವು ಕಳೆದುಹೋದರೆ ಅಷ್ಟು ಏಕಾಗ್ರಚಿತ್ತರಾಗಿರುತ್ತೇವೆ. ವ್ಯವಹಾರದಲ್ಲಿ ನಮಗೆ ಯಾವುದಾದರೊಂದು ಪುಸ್ತಕದಲ್ಲಿ ಹೆಚ್ಚಿನ ಆದರವಿದ್ದರೆ ಕಾಲವು ಕಳೆದು ಹೋಗುವುದೇ ಗೊತ್ತಾಗುವುದಿಲ್ಲ. ಪುಸ್ತಕವನ್ನು ಓದುವುದು ಬಿಟ್ಟಾಗ ಎಷ್ಟೊಂದು ಹೊತ್ತಾಗಿ ಹೋಯಿತೆಂದು ಆಶ್ಚರ್ಯವಾಗುತ್ತದೆ. ಕಾಲವೆಂಬುದೆಲ್ಲ ಬಂದು ವರ್ತಮಾನವೆಂಬ ಒಂದೇ ಒಂದು ಕಾಲದಲ್ಲಿ ಅಡಗುವುದು; ಆದುದರಿಂದ ಹಿಂದಿನ ಕಾಲ, ಮುಂದಿನ ಕಾಲ ಇವೆರಡೂ ಒಂದರಲ್ಲಿ ಸೇರಿದರೆ ಮನಸ್ಸು ಏಕಾಗ್ರವಾಯಿತೆನ್ನಬೇಕು–ಎಂದು ಲಕ್ಷಣವನ್ನು ಹೇಳಿದ್ದಾರೆ.

## 13. ಏತೇನ ಭೂತೇನ್ದ್ರಿಯೇಷು ಧರ್ಮಲಕ್ಷಣಾವಸ್ಥಾಪರಿಣಾಮಾ ವ್ಯಾಖ್ಯಾತಾಃ

ಟೀ॥ ಇದರಿಂದ ಸ್ಥೂಲ ಮತ್ತು ಸೂಕ್ಷ್ಮ ಭೂತಗಳು ಮತ್ತು ಇಂದ್ರಿಯಗಳು ಇವುಗಳಲ್ಲಿ ರೂಪ, ಕಾಲ, ಸ್ಥಿತಿಗಳೆಂಬ ಮೂರು ಬಗೆಯ ಪರಿಣಾಮಗಳನ್ನು ವಿವರಿಸಿದಂತಾಯಿತು.

ವಿ॥ ಇದರಿಂದ ಚಿತ್ತದಲ್ಲಿ ಆಗುವ ರೂಪ, ಕಾಲ, ಸ್ಥಿತಿಗಳ ವಿಕಾರಗಳನ್ನು ವಿವರಿಸಿದಂತಾಯಿತು. ಚಿತ್ತವು ವೃತ್ತಿಗಳಾಗುತ್ತಿರುವುದೇ ರೂಪದ ಪರಿಣಾಮ. ಈ ಬೇರೆ ಬೇರೆ ಆಗುವುದನ್ನು ಈ ಕಾಲದಲ್ಲಿಯೇ ಇರುವಂತೆ ನಿಲ್ಲಿಸಿಕೊಳ್ಳುವುದು ಕಾಲ ಪರಿಣಾಮವು. ಚಿತ್ತವನ್ನು ಹಿಂದಣ ರೂಪಗಳಿಗೆ ಕಳುಹಿಸಿ ಈಗಿನ ಕಾಲವನ್ನು ಬಿಟ್ಟುಬಿಡುವಂತೆ ಮಾಡುವುದೇ ಸ್ಥಿತಿರೂಪವು. ಹಿಂದೆ ಹೇಳಿದ ಸೂತ್ರಗಳಲ್ಲಿ ತಿಳಿಸಿದ ಧ್ಯಾನಗಳಿಂದ ಯೋಗಿಗೆ ಚಿತ್ತದ ಪರಿಣಾಮಗಳು ತನ್ನ ಇಚ್ಛೆಯಂತೆ ಆಗುವುದಕ್ಕೆ ಅನುಕೂಲವಾಗುವುವು. ಇದರಿಂದಲೆ 4ನೇ ಸೂತ್ರದಲ್ಲಿ ಹೇಳಿದ ಸಂಯಮವನ್ನು ಮಾಡುವುದಕ್ಕೆ ಬರುತ್ತದೆ.

## 14. ಶಾನ್ತೋದಿತಾವ್ಯಪದೇಶ್ಯಧರ್ಮಾನುಪಾತೀಧರ್ಮೀ

ಟೀ|| ಹಿಂದಿನ, ಈಗಿನ ಅಥವಾ ಮುಂದೆ ತೋರಬೇಕಾಗಿರುವ ಪರಿಣಾಮದ ಕೆಲಸಕ್ಕೆ ಸಿಕ್ಕುವುದು ಧರ್ಮಿಯು.

ವಿ|| ಎಂದರೆ ಕಾಲದ ಮತ್ತು ಸಂಸ್ಕಾರಗಳ ಕೆಲಸಕ್ಕೆ ಸಿಕ್ಕಿ ಬೇರೆ ಬೇರೆ ರೂಪದಲ್ಲಿ ತೋರುತ್ತಿರುವುದೇ ಧರ್ಮಿಯೆಂದರ್ಥವು.

## 15. ಕ್ರಮಾನ್ಯತ್ವಂ ಪರಿಣಾಮಾನ್ಯತ್ವೇ ಹೇತುಃ

ಟೀ|| ಕ್ರಮವು ಬೇರೆ ಆಗುತ್ತಿರುವುದು ಬೇರೆ ಬೇರೆ ಪರಿಣಾಮವಾಗುವುದಕ್ಕೆ ಕಾರಣವು

## 16. ಪರಿಣಾಮತ್ರಯಸಂಯಮಾದತೀತಾನಾಗತಜ್ಞಾನಮ್

ಟೀ|| ಮೂರು ವಿಧವಾದ ಪರಿಣಾಮಗಳಲ್ಲಿ ಸಂಯಮ ಮಾಡುವುದರಿಂದ ಹಿಂದಿನ ಮತ್ತು ಮುಂದಿನ ಜ್ಞಾನವು ಬರುವುದು.

ವಿ|| ಸಂಯಮವೆಂಬುದಕ್ಕೆ ಮೊದಲು ಹೇಳಿದ ಲಕ್ಷಣವನ್ನು ಮರೆಯದೆ ಇರಬೇಕು. ಮನಸ್ಸು ಧ್ಯಾನ ಮಾಡುವ ವಸ್ತುವಿನ ಹೊರಭಾಗವನ್ನು ಬಿಟ್ಟು ಒಳಗಣ ಅರ್ಥವನ್ನೇ ತಾನೆಂದು ತಿಳಿದುಕೊಳ್ಳುವ ಸ್ಥಿತಿಗೆ ಬಂದರೆ ಮತ್ತು ಬಿಡದೆ ಅಭ್ಯಾಸಮಾಡುವುದರಿಂದ ಮನಸ್ಸಿನಲ್ಲಿ ಅದು ನಿಂತೇ ಇದ್ದರೆ, ಒಂದು ಕ್ಷಣಮಾತ್ರದಲ್ಲಿ ಮನಸ್ಸಿಗೆ ಅದರಲ್ಲಿ ಪ್ರವೇಶಿಸುವುದಕ್ಕೂ ಬಂದರೆ, ಅದು ಸಂಯಮವೆನಿಸುವುದು. ಆ ಸ್ಥಿತಿಯಲ್ಲಿ ಹಿಂದೆ ನಡೆದುದನ್ನೂ ಮುಂದೆ ನಡೆಯುವುದನ್ನೂ ತಿಳಿಯಬೇಕೆಂದರೆ ಸಂಸ್ಕಾರಗಳಲ್ಲಿ ಆಗುವ ಪರಿಣಾಮಗಳಲ್ಲಿ (3.13) ಸಂಯಮವನ್ನು ಮಾಡಬೇಕು. ಇವುಗಳಲ್ಲಿ ಕೆಲವು ಈಗ ಅನುಭವದಲ್ಲಿರುತ್ತವೆ; ಕೆಲವನ್ನು ಅನುಭವಿಸಿ ಆಗಿರುತ್ತದೆ; ಇನ್ನು ಕೆಲವನ್ನು ಮುಂದೆ ಅನುಭವಿಸಬೇಕಾಗಿರುವುದು. ಆದುದರಿಂದ ಈ ಸಂಸ್ಕಾರಗಳಲ್ಲಿ ಸಂಯಮವನ್ನು ಮಾಡಿದರೆ ಹಿಂದುಮುಂದಣ ಸಂಗತಿಗಳು ಗೊತ್ತಾಗುತ್ತವೆ.

## 17.ಶಬ್ದಾರ್ಥಪ್ರತ್ಯಯಾನಾಮಿತರೇತರಾಧ್ಯಾ ಸಾತ್ಸಂಕರಸ್ತತ್ಪ್ರವಿಭಾಗಸಂಯಮಾ ತ್ಸರ್ವಭೂತರುತಜ್ಞಾನಮ್

ಟೀ|| ಸಾಮಾನ್ಯವಾಗಿ ಒಂದರಲ್ಲಿ ಒಂದು ಬೆರೆತುಕೊಂಡಿರುವ ಶಬ್ದ, ಅರ್ಥ, ಮತ್ತು ಜ್ಞಾನ ಇವುಗಳಲ್ಲಿ ಸಂಯಮ ಮಾಡುವುದರಿಂದ ಎಲ್ಲಾ ಪ್ರಾಣಿಗಳ ಶಬ್ದಗಳ ಜ್ಞಾನವೂ ಬರುತ್ತದೆ.

ವಿ|| ಶಬ್ದವೆನ್ನುವುದು ಹೊರಗಣ ಕಾರಣವು. ಅರ್ಥವೆಂದರೆ ಇಂದ್ರಿಯಗಳ ದ್ವಾರದಿಂದ ಮೆದುಳಿಗೆ ಹೋಗಿ ಹೊರಗೆ ಕಂಡದ್ದನ್ನು ಮನಸ್ಸಿಗೆ ತಿಳಿಸುವ ಒಳಗಣ ಜ್ಞಾನಪ್ರವಾಹವು. ಆಮೇಲೆ ಮನಸ್ಸಿನ ಮೇಲೆ ಆಗುವ ಪ್ರತಿಕ್ರಿಯೆಯೇ ಜ್ಞಾನವು. ಇದಾದ ಮೇಲೆ ವಿಷಯಾನುಭವವಾಗುವುದು. ಇವು ಮೂರೂ ಬೆರೆತು ನಮಗೆ ಇಂದ್ರಿಯ ವಿಷಯಗಳೆನಿಸುತ್ತಿರುವುವು. ಹೇಗೆಂದರೆ ಒಂದು ಶಬ್ದವನ್ನು ಕೇಳುವಾಗ ಮೊದಲು ಹೊರಗಣ

ವಾಯು ಕಂಪನೆ, ಆಮೇಲೆ ಕೇಳುವ ಇಂದ್ರಿಯವಾದ ಕಿವಿಯ ಮೂಲಕ ಮನಸ್ಸಿಗೆ ಹೋಗುವ ಒಳಗಣ ಜ್ಞಾನಪ್ರವಾಹವು, ಆಮೇಲೆ ಮನಸ್ಸಿನ ಪ್ರತಿಕ್ರಿಯೆ, ಇವೆಲ್ಲ ಆದ ಮೇಲೆ ಶಬ್ದವು ಕೇಳಬರುವುದು. ನನಗೆ ಗೊತ್ತಾದ ಶಬ್ದವೆಂಬುದು ಕಂಪನೆ, ಜ್ಞಾನಪ್ರವಾಹ, ಪ್ರತಿಕ್ರಿಯೆ ಇವು ಮೂರರ ಮಿಶ್ರವಾಗಿರುವುದು. ಸಾಮಾನ್ಯ ಸ್ಥಿತಿಯಲ್ಲಿ ಇವು ಮೂರೂ ಸೇರಿಕೊಂಡೇ ಇರುತ್ತವೆ. ಆದರೆ ಯೋಗಿಯಾದವನು ಅಭ್ಯಾಸದಿಂದ ಅವುಗಳನ್ನು ಬೇರ್ಪಡಿಸುವುದಕ್ಕಾಗುವುದು. ಈ ಸ್ಥಿತಿಯನ್ನು ಪಡೆದಾಗ ಯಾವುದಾದರೂ ಒಂದು ಶಬ್ದದಲ್ಲಿ ಸಂಯಮವನ್ನು ಮಾಡಿದರೆ ಆ ಶಬ್ದವು ಮನುಷ್ಯನಿಂದ ಆಗಿರಲಿ ಅಥವಾ ಮತ್ತಾವ ಪ್ರಾಣಿಯಿಂದ ಆಗಿರಲಿ ಅದರ ಅರ್ಥವೂ ಗೊತ್ತಾಗುವುದು.

## 18. ಸಂಸ್ಕಾರಸಾಕ್ಷಾತ್ಕರಣಾತ್ಪೂರ್ವಜಾತಿಜ್ಞಾನಮ್

ಟೀ॥ ಈ ಸಂಸ್ಕಾರಗಳನ್ನು ನೋಡುವುದರಿಂದ ಪೂರ್ವಜನ್ಮದ ಜ್ಞಾನವು.

ವಿ॥ ನಮಗೆ ಬರುವ ಪ್ರತಿಯೊಂದು ಅನುಭವವೂ ಚಿತ್ತದಲ್ಲಿ ಒಂದು ಅಲೆಯಾಗಿರುವುದು. ಇದು ಕೆಳಕ್ಕೆ ಬಂದು ಸೂಕ್ಷ್ಮವಾಗುತ್ತಾ ಆಗುತ್ತಾಹೋಗುವುದೇ ಹೊರತು ಎಂದಿಗೂ ನಾಶವಾಗುವುದಿಲ್ಲ. ಅಲ್ಲಿ ಆ ಸಣ್ಣ ರೂಪದಲ್ಲಿಯೇ ಇದ್ದು ಕೊಂಡಿರುವುದು. ಇದನ್ನು ಮತ್ತೆ ಮೇಲಕ್ಕೆ ಪ್ರಯತ್ನದಿಂದ ತಂದರೆ ಅದೇ ನೆನಪಾಗುವುದು. ಈ ಹಿಂದಣ ಸಂಸ್ಕಾರಗಳಲ್ಲಿ ಸಂಯಮ ಮಾಡಬಲ್ಲ ಯೋಗಿಗೆ ಹಿಂದಣ ಜನ್ಮಗಳೆಲ್ಲ ನೆನಪಿಗೆ ಬರುವುವು.

## 19. ಪ್ರತ್ಯಯಸ್ಯ ಪರಚಿತ್ತಜ್ಞಾನಮ್

ಟೀ॥ ಮತ್ತೊಬ್ಬನ ಶರೀರದಲ್ಲಿರುವ ಗುರ್ತುಗಳಲ್ಲಿ ಸಂಯಮ ಮಾಡಿದರೆ ಆತನ ಚಿತ್ತದ ತಿಳಿವಳಿಕೆಯಾಗುವುದು.

ವಿ॥ ಪ್ರತಿಯೊಬ್ಬನಿಗೂ ಮೈಯಲ್ಲಿ ಕೆಲಕೆಲವು ಗುರ್ತಿನ ಚಿಹ್ನೆಗಳಿರುವವಷ್ಟೆ. ಇವುಗಳಿಂದ ಅವನಿಗೂ ಇತರರಿಗೂ ಭೇದವು ಗೊತ್ತಾಗುವುದು. ಈ ಚಿಹ್ನೆಗಳಲ್ಲಿ ಸಂಯಮ ಮಾಡಿದರೆ ಆತನ ಮನಸ್ಸಿನ ಸ್ವಭಾವವು ಗೊತ್ತಾಗುತ್ತದೆ.

## 20[1]. ನ ಚ ತತ್ಸಾಲಮ್ಬನಂ ತಸ್ಯಾವಿಷಯೀಭೂತತ್ವಾತ್.

ಟೀ॥ ಆದರೆ ಅದರೊಳಗಿರುವುದು ಗೊತ್ತಾಗುವುದಿಲ್ಲ. ಏಕೆಂದರೆ ಅದು ಸಂಯಮಕ್ಕೆ ವಿಷಯವಾಗಿರುವುದಿಲ್ಲ.

ವಿ॥ ಶರೀರದ ಮೇಲೆ ಸಂಯಮ ಮಾಡಿದ ಮಾತ್ರಕ್ಕೇ ಚಿತ್ತದೊಳಗಿರುವುದು

---

1. ಇದು ಮತ್ತು ಹಿಂದಿನ ಸೂತ್ರ ಇವೆರಡನ್ನೂ ಸ್ವಾಮಿಯವರು ವ್ಯಾಖ್ಯಾನಕಾರರ ರೀತಿಯನ್ನು ಬಿಟ್ಟು ಬೇರೆ ರೀತಿಯಿಂದ ವಿವರಿಸುತ್ತಾರೆ. ಇದರಿಂದ ಸೂತ್ರದಲ್ಲಿಯೆ ಪಾಠಾಂತರವಿರಬಹುದೆಂತಲೂ ಊಹಿಸುವುದಕ್ಕೆ ಕಾರಣವಿದೆ. ಭಾಷ್ಯದಂತೆ ಸೂತ್ರಗಳ ಅರ್ಥವು ಹೇಗೆಂದರೆ–19. ಮತ್ತೊಬ್ಬನ ಚಿತ್ತದಲ್ಲಿ ಸಂಯಮ ಮಾಡಿದರೆ ಅವನ ಚಿತ್ತದ ಜ್ಞಾನವು. 20. ಆದರೆ ಅದನ್ನು ಆಶ್ರಯಿಸಿರುವ ಸಂಸ್ಕಾರ ಸಮೇತ ಗೊತ್ತಾಗುವುದಿಲ್ಲ. ಏಕೆಂದರೆ ಅದು ಸಂಯಮಕ್ಕೆ ವಿಷಯವಾಗಿರುವುದಿಲ್ಲ.

ಗೊತ್ತಾಗಲಾರದು. ಅದು ಗೊತ್ತಾಗಬೇಕಾದರೆ ಮೊದಲು ಶರೀರದ ಚಿಹ್ನೆಗಳಲ್ಲಿ ಆಮೇಲೆ ಚಿತ್ತದಲ್ಲಿ ಹೀಗೆ ಎರಡು ಬಗೆಯ ಸಂಯಮವನ್ನು ಮಾಡಬೇಕಾಗುವುದು. ಆಗ ಯೋಗಿಗೆ ಚಿತ್ತದಲ್ಲಿರುವುದೆಲ್ಲ ಗೊತ್ತಾಗುವುದು.

## 21. ಕಾಯರೂಪಸಂಯಮಾತ್ತದ್ಗ್ರಾಹ್ಯಶಕ್ತಿ ಸ್ತಂಭೇ ಚಕ್ಷುಃಪ್ರಕಾಶಾಸಂಪ್ರಯೋಗೇಽನ್ತರ್ಧಾನಮ್

ಟೀ॥ ಶರೀರದ ರೂಪದಲ್ಲಿ ಸಂಯಮ ಮಾಡುವುದರಿಂದ ರೂಪಗಳನ್ನು ನೋಡುವ ಶಕ್ತಿಯನ್ನು ನಿಲ್ಲಿಸಿ ಕಣ್ಣಿನ ಬೆಳಗುವ ಶಕ್ತಿಯನ್ನು ಬೇರೆ ಮಾಡಲಾಗಿ ಯೋಗಿಯ ಶರೀರವು ಕಾಣದೆ ಹೋಗುವುದು.

ವಿ॥ ಈ ಕೋಣೆಯಲ್ಲಿ ನಿಂತಿರುವ ಯೋಗಿಯು ನೋಡುವವರಿಗೆ ಮಾಯವಾಗುವುದಕ್ಕೆ ಬರುತ್ತದೆ. ಅವನು ನಿಜವಾಗಿ ಹೋಗಿಯೆ ಬಿಡುವುದಿಲ್ಲ; ಯಾರಿಗೂ ಕಾಣಿಸದ ಹಾಗೆ ಆಗುವನು. ಶರೀರವು ರೂಪವೂ ಬೇರ್ಪಟ್ಟಂತೆ ಇರುವುವು. ಯೋಗಿಯು ಧ್ಯಾನಬಲದಿಂದ ರೂಪವನ್ನೂ ರೂಪವುಳ್ಳ ವಸ್ತುವನ್ನೂ ಬೇರ್ಪಡಿಸುವ ಶಕ್ತಿ ಹುಟ್ಟಿದರೆ ಮಾತ್ರ ಹೀಗೆ ಮಾಡುವುದಕ್ಕಾಗುವುದೆಂಬುದನ್ನು ನೆನಪಿಡಬೇಕು. ಆಗ ಅವನು ಅದರಲ್ಲಿ ಸಂಯಮವನ್ನು ಮಾಡುತ್ತಲೆ ರೂಪಗಳನ್ನು ನೋಡುವ ಶಕ್ತಿಯು ನಿಂತುಹೋಗುವುದು. ಏಕೆಂದರೆ ರೂಪಗಳನ್ನು ನೋಡುವ ಶಕ್ತಿಯು ರೂಪ ಮತ್ತು ರೂಪಿಗಳ ಸಂಯೋಗದಿಂದ ಬರುತ್ತದೆ.

## 22[1]. ಏತೇನ ಶಬ್ದಾದ್ಯನ್ತರ್ಧಾನಮುಕ್ತಮ್

ಟೀ॥ ಇದರಿಂದ ಮಾತನಾಡಿದ ಶಬ್ದಗಳೂ ಮಾಯವಾಗುವುದನ್ನು ವಿವರಿಸಿದಂತಾಯಿತು.

## 23. ಸೋಪಕ್ರಮಂ ನಿರುಪಕ್ರಮಂ ಚ ಕರ್ಮ ತತ್ಸಂಯಮಾದಪರಾನ್ತಜ್ಞಾನಮರಿಷ್ಟೇಭ್ಯೋ ವಾ.

ಟೀ॥ ಕರ್ಮವು ಬೇಗ ಫಲವನ್ನು ಕೊಡುವುದೆಂದೂ ಹಿಂದಿನಿಂದ ಫಲಿಸುವುದೆಂದೂ ಎರಡು ವಿಧವು. ಇವುಗಳಲ್ಲಿ ಸಂಯಮವನ್ನು ಮಾಡುವುದರಿಂದಲಾಗಲಿ ಅಥವಾ ಅರಿಷ್ಟವೆಂಬ ಶಕುನಗಳಿಂದಲಾಗಲಿ ಯೋಗಿಗಳಿಗೆ ತಮ್ಮ ಶರೀರವನ್ನು ಬಿಟ್ಟು ಹೋಗುವ ಸರಿಯಾದ ಕಾಲವು ಗೊತ್ತಾಗುವುದು.

ವಿ॥ ಯೋಗಿಯು ತನ್ನ ಕರ್ಮದಲ್ಲಿ ಎಂದರೆ ಈಗ ತನ್ನ ಮನಸ್ಸಿನಲ್ಲಿ ಕೆಲಸ ಮಾಡುತ್ತಿರುವ ಕರ್ಮ ಸಂಸ್ಕಾರಗಳಲ್ಲಿಯೂ ಮತ್ತು ಮುಂದೆ ಕೆಲಸ ಮಾಡಬೇಕಾಗಿರುವ ಸಂಸ್ಕಾರಗಳಲ್ಲಿಯೂ ಸಂಯಮ ಮಾಡುವುದರಿಂದ ಮುಂದಕ್ಕೆಂದು ಇರುವ ಸಂಸ್ಕಾರಗಳಿಂದ ತನ್ನ ಶರೀರವು ಎಂದು ಬಿದ್ದು ಹೋಗಬೇಕೆಂಬುದನ್ನು ನಿರ್ಣಯವಾಗಿ ತಿಳಿದುಕೊಳ್ಳುತ್ತಾನೆ. ತಾನು ಯಾವಾಗ ಸಾಯುತ್ತೇನೆ; ಎಷ್ಟು ಗಂಟೆಗೆ, ಎಷ್ಟು ನಿಮಿಷಕ್ಕೆಂಬುದು ಕೂಡ ಆತನಿಗೆ

1. ಈ ಸೂತ್ರವು ನಮ್ಮ ಪಾಠದಲ್ಲಿಲ್ಲ. ಭಾಷ್ಯದಲ್ಲಿ "ಏತೇನ ಶಬ್ದಾದ್ಯಂತರ್ಧಾನ ಮುಕ್ತಂ ವೇದಿತವ್ಯಮ್" ಎಂದಿದೆ.

ತಿಳಿಯುವುದು. ಮರಣವು ಸಮೀಪವಾಗುತ್ತಿರುವುದೆಂಬುದನ್ನು ತಿಳಿದುಕೊಳ್ಳುವುದೆಂದರೆ ಹಿಂದುಗಳಿಗೆ ಬಹಳ ಆದರ. ಏಕೆಂದರೆ ಗೀತೆಯಲ್ಲಿ ಮರಣ ಕಾಲದಲ್ಲಿರುವ ಯೋಚನೆಗಳಿಗನುಸಾರವಾಗಿ ಮುಂದಿನ ಜನ್ಮವಾಗುವುದೆಂದು ಹೇಳಿರುತ್ತೆ.

## 24. ಮೈತ್ರ್ಯಾದಿಷು ಬಲಾನಿ

ಟೀ॥ ಮೈತ್ರೀ, ಕರುಣ ಮೊದಲಾದುವುಗಳಲ್ಲಿ (1.33) ಸಂಯಮ ಮಾಡುವುದರಿಂದ ಯೋಗಿಗೆ ಆಯಾಗುಣಗಳಲ್ಲಿ ಹೆಚ್ಚಿನ ಶಕ್ತಿ ಬರುವುದು.

## 25. ಬಲೇಷು ಹಸ್ತಿಬಲಾದೀನಿ

ಟೀ॥ ಆನೆಯ ಬಲವೇ ಮೊದಲಾದ ಬಲಗಳಲ್ಲಿ ಸಂಯಮವನ್ನು ಮಾಡುವುದರಿಂದ ಆದರದರ ಬಲವು ಯೋಗಿಗೆ ಬರುವುದು.

ವಿ॥ ಈ ಸಂಯಮವನ್ನು ಪಡೆದ ಯೋಗಿಗೆ ಬಲ ಬರಬೇಕಾದರೆ ಆನೆಯ ಬಲದಲ್ಲಿ ಸಂಯಮವನ್ನು ಮಾಡಿ ಅದನ್ನು ಪಡೆದುಕೊಳ್ಳುವನು. ಪ್ರತಿಯೊಬ್ಬನಿಗೂ ಎಷ್ಟು ಶಕ್ತಿ ಬೇಕಾದರೆ ಅಷ್ಟು ಬರುವುದು. ಆದರೆ ಅದನ್ನು ಪಡೆಯುವ ಕ್ರಮವನ್ನು ಮಾತ್ರ ತಿಳಿದುಕೊಳ್ಳಬೇಕು.

## 26. ಪ್ರವೃತ್ತ್ಯಾಲೋಕನ್ಯಾಸಾತ್ಸೂಕ್ಷ್ಮವ್ಯವಹಿತವಿಪ್ರಕೃಷ್ಟಜ್ಞಾನಮ್

ಟೀ॥ ಜ್ಯೋತಿಷ್ಮತಿ (ಎಂಬ ದೊಡ್ಡ ಪ್ರಭೆ)ಯಲ್ಲಿ (1.36)

ಸಂಯಮ ಮಾಡುವುದರಿಂದ ಸೂಕ್ಷ್ಮವಾದುದು, ಅಡ್ಡಿ ಇರುವುದು, ದೂರವಿರುವುದು, ಇವುಗಳ ಜ್ಞಾನವು ಬರುವುದು.

ವಿ॥ ಯೋಗಿಯ ಹೃದಯದಲ್ಲಿರುವ ಈ ದೊಡ್ಡ ಬೆಳಕಿನಲ್ಲಿ ಸಂಯಮವನ್ನು ಮಾಡಿದರೆ ಬಹುದೂರವಿರುವ ವಸ್ತುಗಳನ್ನು ಸಹ ನೋಡುವುದಕ್ಕಾಗುವುದು. ಅಂದರೆ ನಡುವೆ ಗುಡ್ಡ ಬೆಟ್ಟಗಳು ಬಂದಿದ್ದರೂ ಅವು ಎಷ್ಟೋ ದೂರವಿದ್ದರೂ ಎಷ್ಟೇ ಸೂಕ್ಷ್ಮವಾಗಿದ್ದರೂ ಕಾಣುವುವು.

## 27. ಭುವನಜ್ಞಾನಂ ಸೂರ್ಯೇ ಸಂಯಮಾತ್

ಟೀ॥ ಸೂರ್ಯನಲ್ಲಿ ಸಂಯಮ ಮಾಡುವುದರಿಮದ ಜಗತ್ತಿನ ಜ್ಞಾನವು.

## 28. ಚಂದ್ರೇ ತಾರಾವ್ಯೂಹಜ್ಞಾನಮ್

ಟೀ॥ ಚಂದ್ರನಲ್ಲಿ ನಕ್ಷತ್ರಗಳ ಜ್ಞಾನವು

## 29. ಧ್ರುವೇ ತದ್ಗತಿಜ್ಞಾನಮ್

ಟೀ॥ ಧ್ರುವ ನಕ್ಷತ್ರದಲ್ಲಿ ನಕ್ಷತ್ರಗಳ ಗತಿಪ್ರಕಾರದ ಜ್ಞಾನವು.

**30. ನಾಭಿಚಕ್ರೇ ಕಾಯವ್ಯೂಹ ಜ್ಞಾನಮ್**

ಟೀ॥ ಹೊಕ್ಕಳಿನ ಚಕ್ರದಲ್ಲಿ ಶರೀರದ ರಚನಾಕ್ರಮದ ಜ್ಞಾನವು

**31. ಕಂಠಕೂಪೇ ಕ್ಷುತ್ಪಿಪಾಸಾನಿವೃತ್ತಿಃ**

ಟೀ॥ ಗಂಟಲಿನ ಹಳ್ಳದಲ್ಲಿ ಹಸಿವು ಬಾಯಾರಿಕೆಗಳು ಹೋಗೋಣವು

**32. ಕೂರ್ಮನಾಡ್ಯಾಂ ಸ್ಥೈರ್ಯಮ್**

ಟೀ॥ ಕೂರ್ಮನಾಡಿಯಲ್ಲಿ ಸ್ಥೈರ್ಯವು

ವಿ॥ ಅಭ್ಯಾಸಕಾಲದಲ್ಲಿ ಶರೀರವು ಬಿಗಿಯಾಗಿರುವುದು

**33. ಮೂರ್ಧಜ್ಯೋತಿಷಿ ಸಿದ್ಧದರ್ಶನಮ್**

ಟೀ॥ ತಲೆಯ ಮೇಲ್ಭಾಗದಿಂದ ಹೊರಡುತ್ತಿರುವ ಬೆಳಕಿನಲ್ಲಿ ಸಿದ್ಧರನ್ನು ನೋಡುವುದು

ವಿ॥ ಸಿದ್ಧರೆಂದರೆ ದೆವ್ವಗಳಿಗಿಂತ ಸ್ವಲ್ಪ ಉತ್ತಮರಾದವರು. ತಲೆಯ ಮೇಲೆ ಯೋಗಿಯು ಮನಸ್ಸನ್ನಿಟ್ಟರೆ ಈ ಸಿದ್ಧರು ಗೋಚರವಾಗುವರು. ಸಿದ್ಧರೆಂಬ ಮಾತು ಮುಕ್ತರೆಂಬರ್ಥದಲ್ಲಿ ಬಹಳವಾಗಿ ಪ್ರಯೋಗವಾಗುತ್ತದೆ. ಇಲ್ಲಿ ಅರ್ಥವಿಲ್ಲ.

**34. ಪ್ರತಿಭಾದ್ವಾ ಸರ್ವಮ್**

ಟೀ॥ ಅಥವಾ ಪ್ರತಿಭೆಯೆಂಬ ಶಕ್ತಿಯಿಂದ ಎಲ್ಲಾ ತಿಳಿವಳಿಕೆಯೂ ಬರುವುದು.

ವಿ॥ ಇವೆಲ್ಲವೂ ಪ್ರತಿಭೆಯುಳ್ಳಾತನಿಗೆ (ಶುದ್ಧಿಯಿಂದ ತನಗೆ ತಾನೇ ತಿಳಿಯುವುದರಿಂದ) ಸಂಯಮವಿಲ್ಲದೆ ಬರುವುವು. ಪ್ರತಿಭೆಯು ಉತ್ತಮವಾದರೆ ಅವನಲ್ಲಿ ಆ ದೊಡ್ಡ ಬೆಳಕು ಹುಟ್ಟುವುದು. ಅವನಿಗೆ ಎಲ್ಲಾ ವಿಷಯಗಳೂ ಗೊತ್ತಾಗುವುವು. ಪ್ರತಿಯೊಂದೂ ಅವನಿಗೆ ಸ್ವಾಭಾವಿಕವಾಗಿ ಸಂಯಮವಿಲ್ಲದೆಯೆ ಬರುವುವು.

**35. ಹೃದಯೇ ಚಿತ್ತಸಂವಿತ್**

ಟೀ॥ ಹೃದಯದಲ್ಲಿ ಚಿತ್ತಗಳ ಜ್ಞಾನವು

**36. ಸತ್ತ್ವಪುರುಷಯೋರತ್ಯನ್ತಾಸಂಕೀರ್ಣಯೋಃ ಪ್ರತ್ಯಯಾವಿಶೇಷೋ ಭೋಗಃ ಪರಾರ್ಥಾತ್ಸ್ವಾರ್ಥಸಂಯಮಾತ್ಪುರುಷಜ್ಞಾನಮ್**

ಟೀ॥ ಭೋಗವೆಂಬುದು ಬೇರೆ ಬೇರೆ ಆದ ಸತ್ತ್ವ ಮತ್ತು ಪುರುಷರನ್ನು ಪ್ರತ್ಯೇಕಿಸಿ ತಿಳಿಯದೆ ಇರುವುದರಿಂದ ಬರುತ್ತದೆ. ಮತ್ತೊಬ್ಬನಿಗಾಗಿ ಇರುವ ಪ್ರಕೃತಿಯಿಂದ ತನ್ನಲ್ಲಿ ನಿಂತಿರುವ ಪುರುಷನು ಬೇರೆ ಆಗಿರುವನು. ಹೀಗೆ ತನ್ನಲ್ಲಿರುವುದರ ಮೇಲೆ ಸಂಯಮ ಮಾಡಿದರೆ ಪುರುಷ ಜ್ಞಾನವು ಬರುವುದು.

ವಿ॥ ಸತ್ತ್ವವೆಂಬುದು ಪ್ರಕೃತಿಯ ವಿಕಾರವು. ಬೆಳಕು ಸುಖಗಳ ಸ್ವರೂಪವುಳ್ಳದ್ದು. ಇದರ ಕಾರ್ಯವೆಲ್ಲ ಪುರುಷನಿಗಾಗಿರುವುದು. ಸತ್ತ್ವದಲ್ಲಿ ಅಹಂಕಾರವಿಲ್ಲದೆ ಪುರುಷನ ಜ್ಞಾನದಿಂದ ಮಾತ್ರ ಬೆಳಗಾಗುತ್ತಿದ್ದರೆ ಅದನ್ನು ತನ್ನಲ್ಲಿ ತಾನಿರುವುದೆನ್ನುವರು. ಏಕೆಂದರೆ ಆ ಸ್ಥಿತಿಯಲ್ಲಿ ಯಾವ ಸಂಬಂಧವೂ ಇರುವುದಿಲ್ಲ.

## 37. ತತಃ ಪ್ರಾತಿಭಶ್ರಾವಣವೇದನಾದರ್ಶಾಸ್ವಾದವಾರ್ತಾ ಜಾಯನ್ತೇ

ಟೀ॥ ಅದರಿಂದ ಪ್ರತಿಭೆಗೆ ಸೇರಿದ ಕೇಳ್ಕೋಣ, ಮುಟ್ಟೋಣ, ನೋಡೋಣ, ಮೂಸೋಣವೆಂಬಿವು ಹುಟ್ಟುತ್ತವೆ.

## 38. ತೇ ಸಮಾಧಾವುಪಸರ್ಗಾವ್ಯುತ್ಥಾನೇ ಸಿದ್ಧಯಃ

ಟೀ॥ ಸಮಾಧಿಗೆ ಇವು ಅಡ್ಡಿಗಳು; ವ್ಯವಹಾರದಲ್ಲಿ ಸಿದ್ಧಿಗಳು.

ವಿ॥ ಯೋಗಿಗೆ ಪ್ರಪಂಚದ ಭೋಗಗಳ ಅನುಭವವು ಪುರುಷ ಮತ್ತು ಚಿತ್ತ ಇವುಗಳ ಸಂಯೋಗದಿಂದ ಬರುತ್ತಿರುವುವು. ಇವೆರಡೂ ಬೇರೆ ಬೇರೆ. ಒಂದು ಪ್ರಕೃತಿ, ಒಂದು ಪುರುಷ: ಇಂತೆಂಬ ತಿಳಿವಳಿಕೆಯಲ್ಲಿ ಸಂಯಮವನ್ನು ಮಾಡಬೇಕೆಂದು ಬಯಸಿದರೆ ಅವನಿಗೆ ಪುರುಷ ಜ್ಞಾನವಾಗುವುದು. ಇದರಿಂದ ವಿವೇಕವುಂಟಾಗುವುದು. ಆ ವಿವೇಕವು ಬಂದರೆ ಅವನಿಗೆ ಪ್ರತಿಭೆಯೆಂದರೆ ಉತ್ತಮ ಜ್ಞಾನದ ಬೆಳಕು ಬರುತ್ತದೆ. ಆದರೆ ಅತ್ಯಂತ ಪುರುಷಾರ್ಥಕ್ಕೆ ಅಂದರೆ ಪರಿಶುದ್ಧವಾದ ಆತ್ಮಜ್ಞಾನವನ್ನು ಪಡೆದು ಮುಕ್ತಿಹೊಂದುವುದಕ್ಕೆ ಈ ಸಿದ್ಧಿಗಳು ಅಡ್ಡಿಗಳಾಗಿರುವುವು; ಯೋಗಿಯ ದಾರಿಯಲ್ಲಿ ಸಿಕ್ಕುವುವು. ಇವುಗಳನ್ನು ಒಲ್ಲೆನೆಂದವನಿಗೆ ಮುಕ್ತಿಯಾಗುವುದು. ಇವುಗಳನ್ನು ಪಡೆಯಬೇಕೆಂಬ ಆಸೆಯುಂಟಾದರೆ ಅವನ ಅಭ್ಯಾಸವು ಮುಂದೆ ಸಾಗದೆ ನಿಂತುಬಿಡುವುದು.

## 39. ಬಂಧಕಾರಣಶೈಥಿಲ್ಯಾತ್ಪ್ರಚಾರಸಂವೇದನಾಚ್ಚ ಚಿತ್ತಸ್ಯ ಪರಶರೀರಾವೇಶಃ

ಟೀ॥ ಬಂಧಕ್ಕೆ ಕಾರಣವಾದುದು ಸಡಿಲವಾದರೆ ಇಂದ್ರಿಯಗಳಿಂದ ಸಂಚರಿಸುವ ಮಾರ್ಗದ ತಿಳಿವಳಿಕೆಯಿಂದ ಯೋಗಿಯು ಮತ್ತೊಬ್ಬನ ಶರೀರವನ್ನು ಹೋಗುವನು.

ವಿ॥ ಯೋಗಿಗೆ ಬೇರೊಂದು ಶರೀರದಲ್ಲಿ ಕೆಲಸ ಮಾಡುತ್ತಲೆ ಇದ್ದು ಒಂದು ಹೆಣದೊಳಕ್ಕೆ ಪ್ರವೇಶಿಸಿ ಎಬ್ಬಿಸಿ ಓಡಾಡಿಸುವುದಕ್ಕೆ ಬರುತ್ತದೆ; ಅಥವಾ ಬದುಕಿರುವವನ ಶರೀರದೊಳಕ್ಕೆ ಹೊಕ್ಕು ಅವನ ಇಂದ್ರಿಯಗಳನ್ನೂ ಮನಸ್ಸನ್ನೂ ನಿಲ್ಲಿಸಿ ಆ ಕಾಲದ ಪೂರ್ತಿಗೆ ಆ ಶರೀರದಲ್ಲಿ ಕೆಲಸ ಮಾಡುವುದಕ್ಕೆ ಬರುತ್ತದೆ. ಈ ಪ್ರಕೃತಿ ಪುರುಷರ ವಿವೇಕದಿಂದಲೆ ಅದು ಯೋಗಿಗೆ ಸಾಧ್ಯವಾಗುವುದು. ಮತ್ತೊಬ್ಬನ ಶರೀರವನ್ನು ಹೋಗಬೇಕೆಂದರೆ ಆ ಶರೀರದಲ್ಲಿ ಸಂಯಮವನ್ನು ಮಾಡಿ ಅದನ್ನು ಪ್ರವೇಶಿಸುತ್ತಾನೆ. ಏಕೆಂದರೆ ಅವನ ಆತ್ಮವು ಸರ್ವವ್ಯಾಪಿಯಾಗಿರುವುದು ಹಾಗಿರಲಿ; ಅವನ ಮನಸ್ಸೂ ಸರ್ವವ್ಯಾಪಿಯೆಂದು ಯೋಗಿಯು ಹೇಳುತ್ತಾನೆ. ಅದು ಒಟ್ಟು ಮನಸ್ಸಿನಲ್ಲಿ ಒಂದು ಚೂರಾಗಿರುವುದು. ಈಗಿನ ಸ್ಥಿತಿಯಲ್ಲಿ ಈ ಶರೀರದಲ್ಲಿರುವ ನರ ಶಕ್ತಿಯಿಂದ

ಕೆಲಸಮಾಡುವುದಕ್ಕೆ ಬರುತ್ತದೆ. ಆದರೆ ಯೋಗಿ ಈ ನರ ಶಕ್ತಿಗಳ ಕಟ್ಟು ಬಿಚ್ಚಿಕೊಂಡರೆ ಬೇರೆ ಕಡೆಯಲ್ಲಿಯೂ ಕೆಲಸ ಮಾಡುವುದಕ್ಕಾಗುತ್ತದೆ.

## 40. ಉದಾನಜಯಾಜ್ಜಲಪಙ್ಕಕಣ್ಟಕಾದಿಷ್ವಸಙ್ಗ ಉತ್ಕ್ರಾನ್ತಿಶ್ಚ.

ಟೀ|| ಉದಾನವೆಂಬ ಪ್ರಾಣವನ್ನು ಜಯಿಸುವುದರಿಂದ ಯೋಗಿಯು ನೀರಿನಲ್ಲಾಗಲಿ, ಕೆಸರಿನಲ್ಲಾಗಲಿ, ಮುಳುಗಿಹೋಗದಿರುವನು. ಅವನಿಗೆ ಮುಳ್ಳುಗಳ ಮೇಲೆಯೂ ನಡೆಯುವುದಕ್ಕೆ ಬರುತ್ತದೆ. ಅವನು ಮನಸ್ಸಿಗೆ ಬಂದಾಗ ಸಾಯುವನು.

ವಿ|| ಉದಾನವೆಂಬುದು ಶ್ವಾಸಕೋಶಗಳನ್ನೂ ಮತ್ತು ಶರೀರದ ಮೇಲ್ಗಡೆ ಇರುವ ಎಲ್ಲಾ ಭಾಗಗಳನ್ನೂ ವಶದಲ್ಲಿಟ್ಟುಕೊಂಡಿರುವ ನರಶಕ್ತಿ ಪ್ರವಾಹವು. ಅದು ಸ್ವಾಧೀನವಾದರೆ ಹಗುರವಾಗಬಹುದು; ನೀರಿನಲ್ಲಿ ಮುಳುಗುವುದಿಲ್ಲ; ಮುಳ್ಳಿನ ಮೇಲೆ ಮತ್ತು ಕತ್ತಿಯ ಅಲಗಿನ ಮೇಲೆ ನಡೆದಾಡಬಹುದು. ಬೆಂಕಿಯಲ್ಲಿ ನಿಲ್ಲಬಹುದು; ಯಾವಾಗ ಬೇಕೆಂದರೆ ಆಗ ಪ್ರಾಣವನ್ನು ಬಿಡಬಹುದು.

## 41. ಸಮಾನಜಯಾಜ್ಜ್ವಲನಮ್

ಟೀ|| ಸಮಾನವನ್ನು ಜಯಿಸುವುದರಿಂದ ತನ್ನ ದೊಡ್ಡ ಬೆಳಕಿನ ಜ್ವಾಲೆಯು ಸುತ್ತಿಕೊಳ್ಳುವುದು.

ವಿ|| ಯಾವಾಗಲೆಂದರೆ ಆಗ ಶರೀರದಿಂದ ಬೆಳಕೇ ಹೊರಬೀಳುತ್ತಿರುವುದು.

## 42. ಶ್ರೋತ್ರಾಕಾಶಯೋಃ ಸಂಬನ್ಧಸಂಯಮಾದ್ದಿವ್ಯಂ ಶ್ರೋತ್ರಮ್

ಟೀ|| ಕಿವಿಗೂ ಆಕಾಶಕ್ಕೂ ಇರುವ ಸಂಬಂಧದಲ್ಲಿ ಸಂಯಮವನ್ನು ಮಾಡುವುದುರಿಂದ ದಿವ್ಯವಾದ ಕೇಳುವಿಕೆಯುಂಟಾಗುವುದು.

ವಿ|| ಆಕಾಶವೂ ಕೇಳುವ ಸಾಧನವಾದ ಕಿವಿಯೂ ಇರುವವಷ್ಟೆ. ಇವುಗಳಲ್ಲಿ ಸಂಯಮವನ್ನು ಮಾಡಿದರೆ ಯೋಗಿಗೆ ಯಾರಿಗೂ ಇಲ್ಲದ ಕೇಳುವ ಶಕ್ತಿ ಬರುವುದು. ಅವನಿಗೆ ಎಲ್ಲವೂ ಕೇಳಿಸುವುದು. ಎಷ್ಟು ಮೈಲಿಗಳಾಚೆ ಮಾತನಾಡಿದ್ದರೂ ಅಥವಾ ಶಬ್ದ ಮಾಡಿದ್ದರೂ ಅವನಿಗೆ ಕೇಳುವುದು.

## 43. ಕಾಯಾಕಾಶಯೋಃ ಸಂಬನ್ಧಸಂಯಮಾ ಲ್ಲಘುತೂಲಸಮಾಪತ್ತೇಶ್ಚಾಕಾಶಗಮನಮ್

ಟೀ|| ಆಕಾಶ ಮತ್ತು ಶರೀರ ಇವುಗಳ ಸಂಬಂಧದಲ್ಲಿ ಸಂಯಮವನ್ನು ಮಾಡುವುದರಿಂದ ಯೋಗಿಯು ಹತ್ತಿಯಂತೆ ಹಗುರವಾಗಿ ಆಕಾಶದಲ್ಲಿ ತಿರುಗಾಡುವನು.

ವಿ|| ಆಕಾಶವೆಂಬುದು ಈ ಶರೀರವಾಗಿರುವ ವಸ್ತು. ಆಕಾಶವು ಒಂದಾನೊಂದು ರೂಪನ್ನು ಹೊಂದಿ ಈ ಶರೀರವಾಗಿರುವುದು. ತನ್ನ ಶರೀರ ವಸ್ತುವಾಗಿರುವ ಈ ಆಕಾಶದಲ್ಲಿ

ಯೋಗಿಯು ಸಂಯಮವನ್ನು ಮಾಡಲು ಅದು ಆಕಾಶದಂತೆ ಹಗುರವಾಗಿ ಅಂತರಿಕ್ಷದಲ್ಲಿ ಎಲ್ಲಿಯೆಂದರೆ ಅಲ್ಲಿ ಹೋಗುವುದು.

## 44. ಬಹಿರಕಲ್ಪಿತಾ ವೃತ್ತಿರ್ಮಹಾವಿದೇಹಾ ತತಃ ಪ್ರಕಾಶಾವರಣಕ್ಷಯಃ

ಟೀ|| ಮಹಾವಿದೇಹವು (ಶರೀರವಿಲ್ಲದೆ ಇರುವಿಕೆ) ಎಂಬ ಶರೀರದ ಹೊರಗೆ ಇರುವ ಮನಸ್ಸಿನ ನಿಜವಾದ ವೃತ್ತಿಯಲ್ಲಿ ಸಂಯಮ ಮಾಡಿದರೆ ಬೆಳಕಿನ ಮರೆಯು ಹೋಗುವುದು.

ವಿ|| ಚಿತ್ತವು ದಡ್ಡತನದಿಂದ ಈ ಶರೀರದಲ್ಲಿಯೆ ಕೆಲಸ ಮಾಡುತ್ತಿರುವೆನೆಂದು ತಿಳಿದುಕೊಳ್ಳುತ್ತಿರುವುದು. ಮನಸ್ಸೆಂಬುದು ಸರ್ವವ್ಯಾಪಿಯಾಗಿ ಒಂದು ನರಮಂಡಲಕ್ಕೆ ಅಧೀನವಾಗಿ ಒಂದೇ ಶರೀರದಲ್ಲಿ ಅಹಂತೆಯನ್ನು (ನಾನೆಂಬುದನ್ನು) ಇಡಬೇಕಾದುದೇನು? ಇದಕ್ಕೇನೂ ಕಾರಣವಿಲ್ಲ. ಯೋಗಿಗೆ ತನಗೆ ಬೇಕಾದ ಕಡೆಯಲ್ಲಿ ಅಹಂತೆಯನ್ನು ಕಾಣಬೇಕೆಂದು ಇಚ್ಛೆ ಇರುವುದು. ಶರೀರದಲ್ಲಿಯೆ ಅಹಂತೆ ಇಲ್ಲದಿರುವಾಗ ಹುಟ್ಟುವ ಚಿತ್ತವೃತ್ತಿಗಳಿಗೆ ನಿಜವಾದ ವೃತ್ತಿಗಳೆಂದೂ ಅಥವಾ ಮಹಾವಿದೇಹವೆಂದೂ ಹೆಸರು. ಈ ವೃತ್ತಿಗಳಲ್ಲಿ ಸಂಯಮವನ್ನು ಮಾಡಿದರೆ ಬೆಳಕಿಗೆ ಇದ್ದ ಮರೆಯೆಲ್ಲ ಹೋಗಿ ಎಲ್ಲಾ ವಿಧವಾದ ಕತ್ತಲೆಯೂ ತಪ್ಪು ತಿಳಿವಳಿಕೆಯೂ ಇಲ್ಲದಂತಾಗುವುದು. ಪ್ರತಿಯೊಂದರಲ್ಲಿಯೂ ತಿಳಿವಳಿಕೆಯೇ ತುಂಬಿರುವಂತೆ ಕಾಣುವುದು.

## 45. ಸ್ಥೂಲಸ್ವರೂಪಸೂಕ್ಷ್ಮಾನ್ವಯಾರ್ಥವತ್ತ್ವಸಂಯಮಾದ್ಭೂತಜಯಃ

ಟೀ|| ಸ್ಥೂಲದಿಂದ ಮೊದಲುಮಾಡಿಕೊಂಡು ಬಹು ಸೂಕ್ಷ್ಮವಾಗಿರುವ ಭೂತಗಳಲ್ಲಿ ಸಂಯಮವನ್ನು ಮಾಡುವುದರಿಂದ ಭೂತಗಳನ್ನು ಗೆಲ್ಲಬಹುದು.

ವಿ|| ಯೋಗಿಯು ಮೊದಲು ಸ್ಥೂಲಭೂತಗಳಲ್ಲಿಯೂ ಆಮೇಲೆ ಸೂಕ್ಷ್ಮ ಭೂತಗಳಲ್ಲಿಯೂ ಸಂಯಮವನ್ನು ಮಾಡುತ್ತಾನೆ. ಈ ಬಗೆಯ ಸಂಯಮವನ್ನು ಕೆಲವು ಜನ ಬೌದ್ಧರು ವಿಶೇಷವಾಗಿ ಮಾಡುತ್ತಾರೆ. ಒಂದು ಮುದ್ದೆ ಮಣ್ಣನ್ನು ತೆಗೆದುಕೊಂಡು ಅದರ ಮೇಲೆ ಸಂಯಮವನ್ನು ಮಾಡುತ್ತಾರೆ. ಮೆಲ್ಲಮೆಲ್ಲಗೆ ಅದರಲ್ಲಿರುವ ಸೂಕ್ಷ್ಮ ಪದಾರ್ಥಗಳು ಕಾಣಿಸುತ್ತ ಹೋಗುತ್ತವೆ. ಹೀಗೆ ಎಲ್ಲಾ ಸೂಕ್ಷ್ಮ ಪದಾರ್ಥಗಳೂ ಕಂಡ ಬಳಿಕ ಆ ಭೂತವು ಸೂಕ್ಷ್ಮವಾಗುವುದು. ಹೀಗೆಯೇ ಎಲ್ಲಾ ಭೂತಗಳಿಗೂ ತಿಳಿಯಬೇಕು. ಯೋಗಿಯು ಅವುಗಳನ್ನೆಲ್ಲ ಜಯಿಸಬಹುದು.

## 46. ತತೋಽಣಿಮಾದಿಪ್ರಾದುರ್ಭಾವಃ ಕಾಯ ಸಂಪತ್ತದ್ಧರ್ಮಾನಭಿಘಾತಶ್ಚ

ಟೀ|| ಅದರಿಂದ ಅಣಿಮಾ ಮೊದಲಾದ ಸಿದ್ಧಿಗಳೂ ಶರೀರದ ಸಂಪತ್ತೂ ಅದರ ಗುಣಗಳು ನಾಶವಾಗದೆ ಇರುವುದೂ ಬರುವುವು.

ವಿ|| ಎಂದರೆ ಎಂಟು ಸಿದ್ಧಿಗಳಾವುವೆಂದು ತಾತ್ಪರ್ಯ. ಅಣುವಿನಷ್ಟು ಸಣ್ಣಗೆ ಬೇಕಾದರೂ ಆಗುವುದು; ಬೆಟ್ಟದಷ್ಟು ದಪ್ಪನಾಗುವುದು; ಭೂಮಿಯಷ್ಟು ಭಾರವಾಗುವುದು;

ಗಾಳಿಯಷ್ಟು ಹಗುರವಾಗುವುದು; ಯಾವದನ್ನು ಬೇಕಾದರೂ ಆಳುವುದು; ಯಾವುದನ್ನು ಬೇಕಾದರೂ ಗೆಲ್ಲುವುದು ಇವೆಲ್ಲವೂ ಅವನಿಗಾಗುತ್ತವೆ. ಸಿಂಹವಾದರೂ ಅವನ ಕಾಲ ಬಳಿಯಲ್ಲಿ ಕುರೀ ಮರಿಯಂತೆ ಕುಳಿತುಕೊಳ್ಳುವುದು; ಅವನ ಆಸೆಗಳೆಲ್ಲ ಪೂರ್ತಿಯಾಗುವುವು.

## 47. ರೂಪಲಾವಣ್ಯಬಲವಜ್ರಸಂಹನನತ್ವಾನಿಕಾಯಸಂಪತ್

ಟೀ॥ ಒಳ್ಳೆಯ ರೂಪವೂ ಕಾಂತಿಯೂ ಬಲವೂ ವಜ್ರದಂತೆ ಗಟ್ಟಿಯಾಗಿರುವುದೂ ಕಾಯ ಸಂಪತ್ತೆನಿಸುವುದು.

## 48. ಗ್ರಹಣಸ್ವರೂಪಾಸ್ಮಿತಾನ್ವಯಾರ್ಥವತ್ತ್ವಸಂಯಮಾದಿನ್ದ್ರಿಯಜಯಃ

ಟೀ॥ ವಿಷಯ, ತಿಳಿವಳಿಕೆ, ಅಹಂಕಾರಗಳಲ್ಲಿ ಮೆಲ್ಲಮೆಲ್ಲಗೆ ಸಂಯಮ ಮಾಡಿದರೆ ಇಂದ್ರಿಯ ಜಯವಾಗುವುದು.

ವಿ॥ ಹೊರಗಣ ವಸ್ತುಗಳನ್ನು ನೋಡುವಲ್ಲಿ ಇಂದ್ರಿಯಗಳು ಚಿತ್ತದಲ್ಲಿರುವ ತಮ್ಮ ತಮ್ಮ ಸ್ಥಾನವನ್ನು ಬಿಟ್ಟು ವಿಷಯದ ಹತ್ತಿರಕ್ಕೆ ಹೋಗುತ್ತವೆ. ಇದಾದ ಮೇಲೆ ತಿಳಿವಳಿಕೆಯೂ ಅಹಂಕಾರವೂ ಹುಟ್ಟುವುವು. ಇವುಗಳ ಮೇಲೆ ಸಂಯಮ ಮಾಡಿದ ಯೋಗಿಗೆ ಇಂದ್ರಿಯ ಜಯವಾಗುತ್ತದೆ, ಯಾವುದು ಕಂಡರೆ ಅಥವಾ ಅನುಭವಕ್ಕೆ ಬಂದರೆ ಅದನ್ನು ತೆಗೆದುಕೊಳ್ಳಬೇಕು. ಒಂದು ಪುಸ್ತಕವನ್ನು ಕಂಡು ಅದರಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಆಮೇಲೆ ಪುಸ್ತಕವನ್ನು ಕಾಣುವ ಅಹಂಕಾರದಲ್ಲಿಡಬೇಕು. ಆ ಅಭ್ಯಾಸದಿಂದ ಇಂದ್ರಿಯಗಳೆಲ್ಲ ಜಯವಾಗುವುವು.

## 49. ತತೋ ಮನೋಜವಿತ್ವಂ ವಿಕರಣಭಾವಃ ಪ್ರಧಾನಜಯಶ್ಚ

ಟೀ॥ ಅದರಿಂದ ಮನಸ್ಸಿನಷ್ಟು ಬೇಗನೆ ಸಂಚರಿಸುವುದೂ, ಶರೀರವಿಲ್ಲದೆ ಇಂದ್ರಿಯಗಳ ಶಕ್ತಿಯೂ ಪ್ರಕೃತಿಯು ಜಯವೂ ಆಗುತ್ತವೆ.

ವಿ॥ ಭೂತಗಳನ್ನು ಗೆಲ್ಲುವುದರಿಂದ ಶರೀರದ ಸಂಪತ್ತು ಬರುವಂತೆ ಇಂದ್ರಿಯ ಜಯದಿಂದ ಮೇಲೆ ಹೇಳಿದ ಶಕ್ತಿಗಳು ಬರುವುವು.

## 50. ಸತ್ತ್ವಪುರುಷಾನ್ಯತಾಖ್ಯಾತಿಮಾತ್ರಸ್ಯ ಸರ್ವಭಾವಾಧಿಷ್ಠಾತೃತ್ವಂ ಸರ್ವಜ್ಞಾತೃತ್ವಂ ಚ.

ಟೀ॥ ಸತ್ತ್ವದಲ್ಲಿ ಸಂಯಮ ಮಾಡುವುದರಿಂದ ಸತ್ತ್ವ ಮತ್ತು ಪುರುಷನನ್ನು ಬೇರ್ಪಡಿಸಿದಾತನಿಗೆ ಎಲ್ಲಾ ಕಡೆಯಲ್ಲಿರುವುದೂ ಎಲ್ಲವನ್ನೂ ತಿಳಿಯುವುದೂ ಬರುತ್ತವೆ.

ವಿ॥ ಪ್ರಕೃತಿಯನ್ನು ಜಯಿಸಿ ಪ್ರಕೃತಿ ಪುರುಷರ ಭೇದವನ್ನು ಅರಿತುಕೊಂಡರೆ–ಪುರುಷನು ನಾಶವಿಲ್ಲದವನೆಂದೂ ಶುದ್ಧನೆಂದೂ ಪೂರ್ಣನೆಂದೂ ತಿಳಿದರೆ–ಸರ್ವಶಕ್ತಿಯೂ ಸರ್ವಜ್ಞತೆಯೂ ಬರುತ್ತವೆ.

## 51. ತದ್ವೈರಾಗ್ಯಾದಪಿ ದೋಷಬೀಜಕ್ಷಯೇಕೈವಲ್ಯಮ್

ಟೀ॥ ಈ ಸಿದ್ಧಿಗಳನ್ನು ಕೂಡ ಬಿಟ್ಟುಬಿಟ್ಟರೆ ದೋಷಕ್ಕೆಲ್ಲ ಕಾರಣವಾಗಿರುವ ಬೀಜವೇ ನಾಶವಾಗಿ ಕೈವಲ್ಯವಾಗುವುದು.

ವಿ॥ ಕೈವಲ್ಯವೆಂದರೆ ಸ್ವಾತಂತ್ರ್ಯವು ಬಂದು ಮುಕ್ತನಾಗುವನು. ಸರ್ವಶಕ್ತಿ, ಸರ್ವಜ್ಞತೆ ಎಂಬುದನ್ನು ಕೂಡ ಯೋಚಿಸದೆ ವೈರಾಗ್ಯದಿಂದ ಇದ್ದರೆ ಭೋಗಗಳನ್ನೆಲ್ಲ ತಿರಸ್ಕಾರ ಮಾಡಿ ದೇವತೆಗಳು ತೋರಿಸುವ ಆಸೆಗಳನ್ನೆಲ್ಲ ಅಲಕ್ಷ್ಯಮಾಡಬಹುದು. ಈ ಎಲ್ಲಾ ಬಗೆಯ ಸಿದ್ಧಿಗಳನ್ನು ಕಂಡು ಅವುಗಳನ್ನು ಒಲ್ಲೆನೆಂದರೆ ಅವನು ಕೊನೆಯ ಪದವಿಯನ್ನು ಮುಟ್ಟುತ್ತಾನೆ. ಈ ಸಿದ್ಧಿಗಳೆಂಬುವೇನು? ಕೇವಲ ತೋರಿಕೆಗಳು. ಅವಕ್ಕೂ ಸ್ವಪ್ನಕ್ಕೂ ಭೇದವಿಲ್ಲ. ಸರ್ವಶಕ್ತಿಯೆಂಬುದೂ ಸ್ವಪ್ನವೆ. ಅದೆಲ್ಲ ಮನಸ್ಸನ್ನವಲಂಬಿಸಿರುವುದು. ಮನಸ್ಸಿರುವವರೆಗೆ ಅದಕ್ಕೆ ಬೆಲೆ. ಆದರೆ ನಿಜವಾದ ಪುರುಷಾರ್ಥವು ಮನಸ್ಸನ್ನು ಮೀರಿರುವುದು.

## 52. ಸ್ಥಾನ್ಯುಪನಿಮನ್ತ್ರಣೇಸಙ್ಗಸ್ಮಯಾಕರಣಂ ಪುನರನಿಷ್ಟಪ್ರಸಙ್ಗಾತ್

ಟೀ॥ ದೇವತೆಗಳೇ ಮೊದಲಾದವರ ಮಾತುಗಳಿಗೆ ಮರುಳಾಗಬಾರದು; ಅಥವಾ ಹಿಗ್ಗಬಾರದು. ಏಕೆಂದರೆ ಮತ್ತೆ ಕೇಡಾಗುವ ಸಂಭವವುಂಟು.

ವಿ॥ ಇನ್ನು ಕೆಲವು ತೊಂದರೆಗಳಿವೆ. ದೇವತೆಗಳೇ ಮೊದಲಾದವರು ಯೋಗಿಗೆ ಆಸೆ ತೋರಿಸುತ್ತಾರೆ. ಅವರಿಗೆ ಯಾರು ಮುಕ್ತರಾಗುವುದೂ ಇಷ್ಟವಿಲ್ಲ. ಅವರು ನಮ್ಮಂತೆಯೇ ಅಥವಾ ಕೆಲವು ವೇಳೆ ನಮಗಿಂತ ಹೆಚ್ಚಾಗಿ ಹೊಟ್ಟೇಕಿಚ್ಚು ಪಡುತ್ತಾರೆ. ತಮ್ಮ ಸ್ಥಾನಗಳು ಎಲ್ಲಿ ಹೋಗುವುವೊ ಎಂದು ಹೆದರುತ್ತಿರುವರು. ಸಿದ್ಧಿಯನ್ನು ಪಡೆಯದೆ ಇದ್ದ ಯೋಗಿಗಳು ಸತ್ತು ದೇವತೆಗಳಾಗುವರು. ಇವರು ರಾಜಮಾರ್ಗವನ್ನು ಬಿಟ್ಟು ಸೀಳುಹಾದಿಗಳಲ್ಲಿ ಒಂದನ್ನು ಹಿಡಿಯುವುದರಿಂದ ಈ ಸಿದ್ಧಿಗಳು ಬರುತ್ತವೆ. ಆಮೇಲೆ ಮತ್ತೆ ಅವರು ಹುಟ್ಟಬೇಕಾಗುತ್ತದೆ. ಈ ಆಸೆಗಳನ್ನು ತಡೆದುಕೊಳ್ಳುವ ಧೈರ್ಯವು ಯಾರಿಗಿರುವುದೊ ಅವನು ನೆಟ್ಟಗೆ ಪುರುಷಾರ್ಥವನ್ನು ಪಡೆದು ಮುಕ್ತನಾಗುವನು.

## 53. ಕ್ಷಣತತ್ಕ್ರಮಯೋಃ ಸಂಯಮಾದ್ವಿವೇಕಜಂಜ್ಞಾನಮ್

ಟೀ॥ ಒಂದು ಕ್ಷಣದಲ್ಲಿಯೂ ಅದರ ಹಿಂದುಮುಂದುಗಳಲ್ಲಿಯೂ ಸಂಯಮವನ್ನು ಮಾಡಿದರೆ ವಿವೇಕವು ಬರುವುದು.

ವಿ॥ ಈ ದೇವತೆಗಳು, ಸ್ವರ್ಗ, ಸಿದ್ಧಿಗಳು ಇವೆಲ್ಲವನ್ನೂ ತಪ್ಪಿಸಿಕೊಳ್ಳುವುದು ಹೇಗೆ? ಇದು ಒಳ್ಳೆಯದು ಇದು ಕೆಟ್ಟದ್ದು ಎಂಬ ವಿವೇಕದಿಂದ. ಆದುದರಿಂದ ವಿವೇಕ ಶಕ್ತಿಯು ಬಲವಾಗುವ ಸಂಯಮವನ್ನು ಹೇಳಿದ್ದಾರೆ. ಕ್ಷಣವನ್ನೂ ಅದರ ಹಿಂದೆ ಮತ್ತು ಮುಂದೆ ಬರುವ ಕಾಲವನ್ನೂ ಕುರಿತು ಸಂಯಮ ಮಾಡುವುದೇ ಈ ಕ್ರಮವು.

## 54. ಜಾತಿಲಕ್ಷಣದೇಶೈರನ್ಯತಾನವಚ್ಛೇದಾತ್ತುಲ್ಯಯೋಸ್ತತಃ ಪ್ರತಿಪತ್ತಿಃ

ಟೀ|| ಈ ಮೇಲೆ ಹೇಳಿದ ಸಂಯಮದಿಂದ ಜಾತಿ, ಗುರ್ತು, ಸ್ಥಳ ಇವುಗಳಿಂದ ಗೊತ್ತು ಮಾಡುವುದಕ್ಕಾಗದ ವಸ್ತುಗಳನ್ನು ಕೂಡ ಗೊತ್ತುಮಾಡಿಕೊಳ್ಳಬಹುದು.

ವಿ|| ನಮಗೆ ಆಗುವ ದುಃಖವೆಂಬುದು ತಪ್ಪು ತಿಳಿವಳಿಕೆಯಿಂದ – ನಿಜವನ್ನೂ ಸುಳ್ಳನ್ನೂ ಬೇರೆ ಮಾಡಿ ತಿಳಿಯದೆ ಇರುವುದರಿಂದ–ಬರುತ್ತಿರುವುದು. ನಾವೆಲ್ಲರೂ ಕೆಟ್ಟದ್ದನ್ನು ಒಳ್ಳೆಯದೆಂದು ಅಂದುಕೊಳ್ಳುತ್ತೇವೆ; ಕನಸನ್ನೇ ನಿಜವೆನ್ನುತ್ತೇವೆ. ಆತ್ಮವೊಂದೇ ನಿಜವಾದುದು. ಇದನ್ನು ನಾವು ಮರೆತು ಬಿಟ್ಟಿದ್ದೇವೆ. ದೇಹವೆಂಬುದೊಂದು ಸುಳ್ಳು ಕನಸು. ಆದರೂ ನಾವೆಲ್ಲರೂ ದೇಹವೆಂದೇ ತಿಳಿದುಕೊಂಡಿದ್ದೇವೆ. ಈ ಅವಿವೇಕವೇ ದುಃಖಕ್ಕೆ ಕಾರಣ. ಇದು ಅಜ್ಞಾನದಿಂದ ಆಗಿರುವುದು. ವಿವೇಕವು ಬಂದರೆ ಅದರೊಡನೆ ಬಲವೂ ಬರುತ್ತದೆ. ಆಗ ಮಾತ್ರ ಶರೀರ, ಸ್ವರ್ಗ, ದೇವತೆಗಳು ಮುಂತಾದ ಈ ಬಗೆ ಬಗೆಯ ವಿಚಾರಗಳನ್ನು ಬಿಟ್ಟುಬಿಡುವುದಕ್ಕಾಗುತ್ತದೆ. ಈ ಅಜ್ಞಾನವು ಜಾತಿ, ಗುರ್ತು, ಸ್ಥಳ ಇವುಗಳಿಂದ ವಸ್ತುಗಳನ್ನು ಗೊತ್ತುಮಾಡುವುದರಿಂದಾಗಿರುವುದು. ದೃಷ್ಟಾಂತಕ್ಕಾಗಿ ಒಂದು ಹಸುವನ್ನು ಇಟ್ಟುಕೊಳ್ಳೋಣ. ಹಸು ಬೇರೆ; ನಾಯಿ ಬೇರೆ ಎನ್ನುವುದಕ್ಕೆ ಜಾತಿಯು ಕಾರಣ. ಆದರೆ ಹಸುಗಳಲ್ಲಿಯೆ ನೋಡಿದರೆ ಇದು ಇಂಥ ಹಸುವೆಂದು ಒಂದೊಂದನ್ನೇ ಗೊತ್ತುಮಾಡುವುದು ಹೇಗೆ? ಗುರ್ತುಗಳಿಂದ. ಎರಡುವಸ್ತುಗಳು ಎಲ್ಲಾ ವಿಧದಿಂದಲೂ ಒಂದೇ ಸಮನಾಗಿದ್ದರೆ ಬೇರೆ ಬೇರೆ ಸ್ಥಳಗಳಿದ್ದ ಮಾತ್ರದಿಂದ ಅವುಗಳನ್ನು ಗೊತ್ತುಮಾಡಬಹುದು. ಈ ರೀತಿಯಲ್ಲಿ ಬೇರ್ಪಡಿಸುವುದಕ್ಕೆ ಆಗದಂತೆ ವಸ್ತುಗಳು ಒಂದರಲ್ಲಿ ಒಂದು ಸೇರಿಕೊಂಡು ಬಿಟ್ಟಿದ್ದರೆ ಮೇಲೆ ಹೇಳಿದ ಅಭ್ಯಾಸದಿಂದ ಉಂಟಾದ ಶಕ್ತಿಯಿಂದ ಅವುಗಳನ್ನು ಗೊತ್ತುಮಾಡುವುದಕ್ಕಾಗುವುದು. ಯೋಗಿಯ ಪರಮಸಿದ್ಧಾಂತವೇನೆಂದರೆ ಪುರುಷನು ಶುದ್ಧನಾಗಿಯೂ ಪೂರ್ಣನಾಗಿಯೂ ಇರುವವನು. ಈ ಜಗತ್ತಿನಲ್ಲಿ ಪುರುಷನೊಬ್ಬನೆ ಬೆರಕೆಯಿಲ್ಲದ ಮೂಲವಸ್ತು. ದೇಹವೂ ಬುದ್ಧಿಯೂ ಬೆರಕೆಯ ವಸ್ತುಗಳು. ಹೀಗಿದ್ದರೂ ಅವುಗಳನ್ನೆ ನಾವೆಂದು ಯಾವಾಗಲೂ ಭಾವಿಸುತ್ತಿರುವೆವು. ಇವೆರಡರ ವ್ಯತ್ಯಾಸವನ್ನು ಮರೆತುಬಿಟ್ಟಿರುವುದು ನಾವು ಮಾಡಿರುವ ದೊಡ್ಡ ತಪ್ಪು. ವಿವೇಕವೆಂಬ ಶಕ್ತಿಯು ಹುಟ್ಟುವಾಗ ಈ ಜಗತ್ತಿನಲ್ಲಿರುವ ಎಲ್ಲಾ ಅಧಿಭೌತಿಕ ಮತ್ತು ಅಧ್ಯಾತ್ಮಿಕ ವಸ್ತುಗಳೂ ಬೆರಕೆಯಿಂದಾಗಿರುವವೆಂತಲೂ ಆದುದರಿಂದ ಇವು ಪುರುಷನಾಗಲಾರವೆಂತಲೂ ಗೊತ್ತಾಗುವುದು.

## 55. ತಾರಕಂ ಸರ್ವವಿಷಯಂ ಸರ್ವಥಾವಿಷಯಮಕ್ರಮಂ ಚೇತಿ ವಿವೇಕಜಂ ಜ್ಞಾನಮ್

ಟೀ|| ಎಲ್ಲಾ ಬಗೆಯ ಎಲ್ಲಾ ವಿಷಯಗಳನ್ನೂ ಏಕಕಾಲದಲ್ಲಿ ಒಳಗೊಂಡಿರುವ ವಿವೇಕದ ತಿಳಿವೇ ಕಡೆ ಹಾಯಿಸುವ ತಿಳಿವಳಿಕೆಯು.

ವಿ|| ಯೋಗಿಯನ್ನು ಹುಟ್ಟುಹೊಂದುಗಳೆಂಬ ಸಾಗರದ ಆಚೆಗೆ ಒಯ್ಯುವುದರಿಂದ

ಇದನ್ನು ತಾರಕವು (ದಾಟಿಸುವುದು) ಎನ್ನುತ್ತಾರೆ. ಪ್ರಕೃತಿಯು ಸ್ಥೂಲ ಅಥವಾ ಸೂಕ್ಷ್ಮರೂಪವಾದ ಯಾವ ರೂಪದಲ್ಲಿದ್ದರೂ ಅದೆಲ್ಲ ಈ ಜ್ಞಾನಕ್ಕೆ ಸಿಕ್ಕುವುದು. ಈ ತಿಳಿವಿನಲ್ಲಿ ಒಂದಾಗುತ್ತಲೆ ಒಂದನ್ನು ತಿಳಿಯಬೇಕೆಂಬ ಕ್ರಮವೇನೂ ಇರುವುದಿಲ್ಲ. ಅದಕ್ಕೆ ಎಲ್ಲಾ ವಿಷಯಗಳೂ ಒಂದು ಕ್ಷಣ ಮಾತ್ರದಲ್ಲಿ ಗೊತ್ತಾಗುವುವು.

## 56. ಸತ್ತ್ವಪುರುಷಯೋಃ ಶುದ್ಧಿಸಾಮ್ಯೇ ಕೈವಲ್ಯಮಿತಿ

**ಟೀ॥ ಸತ್ತ್ವ ಮತ್ತು ಪುರುಷ ಇವೆರಡೂ ಶುದ್ಧಿಯಲ್ಲಿ ಒಂದೇ ತೆರನಾದರೆ ಕೈವಲ್ಯವಾಗುವುದು.**

ವಿ॥ ಆತ್ಮವು ಜಗತ್ತಿನಲ್ಲಿರುವ ದೇವತೆಗಳೇ ಮೊದಲಾಗಿ ಅತ್ಯಂತ ಕೀಳಾದ ಅಣುಗಳವರೆಗಿನ ಯಾವ ವಸ್ತುವನ್ನೂ ತಾನು ಆಶ್ರಯಿಸಿಕೊಂಡಿಲ್ಲವೆಂಬುದನ್ನು ಅರಿತರೆ ಅದನ್ನೆ ಕೈವಲ್ಯವೆನ್ನುತ್ತಾರೆ. ಶುದ್ಧಿಯೂ ಅಶುದ್ಧಿಯೂ ಬೆರೆತು ಆಗಿರುವ ಸತ್ತ್ವವೂ (ಬುದ್ಧಿಯು) ಪುರುಷನಂತೆಯೆ ಶುದ್ಧವಾದರೆ ಈ ಕೈವಲ್ಯವಾಗುವುದು. ಆಗ ಸತ್ತ್ವದಲ್ಲಿ ಕೇವಲ ಶುದ್ಧ ಸಾರವೊಂದೇ ಪ್ರತಿಬಿಂಬಿಸುವುದು. ಇದೇ ಪುರುಷನು.

# ಕೈವಲ್ಯ ಪಾದ

## 1. ಜನ್ಮೌಷಧಿಮನ್ತ್ರತಪಃಸಮಾಧಿಜಾಃ ಸಿದ್ಧಯಃ

ಟೀ॥ ಸಿದ್ಧಿಗಳು ಹುಟ್ಟಿನಿಂದ ಆಗಲಿ, ಔಷಧಿಯಿಂದ ಆಗಲಿ, ಮಂತ್ರಶಕ್ತಿಯಿಂದ ಆಗಲಿ, ತಪಸ್ಸಿನಿಂದ ಆಗಲಿ, ಸಮಾಧಿಯಿಂದ ಆಗಲಿ ಉಂಟಾಗುತ್ತವೆ.

ವಿ॥ ಕೆಲವು ವೇಳೆಗಳಲ್ಲಿ ಒಬ್ಬೊಬ್ಬರಿಗೆ ಹುಟ್ಟುತ್ತಲೆ ಸಿದ್ಧಿಗಳಿರುವುವು. ಇವು ಅವರು ಪೂರ್ವಜನ್ಮದಲ್ಲಿ ಸಂಪಾದಿಸಿದವುಗಳು. ಈ ಸಲ ಅವರು ಅವುಗಳ ಫಲವನ್ನು ಅನುಭವ ಮಾಡುವುದಕ್ಕೆ ಜನ್ಮವೆತ್ತಿರುತ್ತಾರೆ. ಸಾಂಖ್ಯ ಸಿದ್ಧಾಂತದ ಪ್ರವರ್ತಕರಾದ ಕಪಿಲರು ಹುಟ್ಟು ಸಿದ್ಧರಾಗಿದ್ದರಂತೆ. ಸಿದ್ಧ ಎಂದರೆ ಸಿದ್ಧಿಯನ್ನು (ಗೆಲವನ್ನು) ಹೊಂದಿದವನು ಎಂದು ಅಕ್ಷರಾರ್ಥ.

ಈ ಸಿದ್ಧಿಗಳು ಔಷಧಿಗಳಿಂದಲೂ ಬರುವುವೆಂದು ಯೋಗಿಗಳು ಹೇಳುವರು. ವಸ್ತುಶಾಸ್ತ್ರವು ಮೊದಲು ಆಲ್ಕೆಮಿ ಎಂಬ (ಚಿನ್ನ ಮಾಡುವುದೇ ಮೊದಲಾದುದರ) ಶಾಸ್ತ್ರವಾಗಿತ್ತೆಂಬುದು ನಿಮಗೆಲ್ಲರಿಗೂ ಗೊತ್ತಿದ್ದ ಮಾತು. ಆಗ ಜನರು ಚಿಂತಾಮಣಿ, ಸಿದ್ಧರಸ ಮೊದಲಾದುವನ್ನು ಹುಡುಕುತ್ತ ಹೋಗುತ್ತಿದ್ದರು. ಇಂಡಿಯಾದಲ್ಲಿ ರಸಾಯನ ವಾದಿಗಳೆಂಬುವರು ಒಂದು ಬಗೆಯ ಜನರಿದ್ದರು. ವಿಜ್ಞಾನ, ಜ್ಞಾನ, ಧಾರ್ಮಿಕತೆ, ಧರ್ಮ ಇವೆಲ್ಲ ಸರಿಯೆ; ಆದರೆ ಇವುಗಳನ್ನೆಲ್ಲ ಪಡೆಯುವುದಕ್ಕೆ ದೇಹವೊಂದೇ ಸಾಧನವಾಗಿರುವುದು ಎಂದು ಇವರ ಅಭಿಪ್ರಾಯವಾಗಿತ್ತು. ಗಳಿಗೆಗಳಿಗೆಗೆ ಶರೀರವು ನಾಶವಾಗುತ್ತಿದ್ದರೆ ಪುರುಷಾರ್ಥವನ್ನು ಪಡೆಯುವುದಕ್ಕೆ ಎಷ್ಟೋ ಕಾಲವು ಬೇಕಾಗುವುದು. ಹೇಗೆಂದರೆ ಒಬ್ಬ ಮನುಷ್ಯನು ಯೋಗವನ್ನು ಅಭ್ಯಾಸಮಾಡಬೇಕೆನ್ನುತ್ತಾನೆ; ಅಥವಾ ಧಾರ್ಮಿಕ ಶಕ್ತಿಯನ್ನು ಸಂಪಾದನೆ ಮಾಡಬೇಕೆಂದು ಬಯಸುತ್ತಾನೆ. ಸ್ವಲ್ಪ ದೂರ ಅಭ್ಯಾಸಮಾಡುವುದರೊಳಗಾಗಿಯೆ ಅವನು ಸತ್ತುಹೋಗುತ್ತಾನೆ; ಆಮೇಲೆ ಮತ್ತೆ ಶರೀರವನ್ನು ಧಾರಣೆ ಮಾಡಿ ಅಭ್ಯಾಸಕ್ಕೆ ಮೊದಲು ಮಾಡಿ ಮತ್ತೆ ಸಾಯುತ್ತಾನೆ. ಹೀಗೆ ಸತ್ತು ಹುಟ್ಟಿ ಮಾಡುವುದರಲ್ಲಿಯೆ ಬಹುಕಾಲವು ಕಳೆದು ಹೋಗುವುದು. ಹುಟ್ಟು ಹೊಂದುಗಳೆ ಇಲ್ಲದಂತೆ ಶರೀರವನ್ನು ಬಲವಾಗಿಯೂ ದೋಷವಿಲ್ಲದಂತೆಯೂ ಮಾಡುವುದಕ್ಕಾದರೆ ಧಾರ್ಮಿಕತೆಯನ್ನು ಸಂಪಾದಿಸುವುದಕ್ಕೆ ಅಷ್ಟು ಕಾಲವುಳಿದಂತಾಗುವುದು. ಆದುದರಿಂದ ಶರೀರವನ್ನು ಮೊದಲು ಚೆನ್ನಾಗಿ ಬಲಪಡಿಸಿಕೊಳ್ಳಬೇಕೆಂದು ಈ ರಸಾಯನರು ಹೇಳುತ್ತಾರೆ. ಇವರು ಈ ಶರೀರಕ್ಕೆ ಸಾವೇ ಇಲ್ಲದಂತೆ ಮಾಡುವುದಕ್ಕಾಗುವುದೆನ್ನುವರು. ಮನಸ್ಸೇ

ಶರೀರವನ್ನು ಮಾಡಿಕೊಳ್ಳುತ್ತದೆ. ಪ್ರತಿಯೊಂದು ಮನಸ್ಸೂ ಅನಂತಶಕ್ತಿಗೆ ಒಂದು ತೂಬಿನಂತಿರುವುದು. ಹೀಗಿರುವುದರಿಂದ ಪ್ರತಿಯೊಂದು ತೂಬಿಗೆ ಹೊರಗಣಿಂದ ಎಷ್ಟು ಶಕ್ತಿ ಬೇಕೆಂದರೆ ಅಷ್ಟು ಬರುವುದಕ್ಕೇನೂ ಅಡ್ಡಿ ಇಲ್ಲವೆಂದು ಇವರ ಅಭಿಪ್ರಾಯವು. ನಮ್ಮ ಶರೀರಗಳನ್ನು ಯಾವಾಗಲೂ ಇಟ್ಟುಕೊಂಡಿರುವುದೇತಕ್ಕಾಗುವುದಿಲ್ಲ? ನಮ್ಮ ಶರೀರಗಳನ್ನೆಲ್ಲ ನಾವೇ ಮಾಡಿಕೊಳ್ಳಬೇಕು. ಈ ಶರೀರವು ಮುಗಿದ ಕೂಡಲೆ ನಾವೇ ಮತ್ತೊಂದನ್ನು ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಳ್ಳುವುದಾದ ಮೇಲೆ ಇಲ್ಲಿಯೇ ಈಗಲೆ ಈ ಶರೀರವನ್ನು ಬಿಟ್ಟುಹೋಗದೆಯೆ ಏತಕ್ಕೆ ಮಾಡಿಕೊಳ್ಳಬಾರದು? ಈ ವಾದದಲ್ಲಿ ಯಾವ ದೋಷವೂ ಇಲ್ಲ. ಸತ್ತ ಮೇಲೆ ಹುಟ್ಟಿ ಮತ್ತೆ ಶರೀರವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾದರೆ ಇಲ್ಲಿಯೆ ಇದ್ದುಕೊಂಡು ಈ ಶರೀರವನ್ನು ಪೂರ್ಣವಾಗಿ ನಾಶಮಾಡದೆಯೇ ಇದನ್ನೆ ಮತ್ತೆ ಮತ್ತೆ ಬೇರ್ಪಡಿಸಿಕೊಳ್ಳುತ್ತಲೆ ಬೇರೆ ಶರೀರಗಳನ್ನು ಮಾಡಿಕೊಳ್ಳುವುದಕ್ಕೇತಕ್ಕಾಗಬಾರದು? ಈ ರಸಾಯನರು ಪಾದರಸ ಮತ್ತು ಗಂಧಕಗಳಲ್ಲಿ ವಿಚಿತ್ರ ಶಕ್ತಿಯಿರುವುದೆಂದೂ ಇವುಗಳಿಂದ ಕೆಲವು ಔಷಧಿಗಳನ್ನು ಸೇವನೆಮಾಡಿದರೆ ಎಷ್ಟು ದಿನ ಬೇಕೆಂದರೆ ಅಷ್ಟು ದಿನ ಬದುಕಬಹುದೆಂದೂ ನಂಬಿದ್ದರು. ಕೆಲವು ಔಷಧಗಳ ಸೇವನೆಯಿಂದ ಅಂತರಿಕ್ಷದಲ್ಲಿ ಹಾರಾಡುವುದೇ ಮೊದಲಾದ ಸಿದ್ಧಿಗಳಾಗುವುವೆಂದು ಇನ್ನು ಕೆಲವರು ನಂಬುತ್ತಾರೆ. ಈಗ ಉಪಯೋಗಿಸುತ್ತಿರುವ ಎಷ್ಟೋ ವಿಚಿತ್ರವಾದ ಔಷಧಿಗಳು ಈ ರಸವೈದ್ಯದಿಂದಲೆ ಬಂದವುಗಳಾಗಿವೆ. ಅದರಲ್ಲಿಯೂ ಮುಖ್ಯವಾಗಿ ಔಷಧಿಯಲ್ಲಿ ಲೋಹಗಳನ್ನುಪಯೋಗಿಸುವ ಕ್ರಮವು ಇವರಿಂದ ಗೊತ್ತಾದುದು. ಕೆಲವರು ಯೋಗಿಗಳು ತಮ್ಮ ಮುಖ್ಯ ಗುರುಗಳಲ್ಲಿ ಕೆಲವರು ತಮ್ಮ ಪೂರ್ವದ ಶರೀರದಲ್ಲಿಯೇ ಇನ್ನೂ ಬದುಕಿರುತ್ತಾರೆಂದು ಹೇಳುವರು. ಯೋಗಶಾಸ್ತ್ರಕ್ಕೆ ಮುಖ್ಯ ಪ್ರಮಾಣ ರೂಪ್ಯರಾದ ಪತಂಜಲಿಗಳೂ ಇದನ್ನು ಅಲ್ಲವೆನ್ನುವುದಿಲ್ಲ.

**ಮಂತ್ರಶಕ್ತಿ:**–ಮಂತ್ರಗಳೆಂಬ ಕೆಲವು ಪವಿತ್ರವಾದ ಶಬ್ದಗಳಿರುತ್ತವೆ. ಇವುಗಳನ್ನು ಕ್ರಮವರಿತು ಜಪಮಾಡುವುದರಿಂದ ಇಂಥ ಹೆಚ್ಚಿನ ಸಿದ್ಧಿಗಳು ಬರುತ್ತವೆ. ಹಗಲೂ ಇರುಳೂ ನಾವು ಎಷ್ಟೋ ಅದ್ಭುತ ಸಂಗತಿಗಳ ಮಧ್ಯದಲ್ಲಿ ವಾಸಮಾಡುತ್ತಿರುವೆವು. ಹೀಗಿರುವುದರಿಂದ ಇವುಗಳ ವಿಚಾರವೇ ನಮ್ಮ ತಲೆಗೆ ಬರುವುದಿಲ್ಲ. ಮನುಷ್ಯನ ಶಕ್ತಿಗೂ ಮಾತುಗಳ ಶಕ್ತಿಗೂ ಮತ್ತು ಮನಸ್ಸಿನ ಶಕ್ತಿಗೂ ಇಷ್ಟೆಂಬ ನಿಯಮವೆಂದಿಗೂ ಇರುವುದಿಲ್ಲ.

**ತಪಸ್ಸು:** ಪ್ರತಿಯೊಂದು ಮತದಲ್ಲಿಯೂ ತಪಸ್ಸುಗಳೂ ನಿಯಮಗಳೂ ಇದ್ದೇ ಇರುವುವು. ಇಂಥ ವಿಚಾರಗಳಲ್ಲಿ ಹಿಂದುಗಳಂತು ಅತಿ ಮಾಡುವರು. ಕೆಲವು ಜನರು ಸಾಯುವವರೆಗೂ ಕೈಯನ್ನೆತ್ತಿಕೊಂಡೇ ಇರುವರು. ಕೊನೆಗೆ ಇವರ ಕೈಗಳು ಬಾಡಿ ಶಕ್ತಿಹೀನವಾಗಿ ಹೋಗುತ್ತವೆ. ಇನ್ನು ಕೆಲವರು ಹಗಲೂ ಇರುಳೂ ನಿಂತುಕೊಂಡೇ ಇರುವರು. ಆದುದರಿಂದ ಅವರ ಹೆಜ್ಜೆಗಳೆಲ್ಲ ಬಾತುಕೊಳ್ಳುತ್ತವೆ. ಇವರು ಅದರ ಮೇಲೆಯೂ ಬದುಕಿಕೊಂಡಿದ್ದರೆ ಕಾಲುಗಳು ಕಟ್ಟಿಕೊಂಡು ಅತ್ತಿತ್ತ ಬಗ್ಗಿಸುವುದಕ್ಕೆ ಕೂಡ ಆಗದೆ ಇವರು ಎಂದೆಂದಿಗೂ ನಿಂತುಕೊಂಡೇ ಇರಬೇಕಾಗುವುದು. ಹೀಗೆ ಕೈಗಳನ್ನು ಎತ್ತಿಕೊಂಡೇ ಇರುತ್ತಿದ್ದವನೊಬ್ಬನನ್ನು ಕಂಡು ನಾನು ಮೊದಮೊದಲು ಅವನಿಗೆ ಹೇಗಾಯಿತೆಂದು ಕೇಳಿದುದಕ್ಕೆ

ಅವನು "ಬಹು ಹಿಂಸೆಯಾಯಿತು; ಸುಮ್ಮನೆ ಉರಿಯುತ್ತಲೆ ಇದ್ದುದರಿಂದ ನದಿಗೆ ಹೋಗಿ ಮುಳುಗಿಕೊಂಡ ಮೇಲೆ ಸ್ವಲ್ಪ ನೋವು ಕಡಿಮೆಯಾಯಿತು; ಒಂದು ತಿಂಗಳಾದ ಮೇಲೆ ಅಷ್ಟೊಂದು ನೋವಾಗಲಿಲ್ಲ" ಎಂದು ಹೇಳಿದನು. ಇಂಥ ಸಾಧನಗಳಿಂದಲೂ ಸಿದ್ಧಿಗಳೆಂಬ ಶಕ್ತಿಗಳು ಬರುತ್ತವೆ.

**ಸಮಾಧಿ:** ಸಮಾಧಿಯೆಂದರೆ ಮನಸ್ಸನ್ನು ಏಕಾಗ್ರ ಮಾಡುವುದು. ಇದೇ ನಿಜವಾದ ಯೋಗವು. ಇದೇ ಯೋಗಶಾಸ್ತ್ರಕ್ಕೆ ಮುಖ್ಯ ವಿಷಯವು. ಇದೇ ಪರಮ ಸಾಧನವು. ಹಿಂದೆ ಹೇಳಿದವುಗಳೆಲ್ಲ ಎಡತರದ ಸಾಧನಗಳು. ಇವುಗಳಿಂದ ಎಲ್ಲದಕ್ಕೂ ಮೇಲಿನ ಗತಿಯನ್ನು ಪಡೆಯುವುದಕ್ಕೆ ಆಗುವುದೇ ಇಲ್ಲ. ಆದರೆ ಸಮಾಧಿಯೆಂಬ ಸಾಧನದಿಂದ ಬುದ್ಧಿ ಸಂಬಂಧವಾದ, ನಡತೆಯ ಸಂಬಂಧವಾದ ಅಥವಾ ಧರ್ಮಸಂಬಂಧವಾದ ಯಾವ ಯಾವ ಶಕ್ತಿಯನ್ನಾದರೂ ಪಡೆಯಬಹುದು.

## 2. ಜಾತ್ಯನ್ತರಪರಿಣಾಮಃ ಪ್ರಕೃತ್ಯಾಪೂರಾತ್

ಟೀ॥ ಪ್ರಕೃತಿಯನ್ನು ತುಂಬಿಕೊಳ್ಳುವುದರಿಂದ ಮತ್ತೊಂದು ಜಾತಿಯಾಗುವುದು.

ವಿ॥ ಈ ಸಿದ್ಧಿಗಳು ಜನ್ಮದಿಂದಲೂ ಮತ್ತು ಕೆಲವು ವೇಳೆಗಳಲ್ಲಿ ಔಷಧಿಗಳಿಂದ ಅಥವಾ ತಪಸ್ಸಿನಿಂದ ಬರುತ್ತವೆಂದು ಪತಂಜಲಿಗಳು ಹೇಳಿರುತ್ತಾರೆ. ಈ ಶರೀರವನ್ನು ಎಷ್ಟು ದಿನ ಬೇಕಾದರೂ ಇಟ್ಟುಕೊಂಡಿರಬಹುದೆಂದೂ ಅವರು ಒಪ್ಪಿರುತ್ತಾರೆ. ಇನ್ನು ಶರೀರವು ಮತ್ತೊಂದು ಬಗೆಯಾಗುವುದಕ್ಕೆ ಕಾರಣವೇನೆಂಬುದನ್ನು ತಿಳಿಸುತ್ತಾರೆ. ಪ್ರಕೃತಿಯು ತುಂಬಿಕೊಳ್ಳುವುದರಿಂದ ಹೀಗೆ ಬೇರೆ ಜಾತಿಯಾಗುವುದೆಂದು ಇವರು ಹೇಳುತ್ತಾರೆ. ಪ್ರಕೃತಿಯು ತುಂಬಿ ಕೊಳ್ಳುವುದೆಂದರೇನೆಂಬುದನ್ನು ಮುಂದಣ ಸೂತ್ರದಲ್ಲಿ ವಿವರಿಸಿರುತ್ತದೆ.

## 3. ನಿಮಿತ್ತಮಪ್ರಯೋಜಕಂ ಪ್ರಕೃತೀನಾಂ ವರಣಭೇದಸ್ತು ತತಃ ಕ್ಷೇತ್ರಿಕವತ್

ಟೀ॥ ಪುಣ್ಯಪಾಪಗಳೇ ಪ್ರಕೃತಿಯ ಮಾರ್ಪಾಡುಗಳಿಗೆ ಕಾರಣವಲ್ಲ. ಆದರೆ ಹೊಲದವನು ನೀರು ಹೋಗುವುದಕ್ಕಿರುವ ಅಡ್ಡಿಯನ್ನು ಮುರಿಯಲು ನೀರು ತಾನೇ ಹೋಗುವಂತೆ ಪ್ರಕೃತಿಯ ಪರಿಣಾಮಕ್ಕೆ ಇರುವ ಅಡ್ಡಿಗಳನ್ನು ಇವು ಮುರಿಯುತ್ತವೆ.

ವಿ॥ ಹೊಲಗಳಿಗೆ ಹಾಯಿಸಬೇಕಾದ ನೀರೇನೋ ಕಾಲುವೆಯಲ್ಲಿದ್ದೇ ಇರುವುದು; ಆದರೆ ತೂಬಿನ ಬಾಗಿಲು ಮುಚ್ಚಿಕೊಂಡಿರುವುದು. ಹೊಲದವನು ಬಾಗಿಲು ತೆರೆಯುತ್ತಲೆ ನೀರು ತನಗೆ ತಾನೇ ಆಕರ್ಷಣ ಧರ್ಮದಿಂದ ಹರಿದುಬರುವುದು. ಹೀಗೆ ಏಳಿಗೆಗೆ ಬರುವುದೂ ಬೇಕಾದ ಶಕ್ತಿಗಳನ್ನು ಪಡೆಯುವುದೂ ತನ್ನಲ್ಲಿಯೇ ಇರುತ್ತದೆ. ಪೂರ್ಣತ್ವವೆಂಬುದೇ ಮನುಷ್ಯನ ಸ್ವಭಾವ; ಆದರೆ ಅದಕ್ಕೆ ಸರಿಯಾದ ಮಾರ್ಗದಲ್ಲಿ ಹೋಗದಂತೆ ಅಡ್ಡಿಯಾಗಿರುತ್ತದೆ. ಈ ಅಡ್ಡಿಯನ್ನು ಮಾತ್ರ ಯಾರಾದರೂ ತೆಗೆದರೆ ಪ್ರಕೃತಿಯು ಸರ್ರನೆ ನುಗ್ಗುವುದು. ಆಗ ತನ್ನಲ್ಲಿಯೆ ಇದ್ದ ಶಕ್ತಿಗಳು ಸಿಕ್ಕಿದಂತಾಗುವುವು. ಯಾರು ಕೆಟ್ಟವರೆನ್ನಿಸಿಕೊಂಡಿರುವರೊ ಅವರಿಗಿರುವ ಅಡ್ಡಿಯು ಮುರಿದು

ಪ್ರಕೃತಿ ಒಳನುಗ್ಗಿತೆಂದರೆ ಅವರೆ ಮಹಾತ್ಮರಾಗುವರು. ಪ್ರಕೃತಿಯೆ ನಮ್ಮನ್ನು ಪೂರ್ಣತ್ವದ ಕಡೆಗೆ ತಳ್ಳುತ್ತಿರುವುದು. ಕೊನೆಗೆ ಈ ಪ್ರಕೃತಿಯು ಪ್ರತಿಯೊಬ್ಬನನ್ನೂ ಆ ಸ್ಥಿತಿಗೆ ತಂದೇ ತರುವುದು. ಈ ಸಾಧನಗಳೂ ಅಭ್ಯಾಸಗಳೆಂಬಿವೆಲ್ಲ ಸುಮ್ಮನೆ ಅಡ್ಡಿಯನ್ನು ಮುರಿದು ಹಾಕುವುದಕ್ಕೆ. ಯಾವಾಗಲೂ ನಮ್ಮದೇ ಆಗಿ ನಮ್ಮ ಸ್ವಭಾವವಾಗಿರುವ ಪೂರ್ಣತೆಗೆ ಅವಕಾಶಕೊಡುವಂತೆ ಬಾಗಿಲು ತೆರೆಯುವುದಕ್ಕೆ ಪೂರ್ವದ ಯೋಗಿಗಳು ಹೇಳುತ್ತಿದ್ದ ಪರಿಣಾಮವಾದವು[1] ನವೀನ ಶೋಧನೆಯನ್ನು ಬಲ್ಲ ಈಗಿನ ಕಾಲದ ಜನರಿಗೆ ಇನ್ನೂ ಚೆನ್ನಾಗಿ ಗೊತ್ತಾಗುವುದು. ಆದರೆ ಯೋಗಿಗಳ ವಾದವನ್ನೆ (ಈಗಿನ ಸಿದ್ಧಾಂತಕ್ಕಿಂತಲೂ) ಉತ್ತಮವೆಂದೂ ಹೇಳಬೇಕು. ಏಕೆಂದರೆ ಈಗಿನವರು ಪರಿಣಾಮಕ್ಕೆ ಹೇಳುವ ಗಂಡುಹೆಣ್ಣುಗಳ[2] ಆರಿಸುವಿಕೆ ಮತ್ತು ಯೋಗ್ಯರಾದವರು ಉಳಿಯೋಣ ಎಂಬ ಎರಡು ಕಾರಣಗಳೂ ಸಾಲದೇ ಇವೆ. ಹೇಗೆಂದರೆ ಮನುಷ್ಯನ ತಿಳಿವಳಿಕೆಯು ಬಹಳ ಹೆಚ್ಚಿ ಶರೀರದ ಪೋಷಣೆಗಾಗಲಿ ತನ್ನ ಸಹಚಾರಿಯಾಗಿ ಮತ್ತೊಬ್ಬರ ದಾಂಪತ್ಯವನ್ನು ಪಡೆಯುವುದಕ್ಕಾಗಲಿ ಒಬ್ಬರಮೇಲೊಬ್ಬರು ಮೇಲಾಟ ಮಾಡತಕ್ಕ ಅವಶ್ಯಕತೆ ಇಲ್ಲದಂತೆ ಆಗಿಬಿಟ್ಟರೆ ಈಗಿನ ಜನರ ಅಭಿಪ್ರಾಯದಂತೆ ಮನುಷ್ಯರು ಇನ್ನು ಅಭಿವೃದ್ಧಿಯಾಗದೆ ಇವರ ವಂಶವೇ ಹಾಳಾಗಬೇಕಾಯಿತು. ಈ ಸಿದ್ಧಾಂತದಿಂದ ಆಗುವ ಫಲವೇನೆಂದರೆ ಇತರರನ್ನು ಗೋಳಾಡಿಸುವವರಿಗೆಲ್ಲ ತನ್ನ ಮನಸ್ಸಮಾಧಾನ ಮಾಡಿಕೊಳ್ಳುವುದಕ್ಕೆ ಒಂದೊಂದು ನೆಪ ಸಿಕ್ಕಿದಂತಾಗುವುದು. ಯಾರು ಕೆಟ್ಟವರೊ ಯಾರು ಅಯೋಗ್ಯರೊ ಅವರನ್ನೆಲ್ಲ ಕೊಂದು ಮನುಷ್ಯರನ್ನು ಉದ್ಧಾರ ಮಾಡಬೇಕೆಂದು ಹೇಳಿಕೊಳ್ಳುವ ಮಹಾ ಪಂಡಿತರೂ ಕೂಡ ಈಗ ಹುಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಯಾರು ಯೋಗ್ಯರೆಂದು ಗೊತ್ತುಮಾಡುವುದಕ್ಕೆ ಅವರು ತಾನೆ ತಿಳಿದವರು! ಆದರೆ ಮಹಾ ಪ್ರಾಚೀನ ಪರಿಣಾಮವಾದಿಗಳಾದ ಪತಂಜಲಿಗಳು

---

1. "ಪ್ರಕೃತಿಯಲ್ಲಿ ಬೇರೆ ಬೇರೆ ಪರಿಣಾಮಗಳಾಗುವುದಕ್ಕೆ ಸ್ವಾಭಾವಿಕವಾಗಿ ಆರಿಸಿಕೊಳ್ಳೋಣ ಮತ್ತು ಯೋಗ್ಯವಾಗಿರುವುದು ಬದುಕೋಣ ಇವೆರಡೇ ಕಾರಣಗಳು. ಪ್ರಕೃತಿಯು ದೇಶಕಾಲಗಳಿಗೆ ಅನುಗುಣವಾಗುವುದು; ವಂಶಾನುಗುಣವಾಗಿ ಬೇರೆ ಆಗುವುದು; ಸುತ್ತಲಿರುವ ವಸ್ತುಗಳನ್ನು ಅನುಸರಿಸುವುದು; ಇವೇ ಮೊದಲಾದ ಕಾರಣಗಳಿಂದ ಯೋಗ್ಯವಾದುದು ಉಳಿಯುವಂತೆಯೂ ಅಯೋಗ್ಯವಾದುದು ನಾಶವಾಗುವಂತೆಯೂ ಬೇರೆ ಬೇರೆ ಪರಿಣಾಮಗಳನ್ನು ಪಡೆಯುತ್ತ ಹೋಗುವುದು" ಎಂದು ಈಗಿನ ಪರಿಣಾಮವಾದಿಗಳು ಹೇಳುವರು. ಒಂದೇ ಒಂದು ಜೀವಾಣುವು ಈ ಮೇಲೆ ಹೇಳಿದ ವಿಧವಿಧವಾದ ಶಕ್ತಿ ಶಾಸ್ತ್ರೀಯ, ವಸ್ತು ಶಾಸ್ತ್ರೀಯ ಮತ್ತು ಶರೀರ ಶಾಸ್ತ್ರೀಯ ಕಾರಣಗಳಿಂದ ಬೇರೆ ಬೇರೆ ರೂಪಗಳನ್ನು ಧರಿಸುತ್ತಿರುವುದೆಂದು ಇವರ ಮತವುಂಟು.

2. ಗಂಡುಹೆಣ್ಣುಗಳ ಆರಿಸುವಿಕೆಯೆಂದರೆ ಗಂಡಿನಲ್ಲಿ ಹೆಣ್ಣು, ಹೆಣ್ಣಿನಲ್ಲಿ ಗಂಡು ಮೆಚ್ಚು ಬಣ್ಣ, ಧ್ವನಿ, ಮೊದಲಾದ ಗುಣಗಳು ಬರಬರುತ್ತ ಹೆಣ್ಣುಗಂಡುಗಳಲ್ಲಿ ಹೆಚ್ಚುತ್ತ ಶಾಶ್ವತವಾಗಿ ನಿಲ್ಲುವಂತೆ ಆಗುವ ಕಾರ್ಯವು. ಇದು ಸ್ವಾಭಾವಿಕವಾಗಿಯೆ ಆಗುವುದೆಂದು ಈಗಿನ ಪರಿಣಾಮವಾದಿಗಳೆನ್ನುವರು. ತಂದೆ ತಾಯಿಗಳು ಎಂಥೆಂಥವರಾದರೆ ಮಕ್ಕಳು ಅಂಥಂಥವರಾಗಿರುತ್ತಾರೆಂಬುದನ್ನು ಅನೇಕ ಪರೀಕ್ಷೆಗಳಿಂದ ಗೊತ್ತು ಮಾಡಿ ಮಕ್ಕಳಲ್ಲಿ ಉತ್ತಮವಾದ ಸ್ವಭಾವಗಳುಂಟಾಗುವಂತೆ ಗಂಡುಹೆಣ್ಣುಗಳನ್ನು ಆರಿಸಿ ಮದುವೆ ಮಾಡಿಸಿ ಮುಂದಕ್ಕೆ ಮನುಷ್ಯ ವಂಶವು ಉತ್ತಮರೀತಿಗೆ ಬರಬೇಕೆಂದು ಪ್ರಯತ್ನಿಸುವುದು ಆಧುನಿಕ ಶಾಸ್ತ್ರವು. ಇದನ್ನು ಮನುಷ್ಯವಂಶೋದ್ಧಾರಕ ಶಾಸ್ತ್ರ (Engenies) ವೆನ್ನುವರು. ಈ ಶಾಸ್ತ್ರವನ್ನು ಅನುಸರಿಸಿದವರು ಕೆಲವರು ಅಬಲರಾಗಿಯೂ ಅಂಗಹೀನರಾಗಿಯೂ ಇರುವವರು ಹುಟ್ಟದಂತೆ ಪ್ರಯತ್ನಮಾಡಬೇಕೆಂದೂ ಮಕ್ಕಳನ್ನು ಪಡೆಯುವುದಕ್ಕೆ ಅಯೋಗ್ಯರಾಗಿರುವವರನ್ನು ಮಕ್ಕಳು ಹಡೆಯುವ ಯೋಗ್ಯತೆ ಇರುವ ಕಾಲದಲ್ಲಿ ಬೇರೆ ಇಡಬೇಕೆಂತಲೂ ಸಂಪೂರ್ಣವಾಗಿ ಅಯೋಗ್ಯರಾದವರಿಗೆ ಮಕ್ಕಳು ಹಡಿಯುವ ಶಕ್ತಿಯನ್ನೆ ತಪ್ಪಿಸಬೇಕೆಂತಲೂ ಹೇಳುವರು. ಈ ವಾದವನ್ನು ಸ್ವಾಮಿಗಳು ಇಲ್ಲಿ ಹಾಸ್ಯ ಮಾಡಿರುತ್ತಾರೆ.

ಪ್ರತಿಯೊಬ್ಬನಲ್ಲಿಯೂ ಇದ್ದುಕೊಂಡಿರುವ ಪೂರ್ಣತೆಯು ಪ್ರಕಾಶಕ್ಕೆ ಬರುವುದೇ ಪರಿಣಾಮದ ನಿಜವಾದ ಕಾರಣವೆಂದು ಹೇಳಿರುತ್ತಾರೆ. ಈ ಪೂರ್ಣತೆಗೆ ಅಡ್ಡಿಯಾಗಿರುತ್ತದೆ. ಈ ಅಡ್ಡಿಯ ಬಾಗಿಲಿನ ಹಿಂದುಗಡೆ ಇರುವ ಮಹಾಪ್ರವಾಹವು ಹೊರಕ್ಕೆ ಬರಬೇಕೆಂದು ಶ್ರಮಪಟ್ಟಿರುವುದು. ನಾವು ಹೆಣಗಾಡುವುದಕ್ಕೂ ಒಬ್ಬರ ಮೇಲೊಬ್ಬರು ಪೈಪೋಟಿ ಮಾಡುವುದಕ್ಕೂ ಮೂಢತನವೇ ಕಾರಣ. ಸರಿಯಾಗಿ ಬಾಗಿಲನ್ನು ತೆಗೆದು ನೀರನ್ನು ಈಚೆಗೆ ಬಿಡುವುದಕ್ಕೆ ನಮಗೆ ಗೊತ್ತಿಲ್ಲ. ಈ ಅನಂತ ಪ್ರವಾಹವು ಹೊರಕ್ಕೆ ಬರಲೇಬೇಕಾಗಿದೆ. ಇದೇ ಎಲ್ಲಾ ಪರಿಣಾಮಗಳಿಗೂ ಕಾರಣವು. ಬದುಕಿರಬೇಕೆಂದು ಮೇಲಾಡುವುದೂ ಗ್ರಾಮ್ಯ ಸುಖಕ್ಕಾಗಿ ಹೊಡೆದಾಡುವುದೂ ಕೇವಲ ಕ್ಷಣಿಕವಾದ, ಅನವಶ್ಯಕವಾದ ಹೊರಗಿನ ಕಾರ್ಯಗಳು. ಇವುಗಳಿಗೆ ಮೌಢ್ಯವೇ ಕಾರಣ. ಎಲ್ಲಾ ಬಗೆಯ ಮೇಲಾಟವು ತಪ್ಪಿದರೂ ನಮ್ಮಲ್ಲಿ ಅಡಗಿರುವ ಪೂರ್ಣಸ್ವಭಾವವೇ ನಮ್ಮನ್ನು ಮುಂದುವರಿಸುವುದು. ಪ್ರತಿಯೊಬ್ಬರೂ ಪೂರ್ಣಪದವಿಯನ್ನು ಪಡೆಯುವವರೆಗೂ ಇದು ನಿಲ್ಲುವುದಿಲ್ಲ. ಹೀಗಿರುವುದರಿಂದ ಪೈಪೋಟಿಯು ಅಭ್ಯುದಯಕ್ಕೆ ಕಾರಣವೆಂದು ತಿಳಿಯುವುದಕ್ಕೇನೂ ಕಾರಣವಿಲ್ಲ. ಪಶುವಿನಲ್ಲಿ ಮನುಷ್ಯನು ಅಡಗಿದ್ದನು. ಅಡ್ಡಿಯಾಗಿದ್ದ ಬಾಗಿಲು ತೆರೆದ ಕೂಡಲೆ ಹೊರಕ್ಕೆ ಬಂದುಬಿಟ್ಟನು. ಹೀಗೆಯೆ ಮನುಷ್ಯನಲ್ಲಿ ದೇವಸ್ವಭಾವೂ ಅಜ್ಞಾನವೆಂಬ ಅಗುಳಿಯನ್ನು ಹಾಕಿ ಬೀಗಮುದ್ರೆ ಮಾಡಿರುವುದರಿಂದ ಒಳಗೇ ಅವ್ಯಕ್ತರೂಪದಿಂದಿರುವುದು. ಜ್ಞಾನದಿಂದ ಈ ಅಗುಳಿಯನ್ನು ಮುರಿದರೆ ದೇವತೆಯು ಕಾಣಿಸಿಕೊಳ್ಳುವುದು.

## 4. ನಿರ್ಮಾಣಚಿತ್ತಾನ್ಯಸ್ಮಿತಾಮಾತ್ರಾತ್

ಟೀ॥ ಅಹಂಕಾರದಿಂದಲೆ ನಿರ್ಮಿಸಿದ ಚಿತ್ತಗಳುಂಟಾಗುವುವು.

ವಿ॥ ನಾವು ಮಾಡಿದ ಪುಣ್ಯಪಾಪಗಳನ್ನು ನಾವು ಅನುಭವಿಸುತ್ತಿದ್ದೇವೆಂಬುದೇ ಕರ್ಮಸಿದ್ಧಾಂತ. ತತ್ತ್ವಶಾಸ್ತ್ರದಲ್ಲಿ ಹೇಳಿರುವ ವಿಷಯವೆಲ್ಲ ಮನುಷ್ಯನ ಉತ್ತಮ ಸ್ವಭಾವದ ವಿಷಯವಾದುದು. ಎಲ್ಲಾ ಶಾಸ್ತ್ರಗಳಲ್ಲಿಯೂ ಮನುಷ್ಯನು ಶ್ರೇಷ್ಠನೆಂದೂ ಆತ್ಮವು ಪರಿಪೂರ್ಣವಾದುದೆಂದೂ ಹೇಳಿರುತ್ತೆ. ಇದರ ಜತೆಗೆ ಕರ್ಮವನ್ನು ಹೇಳಿರುತ್ತೆ. ಪುಣ್ಯಕ್ಕೆ ಇಂಥಾಫಲ; ಪಾಪಕ್ಕೆ ಇಂಥಾಫಲವೆಂದು ಹೇಳುತ್ತಾರೆ. ಆದರೆ ನಿಜವಾಗಿ ಪುಣ್ಯಪಾಪಗಳ ಕಾರ್ಯವು ಆತ್ಮದ ಮೇಲೆ ನಡೆಯುವುದಾದರೆ ಆತ್ಮದಲ್ಲಿ ಏನೇನೂ ಹುರುಳಿಲ್ಲ ವೆಂದಂತಾಯಿತು. ಕೆಟ್ಟಕೆಲಸಗಳಿಂದ ಪುರುಷನು ಪ್ರಕಟವಾಗುವುದಕ್ಕೆ ಅಡ್ಡಿಯಾಗುತ್ತದೆ. ಒಳ್ಳೆಯ ಕೆಲಸಗಳಿಂದ ಈ ಅಡ್ಡಿಗಳು ಹೋಗಿ ಪುರುಷನು ತೋರಿಕೊಳ್ಳುತ್ತಾನೆ. ಇದರಿಂದ ಪುರುಷನೇನೂ ಬೇರೆ ಬೇರೆಯಾಗುವುದಿಲ್ಲ; ನೀವು ಏನು ಮಾಡಿದರೂ ನಿಮ್ಮ ಮಹಿಮೆಯನ್ನೆಂದಿಗೂ ಹಾಳುಮಾಡುವುದಿಲ್ಲ. ನಿಮ್ಮ ಸ್ವಭಾವವೆಂದಿಗೂ ಹೋಗುವುದಿಲ್ಲ. ಏಕೆಂದರೆ ಆತ್ಮದ ಮೇಲೆ ಯಾವುದರ ಕೈಯೂ ಹಾಯುವುದಿಲ್ಲ. ಆದರೆ ನೀವು ಮಾಡುವ ಕೆಟ್ಟ ಕೆಲಸದಿಂದ ಅದಕ್ಕೆ ಒಂದು ಆವರಣವು ಮುಚ್ಚಿಕೊಂಡು ಅದರ ಪೂರ್ಣತೆಯು ಮರೆಯಾಗುವುದು.

ಕರ್ಮವನ್ನೆಲ್ಲ ಬೇಗ ಅನುಭವಿಸಿ ತೀರಿಸುವುದಕ್ಕಾಗಿ ಯೋಗಿಗಳು ಕಾಯವ್ಯೂಹವನ್ನು ಅಂದರೆ ಶರೀರಗಳ ಗುಂಪುಗಳನ್ನು ನಿರ್ಮಿಸಿಕೊಳ್ಳುತ್ತಾರೆ; ಈ ಶರೀರಗಳಿಗೆಲ್ಲ ತಮ್ಮ ಅಹಂಕಾರದಿಂದ ಮನಸ್ಸುಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಇವರಿಗೆ ಮೊದಲೆ ಇದ್ದ ಮನಸ್ಸಿಗಿಂತ ಇವುಗಳು ಬೇರೆಯೆಂದು ತೋರಿಸುವುದಕ್ಕಾಗಿ ಇವುಗಳಿಗೆ ನಿರ್ಮಾಣಚಿತ್ತಗಳೆಂದು ಹೆಸರಿಟ್ಟಿದ್ದಾರೆ.

## 5. ಪ್ರವೃತ್ತಿಭೇದೇ ಪ್ರಯೋಜಕಂ ಚಿತ್ತಮೇಕಮನೇಕೇಷಾಮ್

ಟೀ॥ ನಿರ್ಮಿಸಿದ ಮನಸ್ಸುಗಳ ಕೆಲಸಗಳು ಬೇರೆ ಬೇರೆ ಆಗಿದ್ದರೂ ಇವುಗಳೆಲ್ಲವೂ ಮೊದಲನೆಯ ಒಂದು ಮನಸ್ಸಿನ ಅಧೀನದಲ್ಲಿರುತ್ತವೆ.

ವಿ॥ ಈ ಬೇರೆ ಬೇರೆ ಶರೀರಗಳಲ್ಲಿ ಕೆಲಸ ಮಾಡುವ ಮನಸ್ಸುಗಳನ್ನು ನಿರ್ಮಿಸಿದ ಮನಸ್ಸುಗಳೆಂದೂ ಆ ಶರೀರಗಳನ್ನು ನಿರ್ಮಿಸಿದ ಶರೀರಗಳೆಂದೂ ಕರೆಯುತ್ತಾರೆ. ಎಂದರೆ ಹೊಸದಾಗಿ ಮಾಡಿಕೊಂಡ ಶರೀರ ಮತ್ತು ಮನಸ್ಸುಗಳೆಂದರ್ಥ. ಭೌತಿಕ ಪದಾರ್ಥವೂ ಮನಸ್ಸೂ ಅಕ್ಷಯವಾದ ಉಗ್ರಾಣದ ಮನೆಗಳಂತೆ ಇರುವುವು. ನಾವು ಯೋಗಿಯಾದ ಮೇಲೆ ಅವುಗಳನ್ನು ವಶಮಾಡಿಕೊಳ್ಳುವ ರಹಸ್ಯವು ಗೊತ್ತಾಗುವುದು. ಯಾವಾಗಲೂ ಇದು ನಮ್ಮದೆ ಆದರೂ ನಾವು ಅದನ್ನು ಮರೆತುಬಿಟ್ಟಿದ್ದೆವು. ಯೋಗಿಯಾದಾಗ ಅದು ನೆನಪಿಗೆ ಬರುವುದು. ಆಗ ಅದನ್ನು ಏನು ಬೇಕಾದರೂ ಮಾಡಬಹುದು; ಹೇಗೆ ಬೇಕೆಂದರೆ ಹಾಗೆ ಉಪಯೋಗಿಸಿಕೊಳ್ಳಬಹುದು. ಈ ಬ್ರಹ್ಮಾಂಡವನ್ನು ಸೃಷ್ಟಿ ಮಾಡುವುದಕ್ಕೆ ಯಾವ ವಸ್ತು ಬೇಕೋ ಅದೇ ವಸ್ತುವಿನಿಂದಲೆ ನಿರ್ಮಿತ ಚಿತ್ತವು ಆಗಿರುತ್ತದೆ. ಮನಸ್ಸು ಬೇರೆ; ಭೌತಿಕವಸ್ತು ಬೇರೆಯೆಂದು ತಿಳಿಯಬಾರದು. ಇವೆರಡೂ ಒಂದೇ ವಸ್ತುವಿನ ಬೇರೆ ಬೇರೆ ರೂಪಗಳು. ಅಸ್ಮಿತೆಯೆಂದರೆ ಅಹಂಕಾರವೆಂಬ ಸೂಕ್ಷ್ಮ ವಸ್ತುವಿನಿಂದ ಯೋಗಿಯ ನಿರ್ಮಾಣ ಚಿತ್ತಗಳೂ ನಿರ್ಮಾಣ ಶರೀರಗಳೂ ಆಗುತ್ತವೆ. ಆದುದರಿಂದ ಯೋಗಿಗೆ ಸೃಷ್ಟಿಯಲ್ಲಿರುವ ಈ ಶಕ್ತಿಗಳ ರಹಸ್ಯವು ಗೊತ್ತಾದ ಮೇಲೆ ಎಷ್ಟು ಶರೀರ ಅಥವಾ ಮನಸ್ಸುಗಳು ಬೇಕೆಂದರೂ ಅಷ್ಟನ್ನು ಅಸ್ಮಿತೆಯೆಂಬ ಈ ಪದಾರ್ಥದಿಂದ ಮಾಡಿಕೊಳ್ಳುವುದಕ್ಕೆ ಬರುತ್ತದೆ.

## 6. ತತ್ರ ಧ್ಯಾನಜಮನಾಶಯಮ್

ಟೀ॥ [1]ಚಿತ್ತಗಳಲ್ಲಿ ಸಮಾಧಿಯಿಂದಾದುದಕ್ಕೆ ಆಸೆಯಿರುವುದಿಲ್ಲ.

ವಿ॥ ಬೇರೆ ಬೇರೆ ಜನರಲ್ಲಿರುವ ಚಿತ್ತಗಳಲ್ಲಿ ಸಮಾಧಿಯನ್ನು (ಅಂದರೆ ಪೂರ್ಣವಾಗಿ ಒಕ್ಕಡೆಗೆ ನಿಲ್ಲಿಸುವುದನ್ನು) ಪಡೆದ ಮನಸ್ಸೇ ಉತ್ತಮವಾದುದು. ಔಷಧಗಳಿಂದ ಆಗಲಿ, ಮಂತ್ರಶಕ್ತಿಯಿಂದ ಆಗಲಿ, ತಪಸ್ಸಿನಿಂದ ಆಗಲಿ ಸಿದ್ಧಿಯನ್ನು ಪಡೆದವನಿಗೆ ಇನ್ನೂ ಆಸೆಗಳಿದ್ದೇ ಇರುವುವು. ಆದರೆ ಯಾವನು ಧ್ಯಾನದಿಂದ ಸಮಾಧಿಯನ್ನು ಪಡೆದಿರುವನೊ ಅವನೊಬ್ಬನಿಗೆ ಮಾತ್ರ ಯಾವ ಆಸೆಗಳೂ ಇರುವುದಿಲ್ಲ.

1. ಭಾಷ್ಯದಲ್ಲಿ ನಿರ್ಮಾಣ ಚಿತ್ತದಲ್ಲಿ ಎಂದೇ ಅಕ್ಷರಾನುಗುಣವಾಗಿ ಅರ್ಥಮಾಡಿದ್ದಾರೆ. ಆದರೆ ಎಲ್ಲಾ ಚಿತ್ತಗಳಿಗೂ ಇದು ಅನ್ವಯಿಸುವುದೆಂದು ಸ್ವಾಮಿಗಳವರು ಹೀಗೆ ಅರ್ಥಮಾಡಿರಬಹುದು.

## 7. ಕರ್ಮಾಶುಕ್ಲಾಕೃಷ್ಣಂ ಯೋಗಿನಸ್ತ್ರಿವಿಧಮಿತರೇಷಾಮ್

ಟೀ॥ ಯೋಗಿಗಳ ಕರ್ಮಗಳು ಬಿಳಿಯವೂ ಅಲ್ಲ; ಕರಿಯವೂ ಅಲ್ಲ. ಇತರರಿಗೆ ಕರಿಯವು, ಬಿಳಿಯವು, ಮಿಶ್ರವೆಂದು ಮೂರು ವಿಧವಾಗಿರುವುವು.

ವಿ॥ ಯೋಗಿಯು ಪೂರ್ಣತೆಯನ್ನು ಪಡೆದ ಮೇಲೆ ಅವನು ಮಾಡುವ ಕರ್ಮದಿಂದ ಆಗಲಿ, ಅದರಿಂದ ಆಗುವ ಫಲದಿಂದ ಆಗಲಿ ಅವನಿಗೆ ಬಂಧವಾಗುವುದಿಲ್ಲ. ಏಕೆಂದರೆ ಅವನಿಗೆ ಅವುಗಳಲ್ಲಿ ಆಸೆಯೆ ಇರುವುದಿಲ್ಲ. ಅವನು ಕೆಲಸ ಮಾಡುತ್ತಲೆ ಇರುವನು; ಒಳ್ಳೆಯ ಕೆಲಸವನ್ನೆ ಮಾಡುತ್ತ ಜನರಿಗೆ ಒಳ್ಳೆಯದನ್ನೆ ಮಾಡುತ್ತಿರುವನು. ಆದರೆ ಫಲದಲ್ಲಿ ಆಸಕ್ತಿ ಇಡುವುದಿಲ್ಲ. ಆದುದರಿಂದ ಆ ಫಲವು ಅವನಿಗೆ ಬರುವುದಿಲ್ಲ. ಆದರೆ ಈ ಉತ್ತಮ ಸ್ಥಿತಿಯನ್ನು ಪಡೆಯದೆ ಇರುವ ಮಿಕ್ಕ ಜನರಿಗೆ ಕರ್ಮಗಳು ಕರಿಯವು (ಕೆಟ್ಟವು), ಬಿಳಿಯವು (ಒಳ್ಳೆಯವು) ಮತ್ತು ಮಿಶ್ರ ಎಂದು ಮೂರು ಬಗೆಯಾಗಿರುವುವು.

## 8. ತತಸ್ತದ್ವಿಪಾಕಾನುಗುಣಾನಾಮೇವಾಭಿವ್ಯಕ್ತಿರ್ವಾಸನಾನಾಮ್

ಟೀ॥ ಈ ಮೂರು ವಿಧವಾದ ಕರ್ಮಗಳಿಂದ ಪ್ರತಿಯೊಂದು ಸ್ಥಿತಿಯಲ್ಲಿಯೂ ಆ ಸ್ಥಿತಿಗೆ ತಕ್ಕಂಥ ಆಸೆಗಳೇ ತೋರಿಕೊಳ್ಳುವುವು. (ಆಗಿನ ಮಟ್ಟಿಗೆ ಉಳಿದವು ಹಾಗೆಯೆ ತೋರದೆ ಮಟ್ಟಾಗಿರುವುವು).

ವಿ॥ ನಾನು ಒಳ್ಳೆಯದು, ಕೆಟ್ಟದ್ದು, ಮಿಶ್ರ ಎಂಬ ಮೂರು ಬಗೆಯ ಕರ್ಮವನ್ನು ಮಾಡಿದ್ದು ಸತ್ತ ಮೇಲೆ ನನಗೆ ಸ್ವರ್ಗಲೋಕದಲ್ಲಿ ದೇವತೆಯ ಜನ್ಮ ಬಂತೆಂದು ಇಟ್ಟುಕೊಳ್ಳಿ. ದೇವತಾ ಶರೀರದಲ್ಲಿರುವ ಆಸೆಗಳು ಮನುಷ್ಯ ಶರೀರದಲ್ಲಿರುವ ಆಸೆಗಳಂತೆ ಇರುವುದಿಲ್ಲ. ದೇವತೆಯ ಶರೀರವು ಉಣ್ಣುವುದಿಲ್ಲ; ತಿನ್ನುವುದಿಲ್ಲ. ಉಣ್ಣುವುದು ತಿನ್ನುವುದು ಮೊದಲಾದ ಬಯಕೆಯನ್ನು ಹುಟ್ಟಿಸಬೇಕಾಗಿದ್ದ ನನ್ನ ಪೂರ್ವ ಕರ್ಮಗಳೇನಾಗುತ್ತವೆ? ನಾನು ದೇವತೆಯಾದಾಗ ಈ ಕರ್ಮಗಳು ಎಲ್ಲಿಗೆ ಹೋಗುತ್ತವೆ? ಇದಕ್ಕೆ ಉತ್ತರವೇನೆಂದರೆ ಆಸೆಗಳು ತೋರಬೇಕಾದರೆ ತಕ್ಕ ಪರಿಸ್ಥಿತಿಗಳಿರಬೇಕು. ಯಾವ ಯಾವ ಆಸೆಗಳಿಗೆ ಪರಿಸ್ಥಿತಿಯು ತಕ್ಕಂತೆ ಇರುವುದೊ ಅವೇ ಹೊರಬೀಳುವುವು. ಮಿಕ್ಕವು ಹಾಗೆಯೇ ಇದ್ದು ಬಿಡುತ್ತವೆ. ಈ ಜನ್ಮದಲ್ಲಿ ನಮಗೆ ಅನೇಕ ದೇವತೆಗಳ ಬಯಕೆಗಳೂ ಎಷ್ಟೋ ಮನುಷ್ಯರ ಬಯಕೆಗಳೂ ಇನ್ನೆಷ್ಟೋ ಪಶುಗಳ ಬಯಕೆಗಳೂ ಇರುತ್ತಿರುವುವು. ನನಗೆ ದೇವತಾ ಶರೀರ ಬಂದರೆ ಒಳ್ಳೆಯ ಆಸೆಗಳು ಮಾತ್ರ ಹೊರಕ್ಕೆ ಬರುವುವು. ಏಕೆಂದರೆ ಆಗ ಅವಕ್ಕೆ ತಕ್ಕಂತೆ ಪರಿಸ್ಥಿತಿ ಇರುವುದು. ಆದರೆ ನನಗೆ ಪಶುಜನ್ಮ ಬಂದರೆ ಪಶುಸ್ವಭಾವದ ಆಸೆಗಳೆ ಮೇಲಕ್ಕೆ ಬರುವುವು. ಆಗ ಒಳ್ಳೆಯ ಆಸೆಗಳು ಸುಮ್ಮಗಿರುವುವು. ಇದರಿಂದ ಏನು ಸಿದ್ಧವಾಯಿತೆಂದರೆ ಪರಿಸ್ಥಿತಿಯಿಂದ ಈ ಆಸೆಗಳು ನಿಲ್ಲಿಸಬಹುದೆಂದಾಯಿತು. ಯಾವ ಕರ್ಮವು ಪರಿಸ್ಥಿತಿಗೆ ತಕ್ಕಂತೆ ಇರುವುದೊ ಅದೊಂದು ಮಾತ್ರ ಹೊರಗೆ ಬರುವುದು. ಇದರಿಂದ ಕರ್ಮವನ್ನು ವಶಮಾಡಿಕೊಳ್ಳುವುದಕ್ಕೆ ಕೂಡ ಪರಿಸ್ಥಿತಿಯು ಒಳ್ಳೆಯ ಸಾಧನವೆಂದು ಗೊತ್ತಾಗುತ್ತದೆ.

## 9. ಜಾತಿದೇಶಕಾಲವ್ಯವಹಿತಾನಾಮಪ್ಯಾನನ್ತರ್ಯಂ ಸ್ಮೃತಿಸಂಸ್ಕಾರಯೋರೇಕರೂಪತ್ವಾತ್.

ಟೀ|| ಜಾತಿ, ಸ್ಥಳ, ಕಾಲ ಇವುಗಳಿಂದ ಆಸೆಗಳು ಬೇರ್ಪಟ್ಟಿದ್ದರೂ, ಸ್ಮರಣೆ ಮತ್ತು ಸಂಸ್ಕಾರಗಳು ಒಂದೇ ಆಗಿರುವುದರಿಂದ ಕೂಡಿಕೊಂಡೇ ಇರುವುವು.

ವಿ|| ಅನುಭವಗಳು ಸೂಕ್ಷ್ಮವಾಗಿ ಸಂಸ್ಕಾರಗಳಾಗುವುವು. ಈ ಸಂಸ್ಕಾರಗಳಿಗೆ ಮತ್ತೆ ಜೀವಕಳೆ ಬಂದರೆ ಅವೇ ಸ್ಮರಣೆಯಾಗುತ್ತವೆ. ಇಲ್ಲಿ ಸ್ಮರಣೆಯೆಂಬುದರಲ್ಲಿ ಸಂಸ್ಕಾರಗಳಾಗಿರುವ ಪೂರ್ವದ ಅನುಭವವನ್ನು ಈಗ ತಿಳಿದು ಮಾಡುವ ಕೆಲಸಕ್ಕೆ ತನಗೆ ತಿಳಿಯದೆ ಜೋಡಿಸುವುದು ಕೂಡ ಸೇರಿರುವುದು. ಪ್ರತಿಯೊಂದು ಶರೀರದಲ್ಲಿಯೂ ಅದರಂಥ ಹಿಂದಣ ಶರೀರದಲ್ಲಿ ಸಂಪಾದಿಸಿದ ಸಂಸ್ಕಾರಗಳು ಮಾತ್ರ ಕೆಲಸಕ್ಕೆ ಕಾರಣವಾಗುತ್ತವೆ. ಅದರಂತಿಲ್ಲದ ಶರೀರದಲ್ಲಿ ಪಡೆದ ಅನುಭವವು ಹಾಗೆಯೇ ಸುಮ್ಮಗಿರುತ್ತದೆ. ಮತ್ತೊಂದು ಬಗೆಯ ಶರೀರದ ಸಂಬಂಧವೇ ಇಲ್ಲದೆ ತನ್ನಂಥ ಶರೀರಗಳೇ ಒಂದರ ಹಿಂದೊಂದು ಹುಟ್ಟಿದಂತೆಯೆ ಪ್ರತಿಯೊಂದು ಶರೀರವೂ ಕೆಲಸ ಮಾಡುತ್ತಿರುವುದು. ಹೀಗಿರುವುದರಿಂದ ಹಿಂದಣ ಆಸೆಗಳೂ ಒಂದಕ್ಕೊಂದು ಕೂಡಿಕೊಂಡಿರುವುದಕ್ಕೆ ಅಡ್ಡಿಯಾಗುವುದಿಲ್ಲ.

## 10. ತಾಸಾಮನಾದಿತ್ವಂ ಚಾಶಿಷೋ ನಿತ್ಯತ್ವಾತ್

ಟೀ|| ಸುಖದ ಆಸೆಯು ನಿತ್ಯವಾಗಿರುವುದರಿಂದ ಆಸೆಗಳಿಗೆ ಮೊದಲಿಲ್ಲ.

ವಿ|| ಅನುಭವವಾಗಬೇಕಾದರೆ ಸುಖದಾಸೆ ಇದ್ದೇ ಇರಬೇಕು. ಯಾವ ಅನುಭವವೇ ಆಗಲಿ ಹಿಂದಣ ಅನುಭವದ ಸಂಸ್ಕಾರದಿಂದಲೆ ಆಗಿರುವುದರಿಂದ ಅನುಭವಕ್ಕೆ ಮೊದಲಿಲ್ಲ. ಆದುದರಿಂದ ಆಸೆಗೆ ಮೊದಲಿಲ್ಲ.

## 11. ಹೇತುಫಲಾಶ್ರಯಾಲಮ್ಬನೈಃ ಸಂಗೃಹೀತತ್ವಾದೇಷಾಮಭಾವೇ ತದಭಾವಃ

ಟೀ|| ಕಾರಣ, ಕಾರ್ಯ, ಆಶ್ರಯ ಮತ್ತು ವಿಷಯಗಳು ಇವುಗಳಿಂದಲೆ ನಿಂತಿರುವುದರಿಂದ ಇವುಗಳಿಲ್ಲದಿದ್ದರೆ ಅದು ಇರುವುದಿಲ್ಲ.

ವಿ|| ಆಸೆಗಳೆಲ್ಲ ಕಾರ್ಯಕಾರಣಗಳಿಂದ ನಿಂತಿರುವುವು. ಒಂದು ಆಸೆ ಹುಟ್ಟಿದರೆ ತನ್ನ ಕಾರ್ಯವನ್ನು ಹುಟ್ಟಿಸದೆ ಹೋಗುವುದಿಲ್ಲ. ಇದೂ ಅಲ್ಲದೆ ಚಿತ್ತವೆಂಬ ದೊಡ್ಡ ಉಗ್ರಾಣದಲ್ಲಿ ಸಂಸ್ಕಾರರೂಪವಾಗಿ ಹಿಂದಣ ಎಲ್ಲಾ ಆಸೆಗಳೂ ಇರುವುದರಿಂದ ಇದು ಇವುಗಳಿಗೆ ಆಶ್ರಯವಾಗಿರುವುದು. ಇವುಗಳನ್ನನುಭವಿಸಿದ ಹೊರತು ಇವು ಹೋಗುವುದಿಲ್ಲ ಮತ್ತು ಇಂದ್ರಿಯಗಳಿಗೆ ಹೊರಗಣ ವಿಷಯಗಳ ಗ್ರಹಿಕೆಯಾಗುವವರಿಗೆ ಹೊಸಹೊಸ ಅಲೆಗಳು ಹುಟ್ಟುತ್ತಲೆ ಇರುವುವು. ಆದುದರಿಂದ ಆಸೆಯ ಕಾರಣ, ಕಾರ್ಯ, ಆಶ್ರಯ ಮತ್ತು ವಿಷಯಗಳನ್ನು ತಪ್ಪಿಸಿಕೊಳ್ಳುವುದಕ್ಕಾದರೆ ಮಾತ್ರ ಆಸೆ ಹೋಗುವುದು.

## 12. ಅತೀತಾನಾಗತಂ ಸ್ವರೂಪತೋಽಸ್ತ್ಯಧ್ವಭೇದಾದ್ಧರ್ಮಾಣಾಮ್

ಟೀ||[1] ಹಿಂದಿನದು ಮತ್ತು ಮುಂದಿನದು ಎಂಬುದು ಸ್ವರೂಪದಿಂದ ಇರುತ್ತದೆ. ಏಕೆಂದರೆ ಧರ್ಮಗಳಿಗೆ ಬೇರೆ ಬೇರೆ ಮಾರ್ಗಗಳುಂಟು.

## 13. ತೇ ವ್ಯಕ್ತಸೂಕ್ಷ್ಮಾ ಗುಣಾತ್ಮಾನಃ

ಟೀ|| ಇವು ಗುಣಸ್ವರೂಪವಾದುದರಿಂದ ಹೊರಗೆ ಕಾಣುತ್ತಲಿರುವುವು; ಅಥವಾ ಸೂಕ್ಷ್ಮವಾಗಿ (ಕಾಣಿಸದೆ) ಇರುವುವು.

ವಿ|| ಸತ್ತ್ವ, ರಜಸ್ಸು, ತಮಸ್ಸು ಈ ಮೂರು ವಸ್ತುಗಳೇ ಗುಣಗಳು. ಇವುಗಳ ಸ್ಥೂಲಸ್ಥಿತಿಯೇ ನಮಗೆ ಕಾಣಿಸುತ್ತಿರುವ ಜಗತ್ತು. ಈ ಗುಣಗಳು ಬೇರೆ ಬೇರೆ ರೂಪಗಳನ್ನು ಧರಿಸುವುದರಿಂದ ಭೂತ ಮತ್ತು ಭವಿಷ್ಯತ್ತು ಇವು ಆಗುತ್ತವೆ.

## 14. ಪರಿಣಾಮೈಕತ್ವಾದ್ವಸ್ತುತತ್ತ್ವಮ್

ಟೀ|| ಮಾರ್ಪಾಟುಗಳು ಒಂದೇ ಸಮನಾಗಿರುವುದರಿಂದ ವಸ್ತುಗಳು ಒಂದೇ ಸಮನಾಗಿರುವುವು.

ವಿ|| (ಗುಣಗಳೆಂಬ) ವಸ್ತುಗಳು ಮೂರಾದರೂ ಅವುಗಳ ಮಾರ್ಪಾಡುಗಳು ಒಂದಕ್ಕೊಂದು ಹೊಂದಿಕೆಯಾಗಿರುವುದರಿಂದ ಎಲ್ಲಾ ವಸ್ತುಗಳೂ ಒಂದೇ ರೀತಿಯಲ್ಲಿ ತೋರುತ್ತಿರುವುವು.

## 15. ವಸ್ತುಸಾಮ್ಯೇ ಚಿತ್ತಭೇದಾತ್ತಯೋರ್ವಿಭಕ್ತಃ ಪನ್ಥಾಃ

ಟೀ|| ವಸ್ತು ಒಂದೇ ಆಗಿರಲು ಅದನ್ನು ಅರಿವುದು ಮತ್ತು ಇಚ್ಛೆಮಾಡುವುದು ಇವು ಚಿತ್ತವು ಬೇರೆ ಬೇರೆ ಆಗುವುದರಿಂದ ಬೇರೆ ಬೇರೆ ಆಗುತ್ತಿರುವುವು.

## 16[1]. ನ ಚೈಕಚಿತ್ತತನ್ತ್ರಂ ವಸ್ತು ತದಪ್ರಮಾಣಕಂ ತದಾ ಕಿಂ ಸ್ಯಾತ್

ಟೀ|| ವಸ್ತುವೆಂಬುದು ಒಂದು ಚಿತ್ತಕ್ಕೆ ಅಧೀನವಾಗಿರುವುದಿಲ್ಲ. ಏಕೆಂದರೆ ಯಾರೂ ಗ್ರಹಿಸದೆ ಇರುವ ವಸ್ತು ನಾಶವಾಗಬೇಕಾದೀತು.

---

1. "ವಾಸನೆಗಳು ಇರುವುದಾದರೆ ಅವುಗಳು ನಾಶವಾಗುವುದು ಹೇಗೆ? ನಿಜವಾಗಿ ಇದ್ದ ವಸ್ತು ನಾಶವಾಗಬಾರದಲ್ಲ! ಇಲ್ಲದ ವಸ್ತುಗಳು ಹುಟ್ಟುವುದೆಂತು"? ಎಂದರೆ "ಇಲ್ಲದುದು ಹುಟ್ಟುವುದೂ ಇಲ್ಲ; ಇದ್ದದ್ದು ಹೋಗುವುದೂ ಇಲ್ಲ. ಇರುವ ಧರ್ಮಗಳ ಬೇರೆ ಬೇರೆ ಮಾರ್ಗವನ್ನನುಸರಿಸಿದರೆ ಹುಟ್ಟು, ನಾಶ ಎನ್ನಿಸುತ್ತವೆ" ಎಂದು ಸೂತ್ರದ ತಾತ್ಪರ್ಯವು. ಹಿಂದೆ ಇದ್ದದ್ದು ಮತ್ತು ಮುಂದೆ ಹುಟ್ಟುವುದು ಇವೆರಡೂ ಸ್ವರೂಪದಿಂದ ಇದ್ದೇ ಇರುತ್ತವೆ. ಏಕೆಂದರೆ ಧರ್ಮಗಳಿಗೆ ಬೇರೆ ಬೇರೆ ಮಾರ್ಗಗಳುಂಟೆಂದು ಅಕ್ಷರಾರ್ಥ.

2. ಈ ಸೂತ್ರವನ್ನು ಭಾಷ್ಯದಲ್ಲಿ ವಿವರಿಸಿರುತ್ತದೆ. ಆದುದರಿಂದ ಇಲ್ಲಿ ಸೇರಿಸಿರುತ್ತದೆ. ಸ್ವಾಮಿಗಳು ಇದನ್ನು ಬಿಟ್ಟಿರುತ್ತಾರೆ. ಸೂತ್ರದಲ್ಲಿ ಪಾಠಾಂತರವೂ ಇದೆ. ಇದರಲ್ಲಿ ವಿಜ್ಞಾನವಾದವನ್ನು ತಿರಸ್ಕರಿಸಿರುತ್ತೆ; ಆದರೆ ವಸ್ತು ಬೇರೆ ಇದೆಯೆಂಬುದು ಇದರ ಹಿಂದಿನ ಸೂತ್ರದಿಂದಲೂ ಮುಂದಿನ ಸೂತ್ರದಿಂದಲೂ ವ್ಯಕ್ತವಾಗುತ್ತದೆ.

## 16. ತದುಪರಾಗಾಪೇಕ್ಷಿತ್ವಾಚ್ಚಿತ್ತಸ್ಯ ವಸ್ತು ಜ್ಞಾತಾಜ್ಞಾತಮ್

ಟೀ॥ ವಸ್ತುಗಳು ಚಿತ್ತಕ್ಕೆ ಯಾವ ಬಣ್ಣವನ್ನು ಕೊಡುತ್ತವೆಯೊ ಅದಕ್ಕನುಗುಣವಾಗಿ ಅವು ಚಿತ್ತಕ್ಕೆ ತಿಳಿಯುತ್ತವೆ ಅಥವಾ ತಿಳಿಯುವುದಿಲ್ಲ.

## 17. ಸದಾ ಜ್ಞಾತಾಶ್ಚಿತ್ತವೃತ್ತಯಸ್ತತ್ಪ್ರಭೋಃ ಪುರುಷಸ್ಯಾಪರಿಣಾಮಿತ್ವಾತ್

ಟೀ॥ ಚಿತ್ತದ ಒಡೆಯನಾದ ಪುರುಷನು ಬೇರೆ ಆಗುವವನಲ್ಲವಾದುದರಿಂದ ಚಿತ್ತವೃತ್ತಿಗಳು ಯಾವಾಗಲೂ ತಿಳಿಯುತ್ತಲೆ ಇರುವುವು.

ವಿ॥ ಈ ಸಿದ್ಧಾಂತದ ಒಟ್ಟು ಸಾರವೇನೆಂದರೆ ಈ ಜಗತ್ತು ವಸ್ತು ರೂಪವಾಗಿಯೂ ಇರುವುದು; ಜ್ಞಾನರೂಪವಾಗಿಯೂ ಇರುವುದು. ವಸ್ತು ಮತ್ತು ಜ್ಞಾನ ಎಂಬ ಎರಡೂ ಬಿಡದೆ ಬೇರೆ ಆಗುತ್ತಿರುವುವು. ಈ ಪುಸ್ತಕವೆಂದರೇನು? ಎಡೆಬಿಡದೆ ಬೇರೆ ಆಗುತ್ತಿರುವ ಅಣುಗಳ ಗುಂಪು. ಕೆಲವು ಅಣುಗಳು ಹೊರಗೆ ಹೋಗುತ್ತಲೂ ಮತ್ತೆ ಕೆಲವು ಒಳಕ್ಕೆ ಬರುತ್ತಲೂ ಇವೆ. "ಹಾಗಾದರೆ ಇದೊಂದು ಎಂಬುದು ಹೇಗಾಯಿತು? ಅದೇ ಪುಸ್ತಕವೆಂದು ಹೇಗಾಯಿತು?" ಎಂದರೆ ಮಾರ್ಪಾಡುಗಳು ಒಂದೇ ಸಮನೆ ನಡೆಯುತ್ತಿವೆ. ನಮ್ಮ ಮನಸ್ಸಿಗೆ ಇವುಗಳಿಂದ ಉಂಟಾಗುವ ಜ್ಞಾನವು ಒಂದೇ ಕ್ರಮದಲ್ಲಿ ಬರುತ್ತಿದೆ. ಆದುದರಿಂದ ಇವುಗಳು ಕೂಡಿ ಒಂದೇ ಭಾವಚಿತ್ರವಾಗುತ್ತದೆ. ಆದರೆ ಇದರ ಭಾಗಗಳೇನೋ ಬೇರೆ ಬೇರೆಯಾಗುತ್ತಲೆ ಇರುತ್ತವೆ. ಇದಲ್ಲದೆ ಮನಸ್ಸೂ ಕ್ಷಣಕ್ಷಣಕ್ಕೆ ಬೇರ್ಪಡುತ್ತಿರುವುದು. ಮನಸ್ಸು, ಶರೀರ ಇವೆರಡೂ ಒಂದೇ ಪದಾರ್ಥದಲ್ಲಿ ಎರಡು ಪದರಗಳಂತಿರುವುವು. ಆದರೆ ಇವೆರಡೇ ಬೇರೆ ಬೇರೆ ವೇಗದಿಂದ ಕಂಪಿಸುತ್ತಿರುವುವು. ಅದರಲ್ಲಿ ಒಂದಕ್ಕಿಂತ ಇನ್ನೊಂದು ಮೆಲ್ಲಗೆ ಕಂಪಿಸುತ್ತಿರುವುದರಿಂದ ಇದು ಇಂಥದ್ದೆಂದು ಗೊತ್ತು ಮಾಡಿಕೊಳ್ಳುವುದಕ್ಕಾಗುತ್ತದೆ. ಉದಾಹರಣೆಗಾಗಿ ಒಂದು ಹೊಗೇಗಾಡಿಯು ಹೋಗುತ್ತಿರುತ್ತದೆ. ಅದರ ಜತೆಗೆ ಒಂದು ಗಾಡಿಯೂ ಹೋಗುತ್ತಿದ್ದರೆ ಇವೆರಡೂ ಹೋಗುತ್ತಿರುವುದನ್ನು ಸ್ವಲ್ಪ ಮಟ್ಟಿಗೆ ಗೊತ್ತುಮಾಡಿಕೊಳ್ಳಬಹುದು. ಆದರೆ ಇನ್ನೊಂದು ವಿಷಯವೂ ಅಗತ್ಯವಾಗಿರುತ್ತದೆ. ಅತ್ತಿತ್ತ ಚಲಿಸದಿರುವ ಮತ್ತೊಂದು ಪದಾರ್ಥವಿದ್ದರೆ ಮಾತ್ರ ಚಲನೆಯು ಗೊತ್ತಾಗುತ್ತದೆ. ಆದರೆ ಒಂದಕ್ಕಿಂತ ಒಂದು ವೇಗವಾಗಿ ಎರಡು ಮೂರು ಚಲಿಸುತ್ತಿದ್ದರೆ ಅದರಲ್ಲಿ ಹೆಚ್ಚು ವೇಗದಿಂದ ಚಲಿಸುವುದು ಮೊದಲು ಗೊತ್ತಾಗುವುದು. ಆಮೇಲೆ ಮೆಲ್ಲಗೆ ಸಂಚರಿಸುವುವು ಗೊತ್ತಾಗುತ್ತವೆ. ಹೀಗೆ ಇರುವುದರಿಂದ ಮನಸ್ಸಿಗೆ ಅನುಭವವಾಗುವುದು ಹೇಗೆ? ಅದೂ ಚಲಿಸುತ್ತಲೆ ಇರುತ್ತದೆ. ಆದುದರಿಂದ ಇದಕ್ಕಿಂತ ಮೆಲ್ಲಗೆ ತಿರುಗುವುದೊಂದು ವಸ್ತು ಬೇಕಾಯಿತು. ಇದನ್ನು ತಿಳಿಯುವುದಕ್ಕೆ ಇನ್ನೊಂದು ವಸ್ತು ಬೇಕಾಯಿತು. ಅದನ್ನು ತಿಳಿಯುವುದಕ್ಕೆ ಮತ್ತೊಂದು, ಅದಕ್ಕೆ ಮಗದೊಂದು ಹೀಗೆ ನಿಲುಗಡೆಯಿಲ್ಲದೆ ಹೋಗುವುದು. ಹೀಗಿರುವುದರಿಂದ ನ್ಯಾಯದಂತೆ ಯಾವುದಾದರೂ ಒಂದೇ ನಿಲುಗಡೆ ಇರಬೇಕಾಯಿತು. ಇದನ್ನೆಲ್ಲ ಮುಗಿಸುವುದಕ್ಕೆ ಎಂದೆಂದಿಗೂ ಬೇರ್ಪಡಿಸದೆ ಇರುವದೊಂದನ್ನರಿಯಬೇಕಾಯಿತು. ಹೀಗೆ ಎಂದೆಂದಿಗೂ ಮುಗಿಯದ ಸರಪಣಿಯಂತಿರುವ ಚಲನೆಗೆಲ್ಲ ಆಧಾರನಾಗಿ ಮಾರ್ಪಾಡುಗಳಿಲ್ಲದ, ಬಣ್ಣವಿಲ್ಲದ, ಶುದ್ಧನಾದ ಪುರುಷನಿರುತ್ತಾನೆ.

ಮಾಯಾದೀಪವು ಬಟ್ಟೆಯ ಪರದೆಯ ಮೇಲೆ ಭಾವಚಿತ್ರಗಳನ್ನು ಹಾಕಿದರೂ ಬಟ್ಟೆಯೇನೋ ಕೆಡದಿರುವಂತೆ ಈ ಎಲ್ಲಾ ಅರಿವುಗಳೂ ಪುರುಷನಲ್ಲಿಯೆ ಸುಮ್ಮನೆ ಪ್ರತಿಬಿಂಬಿಸುತ್ತಿರುವುವು.

## 18. ನ ತತ್ಸ್ವಾಭಾಸಂ ದೃಶ್ಯತ್ವಾತ್

ಟೀ॥ ಚಿತ್ತವು ಕಾಣುವ ವಸ್ತುವಾದುದರಿಂದ ತನ್ನಿಂದ ತಾನು ಬೆಳಗುವುದಿಲ್ಲ.

ವಿ॥ ಪ್ರಕೃತಿಯಲ್ಲಿ ಎಲ್ಲೆಲ್ಲಿ ನೋಡಿದರೂ ಅಗಾಧವಾದ ಶಕ್ತಿಯು ಕಾಣುತ್ತಿರುವುದು. ಆದರೆ ಅದು ತನ್ನಿಂದ ತಾನು ಬೆಳಗುವುದಲ್ಲ. ನಿಜವಾದ ತಿಳಿವೆಂಬುದು ಅದರ ಸಾರವಲ್ಲ. ಪುರುಷನೊಬ್ಬ ಮಾತ್ರ ತನ್ನಿಂದ ತಾನು ಬೆಳಗುತ್ತ ತನ್ನ ಬೆಳಕನ್ನು ಎಲ್ಲದಕ್ಕೂ ಕೊಡುತ್ತಿರುವನು. ಭೌತಿಕವಸ್ತುವಿನಲ್ಲಿ ಆಗಲಿ, ಮನಸ್ಸಿನಲ್ಲಿ ಆಗಲಿ ಹೊರಸೂಸುತ್ತಿರುವುದೆಲ್ಲವೂ ಪುರುಷನ ಶಕ್ತಿಯೆ.

## 19. ಏಕಸಮಯೇ ಚೋಭಯಾನವಧಾರಣಮ್

ಟೀ॥ ಏಕೆಂದರೆ ಒಂದೇ ಕಾಲದಲ್ಲಿ ಎರಡನ್ನರಿಯುವುದು ಅದರಿಂದ ಆಗುವುದಿಲ್ಲ.

ವಿ॥ ಚಿತ್ತವು ತನ್ನಿಂದ ತಾನೆ ಬೆಳಗುತ್ತಿದ್ದರೆ ಅದಕ್ಕೆ ಎರಡು ವಸ್ತುಗಳನ್ನು ಏಕಕಾಲಕ್ಕೆ ಅರಿಯುವುದಕ್ಕೆ ಬರುತ್ತಿತ್ತು. ಆದರೆ ಈಗ ಬರುವುದಿಲ್ಲ. ಒಂದು ಕಡೆಗೆ ತುಂಬ ಲಕ್ಷ್ಯವಿಟ್ಟರೆ ಮತ್ತೊಂದು ಗೊತ್ತಾಗದೆ ಹೋಗುವುದು. ಮನಸ್ಸು ತನ್ನಿಂದ ತಾನು ಹೊಳೆಯುತ್ತಿದ್ದರೆ ಅದರ ಅನುಭವಗಳು ಒಂದು ಕಾಲಕ್ಕೆ ಒಂದೇ ಎಂಬ ನಿಯಮದಿಂದ ಆಗುತ್ತಿರಲಿಲ್ಲ. ಪುರುಷನಾದರೊ ಎಲ್ಲವನ್ನೂ ಏಕಕಾಲಕ್ಕೆ ಅರಿಯುವನು. ಆದುದರಿಂದ ಪುರುಷನು ತನ್ನಿಂದ ತಾನು ಬೆಳಗುವವನು; ಚಿತ್ತವು ಬೆಳಗುವುದಲ್ಲ.

## 20. ಚಿತ್ತಾನ್ತರದೃಶ್ಯೇಬುದ್ಧಿಬುದ್ಧೇರತಿಪ್ರಸಙ್ಗಃ ಸ್ಮೃತಿಸಂಕರಶ್ಚ

ಟೀ॥ ಮತ್ತೊಂದು ಅರಿಯುವ ಬುದ್ಧಿಯನ್ನು ಕಲ್ಪಿಸಿದರೆ ಇಂಥ ಕಲ್ಪನೆಗಳಿಗೆ ನಿಲವೇ ಇಲ್ಲವಾಗುವುದು ಮತ್ತು ಸ್ಮೃತಿಯೂ ಒಂದರಲ್ಲಿ ಒಂದು ಸೇರಿಹೋಗುವುದು.

ವಿ॥ ನಮ್ಮ ಚಿತ್ತವನ್ನು ಅರಿಯುವುದಕ್ಕೆ ಮತ್ತೊಂದು ಚಿತ್ತವಿದೆಯೆಂದು ಕಲ್ಪಿಸಿದರೆ ಅದನ್ನು ಅರಿಯುವುದಕ್ಕೆ ಮತ್ತೊಂದು ಬೇಕಾಗುವುದು. ಹೀಗೆ ನಿಲುಗಡೆ ಇಲ್ಲವಾಗುವುದು. ಇದೂ ಸ್ಮೃತಿಯೂ ಬೆರೆತು ಹೋಗಿ ನೆನಪು ಉಳಿಯುವುದಕ್ಕೆ ಆಸರೆ ಇಲ್ಲದಂತಾಗುವುದು.

## 21. ಚಿತೇರಪ್ರತಿಸಂಕ್ರಮಾಯಾಸ್ತದಾಕಾರಾಪತ್ತೌ ಸ್ವಬುದ್ಧಿಸಂವೇದನಮ್

ಟೀ॥ ತಿಳಿವಿನ ಸಾರವು (ಪುರುಷನು) ಬೇರ್ಪಡುವನಲ್ಲವಾದುದರಿಂದ ಚಿತ್ತವು ಅದರ ರೂಪನ್ನು ಪಡೆದಾಗ ಅದು ಅರಿಯುವುದು.

ವಿ॥ ಅರಿವುದೆಂಬುದು ಪುರುಷನ ಗುಣವಲ್ಲವೆಂದು ತೋರಿಸುವುದಕ್ಕಾಗಿ ಪತಂಜಲಿಗಳು ಇದನ್ನು ಹೇಳಿದ್ದಾರೆ. ಮನಸ್ಸು ಪುರುಷನ ಸಮೀಪಕ್ಕೆ ಬಂದರೆ ಆ ಮನಸ್ಸಿನಲ್ಲಿ ಪ್ರತಿಬಿಂಬಿಸಿ

ದಂತಾಗುವುದು. ಆಗ ಮನಸ್ಸೇ ಅರಿಯುವುದು ಮತ್ತು ತಾನೆ ಪುರುಷನಂತೆ ತೋರುವುದು.

## 22. ದ್ರಷ್ಟೃದೃಶ್ಯೋಪರಕ್ತಂ ಚಿತ್ತಂ ಸರ್ವಾರ್ಥಮ್

ಟೀ|| ನೋಡುವವನು, ನೋಡತಕ್ಕದ್ದು, ಇವೆರಡರಿಂದ ಬಳಿಯಲ್ಪಟ್ಟು ಚಿತ್ತವು ಎಲ್ಲವನ್ನೂ ಅರಿಯುವುದು.

ವಿ|| ಮನಸ್ಸಿನ ಒಂದು ಕಡೆ ನೋಡತಕ್ಕದ್ದು, ಎಂದರೆ ಹೊರಗಣ ಪ್ರಪಂಚವು ಪ್ರತಿಬಿಂಬಿಸುವುದು; ಮತ್ತೊಂದುಕಡೆ ನೋಡುವವನು ಪ್ರತಿಬಿಂಬಿಸುತ್ತಿರುವನು. ಹೀಗೆ ಚಿತ್ತಕ್ಕೆ ಎಲ್ಲಾ ಬಗೆಯ ಅರಿವೂ ಆಗುತ್ತಿರುವುದು.

## 23. ತದಸಂಖ್ಯೇಯವಾಸನಾಭಿಶ್ಚಿತ್ರಮಪಿ ಪರಾರ್ಥಂ ಸಂಹತ್ಯಕಾರಿತ್ವಾತ್

ಟೀ|| ಈ ಚಿತ್ತವು ಲೆಕ್ಕವಿಲ್ಲದಷ್ಟು ಆಸೆಗಳಿಂದ ಮತ್ತೊಬ್ಬ (ಪುರುಷನಿಗಾಗಿ ಕೆಲಸ ಮಾಡುತ್ತಿರುವುದು.) ಏಕೆಂದರೆ ಅದು ಒಟ್ಟುಗೂಡಿ ಕೆಲಸ ಮಾಡುತ್ತಿದೆ.

ವಿ|| ಚಿತ್ತವೆಂಬುದು ಅನೇಕ ವಸ್ತುಗಳಿಂದ ಆಗಿರುವುದು. ಆದುದರಿಂದ ಅದು ತನಗಾಗಿ ಕೆಲಸವಮಾಡುತ್ತಿರಲಾರದು. ಈ ಜಗತ್ತಿನಲ್ಲಿ ಯಾವ ಯಾವದು ಅನೇಕ ವಸ್ತುಗಳ ಸೇರಿಕೆಯಿಂದಾಗಿರುವುದೊ ಅದೆಲ್ಲ ಹಾಗೆ ಒಟ್ಟುಗೂಡುವುದಕ್ಕೆ ಒಂದು ಉದ್ದೇಶವಿರುವುದು. ಈ ಒಟ್ಟುಗೂಡುವುದೆಂಬುದು ಮತ್ತೊಂದು ಪದಾರ್ಥಕ್ಕಾಗಿಯೆ ನಡೆಯುತ್ತಿರುವುದು. ಆದುದರಿಂದ ಚಿತ್ತದ ರೂಪದಲ್ಲಿ ಒಟ್ಟುಗೂಡಿಡುವುದೆಂಬುದು ಪುರುಷನಿಗಾಗಿ.

## 24. ವಿಶೇಷದರ್ಶಿನ ಆತ್ಮಭಾವಭಾವನಾನಿವೃತ್ತಿಃ

ಟೀ|| ಇದು ಇಂಥದ್ದೆಂದು ವಿವೇಕದಿಂದ ತಿಳಿಯುವವನಿಗೆ ಚಿತ್ತವೇ ಆತ್ಮವೆಂಬ ಭಾವನೆಯು ಹೋಗುವುದು.

ವಿ|| ವಿವೇಕದಿಂದ ಯೋಗಿಗೆ ಚಿತ್ತವು ಪುರುಷನಲ್ಲವೆಂಬುದು ಗೊತ್ತಾಗುವುದು.

## 25. ತದಾ ವಿವೇಕನಿಮ್ನಂ ಕೈವಲ್ಯಪ್ರಾಗ್ಭಾರಂ ಚಿತ್ತಮ್

ಟೀ|| ಆಗ ವಿವೇಕದಲ್ಲಿಯೆ ಇಳಿದ ಚಿತ್ತವು ಮೊದಲಿನ ಸ್ಥಿತಿಯಾದ ಕೈವಲ್ಯವನ್ನು (ತಾನೆ ಬೇರೆ ಆಗಿರುವುದನ್ನು) ಪಡೆಯುವುದು.

ವಿ|| ಹೀಗೆ ಯೋಗಾಭ್ಯಾಸದಿಂದ ವಿವೇಕ ಶಕ್ತಿಯು ಬರುತ್ತದೆ; ದೃಷ್ಟಿಯು ನಿರ್ಮಲವಾಗುವುದು; ಕಣ್ಣಿನ ಪರೆಯು ಹೋಗಿ ವಸ್ತುಗಳು ಇದ್ದಂತೆಯೆ ತೋರುವುವು. ಆಗ ಪ್ರಕೃತಿಯೆಂಬುದು ಒಟ್ಟುಗೂಡಿದ ವಸ್ತುವೆಂದೂ ಬೇರೆ ಬೇರೆ ನೋಟಗಳನ್ನು ಪುರುಷನೆಂಬ ನೋಟಕನಿಗೆ ತೋರಿಸುತ್ತಿರುವುದೆಂದೂ ಗೊತ್ತಾಗುವುದು. ಪ್ರಕೃತಿಯೆ ಒಡೆಯನಲ್ಲ; ಇದು ಬೇರೆ ಬೇರೆ ವಿಧದಲ್ಲಿ ಸೇರುವುದು. ಈ ನೋಟಗಳನ್ನೆಲ್ಲ ಒಳಗೆ ಸಿಂಹಾಸನದಲ್ಲಿ ಕುಳಿತಿರುವ

ರಾಜನಾದ ಪುರುಷನಿಗೆ ತೋರಿಸುವುದಕ್ಕೆ ಎಂಬುದು ಗೊತ್ತಾಗುವುದು. ಬಹುಕಾಲ ಅಭ್ಯಾಸ ಮಾಡುವುದರಿಂದ ವಿವೇಕವು ಬರಲು ಹೆದರಿಕೆಯು ಹೋಗಿ ತಾನೇ ಬೇರೆ ಆಗಿ ನಿಲ್ಲೋಣವು ಸಾಧ್ಯವಾಗುವುದು.

## 26. ತಚ್ಛಿದ್ರೇಷು ಪ್ರತ್ಯಯಾನ್ತರಾಣಿ ಸಂಸ್ಕಾರೇಭ್ಯಃ

ಟೀ॥ ಅದಕ್ಕೆ ವಿಘ್ನಗಳಾಗಿ ಬರುವ ಯೋಚನೆಗಳು ಸಂಸ್ಕಾರಗಳಿಂದ ಬರುತ್ತವೆ.

ವಿ॥ ನಾವು ಸುಖವಾಗಿರುವುದಕ್ಕೆ ಏನಾದರೂ ಒಂದು ಹೊರಗಿನ ವಸ್ತುವೊಂದು ಬೇಕೆಂದು ನಮಗೆ ನಂಬಿಕೆಯಾಗುವಂತೆ ಉಂಟಾಗುವ ವಿಧವಿಧವಾದ ಆಲೋಚನೆಗಳೆ ಈ ಪೂರ್ಣತ್ವವನ್ನು ಪಡೆಯುವುದಕ್ಕೆ ವಿಘ್ನವು. ಸುಖರೂಪವಾಗಿಯೂ ಧನ್ಯತೆಯ ರೂಪವಾಗಿಯೂ ಇರುವುದೇ ಪುರುಷನ ನಿಜವಾದ ರೂಪವು. ಆದರೆ ಆ ತಿಳಿವಳಿಕೆಗೆ ಹಿಂದಿನ ಸಂಸ್ಕಾರಗಳು ಮರೆಯಾಗಿರುವುವು. ಆದುದರಿಂದ ಈ ಸಂಸ್ಕಾರಗಳೆಲ್ಲ ಮುಗಿಯಬೇಕಾಗಿರುವುದು.

## 27. ಹಾನಮೇಷಾಂ ಕ್ಲೇಶವದುಕ್ತಮ್

ಟೀ॥ ಇವುಗಳನ್ನು ನಾಶಪಡಿಸುವುದು, ಅವಿದ್ಯೆ, ಅಹಂಕಾರ ಮೊದಲಾದವುಗಳನ್ನು ನಾಶಪಡಿಸುವುದಕ್ಕೆ ಹಿಂದೆ (2.10) ಹೇಳಿದ ಕ್ರಮದಂತೆಯೆ.

## 28. ಪ್ರಸಂಖ್ಯಾನೇಽಪ್ಯಕುಸೀದಸ್ಯ ಸರ್ವಥಾ ವಿವೇಕಖ್ಯಾತೇರ್ಧರ್ಮಮೇಘಃ ಸಮಾಧಿಃ

ಟೀ॥ ತತ್ತ್ವಗಳನ್ನು ವಿವೇಕದಿಂದ ಅರಿಯುವ ಸರಿಯಾದ ತಿಳಿವಳಿಕೆಯುನ್ನು ಪಡೆಯುವಾಗಲೂ ಫಲಗಳನ್ನು ಬಿಟ್ಟುಬಿಡುವವನಿಗೆ ಪೂರ್ಣ ವಿವೇಕದ ಫಲವಾಗಿ ಧರ್ಮದ ಮೋಡವೆಂಬ ಸಮಾಧಿ ಬರುವುದು.

ವಿ॥ ಈ ವಿವೇಕವನ್ನು ಪಡೆದ ಯೋಗಿಗೆ ಹಿಂದಿನ ಅಧ್ಯಾಯದಲ್ಲಿ ಹೇಳಿದ ಸಿದ್ಧಿಗಳೆಲ್ಲ ಬರುತ್ತವೆ. ಆದರೆ ನಿಜವಾದ ಯೋಗಿಯು ಅವುಗಳಲ್ಲಿ ಯಾವುದೂ ಬೇಡವೆನ್ನುತ್ತಾನೆ. ಅವನಿಗೆ ಧರ್ಮದ ಮೋಡವೆಂಬ ಒಂದು ಬಗೆಯ ಬೆಳಕು-ಒಂದು ಜಾತಿಯ ತಿಳಿವಳಿಕೆಯು- ಬರುತ್ತದೆ. ಲೋಕದಲ್ಲಿ ಹಿಂದೆ ಆಗಿಹೋಗಿರುವುದೆಂದು ಚರಿತ್ರೆಯಲ್ಲಿ ಬರೆದಿರುವ ಮಹನೀಯರಿಗೆಲ್ಲ ಈ ಜ್ಞಾನವಿತ್ತು. ಜ್ಞಾನದ ತಳಹದಿಯೆ ತಮ್ಮಲ್ಲಿರುವುದನ್ನು ಅವರು ಅರಿತುಕೊಂಡಿದ್ದರು. ಅವರಿಗೆ ತತ್ತ್ವವೆಂಬುದು ಎದುರಿಗಿತ್ತು. ಶಾಂತಿ, ಸಮಾಧಾನ, ಶುದ್ಧಿಗಳೆಂಬಿವು ಅವರ ಹುಟ್ಟುಗುಣವಾಗಿದ್ದವು. ಇವು ಅವರು ಸಿದ್ಧಿಗಳೆಂಬ ತುಚ್ಛವಸ್ತುಗಳನ್ನು ಬಿಟ್ಟ ಮೇಲೆ ಅವರಿಗೆ ಬಂದಿದ್ದವು.

## 29. ತತಃ ಕ್ಲೇಶಕರ್ಮನಿವೃತ್ತಿಃ

ಟೀ॥ ಅದರಿಂದ ಕ್ಲೇಶಗಳೂ ಕರ್ಮಗಳೂ ಹೋಗುವುವು.

ವಿ॥ ಧರ್ಮದ ಮೇಘವು ಬಂದರೆ ಕೆಳಗೆ ಬೀಳುವ ಭಯವಿಲ್ಲ. ಯಾವುದರಿಂದಲೂ ಯೋಗಿಯನ್ನು ಕೆಳಕ್ಕೆಳೆಯುವುದಕ್ಕಾಗಲಾರದು. ಇನ್ನು ಮುಂದೆ ಅವನಿಗೆ ಕಷ್ಟಗಳೇನೂ ಇರುವುದಿಲ್ಲ. ಇನ್ನು ಯಾವ ಕ್ಲೇಶಗಳೂ ಇರುವುದಿಲ್ಲ.

## 30. ತದಾಸರ್ವಾವರಣಮಲಾಪೇತಸ್ಯ ಜ್ಞಾನಸ್ಯಾಜ್ಞಾನನ್ತ್ಯಾಜ್ಜ್ಞೇಯಮಲ್ಪಮ್.

ಟೀ॥ ಆಗ ಯಾವ ಮರೆಯೂ ಕೊಳೆಯೂ ಇಲ್ಲದೆ ಜ್ಞಾನವು ಕೊನೆಯಿಲ್ಲದುದಾಗಿ ತಿಳಿಯತಕ್ಕದ್ದು ಸ್ವಲ್ಪವಾಗುವುದು.

ವಿ॥ ತಿಳಿವಳಿಕೆಯೇನೋ ಇದ್ದೇ ಇರುವುದು. ಇದರ ಮೇಲಣ ಮರೆಯು ಹೋಗಿಬಿಡುವುದು. ಬೌದ್ಧರ ಮತಗ್ರಂಥಗಳಲ್ಲಿ ಒಂದರಲ್ಲಿ ಬುದ್ಧನೆಂದರೇನೆಂಬುದರ ಲಕ್ಷಣವನ್ನು ಹೇಳಿರುತ್ತದೆ. ಬುದ್ಧನೆಂಬುದು ಒಂದು ಸ್ಥಿತಿ. ಆಕಾಶದಂತೆ ಅನಂತವಾದ ಜ್ಞಾನಕ್ಕೆ ಬುದ್ಧನೆಂದು ಆ ಗ್ರಂಥದಲ್ಲಿ ಹೇಳಿದೆ. ಯೇಸುವು ಆ ಸ್ಥಿತಿಯನ್ನು ಪಡೆದು ಕ್ರೈಸ್ತನೆನಿಸಿಕೊಂಡನು. ಆ ಸ್ಥಿತಿಯನ್ನು ನೀವೆಲ್ಲರೂ ಪಡೆಯಬಹುದು. ತಿಳಿವಳಿಕೆಯು ಅನಂತವಾದರೆ ತಿಳಿಯತಕ್ಕದ್ದು ಸ್ವಲ್ಪವಾಗುವುದು. ತಿಳಿಯತಕ್ಕ ವಿಧವಿಧವಾದ ವಸ್ತುಗಳಿಂದ ಕೂಡಿದ ಜಗತ್ತೆ ಪುರುಷನಿಗೆ ಸ್ವಲ್ಪವಾಗುವುದು. ಸಾಮಾನ್ಯರು ತಾವು ಬಹುಸಣ್ಣವರೆಂದು ತಿಳಿದುಕೊಂಡಿರುವುದ-ರಿಂದ ತಿಳಿಯತಕ್ಕದ್ದು ಅನಂತವಾಗಿರುವಂತೆ ತೋರುತ್ತಿರುವುದು.

## 31. ತತಃ ಕೃತಾರ್ಥಾನಾಂ ಪರಿಣಾಮಕ್ರಮಸಮಾಪ್ತಿರ್ಗುಣಾನಾಮ್

ಟೀ॥ ಆಗ ಮಾಡತಕ್ಕದ್ದನ್ನು ಮಾಡಿ ಮುಗಿಸಿದುದರಿಂದ ಗುಣಗಳು ಒಂದರ ಮೇಲೊಂದು ಪರಿಣಾಮವಾಗುವುದು ನಿಂತು ಹೋಗುವುದು.

ವಿ॥ ಆಗ ಒಂದು ಜಾತಿಯಿಂದ ಮತ್ತೊಂದು ಜಾತಿಯಾಗುತ್ತಲಿರುವ ಗುಣಗಳ ಪರಿಣಾಮ ನಿಂತು ಹೋಗಿಬಿಡುವುವು.

## 32. ಕ್ಷಣಪ್ರತಿಯೋಗೀ ಪರಿಣಾಮಾಪರಾನ್ತನಿರ್ಗ್ರಾಹ್ಯಃ ಕ್ರಮಃ

ಟೀ॥ ಕ್ರಮವೆಂದರೆ ಕ್ಷಣಗಳಿಗೆ ಸಂಬಂಧಪಟ್ಟು ಮತ್ತೊಂದು ಕೊನೆಯಲ್ಲಿ (ಸಾಲಿನ ಕೊನೆಯಲ್ಲಿ) ಕಾಣುವ ಮಾರ್ಪಾಡುಗಳು.

ವಿ॥ ಇಲ್ಲಿ ಪತಂಜಲಿಗಳು ಕ್ರಮವೆಂಬುದಕ್ಕೆ ಕ್ಷಣಗಳ ಸಂಬಂಧದಿಂದ ಆಗುವ ಮಾರ್ಪಾಡುಗಳೆಂದು ಲಕ್ಷಣವನ್ನು ಹೇಳಿದ್ದಾರೆ. ಯೋಚನೆ ಮಾಡುತ್ತಿರುವಾಗ ಅನೇಕ ಕ್ಷಣಗಳು ಕಳೆದುಹೋಗುತ್ತಿರುತ್ತವೆ. ಒಂದೊಂದು ಕ್ಷಣಕ್ಕೆ ಯೋಚನೆಯು ಬೇರೆ ಆಗುತ್ತಲೆ ಇರುವುದು. ಆದರೆ ಈ ಮಾರ್ಪಾಡುಗಳು ಒಂದು ಸಾಲಿನ ಕೊನೆಯಲ್ಲಿಯೆ ಗೊತ್ತಾಗುವುವು. ಇದಕ್ಕೆ ಕ್ರಮವೆಂದು ಹೆಸರು. ಆದರೆ ಎಲ್ಲೆಲ್ಲಿಯೂ ಇರುವುದೆಂಬುದನ್ನು ಅನುಭವಕ್ಕೆ ತಂದುಕೊಂಡ ಚಿತ್ತಕ್ಕೆ ಕ್ರಮವೆಂಬುದಿರುವುದಿಲ್ಲ; ಅದಕ್ಕೆ ಎಲ್ಲವೂ ಈಗಿನದಾಗಿರುವುದು. ಅದಕ್ಕೆ ಈಗ

ಎಂಬುದೊಂದೇ ತೋರುವುದು. ಹಿಂದೆ ಮುಂದೆ ಎಂಬಿವು ಹೋಗಿಬಿಟ್ಟಿರುವುವು. ಕಾಲವೇ ವಶವಾಗಿರುವುದು. ಎಲ್ಲಾ ತಿಳಿವಳಿಕೆಯೂ ಒಂದೇ ಕ್ಷಣದಲ್ಲಿ ಆಗುತ್ತಿರುವುದು. ಯಾವುದಾದರೂ ತಟಕ್ಕನೆ ಮಿಂಚು ಹೊಳೆದಂತೆ ಗೊತ್ತಾಗುತ್ತಿರುವುದು.

## 33. ಪುರುಷಾರ್ಥಶೂನ್ಯಾನಾಂ ಗುಣಾನಾಂ ಪ್ರತಿಪ್ರಸವಃ ಕೈವಲ್ಯಂ ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತಿರಿತಿ

ಟೀ॥ ಪುರುಷನಿಗಾಗಿ ಯಾವ ಕೆಲಸವನ್ನೂ ಮಾಡಬೇಕಾದುದಿಲ್ಲದುದರಿಂದ ಗುಣಗಳು ವಿರುದ್ಧ ಕ್ರಮದಿಂದ ಲಯವಾಗುವುದೇ ಕೈವಲ್ಯ ಅಥವಾ ತಿಳಿವಿನ ಶಕ್ತಿಯು ತನ್ನ ರೂಪದಲ್ಲಿಯೇ ನೆಲಸುವುದೇ (ಕೈವಲ್ಯವು).

ವಿ॥ ಪ್ರಕೃತಿಯ ಕಾರ್ಯವು – ಮಕ್ಕಳನ್ನಾಡಿಸುವ ದಾದಿಯಂತೆ ನಮಗಾಗಿ ಈ ಪ್ರಕೃತಿಯು ಕೈಕೊಂಡಿದ್ದ ಆ ಸ್ವಾರ್ಥದ ಕೆಲಸವು ಮುಗಿದಂತಾಯಿತು. ಆಕೆಯು ತನ್ನನ್ನು ತಾನು ಮರೆತಿದ್ದ ಆತ್ಮನನ್ನು ಮೆಲ್ಲಗೆ ಕೈಹಿಡಿದು ಈ ಜಗತ್ತಿನಲ್ಲಿ ವಿಧವಿಧವಾದ ಅನುಭವಗಳನ್ನೂ ಬಗೆಬಗೆಯ ನೋಟಗಳನ್ನೂ ತೋರಿಸುತ್ತ ಬೇರೆ ಬೇರೆ ಶರೀರಗಳನ್ನು ಕೊಟ್ಟು ಮುಂದ ಮುಂದಕ್ಕೆ ತಂದುಕೊಟ್ಟಳು. ಕೊನೆಗೆ ಆತ್ಮನು ಕಳೆದುಕೊಂಡಿದ್ದ ಮಹಿಮೆಯು ಮತ್ತೆ ಬಂತು. ಅವನಿಗೆ ತನ್ನ ನಿಜವಾದ ರೂಪವು ನೆನಪಿಗೆ ಬಂತು. ಆಗ ಆ ದಯಾಮಯಿಯಾದ ಮಾತೆಯು ಮತ್ತೆ ಈ ಸಂಸಾರವೆಂಬ ಮರುಭೂಮಿಯಲ್ಲಿ ದಾರಿ ತಪ್ಪಿರುವವರಿಗೋಸ್ಕರ ಮತ್ತೆ ತನ್ನ ದಾರಿಯನ್ನು ಹಿಡಿದು ಹೊರಟಳು. ಹೀಗೆ ಆಕೆಯು ತುದಿಮೊದಲಿಲ್ಲದೆ ಕೆಲಸ ಮಾಡುತ್ತಲೆ ಇರುವಳು. ಈ ರೀತಿಯಲ್ಲಿ ಸುಖದುಃಖ, ಒಳ್ಳೆಯದು ಕೆಟ್ಟದ್ದು ಎಂಬ ದ್ವಂದ್ವಗಳ ನಡುವೆ ಹರಿದು ಆತ್ಮಗಳ ಅನಂತಪ್ರವಾಹವು ಪೂರ್ಣತೆ–ಆತ್ಮ ಸಾಕ್ಷಾತ್ಕಾರ ಎಂಬ ಸಮುದ್ರವನ್ನು ಸೇರುತ್ತಿರುವುದು.

ತಮ್ಮ ನಿಜವಾದ ರೂಪವನ್ನು ಅನುಭವಕ್ಕೆ ತಂದುಕೊಂಡವರಿಗೆ ಜಯವಾಗಲಿ; ಅವರ ಅನುಗ್ರಹವು ನಮ್ಮೆಲ್ಲರಿಗೂ ಆಗಲಿ.

# ಪರಿಶಿಷ್ಟ

## ಯೋಗಕ್ಕೆ ಸಂಬಂಧಪಟ್ಟ ವಾಕ್ಯಗಳು

## ಶ್ವೇತಾಶ್ವತರೋಪನಿಷತ್–2ನೇ ಅಧ್ಯಾಯ

6. ಅಗ್ನಿಯನ್ನು ಎಲ್ಲಿ ಕಡೆಯುತ್ತಾರೆಯೊ, ಎಲ್ಲಿ ವಾಯುವನ್ನು ಕಡೆಯುತ್ತಾರೆಯೋ, ಎಲ್ಲಿ ಸೋಮರಸವು ಮುಂದುವರಿಯುವುದೊ ಅಲ್ಲಿ (ಪೂರ್ಣವಾದ) ಮನಸ್ಸು ಉಂಟಾಗುವುದು.

8. ಶರೀರವನ್ನು ನೆಟ್ಟಗೆ ಇಟ್ಟು ಎದೆ, ಕತ್ತು, ತಲೆ ಇವುಗಳನ್ನು ಒಂದೇ ಸಮನಾಗಿಟ್ಟುಕೊಂಡು ಇಂದ್ರಿಯಗಳನ್ನು ಮನಸ್ಸಿನಲ್ಲಿ ಹೊಗಿಸಿದ ವಿದ್ವಾಂಸನು ಹೆದರಿಕೆಯ ಪ್ರವಾಹಗಳನ್ನೆಲ್ಲ ಬ್ರಹ್ಮವೆಂಬ ದೋಣಿಯಿಂದ ದಾಟುವನು.

9. ಮಿತಿಯಿಂದ ನಡತೆಗಳನ್ನು ಇಟ್ಟವನು ಪ್ರಾಣವನ್ನು ವಶಮಾಡಿಕೊಳ್ಳುತ್ತಾನೆ. ಅದು ಸುಮ್ಮನಾದರೆ ಮೂಗಿನ ಹೊಳ್ಳೆಯಿಂದ ಹೊರಕ್ಕೆ ಉಸಿರು ಬಿಡುವ ಗಾಡಿಯವನು ತುಂಟ ಕುದುರೆಗಳನ್ನು ತಡೆಯುವಂತೆ ವಿದ್ವಾಂಸನು ತನ್ನ ಮನಸ್ಸನ್ನು ತಡೆಯುತ್ತಾನೆ.

10. ಒಂದೇ ಸಮನಾಗಿ (ತಗ್ಗು, ತಿಟ್ಟು ಇಲ್ಲದೆ) ಇರುವ ಕಲ್ಲು, ಮರಳುಗಳಿಲ್ಲದ, ಜನರ ಅಥವಾ ಜಲಪಾತಗಳ ಗದ್ದಲಗಳಿಲ್ಲದ, ಮನಸ್ಸಿಗೆ ಅನುಕೂಲವಾಗಿರುವ, ಕಣ್ಣುಗಳಿಗೆ ಇಂಪಾಗಿರುವ, ಪರ್ವತ ಗುಹೆಗಳಂಥ (ಏಕಾಂತವಾದ) ಸ್ಥಳಗಳಲ್ಲಿ ಯೋಗವನ್ನು ಅಭ್ಯಾಸಮಾಡಬೇಕು (ಮನಸ್ಸನ್ನು ಕೂಡಿಸಬೇಕು).

11. ಮಂಜು, ಹೊಗೆ, ಸೂರ್ಯ, ಗಾಳಿ, ಬೆಂಕಿ, ದೀಪದ ಹುಳು, ಮಿಂಚು, ಸ್ಫಟಿಕ, ಚಂದ್ರ, ಇವುಗಳಂತೆ ಮೊದಲು ಬರುವ ಈ ಗುರ್ತುಗಳು ಯೋಗದಲ್ಲಿ ಮೆಲ್ಲಮೆಲ್ಲಗೆ ಬ್ರಹ್ಮವನ್ನು ತೋರಿಕೊಡುವುವು.

12. ನೆಲ, ನೀರು, ಬೆಳಕು, ಬೆಂಕಿ, ಆಕಾಶ ಇವುಗಳಿಂದಾದ ಯೋಗದ ಅನುಭವಗಳುಂಟಾದಾಗ ಯೋಗವು ಪ್ರಾರಂಭವಾಯಿತು. ಯಾರಿಗೆ ಯೋಗವೆಂಬ ಬೆಂಕಿಯಿಂದಾದ ಶರೀರವಿರುವುದೊ ಅಂಥವನಿಗೆ ರೋಗವಾಗಲಿ, ಮುಪ್ಪಾಗಲಿ, ಸಾವಾಗಲಿ ಬರುವುದಿಲ್ಲ.

13. ಯೋಗವನ್ನು ಪಡೆದ ಮೊದಲನೆಯ ಗುರ್ತಗಳಾವುವೆಂದರೆ ಹಗುರವಾಗಿರುವುದು, ಆರೋಗ್ಯವಾಗಿರುವುದು, ಚರ್ಮವು ಮೃದುವಾಗುವುದು, ವರ್ಣವು ಶುದ್ಧವಾಗುವುದು, ದನಿ ಚನ್ನಾಗುವುದು, ಶರೀರದಲ್ಲಿ ಒಳ್ಳೆಯ ವಾಸನೆ ಇರುವುದು.

14. ಹೇಗೆ ಬಂಗಾರವಾಗಲಿ ಬೆಳ್ಳಿಯಾಗಲಿ ಮೊದಲು ಮಣ್ಣುಮೆತ್ತಿಕೊಂಡಿದ್ದು ಆಮೇಲೆ ತೊಳೆದರೆ ಬಹು ಬೆಳಕಿನಿಂದ ಹೊಳೆಯುವುದೊ ಹಾಗೆ ದೇಹವುಳ್ಳ ಜೀವನು ಆತ್ಮನು ಒಬ್ಬನೆಂಬ ತತ್ತ್ವವನ್ನು ಕಂಡವನಾಗಿ ಕೃತಾರ್ಥನಾಗಿ ರೂಪವನ್ನೆಲ್ಲ ಕಳೆದುಕೊಳ್ಳುವನು.

## ಶಂಕರಾಚಾರ್ಯರು ಉದಾಹರಿಸಿರುವ ಯಾಜ್ಞವಲ್ಕ್ಯ ವಾಕ್ಯಗಳು

"ಆಸನವನ್ನು ಇಚ್ಛೆಯಂತೆ ವಿಧಿಗನುಸಾರವಾಗಿ ಅಭ್ಯಾಸ ಮಾಡಿದ ಮೇಲೆ, ಎಲೌ ಗಾರ್ಗಿಯೆ, ಆಸನವನ್ನು ಜಯಿಸಿದಾತನು ಪ್ರಾಣಾಯಾಮವನ್ನು ಅಭ್ಯಾಸ ಮಾಡಬೇಕು. ಕುಶದ ಮೇಲೆ ಹಾಸಿದ (ಜಿಂಕೆಯ ಅಥವಾ ಹುಲಿಯ) ಚರ್ಮದ ಮೇಲೆ ಸುಖಾಸನದಲ್ಲಿ ಕುಳಿತುಕೊಂಡು ಗಣಪತಿಯನ್ನು ಹಣ್ಣುಗಳಿಂದಲೂ ಸೀಯಾದ ಭಕ್ಷ್ಯಗಳಿಂದಲೂ ಪೂಜೆ ಮಾಡಿ ಬಲದ ಹಸ್ತವನ್ನು ಎಡದ ಹಸ್ತದ ಮೇಲೆ ಇಟ್ಟುಕೊಂಡು ಕತ್ತನ್ನೂ ತಲೆಯನ್ನೂ ಒಂದೇ ಸಮನಾಗಿಟ್ಟುಕೊಂಡು ಚೆನ್ನಾಗಿ ಬಾಯಿಮುಚ್ಚಿಕೊಂಡು ಸ್ವಲ್ಪವೂ ಅಲ್ಲಾಡದೆ ಪೂರ್ವದ ಕಡೆಗೆ ಅಥವಾ ಉತ್ತರಕ್ಕೆ ಮುಖವನ್ನು ಮಾಡಿಕೊಂಡು ಮೂಗಿನ ತುದಿಯಲ್ಲಿ ಕಣ್ಣಿಟ್ಟು ಬಹುವಾಗಿ ತಿನ್ನುವುದನ್ನೂ ಉಪವಾಸ ಮಾಡುವುದನ್ನೂ ಬಿಟ್ಟು ನಾಡೀಶುದ್ಧಿಯನ್ನು ಮಾಡಿಕೊಳ್ಳಬೇಕು. ಅದಿಲ್ಲದಿದ್ದರೆ ಅಭ್ಯಾಸವೇ ವ್ಯರ್ಥವಾಗುವುದು. ಪಿಂಗಲಾ ಮತ್ತು ಇಡಾ (ಬಲ ಮತ್ತು ಎಡದ ಹೊಳ್ಳೆ) ಗಳ ನಡುವೆ ಹುಂಕಾರ (ಬೀಜಾಕ್ಷರ)ವನ್ನು ಭಾವಿಸಿ ಇಡೆಯನ್ನು ಹೊರಗಣ ವಾಯುವಿನಿಂದ ಹನ್ನೆರಡು ಮಾತ್ರೆ (ಸೆಕೆಂಡು)ಗಳಲ್ಲಿ ತುಂಬಬೇಕು. ಆಮೇಲೆ ಆ ಸ್ಥಳದಲ್ಲಿ ಯೋಗಿ ಅಗ್ನಿಯನ್ನೂ ರುಂ ಎಂಬ ಶಬ್ದವನ್ನೂ ಭಾವಿಸುತ್ತ ಮೆಲ್ಲಗೆ ಪಿಂಗಳೆ (ಬಲದ ಹೊಳ್ಳೆ)ಯಿಂದ ವಾಯುವನ್ನು ಹೊರಕ್ಕೆ ಬಿಡಬೇಕು. ಮತ್ತೆ ಪಿಂಗಳೆಯಿಂದ ವಾಯುವನ್ನು ತುಂಬಿ ಇಡೆಯಿಂದ ಇದೇ ರೀತಿಯಲ್ಲಿ ಮೆಲ್ಲಗೆ ಬಿಡಬೇಕು. ಇದನ್ನು ಮೂರು ನಾಲ್ಕು ವರ್ಷಗಳಾಗಲಿ, ಮೂರು ನಾಲ್ಕು ತಿಂಗಳಾಗಲಿ ಗುರು ಹೇಳಿದಂತೆ ರಹಸ್ಯದಲ್ಲಿ (ಒಬ್ಬನೆ ಒಂದು ಕಡೆ ಇದ್ದುಕೊಂಡು) ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ಸರಿ ಹೊತ್ತುಗಳಲ್ಲಿ ನಾಡಿಯ ಶುದ್ಧಿಯಾಗುವವರೆಗೂ ಅಭ್ಯಾಸ ಮಾಡಬೇಕು. ಶರೀರವು ಹಗುರವಾಗುವುದು, ಬಣ್ಣವು ಸ್ವಚ್ಛವಾಗುವುದು, ಚೆನ್ನಾಗಿ ಹಸಿವಾಗುವುದು, ನಾದವು ಕೇಳಬರುವುದು, ಇವು ನಾಡೀ ಶುದ್ಧವಾಗುವುದರ ಗುರ್ತುಗಳು. ಆಮೇಲೆ ರೇಚಕ (ಹೊರಗೆ ಬಿಡುವುದು), ಕುಂಭಕ (ನಿಲ್ಲಿಸಿಕೊಂಡಿರುವುದು), ಮತ್ತು ಪೂರಕ (ಒಳಕ್ಕೆ ಎಳೆದುಕೊಳ್ಳುವುದು) ಇವುಗಳಿಂದ ಪ್ರಾಣಾಯಾಮವನ್ನು ಮಾಡಬೇಕು. ಪ್ರಾಣವನ್ನು ಅಪಾನಕ್ಕೆ ಸೇರಿಸುವುದೇ ಪ್ರಾಣಾಯಾಮವು.

"ಹದಿನಾರು ಮಾತ್ರೆಗಳಿಂದ ತಲೆಯಿಂದ ಕಾಲವರೆಗೂ ತುಂಬಿ ಮುವತ್ತೆರಡು ಮಾತ್ರೆಗಳಿಂದ ಹೊರಗೆಸೆಯಬೇಕು; ಅರವತ್ತನಾಲ್ಕರಿಂದ ಕುಂಭಕವನ್ನು ಮಾಡಬೇಕು.

"ಇನ್ನೊಂದು ಬಗೆಯ ಪ್ರಾಣಾಯಾಮವುಂಟು. ಇದರಲ್ಲಿ ಹದಿನಾರು ಮಾತ್ರೆಗಳಿಂದ ಶರೀರದಲ್ಲಿ ತುಂಬಬೇಕು; ಕುಂಭಕವನ್ನು ಅರವತ್ತನಾಲ್ಕರಿಂದ ಮಾಡಿ ಮುವತ್ತೆರಡರಿಂದ ಹೊರಕ್ಕೆ ಬಿಡಬೇಕು.

"ಪ್ರಾಣಾಯಾಮದಿಂದ ಶರೀರದ ಕಶ್ಮಲಗಳು ಹೋಗುವುವು; ಧಾರಣೆಯಿಂದ ಮನೋದೋಷಗಳು ಹೋಗುವುವು; ಪ್ರತ್ಯಾಹಾರದಿಂದ ಸಂಸರ್ಗದ (ಒಂದರಲ್ಲಿ ಸೇರಿಕೊಂಡಿರುವ) ದೋಷಗಳು ಹೋಗುವುವು; ಸಮಾಧಿಯಿಂದ ಆತ್ಮದ ಈಶ್ವರತ್ವವನ್ನು ಮರೆಮಾಡಿರುವ ಪ್ರತಿಯೊಂದು ಗುಣವೂ ಹೋಗಿಬಿಡುವುದು.

## ಸಾಂಖ್ಯ–3 ಅಧ್ಯಾಯ

29. ಧ್ಯಾನವನ್ನು ಸಾಧಿಸಿದರೆ ಪರಿಶುದ್ಧನಾದ (ಪುರುಷ)ನಿಗೆ ಎಲ್ಲಾ ಸಿದ್ಧಿಗಳೂ ಬರುತ್ತವೆ.

30. ಧ್ಯಾನವೆಂದರೆ ಆಸಕ್ತಿಯನ್ನು ಹೋಗಲಾಡಿಸುವುದು.

31. ಇದು ವೃತ್ತಿಗಳನ್ನು ತಡೆಯುವುದರಿಂದ ಪೂರ್ಣವಾಗುವುದು.

32. ಧಾರಣೆಯಿಂದಲೂ ಆಸನದಿಂದಲೂ ಕರ್ಮಾಚರಣೆಯಿಂದಲೂ ಅದು ಪೂರ್ಣವಾಗುವುದು.

33. ಪ್ರಾಣವನ್ನು ಹೊರಕ್ಕೆ ಬಿಡುವುದರಿಂದಲೂ ಒಳಗೆ ನಿಲ್ಲಿಸುವುದರಿಂದಲೂ ತಡೆಯಲಾಗುವುದು.

34. ಸ್ಥಿರವಾಗಿಯೂ ಸುಖವಾಗಿಯೂ ಇರುವುದೇ ಆಸನವು.

36. ಅನಾಸಕ್ತಿ ಮತ್ತು ಅಭ್ಯಾಸಗಳಿಂದಲೂ ಧ್ಯಾನವು ಪೂರ್ಣವಾಗುವುದು.

74. ಪ್ರಕೃತಿಯ ತತ್ತ್ವಗಳನ್ನು ಚೆನ್ನಾಗಿ ವಿಚಾರಿಸಿ ಇದಲ್ಲ ಇದಲ್ಲವೆಂದು ಬಿಡುವುದರಿಂದ ವಿವೇಕವು ಪೂರ್ಣವಾಗುವುದು.

## 4 ಅಧ್ಯಾಯ

3. ಉಪದೇಶವನ್ನು ಮತ್ತೆ ಮತ್ತೆ ಮಾಡಬೇಕು.

5. ಗಿಡುಗನಿಗೆ ಆಹಾರವನ್ನು ಕೊಡದೇ ಇದ್ದರೆ ದುಃಖಪಡುವುದು; ತಾನೆ ಆಹಾರವನ್ನು ಬಿಟ್ಟರೆ ಸುಖವಾಗಿರುವುದು. (ಹಾಗೆ ತಾನೆ ಎಲ್ಲವನ್ನೂ ಬಿಟ್ಟವನು ಸುಖವಾಗಿರುವನು).

6. ತನ್ನ ಹಳೆಯ ಪರೆಯನ್ನು ಬಿಟ್ಟು ಹಾವು ಸುಖದಿಂದಿರುವಂತೆ.

8. ಬಿಡುಗಡೆಗೆ ಸಾಧನವಲ್ಲದುದನ್ನು ಮನಸ್ಸಿಗೆ ತರಬಾರದು. ಅದು ಭರತನಿಗಾದಂತೆ ಬಂಧಕ್ಕೆ ಕಾರಣವಾಗುವುದು.

9. ಅನೇಕರ ಸಂಗದಿಂದ ರಾಗದ್ವೇಷಾದಿಗಳ ಮೂಲಕ ಧ್ಯಾನಕ್ಕೆ ಅಡ್ಡಿಯಾಗುವುದು; ಇದಕ್ಕೆ ಹುಡುಗಿಯ ಕೈಮೇಲಿನ ಬಳೆಗಳೇ ದೃಷ್ಟಾಂತ.

10. ಇಬ್ಬರಾದರೂ ಅಷ್ಟೆ

11. ಆಸೆಯನ್ನು ಬಿಟ್ಟವರು ಪಿಂಗಳೆಯೆಂಬ ಹುಡುಗಿಯಂತೆ ಸುಖವಾಗಿರುವರು.

13. ಭಕ್ತಿಯನ್ನು ಅನೇಕ ಸಂಸ್ಥೆಗಳಿಗೆ, ಅಧ್ಯಾಪಕರಿಗೆ ಕೊಡುವದಾದರೂ, ಅದರ ಸಾರವನ್ನು ಅವೆಲ್ಲವುಗಳಿಂದ ಪಡೆಯಬೇಕು, ಜೇನುನೊಣವು ಅನೇಕ ಹೂವುಗಳಿಂದ ರಸವನ್ನು ಹೀರುವಹಾಗೆ.

14. ಬಾಣವನ್ನು ಬಿಡುವವನ ಮನಸ್ಸಿನಂತೆ ಒಂದು ಕಡೆ ನಿಂತ ಮನಸ್ಸುಳ್ಳಾತನ ಧ್ಯಾನಕ್ಕೆ ಅಡ್ಡಿ ಇರುವುದಿಲ್ಲ.

15. ಯಮ ನಿಯಮಗಳನ್ನು ನಡೆಸದೆ ಇದ್ದರೆ,–ಗುರಿಯನ್ನು ಮುಟ್ಟಲಾಗದು. ಉಳಿದ ಪ್ರಾಪಂಚಿಕವ್ಯವಹಾರಗಳೇ ಇದಕ್ಕೆ ದೃಷ್ಟಾಂತ.

19. ಬ್ರಹ್ಮಚರ್ಯದಿಂದಲೂ ಗುರುವಿನಲ್ಲಿರುವ ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ಇಂದ್ರನಂತೆ ಬಹುಕಾಲಕ್ಕೆ ಜಯಶೀಲನಾಗಬಹುದು. ಕಾಲದಲ್ಲಿ ಇಷ್ಟೆಂಬ ನಿಯಮವಿಲ್ಲ. (ವಾಮದೇವನ ಉದಾಹರಣೆ)

24. ಸಿದ್ಧಿಯನ್ನು ಪಡೆದವನ ಸಂಗತಿಯಿಂದಾಗಲಿ,

27. ಭೋಗಗಳನ್ನು ಅನುಭವಿಸುವುದರಿಂದ ಆಸೆ ಅಡಗುವುದಿಲ್ಲ.

## 5 ಅಧ್ಯಾಯ

128. ಔಷಧದಿಂದ ಬರುವ ಪುನಶ್ಚೇತನದಂತೆ, ಯೋಗದಿಂದ ಬರುವ ಸಿದ್ಧಿಗಳನ್ನು ಇಲ್ಲವೆನ್ನುವದಕ್ಕಿಲ್ಲ.

## 6 ಅಧ್ಯಾಯ

ಸ್ಥಿರವಾಗಿಯೂ ಸುಖವಾಗಿಯೂ ಇರುವದೇ ಆಸನವು, ಮತ್ತೆ ಯಾವ ನಿಯಮವೂ ಇಲ್ಲ.

ವ್ಯಾಸ ಸೂತ್ರ – 4 ಅಧ್ಯಾಯ, 1ನೇ ಪಾದ

7. ಕೂತುಕೊಂಡೇ ಉಪಾಸನೆಯನ್ನು ಮಾಡುವದಕ್ಕಾಗುವದು,

8. ಧ್ಯಾನದಿಂದಲೂ,

9. ಧ್ಯಾನ ಮಾಡುವವನನ್ನು ಅಲ್ಲಾಡದೆ ಇರುವ ಭೂಮಿಗೆ ಹೋಲಿಸಬಹುದು.

10. ಸ್ಮೃತಿಗಳು ಹೇಳುವದರಿಂದಲೂ

11. ಸ್ಥಳ ನಿಯವಿಲ್ಲ, ಎಲ್ಲೆಲ್ಲಿ ಮನಸ್ಸು ಒಂದೇ ಕಡೆ ನಿಲ್ಲುವುದೊ ಅಲ್ಲಿ ಧ್ಯಾನ ಮಾಡಬೇಕು.

ಮೇಲೆ ಹೇಳಿದ ವಾಕ್ಯಗಳಿಂದ ಇಂಡಿಯಾ ದೇಶದ ಉಳಿದ ದರ್ಶನಗಳು ಯೋಗದ ವಿಷಯದಲ್ಲಿ ಏನು ಅಭಿಪ್ರಾಯಪಟ್ಟಿರುತ್ತವೆಂಬುದು ಗೊತ್ತಾಗುತ್ತದೆ.

# ರಾಜಯೋಗ . . . .

ನಮ್ಮ ಜೀವನಕ್ಕೆಲ್ಲ ಅನುಭವವೇ ಆಧಾರವು. ಯೋಗಶಾಸ್ತ್ರಕಾರರು 'ಮತ' ವೆಂಬುದು ಪೂರ್ವಿಕರ ಆಧಾರದ ಮೇಲೆ ಆಗಿರುವದಾದರೂ, ಆ ಅನುಭವಗಳನ್ನು ಪಡೆದ ಹೊರತು ಯಾವನನ್ನೂ ಧಾರ್ಮಿಕನೆನ್ನುವಂತಿಲ್ಲ. ಇಂತಹ ಅನುಭವವನ್ನು ಪಡೆಯುವ ಕ್ರಮವೇ **ಯೋಗವು.**

ತತ್ತ್ವವನ್ನು ಗ್ರಹಿಸಿ ಚೆನ್ನಾಗಿ ತಿಳಿದು ತನ್ನ ಅಂತಃಕರಣದಲ್ಲಿ ತಂದುಕೊಂಡಮೇಲೆಯೆ ಸಂಶಯಗಳೆಲ್ಲ ನೀಗಿ ಅಂಧಕಾರವೆಲ್ಲ ಕಳೆದು ಮನಸ್ಸಿನ ಡೊಂಕುಗಳೆಲ್ಲ ನೆಟ್ಟಗಾಗುವದೆಂದು ವೇದಗಳು ಸಾರುತ್ತವೆ. ರಾಜಯೋಗದಲ್ಲಿ ಈ ತತ್ತ್ವವನ್ನು ಪಡೆಯುವದಕ್ಕೆ ಯತ್ನಸಾಧ್ಯವಾಗಿಯೂ ಶಾಸ್ತ್ರೀಯವಾಗಿ ಪರಿಶೀಲನೆ ಮಾಡಿರುವ ಕ್ರಮವೊಂದನ್ನು ಜನರಿಗೆ ತೋರಿಸುವದೇ ಉದ್ದೇಶವು. ಮನಸ್ಸು, ಅಂತರಂಗ ಸ್ವಭಾವ, ಆಲೋಚನೆಯ ವಿಚಾರದಲ್ಲೂ ತಿಳಿಯುವದು ಒಳಗಡೆ ನಡೆಯುವ ಸಂಗತಿಗಳನ್ನು ಚೆನ್ನಾಗಿ ನೋಡುವ ಶಕ್ತಿಯಿದ್ದ ಹೊರತುಎಂದಿಗೂ ಆಗದು. ಇದಕ್ಕೆ ಸಾಧನವನ್ನು ತೋರಿಸುವದೇ ರಾಜಯೋಗದ ಮೊದಲು ಉದ್ದೇಶವು. ಮನಸ್ಸೇ ಈ ಸಾಧನ. ಸಾವಧಾನವಾಗಿ ನೋಡುವ ಶಕ್ತಿಯನ್ನು ಚೆನ್ನಾಗಿ ಬೆಳಗಿಸಿ ಒಳಗಣ ಪ್ರಪಂಚದ ಕಡೆಗೆ ತಿರುಗಿಸಿದರೆ, ದಿಕ್ಕು ದಿಕ್ಕಿಗೆ ಚದುರಿದ ಮನಸ್ಸಿನ ಶಕ್ತಿಗಳನ್ನೆಲ್ಲ ಒಕ್ಕಡೆಗೆ ಸೇರಿಸಿದರೆ ಅವು ತತ್ತ್ವವನ್ನು ಪ್ರಕಾಶಗೊಳಿಸುತ್ತವೆ. ಇದೊಂದೇ ಜ್ಞಾನಕ್ಕೆ ಸಾಧನವು. **ಮನಸ್ಸಿನ ಸಮಾಧಾನವೇ ರಾಜಯೋಗದ ಫಲವು.**

ರಾಜಯೋಗದ ಸಿದ್ಧಿಗೆ ಬಹುಕಾಲ ಒಂದೇ ಸಮವಾಗಿ ಅಭ್ಯಾಸ ಮಾಡುವದು ಅವಶ್ಯವು. ಮೂಲಾಧಾರದಲ್ಲಿ ಸುಪ್ತವಾಗಿರುವ ಕುಂಡಲಿನಿ ಶಕ್ತಿಯನ್ನು ಎಬ್ಬಿಸುವದೇ ಪ್ರಾಣಾಯಾಮದ ಉದ್ದೇಶ. ಇದು ಪರಮೇಶ್ವರ ಭಕ್ತಿಯಿಂದಾಗಲೀ, ಮಹಾತ್ಮರ ಅನುಗ್ರಹದಿಂದಾಗಲೀ, ವೇದಾಂತ ವಿಚಾರದಿಂದ ಸಂಸ್ಕೃತವಾದ ಬುದ್ಧಿಯಿಂದಾಗಲೀ ಆಗಬಹುದು. ರಾಜಯೋಗವು ಎಲ್ಲಾ ಬಗೆಯ ಪೂಜೆಗಳಲ್ಲಿಯೂ, ಪ್ರಾರ್ಥನೆಯಲ್ಲಿ, ವಿಗ್ರಹಗಳಲ್ಲಿ, ಕರ್ಮಗಳಲ್ಲಿ, ಅದ್ಭುತಶಕ್ತಿಗಳಲ್ಲಿಯೂ ಇರುವ ಸಾರವನ್ನು ವಿವೇಚನ ಮಾಡಿ ತಿಳಿಸುವ ಶಾಸ್ತ್ರವು. ಶ್ವಾಸಾಭ್ಯಾಸ, ನಾಡೀಶುದ್ಧಿ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ-ಧ್ಯಾನ ಇವೆಲ್ಲಾ ಯೋಗದ ಅಂಗಗಳು. ಯೋಗದಿಂದ ಪಾಪನಾಶ, ಜ್ಞಾನಪ್ರಾಪ್ತಿ, ಯೋಗ, ಜ್ಞಾನಗಳೆರಡನ್ನೂ ಕೂಡಿಸಿ ಅನುಷ್ಠಾನ ಮಾಡುವವನಿಗೆ ಭಗವಂತನ ಅನುಗ್ರಹವಾಗುವದು. ಯೋಗಿಯು ಆಹಾರ ವಿಹಾರಗಳಲ್ಲಿ ಅತಿಯನ್ನು ವರ್ಜನೆ ಮಧ್ಯವರ್ತಿಯಾಗಿ, ಶರೀರವು ತಕ್ಕ ಮಟ್ಟಿಗೆ ಸ್ವಾಧೀನಕ್ಕೆ ಬಂದಮೇಲೆ ಮನಸ್ಸನ್ನು ಸಾಧನಕ್ಕೆ ಹಚ್ಚುವದರಿಂದ ಅದನ್ನು ಸ್ವಾಧೀನಕ್ಕೆ ತಂದುಕೊಂಡು ಇಷ್ಟಬಂದಂತೆ ಅದರ ಶಕ್ತಿಗಳನ್ನೆಲ್ಲ ಏಕಾಗ್ರಮಾಡಿಸಬಹುದು. ಇಂದ್ರಿಯಗಳಿಂದ ಮನಸ್ಸಿಗೆ, ಅಲ್ಲಿಂದ ಬುದ್ಧಿಗೆ ಹೋದಾಗ ವಿಷಯಜ್ಞಾನ ಬರುತ್ತದೆ. ಆತ್ಮನಿಗೆ ಮನಸ್ಸೇ ಸಾಧನವು, ಇದರಿಂದ ಆತ್ಮನು ಬಾಹ್ಯವಸ್ತುಗಳನ್ನು ಗ್ರಹಿಸುವನು. ಘನಸ್ಸನ್ನು ಚೆನ್ನಾಗಿ ತಿದ್ದಿ ಸುಶಿಕ್ಷಿತವಾಗಿ ಮಾಡಿದರೆ, ಯೋಗಿಯು ಇಚ್ಛಿಸುವಂತೆ ತನ್ನ ಆಳವನ್ನು ತಾನೇ ಕಂಡುಹಿಡಿಯುವ ಸ್ವವಿಷಯತೆಯ ಶಕ್ತಿ ಬರುತ್ತದೆ. ಇದರಿಂದ ಯೋಗಿಯು ಮನಸ್ಸಿನ ಎಲ್ಲಾ ಸ್ಥಿತಿಗಳನ್ನೂ ತಿಳಿಯುತ್ತಾನೆ.

ಪ್ರತಿಯೊಂದು ಧರ್ಮದಲ್ಲಿಯೂ ಮೂರು
ಭೂಮಿಕೆಗಳಿರುವುವು:
ಮೊದಲು ದೇವರು ಅತ್ಯಂತ
ದೂರದಲ್ಲಿರುವನೆಂದು ತೋರುವದು,
ಆಮೇಲೆ ನಾವು ಆತನ ಹತ್ತಿರ ಹತ್ತಿರಕ್ಕೆ ಬಂದು
ಅವನಿಗೆ ಸರ್ವ
ವ್ಯಾಪಕತ್ವವನ್ನು ಕೊಡುವೆವು, ಆಗ ನಾವು
ಆತನಲ್ಲಿಯೇ
ಇದ್ದುಕೊಂಡಿರುವೆವು, ಕೊನೆಗೆ ನಾವೇ
ಆತನೆಂಬುದನ್ನು
ಕಂಡುಕೊಳ್ಳುವೆವು, ಹೊರಗೆ ದೇವರಿದ್ದಾನೆಂದು
ಭಾವನೆಯೇನೂ
ಸುಳ್ಳಲ್ಲ. ನಾನೇ ದೇವರಾಗಿದ್ದರೆ ನನ್ನ
ಅಂತಃಕರಣವು ದೇವಾಲಯ,
ನನ್ನ ಪ್ರತಿಯೊಂದು ವ್ಯಾಪಾರವೂ ಆರಾಧನೆ -
ಹೀಗೆ ನಮ್ಮ
ಧರ್ಮವೆಂದರೆ ವಿಕಾಸವಾಗುವುದು,
ಸಾಕ್ಷಾತ್ಕರಿಸುವದು, ನೇರಾಗಿ
ಕಂಡುಕೊಳ್ಳುವದು, ಸುಮ್ಮನೆ ಮಾತುಗಳನ್ನು
ಮಟಗುಟ್ಟುವದಲ್ಲ
ಮೊಳಕಾಲು ಮಡಿಯುವದಲ್ಲ. ಮಾನವನು
ದಿನದಿನಕ್ಕೂ
ಈಶ್ವರತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಅನಂತ
ಕಾಲದ
ಅಭ್ಯಾಸದಿಂದ ಪರಮೇಶ್ವರನಾಗತಕ್ಕದ್ದು.

-ಸ್ವಾಮಿ ವಿವೇಕಾನಂದ

